ಜೀವನ ಗಂಗಾ

ಮಲ್ಲಿಕಾ

ಜೀವನ ಗಂಗಾ

> "ಆತ್ಮಾತು ಸತತಂ ಪ್ರಾಪ್ತೋಽಪ್ಯ
> ಪ್ರಾಪ್ತವದ ವಿದ್ಯಯಾ ।
> ತನ್ನಾಶೇ ಪ್ರಾಪ್ತವದ್ಭಾತಿ
> ಸ್ವಕಣ್ಠಾಭರಣಂ ಯಥಾ ॥"

ಮೂರನೆಯ ಮುದ್ರಣ ೧೯೯೦

ಅರವತ್ತು ರೂಪಾಯಿಗಳು

ಮುದ್ರಕರು :
ಚಂದನ ಪ್ರಿಂಟರ್ಸ್
ಬೆಂಗಳೂರು-೭೯

"ಶ್ರೀ ಈಶ್ವರಾರ್ಪಣಮಸ್ತು"

ಜೀವನ ಗಂಗಾ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
೧೭೦, ಲ್ಯಾಂಗ್‌ಫೋರ್ಡ್ ರೋಡ್
ಬೆಂಗಳೂರು–೨೫

ನಿವೇದನೆ

ರಾಷ್ಟ್ರಕ್ಕೆ ಸ್ವಾತಂತ್ರ್ಯಲಭಿಸಿ ನಾಲ್ಕು ದಶಕಗಳೇ ಉರುಳಿಹೋದುವು. ಅತ್ಯಂತ ನಾಗರಿಕ ಕಾಲಮಾನದಲ್ಲಿ ನಾವು ಮುನ್ನಡೆಯುತ್ತಿದ್ದೇವೆ. ಆದರೇನು? ಆ ಸ್ವಾತಂತ್ರ್ಯದ ಸವಿ ಕಿಂಚಿತ್ತಾದರೂ ಮಹಿಳೆಯರ ಬಳಿ ಸುಳಿಯಲಿಲ್ಲ. ಅಂದಿಂದಿಗೂ ಕಣ್ಣುಕಟ್ಟಿದ ಕುದುರೆಗಳಂತೆ ಒಂದೇ ನೇರಕ್ಕೆ ಓಡುತ್ತಿದೆ ಸಾಮಾಜಿಕ ರಥ. ಏರುಪೇರುಗಳು ಇಲ್ಲವೇ ಇಲ್ಲ. ಅದೇ ಹಳೆಹಳೆಯ ಕಂದಾಚಾರವೇ ಎಲ್ಲಿಂದ ಎಲ್ಲಿಯವರೆಗೂ, ಮೂಢನಂಬಿಕೆಗಳ ಭೂತ ಜಡಿ ಕುಟ್ಟಿ ಅಮುಕುತ್ತಿದೆ ಪಾತಾಳಕ್ಕೆ. ನಮ್ಮ ಬದುಕು ಎಂದೆಂದಿಗೂ ಪಾತಾಳ ದಲ್ಲಿಯೇ ಮೂಡಿ ಮಡಿಯುವ ಸಾಮಾನ್ಯ ಚಿತ್ರ. ಕೂಪಕೂರ್ಮ ಜೀವನ ಎಂದರೆ ತಪ್ಪಲ್ಲ.

ಸಾಮಾಜಿಕ ನ್ಯೂನತೆಗಳುಬ್ಬರದಲ್ಲಿ ತೊಳಲಿ ಬಳಲಿ ಕಂಬನಿಯ ಕೋಡಿ ಹರಿಸುವವರಿಗಾಗಿ ಹೃದಯವೀಣೆ ದುಃಖದಿಂದ ಮಿಡಿದಾಗ ಅನುಕಂಪದ ಮೂಸೆಯಲ್ಲಿ ಮೂಡಿ ಬಂದ ಪ್ರಪ್ರಥಮ ಕೃತಿ 'ಜೀವನ ಗಂಗಾ'. ಇದರ ಜನನ ಲೇಖನಿಯ ಪ್ರೌಢಿಮೆಯನ್ನು ತೋರುವುದಕ್ಕಲ್ಲ ಭಾರತೀಯ ಹೆಣ್ಣಿನ ಬಾಳನ್ನು ಮುಂದಿಡುವುದಕ್ಕೆ. ಸಾಮಾಜಿಕ ಜೀವನದಲ್ಲಿ ಬಂಡೆದ್ದು ಬರುವ ಟೀಕೆ – ಟಿಪ್ಪಣಿಗಳನ್ನು ಅಲ್ಲಲ್ಲಿ ಅಷ್ಟಿಷ್ಟು ಮೊಟಕು ಮಾಡಿದ್ದಿದ್ದರೆ ಗ್ರಂಥದ ಗಾತ್ರವನ್ನು ಸ್ವಲ್ಪ ಕಡಿಮೆ ಮಾಡಬಹುದಿತ್ತೇನೋ ಎನಿಸುತ್ತೆ ಒಮ್ಮೊಮ್ಮೆ. ಆದರೆ, ಸಮಾಜದ ಹೃದಯಾಗಾರವನ್ನು ತೆರೆದು ತೋರಿಸಲೆಂದೇ ಹೊರಟ ವಳಿಗೆ ಪಾಠಕರ ಅಥವಾ ಪ್ರೇಕ್ಷಕರ ಕಣ್ಮಣಿಯುವ ಮುನ್ನ ಮುಚ್ಚಿ ಬಿಡಲು ಮನಸ್ಸಾಗಲಿಲ್ಲ. ಅಂದಿನ ಭಾವನೆ ಇಂದಿಗೂ ಲುಪ್ತವಾಗಿಲ್ಲ.

ಸುಜ್ಞಾನದ ಹೊನಲಲ್ಲಿ ಮಿಂದು ಜಾಗೃತಿಯ ನಾವೆಯನ್ನೇರಿ ಕ್ಷಣ ಕ್ಷಣವೂ ಕಾಲನದಿಯನ್ನು ದಾಟುವಾಗ ಭವ್ಯ ನಾಗರಿಕತೆಯ ದೃಷ್ಟಿಕೋನ ವನ್ನಾಕರ್ಷಿಸುತ್ತಿರುವುದು ಸಮಾಜದ ನ್ಯೂನತೆಗಳಲ್ಲ ಪ್ರಾಪಂಚಿಕ ಸುಖ

ಭೋಗಗಳು ! ಮುಖ್ಯವಾಗಿ ಸಮಾಜದೇಳಿಗೆಯಾಗದೆ ದೇಶೋನ್ನತಿಯಾಗದು ಎಂಬ ಸೂತ್ರ ನಮ್ಮೆಲ್ಲರ ಗಮನದಲ್ಲಿರಬೇಕಾದುದು ಅಗತ್ಯ. ಅಂದಿಂದಿಗೂ ಹೆಂಗಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಸಾಮಾನ್ಯವಾದುದಲ್ಲ. ಅವಳ ಸುತ್ತಮುತ್ತ ಮುಳ್ಳಿನ ಬೇಲಿ. ಸ್ವಾತಂತ್ರ್ಯ ದಾರಿದ್ರ್ಯ, ಆರ್ಥಿಕ ದಾರಿದ್ರ್ಯ ಬೌದ್ಧಿಕ ದಾರಿದ್ರ್ಯಗಳ ಅದ್ಭುತ ಜಾಲದಲ್ಲಿ ಸಿಲ್ಕಿ ನರಳುವ ಸ್ತ್ರೀಯು ಏನನ್ನು ತಾನೇ ಮಾಡಬಲ್ಲಳು ? ಕ್ರಿಮಿ ಕೀಟಗಳಂತೆ ವ್ಯರ್ಥ ಜೀವನದಲ್ಲಿ ಬಿಸು ಸುಯ್ಯಾಡಿಸುತ್ತ ದೂರಗವ್ಯದ ಜಾಡನ್ನು ಆರಸುವುದೇ ಜೀವನಧರ್ಮ ಯೋಗ. ಅದೇ ಅವಳಿಗೆ ಪರಮಗತಿ. ಅದಕ್ಕೆ ಕಿಂಚಿತ್ ವ್ಯತಿರಿಕ್ತವಾದರೆ ದೊಣ್ಣೆ ಕತ್ತಿಗಳ ಸಂಸ್ಕೃತಿ ಭುಗಿಲೇಳುವುದು ಸತ್ಯ. ಅಂದಮೇಲೆ ತೀರ ಮುಳುಗ ಬಲ್ಲವರಿಗೆ ಮಾತ್ರ ಭಾರತ ಜೀವನದರ್ಶನವಾಗುತ್ತೆ. ಅಲ್ಲದವರಿಗೆ ನೀರಿನ ಮೇಲೆ ತೇಲುವ ಗುಳ್ಳೆಗಳ ಸೊಬಗೆ ಸೊಬಗು. ಹೀಗೆಯೇ, ಅಂದಿಂದಿಗೂ ನಾರೀ ಜೀವನ ಸಾಗುತ್ತಲೇ ಇದೆ ಲೋಕದ ಕಣ್ಣಿಗೆ ಸುಂದರವಾಗಿ. ಒಳಗಿನ ಗೋಳು ಪರಮಾತ್ಮನಿಗೇ ಸಂವೇದ್ಯ. ಇಂದಿನ ನಾಗರಿಕ ಕಾಲ ಮಾನದ ಭಗಿನಿಯರು ಅರ್ಥಾತ್ ಸಂಜೀವನ ಸಂಸ್ಕೃತಿಯನ್ನು ಅರಿತುಕೊಳ್ಳದೆಯೇ ಹಿಂದಿನ ಜಾಡಿನಲ್ಲಿಯೇ ಮುಂದುವರಿಯುತ್ತಿರುವುದು ನಾಡಿನ ದುರದೃಷ್ಟ. ಸಮಾನತೆ–ಸಬಲತೆ–ಸ್ವಾತಂತ್ರ್ಯ–ಸುವಿದ್ಯಾ ಸಜ್ಜನಿಕೆ–ಆತ್ಮ–ಅಧ್ಯಾತ್ಮ—ಪರ ಮಾತ್ಮ ಇಂತಿಂಥ ಶಬ್ದಗಳ ಸತ್ಯಾರ್ಥವನ್ನು ನಮ್ಮ ಹೃದಯ ನಿಘಂಟಿನಲ್ಲಿ ಬರೆಯಲಿಲ್ಲವೋ ಅಥವಾ ನಾವು ಅರ್ಥೈಸಲಾರೆವೋ ಅದು ನಿತ್ಯ ಚಿಂತನೀಯ. ಜೀವ–ಬಂಧು–ವಲಯದಲ್ಲಿ ಇಂದಿನ ನಮ್ಮ ಕರ್ತವ್ಯ ನಿರ್ವಹಣೆ ಯೆಂದರೆ ಆಲೋಚನಾರಹಿತರಾದ ಭಗಿನಿಯರಲ್ಲಿ ಸುಪ್ತವಾದ ಆಲೋಚನಾ ಫಣಿಯನ್ನು ಮುಟ್ಟಿ ತಟ್ಟಿ ಎಬ್ಬಿಸುವುದು. ಅಂದರೆ ಕಿಂಚಿತ್ ಜೀವನ ಸಾರ್ಥಕ್ಯಕ್ಕಾಗಿ ಮುಂಬೆಳಕಿನ ಜಾಡನ್ನು ಅರಸಿಕೊಳ್ಳುವುದೇ ಸಂಜೀವನ. ನಮ್ಮ ಕಾಲವಂತೂ ಕಡುಕತ್ತಲೆಯಲ್ಲೇ ಕಳೆದಿದೆ-ಕಳೆಯುತ್ತಿದೆ. ಮುಂದಿನ ಪೀಳಿಗೆಯಾದರೂ ಸಂಜೀವನದ ತಿರುಳಿನ ಸವಿಯನ್ನು ಸವಿಯಲಿ ಎಂಬುದು ಎದೆಯ ಪ್ರೇಮದುಃಖಾರ್ತವಾದ ಹಾರೈಕೆ.

ಮಲ್ಲಿಕಾ

ಪ್ರಮೋದನಾಮ ಸಂವತ್ಸರದ ಕಾರ್ತೀಕ ಶುದ್ಧ ಪಾಡ್ಯ
ಶುಕ್ರವಾರ, ೧೯–೧೦–೧೯೯೦

ಜೀವನ ಗಂಗಾ

೧

ಅಂದು ರವಿವಾರ; ಗೋಧೂಳಿ ಸಮಯ.

ರಂಗಣ್ಣನನ್ನು ನೋಡಿಕೊಂಡು ಬರಲು ಹೋದ ಬಾಲಕರಿನ್ನೂ ಮನೆಗೆ ಹಿಂದಿರುಗಿರಲಿಲ್ಲ. ಹೆಣ್ಣುಮಕ್ಕಳಿಬ್ಬರೂ ಒಳಗಡೆ ಪಗಡೆಯಾಡುತ್ತಿದ್ದರೇನೋ....ಶಿವೆ ಹಿಂಬಾಗಿಲ ಮೆಟ್ಟಿಲಮೇಲೆ ಯೋಚನಾಕ್ರಾಂತಳಾಗಿ ಕುಳಿತಿದ್ದಾಳೆ. ಬಾಚಿ ಶುದ್ಧಿ ಮಾಡದ ಕೂದಲು ಮುಖದ ಸುತ್ತಲೂ ಎಳೆಎಳೆಯಾಗಿ ಹರಡಿಕೊಂಡಿತ್ತು. ಎರಡೂ ಕೈಗಳಿಂದ ಮೊಣಕಾಲುಗಳನ್ನು ಕಟ್ಟಿಕೊಂಡು ಅಲುಗದೆ ಕುಳಿತು ಅಂತರ್ಮುಖಿಯಾಗಿ ತಾನು ಅಡರಿಬಂದ ಜೀವಮಾನದ ಪಾವಟಿಗೆಗಳತ್ತ ನೋಡತೊಡಗಿದಳು.

....ಬಾಲ್ಯದಲ್ಲಿ ತಾಯಿಯನ್ನು ಕಳೆದುಕೊಂಡು ತಾರುಣ್ಯದವರೆಗೆ ನಿತ್ಯರೋಗಿಯಾಗಿ ಸಾವಿನೊಡನೆ ಸೆಣಸಿ ಬದುಕಿ ಸ್ವಾಮಿಯು ಕೈಹಿಡಿದು ಬಾಳನ್ನು ಹೊಕ್ಕಾಗ ಶಿವೆ ಹದಿನಾರರ ಬಾಲೆ. ಕೆಲಸಕಾರ್ಯಗಳನ್ನು ಬಲ್ಲಳಾದರೂ ಭಕ್ಷ್ಯಭೋಜ್ಯಗಳ ತಯಾರಿಕೆಯಲ್ಲಿ ನಿಷ್ಣಾತಳಾಗದುದು ದುರ್ದೈವ. ಅಡಿಗೆಯಲ್ಲಿ–ಉಳಿತಾಯದಲ್ಲಿ ಚಾಕಚಕ್ಯತೆಯೂ ಸಾಲದು. ಕಾರಣ, ಆಕೆ ಇನ್ನೂ ಎಳೆಯ ಮುಗ್ಧೆ. ನಿಷ್ಕರುಣೆಯಾದ ಗಂಗಮ್ಮನಿಗೆ ತನ್ನ 'ಅತ್ತೆತನ'ವನ್ನು ಸರಾಗವಾಗಿ ನಡೆಸಲು ಅದೊಂದು ಅನುಕೂಲವೇ ಆಯಿತು. ತಾನು ಕೊಡುತ್ತಿದ್ದ ಕಿರುಕುಳವು ಸಾಲದೆಂದು ಮಗನ ಕಿವಿಯಲ್ಲಿ ದೂರುಗಳನ್ನೂದಿ 'ಛೂ' ಬಿಟ್ಟು, ನಾಟಕವನ್ನು ನೋಡುತ್ತಿದ್ದ ಕಹಿ ಪ್ರಸಂಗಗಳನೇಕವು ಚಿತ್ತಭಿತ್ತಿಯಲ್ಲಿ ಸುಳಿದಳಿದುವು–ಮಿಂಚಿ ಮಾಯವಾಗುವ ಚಲನ ಚಿತ್ರದಂತೆ.

ಶಿವೆಯು ತಂದೆಯಾದ ಲಿಂಗಣ್ಣನ ಮೇಲೂ ಅಸಮಾಧಾನ. ನಿತ್ಯರೋಗಿಯಾದ ಮಗಳನ್ನು ಮುಚ್ಚುಮರೆಯಿಂದ ತಮಗೆ ಗಂಟುಹಾಕಿದ ಎಂಬ ಆರೋಪ....ವರೋಪಚಾರದಲ್ಲೂ ಅಸಂತೃಪ್ತಿ. ಅತೀ ಕ್ಷುಲ್ಲಕ ಕಾರಣಗಳೊಟ್ಟುಗೂಡಿ ಗುಡುಗು ಸಿಡಿಲುಗಳ ಧಾಳಿ ಹೂಡುತ್ತಿದ್ದುವು. ಕಾರ್ಮೆಳೆ ಕರೆ

ಯುತ್ತಿತ್ತು. ಕಣ್ಣಿನ ಕಡಲುಕ್ಕಿ ಕೋಡಿ ಹರಿದರೂ ಬತ್ತಲಿಲ್ಲವಲ್ಲಾ ಅದೇ ಆಶ್ಚರ್ಯ...

ಸ್ವಾಮಿ ಮಡದಿಯನ್ನು ನವಿಲೂರಿಗೆ ಕಳುಹಿಸಲಿಲ್ಲ. ಮದುವೆಯಾದ ತರುಣದಲ್ಲಿ ಮಗಳನ್ನು ಕರೆಯಲು ಬಂದ ಲಿಂಗಣ್ಣನನ್ನು ಮನಸ್ವೀ ಅಂದು ಅವಮಾನ ಮಾಡಿ ಕಳುಹಿಸಿದ್ದ. ಅಂದು ಮೆಟ್ಟಿಲಿಳಿದು ಹೋದ ಲಿಂಗಣ್ಣ ಪುನಃ ಈ ಮನೆಯ ಹೊಸ್ತಿಲು ದಾಟಿದುದು ಸ್ವಾಮಿ ಕಾಣೆಯಾದ ಮೇಲೆಯೆ. ಶಿವೆ ಚೊಚ್ಚಲ ಗರ್ಭಿಣಿಯಾದಾಗ ನವಿಲೂರಿಗೆ ಹೆರಿಗೆಗೆ ಹೋಗುವ ಬಯಕೆಯಿಂದಿದ್ದರೂ ಸ್ವಾಮಿಯ ಮುಂದೆ ಸೊಲ್ಲೆತ್ತಲಾರದೆ ಮರೆಯಲ್ಲಿ ಕಂಬನಿ ಕರೆದಿದ್ದಳು. ಅನಂತರ ಆಸ್ಪತ್ರೆಯಲ್ಲಿ ಮಗಳು ಹೆತ್ತ ಸುದ್ದಿ ಯಾರ ಮೂಲಕವೋ ಮುಟ್ಟಿದಾಗ ಅಲ್ಲಿಗೆ ಧಾವಿಸಿ ಬಂದಿದ್ದ ಲಿಂಗಣ್ಣ. ಪ್ರಪ್ರಥಮ ನೋಟಕ್ಕೆ ಮಗಳು-ಮೊಮ್ಮಗ ಬಿದ್ದಾಗ ಆದ ಸಂಕಟ-ಆನಂದ ಅಷ್ಟಿಷ್ಟಲ್ಲ. ತಬ್ಬಲಿ ಮಗಳು....ದುಃಖಿನಿ...ನಿಸ್ಸಾಯಕಿ... ಅಬಲೆ... ಮಾತೆ.

ತಟ್ಟನೆ ನಾಲ್ಕೂ ಕಣ್ಣುಗಳ ಕಟ್ಟೆಯೊಡೆಯಿತು.

"ಶಿವೇ, ನಿನ್ನ ಒಳಿತಕ್ಕಾಗಿ-ಕ್ಷೇಮಕ್ಕಾಗಿ-ಸುಖಕ್ಕಾಗಿ-ಮಾನಸಿಕ ಬೆಳವಣಿಗೆಗಾಗಿ ಕಲಿತವನಿದ್ದರೆ ಸಹಾಯವಾಗುವುದೆಂದು ಬಯಸಿದೆ. ಮೈಸೂರಿನ ಹವೆ ನಿನಗೆ ಒಗ್ಗಬಹುದು, ನೀನು ಸುಖವಾಗಿರುತ್ತೀ ಎಂದೆಲ್ಲ ಭಾವಿಸಿದೆ. ಆದರೆ ಹೀಗಾಗುವುದೆಂದು ನಾನು ಕನಸಿನಲ್ಲೂ ಕಂಡಿರಲಿಲ್ಲ. ಸ್ವಾಮಿಯನ್ನು ನೋಡಿದವರು ಇಂತಹವನೆಂದು ಊಹಿಸಿಯಾರೇ? ಯಾವ ಹುತ್ತದೊಳಗೆ ಯಾವ ಹಾವೋ! ಎಲ್ಲಾ ನಮ್ಮ ಗ್ರಹಚಾರ... ಪೂರ್ವಾರ್ಜಿತ ಕರ್ಮ.... ಸ್ವಾಮಿ ಎಂದಿಗೆ ಸ್ವಯಿಚ್ಛೆಯಿಂದ ನಿನ್ನನ್ನು ನವಿಲೂರಿಗೆ ಕರೆತರುತ್ತಾನೋ ಅಂದೇ ಬಾ. ನಿನ್ನ ನನ್ನ ಋಣಭಾಗ್ಯ ಇದ್ದದ್ದು ಇಷ್ಟೇ ಇರಬಹುದೇನೋ. ನಾವು ಯಾವುದನ್ನೂ ತಪ್ಪಿಸಿಕೊಳ್ಳಲಾರೆವು. ನಾವೊಂದು ಬಯಸಿದರೆ ದೈವ ಇನ್ನೊಂದು ಬಯಸಿತು. ನಾನಿನ್ನು ನಿನ್ನ ಕರೆಯಲು ಬರಲಾರೆ, ಏನೂ ತಿಳಿದುಕೊಳ್ಳಬೇಡ." ಎಂದು ಅನೇಕ ರೀತಿಯಲ್ಲಿ ಒಡಲ ಸಂಕಟವನ್ನೆಲ್ಲ ತೋಡಿಕೊಂಡು ಸಂತೈಸಿ, ಖರ್ಚಿಗೆ ಹಣವನ್ನು ಕೊಟ್ಟು ಹೋಗಿದ್ದ. ಅಂದಿನಿಂದ ತಮ್ಮವರನ್ನು ನೋಡುವ ಸಂಯೋಗ ಸ್ವಾಮಿ ಕಾಣೆಯಾಗುವವರೆಗೂ ಬಂದಿರಲಿಲ್ಲವೇನೋ. ತೆರೆಮರೆಯಲ್ಲಿ ನಿರರ್ಗಳವಾಗಿ ಕಂಬನಿಗರೆಯುವ

ದೊಂದೇ ಹೆಣ್ಣಿಗೆ ದಾರಿ. ಸ್ವಾಮಿ ಮಡದಿಯನ್ನು ಸಂದೇಹ ದೃಷ್ಟಿಯಿಂದ ನೋಡುತ್ತಿದ್ದುದರಿಂದ ದಿನದಿನಕ್ಕೂ ತಪ್ಪುಗಳ ಗಾತ್ರ ಬೆಳೆಯುತ್ತಿತ್ತು.... ಪ್ರಮಾದಗಳ ಸೂತ್ರ ಬಲಿಯುತ್ತಿತ್ತು...

ಸತಿಯನ್ನು ಬಾಳಸೆರೆಯಲ್ಲಿ ಬಂದಿಸಹೋದ ಪತಿ ತಾನೇ ಇಲ್ಲವಾದರು ಎಂದುಕೊಳ್ಳುತ್ತ ನಿಟ್ಟುಸಿರು ಬಿಟ್ಟಳು ಶಿವೆ. ಎದೆಯಾಳದಲ್ಲಿ ಬಿಸಿಯುಸಿರು ನೆಲೆಯಿಲ್ಲದೆ ಹರಿದಾಡುತ್ತಿತ್ತು. ಹಾಗೆ ಅದೆಷ್ಟು ಹೊತ್ತು ಉರುಳಿತೋ...

ಲಿಂಗಣ್ಣ ತಂದೆಯ ಸ್ಥಾನದಲ್ಲಿದ್ದುಕೊಂಡು ಕಿಂಚಿತ್ತೂ ಲೋಪವಾಗದ ರೀತಿಯಲ್ಲಿ ನಡೆದುಕೊಂಡ ಸ್ವಾಭಿಮಾನಿವ್ಯಕ್ತಿ. ಮಡದಿ ಮಡಿದನಂತರ ಎರಡು ವರ್ಷಗಳಕಾಲ ಹಸುಳೆಯಾದ ಶಿವೆಯನ್ನು ತಾನೇ ಸಲಹಿದ್ದ. ಪಾರ್ವತಿ ಎರಡನೆಯ ಗೃಹಿಣಿಯಾಗಿ ಬಂದನಂತರ ಹಾಯಾಗಿ ಉಸಿರಾಡಿದರೂ ಆಗಾಗ ಜ್ವರಪೀಡಿತಳಾಗಿ ಸಣ್ಣಗೆ ಕಡ್ಡಿಯಂತಿದ್ದ ಮಗಳು ಗದ್ದೆಗಣ್ಣಗಳಲ್ಲಿ ದುಡಿಯಲಾರಳು. ಪೇಟೆಯವಾಸ ಸುಖವಾಗಿಡಬಹುದು ಎಂಬ ಮನೋಭಾವನೆ ಸ್ವಾಮಿಯಂತಹ ದಿಟ್ಟ ಅಳಿಯನನ್ನು ಹೃತ್ಪೂರ್ವವಾಗಿ ಬಯಸಿತು. ಆತನ ರೂಪ, ಕಲಿತ ವಿದ್ಯೆ, ಹಿಡಿದ ಕೆಲಸ ಒಂದೊಂದೂ ಆಕರ್ಷಣೀಯವಾಗಿದ್ದಿತು. ಬಾಬೂಜಿಯ ಅಂಗಡಿಯಲ್ಲಿ ಕಾರಕೂನನಾಗಿದ್ದು, ಬಟ್ಟೆಬರೆಗಳನ್ನು ಕೊಳ್ಳುವ ಸಮಯದಲ್ಲಿ ಹೊರ ರಾಜ್ಯಗಳಿಗೆ ಪಯಣಿಸುತ್ತಿದ್ದ.ಸಾಕಷ್ಟು ಗಳಿಕೆಯೂ ಇತ್ತು. ಮನೋವೈಶಾಲ್ಯತೆಯನ್ನು ಹೊಂದಿದ್ದಲ್ಲಿ ಆನಂದಮಯ ಜೀವನವನ್ನೂ ನಡೆಸಬಹುದಾಗಿತ್ತು.

ಆದರೆ ...!

ಲಿಂಗಣ್ಣ ಮಗಳನ್ನು ಧಾರೆಯೆರೆದುಕೊಟ್ಟ ಕೆಲವೇ ಕೆಲವು ದಿನಗಳಲ್ಲಿ ಅಳಿಯನ ಬಣ್ಣ ಬದಲಾಗಿ ಅತೀವ ಯೋಚನೆಗೊಳಗಾದ ತನ್ನ ಶ್ರಮವೆಲ್ಲಾ ವ್ಯರ್ಥವಾಯಿತೆಂದು ಬಹಳವಾಗಿ ಮರುಗಿದ. ಮಗಳ ಜೀವನ... ಬದುಕು ಹೇಗೋ ಸಾಗುತ್ತಿತ್ತು. ಅದಕ್ಕೊಂದು ರೂಪು ರೇಷೆಯೂ ಇಲ್ಲ. ಆಸೆ-ಆಕಾಂಕ್ಷೆಗಳೂ ಇಲ್ಲ. ಹುಟ್ಟಿದ ತಪ್ಪಿಗೆ ಬದುಕುವ ಹೊಣೆ ಅಷ್ಟೆ—

"ಶಿವೇ....!"

ಯಾರೋ ಕರೆದ ಧ್ವನಿ.

"ಶಿವೇ ..!"

ಯಾರಿರಬಹುದೆಂದು ಯೋಚಿಸುವುದರೊಳಗಾಗಿ ಪುನರಪಿ ಕಿವಿಯನ್ನು ತಾಗಿತು ದನಿ. ಶಿವಮ್ಮ ಎದ್ದುಹೋಗಿ ಮುಂದಣ ಕದ ತೆರೆದಾಗ ಅಲ್ಲಿ ನಿಂತಿದ್ದ ಪುಟ್ಟಮ್ಮನನ್ನು ನೋಡಿದೊಡನೆ ಅತ್ಯಾದರದಿಂದ ಬರಮಾಡಿಕೊಂಡಳು ತುಟಿಗಳಲ್ಲಿ ಊಹಿಸಲೂ ಆಗದಂತಹ ಶುಷ್ಕನಗೆ ಮಿನುಗಿ ಮಾಯವಾಯಿತು.

"ಹಿಂದುಗಡೆ ಇದ್ದುದರಿಂದ ಕೇಳಿಸಲಿಲ್ಲ. ಬಂದುಹೊತ್ತಾಯಿತೇ?"

"ಇದೀಗಷ್ಟೇ ಬಂದೆ. ಏನು ಮಾಡುತ್ತಿದ್ದಿ ? ಮಕ್ಕಳೆಲ್ಲಿ ?"

"ರವಿಯನ್ನು ರಂಗಣ್ಣನಲ್ಲಿಗೆ ಕಳುಹಿಸಿರುವೆ. ಜೊತೆಗೆ ಶ್ಯಾಮು ಗೋಪಿಯರೂ ಹೋಗಿದ್ದಾರೆ. ಸರಸು ವಿಮಲೆ ಒಳಗಡೆ ಇದ್ದಾರೆ."

ಶಿವೆ ಮೂಲೆಯಲ್ಲಿದ್ದ ಚಾಪೆಯನ್ನು ಬಿಚ್ಚಿ ಹರವಿದಳು.

ಒಳಗಡೆ ಸೆಕೆಯು ತಾಪ ಬಹಳ. ಹೊರಗಡೆ ಕುಳಿತುಕೊಳ್ಳೋಣ,ಬಾ.

ಪುಟ್ಟಮ್ಮ ಶಿವೆಯ ಕೈಯನ್ನು ಹಿಡಿದುಕೊಂಡೇ ಮೆಟ್ಟಿಲಿಳಿದಳು. ವಿಶಾಲವಾದ ಅಂಗಳ ಕಸ ಕಳೆಗಳಿಂದ ಕೂಡಿ ಅಸಹ್ಯವಾಗಿತ್ತು. ನೋಟ ವನ್ನೊಮ್ಮೆ ಸುತ್ತಲೂ ಹರಿಸಿದಳು ಶಿವೆ. ಸ್ವಾಮಿ ಇದ್ದಾಗ ಹೊರಗಡೆ ತಲೆ ಹಾಕಲು ನಿಷೇಧ; ಈಗ ಮಾಡಲು ಮನಸ್ಸಿಲ್ಲ. ಎದೆಯಾಳದಿಂದ ನಿಟ್ಟುಸಿ ರೊಂದು ಸದ್ದಿಲ್ಲದೆ ತಪ್ಪಿಸಿಕೊಂಡಿತು.

"ಹೊರಗಿನ ವಾತಾವರಣ ಮನಸ್ಸಿಗೆ ತಂಪನ್ನೀಯುತ್ತದೆ. ಹೀಗೆ ಹಗಲೆಲ್ಲ ಕದ ಮುಚ್ಚಿ ಕುಳಿತುಕೊಂಡೇನು ಮಾಡುವೆ?"

"ಹೊರಗಡೆ ಅಡ್ಡಾಡಿದರೆ ಏನೇನು ಕತೆ ಹುಟ್ಟಿಕೊಳ್ಳುತ್ತೊ, ಅದೇ ಭಯ!"

"ಅದಕ್ಕೆಲ್ಲಾ ಅಂಜಿದರಾದೀತೇ ?"

ಶಿವೆ ಮಾತಾಡಲಿಲ್ಲ. ಕಣ್ಣುಗಳಲ್ಲಿ ಫಳಕ್ಕನೆ ಮಿಂಚಿದ ಹನಿಗಳು ಉತ್ತರ ಹೇಳಿದವು. ಕಣ್ಣು ಕೆನ್ನೆ ಮೂಗುಗಳಲ್ಲಿ ಚಂದನವೊರೆದಂತೆ ರಂಗೊರೆಯಿತು.

"ನೀನು ಇನ್ನೂ ಎಷ್ಟುಕಾಲ ಹೀಗೆ ದುಃಖಿಸುತ್ತಿ ? ಐದಾರು ಮಂದಿ ಬದುಕುವ ಬಗೆಯನ್ನು ಕುರಿತು ಚಿಂತಿಸಬೇಕೇ ವಿನಾ ಕಳೆದುಹೋದ ದುರ್ದಿನ ಗಳನ್ನು ಕುರಿತು ಅಳುತ್ತಾ ಕುಳಿತರೆ ಹೇಗೆ? ನೀನೇ ಯೋಚಿಸಿ ನೋಡು".

"ಸ್ವಾಮಿ ವಿಚಾರ ಏನಾಯಿತೆಂಬುದೇ ತಿಳಿಯಲಿಲ್ಲ; ಏನು ಮಾಡ

ಬೇಕೆಂಬುದೂ ಗೊತ್ತಾಗುತ್ತಿಲ್ಲ. ಈ ಜೀವನವನ್ನು ಯಾವ ರೀತಿ ರೂಪಿಸಿ ಕೊಳ್ಳಬೇಕೆಂಬುದೂ ಹೊಳೆಯುತ್ತಿಲ್ಲ. ಮಕ್ಕಳೆಲ್ಲ ಚಿಕ್ಕವರು. ಬುದ್ಧಿ ಮಂಕಾಗಿಬಿಟ್ಟಿದೆ....ಯೋಚಿಸಿದರೂ ನಿಚ್ಚಳವಾಗಿ ಹೊಳೆಯುತ್ತಿಲ್ಲ."

"ಅಂದಿಂದಿಗೂ ಹಿಂದೂಸ್ಥಾನದಲ್ಲಿ ಹೆಣ್ಣು ಎಲೆಮರೆಯ ಕಾಯಾಗಿರುವುದರಿಂದ ಹೀಗೊಮ್ಮೆ ಜೀವನಕ್ಕೆ ಹೆಗಲು ಕೊಡಬೇಕಾಗಿಬಂದಾಗ ತತ್ತರಿಸಿ ಹೋಗುತ್ತಾಳೆ. ದುಷ್ಟ ಸಮಾಜ ಯಾವ ಉದ್ದೇಶಕ್ಕಾಗಿ ಹೆಣ್ಣಿಗೆ ಸಂಕೋಲೆ ತೊಡಿಸಿತೆಂಬುದನ್ನು ಅರ್ಥಮಾಡಿಕೊಂಡಾಗ ಮಾತ್ರ ಆಕೆಯ ಜೀವನ ಸಾರ್ಥಕವಾಗುತ್ತದೆ. ಅಲ್ಲಿಯವರೆಗೆ ಹೆಣ್ಣೆಂಬುದು ಒಂದು ಮಾಂಸದ ಮುದ್ದೆಯೇ ಸೈ." ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ ಕಾರುಣ್ಯಪೂರ್ಣ ಧ್ವನಿಯಲ್ಲಿ ಮುಂದುವರಿದಳು. "ಮಾಧು ಬಾಬೂಜಿಯೊಂದಿಗೆ ಮಾತಾಡಿ ಸ್ವಾಮಿಯ ಬದುಲಿಗೆ ಈಗಲೇ ನೇಮಕ ಮಾಡಬಾರದೆಂದು ಕೇಳಿಕೊಂಡಿದ್ದಾನೆ. ಅವರು ಇನ್ನೆರಡು ತಿಂಗಳು ಕಾಯುವುದಾಗಿ ಒಪ್ಪಿಕೊಂಡಿದ್ದಾರಂತೆ. ಅವರೂ ಸಹ ಸ್ವಾಮಿಯ ಪತ್ತೆಗಾಗಿ ಪ್ರಯತ್ನಿಸುತ್ತಿದ್ದಾರೆ. ಆದರೂ ಸುಳಿವು ಹತ್ತದುದು ದುರ್ದೈವವೆಂದೇ ಹೇಳಬೇಕು. ಮಾಧು ತನಗೆ ತಿಳಿದ ಕಡೆಗಳಿಗೆಲ್ಲಾ ಕಾಗದ ಬರೆದು ನೋಡಿದ. ಪೋಲೀಸರನ್ನೂ ಸುಮ್ಮನೆ ಕೂಡಗೊಡಿಸುವುದಿಲ್ಲ. ಸ್ನೇಹಿತ ಕಾಣೆಯಾದುದು ಅವನಿಗೂ ವ್ಯಸನ...ಆದರೆ ಮಿಂಚಿ ಹೋದುದಕ್ಕೆ ಮಾಡುವುದೇನು ? ಇನ್ನು ಜೀವನ ಪರಿಸ್ಥಿತಿಗೆ ಹೊಂದಿಕೊಳ್ಳುವುದೊಂದೇ ದಾರಿ."

"ನೀವು ಮಾತೃಸ್ಥಾನದಲ್ಲಿದ್ದೀರಿ. ನಿಮ್ಮ ಸಹಕಾರ-ಉಪಕಾರವನ್ನು ಎಂದಿಗೂ ಮರೆಯಲಾರೆ ಮತ್ತು ತೀರಿಸಲೂ ಲಾರೆ."

"ತಾಯಿಯ ಬಳಿ ಮಗು ಉಪಕಾರವನ್ನು ತೀರಿಸುವ ಪ್ರಶ್ನೆಯೇ ಏಳುವುದಿಲ್ಲ ಶಿವೇ !"

"ನಿಮ್ಮಗಳ ಪ್ರಯತ್ನದಿಂದಲಾದರೂ ನನ್ನ ಬಾಳು ಬೆಳಗೀತೆಂಬ ನೆಚ್ಚಿನಿಂದ ದಿನಗಳೆಯುತ್ತಿರುವೆ. ಈಗೀಗ... ಆಸೆ ನಿರಾಸೆಯ ಹಾದಿ ಹಿಡಿಯುತ್ತಿದೆ. ಮಕ್ಕಳು ಅನಾಥರಾದರು; ನನ್ನ ಮೊರೆ ಭಗವಂತನಿಗೆ ಮುಟ್ಟಲಿಲ್ಲ." ಕಣ್ಣುಗಳಲ್ಲಿ ಮೂಡಿದ ಹನಿಗಳು ಧಾರೆಧಾರೆಯಾಗಿ ಕೆನ್ನೆಯ ಮೇಲಿಳಿದುವು.

"ಬೇಡ ಶಿವೇ ! ಇಲ್ಲಿಯವರೆಗೆ ಕಂಬನಿಗರೆದುದೇ ಬಹಳಷ್ಟಾಯಿತು.

ಇನ್ನು ದುಃಖಿಸಬೇಡ. ಸ್ವಾಮಿ ಮನಸ್ಸು ಮಾಡಿದ್ದರೆ ಸುಖಜೀವನ ನಡೆಸುವುದೇನೂ ಕಷ್ಟವಾಗಿರಲಿಲ್ಲ....ಇವೆಲ್ಲ ಅತಿವರ್ತನೆಯ ಫಲ. ಮನಸ್ಸು ತಿಳಿಯಾಗಿ ಎದೆಯ ಕಲ್ಮಶವು ಹರಿದಾಗ ನಿನಗಾಗಿ ಓಡಿಬಂದಾನು, ತನ್ನ ತಪ್ಪಿಗಾಗಿ ಪರಿತಪಿಸಿಯಾನು. ಶಿವೇ, ಎಂದಾದರೂ ನಿನ್ನ ಭಾಗ್ಯೋದಯವಾಗಿ ನೀನು ಸುಖಿಯಾಗುವೆ ಎಂದೇ ನನ್ನ ಮನಸ್ಸು ಹೇಳುತ್ತಿದೆ."

"ಅಷ್ಟಾದರೆ ಸಾಕು" ಎನ್ನುತ್ತ ಶಿವೆ ಬ್ರಾಹ್ಮಣಿಯ ಕಾಲುಮುಟ್ಟಿ ನಮಸ್ಕರಿಸಿ ಪಾದಧೂಳಿ ಸ್ವೀಕರಿಸಿದಳು.

ಪುಟ್ಟಮ್ಮನ ಮನಸ್ಸು ಮಂಜಿನಂತೆ ಕರಗಿತು. ಅವಳ ಬೆನ್ನನ್ನು ನೇವರಿಸುತ್ತ ಸಾಂತ್ವನಗೈಯ್ಯುವ ದನಿಯಲ್ಲಿ ನುಡಿದಳು. "ಹದಿನಾಲ್ಕು ವರ್ಷಗಳಿಂದ ಮೈಸೂರಿನಲ್ಲಿದ್ದರೂ ಏನೂ ಕಲಿತುಕೊಳ್ಳಲಿಲ್ಲ....ಸ್ವಾಮಿ ಮನಸ್ಸು ಮಾಡಿದ್ದರೆ ನಿನಗೆ ವಿದ್ಯೆ ಕಲಿಸುವುದಾಗಲೀ, ಕೈಗಾರಿಕೆಯನ್ನು ಕಲಿಸುವುದಾಗಲೀ ಕಷ್ಟವಾಗುತ್ತಿರಲಿಲ್ಲ. ನೀನು ವಿದ್ಯಾವತಿಯಾಗಿದ್ದಿದ್ದಲ್ಲಿ ಜೀವನವನ್ನು ಒಂದಲ್ಲ ಒಂದು ರೀತಿಯಲ್ಲಿ ರೂಪಿಸಿಕೊಳ್ಳಬಹುದಾಗಿತ್ತು."

"ಈ ಬಾಳಹೊರೆಗಿಂತ ಸ್ವಾಮಿಯ ಬಾಳಸೆರೆಯೇ ಉತ್ತಮವಾಗಿತ್ತು ಎನಿಸುತ್ತೆ ಈಗ."

"ಶಿವೇ, ಸತಿಯನ್ನು ಸೆರೆಯಲ್ಲಿಡುವುದರಿಂದ ಪಾತಿವ್ರತ್ಯವು ಮೊಳೆಯುವುದಿಲ್ಲ. ಅಥವಾ ಪತಿಯಾದವನ ಬೆದರಿಕೆಯಿಂದ ಬೆಳೆಯುವುದಿಲ್ಲ. ಸತೀಧರ್ಮವನ್ನರಿತ ಸತಿಗೆ ನಿರ್ಬಂಧವೇಕೆ ? ಸ್ವಾಮಿ ನಿನ್ನ ಖಂಡಿತ ಅರಿತುಕೊಳ್ಳಲಿಲ್ಲ ವೃಥಾ ತಾಪತ್ರಯ."

ರುದ್ರಮೌನ ಸ್ವಲ್ಪ ಹೊತ್ತು ರಾಜ್ಯವಾಳಿತು.

ಅನಂತರ,

ಶಿವೆ ನೋಟವನ್ನು ಪ್ರಾಕಾರದ ಬಾಗಿಲೆಡೆಗೆ ಹೊರಳಿಸಿ ನುಡಿದಳು. "ರವಿ ಇನ್ನೂ ಹಿಂದಿರುಗಲಿಲ್ಲ. ರಂಗಣ್ಣ ಬಂದರೋ ಇಲ್ಲವೋ."

"ದೇವರ ಮೇಲೆ ಭಾರ ಹಾಕು....ಅವನ ಹೊರತು ರಕ್ಷಕರಿಲ್ಲ,"

"ಅದು ನಿಜ." ಎಂದುಕೊಂಡಳು ಶಿವೆ. ಹೃದಯ ಭಾರವಾಗಿತ್ತು.

ಅದೇ ಸಮಯದಲ್ಲಿ ಪ್ರಾಕಾರದ ಬಾಗಿಲು 'ಖಣಲ್'ನೆ ಸದ್ದು ಮಾಡಿ ರವಿ ಬಂದುದನ್ನು ಸೂಚಿಸಿತು. ನೋಟ ಆಕಡೆ ಹೊರಳುವುದರೊಳಗಾಗಿ ರವಿ

ಒಳಬಂದಾಗಿತ್ತು. ಹಿಂದೆಯೇ ಶ್ಯಾಮು, ಗೋಪಿ ಓಡಿ ಬಂದರು. ಬರಬರುತ್ತಲೇ ರವಿಯೆಂದ "ರಂಗಣ್ಣ ಸಿಕ್ಕಿದ್ದರು. ಅಪ್ಪನ ಸಮಾಚಾರ ಏನೂ ತಿಳಿಯಲಿಲ್ಲವಂತೆ."

ಶಿವೆ ಖಿನ್ನಮುಖಿಯಾದಳು.

ಕುಳಿತ ತಾವಿನಲ್ಲಿ ಹೆಮ್ಮರದ ಹರೆಗಳು ಉದ್ದಗಲಕ್ಕೂ ಹರಡಿವೆ. ಮನೆಗೆ ಜಾಗವನ್ನು ಕೊಂಡುಕೊಂಡಾಗಲೇ ಇತ್ತು ಆ ಮರ. ಮರವನ್ನು ಉಳಿಸಿಕೊಳ್ಳುವ ಸಲುವಾಗಿ ಮನೆಯನ್ನು ಹಿಂಬದಿಗೆ 'ಔಟ್‌ಹೌಸ್' ತರಹ ಕಟ್ಟಿದ್ದ. ಉದುರಿದ ದರುಗೆಲೆಗಳು ಒಣಗಿ ಹೆಜ್ಜೆ ಇಟ್ಟಲ್ಲಿ 'ಲರಲರ' ಎನ್ನುತ್ತವೆ--ಮೃದು ಮಂದ ಶೃತಿಯಂತೆ.

ಒಳಗಡೆಯಿದ್ದ ವಿಮಲೆ ಸರಸುರವರು ಹುಡುಗರ ದನಿಕೇಳಿ ಹೊರ ಬಂದರು. ಬಾಬೂಜಿಯ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಇನ್ನೊಬ್ಬ ಕಾರಕೂನ ಬೊಂಬಾಯಿಗೆ ಹೋಗಿದ್ದುದರಿಂದ ತಂದೆಯ ವಿಚಾರ ಏನಾದರೂ ತಿಳಿದು ಬಂದಿರಬಹುದೇನೋ ಎಂಬ ಕಾತರಯುತ ಆಸೆ ಮುಖಮುದ್ರೆಯಲ್ಲಿ ಹೊಮ್ಮಿತ್ತು. ರವಿ ಏನಾದರೂ ಹೇಳುವುದರೊಳಗಾಗಿ ಗೋಪಿ ಶ್ಯಾಮು ಗೋಣು ಆಡಿಸಿ ಸುದ್ದಿ ತಿಳಿಯಲಿಲ್ಲವೆಂದು ಸನ್ನೆಯಿಂದಲೇ ತಿಳಿಸಿದರು.

ಪುಟ್ಟಮ್ಮ ರವಿಯನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ಬೆನ್ನಿನ ಮೇಲೆ ಕೈಯಿಟ್ಟು ಹೇಳಿದಳು.

"ರವೀ, ಇಂತಹ ದುರ್ಬರ ಪ್ರಸಂಗಗಳು ಎಲ್ಲರ ಜೀವನದಲ್ಲೂ ಒಂದಲ್ಲ, ಒಂದು ರೂಪದಲ್ಲಿ ಬರುತ್ತವೆ... ಏನೇ ಬಂದರೂ ಧೈರ್ಯದಿಂದ ಎದುರಿಸುವುದೇ ಜೀವನ. ಈಗಿನಿಂದಲೇ ನಿನ್ನ ಬಾಳನ್ನು ರೂಪಿಸಿಕೊ ದೇವರು ಸಹಾಯ ಮಾಡುತ್ತಾನೆ."

ರವಿಯ ಕಣ್ಣಿನಲ್ಲಿ ಸಣ್ಣಗೆ ಬೆಳ್ಳಿಯ ಗೆರೆಯಂತೆ ನೀರೂರಿತು. ಒಂದೆರಡು ಗಳಿಗೆ ಯೋಚಿಸಿ ನುಡಿದ, "ಏನಾದರೂ ಕೆಲಸ ಸಿಕ್ಕಿದರೆ ಮಾಡಿಕೊಂಡೇ ಓದುವೆ... ರಾಯರು ಕೊಡಿಸುವೆ ಎಂದಿದ್ದಾರೆ. ಸಿಕ್ಕಿದರೆ ಸಾಕಾಗಿದೆ."

ಶಿವೆ ಹೇಳಿದಳು "ಗೌರಿ ಸಾಯುವಾಗ ಶ್ಯಾಮು ಗೋಪಿಯರನ್ನು ನಾನು ನೋಡಿಕೊಳ್ಳುವುದಾಗಿ ಮಾತು ಕೊಟ್ಟಿರುವೆ.... ಇಲ್ಲೇ ನಾವು ಜೀವನ

ನಡೆಸುವುದಾದರೆ ಮಕ್ಕಳಿಗೆ ಅನುಕೂಲ. ವಿದ್ಯೆಯನ್ನೂ ಕಲಿಸಬಹುದು. ನಾವು ಇನ್ಯಾರನ್ನಾದರೂ ಆಶ್ರಯಿಸಿದರೆ ಸಾಧ್ಯವೇ ಇಲ್ಲ."

"ಅದು ಖಂಡಿತ ಒಳ್ಳೆಯದು. ಪರರ ಹಂಗಿನ ಪರಮಾನ್ನಕ್ಕಿಂತ ಸ್ವಂತ ಗಂಜಿ ಲೇಸು, ಎಷ್ಟೇ ಕಷ್ಟವಾದರೂ ಚಿಂತೆಯಿಲ್ಲ, ಸ್ವಂತ ಜೀವನ ನಡೆಸಿಕೊಳ್ಳಿ...."

"ನಾನೆನ್ನುವುದೂ ಅದೇ. ಏನೇ ಬಂದರೂ ಮೈಸೂರನ್ನು ಬಿಟ್ಟು ಹೋಗಬಾರದು. ಇಲ್ಲಿದ್ದು ಎಲ್ಲರೂ ವಿದ್ಯೆ ಕಲಿಯಬೇಕು."

"ನಿಜ ಮಗೂ ! ನಿನಗಿರುವ ಸ್ಫೂರ್ತಿಯನ್ನು ಚಿಕ್ಕವರಿಗೂ ತುಂಬು. ತಾಯಿ ಹೇಳಿದಂತೆ ಕೇಳು. ಕೆಲಸ ಕಾರ್ಯಗಳಿಗೆ ಮಾಧುವನ್ನು ಕೇಳು. ಏನಾದರೂ ಸಹಾಯ ಮಾಡುತ್ತಾನೆ."

ಮಕ್ಕಳೆಲ್ಲ ಮಂತ್ರಮುಗ್ಧರಂತೆ ಅಲ್ಲಲ್ಲೇ ನಿಂತು ಸಂಭಾಷಣೆಯನ್ನು ಕೇಳುತ್ತಿದ್ದರು— ಒಟ್ಟಿನಲ್ಲಿ ಆ ದೃಶ್ಯ ಕರುಣಾಜನಕವಾಗಿತ್ತು. ಪುಟ್ಟಮ್ಮ ಇನ್ನಷ್ಟು ಹೊತ್ತು ಇದ್ದು ತನ್ನ ಮನೆಗೆ ಹೊರಟಳು.

ಶಿವೆ ರವಿಗೆಂದಳು "ಗುದ್ದಲಿ ತಾ; ಈವತ್ತು ಈ ಅಂಗಳವನ್ನಷ್ಟು ಶುಚಿಗೊಳಿಸಿಬಿಡೋಣ. ಎಲ್ಲರೂ ಕೈ ಹಚ್ಚಿದರೆ ಒಂದು ಗಂಟೆಯೊಳಗಾಗಿ ಆಗುತ್ತೆ."

ಮಾತು ಮುಗಿಯುವುದರೊಳಗಾಗಿ ಚುರುಕು ಸ್ವಭಾವದ ಶ್ಯಾಮು ಓಡಿ ಹೋಗಿ ಗುದ್ದಲಿ ತಂದ. ಸರಸು ಅದೇ ಗುದ್ದಲಿಗೆ ಕೈ ಹಾಕಿದಳು. ಶ್ಯಾಮು ಕೊಡದೆ ಹೇಳಿದ "ಹುಡುಗಿಗೇಕೆ ಗುದ್ದಲಿ? ಸಣ್ಣ ಸಣ್ಣ ಕಳೆಗಳನ್ನು ಕೈಯಿಂದಲೇ ಕೀಳಬಹುದು. ಇಷ್ಟಕ್ಕೂ ನಿನ್ನಿಂದ ಗುದ್ದಲಿ ಎತ್ತಲಾಗುವುದಿಲ್ಲ. ನಾನು ಅಗೆಯುವೆ, ನೀನು ಕಳೆ ಕೀಳು."

"ಉಹೂ, ನನಗೆ ಗುದ್ದಲಿ ಬೇಕು."

"ನಿನ್ನಿಂದ ಆಗುವುದಿಲ್ಲ." ಶ್ಯಾಮುವಿನ ಉತ್ತರ.

"ನಿನ್ನಿಂದಲೂ ಆಗುವುದಿಲ್ಲ ರವಿ ಅಗೆಯಲಿ ಎಂದಳು ಶಿವೆ.

ಆದರೂ ಸರಸು ಹಿಮ್ಮೆಟ್ಟಲಿಲ್ಲ. ಶ್ಯಾಮು ಶಿವೆಯೊಂದಿಗೆ ದೂರು ಹೇಳಿದ. "ಅಮ್ಮಾ ! ಸರಸು ನನ್ನನ್ನು ಅಗೆಯಗೊಡಿಸುವುದಿಲ್ಲ.

ಸರಸು ಮತ್ತೆ ಗೋಗರೆದಳು.

"ಹೀಗಾದರೆ ಹೇಗೆ ಕೂಡಿ ಕೆಲಸ ಮಾಡುತ್ತೀರಿ? – ಅಗೆಯುವ ಕೆಲಸ ನಿನ್ನಿಂದಾಗದು. ಶ್ಯಾಮು ಮಾಡಲಿ."

"ಶ್ಯಾಮುವಿಗೂ ನನ್ನಷ್ಟೇ ವಯಸ್ಸು."

"ಆಹಹಾ ! ನಿನಗಿಂತ ಆರು ತಿಂಗಳು ದೊಡ್ಡವನು ನಾನು !"

"ಅದೇನು ಹೆಚ್ಚಲ್ಲ."

ಅಷ್ಟರಲ್ಲಿ ರವಿ ಗುದ್ದಲಿಯನ್ನು ತಾನು ತೆಗೆದುಕೊಂಡು ಅಗೆಯ ತೊಡಗಿದ. ಸರಸು ತುಂಟ ನಗೆ ಬೀರಿದಳು. ಮರುಕ್ಷಣದಲ್ಲಿ ಶ್ಯಾಮು ಮಾಧವ ರಾಯರ ಮನೆಯಿಂದ ಇನ್ನೊಂದು ಗುದ್ದಲಿಯನ್ನು ತಂದು ತನ್ನೆಲ್ಲಾ ಹಲ್ಲು ಗಳನ್ನೂ ಬಿಟ್ಟು ನಿಂತ, ಸರಸೂಗೆ ಈಗ ಹೊಟ್ಟೆಯುರಿಯಿತು. ಬಾಯಿ ಸೊಟ್ಟಮಾಡಿ ಅಂದಳು. "ಹೋಗಲಿ, ಅಗೆ ನೋಡೋಣ. ನೀನು ಎಷ್ಟು ಗಟ್ಟಿಯಿದ್ದೀಯೆಂಬುದು ತಿಳಿಯುತ್ತೆ."

"ನೋಡು !"

ಶ್ಯಾಮು ಸವಾಲು ಹಾಕಿ ಅಗೆಯತೊಡಗಿದ. ಜೊಂಡು ಹುಲ್ಲು ಕಳೆ ಗಳೆಲ್ಲ ಬೇರುಗಳಚಿ ಬಿದ್ದುವು. ಅಲ್ಲೆ ಅಗೆಯುತ್ತಿದ್ದ ರವಿ 'ಭೇಷ್' ಅಂದ. ಶ್ಯಾಮುಗೆ ಇನ್ನಷ್ಟು ಹುರುಪು ಕೂಡಿಬಂತು. ನಾನು ಮುಂದು ತಾನು ಮುಂದು ಎಂಬ ಪೈಪೋಟಿಯಿಂದ ಕೆಲಸ ಆರಂಭವಾಯಿತು. ಎಲ್ಲರೂ ಕೂಡಿ ಕಳೆಯನ್ನು ಕಿತ್ತು ಕಸವನ್ನು ಝಾಡಿಸಿ ಬಹುದಿನದ ಕೊಳಕನ್ನು ನಿರ್ಮೂಲ ಮಾಡಿದರು.

ಸಂಜೆಗೆಂಪು ಅಳಿದು ಕತ್ತಲೆಯ ತೆರೆ ನಿಧಾನವಾಗಿ ಹರಿದು ಬರತೊಡ ಗಿತು. ಕಿತ್ತ ಕಳೆಯನ್ನು ಬುಟ್ಟಿಯಲ್ಲಿ ತುಂಬಿ ಕಸದ ತೊಟ್ಟಿಗೆ ಸಾಗಾಣಿಕೆ ನಡೆ ಯುತ್ತಿತ್ತು. ಶಿವೆ ವಿಚಾರಮಗ್ನಳಾಗಿ ಹಾಗೇ ಮರದಡಿಯಲ್ಲಿ ಕುಳಿತುಕೊಂಡು ನೋಡುತ್ತಿದ್ದಾಳೆ. ತುಸು ಹೊತ್ತು ಸದ್ದಿಲ್ಲದೆ ಉರುಳಿತೇನೋ...ಪ್ರಾಕಾ ರದ ಬಾಗಿಲು ಇದ್ದಕ್ಕಿದ್ದಂತೆ 'ಖಣಿಲ್'ನೆ ಸದ್ದು ಮಾಡಲು ನೋಟ ಸಹಜ ವಾಗಿ ಅತ್ತ ಹೊರಳಿತು. ನೋಡಿದರೆ ಅವನೇ ಸ್ವಾಮಿ! ಎಂತಹ ಆಶ್ಚರ್ಯ! ಸುಖ-ಸಂತೋಷ-ಆಶ್ಚರ್ಯಗಳು ಏಕಕಾಲದಲ್ಲಿ ಮೂಡಿ ನೋಡುತ್ತಿದ್ದ ಕಣ್ಣುಗಳೇ ಮಂಜಾದವು. ಆದರೆ ! ಕಣ್ಣರಳಿಸಿ ಮತ್ತೆ ನೋಡಿದರೆ ನಿಜ ವಾಗಿಯೂ ಸ್ವಾಮಿ ! ಇನ್ನೇನು ಒಂದೇಬಾರಿಗೆ ಕುಪ್ಪಳಿಸಬೇಕು. ಅಷ್ಟರಲ್ಲಿ

ಆತನೇ ಹತ್ತಿರ ಹತ್ತಿರ ಐತರುತ್ತಿದ್ದಾನೆ. ಅಯ್ಯೋ, ಸ್ವಾಮಿಯೇ? ಅಲ್ಲ-ಅಲ್ಲ; ಸ್ವಾಮಿಯ ಅಣ್ಣ ರಾಮಣ್ಣ. ಅದೇ ಮುಖ; ಅದೇ ಸ್ವರೂಪ. ಒಮ್ಮೆಲೇ ಕಾತರತೆಯಳಿದು ಸಪ್ಪೆಯಾದಳು ಶಿವೆ. ಅಯ್ಯೋ ಎಂತಹ ಪ್ರಮಾದವಾಗುತ್ತಿತ್ತು ? ನಿಜವಾಗಿಯೂ ನನ್ನ ಸ್ವಾಮಿ ಬಂದರೆಂದು ಕೊಂಡಿದ್ದೆ; ಹಾಗಾದರೂ ಆಗಬಾರದಿತ್ತೆ ಭಗರ್ವ! ಎಂದುಕೊಳ್ಳುತ್ತ ಎದ್ದು ನಿಂತಳು ಶಿವೆ. ರಾಮಣ್ಣನ ಹೆಜ್ಜೆ ಭಾರವಾಗಿತ್ತು. ಬರುಬರುತ್ತಲೇ ಅವನೆಂದ "ಶಿವೆ, ಸ್ವಾಮಿಯ ವರ್ತಮಾನ ಏನಾದರೂ ತಿಳಿಯಿತೇ?"

"ಇಲ್ಲ"

"ಇದೇನೋ ಸೋಜಿಗ"

"ನಮಗೆ ದಿಕ್ಕು ತೋಚದಂತಾಗಿದೆ."

"ಹಾಗಾಗುವುದೇ ಸೈ." ಸ್ವಲ್ಪ ಹೊತ್ತು ಯೋಚಿಸುತ್ತ ನಿಂತಿದ್ದು ಅನಂತರ ಮುಂದುವರಿದ "ಬಾಬೂಜಿಯ ಕಡೆಯಿಂದ ಏನೂ ತಿಳಿಯಲಾಗ ಲಿಲ್ಲವೇ? ಅವರು ಪ್ರಯತ್ನ ಪಟ್ಟಿದ್ದರೆ ಸುಲಭವಾಗಿ ತಿಳಿಯಬಹುದಾಗಿತ್ತು."

"ಅವರೂ ಬಹಳ ಪ್ರಯತ್ನ ಪಟ್ಟಿದ್ದಾರೆ. ಪೋಲೀಸರಿಗೂ ವರದಿ ಮಾಡಿದ್ದಾರೆ, ಎಲ್ಲಿಯೂ ವಿಷಯ ಹೊರಬೀಳಲಿಲ್ಲ." ರವಿ ಉತ್ತರಿಸಿದ.

ಅದೇ ವಿಚಾರ ಮಥನಮಾಡುತ್ತ ಒಳಗಡೆ ಬಂದು ಚಾಪೆಯ ಮೇಲೆ ಕುಳಿತುಕೊಂಡ. ಬಸ್ಸಿನ ಪ್ರಯಾಣದಿಂದ ದಣಿದಿದ್ದ ಮೈ ವಿಶ್ರಾಂತಿಗಾಗಿ ಗೀಳಿಡುತ್ತಿತ್ತು. ಕೈಕಾಲು ತೊಳೆದುಕೊಳ್ಳುವ ಯೋಚನೆ ಮಾಡುವುದ ರೊಳಗಾಗಿ ರವಿ ಟವಲ್ಲೊಂದನ್ನು ತಂದುಕೊಟ್ಟು "ಮುಖ ತೊಳೆಯು ತ್ತೀರೇನು ಎಂದ.

ರಾಮಣ್ಣ ಎದ್ದು ಟವಲ್ಲನ್ನು ಹೆಗಲಮೇಲೆ ಹಾಕಿಕೊಂಡು ಬಚ್ಚಲಿಗೆ ಹೋಗುತ್ತ ಅಂದ,

"ಮೈಯೆಲ್ಲಾ ನೋವು ಸ್ನಾನಮಾಡಿದರೊಮ್ಮೆ ಹಿತವಾದೀತು."

"ಮಾಡಿರಿ; ನೀರು ಅಣಿಯಾಗಿದೆ."

ರಾಮಣ್ಣ ಬಚ್ಚಲಿಗೆ ಹೋಗುತ್ತಲೂ ರವಿ ಚಾಪೆಯನ್ನು ಕೊಡವಿ ಕಸವನ್ನು ಝಾಡಿಸಿ ಎಂದಿನಂತೆಯೇ ಹಾಸಿದ. ಸಾಲಾಗಿ ಮೂರು ಅಂಕಣದ ಹೆಂಚಿನ ಮನೆ. ಮಧ್ಯೆ ನಡುಮನೆ. ಎಡಕ್ಕೆ ಮಲಗುವ ಕೊಠಡಿ.

ಬಲಕ್ಕೆ ಅಡುಗೆಯ ಮನೆ. ಅದಕ್ಕೆ ಹೊಂದಿಕೊಂಡಂತೆ ಬಚ್ಚಲು ಇತ್ತು. ತನ್ನ ಉಳಿತಾಯದೊಂದಿಗೆ ಸ್ವಲ್ಪ ಸಾಲದ ಹಣವನ್ನೂ ಕೂಡಿಸಿಕೊಂಡಿದ್ದು ಸಾಧಾರಣ ದರ್ಜೆಯ ಮನೆಯನ್ನು ಕಟ್ಟಿ ಬಾಡಿಗೆ ಮನೆಗೆ ತೆರಬಹುದಾದ ಹಣವನ್ನು ಉಳಿಸಿಕೊಂಡಿದ್ದ ಸ್ವಾಮಿ. ಈಚೆಗೆ ಆ ಹಣವೂ ಸಂದಾಯವಾಗಿತ್ತು. ವಾಸಕ್ಕೆ ಹೆಸರಿಸಬಹುದಾದ ಇನ್ನಾವ ಕೊರತೆಯೂ ಇರಲಿಲ್ಲ. ಹಣದ ಯೊಂದೇ ಅಗಾಧ.

ರಾಮಣ್ಣ ಬಿಂದಿಗೆ ನೀರು ಚೆಲ್ಲಿ ಕೈಕಾಲು ತೊಳೆದುಕೊಂಡು ಒಳ ಬಂದು ಹೇಳಿದ,

"ಶಿವೇ, ನೀನೇನೂ ಹೆದರಬೇಕಾಗಿಲ್ಲ. ಸ್ವಾಮಿ ಎಂದಾದರೂ ಬಂದಾನು. ಅವನು ಸತ್ತಿಲ್ಲ."

"ಬಂದರೆ ಸಾಕಲ್ಲ."

"ಒಮ್ಮೆಲೆ ಹಾಗೆ ಹೊರಟು ಹೋಗಬೇಕಾದರೆ ಕಾರಣವೇನು? ಅವನ ಮನಸ್ಸಿನಲ್ಲಿ ಏನಾದರೂ ಬೇಸರವಿತ್ತೇ ?" ಕಣ್ಣನೋಟ ಸೂಕ್ಷ್ಮಗ್ರಾಹಿಯಾಗಿತ್ತು.

ಶಿವೆ ಚಾಟಿ ಏಟುಬಿದ್ದ ಕುದುರೆಯಂತೆ ಮಿಡುಕಿದಳು. ಒಂದೆರಡು ಗಳಿಗೆ ಸಾವರಿಸಿಕೊಂಡನಂತರ ನುಡಿಯಲಾರದೆ ನುಡಿಯಿತು ನಾಲಗೆ "ನನಗೆ ಏನೂ ತಿಳಿಯದು. ಬೆಳಗ್ಗೆ ಅಂಗಡಿಗೆ ಹೋದವರು ಹಿಂದಿರುಗಿ ಬರಲಿಲ್ಲ. ಮಧ್ಯಾಹ್ನದವರೆಗೂ ಅಲ್ಲಿ ಕೆಲಸ ಮಾಡಿದ್ದಾರಂತೆ."

ತುಟಿಯೊಣಗಿ ಬಂದಿತ್ತು ; ನಾಲಗೆಯಿಂದ ಸವರಿಕೊಂಡಳು ಶಿವೆ.

ಔಪಚಾರಿಕವಾಗಿ ರಾಮಣ್ಣ ಅಂದ "ಹೇಗೆ ಪತ್ತೆ ಹಚ್ಚುವುದೋ ಬಗೆ ಹರಿಯದಾಗಿದೆ."

ಶಿವೆ ಅಡುಗೆಯ ಮನೆಗೆ ಹೋದಳು. ರಾತ್ರಿಯೂಟಕ್ಕೆ ಬೆಳಗಿನ ಪಳಿದ್ಯ ಮಾತ್ರ ಇತ್ತು. ಹೊಸದಾಗಿ ಮಾಡಲು ಏನೂ ಇರಲಿಲ್ಲ. ತಿಂಗಳ ಆದಾಯ ನಿಂತುಹೋಗಿ ಎರಡು ತಿಂಗಳು ಸಂದಿವೆ. ಅಂದಿಂದಿಗೂ ಹೇಗೋ ನಡೆಸಿದ್ದಾಯ್ತು. 'ಮುಂದೇನು?' ಎಂಬುದು ಬಹು ದೊಡ್ಡ ಪ್ರಶ್ನೆ. ಮನೆಗೆ ಹಿರಿಯನಾದವನು ಇಷ್ಟು ದಿನಗಳ ಮೇಲೆ ವಿಚಾರಿಸುವ ಶಾಸ್ತ್ರಕ್ಕಾಗಿ ಐತಂದಿದ್ದಾನೆ. ಇನ್ನಿಬ್ಬರು ಭಾವ ಮೈದುನರ ಸುಳಿವೇ ಇಲ್ಲ.

ಸ್ವಾಮಿ ಇದ್ದಾಗ ಇವರೆಲ್ಲ ತಿಂದುಂಡು ಹೋದವರೇ. ಈಗ ಅನಾಥ ಕುಟುಂಬಕ್ಕೆ ಸಹಾಯ ಮಾಡಬಹುದಾದ ಅಪಾಯಕ್ಕೊಳಗಾಗ ಬಹುದೆಂದು ಹಿಂದೆ ಹಿಂದೆ ಸರಿಯುತ್ತಿದ್ದಾರೆ. ಇದು ಜೀವನ ...ಇದು ಬಾಂಧವ್ಯ ಇದು ಸಮಾಜ! ಸ್ವಾಮಿ ಸ್ಥಳಕೊಂಡು ಮನೆ ಕಟ್ಟಿದನೆನ್ನುವಾಗ ಹೇಗೆ ಈ ಜನ ಹೌಹಾರಿ ಬಂದಿದ್ದರು ! ಅಭಯ ಹಸ್ತವಿಲ್ಲವಾದರೂ ಹೋಗಲಿ, ಕನಿಕರ ವಾದರೂ ಬೇಡವೇ ? ಎಂದು ನರಳಿತು ಅಂತರಾತ್ಮ. ನೊಂದ ಮನಸ್ಸು ಮುಂದೆ ಮುಂದೆ ಸಾಗಿ ಭವಿಷ್ಯದ ಮಹಾಗರ್ಭದಲ್ಲಿ ಅಂಡಲೆಯತೊಡಗಿತು.

ನಡುಮನೆಯಲ್ಲಿ ರಾಮಣ್ಣನಿಗೆ ಹಾಸಿಗೆಯನ್ನು ಅಣಿಮಾಡಿಕೊಟ್ಟು ಎರಡೂಕಡೆ ಮಕ್ಕಳನ್ನು ಮಲಗಿಸಿಕೊಂಡು ದೀಪವನ್ನು ನಂದಿಸಿದಳು ಶಿವೆ. ಮುಚ್ಚಿದ ಬಾಗಿಲು, ತೆರೆದ ಕಿಟಕಿ ತಮ್ಮ ಜವಾಬ್ದಾರಿಯನ್ನು ಹೊತ್ತಿವೆ. ತಿಳಿಗಾಳಿಯ ತಂಪು ಕೊಠಡಿಯಲ್ಲಿ ತುಂಬಿತ್ತು. ಗತಕಾಲದ ರುದ್ರಮಧುರ ಚಿತ್ರಗಳು ಚಲನ ಚಿತ್ರದಂತೆ ಚಿತ್ತ ಭಿತ್ತಿಯಲ್ಲಿ ಸುಳಿಸುಳಿದಳಿದವು. ಬಾಳಿನ ಕನ್ನಗತ್ತಲಿಯಲ್ಲಿ ಸಿಲುಕಿ ಹೇಗೆ ಈ ಜೀವ ಜರ್ಝರಿತವಾಯಿತೆಂಬುದನ್ನು ಪರ್ಯಾಲೋಚಿಸುತ್ತ ಮಲಗಿದಳು ಶಿವೆ. ಪ್ರಯತ್ನಿಸಿದರೂ ಕಣ್ಣಿಗೆ ನಿದ್ದೆ ಬಾರದು. ನಡುಮನೆಯಲ್ಲಿದ್ದ ಗಡಿಯಾರ ಟಿಂಟಿಣಿ ನಾದವನ್ನು ಮಾಡಿ ಹೊತ್ತು ಮುಂದುವರಿಯುತ್ತಿದ್ದುದನ್ನು ಸೂಚಿಸುತಿತ್ತು. ಎಷ್ಟೊತ್ತಾದರೂ ನಿದ್ದೆಯ ಸುಳಿವೇ ಇಲ್ಲ. ಹೊತ್ತು ದೀರ್ಘವಾಗಿ ಉರುಳುತಿತ್ತು. ನಡು ಮನೆಯಲ್ಲಿ ರಾಮಣ್ಣ ಹಾಯಾಗಿ ಗೊರಕೆ ಹೊಡೆಯುತ್ತಿದ್ದಾನೆ. ಹಾ....ವಿಧಿ!

ಹೊತ್ತು ಉರುಳಿತು. ಹಾಗಿಂದ್ಹೀಗೆ ಹೊರಳಿದಳು ಶಿವೆ. ಎಷ್ಟೇ ಪ್ರಯತ್ನಿಸಿದರೂ ಕಣ್ಣಿಗೆ ನಿದ್ದೆಬಾರದು. ಕದಡಿದ ಮನಕ್ಕೆ ಶಾಂತಿಯೂ ದೊರೆಯದು. ಎಡಬಲಗಳಲ್ಲಿ ಮಕ್ಕಳು ಮೈಮರೆತು ಮಲಗಿವೆ. ಜಗತ್ತು ಸದ್ದಿಲ್ಲದ ಶಾಂತಿಯಲ್ಲಿ ನಿದ್ದೆಗೈದಿದೆ. ಗಡಿಯಾರ ಗಂಟೆ ಬಾರಿಸಿತು. ಏರಿಳಿ ಯುವ ಹೃದಯವನ್ನು ಒತ್ತಿ ಹಿಡಿದುಕೊಂಡು ಎಣಿಸಿದಳು ಶಿವೆ. ಒಂದು ಎರಡು ಮೂರು ನಾಲ್ಕು ಐದು ಆರು ಏಳು ಎಂಟು ಒಂಭತ್ತು ಹತ್ತು ಹನ್ನೊಂದು ಹನ್ನೆರಡು.

ಮಧುರ...ಶೀತಲ ನೀರವ . ನಿಷ್ಪಂದ....

ಮುಂದೇನು ಎಂಬುವಕ್ಕಿಂದ ಹೀಗಾಯಿತೇಕೆ ಎಂಬುದು ಮುಖ್ಯವಾದ ಪ್ರಶ್ನೆ. ಎಲ್ಲರೂ ಪ್ರಶ್ನಾರ್ಥಕವಾಗಿ ನೋಡುವವರೇ. ವ್ಯಂಗ್ಯವಾಗಿ ಕೇಳು

ವವರೇ. ಏನೆಂದು ಉತ್ತರಿಸಲಿ? ಆ ದಿನ ನವಿಲೂರಿನಿಂದ ತಂದೆ ಬಂದಿದ್ದಾಗಲೂ ಏಕೆ ಹೀಗಾಯಿತು? ಎಂದಿದ್ದರಲ್ಲವೇ ? ಎಷ್ಟೇ ಯೋಚಿಸಿದರೂ ತನಗೇ ಅರ್ಥವಾಗಿಲ್ಲದಿರುವಾಗ ಇತರರಿಗೆ ಏನೆಂದು ಉತ್ತರಿಸಲಿ? ಯೋಚಿಸುತ್ತಾ ಹೋದಂತೆಲ್ಲಾ ಕೊನೆ ಮೊದಲಿಲ್ಲದ ವಿಚಾರ ತರಂಗಗಳು ತಲೆಯನ್ನು ಮುತ್ತಿದುವು....ಕೋಪ ಒರಟುತನಕ್ಕೆ ಹೆಸರಾಂತ ವ್ಯಕ್ತಿ ಸ್ವಾಮಿ. ಅಂಗಡಿಯಲ್ಲಿಯೂ ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲವೇನೋ... ...ಯಾರೊಂದಿಗಾದರೂ ನಿಷ್ಠುರ–ಕೋಪ–ವಾಗ್ವಾದ ಏನೇನು ನಡೆಯಿತೋ ಯಾರಿಗೆ ಗೊತ್ತು? ಹೊಡೆದಾಟವೋ ಬಡಿದಾಟವೋ ಯೋಚನೆ ಬಂದೊಡನೆಯೇ ವಿಷಯ ಅಸಹ್ಯವಾಗಿ ತೋರಿತು. ಬೇಡಬೇಡವೆಂದರೂ ಪುನಃ ಅದೇ ಯೋಚನೆ ಸದಾ ಸಿಟ್ಟು ಸಿಟ್ಟಾಗಿ ವರ್ತಿಸುತ್ತಿದ್ದ ಬಗೆ ಮತ್ತೆ ಮತ್ತೆ ಮನದಲೆಯಲ್ಲಿ ಮೂಡಿ ಬಂತು. ಅಯ್ಯೋ, ಈ ಯೋಚನೆ ಬರುವುದಕ್ಕಿಂತ ನಿದ್ದೆಯಾದರೂ ಬಂದಿದ್ದರೆ ...ಹಾ, ಜಗದೀಶ್ವರಾ! ತಾಳಿಕೊಳ್ಳಲಾರೆ.

ಸದ್ದಿಲ್ಲದ ಇರುಳು ಮೆಲ್ಲನೆ ಉರುಳಿತು, ನಿದ್ದೆಯ ಸುಳಿವು ದೂರ ಉಳಿಯಿತು.

ಮರುದಿನ ರಾಮಣ್ಣ ಆತುರಾತುರವಾಗಿ ಹೊರಡುತ್ತ ಹೇಳಿದ,

"ಶಿವೇ, ನನಗೆ ಬಿಡುವೆಂಬುದೇ ಇಲ್ಲ. ಕಾಳು ಒಕ್ಕಿಸುವುದು ತೋಟದ ಅಗತೆ ಹಾಗೆಹಾಗೇ ಉಳಿದಿವೆ. ನಾಳೆಯಿಂದ ಕೆಲಸ ಶುರುಮಾಡಬೇಕಾಗುತ್ತದೆ. ಸ್ವಾಮಿಯ ಪತ್ತೆಗಾಗಿ ಬಾಬೂಜಿ ಮತ್ತು ಮಾಧವರಾಯರು ಮಾಡಿರುವುದೇ ಬಹಳಷ್ಟಾಗಿದೆ. ಅವನ ಸುಳಿವು ತಿಳಿದರೆ ಮುಂದಿನ ಕರ್ತವ್ಯ ನಮ್ಮದು. ಈಗಿನಿಂದಲೇ ನಾಸಿಲ್ಲಿ ಕುಳಿತುಕೊಳ್ಳಲಾರೆ. ಇನ್ನೊಮ್ಮೆ ಎಂದಾದರೂ ಬರುವೆ." ನಂತರ ಸ್ವಲ್ಪ ತಡೆದು ಪುನಃ "ಸದ್ಯ ಲಿಂಗಣ್ಣ ಬರ್‍ತಾರೇನು?"

"ಬರುತ್ತಾರೆ... ಎಂದು ಬರುತ್ತಾರೆಂಬುದು ತಿಳಿಯದು."

"ಓ! ಎಂದಾದರೂ ಬಂದರೆ ಸಾಕಲ್ಲ? ಅವರೊಮ್ಮೆ ಬಂದರೆ ನಮಗೆ ನಿಶ್ಚಿಂತೆ !"

ನತ ಶಿರಷ್ಕಳಾದ ಶಿವೆ ಮಾತಾಡದೆ ಬಾಗಿಲ ಮರೆಗೆ ನಿಂತು ಕಂಬನಿಯನ್ನು ತೊಡೆದುಕೊಂಡಳು. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತ್ತಿತ್ತು.

"ಸ್ವಾಮಿಯ ಸುಳಿವು ಹತ್ತಿದರೆ ರವಿಯಿಂದ ಕಾಗದ ಬರೆಸು. ನನಗೀಗ ಉಸಿರಾಡಲೂ ಬಿಡುವಿಲ್ಲ." ಎನ್ನುತ್ತ ಸರಸರನೆ ಹೊರಟುಹೋದ ರಾಮಣ್ಣ.

೨

ಹನ್ನೆರಡು ವಸಂತಗಳನ್ನು ದಾಟಿದ ರವಿ ಅದೇ ತಾನೆ ಹದಿಮೂರನೆಯ ವಸಂತಕ್ಕೆ ಕಾಲಿಟ್ಟಿದ್ದ. ತೆಳುವಾಗಿದ್ದರೂ ಗಟ್ಟಿಮುಟ್ಟಾಗಿದ್ದ ಶರೀರ; ಒಮ್ಮೆ ನೋಡಿದವರಿಗೆ ಇನ್ನೊಮ್ಮೆ ನೋಡೋಣವೆನ್ನಿಸುವಂತಹ ಮನಮೋಹಕ ಮುಖಬಿಂಬ; ಚಿಗರಿಯಂತಹ ಚಟುವಟಿಕೆ; ಸೌಮ್ಯ ಸ್ವಭಾವ; ಉತ್ಸಾಹ-ಬುದ್ಧಿಮತಿಕೆ ಯಾವುದರಲ್ಲೂ ಕಡಿಮೆ ಇಲ್ಲದ ಬಾಲಕ. ಅಂದೇ ಪುಟ್ಟಮ್ಮ "ಇನ್ನು ನೀನೇ ಈ ಮನೆಯ ಯಜಮಾನ" ಎಂದುದು ಪುನಃ ಪುನಃ ಕಿವಿಯಲ್ಲಿ ಮೊಳಗುತ್ತಿತ್ತು. ಇಂದು ಶಾಲೆಯ ಮಾಸ್ತರು ದಾರಿಯಲ್ಲಿ ಸಿಕ್ಕಿದಾಗ ಸ್ವಾಮಿಯ ವಿಚಾರವನ್ನು ಕುರಿತು ಮಾತನಾಡುತ್ತ ಅಂದರು "ಮಗೂ, ಇನ್ನು ನೀನೇ Man of the family ಸಂಸಾರದ ಭಾರವನ್ನು ಹೊರಲು ಶಕ್ತನಾಗಬೇಕು. ಹೆಜ್ಜೆ ಹೆಜ್ಜೆಗೂ ದೃಢತೆಯನ್ನು ಸಂಪಾದಿಸಿಕೊಂಡು ಸಾರ್ಥಕತೆಯನ್ನು ಪಡೆದುಕೊ."

ಗುರುಗಳಿಗೆ ವಂದಿಸಿ ಮನೆಯ ಹಾದಿಹಿಡಿದ ರವಿ-ಮನೆಯ ಗುರುತ್ವಾಕರ್ಷಕ ಶಕ್ತಿಗೊಳಗಾದಂತೆ. ಹಾದಿ ಕಳೆದು ಮೆಟ್ಟಿಲನ್ನು ಏರಿದಾಗ ಗೃಹವಲಯ ತಣ್ಣಗಿತ್ತು. ಶಿವೆ ನಡುಮನೆಯಲ್ಲಿ ಮರವಟ್ಟಂತೆ ಕುಳಿತಿದ್ದಳು. ಬಳಿಯಲ್ಲಿ ಮಂಡಿಗಾಲೂರಿ ಮೈಗೆ ಮೈ ಹಚ್ಚಿ ಕುಳಿತು ರವಿ ನುಡಿದ.

"ರಜೆ ಇನ್ನು ಕೆಲವೇ ಕೆಲವು ದಿನಗಳು ಉಳಿದಿವೆ ಅಷ್ಟರೊಳಗಾಗಿ ಅಂಗಡಿಗಳನ್ನು ಕಟ್ಟಿಕೊಂಡರೆ ವಾಸಿ. ನಮಗೆ ಶಾಲೆ ಶುರುವಾಯಿತೆಂದರೆ ಕಷ್ಟ."

"ಸ್ವಲ್ಪ ನಿಧಾನಿಸು ಮಗೂ, ಒಂದೆರಡು ದಿನಗಳೊಳಗಾಗಿ ನಿಮ್ಮ ತಾತ ಬರುತ್ತಾರೆ. ಅವರು ಬಂದನಂತರ ನಿರ್ಧರಿಸೋಣ. ಅವರಿಲ್ಲದೆ ಮಾಡಲು ನಮಗೇನು ತಿಳಿಯುತ್ತದೆ?"

"ದೊಡ್ಡಪ್ಪ ಬಂದವರು ನಮ್ಮ ಜೀವನಸ್ಥಿತಿಯ ಬಗ್ಗೆ ಚಕಾರವನ್ನೂ ಎತ್ತಲಿಲ್ಲ. ಇವರು ಆಪತ್ತಿಗಾಗುವವರಲ್ಲ."

"ಆಪತ್ತಿಗಾಗುವವರಾಗಿದ್ದರೆ ತಮ್ಮ ಅದೃಶ್ಯವಾಗಿ ತಿಂಗಳೆರಡಾಗುವ ವರೆಗೆ ಸುಮ್ಮನೆ ಕೂಡುತ್ತಿದ್ದರೇನು? ಮುಖ್ಯವಾಗಿ ನಾವು ಚೆನ್ನಾಗಿದ್ದರೇನೇ ಲೋಕ ಚೆನ್ನ."

"ಅಮ್ಮಾ! ಎದುರು ಮನೆಯ ಪುಟ್ಟಮ್ಮ ಬರುತ್ತಿದ್ದಾರೆ." ಸರಸು ಒಳ ಬಂದು ಹೇಳಿದಳು. ಶಿವೆ ಎದ್ದು ನಿಂತು ಮ್ಲಾನವಾದ ಮುಖದಲ್ಲಿ ನಸು ನಗೆ ಬೀರಿ ಬರಮಾಡಿಕೊಂಡಳು.

"ಹೇಗಿದ್ದಿ ಶಿವೆ ? ನಿನ್ನನ್ನು ನೋಡಿ ಹೋಗೋಣವೆಂದು ಬಂದೆ."

"ನೀವಲ್ಲದೆ ನಮ್ಮನ್ನು ಯಾರು ವಿಚಾರಿಸಬೇಕು ? ಬನ್ನಿ... ಬನ್ನಿ !"

ಶಿವೆ ಮೂಲೆಯಲ್ಲಿದ್ದ ಚಾಪೆಯನ್ನು ಬಿಚ್ಚಿ ಹರವಿದಳು.

"ನಿನ್ನೆ ಭಾವ ಬಂದಿದ್ದರು."

"ಹಾಗೆಂದು ತಿಳಿಯಿತು. ರವಿ ಬೆಳಿಗ್ಗೆ ಹೇಳಿದ."

"ಸ್ವಾಮಿಯ ಸುಳಿವು ಹತ್ತಿದರೆ ಕಾಗದ ಬರೆಸು ಎಂದಿದ್ದಾರೆ."

"ಸುಳಿವು ಹತ್ತಿದರೆ ಅವರಿಗೆ ಬರೆಸುವುದೇನು ? ನೀವೇ ಹೋಗಿ ಕರೆ ತಂದರಾಯ್ತು."

ಶಿವೆ ನಸು ನಕ್ಕಳು.

ರವಿ ನಡುವೆ ಬಾಯಿ ಹಾಕಿದ "ಕಾಗದ ಬರೆಸು ಎಂದಿದ್ದಾರೆ. ನಮ್ಮ ಜೀವನದ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲ ದೊಡ್ಡಪ್ಪ. ನಿಶ್ಚಿಂತೆಯಿಂದ ಹೊರಟುಹೋದರು."

"ಪ್ರಪಂಚವೇ ಹಾಗೆ!" ಎಂದಳು ಪುಟ್ಟಮ್ಮ. ಮುಖಮುದ್ರೆ ಗಂಭೀರ ವಾಗಿತ್ತು. ಒಂದೆರಡುಗಳಿಗೆ ಯೋಚಿಸಿ ಮುಂದುವರಿದವಳು "ಮನೆಗೆ ಹಿರಿಯ ವ್ಯಕ್ತಿ... ತಮ್ಮನಿಲ್ಲದಾಗ ಅನಾಥ ಮಕ್ಕಳ ಕ್ಷೇಮವನ್ನು ನೋಡಿಕೊಳ್ಳಬೇಕಾದುದು ತನ್ನ ಕರ್ತವ್ಯ. ಆದರೆ ಈಗಿನ ಜನ ಮಹಾ ಸ್ವಾರ್ಥಿಗಳು. ಇವರಿಂದ ಸಹಾಯ ನಿರೀಕ್ಷಣೆ ಮಾಡುವುದು ಅವಿವೇಕವೇ ಸೈ. ಹೇಗಾದರೂ ನಮ್ಮ ಕಾಲಿನ ಮೇಲೆ ನಾವು ನಿಂತುಕೊಳ್ಳುವುದನ್ನು ಕಲಿತುಕೊಳ್ಳಬೇಕು."

"ಕೈಗೂ ಮನಸ್ಸಿಗೂ ಬಿಡುವಿಲ್ಲದಂತೆ ಕಾರ್ಯಕ್ರಮ ಗೊತ್ತುಪಡಿಸಿ ಕೊಳ್ಳದಿದ್ದಲ್ಲಿ ಹುಚ್ಚಾಗಿ ಬಿಡುವೆನೇನೋ ಎಂಬ ಭಯ ಒಮ್ಮೊಮ್ಮೆ ಮೂಡುತ್ತದೆ. ಮನಸ್ಸು ಸ್ಥಿಮಿತದಲ್ಲಿರಬೇಕಾದರೆ ಬಿಡುವಿಲ್ಲದ ಕೆಲಸ ಬೇಕೇ ಬೇಕು.

ತನುಮನಗಳ ಆವೇಗವನ್ನು ತಡೆದುಕೊಳ್ಳುವುದೇ ಕಷ್ಟವಾಗಿದೆ. ನಾವು ಯಾರೊಂದಿಗೂ ಹುಟ್ಟುವುದಿಲ್ಲ; ನಮ್ಮೊಂದಿಗೆ ಯಾರೂ ಸಾಯುವುದಿಲ್ಲ. ಆದರೂ ಜೀವಿತದಲ್ಲಿನ ಅಲ್ಪಕಾಲದ ಒಡನಾಡಿಗಳಾಗಿ ನಾವು ಎಷ್ಟೊಂದು ಪರಿತಪಿಸುತ್ತೇವೆ ಎಂಬುದರ ಅರಿವಾದುದು ಈಗಲೇ." ಗಂಟಲು ಬಿಗಿದು ಬಂದುದರಿಂದ ಸ್ವಲ್ಪ ತಡೆದು ಮುಂದುವರಿದಳು "ನಿನ್ನೆ ಭಾವನವರು ಬಂದಾಗ ಕತ್ತಲು ಮುಸುಗುತ್ತಿತ್ತು, ದೂರದಿಂದ ಕಂಡಾಗ ಸ್ವಾಮಿಯೇ ಬಂದರೆಂದು ಕೊಂಡೆ. ಭಾವನವರೂ ಸ್ವಾಮಿಯೂ ಒಂದೇ ಹೋಲಿಕೆಯಲ್ಲಿರುವುದ ರಿಂದಲೋ ಅಥವಾ ನನ್ನ ಮನಸ್ಸಿನ ಭ್ರಾಂತಿಯಿಂದಲೋ ಸ್ವಾಮಿಯೆಗೆ ಬಂದಂತಾಯ್ತು, ಹಾ ! ಒಂದು ಕ್ಷಣ, ಒಂದೇ ಒಂದು ಕ್ಷಣ ಸ್ವರ್ಗವೇ ಧರೆ ಗಿಳಿದು ಬಂದಂತಾಯಿತು. ಆದರೆ....ಬಂದವರು ಸ್ವಾಮಿಯಲ್ಲವೆಂದು ಅರಿತು ಕೊಂಡಾಗ ಆ ರಸಮಯ ಕ್ಷಣ ಅದೆಲ್ಲಿ ಮಾಯವಾಯಿತೋ ? ಒಂದೇ ಕ್ಷಣ ದಲ್ಲಿ ಏರಿಳಿತವೆರಡನ್ನೂ ಕಂಡೆ !"

ಆದರೆ ...

ಜೀವನದಲ್ಲಿ ಈ 'ಆದರೆ' ಒಂದು ಶಬ್ದವು ಇಲ್ಲವಾಗಿದ್ದಲ್ಲಿ ಬಾಳು ಹಂಸತೂಲಿಕೆಯಂತೆ-ಹೂವಿನ ಹಾಸಿಗೆಯಂತೆ ಸುಖಕರವಾಗಿರುತ್ತಿತ್ತು. ಈ 'ಆದರೆ' ಇಂದ ಬಾಳು ಮುಳ್ಳಿನಪಂಕ....ಗೋಳಿನ ಕಣಜ ...

ಶಿವೆ ಏನೋ ಒಂದು ಬಗೆಯಲ್ಲಿ ಪರಿತಾಪದಿಂದ ನುಡಿದಳು "ರಾತ್ರಿ ನಿದ್ದೆಯಿಲ್ಲದೆ ಮಲಗಿದ್ದೆ. ಹೊರಗಡೆ ಅಂಗಳದಲ್ಲಿ ಯಾರೋ ನಡೆದು ಬಂದಂತೆ ಹೆಜ್ಜೆಯ ಸದ್ದು ಕೇಳಿಬಂತು. ಹಾಗೇ ಕಿವಿಗೊಟ್ಟೆ. ಒಂದೆರಡು ಕ್ಷಣಗಳು ಕಳೆಯುವುದರಲ್ಲಿ ಸ್ವಾಮಿಯ ಧ್ವನಿ ! ಶಿವೇ ಎಂದು ಕರೆದಂತೆಯೇ ಕೇಳಿ ಬಂತು. ರಾತ್ರಿಯಾದುದರಿಂದ ಬಾಗಿಲು ತೆಗೆಯಲು ಧೈರ್ಯವಾಗ ಲಿಲ್ಲ. ಪುನಃ ಸ್ವಲ್ಪ ಹೊತ್ತಿನಲ್ಲಿ ಅದೇ ಧ್ವನಿ ! ಎದ್ದು ಕಿಟಕಿಯ ಬಳಿಗೆ ಧಾವಿಸಿದೆ. ಬೆಳುದಿಂಗಳು ಹಾಲು ಚೆಲ್ಲಿದಂತೆ ಹರಡಿತ್ತು....ಎಲ್ಲಿಯ ಸ್ವಾಮಿ? ಎಲ್ಲಾ ನನ್ನ ಭ್ರಾಂತಿ. ಕಣ್ಣು ಸೋಲುವವರೆಗೂ ನೋಡಿ ಹಿಂದಿರುಗಿ ಬಂದು ಹಾಸಿಗೆಯಲ್ಲಿ ಬಿದ್ದುಕೊಂಡೆ. ಒಡನೆ ಮೈ ಮಂಜಿನಲ್ಲಿ ಮಿಂದಂತಾ ಯಿತು.. "

ಒಡನೆ ಯಾವುದೋ ಕಾಣದ ಕೈ ಹೃದಯವನ್ನು ಹಿಸುಕಿದಂತೆ

ಅವ್ಯಕ್ತ ವೇದನೆ ಮೂಡಿತು. ಕಂಠವು ಇದ್ದಕ್ಕಿದ್ದಂತೆಯೇ ಗದ್ಗದವಾಯಿತು. ಅನಿರೀಕ್ಷಿತವಾಗಿ ಪ್ರಕಟವಾದ ಮನೋದೌರ್ಬಲ್ಯವನ್ನು ತೋರಗೊಡದಿರಲು ತನ್ನನ್ನು ತಾನೇ ಹತೋಟಿಯಲ್ಲಿಟ್ಟುಕೊಂಡಳು ಶಿವೆ. ಅಂದಿಂದಿಗೂ ಮಾತೃ ಸ್ಥಾನದಲ್ಲಿದ್ದು ನೊಂದಮನಕ್ಕೆ ಚೇತನದುಂಬುವ ವೃದ್ಧಜೀವಕ್ಕೆ ದುಃಖವನ್ನು ಉಣಿಸುವುದು ಅಸಹ್ಯ ...ಅಕ್ಷಮ್ಯ ಎನಿಸಿದಾಗ ತನ್ನಲ್ಲಿ ತಾನು ಅಡಗುವಷ್ಟು ಸಂಕುಚಿತಗೊಂಡಿತು ಮನಸ್ಸು ನಿಟ್ಟುಸಿರು ಬಿಟ್ಟು ಸಮ್ಮನಾದಳು ಶಿವೆ.

ದೂರ ದಿಗಂತದಲ್ಲಿ ಉಜ್ವಲ ಸೂರ್ಯ ತಂಗುತ್ತಿದ್ದ.

ಅತ್ತಲೇ ನೋಟವನ್ನು ಹರಿಸಿ ಹೇಳಿದಳು ಪುಟ್ಟಮ್ಮ "ಶಿವೇ! ಈ ಬಗೆಯ ಭ್ರಾಂತಿಯುಂಟಾಗುವುದು ಸಹಜ. ಹೆಂಗರುಳು ದಾರುಣವಾದ ದುಃಖವನ್ನು ತಾಳಿಕೊಳ್ಳಲಾರದು. ನೀನು ಕಷ್ಟಕಾರ್ಪಣ್ಯಗಳಿಂದ ಮೊದಲೇ ನೊಂದಿದ್ದಿ. ಈಗ ಇಂತಹ ಪರಿತಾಪವನ್ನು ಸಹಿಸಿಕೊಳ್ಳುವುದು ಸಾಮಾನ್ಯ ರಿಗೆ ಕಷ್ಟವೇ....ಆದರೂ ಸಹಿಸಿಕೊಳ್ಳುವುದೇ ಜೀವನ!"

"ನೀವು ಮಾತೃಸ್ಥಾನದಲ್ಲಿದ್ದೀರಿ. ನಿಮ್ಮನ್ನು ಕಂಡಾಗ ಹೃದಯ ತಣಿಯುತ್ತದೆ. ಮಗುವಿನಂತೆ ನಿಮ್ಮ ಬಳಿ ಅಳಲನ್ನು ತೋಡಿಕೊಳ್ಳುವೆ. ನನ್ನಿಂದಾಗಿ ನಿಮಗೂ ದುಃಖವಾಗುತ್ತಿದೆ_...ಅದುಗೊತ್ತು. ಇನ್ನು ಸಾಧ್ಯ ವಾದಷ್ಟು ಧೈರ್ಯ ತೆಗೆದುಕೊಳ್ಳುವೆ. ನಿಮಗೆ ದುಃಖವುಂಟು ಮಾಡುವುದಿಲ್ಲ .. ದಯವಿಟ್ಟು ಬೇಸರಿಸಬಾರದು ..."

ನುಡಿಕೇಳಿ ಸಮಾಧಾನದ ಉಸಿರನ್ನು ಬಿಟ್ಟಳು ಪುಟ್ಟಮ್ಮ

ದಿಕ್ತಟದಲ್ಲಿ ಹೊನ್ನರಾಜಿಯನ್ನು ಹರಡಿ ಸೂರ್ಯ ಮುಳುಗಿದ್ದ.

ಮಕ್ಕಳೈವರೂ ಮಾತುಕತೆಯಲ್ಲಿ ತೊಡಗಿದ್ದರು-ತಮ್ಮ ತಮ್ಮೊಳಗೆ ಯಾವುದೋ ಯೋಜನೆಯನ್ನು ಹೂಡುವಂತೆ.

ಪುಟ್ಟಮ್ಮ ರವಿಯನ್ನು ಕುರಿತು ನುಡಿದಳು "ನಿನಗೆ ಸ್ವಾಮಿಯ ಗುಣಾವ ಗುಣಗಳೆಲ್ಲವು ಗೊತ್ತು. ಆದುದರಿಂದ ಹೆಚ್ಚಿಗೆ ಹೇಳುವ ಅಗತ್ಯವಿಲ್ಲ. ನಿನ್ನನ್ನು ನೀನು ತಿದ್ದಿಕೊಳ್ಳಬಲ್ಲೆ, ಚಿಕ್ಕವರನ್ನೂ ತಿದ್ದಬಲ್ಲೆ ಅದು ನನಗೆ ಗೊತ್ತು. ಎಲ್ಲರೂ ನಿಮ್ಮನ್ನು ನೀವು ಅರಿತುಕೊಂಡರೆ ಜೀವನಮಾರ್ಗ- ಯೋಗ ಕಷ್ಟವಲ್ಲ."

ರವಿಯ ಎಳೆಯ ಮನಸ್ಸಿನ ಮೇಲೆ ಪುಟ್ಟಮ್ಮನ ಹಿತೋಕ್ತಿ ಅಚ್ಚೊ

ತ್ತಿತು. ಏನೇ ಬರಲಿ, ತಮಗೊದಗಿದ ಕಷ್ಟವನ್ನು ಧೈರ್ಯದಿಂದ ಎದುರಿಸ ಬೇಕೆಂದು ದೃಢಸಂಕಲ್ಪ ಮಾಡಿಕೊಂಡ. ಚೇತನದ ಎಳೆ ಮಿಂಚು ನರ ನಾಡಿಗಳಲ್ಲಿ ಹರಿದಾಡತೊಡಗಿತು. ಮಂತ್ರಮುಗ್ಧನಂತೆ ನಿಂತ.

ಹೊತ್ತು ಮೌನಧಾರಣೆ ಮಾಡಿತು.

ಅನಂತರ ಶಿವೆ ಬಾಯ್ದೆರೆದಳು. "ನಮ್ಮಲ್ಲಿರುವ ಒಡವೆ ವಸ್ತು ಪಾತ್ರೆ ಪಗಡಿಗಳನ್ನು ಮಾರಿದರೆ ಸ್ವಲ್ಪ ಹಣ ಸಂಗ್ರಹವಾಗುತ್ತದೆ. ಮುಂದಿನ ಜಾಗ ದಲ್ಲಿ ರಸ್ತೆಗಾಂತು ಎರಡಂಗಡಿ ಕಟ್ಟಿಸಿಕೊಂಡರೆ ಬಾಡಿಗೆ ಬರುತ್ತದೆ. ಅಂಗಡಿ ಗಳನ್ನು ಕಟ್ಟಿಸುವುದು ಸ್ವಾಮಿಯ ಇಚ್ಛೆಯೂ ಆಗಿತ್ತು. ಅಂತಲೇ ನನಗೆ ಸ್ವಲ್ಪ ಧೈರ್ಯ ಮೂಡಿದೆ. ನಾನೂ ಮಕ್ಕಳೂ ಕೂಡಿಕೊಂಡರೆ ಇಟ್ಟಿಗೆ ಮಣ್ಣು ಹೊರುವ ಕೆಲಸ ಮಾಡಬಹುದು, ಗಾರೆಯುವನೊಬ್ಬ ಬಂದರೆ ಸಾಕು... ಅನಂತರ ಬಡಗಿಯುವನ ಕೆಲಸ. ಇಷ್ಟಾದರೆ ಹೆಚ್ಚು ಖರ್ಚಿಲ್ಲದೆ ಅಂಗಡಿಗಳಾಗುತ್ತವೆ. ಪರಕೀಯರೊಡನೆ ಬೆರೆತು ಕೆಲಸದಲ್ಲಿ ಪಾಲ್ಗೊಂಡೆ ನೆಂಬುದು ಸ್ವಾಮಿಯ ಗಮನಕ್ಕೆ ಬಂದರೆ ನನ್ನ ಎಲುಬುಗಳೊಂದೂ ಉಳಿಯು ಲಾರವು. ಹಾಗೆಂದು ಕೆಲಸ ಮಾಡದೇ ಹೋದರೆ ಜೀವನರಥ ನಡೆಯು ವುದು ಅಸಂಭವ....ನೀವೆಂದಂತೆ ದೇವರ ಮೇಲೆ ಭಾರಹಾಕಿ ನಿರ್ಧರಿಸಿರುವೆ."

"ಅದೀಗ ಸರಿ. ಈಗಾಗಲೇ ತಿಂಗಳೆರಡಾದವು. ಇನ್ನೂ ಬದುಕಿನ ಹಾದಿಯನ್ನು ಕಂಡುಕೊಳ್ಳದಿದ್ದರಾದೀತೆ? ಅದಕ್ಕಾಗಿ ಏಕೆ ಭಯ?" ಒಂದೆ ರಡು ಗಳಿಗೆ ಸುಮ್ಮನಿದ್ದು ಪುಟ್ಟಮ್ಮ ಮುಂದುವರಿದಳು. "ವಿಯೋಗ ವೆಂಬುದು ಎಲ್ಲರಿಗೂ ದಾರುಣವಾದ ವ್ಯಥೆ. ಆದರೆ ಹಾಗೆಂದು ಅದನ್ನೇ ಕುರಿತು ದು:ಖಿಸುತ್ತಾ ಕೂಡುವುದರಿಂದೇನು ಪ್ರಯೋಜನ? ಐವರು ಮಕ್ಕಳನ್ನು ದಿಟ್ಟ ಹಾದಿಗೆ ಹಚ್ಚುವುದು ಸಾಮಾನ್ಯವಲ್ಲ. ನೀನು ಮುಂದಾಗ ದಿದ್ದರೆ ಇನ್ನಾರಿದ್ದಾರೆ. ಹೇಳು? ಎಂದೆಂದೂ ನೀನು ಸೌಭಾಗ್ಯವತಿ! ನಿನ್ನ ಸಲ್ಲಕ್ಷಣವೇ ಹಾಗೆಂದು ಹೇಳುತ್ತಿದೆ. ಖಂಡಿತ ಅಂಜಬೇಡ; ಎಂದಾದರೂ ನಿನ್ನ ಭಾಗ್ಯೋದಯವಾದೀತು!"

ಒಡನೆಯೇ ಶಿವೆ ಪ್ರಸನ್ನಮುಖಿಯಾಗಿ-ಮನಸಾ ಪುಟ್ಟಮ್ಮನ ಹಾರೈಕೆ ಯನ್ನು ಸ್ವೀಕರಿಸಿ ಹೇಳಿದಳು. "ಹಾಗೆಂದು ಇನ್ನೊಮ್ಮೆ ಆಶೀರ್ವದಿಸಿರಿ. ಸಾಯಂಸಮಯದ ಆಶೀರ್ವಚನ ಫಲಿಸುತ್ತದೆ. ಭಗವಂತನ ಆಶೀರ್ವಾದ

ನಿಮ್ಮ ಮೂಲಕ ಹರಿದುಬಂದಿರಬಹುದು."

ಶಿವೆಯ ಮುಖಬಿಂಬದಲ್ಲಿ ಆ ಕ್ಷಣ ಒಡೆದು ಮೂಡಿದ 'ಪ್ರಸನ್ನತೆ' ಆತ್ಮ ಸಂತೋಷವನ್ನು ತಂದಿತು. ಪುಟ್ಟಮ್ಮ ಪುನರಪಿ ಶುಭಾಶಯವನ್ನು ವ್ಯಕ್ತ ಪಡಿಸಿದಳು.

"ಗೌರಿ ಮಕ್ಕಳು ಇಲ್ಲಿದ್ದಾರೆ... ಗಿರೀಶ ಗಮನಿಸುತ್ತಿಲ್ಲ.... ಈಗ ಸ್ವಾಮಿ ಇಲ್ಲ. ಈ ಎಲ್ಲಾ ಕಾರಣಗಳಿಂದಲಾದರೂ ನಿನ್ನ ಭಾವ ಮೈದುನರು ಮುಂದೆ ಬರಬಹುದಾಗಿತ್ತು. ಮೇಲಾಗಿ ಒಬ್ಬಳೇ ತಂಗಿ....ಅನಾಥ ಮಕ್ಕಳು.... ಆದರೂ ಮನಸ್ಸು ಕರಗಲಿಲ್ಲವಲ್ಲಾ, ನೋಡು ! ಈ ಜಗತ್ತು ಇಷ್ಟೆ ; ಸಂಸಾರ ಬಾಂಧವ್ಯ ಎಲ್ಲಾ ಇಷ್ಟೆ ; ಇದು ಮನುಷ್ಯತ್ವ... ಇದು ಜೀವನ ಸತ್ವ...."

ಜೀವನ ಪರಿಸ್ಥಿತಿ ತನುಮನಗಳಿಗೆ ಕಾಯಕಲ್ಪಗೊಳಿಸುತಿತ್ತು. ಶಿವೆ ಯೋಚನೆಯಾಳಕ್ಕೆ ಮುಳುಗಿದಳು-ಆದಿ ಅಂತ್ಯವಿಲ್ಲದ ಆಳದಲ್ಲಿ ಮೀನಿನಂತೆ ಚಲಿಸುತಿತ್ತು ಮನಸ್ಸು.

ಮರುದಿನ ಲಿಂಗಣ್ಣ ಮನೆಗೆ ಬಂದಾಗ ಹೊತ್ತು ನೆತ್ತಿಯ ಮೇಲಕ್ಕೆ ಏರುತಿತ್ತು. ಮಕ್ಕಳು ಲಿಂಗಣ್ಣನನ್ನು ಕಾಣುತ್ತಲೂ "ತಾತ ಬಂದರು !" ಎಂದು ಅಲ್ಲಿಂದಲೇ ಕೂಗಿ ಹೇಳಿದರು. ಒಳಗಡೆ ಕೆಲಸದಲ್ಲಿ ಮಗ್ನಳಾಗಿದ್ದ ಶಿವೆ ಅಷ್ಟಕ್ಕೆ ಬಿಟ್ಟು ಹೊರಬಂದಳು. ಮೈಮೇಲಿನ ಧೂಳನ್ನು ಕೊಡವುತ್ತ ಲಿಂಗಣ್ಣ ಅಂದ "ಬಸ್ಸಿನಪ್ರಯಾಣ ಸಾಕಾಗಿ ಬಿಡುತ್ತೆ. ಉದ್ದಕ್ಕೂ ಧೂಳಿನ ಸ್ನಾನವಷ್ಟೇ ಅಲ್ಲ ; ಅದು ಆಹಾರವೂ ಹೌದು."

ಶಿವೆ ಮಾತಾಡದೆ ನಿಂತಳು.

ಲಿಂಗಣ್ಣ ಕೇಳಿದ "ಸ್ವಾಮಿಯ ವಿಚಾರ ಏನೂ ತಿಳಿಯಲಿಲ್ಲವೇ ?"

ಖಿನ್ನ ಮನಸ್ಕಳಾದ ಶಿವೆ ಇಲ್ಲವೆಂದು ಗೋಣು ಆಡಿಸಿ ಸೂಚಿಸಿದಳು. ಕಣ್ಣುಗಳಲ್ಲಿ ಸಣ್ಣಗೆ ನೀರಾಡಿತು. ಅತ್ತ ತಿರುಗಿ ತೋರಗೊಡದಂತೆ ಓಡಿ ಕೊಂಡು ತಂದೆಯೊಡನೆ ಊರಿನವರ ಕ್ಷೇಮ ಸಮಾಚಾರವನ್ನು ಕುರಿತು ಮಾತಾಡಿದಳು. ಅನಂತರ ಗದ್ದೆ ತೋಟಗಳ ವಿಷಯವೂ ಬಂತು. ಶಿವೆ ಅಂದಿಂದಿಗೆ ಎಷ್ಟೋ ಸುಧಾರಿಸಿಕೊಂಡಿದ್ದಾಳೆ ಎಂದೆನಿಸಿ ತನ್ನೊಳಗೇ ಸಂತುಷ್ಟನಾದ. ಒಳಗಡೆ ಸ್ನಾನಕ್ಕೆ ನೀರು ಅಣಿಯಾಗಿತ್ತು. ಲಿಂಗಣ್ಣ ಟವಲ್ಲನು ತೆಗೆದುಕೊಂಡು ನೀರು ಮನೆಗೆ ಹೋದ. ಶಿವೆ ಹಿಂದಣ ಅಂಗಳಕ್ಕೆ

ಹೋಗಿ ಹೊಂಬಿಸಿಲಿಗೆ ಮೈಯೊಡ್ಡಿ ನಿಂತಳು.. ವ್ಯಥೆಯಿಂದ ಕಂಗೆಟ್ಟರೂ ಅಂದಗೆಡದ ಮುಖ, ಕಲ್ಮಷರಹಿತ ಹೃದಯ, ಜ್ಯೋತಿರ್ಮಯವಾದ ಕಣ್ಣುಗಳು,ದಟ್ಟವಾದ ಕಪ್ಪು ಕೂದಲು, ತೆಳ್ಳನೆಯ ನೀಳವಾದ ಮೈ, ಮೂವತ್ತೈದು ವರ್ಷಗಳ ಪಾವಟಿಗೆಗಳನ್ನೇರಿ ನಿಂತ ಧೃಡವಾದ ನಿಲುವು ಒಂದೊಂದಕ್ಕೂ ಹೊಂದಿಕೆಯಿದ್ದು ವ್ಯಕ್ತಿತ್ವಕ್ಕೆ ಶೋಭೆಯನ್ನೀಡಿದ್ದರೂ ನೋಡುವವರಿಗೆ 'ಅಯ್ಯೋ' ಎನ್ನಿಸುವಷ್ಟು ಕರುಣಾಜನಕವಾಗಿತ್ತು ಮುಖ ಭಾವ ಮತ್ತು ದೀನನೋಟ.

ಸರಸು ವಿಮಲೆಯರು ಓಡೋಡಿ ಬಂದು ಕೇಳಿದರು "ತಾತ ಸ್ನಾನ ಮುಗಿಸಿದರು....ಅಮ್ಮಾ . ಮಣೆ ಎಲ್ಲಿದೆ ?"

ಒಳಗಡೆ ಒಲೆಯ ಬಳಿ ಇಟ್ಟಿರುವುದನ್ನು ಶಿವೆ ಹೇಳುತ್ತಲೂ ಇಬ್ಬರೂ ಮತ್ತೆ ಒಳಗಡೆ ಓಡಿದರು. ಹಿಂದಿನಿಂದ ಕಣ್ಣುಗಳೆರಡೂ ಅತ್ತಲೇ ಹರಿದುವು. ಹತ್ತು ವರ್ಷದ ಸರಸು ಎಂಟು ವರ್ಷದ ವಿಮಲೆ ಕುಣಿಕುಣಿಯುತ್ತಾ ಒಳಗಡೆ ಓಡಿದರು. ನಕ್ಕು ನಲಿವ ಮಕ್ಕಳ ಭವಿಷ್ಯವನ್ನು ಕುರಿತು ಚಿಂತಿಸಿತು ಮನಸ್ಸು.

ಸ್ವಾಮಿ ಕಣ್ಮರೆಯಾದ ಮೇಲೆ ಲಿಂಗಣ್ಣ ಎರಡು ಮೂರು ಬಾರಿ ಬಂದಿದ್ದ. ಮಗಳ ಸಂಸಾರವನ್ನು ಊರಿಗೆ ಸಾಗಿಸುವ ಯೋಚನೆಯಿದ್ದರೂ ಮಕ್ಕಳ ವಿದ್ಯೆ ಅಡ್ಡ ಬಂದಿತ್ತು. ಅದನ್ನು ಗಮನಿಸಿದ ಶಿವೆ ತಂದೆಗೆ ಅಷ್ಟು ಭಾರವನ್ನು ಹೊರುವ ಶಕ್ತಿ ಇಲ್ಲದಿದ್ದರೂ ಮುಂದೆ ಬಂದುದನ್ನು ನೋಡಿ ನನ್ನಿಂದ ಅವರಿಗೆ ತೊಂದರೆಯಾಗಬಾರದು, ನನ್ನ ಸಂಸಾರವೂ ಸಣ್ಣದಲ್ಲ; ಅವರ ಸಂಸಾರವೂ ಸಣ್ಣದಲ್ಲ ಎಂದುಕೊಂಡಳು. ನಿಮೀಲಿತ ನೇತ್ರಗಳಲ್ಲಿ ಭಾವಜ್ವಾಲೆ ತಾಂಡವವಾಡುತ್ತಿತ್ತು.

ಲಿಂಗಣ್ಣ ಅಂಗಡಿಗಳನ್ನು ಕಟ್ಟಿಸುವುದೇ ಸರಿಯೆಂದು ತೀರ್ಮಾನಿಸಿದ ಮೇಲೆ ಒಡವೆ ವಸ್ತುಗಳನ್ನು ವಿಕ್ರಯಿಸಿ, ಮುನಿಸಿಪಾಲಿಟಿಯಿಂದ ಪರವಾನಗಿ ಪಡೆದುಕೊಂಡು ಮನೆಕಟ್ಟಿಸಲು ಬೇಕಾಗುವ ಎಲ್ಲಾ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವ ಭರಾಟೆಯಲ್ಲಿ ಪೂರ್ಣ ತನ್ಮಯನಾದ. ನವಿಲೂರು ಕಡೆಯ ಗದ್ದೆ ತೋಟಗಳ ಕಾಮಗಾರಿ ಮನಸ್ಸನ್ನು ಅತ್ತಿತ್ತಲೇ ಸೆಳೆಯುತಿತ್ತು. ಆದರೂ ಸ್ವಲ್ಪ ಕಾಲ ಬದಿಗೊತ್ತಿ ಇಲ್ಲಿಯೇ ನಿಂತ. ಗಾರೆಯುವ

ನೊಬ್ಬನನ್ನು ಬರಮಾಡಿಕೊಂಡು ಮಿಕ್ಕೆಲ್ಲ ಕೆಲಸಕ್ಕೆ ಮಗಳೊಡನೆ ತಾನೇ ನಿಂತ. ಕೆಲಸ ತೀವ್ರಗತಿಯಲ್ಲಿ ಸಾಗಿತು. ಶಿವೆ ಬುಟ್ಟಿಯಲ್ಲಿ ಇಟ್ಟಿಗೆಗಳನ್ನು ಹೊತ್ತು ಅಟ್ಟಣೆಯನ್ನು ಏರುತ್ತಿದ್ದಂತೆಯೇ ಸ್ವಾಮಿಯ ತಮ್ಮ ಆನಂದ ಬಂದ. ಶಿವೆ ಗಾರೆಯವನೊಂದಿಗೆ ಕೆಲಸ ಮಾಡುತ್ತಿದ್ದುದು ಗಂಟಲ ಗಾಣ ವಾದಂತೆ ತೋರಿತು. ಅಚ್ಚರಿಯಿಂದ ಕೇಳಿದ "ನೀವು__ಈ ಕೆಲಸ ಮಾಡುವುದೇ?"

"ಸಮಯೋಚಿತ..."

"ಸ್ವಾಮಿಗೆ ಸ್ವಲ್ಪ ತಿಳಿದರೆ ಸಾಕು..."

"ಅದು ಗೊತ್ತು, ಆದರೂ..."

"ತಿಳಿದೂ ತಿಳಿದೂ ಏಕೆ ತಲೆನೋವು?"

"......"

"ಸ್ವಾಮಿ ಕಣ್ಮರೆಯಾದ ವಿಚಾರ ಬೆಂಗಳೂರಿನಲ್ಲಿ ತಿಳಿಯಿತು. ಇದೇನು ಸೋಜಿಗವೋ ನನಗೆ ಅರ್ಥವಾಗುವುದಿಲ್ಲ...ಕಾರಣವೇನು?"

ಶಿವೆ ದುಃಖಪೂರ್ಣಧ್ವನಿಯಲ್ಲಿ ಉತ್ತರಿಸಿದಳು. "ನನಗೇನೂ ತಿಳಿಯದು, ನೋಡಿ." ಕಣ್ಣುಗಳಲ್ಲಿ ಹೊಮ್ಮಿದ ಹನಿಗಳು ಹೊಂಬಿಸಿಲಲ್ಲಿ ಮಿನುಗಿದುವು. ಅವನು ಕಂಡರೂ ಕಾಣದಂತೆ ಮುಂದುವರಿದ, "ಸ್ವಾಮಿಯಂತಹ ವ್ಯಕ್ತಿ ಕಣ್ಮರೆಯಾದನೆಂದರೆ ಎಂತಹ ಆಶ್ಚರ್ಯ! ನನಗೆ ನಂಬುವುದೇ ಕಷ್ಟವಾಗಿದೆ."

"ನಮಗೂ ಸಹ..." ಮಾತು ಮುಂದುವರಿಸಲಾರದೆ ಸುಮ್ಮನಾದಳು ಶಿವೆ. ಸ್ವಲ್ಪ ತಡೆದು ಸಾವರಿಸಿಕೊಳ್ಳುತ್ತ ಕೇಳಿದಳು. "ನಿಮ್ಮ ಹೊಟ್ಟೆ ನೋವು ಗುಣವಾಗಲಿಲ್ಲವೇ?"

"ಕೆಲವು ದಿನ ಆಸ್ಪತ್ರೆಯಲ್ಲಿದ್ದೆ. ಈಗ ಸ್ವಲ್ಪ ಉತ್ತಮವಿದೆ. ಇನ್ನೂ ಸಂಪೂರ್ಣ ಗುಣವಾಗಲಿಲ್ಲ. ಪಥ್ಯ ಔಷಧಿಗಳಿಂದ ಬೇಸರಬಂದಿದೆ."

ಅಷ್ಟರಲ್ಲಿ ಅಲ್ಲಿಗೆ ಬಂದ ಲಿಂಗಣ್ಣ ಕೇಳಿದ. ಸ್ವಲ್ಪ ದಿನ ಆಸ್ಪತ್ರೆಯಲ್ಲಿದ್ದಿರೆಂದು ತಿಳಿಯಿತು. ಈಗ ಹೇಗಿದ್ದೀರಿ?"

"ಈಚೆಗೆ ಸ್ವಲ್ಪ ಉತ್ತಮವಿದೆ. ಸ್ವಾಮಿ ಕಾಣೆಯಾದುದು ನನಗೆ ಆಸ್ಪತ್ರೆಯಲ್ಲಿದ್ದಾಗ ತಿಳಿಯಿತು. ಪತ್ತೆಗಾಗಿ ಏನಾದರೂ ಮಾಡಿದಿರಾ?"

"ನಮ್ಮ ಕೈಲಾದಷ್ಟು ಮಾಡಿದ್ದೇವೆ. ಇನ್ನು ಮೇಲೆ ದೈವೇಚ್ಛೆ."

"ಇಷ್ಟಕ್ಕೆ ಬಿಟ್ಟವರುಂಟೇ? ಹುಡುಕಬೇಕು."

"ನೀವಿಷ್ಟು ಉಪಕಾರ ಮಾಡಿದಿರಿ."

"ಇದುವರೆವಿಗೆ ನನಗೆ ಅವಕಾಶವಾಗಲಿಲ್ಲ. ಇನ್ನು ನಾನು ಹುಡುಕಿ ನೋಡುವೆ."

ಆನಂದನಿಗೆ ಶಿವೆ ಗಾರೆಯುವನೊಂದಿಗೆ ಕೆಲಸ ಮಾಡುತ್ತಿದ್ದುದು ಆಶ್ಚರ್ಯಜನಕವಾದ ಒಂದು ಮೋಜೆನಿಸಿತು. ಸ್ವಾಮಿ ಕಣ್ಮರೆಯಾದುದು ಆಶ್ಚರ್ಯಕರ ಮಾತ್ರವಲ್ಲ; ಅದರ ಹಿಂದೆ ಯಾರದೋ ಕೈವಾಡವಿದೆ ಎಂದೆನಿಸಿ ಶಿವೆಯನ್ನೇ ಸಂಶಯಾತ್ಮಕ ದೃಷ್ಟಿಯಿಂದ ನೋಡತೊಡಗಿದ. ಸ್ವಾಮಿ ಅವಳನ್ನು ಹಿಂಸಿಸುತ್ತಿದ್ದುದೇನೋ ನಿಜ. ಅದರ ನಿವಾರಣೆಗಾಗಿಯೇ ಆತನನ್ನು ಕೊನೆಗಾಣಿಸಿರಬಹುದೇ ಎಂಬ ಸಂಶಯ ಪಿಶಾಚಿ ಕಾಡಹತ್ತಿತು ಆಕೆಯ ಮನಸ್ಥಿತಿಯನ್ನು ಗಮನಿಸುವಾಗ ಮನಕ್ಕಂಟಿದ್ದ ಸಂಶಯ ದೂರವಾದರೂ ಮನಸ್ಸು ಡೋಲಾಯಮಾನ ಸ್ಥಿತಿಯಲ್ಲಿತ್ತು....ಯಾವ ಕಷ್ಟ ನಿಷ್ಠೂರಗಳಿಗೂ ಜಗ್ಗದ–ಸಾಲ ಶೂಲವಿಲ್ಲದ ವ್ಯಕ್ತಿ, ಇದ್ದಕ್ಕಿದ್ದಂತೆಯೇ ಅದೃಶ್ಯನಾಗುವುದು ಅಸಂಭವ...ಎಂಬ ಚಿಂತನೆ ಮನದ ಕಿಂಡಿಯಲ್ಲಿ ಕಳ್ಳ ಬೆಕ್ಕಿನಂತೆ ಅವಿತುಕೊಂಡಿತ್ತು.

ಮಧ್ಯಾಹ್ನ ವಿಶ್ರಾಂತಿ ಪಡೆದ ನಂತರ ಆನಂದ ನುಡಿದ. "ಎರಡು ತಿಂಗಳಿಂದ ಕೆಲಸ ಬಿಟ್ಟು ಬಿಟ್ಟಿದ್ದೇನೆ. ಅವರು ರಜೆಯನ್ನು ಕೊಡಲೊಪ್ಪದಿದ್ದುದರಿಂದ ಅದನ್ನು ಇನ್ನು ಬಿಟ್ಟಂತೆಯೆ. ಯಾಕೋ ನಂಜನಗೂಡು ಒಗ್ಗುತ್ತಿಲ್ಲ. ಇಲ್ಲಿ ಕೆಲವು ಕಾಲವಿದ್ದು ಕೆಲಸ ಹುಡುಕಿಕೊಳ್ಳುವ ಯೋಚನೆ ಇದೆ. ಈ ಆರೋಗ್ಯವಿಲ್ಲದ ಶರೀರದಿಂದಾಗಿ ಹೆಚ್ಚು ಕೆಲಸ ಮಾಡಲು ಸಾಧ್ಯವಿಲ್ಲವಾಗಿದೆ. ಇಲ್ಲಿ ಕೆಲವು ಕಾಲವಿದ್ದು ಯಾವುದಾದರೂ ಸುಲಭವಾದ ಕೆಲಸ ಹುಡುಕಿಕೊಳ್ಳುವೆ."

"ಕೆಲಸ ಸಿಗುವವರೆಗೆ ಅದನ್ನೆ ಮಾಡಿದ್ದರೆ ಒಳ್ಳೆಯದಿತ್ತು. ಈ ಕೂಡಲೇ ಕೆಲಸ ಸಿಗುವುದು ಕಷ್ಟ. ಯೋಚಿಸಿ ನೋಡಿ."

"ಅದೇನೋ ಹೌದು. ಆದರೆ ಈ ಅಶಕ್ತ ಶರೀರಕ್ಕೆ ಸ್ವಲ್ಪ ವಿಶ್ರಾಂತಿಯೂ ಬೇಕು."

ಶಿವೆ ಸುಮ್ಮನಾದಳು.

"ಕೆಲಸ ಸಿಗುವುದು ತಡವಾದೀತೇನೋ. ಆದರೂ ಇಲ್ಲೇ ನೆಲೆಸ ಬೇಕೆಂಬ ಇಚ್ಛೆ ಇದೆ."

"ಹಾಗೆಯೇ ಮಾಡಿರಿ. ನಮಗೂ ನೆರವು ಸಿಕ್ಕಿದಂತಾಗುವುದು."

"ಇಂದು ಸ್ವಾಮಿಯ ಸ್ನೇಹಿತರ ಬಳಿಗೆ ಹೋಗಿ ಬರುವೆ. ಏನಾದರೂ ವಿಷಯ ತಿಳಿಯಬಹುದು....ನೋಡೋಣ."

"ದಯಮಾಡಿ ಅಷ್ಟು ಉಪಕಾರ ಮಾಡಿರಿ."

ಆನಂದ ಹೋದವನು ರಾತ್ರಿ ಬಹುಹೊತ್ತಿನ ಮೇಲೆ ಬಂದ. ಅವನಿಂದ ಸ್ವಾಮಿಯ ವಿಚಾರವೇನೂ ತಿಳಿದು ಬರಲಿಲ್ಲ. ಮುಖದಲ್ಲಿ ದಣಿವೂ ಬೇಸರವೂ ಇತ್ತು. ಮರುದಿನ ಮಡದಿಯನ್ನು ನೋಡಿಬರುವು ದಾಗಿ ನಂಜನಗೂಡಿಗೆ ಹೊರಟುಹೋದ.

ಅಂಗಡಿಗಳನ್ನು ಕಟ್ಟುವಿಕೆ ಆಗಲೇ ಮುಗಿದು ಬಂದಿತ್ತು. ಮನೆಯನ್ನು ವಿಭಾಗ ಮಾಡಿದರೆ ಬಾಡಿಗೆ ಬರುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ ಲಿಂಗಣ್ಣ. ಅದು ಒಳ್ಳೆಯದಾದರೂ ಸ್ವಾಮಿಯ ಅನುಮತಿಯಿಲ್ಲದೆ ಹೇಗೆ ವಿಭಾಗಿಸುವುದೆಂಬ ಯೋಚನೆಗೊಳಗಾದಳು ಶಿವೆ.

"ಸ್ವಾಮಿಗೆ ಹೇಗಾದರೂ ಸಮಾಧಾನ ಹೇಳಿದರಾಯಿತು. ನೀನೇನೂ ಯೋಚಿಸಬೇಡ." ಎಂದ ಲಿಂಗಣ್ಣ ಒಂದು ಗಳಿಗೆ ಯೋಚಿಸಿ ಪುನಃ ಅಂದ "ಅಷ್ಟು ಮಾಡದಿದ್ದರೆ ಜೀವನ ಸಾಗಿಸುವ ಬಗೆ ಹೇಗೆ ? ನಾನು ಊರಿನ ಕಡೆ ಹೋದರೆ ಮಕ್ಕಳು ಉಪವಾಸ ಬೀಳುವುದೇ ಸೈ."

ಶಿವೆ ಹೌದೆಂದುಕೊಂಡರೂ ಅಂತರ್ಯದಲ್ಲಿ ಭಯ ಭೀತಿಯ ಮುಳ್ಳು ಚುಚ್ಚುತಿತ್ತು.

ಅಡುಗೆಯ ಮನೆಯನ್ನು ಶಿವೆಯ ಭಾಗಕ್ಕೆ ಬಿಟ್ಟು ಉಳಿದ ಎರಡು ಕೊಠಡಿಗಳಿಗೆ ಹೊಂದುವಂತೆ ಹಿಂದಕ್ಕೆ ಅಡುಗೆಯ ಮನೆ ಬಚ್ಚಲುಗಳನ್ನು ಸೇರಿಸಿ ಕಟ್ಟಿ ಇನ್ನೊಂದು ಸಂಸಾರಕ್ಕೆ ಅನುಕೂಲ ಮಾಡಿದ. ಮಧ್ಯೆ ಇದ್ದ ಬಾಗಿಲನ್ನು ಮುಚ್ಚಿ ಶಿವೆ ಒಳಗಡೆಯಿಂದ ಬೀಗ ಹಾಕಿಕೊಂಡಳು. ಎರಡು ಕೊಠಡಿಗಳಿದ್ದು ಸ್ಥಳ ವಿಶಾಲವಾಗಿದ್ದುದರಿಂದ ಐವತ್ತು ರೂಪಾಯಿ ಬಾಡಿಗೆ ಬರುತ್ತದೆ....ಎಂಬ ಸಮಾಧಾನ ಲಿಂಗಣ್ಣನಿಗೆ.

ಕೈಯಲ್ಲಿ ಹೊಂದಿಸಿಕೊಂಡ ನಾಲ್ಕು ಕಾಸು ಗೊತ್ತು ಗುರಿಯಿಲ್ಲದೆ ಕರಗಿತು. ಆನಂದ ಕೆಲಸ ಹುಡುಕಿಕೊಳ್ಳಲೋಸುಗ ಇಲ್ಲಿಯೇ ನಿಂತುದರಿಂದ ಜೀವನ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿತು. ದಾರಿದ್ರ್ಯ ದೇವತೆಯ ಪ್ರಸಾದ ಹಂಚಿಕೊಳ್ಳುತ್ತ ದಿನಗಳನ್ನು ನೂಕುವುದರಲ್ಲಿ ಕಂಗಾಲಾದಳು ಶಿವೆ. ವಾಸದ ಮನೆಯನ್ನು ವಿಭಾಗ ಮಾಡಿದುದು ಒಳ್ಳೆಯದೇ ಆಯ್ತು. ನಾನೇ ಇಲ್ಲಿದ್ದು ಬಾಡಿಗೆ ಕೊಟ್ಟರಾಯ್ತು ಎಂದುಕೊಂಡ ಆನಂದ. ಕೆಲವು ದಿನಗಳನಂತರ ಯಾವುದೋ ಅಂಗಡಿಯಲ್ಲಿ ಒಂದು ಕೆಲಸವನ್ನು ಪಡೆದುಕೊಂಡ.

ಸ್ವಾಮಿಯ ಸುಳಿವು ಹತ್ತದುದು ಶಿವಮ್ಮನಿಗೂ ಲಿಂಗಣ್ಣನಿಗೂ ಯೋಚನೆಗಿಟ್ಟುಕೊಂಡಿತು. ಇನ್ನೊಂದು ವಾರದೊಳಗಾಗಿ ಅಂಗಡಿಗಳೂ ಮನೆಯೂ ಬಾಡಿಗೆಗೆ ಬಿಡುಗಡೆಯಾಗುತ್ತವೆ. ಮೂರು ಅಂಗಡಿಗಳನ್ನು ಕಟ್ಟಲು ತಾವಿತ್ತಾದರೂ ಹಣದ ಅಭಾವದಿಂದ ಎರಡೇ ಅಂಗಡಿಗಳನ್ನು ಕಟ್ಟಿದ್ದಾಯಿತು. ಮನೆಯಲ್ಲಿ ಕೂರಿಸಬಹುದಾದ ಒಕ್ಕಲು ಒಳ್ಳೆಯವರಾಗಿರಬೇಕು; ಗೊತ್ತುಗುರಿ ಇಲ್ಲದ ಜನಕ್ಕೆ ಕೊಡುವುದಾದರೂ ಹೇಗೆ ಎಂಬ ಯೋಚನೆ ಶಿವಮ್ಮನಿಗೆ. ಅಂಗಳದಲ್ಲಿ ಚದುರಿಬಿದ್ದಿದ್ದ ಕಲ್ಲುಮಣ್ಣುಗಳ ರಾಶಿಯ ಸ್ವಚ್ಛತೆ ಉಳಿದಿತ್ತು, ಮನೆಯಲ್ಲೇ ಇದ್ದ ಆನಂದ ಸಹಾಯ ಹಸ್ತ ನೀಡುವ ಬದಲು ಕೆಲಸ ಹುಡುಕುವ ನೆವದಲ್ಲಿ ಹೊರಗಡೆ ಹೊತ್ತು ಕಳೆದು ಊಟದ ಹೊತ್ತಿಗೆ ಹಾಜರಾಗುತ್ತಿದ್ದ. ಕೈತುಂಬ ಕೆಲಸವಿದ್ದು ತನುಮನಗಳು ಚಕಮಕಿಯಾಗಿರುತ್ತಿದ್ದುದರಿಂದ ಈಗ ಹಾಳು ಚಿಂತೆಗಳಿಂದ ಬಿಡುವು.... ಹೇಗಾದರೂ ಜೀವನಕ್ಕೊಂದು ದಾರಿಯಾದರೆ ಸಾಕು ಎಂಬ ಹಾರೈಕೆ. ಇನ್ನು ಕೆಲವೇ ದಿನಗಳಲ್ಲಿ ಶಾಲೆಗಳು ಆರಂಭವಾಗುತ್ತವೆ. ಮಕ್ಕಳು ಶಾಲೆಗೆ ಹೋದನಂತರ ಮನೆಯಲ್ಲಿ ಒಬ್ಬಳೇ ಕುಳಿತು ಮಾಡುವುದೇನು ಎಂಬ ಯೋಚನೆ ಮನದಲ್ಲಿ ಕಾಡುತ್ತಿತ್ತಾದರೂ ಸಧ್ಯದ ಕಾರ್ಯಭಾರದಿಂದ ಸ್ವಲ್ಪ ಕಾಲ ಮನಸ್ಸು ನೆಮ್ಮದಿಯಿಂದಿತ್ತು.

೩

ಪ್ರಾತಃಸಮಯ. ..ಶುಭ್ರವಾತಾವರಣ.

ಆಗತಾನೇ ಉಪಹಾರವನ್ನು ಮುಗಿಸಿದ ಪುಟ್ಟಮ್ಮ ಮುಂದಣ ಜಗಲಿ ಮೇಲೆ ಕುಳಿತು ವರ್ತಮಾನ ಪತ್ರಿಕೆಯನ್ನು ಓದುವುದರಲ್ಲಿ ತಲ್ಲೀನಳಾಗಿದ್ದಳು. ಬಾಲರವಿ ಅದೇ ತಾನೆ ಮೆಲ್ಲಮೆಲ್ಲನೆ ಬಾನೇರ ತೊಡಗಿದ್ದು ಕೆಂಗದಿರುಗಳು ಮರದೆಲೆಗಳ ಮಧ್ಯೆ ಹೊನ್ನಿನ ಎಳೆಗಳಂತೆ ತೂರಿಬರುತ್ತಿದ್ದುವು. ಗಿಡಮರ ಗಳಲ್ಲಿ ನಲಿವ ಪಕ್ಷಿಗಳ ಕೊರಳುಲಿಯು ಹೃದಯಂಗಮವಾಗಿ ಕೇಳಿ ಬರು ತ್ತಿತ್ತು. ಪುಟ್ಟಮ್ಮ ಪತ್ರಿಕೆಯನ್ನು ಬದಿಗಿಟ್ಟು ನೆಟ್ಟನೋಟವನ್ನು ಉದ ಯಾಂಗನೆಯತ್ತ ಹರಿಸಿದಳು. ಧವಳ ರಾಜಿಯ ಮುಗಿಲ ವಸ್ತ್ರವು ಹೊಂದಿದ ಹೊನ್ನವರ್ಣರಂಜಿತ ಅಂಚು ಕಣ್ಮನಗಳನ್ನು ಸೆಳೆಯುವಂತಿತ್ತು.

ಪ್ರಾಕಾರದ ಬಾಗಿಲು ಸದ್ದು ಮಾಡಲಾಗಿ ಪುಟ್ಟಮ್ಮ ಸಹಜವಾಗಿ ನೋಟವನ್ನು ಅತ್ತ ಹರಿಸಿದಳು. ಬಾಗಿಲನ್ನು ತೆಗೆದುಕೊಂಡು ಒಳಬಂದವಳು ಸೀತೆ. ಇದೇನು ಸೋಜಿಗ? ಈಗ ಬರುವ ವಿಚಾರವೇ ಇಲ್ಲದಿರುವಾಗ ಹೇಗೆ ಒಬ್ಬಳೇ ಬಂದಳು? ಎಂಬುದು ಆಶ್ಚರ್ಯವಾಯಿತು. ತಾಯಿಯ ಕೈಹಿಡಿದು ಕೊಂಡ ಚಂದಿರೆ ಮುಖದಲ್ಲಿ ಎಳೆನಗುವನ್ನು ಸೂಸಿ ಒಳ ಹೆಜ್ಜೆ ಇಟ್ಟಳು.

"ಓಹೋ! ಇದೇನು ಒಬ್ಬಳೇ ಬರುತ್ತಿದ್ದೀ?"

"ಏಕೆ ಬರಬಾರದೇ?" ಸೀತೆ ಕುಲುಕುಲು ನಕ್ಕಳು.

"ಅಜ್ಜೀ! ಮಾಮ ಬಂದಿದ್ದಾರೆ!"

"ಹೇಳಬೇಡವೇ!" ಎಂದು ಮಗುವಿನ ಬಾಯಿ ಮುಚ್ಚಿಸಲು ಸೀತೆ ಪ್ರಯತ್ನಪಟ್ಟಳಾದರೂ ಚಂದಿರೆ ಥಟ್ಟನೆ ಹೇಳಿಯಾಗಿತ್ತು.

"ಓ ..! ಮಾಧು ಬಂದಿದ್ದಾನೆಯೆ? ಎಲ್ಲಿ ಮತ್ತೆ? ನೀನೇಕೆ ಒಬ್ಬಳೇ ಬಂದೆ? ಟಾಂಗಾದಲ್ಲಿ ಬರಬಹುದಾಗಿತ್ತಲ್ಲ? ಹೇಗೆ ಬಂದಿರಿ?"

ಒಂದೇ, ಎರಡೇ? ಪ್ರಶ್ನೆಗಳ ಮೇಲೆ ಪ್ರಶ್ನೆಗಳು ಹೊರ ಬೀಳುತ್ತಲೇ ಇವೆ. ಸೀತೆ ಹಸನಾದ ನಗುಬೀರಿ ನುಡಿದಳು. "ನಿಲ್ದಾಣದಿಂದ ನಡೆದು

ಕೊಂಡೇ ಬಂದೆವು."

"ಇಲ್ಲ ಅಜ್ಜೀ! ಮಾವ ತುಂಬ ಬಟ್ಟೆ ತಂದಿದ್ದಾರೆ. ವ್ಯಾನು ಬಂದಿತ್ತು."

ಈಗ ಎಲ್ಲವೂ ಅರ್ಥವಾಯಿತು. ಪುಟ್ಟಮ್ಮ ಚಂದಿರೆಯನ್ನು ಮುದ್ದಿಸಿ "ನೀನು ಜಾಣೆ!" ಎಂದಳು. ನುಡಿಯಲ್ಲಿ ಆನಂದಲಹರಿಯುಕ್ಕುತ್ತಿತ್ತು.

"ಅಣ್ಣಯ್ಯ ಮೊನ್ನೆ ಬೊಂಬಾಯಿಂದ ಮದರಾಸಿಗೆ ಬಂದರು. ಅವರೊಂದಿಗೆ ಹೊರಟೆ. ಬಹಳ ವ್ಯಾಪಾರ ಮಾಡಿದ್ದಾರೆ. ಅಂಗಡಿಗೆ ಸರಕನ್ನು ವಹಿಸಿಕೊಟ್ಟು ಬರಲು ಹೋದರು. ನಾನು ವ್ಯಾನಿನಲ್ಲಿ ಕೂತಿರಲಾರದೆ ಬಂದುಬಿಟ್ಟೆ." ಸೀತೆ ತಾನು ಬಂದ ರೀತಿಯನ್ನು ವಿವರಿಸಿದಳು.

"ನಿನ್ನ ಯಜಮಾನರು ಚೆನ್ನಾಗಿದ್ದಾರೆಯೇ?"

"ಚೆನ್ನಾಗಿದ್ದಾರೆ. ಈಗ ಮದರಾಸಿನಲ್ಲಿ ಸೆಖೆ ತಡೆಯುವುದು ಕಷ್ಟವಾದುದರಿಂದ ಹೊರಡಲು ಅನುಮತಿ ದೊರೆಯಿತು." ಎಂದೆನ್ನುತ್ತ ಉಕ್ಕಿ ಬಂದ ಸಂತೋಷದಿಂದ ತಾಯಿಯನ್ನು ಆಲಂಗಿಸಿಕೊಂಡಳು.

"ನಿನ್ನನ್ನು ಕರೆತರಲು ಸದ್ಯದಲ್ಲೇ ಮಾಧುವನ್ನು ಕಳುಹಿಸಬೇಕು ಎಂದುಕೊಂಡಿದ್ದೆ. ಈ ಸಲವೇ ಮಾಧು ಮದರಾಸಿಗೆ ಹೋದುದು ಒಳ್ಳೆಯದೇ ಆಯಿತು...."

"ಮಗುವಿನ ಮೈಮೇಲೆ ಬೊಬ್ಬೆಗಳೇಳುತ್ತಿವೆ....ನನಗೂ ಸಾಕಾಗಿತ್ತು. ಈಗ ಅತ್ತೆಯವರೂ ಮದರಾಸಿನಲ್ಲಿದ್ದಾರೆ. ನನಗಿಷ್ಟು ಉಸಿರಾಡಲು ಸಮಯ ಸಿಕ್ಕಿತು."

ಅನಿರೀಕ್ಷಿತವಾಗಿ ನಾದಿನಿಯ ದನಿಕೇಳಿ ಶಾರದೆ ಹೊರಬಂದಳು. ಅವಳಿಗೂ ಸುದ್ದಿಯಿಲ್ಲದೆ ಬಂದುದು ಅಚ್ಚರಿಯನ್ನು ಮೂಡಿಸಿತು. ಓಡಿ ಹೋಗಿ ಚಂದಿರೆಯನ್ನು ಎತ್ತಲಾರದೆ ಎತ್ತಿಕೊಂಡು ಮುದ್ದಿಟ್ಟಳು. ತುಂಬು ಹೃದಯ ಆನಂದದಾಗರವಾಯಿತು. ಸೀತೆಯು ಕೈ ಹಿಡಿದುಕೊಂಡು ನಗು ಮುಖದಿಂದ "ಹೇಗೆ ಬಂದೆ?" ಎಂದಳು.

"ನೋಡು! ಮದರಾಸಿನಿಂದ ಒಬ್ಬಳೇ ಬಂದಿರುವೆ! ನಿನ್ನ ಕೈಯಲ್ಲಿ ಆಗುವುದಿಲ್ಲ ಅನ್ನುತ್ತಿದ್ದೆ. ಈಗ ಏನು ಹೇಳುತ್ತಿ?"

"ನಿಲ್ದಾಣದಿಂದ ನಡೆದುಕೊಂಡೇ ಬಂದಂತಿದೆ! ನಿಜವಾಗಿಯೂ

ನಡೆದುಕೊಂಡೇ ಬಂದೆಯಾ ? ನಿಜ ಹೇಳೆ ?"

ಸೀತೆಯ ಕಿಲಕಿಲ ನಗುವೇ ಉತ್ತರವಾಯಿತು.

ಶಾರದೆ ಅತ್ತೆಯನ್ನು ಕೇಳಿದಳು "ನಿಜವೇ ಅಮ್ಮಾ ?"

ಪುಟ್ಟಮ್ಮ ಮುಗುಳು ನಕ್ಕಳು, ಮಾತಾಡಲಿಲ್ಲ.

"ಬಹುಶಃ ನಿನ್ನ ಅಣ್ಣಂದಿರು ಮದರಾಸು ಮಾರ್ಗವಾಗಿ ಬಂದಿರಬೇಕು ! ಅವರೊಂದಿಗೆ ಬಂದಿದ್ದೀಯೆಂದು ತೋರುತ್ತದೆ."

"ಎಂಥಾವಳೇ ನೀನು ! ಹಾಗಾದರೂ ಒಮ್ಮೆ ಪತಿರಾಯನನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು ! ಇದೊಂದು ಉಪಾಯ !"

ಸೀತೆ ಹಾಸ್ಯದ ಚಟಾಕಿ ಹಾರಿಸಿ ಗಟ್ಟಿಯಾಗಿ ನಕ್ಕಳು.

ಒಮ್ಮೆಲೆ ನಗುವಿನ ಗುಲ್ಲೆದ್ದಿತು. ಒಡನೆ ಕೆನ್ನೆಗಳಿಗೆ ರಂಗೊರೆದರೂ ನಗೆಯಲ್ಲಿ ಪಾಲ್ಗೊಂಡು ನಾದಿನಿಯ ಕೆನ್ನೆಯನ್ನು ಚಿವುಟಿ ಹೇಳಿದಳು ಶಾರದೆ, "ನಿನ್ನ ಯಜಮಾನರ ಹೆಸರು ಹೇಳಲಿಲ್ಲವೆಂದು ನಿನಗೆ ಹೊಟ್ಟೆಯುರಿಯಾಯಿತೆನ್ನು ! ನಿನ್ನ ಗುಟ್ಟು ಹೊಳೆಯದೆ ನಾನು ತಪ್ಪು ಮಾಡಿದೆ."

ಪುನಃ ನಗುವಿನ ಚಿಲುಮೆ ಉಕ್ಕಿ ಹರಿಯಿತು.

ಶಾರದೆ ಸೀತೆಯನ್ನು ಎಳೆದುಕೊಂಡೇ ಒಳಹೊಕ್ಕಳು. ಪುಟ್ಟಮ್ಮ ಹಿಂಬಾಲಿಸಿದಳು.

ಅಂಗಡಿಗೆ ಸರಕನ್ನು ವಹಿಸಿಕೊಟ್ಟು ಮಾಧವರಾಯ ಮನೆಗೆ ಬರುವಷ್ಟರಲ್ಲಿ ಸ್ವಲ್ಪ ಹೊತ್ತೇ ಆಗಿತ್ತು. ಪ್ರಾತರ್ವಿಧಿಗಳನ್ನು ಮುಗಿಸಿ ಹೊರಬಂದಾಗ ಚಂದಿರಾ ಮುಸು ಮುಸು ಅಳುವ ಸದ್ದು ಕೇಳಿಸಿತು. ಕೊಠಡಿಗೆ ಹೋಗಿ ನೋಡಿದರೆ ಅವಳು ಬಿಕ್ಕಿ ಬಿಕ್ಕಿ ಅಳುತ್ತಿದ್ದಾಳೆ. ಕಂಬನಿಯಾವೃತ ಮುಖ ಬಿಂಬ ಕೆಂಪುಕೆಂಪಾಗಿದೆ. ಮಗುವನ್ನು ಎತ್ತಿಕೊಂಡು ಮುದ್ದಿಸಿ ಕಂಬನಿಯನ್ನು ತೊಡೆದು ಏನೆಂದು ವಿಚಾರಿಸಿದ. ಚಂದಿರಾ ಅಳುತ್ತಳುತ್ತಲೇ ಉತ್ತರಿಸಿದಳು "ಮಾಮಾ ! ನನ್ನ ಆಟದ ಸಾಮಾನಿನ ಪೆಟ್ಟಿಗೆ ರೈಲಿನಲ್ಲಿಯೇ ಉಳಿದಿದೆ : ನೀವು ಬಿಟ್ಟು ಬಂದಿದ್ದೀರಿ !" ಮಾತು ಮುಗಿಯುವುದರೊಳಗಾಗಿ ದುಃಖವುಕ್ಕಿ ಬಂದು ಗಳಗಳ ಅಳತೊಡಗಿದಳು.

"ಹೋಗಲಿ ಬಿಡು ಮಗೂ ! ಅದಕ್ಕೇಕೆ ಅಳಬೇಕು ? ಬೇರೆ ತಂದರಾಯಿತು."

ಆದರೂ ಚಂದಿರೆಯ ದುಃಖ ಆರಲಿಲ್ಲ. ಗದ್ಗದವಾದ ದನಿಯಲ್ಲಿ ಮನಗರಗುವಂತೆ ನುಡಿದಳು.

"ಉಹೂ ! ನನಗದೇ ಬೇಕು ! ಅದರಲ್ಲಿ ಚೆಂಡು ಗೋಲಿ ಎಲ್ಲಾ ಇತ್ತು !"

"ಇನ್ನೇನಿತ್ತು ಮಗೂ ?"

"ಮಡಿಕೆ, ಕುಡಿಕೆ, ಚೆಂಡು, ಬೊಂಬೆ..." ಹೆಸರು ಹೇಳಹೋದಂ-ತೆಲ್ಲಾ ದುಃಖ ಉಲ್ಬಣಿಸುತ್ತಿತ್ತು. ಮತ್ತೆ 'ಹೋ' ಎಂದು ಒಂದೇ ಸಮನೆ ಅಳತೊಡಗಿದಳು. ಮಾಧು ಪುಟ್ಟಮ್ಮ ಶಾರದೆ ಸೀತೆಯರೆಷ್ಟು ಸಂತೈಸಿದರೂ ಮಗು ಸಮಾಧಾನಗೊಳ್ಳಲಿಲ್ಲ.

"ಚಂದಿರಾ ! ತಪ್ಪು ನಿನ್ನದೇ ! ಅದನ್ನು ನನ್ನ ಪೆಟ್ಟಿಗೆಯಲ್ಲಿಡಗೊಟ್ಟಿದ್ದರೆ ಹೀಗಾಗುತ್ತಿರಲಿಲ್ಲ" ಎಂದಳು ಸೀತೆ.

"ಉಹೂ ! ನೀವೇ ಬಿಟ್ಟು ಬಂದಿದ್ದೀರಿ !" ಚಂದಿರೆ ಕೋಪದಿಂದ ಹೇಳಿದಳು.

"ನಿನಗೆ ಬೇರೆ ತಂದು ಕೊಡುವೆ !"

"ಉಹೂ, ನನಗೆ ಅದೇ ಬೇಕು."

"ಇನ್ನದು ಸಿಗುವುದಿಲ್ಲ ; ಹೊಸಬೊಂಬೆ ತರೋಣ."

ಅದೇ ಬೇಕು ; ಅದನ್ನೇ ತಂದುಕೊಡಿ ಮಾವಾ !"

ಅಳುವ ರೀತಿ, ತೋಡಿಕೊಳ್ಳುವ ದುಃಖ ಕೋಪಬರಿಸುವುದಕ್ಕಿಂತ ನಗು ತರಿಸುವಂತಿತ್ತು. ಮಾಧು ಸಂತೈಸುತ್ತ ಹೇಳಿದ "ನೀನು ಅತ್ತರೆ ಅದು ಹಿಂದಿರುಗಿ ಬರುವುದೇ ? ನೀನು ಸುಮ್ಮನಿದ್ದಲ್ಲಿ ಹೋಗಿ ಹುಡುಕಿ ತರುವೆ. ಅಲ್ಲಿಯವರೆಗೆ ಸೈರಿಸಿಕೊ."

"ಖಂಡಿತಾ ತರುತ್ತೀರಾ ?" ನೆಟ್ಟನೋಟದಲ್ಲಿ ಆಸೆ ಮಿಂಚುತ್ತಿತ್ತು.

"ನಿಜವಾಗಿಯೂ ತರುವೆ."

"ಬೊಂಬೆ, ಅದರ ಬಟ್ಟೆಗಳು, ಹಾಸಿಗೆ ದಿಂಬು ಎಲ್ಲಾ ಇತ್ತು."

"ಆಗಲಿ, ಎಲ್ಲವನ್ನೂ ತರೋಣ."

"ಈಗಲೇ ತರುತ್ತೀರಾ ಮಾವಾ ?"

ಕೇಳಿಕೆ ಕರ್ಣಮನೋಹರವಾಗಿತ್ತು. ಸೀತೆ ನಗುತ್ತ ಅಣಕದ ದನಿ

ಯಲ್ಲಿ ನುಡಿದಳು "ನನ್ನ ಮಾತು ಕೇಳಲಿಲ್ಲ. ನಿನಗೆ ಹಾಗೆ ಆಗಬೇಕು! ಅದರಲ್ಲಿ ಬೊಂಬೆ ಮಾತ್ರವಲ್ಲ ಕಸ ಕಡ್ಡಿ ಎಲ್ಲಾ ಇತ್ತು!"

ಚಂದಿರೆಗೆ ಕೋಪತಾಪಗಳಿಂದ ಹೊಟ್ಟೆಯುರಿಯಿತು. ಸಿಟ್ಟಿನಿಂದ ಹೇಳಿದಳು "ನೀವು ಕೆಟ್ಟವರು !"

"ಮಕ್ಕಳಿಗೆಕೋಪ ಬಂದರೂ ಚೆನ್ನ, ಅಳು ಬಂದರೂ ಚೆನ್ನ !" ಎಂದು ಮುದ್ದಿಟ್ಟುಕೊಂಡು ಸಂತೈಸಿ ಶಾರದೆ ಹೇಳಿದಳು "ರೈಲಿಳಿದು ಬರುವಾಗ ನೀನೇಕೆ ಪೆಟ್ಟಿಗೆಯನ್ನು ಎತ್ತಿಕೊಳ್ಳಲಿಲ್ಲ ಮಗೂ !"

"ಮಾಮ ನನ್ನ ಎತ್ತಿಕೊಂಡರಲ್ಲಾ ? ಹೇಗೆ ತೆಗೆದುಕೊಳ್ಳುವುದು ?" ಮಾತಿನಲ್ಲಿ ಎಷ್ಟೊಂದು ಸತ್ಯವಿತ್ತೋ ಅಷ್ಟೇ ದುಗುಡವಿತ್ತು. ಕೆನ್ನೆಯ ಮೇಲೆ ಕಂಬನಿ ಧಾರಾಕಾರವಾಗಿ ಹರಿಯಿತು. ದುಃಖ ದುಗುಡಗಳಿಂದ ಮತ್ತೆ ಹೇಳಿದಳು "ನನಗೆ ಅದೇ ಪೆಟ್ಟಿಗೆ ಬೇಕು ; ಬೇರೆ ಯಾವುದೂ ಬೇಡ!"

"ಹೋಗಲಿ ಬಿಡು, ಹಳೆಯದು ಮಾಸಿ ಹೋಗಿತ್ತು. ಹೊಸಬೊಂಬೆ ತರೋಣ" ಎನ್ನುತ್ತ ಎತ್ತಿಕೊಳ್ಳಹೋದಳು ಪುಟ್ಟಮ್ಮ. ಚಂದಿರೆ ಜಗ್ಗದೆ ಹೇಳಿದಳು "ನನಗದೇ ಬೇಕು !"

ಹತ್ತುಗಂಟೆಯಾದರೂ ಅವಳ ರಾದ್ಧಾಂತ ಮುಗಿಯಲಿಲ್ಲ. ಮಾಧವ ರಾಯ ಮಗುವನ್ನು ಸಂತೈಸುತ್ತ ಹೇಳಿದ "ರೈಲು ನಿಲ್ದಾಣಕ್ಕೆ ಹೋಗೋಣ. ನೀನೇ ಪೆಟ್ಟಿಗೆಯನ್ನು ತೆಗೆದುಕೊಳ್ಳುವೆಯಂತೆ."

ಮಾತು ಕೇಳಿ ಚಂದಿರೆಯ ಮುಖ ಹೂವಿನಂತರಳಿತು. ಹೊರಡಲು ತಯಾರಾದಳು. ಅವಳನ್ನು ಸಿಂಗರಿಸುವ ಗೊಡವೆಯಲ್ಲಿ ಶಾರದೆ ಇದ್ದಾಗ ಸೀತೆ ಹೇಳಿದಳು "ಅತ್ತಿಗೆ, ಅವಳ ಪೆಟ್ಟಿಗೆಯನ್ನು ನನ್ನ ಪೆಟ್ಟಿಗೆಯಲ್ಲಿಡು ಎಂದು ಎಷ್ಟು ಹೇಳಿದರೂ ಕೇಳದೆ ತಾನೇ ಇಟ್ಟುಕೊಳ್ಳುವುದಾಗಿ ಹೇಳಿ ಹಠ ತೊಟ್ಟಳು. ನನ್ನ ಪೆಟ್ಟಿಗೆಯಲ್ಲಿಟ್ಟಿದ್ದಿದ್ದರೆ ಹೀಗಾಗುತ್ತಿರಲಿಲ್ಲ."

ಚಂದಿರೆ ಉತ್ಸಾಹದಿಂದ ಹೇಳಿದಳು "ಇಷ್ಟು ದಪ್ಪ ಪೆಟ್ಟಿಗೆ ! ತಂದು ತೋರಿಸುವೆ ಆಯಿತೇ ? ಕೈಗಳನ್ನು ಅಗಲಿಸಿ ಗಾತ್ರವನ್ನು ತೋರಿಸಿದಾಗ ಅತ್ತಿಗೆ ನಾದಿನಿಯರು ನಗುಬಂದರೂ ತಡೆದುಕೊಂಡರು. ಶೃಂಗಾರ ಮನೋ ಹರಿಯಾಗಿ ಅವಳು ಹೊರಟಾಗ ಇದುವರೆಗೆ ಅತ್ತು ರಾದ್ಧಾಂತ ಮಾಡಿ ದವಳು ಇವಳೇಯೆ ಎಂದು ಯಾರಾದರೂ ಅಚ್ಚರಿಪಡಬಹುದಾಗಿತ್ತು.

"ಓಹೋ ! ನೀನಾಗಲೇ ತಯಾರಾಗಿ ಬಿಟ್ಟೆ ! ಎಷ್ಟು ಜಾಣೆಯೇ ನೀನು ? ಎಂದು ಮಾಧವರಾಯನೆಂದಾಗ ಚಂದಿರೆ ಇನ್ನಷ್ಟು ಉಬ್ಬಿ ಹೋದಳು.

"ಅಜ್ಜೀ ! ಮಾಮ ಇನ್ನೂ ತಯಾರಾಗಿಲ್ಲ ; ನಾನಾಗಲೇ ತಯಾರಾದೆ ನೋಡಿಲ್ಲಿ ! ಹೆಮ್ಮೆಯಿಂದ ಜೋರಾಗಿ ನುಡಿದಳು ಚಂದಿರೆ. ಬಾಲಸಹಜ ವಾದ ಮುಗ್ಧ ಮುಖಭಾವದಲ್ಲಿ ಉತ್ಸಾಹ ತಾನೇ ತಾನಾಗಿ ಎಲ್ಲರ ಮುಖ ಮಂಡಲದಲ್ಲೂ ಆನಂದ ಮಾಂಗಲ್ಯ ಮಳೆಗರೆಯಿತು.

ಮಾಧವರಾಯ ಬೇರೆ ಪೋಷಾಕು ಧರಿಸಿ ಚಂದಿರೆಯ ಕೈ ಹಿಡಿದು ಕೊಂಡು ಪೇಟೆಗಭಿಮುಖವಾಗಿ ಹೊರಟ. ಚಂದಿರೆ ಸಡಗರದಿಂದ ಹೆಜ್ಜೆ ಹಾಕಿದಳು. ತಾನು ಎಲ್ಲಿಗೆ ಹೋಗುತ್ತಿದ್ದೇನೆ ತನ್ನ ಗುರಿಯೇನು ಎಂಬುದರ ಪರಿವೆ ಇರಲಿಲ್ಲ. ದಾರಿಯಲ್ಲಿ ಎದುರಾಗುವ ಪುರಜನರ ಮತ್ತು ವಾಹನಗಳ ಮೇಲೆ ದೃಷ್ಟಿ ಹರಿದಿತ್ತು. ಹತ್ತು ಹೆಜ್ಜೆ ಸಾಗುವುದರೊಳಗಾಗಿ ಎದುರಾಗಿ ಬಂದ ಸುಬ್ಬಾಭಟ್ಟರು ರಾಯನನ್ನು ಕಾಣುತ್ತಲೂ "ಏನು ರಾಯರೇ, ಚೆನ್ನಾಗಿದ್ದೀರಾ ?" ಎಂದು ಕುಶಲ ಪ್ರಶ್ನೆ ಮಾಡಿದರು. ಕೈಯ್ಯಲ್ಲಿ ಪೂಜಾ ಪ್ರಸಾದವಿತ್ತು. ಮುಖದಲ್ಲಿ ಮಂದಹಾಸ ಹರಿಸಿ "ಇದು ಯಾರ ಮಗು ?"

"ನನ್ನ ತಂಗಿಯ ಮಗಳು."

"ನಿನ್ನ ಹೆಸರೇನಮ್ಮಾ ?"

"ಚಂದಿರಾ !"

"ನೀನು ಚಂದ್ರವದನೆಯೇ ಹೌದು !"

"ಅಲ್ಲ ಚಂದಿರಾ !"

"ಹಾಗೇನು ?" ಸುಬ್ಬಾ ಭಟ್ಟರು ನಕ್ಕುಬಿಟ್ಟರು.

ಪ್ರಸಾದವನ್ನು ಕೈಗಿಟ್ಟು "ನಿಮ್ಮನ್ನು ಬಹಳ ದಿನಗಳಿಂದ ಕಾಣಲಿಲ್ಲ." ಎಂದರು ಭಟ್ಟರು.

"ವ್ಯಾಪಾರಕ್ಕಾಗಿ ಸುತ್ತುವುದೇ ಆಗಿದೆ."

"ಅಂದಹಾಗೆ ನಿಮ್ಮ ಎದುರು ಮನೆಯ ಸ್ವಾಮಿಯ ವಿಚಾರ ಏನಾಯ್ತು ? ಎಲ್ಲಿ ಹೋದರು ? ಏನಾದರೂ ಸುಳಿವು ಸಿಕ್ಕಿತೇ ?"

"ಭಗವಂತನಿಗೇ ಗೊತ್ತು."

"ನನಗೆ ಜ್ಞಾಪಕವಿದ್ದಂತೆ ಅದೇ ದಿನ ಸಂಜೆ ಸ್ವಾಮಿಯನ್ನು ಕಂಡಿದ್ದೆ, ಮುಖ ಬಾಡಿ ಸಪ್ಪೆಯಾಗಿತ್ತು. ಮನದಲ್ಲಿ ಏನಾದರೂ ಬೇಸರವಿತ್ತೋ ಏನೋ....ಪಾಪ, ತುಂಬ ಅನ್ಯಾಯ."

"ವಿಧಿ ವಿಲಾಸ."

"ಪೋಲೀಸರಿಂದಲೂ ತಿಳಿಯಲಾಗಲಿಲ್ಲವೇ?"

"ಇಲ್ಲವೇ ಇಲ್ಲ."

"ಸಂಸಾರದಲ್ಲಿ ವಿರಸವಿತ್ತೇ?"

ನಿಜವಾಗಿಯೂ ಮಾತು ಮುಗಿಸಿದ್ದರೆ ಸಾಕಾಗಿತ್ತು. ಬೇಸರದಿಂದ ಉತ್ತರಿಸಿದ ರಾಯ "ಅಂಥಾದ್ದೇನಿಲ್ಲ."

"ಜಾತಕ ನೋಡಿಸಿ ಪೂಜೆ ಪುರಸ್ಕಾರಗಳನ್ನಾದರೂ ಮಾಡಿಸಬಹುದಾಗಿತ್ತು. ಅವರಿಗೆ ಗ್ರಹಚಾರ ಚೆನ್ನಾಗಿಲ್ಲವೆಂದು ತೋರುತ್ತದೆ."

"ಅದೆಲ್ಲಾ ಭ್ರಮೆ. ಬರುತ್ತೇನೆ ನಮಸ್ಕಾರ"

ಮಾಧವರಾಯ ನಿಲ್ಲದೆ ಹೆಜ್ಜೆ ಹಾಕಿದ. ಚಂದಿರೆ ಕೈಹಿಡಿದು ಜಗ್ಗಿ ಕೇಳಿದಳು. "ನಾವೀಗ ಹೋಗುವುದೆಲ್ಲಿಗೆ?"

"ಈ ದಾರಿಯು ಎಲ್ಲಿಗೆ ಹೋಗುತ್ತೋ ಅಲ್ಲಿಗೆ."

ಮುಂದೆ ಸ್ವಲ್ಪದೂರ ಹೋಗುವುದರೊಳಗಾಗಿ ರವಿ ಮತ್ತು ಲಿಂಗಣ್ಣ ಎದುರಾಗಿ ಬಂದರು.

ಲಿಂಗಣ್ಣ ಕೈ ಜೋಡಿಸಿ "ರಾಯರೇ, ಯಾವಾಗ ಬಂದಿರಿ?" ಎಂದ.

ರಾಯ ಪ್ರತಿ ನಮಸ್ಕಾರವನ್ನು ಮಾಡಿ ಕುಶಲ ಪ್ರಶ್ನೆಯಿಂದ ಎಲ್ಲರನ್ನೂ ವಿಚಾರಿಸಿಕೊಂಡ.

"ನಿಮ್ಮ ಪ್ರಯಾಣ ಸುಖಕರವಾಗಿತ್ತೆ?"

"ಈ ಸೆಖೆಯ ಕಾಲದಲ್ಲಿ ಪ್ರಯಾಣ ಬಹಳ ಕಷ್ಟ. ನಮ್ಮ ರಾಜ್ಯದಲ್ಲಾದರೆ ಪರವಾಯಿಲ್ಲ. ಬೊಂಬಾಯಿ ಮದರಾಸು ಕಡೆ ಸೆಖೆಯ ತಾಪ ಹೇಳತೀರದು. ಸ್ವಾಮಿಗಾಗಿ ನಾನು ಬಹಳ ಪ್ರಯತ್ನಪಟ್ಟೆ. ಏನೂ ತಿಳಿಯಲಾಗಲಿಲ್ಲ. ಅವನು ವ್ಯಾಪಾರ ಮಾಡುತ್ತಿದ್ದ ಸ್ಥಳಗಳಲ್ಲೆಲ್ಲಾ ವಿಚಾರಿಸಿದ್ದಾಯ್ತು. ಎಲ್ಲೂ ಸುಳಿವು ಹತ್ತಲಿಲ್ಲ. ಪಾಪ, ಮಕ್ಕಳು ಅನಾಥರಾದರು.

"ನಾನು ಅದಕ್ಕಾಗಿ ಒಂದು ತಿಂಗಳಿಂದ ಇಲ್ಲಿಯೇ ಇದ್ದೇನೆ. ಊರ

ಕಡೆಯ ಕೆಲಸವೂ ನಿಂತುಹೋಗಿದೆ. ಅಂಗಡಿಯನ್ನು ಕಟ್ಟಿಸುವ ಪರವಾನಗಿಗಾಗಿ ಮುನಿಸಿಪಲ್ ಆಫೀಸಿಗೆ ಅಲೆದಲೆದು ಸಾಕಾಯಿತು. ಆಗ ಬಾ ಈಗ ಬಾ ಎಂದು ಸತಾಯಿಸಿದರು.....ಹೇಗೋ ದೊರಕಿಸಿಕೊಂಡು ಅಂಗಡಿಗಳನ್ನು ಕಟ್ಟಿಸಿದೆ. ಇನ್ನು ಒಂದೆರಡು ದಿನಗಳಲ್ಲಿ ಕೆಲಸ ಮುಗಿಯುತ್ತದೆ. ಮನೆಯನ್ನು ಎರಡು ಭಾಗ ಮಾಡಿದ್ದೇನೆ. ಶಿವಮ್ಮನಿಗೆ ವಾಸಕ್ಕೆ ಇಕ್ಕಟ್ಟು; ಆದರೂ ತಿಂಗಳ ವರಮಾನವೊಂದಿದ್ದರೆ ಗಂಜಿ ಉಣ್ಣುತ್ತಾರೆ."

"ಅನುಕೂಲ ಮಾಡಿದಿರಿ."

"ಇನ್ನು ಹೇಗಾದರೂ ಜೀವನ ಸಾಗುತ್ತದೆ. ಸ್ವಾಮಿ ಮರಳುವವರೆಗೆ ಗಂಜಿಯನ್ನಾದರೂ ಕುಡಿಯಬಹುದು."

ರಾಯ ರವಿಯ ತಲೆಯನ್ನು ನೇವರಿಸಿ ಆತ್ಮೀಯತೆಯಿಂದ ನುಡಿದ. "ಏನೇ ಅಗತ್ಯವಿದ್ದರೂ ನನ್ನ ಬಳಿ ಸಂಕೋಚಪಟ್ಟುಕೊಳ್ಳಬೇಡ. ಯಾವುದೇ ಸಹಾಯಬೇಕಿದ್ದರೂ ಕೇಳು. ಮುಖ್ಯವಾಗಿ ನೀವೆಲ್ಲರೂ ವಿದ್ಯಾವಂತರಾಗಲೇಬೇಕು. ಕಷ್ಟಪಟ್ಟು ಓದಿರಿ. ನಾನೂ ಸ್ವಾಮಿಯೂ ಭ್ರಾತೃವಾತ್ಸಲ್ಯದಿಂದ ಬಾಳಿದವರು. ಶಾಲೆಯ ದಿನಗಳಿಂದ ಸ್ನೇಹ ಬೆಳೆದಿತ್ತು. ಇಷ್ಟೊಂದು ಆತ್ಮೀಯತೆ ಬೆಳೆದಿದ್ದರೂ ನನ್ನೊಡನೆ ಒಂದು ಮಾತನ್ನೂ ಹೇಳಲಿಲ್ಲ. ಕೆಲಸ-ಕೆಲಸ ಯಾವಾಗಲೂ ಕೆಲಸದ್ದೇ ಗೀಳು. ತನ್ನ ಕ್ಷೇಮವನ್ನು ನೋಡಲಿಲ್ಲ; ಹೆಂಡತಿ ಮಕ್ಕಳ ಕ್ಷೇಮವನ್ನೂ ಬಯಸಲಿಲ್ಲ. ಅರೆಬರೆ ಹುಚ್ಚರ ವ್ಯವಹಾರ ನಡೆಸಿ ಹೋಗಿಬಿಟ್ಟ– ಅದಕ್ಕೆಂದೇ ಹೇಳುತ್ತಿದ್ದೇನೆ. ಮನೋವಿಕಾಸ ಹೊಂದದ ಹೊರತು ಜೀವನ ಸುಖವಿಲ್ಲ."

ಅನಂತರ ಲಿಂಗಣ್ಣನ ಕಡೆ ತಿರುಗಿ "ಮಧ್ಯಾಹ್ನ ಮನೆಗೆ ಬನ್ನಿರಿ." ಎಂದು ಆತ್ಮೀಯ ಆಹ್ವಾನ ನೀಡಿದ. ಆಮಂತ್ರಣವನ್ನು ಸ್ವೀಕರಿಸಿದ ಲಿಂಗಣ್ಣ ನಮಸ್ಕರಿಸಿ ಮನೆಯ ಕಡೆ ಹೊರಟ. ಮಾಧವರಾಯನ ಸ್ನೇಹಾದರವನ್ನು ಮೆಲಕು ಹಾಕುತ್ತಿತ್ತು-ಮನಸ್ಸು.

"ತುಂಬಿದ ಕೊಡ ತುಳುಕುವುದುಂಟೇ?" ಎದೆಯಾಳದಲ್ಲಿ ಮೆಚ್ಚಿ ನುಡಿಯಿತು ಅಂತರಾತ್ಮ.

"ಈ ಕಾಲದಲ್ಲಿ ತುಂಬಿದ ಕೊಡಗಳಿಗೇನು ಕಡಿಮೆ? ಅವೇ ಯದ್ವಾತದ್ವಾ ತುಳುಕುತ್ತಿರುವುದನ್ನು ನೀವೂ ಕಾಣಿರಾ ಸ್ವಾಮಿ?"

"........"

"ಉತ್ತರವಿಲ್ಲವೇಕೆ ?"

"ಸ್ವಲ್ಪ ಕಾಲಾವಕಾಶ ನೀಡಬಾರದೇ ?"

"ಹೂಂ...."

"ಈಶ್ವರಾರ್ಪಣಮಸ್ತು" ನೀಳವಾದ ನಿಟ್ಟುಸಿರೊಂದು ಹಿಂದೆಯೇ ಹೊಮ್ಮಿತು. ಲಿಂಗಣ್ಣ ಯೋಚನೆಯನ್ನು ಬದಿಗೊತ್ತಿ ಬಿರಬಿರನೆ ಹೆಜ್ಜೆ ಹಾಕಿದ.

ರಾಯನ ನಡಿಗೆ ಮಂದಗತಿಯಲ್ಲಿ ಸಾಗಿತು.

"ಅವರು ಯಾರು ಮಾಮ ?"

"ನೋಡಿದರೆ ತಿಳಿಯುವುದಿಲ್ಲವೆ ? ಅವರು ತಾತ."

"ನಮ್ಮ ತಾತನಿಗೂ ಬಿಳೀ ಕೂದಲು !"

"ಹ್ಞೂ, ಇವರಿಗೂ ಹಾಗೆಯೇ."

ಜನಸಂದಣಿಯು ಅತಿಯಾಗಿತ್ತು. ವಾಹನಗಳ ಓಡಾಟವೂ ತೀವ್ರ ಗತಿಯಲ್ಲಿ ನಡೆದಿತ್ತು. ಚಂದಿರೆ ಕಣ್ಣಾಲಿಗಳನ್ನು ಈಕಡೆ ಹೊರಳಿಸಿ "ಮಾವಾ, ನಾವೀಗ ಹೋಗುವುದೆಲ್ಲಿಗೆ ?"

"ನಿನಗೆ ನಮ್ಮೂರು ತೋರಿಸುವೆ, ಆಮೇಲೆ ನೀನೇ ಹೇಳಬೇಕು. ನಮ್ಮೂರು ಚೆನ್ನೋ, ನಿಮ್ಮೂರು ಚೆನ್ನೋ ?"

"ನಮ್ಮೂರೇ ಚೆನ್ನ !"

"ಈಗಲೇ ಹೇಳಿದರೆ ಹೇಗೆ ? ನೀನಿನ್ನೂ ನಮ್ಮೂರು ನೋಡಿಯೇ ಇಲ್ಲವಲ್ಲ....? ಸುಮ್ಮನೆ ಹೇಳುವುದು ಪ್ರಯೋಜನವಿಲ್ಲ"

"ನಮ್ಮ ಮನೆ ದೊಡ್ಡದು; ಊರೂ ದೊಡ್ಡದು !"

"ನೀನು ಹಾಗೆ ಹೇಳಬೇಕಾದರೆ ನಮ್ಮೂರನ್ನೆಲ್ಲಾ ಒಮ್ಮೆ ನೋಡಬೇಕು."

"ನಮ್ಮೂರಿನಲ್ಲಿ ಸಮುದ್ರ, ದೋಣಿ, ಹಡಗು ಎಲ್ಲಾ ಇವೆ !"

"ಇಲ್ಲಿ ಅರಮನೆ ಇದೆ; ಬೆಟ್ಟವಿದೆ; ಮುದ್ದಾದ ಊರು ಮೈಸೂರು !"

"ಮುದ್ದಾಗಿರುವುದಕ್ಕೆ ಅದೇನು ಮಗುವಲ್ಲ !"

"ಮಗು ಮಾತ್ರ ಮುದ್ದಾಗಿರುತ್ತದೆಯೆ ?" ರಾಯ ನಕ್ಕು ಕೇಳಿದ.

"ಮಕ್ಕಳಿಗಿಂತ ಮುದ್ದಾದ ವಸ್ತುವೇ ಇಲ್ಲವೆಂತ ಅಜ್ಜಿ ಹೇಳುತ್ತಾರೆ!."

"ಹಾಗೇನು ?" ರಾಯ ನಕ್ಕು ಮುಂದುವರಿದ "ನಿಮ್ಮೂರಿನಲ್ಲಿ ಎರಡು ದಿನ ಇರಲಾರೆ. ಮದರಾಸು ತುಂಬ ಕೊಳಕು."

"ಮತ್ತೇಕೆ ಇದ್ದಿರಿ ?"

"ಕೆಲಸವಿತ್ತು."

"ಅಂತೂ ಇದ್ದೀರಲ್ಲಾ."

"ಇರಲೇಬೇಕಾಗಿತ್ತು."

"ನನಗೂ ಇಲ್ಲಿ ಬೇಜಾರು."

"ಅದೆಲ್ಲಾ ಬೂಟಾಟಿಕೆ !"

"ಹಾಗೆಂದರೆ ?"

"ಜಂಭ !"

"ಹಾಗೇನಿಲ್ಲ ; ಈ ಮೊದಲು ಬಂದಾಗ ಮೈಸೂರು ನೋಡಿರುವೆ."

"ಈಗ ಇನ್ನೊಮ್ಮೆ ನೋಡಿದರಾಯ್ತು. ನೋಡು ಎಂತೆಂತಹ ಅಂಗಡಿಗಳು ! ನಿನಗೆ...."

ಚಂದಿರೆ ಕಿಲಕಿಲ ನಕ್ಕು ನುಡಿದಳು "ಇವಕ್ಕೇನು ಬರ ? ಎಲ್ಲಾ ಕಡೆಯೂ ಇವೆ."

"ಇರಲಿ, ಈಗ ನಿನಗೆ ಏನೇನು ಬೇಕು ಹೇಳು." ಎಂದು ಹತ್ತು ರೂಪಾಯಿನ ನೋಟನ್ನು ತೆಗೆದು ಅವಳನ್ನು ಅಂಗಡಿಯೊಳಕ್ಕೆ ಕರೆದೊಯ್ದು ಬೊಂಬೆಯ ಲೋಕಕ್ಕೆ ಕಾಲಿಟ್ಟಾಗ ಆವಳ ಸಂತೋಷಕ್ಕೆ ಪಾರವೇ ಇಲ್ಲ ದಂತಾಗಿ ಹಳೆಯ ಬೊಂಬೆಯ ವಿಚಾರ ಸ್ಮರಣೆಯಿಂದ ಅಳಿಸಿಹೋಯಿತು. ದೊಡ್ಡದೊಂದು ಬೊಂಬೆಯನ್ನು ತೆಗೆದುಕೊಂಡು, ಇನ್ನು ಕೆಲವು ಆಟದ ಸಾಮಾನುಗಳನ್ನು ಕಟ್ಟಿಸಿ ತಾನೇ ಹಿಡಿದುಕೊಂಡು ಅಂಗಡಿಯನ್ನು ಬಿಟ್ಟಳು.

"ಮಾಮಾ, ಬೊಂಬೆಗೆ ಬದಲಿಸಿ ಹಾಕಲು ಬೇರೆ ಲಂಗ ಇಲ್ಲ. ಮೊದಲು ದಿಂಬು ಹಾಸಿಗೆ ಎಲ್ಲಾ ಇತ್ತು." ಎಂದಳು ಕಣ್ಣು ತೇವವಾಗಿತ್ತು. ಮಗುವಿನ ಸ್ಥಿತಿಯನ್ನು ಗಮನಿಸಿ ಅದನ್ನು ಹೆಚ್ಚು ಬೆಳೆಸಲು ಅವಕಾಶ ಕೊಡದೆ ದರ್ಜಿಯ ಅಂಗಡಿಗೆ ಕರೆದೊಯ್ದು ಒಂದೆರಡು ಲಂಗ, ಹಾಸಿಗೆ ದಿಂಬುಗಳನ್ನು ತಯಾರಿಸಿ ಕೊಡಲು ಹೇಳಿದ. ಅವಳು ನೋಡುತ್ತಿದ್ದಂತೆಯೇ

ಒಂದೊಂದಾಗಿ ಎಲ್ಲಾ ತಯಾರಾದುವು.

"ನಾಳೆ ಬಾ ಮಗೂ, ಲಂಗಗಳನ್ನು ಹೊಲಿದು ಇಟ್ಟಿರುವೆ." ಎಂದ ದರ್ಜಿ.

ಚಂದಿರೆ ಪೆಟ್ಟಿಗೆಯನ್ನೆತ್ತಿಕೊಂಡು ಸಂತಸದಿಂದ ಗೃಹಾಭಿಮುಖವಾಗಿ ನಡೆದಳು.

"ಮಾವಾ, ರೈಲು ನಿಲ್ದಾಣಕ್ಕೆ ಹೋಗೋಣವೇ?" ತರಾತುರಿಯಿಂದ ಕೇಳಿದಳು ಚಂದಿರಾ. ಕತ್ತಲಲ್ಲಿ ದೀಪ ತಂದಂತೆ ಒಮ್ಮೆಲೆ ಹಿಂದಿನ ನೆನಪಾಯಿತು.

"ಮತ್ತೇಕೆ ಅದರ ನೆನಪು? ನೀನೀಗ ಹೊಸಬೊಂಬೆಯನ್ನು ಹೊಂದಿದ್ದೀ ರೈಲು ಆಗಲೇ ಈ ಊರನ್ನು ಬಿಟ್ಟು ಮುಂದಕ್ಕೆ ಹೋಯಿತು!

"ಅದು ಮತ್ತೆ ಬರುವುದಿಲ್ಲವೇ?"

"ನಾಲ್ಕಾರು ದಿನಗಳ ತರುವಾಯ ಬಂದೀತು."

"ಆಮೇಲೆ ಹೋಗಿ ತರೋಣವೇ ಮಾವಾ?" ಮಿನುಮಿನುಗುವ ಕಣ್ಣುಗಳಲ್ಲಿ ಆಸೆಯ ಜ್ಯೋತಿ ಬೆಳಗಿತು.

"ಅದು ಕಳೆದು ಹೋಯಿತು ಬಿಡು. ಯಾರೋ ನಿನ್ನಂತಹ ಮಕ್ಕಳು ಅದರೊಂದಿಗೆ ಆಡುತ್ತಾರೆ."

ಹಾ .. ಎಂತಹ ಪ್ರಮಾದ!

ತುಸು ಉದ್ವೇಗದಿಂದ ಕೇಳಿದಳು ಚಂದಿರೆ "ಅದಿನ್ನು ಸಿಕ್ಕುವುದಿಲ್ಲವೇ?"

ಮುಖ ಭಾವೋದ್ವೇಗದಿಂದ ಕೆಂಪು ತಳೆಯಿತು. ದಾರಿಯಲ್ಲಿ ಅಳುವುದು ನಾಚಿಗೆಗೇಡು! ಮೇಲಾಗಿ ಕೈಯಲ್ಲಿ ಹೊಸಬೊಂಬೆ ಬೇರೆ ಇದೆ...! ಉಭಯ ಸಂಕಟ. ತನ್ನನ್ನು ತಾನು ಹತೋಟಿಯಲ್ಲಿಟ್ಟುಕೊಳ್ಳುತ್ತ ಹೆಜ್ಜೆ ಹಾಕಿದಳು. ಮನೆ ಮುಟ್ಟಿದಾಗ ಬಾಗಿಲಲ್ಲಿ ಎದುರಾಗಿ ಪುಟ್ಟಮ್ಮ ಏನೇನೋ ತುಂಬ ಸಂಪಾದಿಸಿದಂತಿದೆ!" ಎನ್ನುತ್ತ ಮುದ್ದಿಟ್ಟುಕೊಂಡಳು. ಆದರೆ ನಿಜವಾಗಿಯೂ ಸಂತೋಷವಿಲ್ಲ. ಕಣ್ಣಿನಲ್ಲಿ ನೀರು ಫಳಫಳನೆ ಹೊಳೆಯುತ್ತಿತ್ತು.

"ಏನು ಮಗೂ? ಮತ್ತೇಕೆ ಕಣ್ಣಿನಲ್ಲಿ ನೀರು?"

"..."

ಕೈಗಳೆರಡೂ ಪೆಟ್ಟಿಗೆಯನ್ನು ತಬ್ಬಿ ಹಿಡಿದಿವೆ. ದು:ಖಗರ್ಭಿತ ಮುಖ ಭಾವ ನಸುಗೆಂಪು ತಳೆದಿದೆ. ಮೂರ್ತಿಮತೀ ಸುಂದರಿಯಂತೆ ನಿಂತುಬಿಟ್ಟಳು.

"ಸ್ವಲ್ಪ ತಾಳಿ; ಅನಂತರ ಅವಳೇ ಸರಿ ಹೋಗುತ್ತಾಳೆ" ಎಂದ ಮಾಧವರಾಯ.

ನೀರು ಮನೆಯಿಂದ ಹೊರಬಂದ ಸೀತೆ ಮಗಳತ್ತ ನೋಡುತ್ತ ಹತ್ತಿರ ಬಂದು—"ಹೋ ಹೋ ಹೋ! ಬಹಳ ಸಂಪಾದಿಸಿದ್ದೀ!"

"ನೀವು ಕೆಟ್ಟವರು! ನೀವೇ ನನ್ನ ಪೆಟ್ಟಿಗೆ ಬಿಟ್ಟು ಬಂದುದು!" ಸೆಟೆದು ನಿಂತು ಹೇಳಿದಾಗ ಕಂಠವು ಬಿಗಿದು ಬಂದಿತು; ಪುನ: ಹೇಳಿದಳು "ನಿಮಗೆ ಹೊಸಬೊಂಬೆ ತೋರಿಸುವುದಿಲ್ಲ!"

ಮಾಧವರಾಯ ಮಗುವನ್ನು ಮುದ್ದಿಸಿ ಹೇಳಿದ. "ಹೊಸ ಬೊಂಬೆ ಜೋಪಾನವಾಗಿಟ್ಟುಕೊ. ದರ್ಜಿ ಏನು ಹೇಳಿದ ಮಗೂ? ಲಂಗವನ್ನು ನಾಳೆ ಕೊಡುತ್ತಾನೋ ನಾಡಿದ್ದೋ? ನಾನು ಮರೆತುಬಿಟ್ಟೆ"

ಗಮನ ಆ ಕಡೆ ಹರಿದಾಗ ಹಳೆಯ ಬೊಂಬೆಯ ವಿಚಾರ ಸ್ಮರಣೆಯ ಹಾದಿಯಿಂದ ಮತ್ತೆ ಅರುಗಾಯಿತು. ದೂರ ನಡೆದದ್ದು ಆಯಾಸವಾಗಿದ್ದು ದರಿಂದ ಹಸಿವೆಯೂ ಆಗಿತ್ತು. ಇಂದು ಎಂದಿಗಿಂತ ಚೆನ್ನಾಗಿಯೇ ಊಟ ಮಾಡಿದಳು.

ಊಟವಾದ ನಂತರ ಎಲೆ ಅಡಿಕೆಯ ಸವಿಯಲ್ಲಿರುವಾಗ ಪುಟ್ಟಮ್ಮ ಹೇಳಿದಳು "ಮಾಧೂ! ಈಗಲೇ ಮಾಲಿನಿಯನ್ನು ಕರೆತಂದಿದ್ದರೆ ಎಲ್ಲರೂ ಒಂದುಗೂಡಿ ಸಂತೋಷದಿಂದ ಕಾಲಕಳೆಯುತ್ತಿದ್ದರು. ಅಳಿಯಂದಿರಿಗೆ ಕಾಗದ ಬರೆದು ನೋಡು, ಒಪ್ಪಿದರೆ ಕರೆತಂದರಾಯಿತು. ಅವಳಿಗೂ ಈಗ ಮನಸ್ಸೆಲ್ಲಾ ಇಲ್ಲೇ ಇರುತ್ತೆ."

"ಅಕ್ಕತಂಗಿಯರಿಬ್ಬರೂ ಸೇರಿಬಿಟ್ಟರೆ ಮುಗಿಯಿತು. ನಮ್ಮನ್ನು ಕೇಳುವವರೇ ಇರುವುದಿಲ್ಲ" ತಮಾಷೆಯಾಗಿ ಅಂದ ರಾಯ.

"ಸೀತಮ್ಮ ಬಂದಾಗ ಕಾಗದ ಬರೆದರೆ ಕಳುಹಿಸುವೆ ಎಂದು ಅಂದೇ ಹೇಳಿದ್ದಾರೆ ಪಶುಪತಿಯಣ್ಣ" ದನಿಗೂಡಿಸಿದಳು ಶಾರದೆ.

"ಮಾಮಾ, ಚಿಕ್ಕಮ್ಮ ಬಂದರೆ ಈ ಬೊಂಬೆ ತೋರಿಸುವೆ!"

"ಓಹೋ! ಅಗತ್ಯವಾಗಿ" ಎಂದವನೇ ತಾಯಿಯ ಕಡೆ ತಿರುಗಿ, "ಅವಳ ರಾದ್ಧಾಂತ ಬಲು ಚೆನ್ನಾಗಿತ್ತು."

"ಹೌದಪ್ಪಾ! ಮಕ್ಕಳಿದ್ದ ಮನೆ ಚೆನ್ನ. ನಿನಗೆ ಮದುವೆಯಾಗಿ ಹತ್ತು ವರುಷಗಳಾದರೂ ಮಕ್ಕಳ ಭಾಗ್ಯವೊದಗಲಿಲ್ಲ. ಔಷದ ಕಷಾಯ ಎಲ್ಲಾ ಮುಗಿಯಿತು. ಇನ್ನು ತೀರ್ಥಯಾತ್ರೆ ಮಾಡುವುದು ಲೇಸೆಂದು ತೋರುತ್ತದೆ. ಎಲ್ಲರೂ ಕೂಡಿ ಹೋಗಿ ಬರೋಣ. ನನಗೂ ಸಾಯುವ ಕಾಲದಲ್ಲಿ ದೇವರ ದರ್ಶನ ಮಾಡಿದಂತಾಗುತ್ತದೆ." ಆ ಮಾತು ಹೊರ ಬಿತ್ತೋ ಇಲ್ಲವೋ ಶಾರದೆಯ ಮುಖದಲ್ಲಿ ನೋವಿನ ಛಾಯೆ ಮೂಡಿತು. ತಕ್ಷಣ ಅಲ್ಲಿಂದ ಎದ್ದು ಹೋದಳು.

"ಅದಕ್ಕೇಕೆ ಯೋಚನೆ? ದೈವೇಚ್ಛೆ ಇದ್ದಂತಾಗುತ್ತದೆ."

"ಅಷ್ಟು ಉದಾಸೀನ ಸರಿಯಲ್ಲ. ನಾವು ಮಾಡುವ ಪ್ರಯತ್ನವೆಲ್ಲಾ ಮಾಡಿಯೇ ತೀರಬೇಕು. ಭಗವಂತನ ಸೇವೆ ಮಾಡುವುದರಲ್ಲಿ ಬಾಧಕವಿಲ್ಲ. ನಿನಗೆ ಮಕ್ಕಳಾಗದಿದ್ದರೆ ನಮ್ಮ ಸಂತತಿಯೇ ಕೊನೆಗೊಳ್ಳುತ್ತದೆ; ಇನ್ನು ಭಗವಂತನ ಸೇವೆ ಮಾಡುವುದೊಂದೇ ದಾರಿ."

ಮಾಧವರಾಯ ಆರಾಮಾಸನದ ಮೇಲೆ ಸುಖಾಸೀನನಾಗಿ ಚಿಂತಿತನಂತೆ ಗಂಭೀರ ಮುಖಮುದ್ರೆ ತಳೆದ. ಮೊದಲಿನಿಂದಲೂ ಮಕ್ಕಳೆಂದರೆ ಆಸೆಯ ಪ್ರವೃತ್ತಿಯವನಾದವನಿಗೆ ಮಕ್ಕಳ ಭಾಗ್ಯ ಬರಲಿಲ್ಲ. ಮಾತು ಬಂದೊಡನೆಯೇ ಮಡದಿ ಎದ್ದು ಹೋದುದು ಮನಸ್ಸಿಗೆ ಮುಟ್ಟಿತು. ಹಾಗೇ ಸ್ವಲ್ಪಹೊತ್ತು ಕುಳಿತಿದ್ದು ಮಾತು ಬದಲಿಸಲು "ಇಂದು ಲಿಂಗಣ್ಣ ಇಲ್ಲಿಗೆ ಬರುತ್ತಾರೆ." ಎಂದ.

"ಪಾಪ, ಮಗಳಿಗಾಗಿ ತುಂಬ ವ್ಯಥೆಪಡುತ್ತಾರೆ. ಸ್ವಾಮಿ ಎಲ್ಲೋ ನೆರೆರಾಜ್ಯಗಳಲ್ಲಿ ಸೇರಿಕೊಂಡಿರಬಹುದು ಎನಿಸುತ್ತೆ. ಮಡದಿಯನ್ನು ಪಂಜರ ದಲ್ಲಿಟ್ಟು ಆಳಬೇಕೆಂದು ಆರಂಭಿಸಿದವನ ಜೀವನ ಈಪರಿ ಸಮಾಪ್ತಿಯಾಯಿತು. ಉಪ್ಪಿನ ಬೊಂಬೆಯೊಂದು ಸಮುದ್ರವನ್ನು ಅಳೆಯಲು ಹೋದಂತೆ ವಿವೇಚನೆ ಇಲ್ಲದ ಮನುಷ್ಯ." ಪುಟ್ಟಮ್ಮ ಜುಗುಪ್ಸೆಯಿಂದ ನುಡಿದಳು.

"ಶಿವಮ್ಮ ಸಾಧ್ವೀಮಣಿ. ಅವರಿಗೆ ಈ ಕಷ್ಟ ಬರಬಾರದಿತ್ತು." ಸೀತೆ ಮರುಕ ತೋರಿದಳು.

"ಒಬ್ಬೊಬ್ಬರಿಗೂ ಒಂದೊಂದು ಬಗೆಯ ಕಷ್ಟ. ಜೀವನ ಮುಳ್ಳಿನ ಜಾಡಾಗಿದ್ದರೂ ಹೂವಿನ ಹಾಸಿಗೆಯೇನೋ ಎಂಬಷ್ಟು ಹಗುರವಾಗಿ ಕಾಣು ತ್ತಾರೆ. ಸ್ವಾರ್ಥಪರ ಜನ ಆ ದೈವದಾಣತಿಯ ಮುಂದೆ ನಮ್ಮ ಸಾಧನೆ ಯೆತ್ತ? ಮುಖ್ಯವಾಗಿ ತಮ್ಮ ಆತ್ಮೋನ್ನತಿಗಾಗಿ ಶ್ರಮಿಸಿದರೆ ಸಾಕು. ಈಚೀಚೆಗಂತೂ ಜನಗತಿಯಲ್ಲಿ ಅನೀತಿ ಅಧರ್ಮಗಳೇ ತಾಂಡವವಾಡುತ್ತಿವೆ. ಸತ್ಯಾಸತ್ಯಗಳ ಪರಿಜ್ಞಾನವಿದ್ದು ಏಕೆ ಹೀಗಾಯಿತೆಂಬುದೇ ಅರ್ಥವಾಗುವು ದಿಲ್ಲ." ಸಮಸ್ಯೆಯನ್ನು ಮುಂದಿಟ್ಟಳು ಪುಟ್ಟಮ್ಮ.

"ಮನೋದೌರ್ಬಲ್ಯ–ನೀತಿ ಬಾಹಿರತೆ ಒಂದೇ ವಸ್ತುವಿನ ಅಕ್ಕಪಕ್ಕ ಗಳು. ದೇಶದಲ್ಲಿ ಎಲ್ಲಿ ನೋಡಿದರೂ ಅನೀತಿ–ಅಸತ್ಯ-ಅಧರ್ಮಗಳು ಉತ್ತಾಲ ನರ್ತನಗೈಯುತ್ತಿವೆ ನಿಜ. ದೇಶಕ್ಕೆ ಸ್ವಾತಂತ್ರ್ಯ ಬಂತು! ಜನ ಸುಸಂಘಟಿತರಾಗಬೇಕು. ಆದರೆ ನಡೆಯುತ್ತಿರುವುದು ತೀರ ವ್ಯತಿರಿಕ್ತ. 'ನಮ್ಮಜನ' ಎಂದು ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗುವಂತಹ ಹೀನ ಚರಿತ್ರೆಯಲ್ಲಿದ್ದಾರೆ ನಮ್ಮವರು! ಹಿಂದೆ ಪಾಪಭೀರುಗಳಾಗಿದ್ದು ದೇಶದಲ್ಲಿ ಸತ್ಯಧರ್ಮ ನಡೆದುಕೊಂಡು ಬರುತ್ತಿತ್ತು. ಅಂದಮೇಲೆ ಇಂದೇಕೆ ಹೀಗೆ?

"ಹಿಂದೆ ಒಂದು ಅಂಧ ಶ್ರದ್ಧೆಯಿತ್ತು. ಅಂಧಭಕ್ತಿಯಿತ್ತು. ಅಂದಿನ ವೈದಿಕ ವರ್ಗದವರು ನಾಕ–ನರಕಗಳ ಹೆಸರು ಹೇಳಿ ತಪ್ಪಿತಸ್ಥರಿಗೆ ನರಕ ಪ್ರಾಪ್ತಿ; ಸತ್ಯಸಂದರಿಗೆ ಸ್ವರ್ಗಪ್ರಾಪ್ತಿ ಎಂದು ಸಾರಿದ್ದರು. ಅಂದಿನ ಜನತೆ ಅದನ್ನು ಭಯಭಕ್ತಿಯಿಂದ ಸ್ವೀಕರಿಸಿತ್ತು. ಇಂದಿನ ವಿಜ್ಞಾನಿಗಳು ನಾಕ-ನರಕ ಗಳು ಅರ್ಥಾತ್ ವೈದಿಕ ಗೊಡ್ಡುಗಳ ಸೃಷ್ಟಿ ಎಂದಿದ್ದಾರೆ. ಮಾರಮ್ಮನಲ್ಲಿ ಗಾಢಭಕ್ತಿಯಿಂದ ನಡೆದುಕೊಂಡಿದ್ದ ಜನಕ್ಕೆ ಅದೇ ಮಾರಮ್ಮ ಇಂದು ಕಲ್ಪನೆ ಯಾಗಿದ್ದಾಳೆ. ಆಕೆಯ ಧಾಳಿಯೆಂದೇ ನಂಬಿಕೊಂಡಿದ್ದ ಕಾಲರಾ, ಸಿಡುಬು, ಪ್ಲೇಗು ಇತ್ಯಾದಿ ರೋಗಗಳು ನವೀನ ಸಂಶೋಧನೆಯಲ್ಲಿ ಗೊಡ್ಡು ಭಾವನೆಯ ಪರಿಧಿಯಿಂದ ಬಿಡುಗಡೆ ಹೊಂದಿದ್ದು, ಇವು ಕ್ರಿಮಿಗಳಿಂದುತ್ಪತ್ತಿಯಾಗುವ ಜಾಡ್ಯವೇ ಹೊರತು ಆಕೆಯ ಕೋಪಾತಿರೇಕವಲ್ಲ ಎಂಬುದನ್ನು ಜನ ತಿಳಿದು ಕೊಂಡಿದ್ದಾರೆ. ಈಗ ಅವರಿಗೆ ದೇವರ ಭಯವಿಲ್ಲ ...ಇನ್ನು ಸರ್ಕಾರದ ಭಯ ವಷ್ಟೇ? ಈ ಸರಕಾರವೂ ನಮ್ಮದೇ ಎಂದು ನಿಮಿರಿ ನಿಂತಿದ್ದಾರೆ ಈ ಜನ? ದಿನವೂ ತಿಳಿದು ಬರುವ ವಿಷಯಗಳತ್ತ ಗಮನ ಹೊರಳಿಸಿದರೆ ಮನಸ್ಸಿಗೆ

ಅತ್ಯಂತ ವೇದನೆಯಾಗುತ್ತದೆ. ನಾಗರಿಕತೆಯ ಸೋಗಿನಲ್ಲಿ ಮೃಗವಿಶೇಷವೇ ತಾಂಡವವಾಡುತ್ತಿದೆ! ಈ ಜನಗತಿಯನ್ನು ಗಮನಿಸಿದರೆ ಇಂದಿನ ನವೀನ ಸಾಧನೆಗಿಂತ ಅಂದಿನ ಅಜ್ಞಾನದ ಅಂಧಕಾರವೇ ಉತ್ತಮವಾಗಿತ್ತು ಎನಿಸುತ್ತದೆ. ನಮ್ಮ ದೇಶದ ಸಂಸ್ಕೃತಿಯು ಬೆಳಗಿ ಭಾರತಾಂಬೆಯು ಕೀರ್ತಿಶಾಲಿಯಾಗಬೇಕಾದರೆ ಒಂದೊಂದು ಹನಿಯೂ ಹಳ್ಳವಾಗಿ ಹರಿಯುವಂತಹ ನೂರ್ಮಡಿಯ ಚೇತನಬೇಕು ಉಜ್ವಲ ಆಕಾಂಕ್ಷೆ ಬೇಕು ಜೀವಿತದಲ್ಲಿ ನೈತಿಕವಾಗಿ-ಪಾರಮಾರ್ಥಿಕವಾಗಿ ಚಿಂತನೆ ಮಾಡದ ಮೇಲೆ ಬಾಳು ನಿರ್ಮಲವಾಗುವುದೆಂತು?" ಸರಳ ಸಲಿಲ ವಾಗ್ಝರಿ ಹರಿಯುವಾಗ ಮುಖದಲ್ಲಿ ಚೇತನದ ಮಿಂಚು ಮಿನುಗಿತು. ನೋಟ ಹತ್ತಿರದಲ್ಲಿದ್ದರೂ ಏನನ್ನೂ ನೋಡುತ್ತಿರಲಿಲ್ಲವೇನೋ....ಅಲ್ಲೋಲ ಕಲ್ಲೋಲವಾದ ಮನದಲೆಗಳನ್ನು ಅವಲೋಕಿಸುತ್ತ ಅಲುಗದೆ ಕುಳಿತ. ಹೃದಯದ ನೆಲೆಯಲ್ಲಿ ಬಿಸಿಯುಸಿರು ಮೆಲ್ಲ ಮೆಲ್ಲನೆ ಹರಿದಾಡುತ್ತಿತ್ತು.

"ನೈತಿಕ ಪತನಕ್ಕೆ ಬಡತನವೇ ಕಾರಣ."

"ಸಿರಿವಂತರಲ್ಲೂ ಈ ಕೊರತೆಯಿದೆ." ಸಿಟ್ಟಿನಿಂದ ಹೇಳಿದ.

"ಇದಕ್ಕೆ ಕೊನೆಯೆಲ್ಲಿ?"

"ಮನೋವಿಕಾಸವಾಗದ ಹೊರತು ಆತ್ಮಶುದ್ಧಿಯಾಗದು. ಇದಕ್ಕೆ ಜ್ಞಾನವೇ ತಳಹದಿ."

"ವಿದ್ಯಾವಂತರಲ್ಲಿ ಈ ಕೊರತೆ ಇಲ್ಲವೇ?" ಸೀತೆ ನಡುವೆ ಬಾಯಿ ಹಾಕಿದಳು.

"ಇದ್ದೇ ಇದೆ. ಪುಸ್ತಕ ಓದಿದಾಕ್ಷಣ ಜ್ಞಾನೋದಯವಾದೀತೇ? ಎಲ್ಲರೂ ಮಾನಸಿಕವಾಗಿ ಬುದ್ಧಿವಂತರಾಗಬೇಕು....ಇದನ್ನು ನಮ್ಮ ಜನ ಮನಗಾಣಲಿಲ್ಲ ತಂಗೀ!"

"ನನಗೇನೋ ಇದೆಲ್ಲ ಕನಸಿನಗಂಟಾಗಿ ತೋರುತ್ತಿದೆ." ಎಂದಳು ಪುಟ್ಟಮ್ಮ, ಮನದಲೆಯಲ್ಲಿ ವಿಚಾರವಾಹಿನಿಯು ಹುಚ್ಚೆದ್ದು ಹರಿಯಿತು.

ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ. ರುದ್ರಮೌನ ಸ್ವಚ್ಛಂದವಾಗಿ ರಾಜ್ಯಭಾರ ಮಾಡಿತು.

ಬಿಸಿಲಿನ ತಾಪ ಅತಿಯಾಗಿತ್ತು. ತಾಯಿತಂಗಿಯರು ಒಳಗಡೆ

ಹೋದರು. ಲಿಂಗಣ್ಣನ ನಿರೀಕ್ಷೆಯಲ್ಲಿದ್ದ ರಾಯ ಹಾಗೇ ಆಲೋಚನಾ ಮಗ್ನನಾಗಿ ಕುಳಿತುಕೊಂಡಿದ್ದ. ದೃಷ್ಟಿ ಅಂತರ್ಮುಖಿಯಾಗಿ ಗತಕಾಲದತ್ತ ಹರಿಯಿತು. ತಾನೂ ಸ್ವಾಮಿಯೂ ಶಾಲೆಯಲ್ಲಿ ಓದುತ್ತಿದ್ದಾಗಿನ ಚಿತ್ರ-ಕೈಯಲ್ಲಿ ಕಾಸಿಲ್ಲದ ಕಾಲ....ತಿಂಡಿ ತಿನಿಸುಗಳಿಗಾಗಿ ಪುಟಿಪುಟಿಯುತ್ತಿದ್ದ ಜೀವ. ಆ ದಿನ ಶಾಲೆ ಬಿಟ್ಟೊಡನೆಯೇ ಸ್ವಾಮಿಯನ್ನು ಅಂಗಡಿಗೆ ಕರೆದೊಯ್ದ. ಮಾವಿನ ಹಣ್ಣೆಂದರೆ ಇಬ್ಬರಿಗೂ ಪ್ರೀತಿ. ತಾನೇ ದುಡ್ಡು ಕೊಟ್ಟು ಒಳ್ಳೆಯ ಹಣ್ಣುಗಳೆರಡನ್ನು ಆರಿಸಿ ಗೆಳೆಯನಿಗೊಂದನ್ನು ಕೊಟ್ಟ. ಆಗ ಆದ ಆನಂದಕ್ಕೆ ಪಾರವೇ ಇರಲಿಲ್ಲ. ಸ್ವಾಮಿ ಅತ್ಯಂತ ಪ್ರೀತ್ಯಾದರಗಳಿಂದ ತೆಗೆದುಕೊಂಡ. ಬಾಯಿಯಲ್ಲಿ ನೀರೂರಿತು. ಇನ್ನೇನು ತಿನ್ನಬೇಕು. ಅಷ್ಟರಲ್ಲಿ ಪಕ್ಕದ ಅಂಗಡಿಯ ಮುಂದೆ ಗಲಾಟೆಯಾಗಲು ಹುಡುಗರಿಬ್ಬರೂ ಅಲ್ಲಿಗೆ ಹೋದರು. ಬಹಳ ನಿತ್ರಾಣಿಯಾದ ಭಿಕ್ಷುಕನೊಬ್ಬ ಕೆಳಗೆ ಬಿದ್ದಿದ್ದಾನೆ. ವ್ಯಾಪಾರಕ್ಕಾಗಿ ಬಂದ ಜನ ಅವನನ್ನು ಎತ್ತುತ್ತಿದ್ದಾರೆ. ಗಿರಾಕಿಯೊಬ್ಬ ಅಂಗಡಿಯವನನ್ನು ಕುರಿತು "ಏನಯ್ಯಾ, ನಿನಗೆ ಹೃದಯ ಇಲ್ಲವೆ? ಇಷ್ಟು ನಿತ್ರಾಣಿಯನ್ನು ಹೀಗೆ ತಳ್ಳಬಹುದೇ?" ಎಂದು ಕೇಳುತ್ತಿದ್ದಾನೆ.

"ನಿನಗೇನು ಗೊತ್ತು ಈ ಭಿಕ್ಷುಕರ ಹಾವಳಿ? ದಿನವೂ ತಿರಿದು ತಿಂದು ಕೆಲಸವಿಲ್ಲದೆ ಗಲಾಟೆ ಮಾಡುತ್ತಾರೆ...." ದನಿಯಲ್ಲಿ ಜುಗುಪ್ಸೆ ಹೊಮ್ಮಿತ್ತು.

"ಸರಿಯಪ್ಪಾ, ಅವನು ತಪ್ಪು ಮಾಡಿದನೆಂಬುದನ್ನು ಒಪ್ಪೋಣ. ನೀನು ತಪ್ಪು ಮಾಡಲಿಲ್ಲವೇ?"

"ಇಲ್ಲಿ ನಿನ್ನ ಗಲಾಟೆ ಬೇಡ; ನಿನಗಾತ ಬೇಕಿದ್ದರೆ ನಿನ್ನ ಮನೆಗೇನೇ ಕರೆದುಕೊಂಡು ಹೋಗಿ ಉಪಚರಿಸು!...." ಆತನ ಕಟೋಕ್ತಿ ಹೊರಬಿದ್ದೊಡನೆ ಉಪಚಾರ ಮಾಡಬಂದವರೂ ಹಿಂಜರಿದರು. ಬಳಿಯಲ್ಲಿ ನಿಂತಿದ್ದ ಸ್ವಾಮಿ ಎತ್ತಲಾಗದಿದ್ದರೂ ಅವನನ್ನು ಎತ್ತಿ ಕೂರಿಸಿ, ಮಾವಿನ ಹಣ್ಣನ್ನು ಕೊಟ್ಟು ತಾನು ಬರಿಗೈಯಲ್ಲಿ ಹಿಂದಿರುಗಿದ್ದ. ಕಣ್ಣಿನಲ್ಲಿ ನೀರಾಡುತ್ತಿತ್ತು. ಒಡಲ ಸಂಕಟವೆಲ್ಲ ಒಂದೇ ಮಾತಿನಲ್ಲಿ ಹೊರಬಿತ್ತು, ಪಾಪ....!

ಅದನ್ನು ನೋಡಿಯೂ ಸ್ವಾಮಿಗೆ ಹಣ್ಣು ಕೊಡದೆ ತನ್ನ ಭಾಗದ ಹಣ್ಣನ್ನು ತಾನು ತಿಂದುದು ನೆನಪಾಗಿ ನಗು ಬಂದಿತು. ಆಗ ನಾನೆಷ್ಟು ನಿರ್ದಯನಾಗಿದ್ದೆ ಎಂಬ ಯೋಚನೆಯೊಂದಿಗೆ ಮೂಡಿದ ಪ್ರಶ್ನೆ ಆ ಕಾರುಣ್ಯ

ಮೂರ್ತಿ ಇಂದು ಹೀಗೇಕಾದ? ಸತಿ ಶಿವೆಯ ಬಗ್ಗೆ ನಿಷ್ಕಾರಣವಾಗಿ ಧೂರ್ತತೆಯಿಂದ ನಡೆದುಕೊಂಡನಲ್ಲವೇ? ಹಳ್ಳಿಯ ಮುಗ್ಧೆ. ಎಷ್ಟು ಕಂಬನಿ ಕರೆದಿದ್ದಾಳೋ....ದೇವರಿಗೇ ಗೊತ್ತು. ಸ್ವಾಮಿ ಸ್ವಾಮಿತ್ವವನ್ನು ಸಾಧಿಸ ಹೋಗಿ ಹುಚ್ಚು ಪ್ರವಾಹದಲ್ಲಿ ಕೊಚ್ಚಿಹೋದ. ಅವನು ಮನಸ್ಸು ಮಾಡಿದ್ದರೆ ಬಾಳಿನಲ್ಲಿ ಸ್ವರ್ಗಸೌಖ್ಯವನ್ನು ಹೊಂದಬಹುದಾಗಿತ್ತು. ಜನ್ಮಜನ್ಮಾಂತರಗಳಿಂದ ಬೆಂಬತ್ತಿಬಂದ ಶನಿದೆಶೆ ಹಾಲಿಗೆ ಹುಳಿ ಹಿಂಡಿತು. ಅದನ್ನು ಅರಿತುಕೊಳ್ಳಲಿಲ್ಲ. ವೃಥಾ ದುಡುಕು-ಮುಂಗೋಪ. ಪ್ರಾಕಾರದ ಬಾಗಿಲು 'ಖಣಲ್' ಎಂದು ಸದ್ದು ಮಾಡಿ ಯೋಚನೆಯ ಝುರಿಗೆ ಅಡ್ಡಗಟ್ಟೆ ಹಾಕಿತು. ನೋಟ ಬಾಗಿಲ ಕಡೆ ಹರಿಯಿತು. ಲಿಂಗಣ್ಣ ರವಿಯೊಡನೆ ಒಳಗಡೆ ಬರುತ್ತಿದ್ದುದು ಕಾಣಿಸಿತು. ಮುಖದ ಮೇಲೆ ಹೊಮ್ಮಿದ ಬೆವರ ಹನಿಗಳನ್ನು ಕರವಸ್ತ್ರದಿಂದ ಒರೆಸಿಕೊಂಡು ಮುಂಬಾಗಿಲಿನವರೆಗೂ ಹೋಗಿ ಅತಿಥಿಗಳಿಗೆ ಸ್ವಾಗತ ಬಯಸಿದ. ತುಟಿಗಳಲ್ಲಿ ಮಂದಹಾಸ ಮಿನುಗಿ ಮಾಯವಾಯಿತು.

ಲಿಂಗಣ್ಣನೂ ರವಿಯೂ ಒಳಗಡೆ ಬಂದು ಕುಳಿತುಕೊಂಡರು. ರಾಯ ರವಿಯ ಪಕ್ಕದಲ್ಲಿ ಕುಳಿತು, "ರವೀ. ಇನ್ನು ಶಾಲೆ ಶುರುವಾಗಲು ಬಹಳ ದಿನಗಳಿಲ್ಲ. ರಮಾಕಾಂತನ ಅಂಗಡಿಯಲ್ಲಿ ನಿಮ್ಮೆಲ್ಲರಿಗೂ ಪುಸ್ತಕಗಳನ್ನು ಕೊಡಲು ಹೇಳಿದ್ದೇನೆ. ನಿಮಗೆ ಏನೇನು ಬರೆಯುವ ಸಾಧನ ಬೇಕೋ ತೆಗೆದುಕೊಳ್ಳಿರಿ. ಈಗ ಮಾತ್ರವಲ್ಲ ಮುಂದೆಯೂ ತೆಗೆದುಕೊಳ್ಳಿ. ನೀನು ತೆಗೆದುಕೊಂಡುದುದನ್ನು ಬರೆದಿಡು ಅಷ್ಟೆ. ನಾನವನಿಗೆ ಹಣ ಕೊಟ್ಟಾಗಿದೆ ...ಯಾವುದಕ್ಕೂ ಸಂಕೋಚಪಟ್ಟುಕೊಳ್ಳಬೇಡ. ನನ್ನನ್ನು ನಿನ್ನ ಚಿಕ್ಕಪ್ಪನೆಂದೇ ತಿಳಿ."

"ಅಷ್ಟು ಉಪಕಾರ ಮಾಡುವವರು ಯಾರಿದ್ದಾರೆ? ಈ ಕಾಲದಲ್ಲಿ ಸ್ವಂತ ಚಿಕ್ಕಪ್ಪಂದಿರೂ ಮಾಡುವುದಿಲ್ಲ," ಎಂದು ಲಿಂಗಣ್ಣ ಕೃತಜ್ಞತೆಯನ್ನು ಸೂಚಿಸಿದ. ರವಿ ಮಾತಾಡಲಿಲ್ಲ. ಎದೆಯಾಳದಲ್ಲಿ ದುಃಖದ ಕಡಲು ಒಂದೇ ಬಾರಿಗೆ ಹೊಮ್ಮಲು ಕ್ರೋಢೀಕರಿಸುತ್ತಿತ್ತು. ಕಣ್ಣುಗಳಂಚಿನಲ್ಲಿ ಫಳಫಳನೆ ಹೊಳೆಯುವ ಕಂಬನಿ ಬೆಳ್ಳಿಯ ಝುರಿಯಂತೆ ಹರಿದಾಡುತ್ತಿತ್ತು.

"ಧೈರ್ಯಂ ಸರ್ವತ್ರ ಸಾಧನಂ, ನೀನು ಧೈರ್ಯದಿಂದ ಇದ್ದರೇನೇ ಸಾಧನೆ ಸುಲಭ. ಅಂದೇ ಪತ್ರಿಕೆಯ ಏಜಂಟರೊಡನೆ ಮಾತಾಡಿದ್ದೇನೆ, ನಿನಗೆ

ಕೆಲಸ ಕೊಡಿಸುವುದಾಗಿ ಹೇಳಿದ್ದಾರೆ. ಪತ್ರಿಕೆ ಹಂಚುವುದು ಒಂದೆರಡು ಗಂಟೆಯ ಕೆಲಸ. ಹೊತ್ತಿಗೆ ಮುಂಚೆ ಎದ್ದರೆ ಬೇಗನೆ ಕೆಲಸ ಮುಗಿಯುತ್ತದೆ. ಓದಿಗೂ ತೊಂದರೆಯಾಗುವುದಿಲ್ಲ. ಗಳಿಕೆಯೂ ಆಗುತ್ತದೆ,

"ನಿಮ್ಮ ಉಪಕಾರಕ್ಕೆ ನಾನು ಎಂದೆಂದೂ ಋಣಿ."

"ಆ ಮಾತೇಕೆ? ... ಸಂಕೋಚ ಬೇಡವೇ ಬೇಡ."

"ನಾನು ಊರಿಗೆ ನಾಲ್ಕಾರು ದಿನಗಳಲ್ಲಿ ಹೊರಡುತ್ತೇನೆ. ಹೋಗುವ ಮುನ್ನ ನಿಮ್ಮನ್ನು ನೋಡಿ ಹೋಗೋಣವೆಂದು ಮನಸ್ಸಿತ್ತು. ನೀವು ಬರ ಹೇಳಿದುದರಿಂದ ಇಂದೇ ಬಂದೆ, ಇದುವರೆವಿಗೂ ನಿಮ್ಮ ತಾಯಿ ಶಿವೆಯನ್ನು ವಿಚಾರಿಸಿಕೊಂಡಿದ್ದಾರೆ, ಮುಂದೆಯೂ ಸಹಕರಿಸಿ ಎಂದು ಹೇಳಿಕೊಳ್ಳ ಬೇಕಿಲ್ಲ. ಆದರೂ ಕೈಮುಗಿದು ಕೇಳಿಕೊಳ್ಳುವೆ ... ತಬ್ಬಲಿ ಮಗಳು ... ಅನಾಥ ಮಕ್ಕಳು ..."

"ನೀವೇನೂ ಯೋಚಿಸಬೇಡಿ. ನಮ್ಮ ಸಹಕಾರಕ್ಕೇನೂ ಕೊರತೆ ಬೀಳುವುದಿಲ್ಲ."

"ನಮ್ಮಿಂದ ಎಲ್ಲರಿಗೂ ತೊಂದರೆಯಾಯಿತು." ರವಿ ನುಡಿಯಲಾರದೆ ನುಡಿದ.

"ನೀನು ಎಂದೆಂದೂ ಅಧೀರನಾಗಬೇಡ. ನಿನಗೆ ಉಜ್ವಲ ಭವಿಷ್ಯವಿದೆ. ನೀನು ಮೇಧಾವಿಯಾಗುವೆ. ಮುಖ್ಯವಾಗಿ ಕಷ್ಟಪಡಬೇಕು."

ಆ ಕಾಣದ-ಕೇಳದ ಉಜ್ವಲ ಭವಿಷ್ಯ ಎಳೆಯ ಮನವನ್ನು ಸೂಜಿಗಲ್ಲಿನಂತೆ ಸೆರೆಹಿಡಿಯಿತು, ನಿಮ್ಮ ಆಶೀರ್ವಾಣಿ ಫಲಿಸಲಿ ಎಂದು ಮನದಲ್ಲಿಯೇ ಪ್ರಾರ್ಥಿಸಿಕೊಂಡ. ಕಿವಿಯಲ್ಲಿ ಅದೇ ನುಡಿ ಮತ್ತೆ ಮತ್ತೆ ಝೇಂಕರಿಸುತಿತ್ತು. ಆದರೆ ನಾನಷ್ಟು ಅರ್ಹನೆ ಎಂಬ ಯೋಚನೆ ಸಹ ಮನದ ಕಿಂಡಿಯಲ್ಲಿ ತಲೆ ಹಾಕುತ್ತದೆ. ಅದೇನೇ ಇರಲಿ. ಆ ಕಂಡರಿಯದ ಉಜ್ವಲ ಭವಿಷ್ಯಕ್ಕಾಗಿ ಹೃದಯ ಹಾತೊರೆಯಿತು. ಮಂತ್ರಮುಗ್ಧನಂತೆ ಸುಮ್ಮನೆ ಕುಳಿತ. ಹಾಗೇ ಒಂದೆರಡು ಗಳಿಗೆ ಉರುಳಿದುವೇನೋ ... ಮಾಧವರಾಯ ಮತ್ತೆ ಬೆನ್ನಿನ ಮೇಲೆ ಕೈಯಾಡಿಸುತ್ತ ನುಡಿದ.

"ರವೀ, ನಿಮ್ಮನ್ನೆಲ್ಲ ಅಗಲಿ ಎಷ್ಟು ದಿನ ಸ್ವಾಮಿ ದೂರವಿದ್ದಾನು? ಎಂದಾದರೊಮ್ಮೆ ಆಸೆ ಮೂಡಿ ಓಡಿ ಬರುತ್ತಾನೆ ... ಯೋಚಿಸಬೇಡ. ಈ

ಕಷ್ಟ ಪರಂಪರೆಗಳು ಎಲ್ಲರ ಬಾಳಿನಲ್ಲೂ ಬರುತ್ತವೆ, ಅವುಗಳ ಗಡುವನ್ನು ದಾಟಿದರೆ ತೆರೆಯುವುದು ಸುಖದ ಬಾಗಿಲು. ಕಾವ ಈಶನಿರುವಾಗ ಚಿಂತೆ ಮಾಡುವುದೇಕೆ? ಈಗ ದುಡಿಯುವುದು-ಕಲಿಯುವುದು ನಿನ್ನ ಗುರಿ.ಅದರಲ್ಲಿ ಕರ್ತವ್ಯಚ್ಯುತಿಯಾಗಬಾರದು ತಿಳಿಯಿತೇ?"

"ಹ್ಞೂ." ಎಂಬಂತೆ ತಲೆಯಲುಗಿಸಿದ; ಮಾತಾಡಲಿಲ್ಲ.

"ಲಿಂಗಣ್ಣನವರೇ, ನಾನು ಇದುವರೆಗೆ ಸ್ವಾಮಿಗಾಗಿ ಪಟ್ಟ ಪ್ರಯತ್ನ ವೆಲ್ಲ ವ್ಯರ್ಥವಾದಂತಾಯಿತು. ಇನ್ನೆರಡು ತಿಂಗಳ ಕಾಲ ಸ್ವಾಮಿ ಬದಲಿಗೆ ಬೇರೆ ನೇಮಕ ಮಾಡುವುದಿಲ್ಲವಾಗಿ ಬಾಬೂಜಿ ಹೇಳಿದ್ದಾರೆ. ಅಷ್ಟರೊಳಗಾಗಿ ಬಂದರೆ ಕೆಲಸ ಉಳಿಯುತ್ತದೆ ...ಬಾಬೂಜಿ ಇವನ ಕೆಲಸಕಾರ್ಯಗಳನ್ನು ಬಹಳ ಮೆಚ್ಚಿಕೊಂಡಿದ್ದರು. ಮೇಲಾಗಿ ಸತ್ಯಸಂಧನೆಂದು ಗೌರವವೂ ಇತ್ತು. ಎಲ್ಲಾ ಸರಿಯಾಗಿದ್ದು ಹೀಗಾದುದು ಆಶ್ಚರ್ಯವೇ ಸರಿ. ಬಾಬೂಜಿ ಆರೋಗ್ಯವಿಲ್ಲದೆ ಬೊಂಬಾಯಿಗೆ ಹೋಗಿದ್ದಾರೆ. ಈಗ ವ್ಯವಹಾರವೆಲ್ಲ ಚಿಕ್ಕ ಬಾಬೂಜಿಗೆ ಸೇರಿದೆ. ಇವನಿಗೆ ಅನುಭವ ಸಾಲದು ಏನು ಮಾಡುತ್ತಾನೋ ಹೇಳುವುದು ಕಷ್ಟ."

ಅಷ್ಟರಲ್ಲಿ ಶಾರದೆಯೂ ಪುಟ್ಟಮ್ಮನೂ ಬಿಸಿಬಿಸಿ ಚಹದೊಡನೆ ತಿಂಡಿ ತಿನಿಸುಗಳನ್ನು ತಂದು ಮುಂದಿಟ್ಟರು. ಲಿಂಗಣ್ಣ ಸಂಕೋಚಪಟ್ಟುಕೊಂಡರೂ ಕೇಳಲಿಲ್ಲ. ಚಹ ಮುಗಿದ ನಂತರ ಲಿಂಗಣ್ಣ ವಂದನೆಯನ್ನರ್ಪಿಸಿ ಅಲ್ಲಿಂದ ಹೊರಡಲನುವಾದ; ಮುಖದಲ್ಲಿ ಸಮಾಧಾನದ ಗೆಲುವಿತ್ತು. ಪುಟ್ಟಮ್ಮ ರವಿಯ ಗಲ್ಲವನ್ನು ಮುದ್ದಿಸಿ ಹೇಳಿದಳು "ಇನ್ನು ನಿನ್ನಿಂದಲೇ ಬಾಳು ಬೆಳಗ ಬೇಕು. ಶಿವೆಯ ಮನಸ್ಸು ನೋಯದಂತೆ ನಡೆದುಕೊ, 'ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ' ಎಂಬ ನಾಣ್ಣುಡಿ ಸುಮ್ಮನೆ ಹುಟ್ಟ ಲಿಲ್ಲ; ಅದು ಅಕ್ಷರಶಃ ಸತ್ಯ. ತಾಯಿ ಹೇಳಿದಂತೆಯೇ ಕೇಳು. ಹಿರಿಯನಾದ ನೀನು ಬುದ್ಧಿವಂತನಾದರೆ ಮಿಕ್ಕವರು ತಾವಾಗಿಯೇ ನಿನ್ನ ದಾರಿಯನ್ನು ಅನುಸರಿಸುತ್ತಾರೆ, ತಿಳಿಯಿತೇ?" ಎದೆಯಾಳದಿಂದ ಹರಿದು ಬಂದ ದನಿಯಲ್ಲಿ ತಾಯ್ತನ ತುಂಬಿ ತುಳುಕುತ್ತಿತ್ತು.

"ನಿಮ್ಮ ಆಶ್ರಯ ಮತ್ತು ಆಶೀರ್ವಾದಗಳಿಂದ ಗೆದ್ದು ಬರುವೆನೆಂಬ ಧೈರ್ಯವಿದೆ." ಎಂದ ರವಿ. ಎಳೆಯ ಮುಖದಲ್ಲಿ ನಸು ಲಜ್ಜೆಯ ರಂಗೊರೆ

ಯಿತು.

ಇಬ್ಬರೂ ಹೊರಟರು. ರಾಯ ತಲೆಬಾಗಿಲವರೆಗೂ ಹೋಗಿ ಬೀಳ್ಕೊಟ್ಟ.

ರವಿಯ ಹಾವ-ಭಾವ ಗುಣ-ರೂಪುಗಳಿಗೆ ಮನಸೋತು, ಕಣ್ಮರೆಯಾಗುವವರೆಗೂ ನೋಡುತ್ತಿದ್ದು "ಚಿನ್ನದಂತಹ ಹುಡುಗ. ಶಿವೆ ಭಾಗ್ಯಶಾಲಿಯಾದುದರಿಂದ ಇಂತಹ ಮಗನನ್ನು ಹೆತ್ತಿದ್ದಾಳೆ. ಭಗವಂತನ ಕೃಪೆಯಿಂದ ನನಗೂ ಅಂತಹ ಮೊಮ್ಮಗ ಲಭಿಸಿದರೆ ಸಾಕು," ಎಂದುಕೊಂಡಳು. ಗೋಡೆಯ ಮೇಲಿನ ಹಲ್ಲಿಯೊಂದು ತಕ್ಷಣ ಲೊಚಗುಟ್ಟಿತು. "ಒಳ್ಳೆಯ ಶಕುನ. ದೇವರೇ, ನಡೆಸಿಕೊಡು." ಎಂದು ತನ್ನಲ್ಲಿಯೇ ಪ್ರಾರ್ಥಿಸಿಕೊಂಡಳು ಮನದಾಳದ ಹಿರಿಯಾಸೆ ಗರಿಗೂಡಿಗೊಂಡಿತು.

ಮಟ ಮಟ ಮಧ್ಯಾಹ್ನ. ನೆತ್ತಿಯ ಮೇಲೆ ಸುಡುಬಿಸಿಲು ಉರಿಯು ತ್ತಿತ್ತು.

ಕಲ್ಲು ಮರಳು ಚೆಲ್ಲಿದ ಅಂಗಳ ಕಡಲ ತಡಿಯಂತೆ ಕಾದು ಹೆಜ್ಜೆಗಳು ಸುಡುತ್ತಿದ್ದುವು. ಮೇಲಾಗಿ ಹೊಟ್ಟೆಯಲ್ಲಿ ಕಾಡುವ ಹಸಿವು. ಕೊನೆಯ ದಿನವಾದುದರಿಂದ ಎಷ್ಟೇ ಹೊತ್ತಾದರೂ ಹಿಡಿದ ಕೆಲಸವನ್ನು ಮುಗಿಸಿಯೇ ತೀರಬೇಕೆಂಬ ಉತ್ಕಟೇಚ್ಛೆ. ಶಿವೆ ಐವರು ಮಕ್ಕಳೊಂದಿಗೆ ಸ್ವಚ್ಛತೆಯ ಕಾರ್ಯ ಕೈಗೊಂಡಿದ್ದಳು. ರವಿ ಶ್ಯಾಮು ಗುದ್ದಲಿ ಹಿಡಿದಿದ್ದಾರೆ. ಉಳಿ ದವರು ಬುಟ್ಟಿಯಲ್ಲಿ ಸಾಗಿಸುತ್ತಿದ್ದಾರೆ. ತಾವೇ ಕಟ್ಟಿದ್ದೇವೆ ಎಂಬ ಹೆಮ್ಮೆ. ಮಾಡಿ ಮುಗಿಸುವ ಹುರುಪು. ಅಂತೂ ಬಹಳ ಹೊತ್ತಿನವರೆಗೂ ಕೆಲಸ ಸಾಗಿತು. ಶಿವೆ ಮಕ್ಕಳ ಉತ್ಸಾಹವನ್ನು ನೋಡಿ ಮನದಲ್ಲಿಯೇ ಆನಂದ ಪಟ್ಟಳು. ಲಿಂಗಣ್ಣ ಊಟ ಮಾಡಿ ಹಾಸಿಗೆಯ ಮೇಲೆ ಅಡ್ಡಾಗಿದ್ದ.

ಕೆಲಸವನ್ನು ಮುಗಿಸಿದ ಮಕ್ಕಳು ಮಹಾಸಮುದ್ರವನ್ನು ಲಂಘಿಸಿದ ಹನುಮನಂತೆ ಕುಣಿಕುಣಿದಾಡಿದರು. ಸರಸು ಮಣ್ಣೆತ್ತುವ ಕುಕ್ಕೆಯನ್ನು ಕೊಡವಿ "ನೀವೇನು ಮಾಡಿದ್ದೀರಿ ಮಹಾ! ನಾನು ಅಮ್ಮನಿಗೆ ಎಲ್ಲಾ ಬಗೆ ಯಲ್ಲೂ ಸಹಾಯಕಳಾಗಿದ್ದೇನೆ. ಅಡುಗೆಯಿಂದ ಹಿಡಿದು ಮನೆ ಕಟ್ಟಾಣಿಕೆ ಯವರೆವಿಗೂ ಸಹಾಯ ಮಾಡಿರುವೆ" ಎಂದು ಹೆಮ್ಮೆಯಿಂದ ಹೇಳಿದಳು. ಮುಖ ಹೂವಿನಂತೆ ಅರಳಿತು.

"ನಾನೂ ನಿನ್ನಷ್ಟೇ ಮಾಡಿದ್ದೇನೆ! ನಾನೇನು ಕಡಿಮೆ?" ಸವಾಲು ಹಾಕಿದಳು ವಿಮಲೆ.

"ನೀವು ಮಾಡಿರುವುದೆಲ್ಲಾ ಸಣ್ಣ ಪುಟ್ಟ ಕೆಲಸ. ನಾನು ದೊಡ್ಡ ದೊಡ್ಡ ಕಲ್ಲನ್ನೆತ್ತಿದ್ದೇನೆ. ಬೇಕಾದರೆ ಅಮ್ಮನನ್ನೇ ಕೇಳು." ಎಂದ ಶ್ಯಾಮು.

"ಶ್ಯಾಮೂ, ಬೇಕಾದರೆ ಅಮ್ಮನನ್ನು ಕೇಳು; ನಾನೇ ಜಾಸ್ತಿ ಮಾಡಿದ್ದು!"

"ಸರಸೂ, ಹಾಗಾದರೆ ನಾನು ಮಾಡಲಿಲ್ಲವೋ!"

"ನೀನೆಷ್ಟು ಮಾಡಿದ್ದರೂ ಅದಕ್ಕಿಂತ ನಂದೇ ಹೆಚ್ಚು!"

"ಅದು ಹೇಗೆ?"

"ನೀವು ಹೊರಗಡೆಯ ಕೆಲಸ ಮಾತ್ರ ಮಾಡಿದ್ದೀರಿ. ನಾನು ಎಲ್ಲ ಕಡೆಯೂ ಮಾಡಿದ್ದೇನೆ. ನೀವೆಲ್ಲರೂ ಕೂಡಿ ನನಗೆ ಒಳ್ಳೆಯ ಬಹುಮಾನ ಕೊಡಬೇಕು!" ಉತ್ಸಾಹದಿಂದ ಹೇಳಿದಳು ಸರಸು.

"ಉಹೂ, ಅದೆಲ್ಲಾ ಆಗೋಲ್ಲ. ಕೊಡುವುದಾದರೆ ಎಲ್ಲರಿಗೂ ಕೊಡಬೇಕು. ನಿನಗೊಬ್ಬಳಿಗೇ ಹೇಗೆ ಬಂದೀತು?" ನಗು ಮುಖದಿಂದ ಸವಾಲು ಹಾಕಿದ ಗೋಪಿ. ಶಿವೆ ಮತ್ತು ರವಿ ಮಕ್ಕಳ ಮಾತುಕತೆಗಳನ್ನು ನಗುತ್ತ ಕೇಳುತ್ತಿದ್ದರು.

"ನಾನೂ ಅಷ್ಟೆ. ಸರಸು ಮಾಡಿದಷ್ಟೇ ಮಾಡಿದ್ದೇನೆ. ಕೈಯೆಲ್ಲಾ ಎಷ್ಟು ನೋಯುತ್ತೆ ಗೊತ್ತೋ?" ಅಷ್ಟೇ ಉತ್ಸಾಹದಿಂದ ನುಡಿದಳು ವಿಮಲೆ.

"ಅಯ್ಯೋ, ನೀನು ಮಾಡಿದ್ದರೆ ಎಷ್ಟು ಮಾಡಿರಬಹುದು? ಪುಟ್ಟ ಕೈಯಿಂದ ಒಂದು ಬೊಗಸೆ ಮಣ್ಣೆತ್ತುವುದೂ ಕಷ್ಟವೇ, ದಿನಕ್ಕೆಲ್ಲಾ ನಾಲ್ಕು ಬುಟ್ಟಿ ಮಣ್ಣೆತ್ತಿದರೆ ಹೆಚ್ಚು! ಅಷ್ಟನ್ನೇ ದೊಡ್ಡದು ಮಾಡುತಿದ್ದೀ" ಶ್ಯಾಮು ವಿಮಲೆಯನ್ನು ಮೂದಲಿಸಿದ.

"ನೀನೇನು ಮಹಾ ದೊಡ್ಡವನೋ? ನೀನೂ ನನ್ನಷ್ಟೇ ಎತ್ತರ ಇರೋದು! ಹಾಗಿದ್ದರೆ ನೀನೂ ಏನೂ ಮಾಡಲಿಲ್ಲವೆಂದಾಯ್ತು!"

"ಓ! ವಿಮಲೂ, ನಿನಗಿಂತ ಐದು ವರ್ಷ ದೊಡ್ಡವನು ನಾನು! ನಿನಗಿಂತ ಎಷ್ಟೊಂದು ಎತ್ತರವಿದ್ದೇನೆ! ಆದರೂ ನೀನು ....?"

"ಎಲ್ಲರೂ ನಿಮ್ಮ ನಿಮ್ಮ ಶಕ್ತ್ಯಾನುಸಾರ ಕೆಲಸ ಮಾಡಿದ್ದೀರಿ. ಯಾರೂ ಹೆಚ್ಚಲ್ಲ; ಯಾರೂ ಕಡಿಮೆಯಲ್ಲ." ನಗುತ್ತಾ ರವಿ ನಡುವೆ ಬಾಯಿ ಹಾಕಿದ.

"ರವೀ, ನಿನ್ನಷ್ಟೇ ನಾನು ಮಾಡಿದ್ದೇನೆ ಅಲ್ಲವೆ?" ಗೋಪಿ ಕೇಳಿದ.

ಮಾತು ಕೇಳಿ ಎಲ್ಲರೂ ನಕ್ಕು ಬಿಟ್ಟರು. ಗೋಪಿಗೆ ಅದೇಕೆಂದು ಅರ್ಥವಾಗದೆ ಅಚ್ಚರಿಯುಂಟಾಯಿತು. ಆಗ ಸರಸು "ನಿನ್ನ ಪುಟ್ಟ ಕೈಯಲ್ಲಿ

ಅಷ್ಟು ಕೆಲಸ ಮಾಡಲಾದೀತೆ? ನೀನು ರವಿಗೆ ಸಮನಾಗಿ ಮಾಡುವುದಾದರೂ ಹೇಗೆ?" ಎಂದಳು ಮುಗುಳು ನಗುತ್ತ,

ಗೋಪಿಯು ಗಲ್ಲವನ್ನು ಮುದ್ದಿಸಿ ರವಿ ಹೇಳಿದ "ನೀನು ತುಂಬ ಕೆಲಸ ಮಾಡಿದ್ದಿ. ಎಲ್ಲರೂ ನಕ್ಕದ್ದು ತಮಾಷೆಗಾಗಿ, ನೀನೇನೂ ಯೋಚಿಸಬೇಡ."

"ಹೌದು ಮಗೂ." ಎಂದಳು ಶಿವೆ.

"ನಾನು?" ಕೇಳಿದಳು ವಿಮಲೆ. ಕಣ್ಣುಗಳಲ್ಲಿ ತವಕ ಮಿಂಚುತ್ತಿತ್ತು.

"ನೀನೂ ಕೂಡ." ಎನ್ನುತ್ತ ತಂಗಿಯನ್ನು ಮುದ್ದಿಟ್ಟ ರವಿ.

ಮೈತೊಳೆದುಕೊಂಡು ಮಕ್ಕಳು ಊಟ ಮುಗಿಸಿದಾಗ ಹೊತ್ತು ಮೀರಿತ್ತು. ಶಿವೆ ಅಲ್ಲಿದ್ದ ಚಾಪೆಯ ಮೇಲೆ ಉರುಳಿಕೊಂಡಳು. ದಣಿದ ಮೈ ವಿಶ್ರಾಂತಿಯನ್ನು ಬಯಸಿತ್ತು. ಮಕ್ಕಳೆಲ್ಲರೂ ಸುತ್ತಮುತ್ತ ಕುಳಿತುಕೊಂಡರು

"ರವೀ, ಕೊಂಚ ಹಣ ಕಡಿಮೆ ಬಿದ್ದಿದೆಯೆಂದು ಅಪ್ಪ ಹೇಳುತ್ತಾರೆ. 'ಸಾಲ ತರುವುದೇ?' ಎಂದು ಕೇಳಿದರು. ಸಾಲತರುವುದು ನನಗಿನಿತೂ ಇಷ್ಟ ವಿಲ್ಲ. ಏನು ಮಾಡುವುದೆಂದು ಯೋಚನೆಯಾಗಿದೆ. ನಮ್ಮ ದೌರ್ಭಾಗ್ಯಕೆ. ಹಣವನ್ನು ಮುಂಗಡವಾಗಿ ಕೊಟ್ಟು ಬಾಡಿಗೆಗೆ ಬರುವವರೂ ಸಿಕ್ಕಲಿಲ್ಲ." ಎಂದಾಗ ಮನದಲ್ಲಿನ ಚಿಂತೆ ಮುಖದಲ್ಲಿ ಮುದ್ರೆಯೊತ್ತಿತು.

"ಕೈಯಲ್ಲಿ ಹಣವಿಲ್ಲದಿರುವಾಗ ಸಾಲವೆತ್ತಬಾರದೆಂದರೆ ಹೇಗೆ?"

"ಅದನ್ನೇ ಕುರಿತು ಚಿಂತಿಸುವುದಾಗಿದೆ."

"ಮನೆಯಲ್ಲಿ ಮಾರುವಂತಹ ವಸ್ತು ಇನ್ನಾವುದೂ ಇಲ್ಲ. ಸಾಲ ಮಾಡದೆ ಬೇರೆ ಉಪಾಯವಿಲ್ಲವೆಂದು ತೋರುತ್ತದೆ."

"ಶಿವ, ಶಿವಾ! ಆ ಮಾತು ಹೇಳಬೇಡ ರವಿ. ಸಾಲಗಾರರು ಸುಮ್ಮನೆ ಸಾಲ ಕೊಡುವುದಿಲ್ಲ. ನಾಳೆ ಸಾಲವೇ ಶೂಲವಾದೀತು. ಅಪ್ಪ ಈಗಾಗಲೇ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅವರ ಸ್ಥಿತಿಯೂ ಅಷ್ಟು ಉತ್ತಮವಾಗಿಲ್ಲ. ಚಿಕ್ಕಮನಿಗೂ ನಾಲ್ಕೈದು ಮಕ್ಕಳು. ಅವರ ಜೀವನವೂ ಸಾಗಬೇಕು. ನಮ್ಮಿಂದ ತೊಂದರೆಯಾಗಬಾರದು. ಬರುವ ಬಾಡಿಗೆಯಲ್ಲಿ ಕಾಸು ಉಳಿಸಿ ಎಂದಾದರೂ ನಾವು ಹಣವನ್ನು ಹಿಂದಿರುಗಿಸಲೇಬೇಕು ಅಷ್ಟಲ್ಲದೆ ಇನ್ನೂ ಸಾಲ ಮಾಡುತ್ತಾ ಹೋದರೆ ಹೇಗೆ?"

ರವಿ ಮಾತಾಡಲಿಲ್ಲ; ಹಾಗೇ ಕುಳಿತುಕೊಂಡ. ಶಿವೆ ಚಿಂತಾಕ್ರಾಂತ

ಳಾದಳು. ಬಾಡಿಗಯು ಹಣ ಕೈಗೆ ಬರುವತನಕ ಏನು ಮಾಡುವುದೆಂಬ ಯೋಚನೆ ತಲೆಯಲ್ಲಿ ನರ್ತಿಸತೊಡಗಿತು. ಆರು ಮಂದಿಯ ಜೀವನ ಬರುವ ಅಲ್ಪ ಬಾಡಿಗೆಯಿಂದ ನಡೆಯುವುದು ಸಾಧ್ಯವಿಲ್ಲ. ಜೊತೆಗೆ ಏನಾದರೊಂದು ಉದ್ಯೋಗವಿದ್ದರೆ ಅನುಕೂಲವಿತ್ತು ಎಂಬ ಯೋಚನೆ ಬಂತು, ಆದರೆ ಹೇಗೆ? ಎಂಬ ಪ್ರಶ್ನೆಯೂ ಒಂದಿಗೇನೇ ತಲೆಯೆತ್ತಿತು.

"ಇನ್ನೇಕೆ ಯೋಚನೆ? ಸರಾಸರಿ ಎಪ್ಪತ್ತು ರೂಪಾಯಿ ಬಾಡಿಗೆ ಬರುವಂತಾಯಿತು. ಹಾಲಿನಿಂದ ಹಣ ಬರುತ್ತೆ. ಅಲ್ಲದೆ ಮುಂದಿನ ತಿಂಗಳಿನಿಂದ ನನ್ನ ಸಂಬಳವೂ ಬರುತ್ತದೆ. ಪುಸ್ತಕ ಕೊಳ್ಳುವ ಯೋಚನೆಯಿಲ್ಲ: ಹೇಗಾದರೂ ದಿನಗಳೆಯಬಹುದು.ನೀವು ಯೋಚನೆ ಮಾಡಬೇಡಿರಿ,ಬೇಕಾದರೆಡ್ವೈರಿಯವರನ್ನೇ ಹಣ ಮುಂಗಡವಾಗಿ ಕೇಳಬಹುದು" ರವಿಸಮಾಧಾನ ಹೇಳಿದ.

"ಅದು ಸಾಧ್ಯವಿಲ್ಲ. ರವೀ. ನಿನಗದು ತಿಳಿಯದು." ತಲೆಯಲ್ಲಾಡಿಸುತ್ತಾ ನುಡಿದಳು ಶಿವೆ "ಸಾಲದ ಸೊಲ್ಲೇ ಎತ್ತಬೇಡ. ಅದು ಎಂದೆಂದೂ ಅಪಾಯ,"

"ಲಿಂಗಣ್ಣ ಎಚ್ಚತ್ತು ಹೊರಬಂದಾಗ ಮೌನವಾಗಿ ಕುಳಿತಿದ್ದ. ಸಂಸಾರ ಸಮೂಹವನ್ನು ಕಂಡೊಡನೆಯೇ "ಏನೋ, ಗಹನವಾದ ವಿಚಾರ ನಡೆದಂತಿದೆ; ಏನು ಸಮಾಚಾರ?" ಎಂದ.

"ಏನೂ ಇಲ್ಲ," ಎಂದನ್ನುತ್ತಾ ಶಿವೆ ಎದ್ದು ಕುಳಿತುಕೊಂಡಳು. ಮುಖಮಂಡಲ ಚಿಂತೆಯ ಛಾಯೆಯಿಂದ ಕೂಡಿತ್ತು. ಅದನ್ನು ತೋರಗೊಡದೆ ಅಲ್ಲಿಂದೆದ್ದು ಒಳಗಡೆ ಹೋಗಿ ಲಿಂಗಣ್ಣನಿಗೆ ಕಾಫಿಯನ್ನು ಮಾಡಿ ತಂದಿತ್ತಳು. ಆಗ ಸಂಜೆಗೆಂಪು ಎಲ್ಲೆಲ್ಲೂ ಹರಡತೊಡಗಿತ್ತು. ಲಿಂಗಣ್ಣ ಖಾಲಿ ಲೋಟವನ್ನು ಶಿವೆಯ ಕೈಗಿಟ್ಟು ಹೊರಬಂದ. ಹಿಂದೆಯೇ ಶಿವೆಯೂ ಬಂದಳು. ಬಹುದಿನಗಳಿಂದ ಕಲ್ಲುಮಣ್ಣುಗಳಿಂದ ಕೂಡಿದ್ದ ಅಂಗಳವು ಸ್ವಚ್ಛವಾಗಿತ್ತು. ಹೊಸ ಅಂಗಡಿಗಳು ಅಂದವಾಗಿ ತಲೆಯೆತ್ತಿ ನಿಂತಿದ್ದುವು.

ಎಲ್ಲೆಲ್ಲೂ ಸಂಜೆಯ ಸೊಂಪು ಹರಡಿತ್ತು. ಬಿತ್ತರದ ಬಾಂದಳದಲ್ಲಿ ಬೆಳ್ಮುಗಿಲುಗಳು ಅಲೆಅಲೆಯಾಗಿ ಹಬ್ಬಿ ನಾನಾ ರೂಪುರೇಷೆಗಳನ್ನು ನೇಯ್ದಿದ್ದವೆ. ತಂಬೆರಲು ಒಯ್ಯೊಯ್ಯನೆ ತೀಡಿ ಪುಷ್ಪ ಸುಗಂಧವನ್ನು ನಾಸಿಕಾಗ್ರಕ್ಕೆ ಪೂಸುತ್ತಿತ್ತು. ಆಗ ಅದೇ ಸಮಯದಲ್ಲಿ ಎಲ್ಲಿಂದೆಲ್ಲಿಗೋ ವಲಸೆ

ಹೋಗುತ್ತಿದ್ದ ಬೆಳಕ್ಕಿಗಳ ಬೃಹತ್ತಾದ ಹಿಂಡು ಅಂಬರದಲ್ಲಿ ಗುಂಪಾಗಿ ಹಾರುತ್ತಿದ್ದುದು ದೃಗ್ಗೋಚರಿಸಿತು. ಮಕ್ಕಳು ಆನಂದತುಂದಿಲರಾಗಿ ಕೇಕೆ ಹಾಕಿದರು "ಬೆಳ್ಳಕ್ಕಿ ! ಬೆಳ್ಳಕ್ಕಿ !"

ವಿಮಲೆ ತಾಯಿಯ ಕೈಯನ್ನು ಜಗ್ಗಿ ಮನಮೋಹಕ ದನಿಯಲ್ಲಿ ನುಡಿದಳು. "ನೋಡಿದಿರಾ?"

ಅವಳ ಹೊಳೆ ಹೊಳೆಯುವ ಸುಂದರ ಕಣ್ಣುಗಳಲ್ಲಿ ಅಮಾಯಕತೆಯ ಮಿಂಚು ತುಂಬಿಹೋಗಿತ್ತು.

ಶಿವೆ ಕತ್ತೆತ್ತಿ ನೋಡಿದಳು, ಅಂಬರದಲ್ಲಿ ಮಲ್ಲಿಗೆಯ ಹೂವೆರಚಿದಂತೆ ಸುರಮ್ಯ ಚಿತ್ತಾರ....ಮೇಲಾಗಿ ಮಕ್ಕಳ ಉತ್ಸಾಹಪೂರ್ಣ ಸಂತಸ....ತಲೆಯಲ್ಲಿ ತುಂಬಿಕೊಂಡಿದ್ದ ನೂರು ಚಿಂತೆಗಳೆಲ್ಲ ಎಲ್ಲಿ ಹೋದುವೋ,ಬಗೆ ಅರಳಿ ಮುಖ ಪ್ರಸನ್ನವಾಯಿತು. ನೋಡು ನೋಡುತ್ತಾ ಮರವಟ್ಟು ನಿಂತಂತೆಯೇ ....ಎಲ್ಲರ ಪುಳಕಿತ ತನುಮನಗಳಿಗೆ ಹಬ್ಬವನ್ನುಣಿಸಿ ಒಂದು ಗಳಿಗೆಯೊಳಗಾಗಿ ದೂರದಿಗಂತದಲ್ಲಿ ಕಣ್ಮರೆಯಾದವು-ಅವು.

"ಬಲು ರಮ್ಯವಾದ ನೋಟ." ಎಂದುಕೊಂಡಳು ಶಿವೆ.

"ಮನೋಹರ ದೃಶ್ಯ. !" ಎಂದ ರವಿ.

"ಹಣಕ್ಕಾಗಿ ಏನು ಮಾಡುವುದು? ಕೆಲಸಗಾರರಿಗೆ ನೂರಹತ್ತು ರೂಪಾಯಿಗಳನ್ನು ಬೆಳಿಗ್ಗೆ ಕೊಡುವುದಾಗಿ ಹೇಳಿದ್ದೇನೆ." ಮರು ನಿಮಿಷವೇ ಈ ಪ್ರಶ್ನೆ ಏಳಬೇಕೆ? ಒಮ್ಮೆಲೇ ಶಿವೆಯ ಮುಖ ಮುದುಡಿಕೊಂಡಿತು.

ಲಿಂಗಣ್ಣ ಉತ್ತರಕ್ಕಾಗಿ ಕಾದಿದ್ದ.

"ನಾನೊಂದು ನಿರ್ಧಾರಕ್ಕೆ ಬಂದಿರುವೆ....ಆದರೆ ಅದು ಮಕ್ಕಳಿಗೂ ನನಗೂ ದುಃಖ ತರುವಂತಾದ್ದು ...ಅದನ್ನುಳಿದು ಬೇರೆ ಮಾರ್ಗವೇ ಇಲ್ಲ." ಎಂದ ಶಿವೆಯ ದನಿ ದುಗುಡದಿಂದ ಕೂಡಿತ್ತು.

"ಏನು?" ರವಿ ತವಕದಿಂದ ಕೇಳಿದ. ಚಿಕ್ಕವರು ರವಿಯ ಪ್ರಶ್ನೆಗೆ ಏನುತ್ತರ ಬರುವುದೋ ಎಂದು ಆಸಕ್ತಿಯಿಂದ ಎದುರು ನೋಡಿದರು.ತುಸು ತಡೆದು ಹೇಳಿದಳು ಶಿವೆ" "ಕರುವನ್ನು ಮಾರುವೆ."

"ಅಯ್ಯೋ, ಏಕಮ್ಮಾ?" ಎಂದು ಗೋಗರೆದಳು ಸರಸು ಅದು ಅವಳ ಪಂಚಪ್ರಾಣವಾಗಿತ್ತು. ಅಪ್ರಿಯವಾದ ವಿಚಾರವನ್ನು ಕೇಳಿದೊಡನೆಯೇ

ಆವಳಿಗೆ ಸಹಜವಾಗಿ ದುಃಖವುಕ್ಕಿ ಬಂತು; ಗಳಗಳನೆ ಅಳತೊಡಗಿದಳು.

"ಸರಸೂ, ಅಳಬೇಡಮ್ಮಾ, ಶಿವೆ ತನ್ನ ಎದೆಯುಳಲನ್ನು ಹುದುಗಿಟ್ಟು ಸಂತೈಸಿದಳು. ಆದರೂ ಅವಳ ದುಃಖ ಮೇರೆ ಮೀರಿತು. "ಅಳಬೇಡ ಮಗೂ, ಇನ್ನು ಕೆಲವೇ ದಿನಗಳಲ್ಲಿ ತುಂಗೆ ಇನ್ನೊಂದು ಕರುವನ್ನೀಯುತ್ತಾಳೆ. ಅದನ್ನು ನೀನು ನೋಡಿಕೊಳ್ಳಬಹುದು. ಅಲ್ಲದೆ ಇದು ಹಸುವಾಗುವತನಕ ಸಲಹುವ ಖರ್ಚೂ ಬಹಳವಾಗುತ್ತದೆ. ಬಡವರಾದ ನಾವು ಹೇಗೆ ಈ ಭಾರ ವನ್ನು ಹೊರುವುದು ನೀನೇ ಯೋಚಿಸು."

ಚಿಕ್ಕವರ್ಯಾರಿಗೂ ಇದು ಇಷ್ಟವಿಲ್ಲ. ಅಂದಿನಿಂದಲೂ ಅದರೊಂದಿಗೆ ಆಟವಾಡಿ ನಲಿಯಲಿಲ್ಲವೇ? ಎಷ್ಟು ಅಕ್ಕರೆಯಿಂದ ಸಲಹಿದ್ದಾಗಿದೆ. ಅದನ್ನು ಮಾರುವುದುಂಟೇ? ಮನೆ ಮಂದಿಗೆಲ್ಲಾ ಆರನೆಯ ಮಗುವಾಗಿತ್ತು.ಅಯ್ಯೋ ಸುತರಾಂ ಅನ್ಯಾಯ!' ಎಂದು ಗೋಗರೆದರು. ಶಿವೆಯ ಮುಖ ಖಿನ್ನ ವಾಯಿತು. ಲಿಂಗಣ್ಣ ನಿಸ್ಸಹಾಯಕನಂತೆ ಮಕ್ಕಳತ್ತ ಮೌನವಾಗಿ ನೋಡುತ್ತ ನಿಂತಿದ್ದ. ಗೋಳಿಡುತ್ತಿದ್ದ ಸರಸುವನ್ನು ಸಂತೈಸುತ್ತ ರವಿ "ಸರಸೂ.ನೀನು ದುಃಖಿಸುವುದರಿಂದ ಎಲ್ಲರಿಗೂ ದುಃಖವಾಗುತ್ತೆ. ಅಮ್ಮನ ಮನಸ್ಸನ್ನು ನೋಯಿಸಬೇಡ ಕಂಡೆಯಾ? ಅವರಿಗೆ ತಾನೇ ಇದು ಸಂತೋಷವೇ? ನಮ್ಮ ಸ್ಥಿತಿಗತಿಯನ್ನು ಮನದಟ್ಟು ಮಾಡಿಕೊ ಸರಸು." ಎಂದು ಎಷ್ಟೆಷ್ಟೋ ಸವಿ ಮಾತುಗಳಿಂದ ಸಂತೈಸಿದನಾದರೂ ಸರಸು ಸಮಾಧಾನಗೊಳ್ಳಲಿಲ್ಲ. ಜೊತೆಗೆ ಶ್ಯಾಮು.ಗೋಪಿ.ವಿಮಲೆಯರೂ ಮುಸುಮುಸು ಅಳತೊಡಗಿದರು ಸನ್ನಿವೇಶ ರವಿಯ ಕಣ್ಣುಗಳಲ್ಲೂ ನೀರೂರಿಸಿತು. ಶಿವೆ ಅಲ್ಲಿ ನಿಲ್ಲಲಾರದೆ ಒಳಗಡೆ ಹೊರಟು ಹೋದಳು.

ಲಿಂಗಣ್ಣ ಸರಸುವನ್ನು ವಿಧವಿಧವಾಗಿ ಸಂತೈಸಿದ. ಆದರೂ ಅವಳು ಸಮಾಧಾನಗೊಳ್ಳಲಿಲ್ಲ. ಜೊತೆಗೆ ಚಿಕ್ಕವರ ಹಿಮ್ಮೇಳವೂ ಸಮ್ಮಿಳಿತವಾಗಿತ್ತು ತುಸು ಸಾವರಿಸಿಕೊಂಡು ರವಿ ಹೇಳಿದ "ನಮ್ಮ ಸ್ಥಿತಿಯನ್ನು ಅರಿತ ನೀನು ಹೀಗೆ ಅತ್ತು ಗೋಳಾಡಿದರೆ ಹೇಗೆ? ಸ್ವಲ್ಪ ಸೈರಿಸಿಕೊಳ್ಳಬಾರದೇ?"

ಆದರೆ....!

"ನನ್ನ ಕರೂ! ನನ್ನ ಕರೂ! ದುಃಖದಾವೇಗದಲ್ಲಿ ಮುಂದೆ ಮಾತು ಹೊರಡದೆ "ಹೋ" ಎಂದು ಅತ್ತಳು ಸರಸು.

"ಸರಸೂ ನನ್ನ ಮಾತು ಕೇಳು."

"ನನಗೇನೂ ಹೇಳಬೇಡ"

"ಹಾಗೆ ಮಾಡಬಾರದು, ಬಾ ಮಗೂ!"

"ಹೇಗೆ ಸಹಿಸಲಿ?"

"ನೀನು ಹೀಗಾಡುತ್ತಿ ಎಂದೆಣಿಸಿರಲಿಲ್ಲ." ಮನಸ್ಸು ಬಹುವಾಗಿ ನೊಂದಿತ್ತು. ಕೆಲಸಗಳು ಮುಗಿದುವೆಂದೂ ಎಲ್ಲಕ್ಕಿಂತ ಮಿಗಿಲಾಗಿ ನಾವೇ ಕಟ್ಟಿ ಮುಗಿಸಿದೆವೆಂದೂ ಸಂತೋಷದಿಂದ ಆರಂಭವಾದ ದಿನ ಸಂಜೆಯ ತಂಪಿನಲ್ಲಿ ಅತ್ಯಂತ ದುಃಖದೊಡನೆ ಪರ್ಯಾವಸಾನವಾಯಿತು. ರಾತ್ರಿ ಊಟವಿಲ್ಲದೆ ಮಲಗಿದ ಸರಸು ಚಿಕ್ಕ ಮಗುವಿನಂತೆ ನಿದ್ದೆಯಲ್ಲಿಯೂ ಬಿಕ್ಕಳಿಸುತ್ತಿದ್ದಳು. ಹಗಲೆಲ್ಲಾ ಮಕ್ಕಳ ಮುಂದೆ ಧೈರ್ಯವನ್ನು ಪ್ರದರ್ಶಿಸುತ್ತಿದ್ದ ಶಿವೆ ರಾತ್ರಿಯಲ್ಲಿ ಮನೋವೇದನೆಯಿಂದ ತತ್ತರಿಸಿ ಹೋದಳು. ಎಷ್ಟೊತ್ತಾದರೂ ಕಣ್ಣಿಗೆ ನಿದ್ದೆ ಬಾರದು. ಹಾಸಿಗೆಯಲ್ಲಿ ಹಾಗಿಂದ್ದೀಗೆ ಹೊರಳಾಡುತ್ತಿದ್ದಂತೆ ಮನದಲ್ಲಿ ನಾನಾ ಯೋಚನೆಗಳು ತುಮುಲ ಯುದ್ಧವನ್ನು ಎಬ್ಬಿಸಿದುವು.. ವಿನಾ ಕಾರಣ ಸ್ವಾಮಿ ಗೃಹ ತ್ಯಾಗಿಯಾದ ಬಗೆ ಆರು ಮಂದಿಯ ಜೀವನ,ಐವರ ವಿದ್ಯಾಭ್ಯಾಸ, ಬರಬಹುದಾದ ಅಲ್ಪ ವರಮಾನದಿಂದ ಸಾಗುವ ಬಗೆ ಕರುವನ್ನು ಮಾರಬೇಕಾದ ಪ್ರಸಂಗ . ಹುಟ್ಟಿದಾರಭ್ಯದಿಂದ ತನ್ನ ನರಕಮಯವಾದ ಬಾಳು ಚಲನ ಚಿತ್ರದಂತೆ ಸ್ಮೃತಿಪಟಲದಲ್ಲಿ ಒಂದೊಂದಾಗಿ ಮೂಡತೊಡಗಿದವು. ಮೇಲಾಗಿ ಭವಿಷ್ಯದ ಮಹಾಗರ್ಭದಲ್ಲಿನ ಬೃಹತ್ ಸಮಸ್ಯೆಗಳು ಗರಿಗೆದರಿ ಮೈವೆತ್ತು ಸುಳಿಸುಳಿಯುತೊಡಗಿದುವು. ದುಃಖ ದುಗುಡಗಳಾಶ್ರಯದಲ್ಲಿ ಕಂಬನಿ ಕೋಡಿಕಟ್ಟಿ ಹರಿಯಿತು. ದುಃಖ ದಂಬ್ಬರವನ್ನು ತಡೆಯಲಾರದೆ ಗಳಗಳನೆ ಅತ್ತಳು.

ತುಸು ದೂರದಲ್ಲಿ ಮಲಗಿದ್ದ ರವಿ ಮುಸು ಮುಸು ಸದ್ದಿನಿಂದ ಎಚ್ಚತ್ತು ಹಾಸಿಗೆಯ ಮೇಲೆ ಕುಳಿತುಕೊಂಡ. ಇದುವರೆವಿಗೆ ಧೈರ್ಯವನ್ನು ಪ್ರದರ್ಶಿಸುತ್ತಿದ್ದ ತಾಯಿ ಸದ್ದಿಲ್ಲದ ರಾತ್ರಿಯಲ್ಲಿ ದುಃಖವನ್ನು ತೋಡಿಕೊಂಡ ಬಗೆ ಅತ್ಯಂತ ಸಂಕಟವನ್ನುಂಟುಮಾಡಿತು. ಮೆಲ್ಲನೆ ತಾಯಿಯತ್ತ ಸರಿದು "ಅಮ್ಮಾ, ಇಂದೇಕೆ ಇಷ್ಟು ಸಂಕಟ? ಈ ಪರಿ ದುಃಖವೇಕೆ?" ಎಂದು ಕೇಳಿದ ಎಳೆಯ ನಳಿದೋಳು ತಾಯಿಯ ಕೊರಳನ್ನು ತಬ್ಬಿತು. ಶಿವೆಯೂ

ರವಿಯನ್ನು ಆಲಂಗಿಸಿಕೊಂಡು ದುಃಖವನ್ನು ಹತ್ತಿಕ್ಕಲು ಪ್ರಯತ್ನಪಟ್ಟಳು.

"ಅಮ್ಮಾ, ಅಮ್ಮಾ!"

"..........."

"ಅಮ್ಮಾ! ನೀವು ನನಗೂ ದುಃಖವನ್ನುಂಟುಮಾಡುತ್ತಿದ್ದೀರಿ."

"ರವೀ. ಮನದಲ್ಲಿ ಏನೋ ಯೋಚನೆ ಮೂಡಿತು ಅಷ್ಟೆ ಈ ಹೃದಯಕ್ಕೆ ಅದೊಂದು ಹೊರಲಾರದ ಹೊರೆ" ನಿಟ್ಟುಸಿರು ಬಿಟ್ಟಳು ಶಿವೆ. ತಾಯಿಯ ಬಾಹುಬಂಧನದಲ್ಲಿ ಬಂಧಿಯಾಗಿದ್ದ ರವಿ ಮಾತೃ ಹೃದಯದ ಮಿಡಿತವೇನೆಂಬುದನ್ನು ಅರಿತುಕೊಂಡಿದ್ದ. ಆದರೂ ಆ ಕೆಲವೇ ನಿಮಿಷಗಳು ಅವನಿಗೆ ಅಚಲವಾದ ಆಸರೆಯನ್ನು ನೀಡಿದ್ದುವು. ತಾಯಿಯ ಭುಜದ ಮೇಲೊರಗಿ ಕಂಬನಿಗೆರೆಯುತೊಡಗಿದ. ಕ್ಷಣಕ್ಷಣಗಳು ನಿರಾತಂಕವಾಗಿ ಉರುಳಿದವು. ದುಃಖ ಸೂಸಿದರೂ ಆ ಮುಹೂರ್ತ ಅತ್ಯಂತ ಸುಖದಾಯಕವಾಗಿತ್ತು ...ನಿತಾಂತ ಪ್ರೇಮದಿಂದ ಕೂಡಿತ್ತು

"ಮಾತೃ ದೇವೋ ಭವ, ಪಿತೃ ದೇವೋ ಭವ" ಎಂಬ ಮಂತ್ರ ಮನದಲೆಯಲ್ಲಿ ತೇಲಿ ಬಂದಿತು. ದುಃಖದಾವೇಗವನ್ನು ಹತ್ತಿಕ್ಕಿ ನೂರು ಸಲವಾದರೂ ಮಾತೃದೇವೋಭವದ ಉಚ್ಚಾರ ಮಾಡುವೆ, ಆಕೆಗಾಗಿ ಜನ್ಮ ಜನ್ಮಗಳನ್ನಾದರೂ ಎತ್ತಿ ಬರುವೆ, ಓ ಜನ್ಮದಾತೆ! ನಿನಗೆ ನಮೋ ನಮೋ" ಎಂದು ಮನದಲ್ಲೇ ಪ್ರತಿಜ್ಞಾಪೂರ್ವಕವಾಗಿ ನಮಿಸಿದ. ಬಾಲ ಕೋಮಲ ಹೃದಯ ಮಾತೃಭಕ್ತಿಯಿಂದ ತುಂಬಿ ತುಳುಕತೊಡಗಿತು ಬಾಹು ಬಂಧನವು ಸಡಿಲವಾದೊಡನೆಯೇ "ಅಮ್ಮಾ! ಎಂದ ರವಿ.

"ಏನು ಮಗೂ?"

"ಹೀಗಾದರೆ ಹೇಗೆ?"

"ಮನಶ್ಶಾಂತಿಯಿಲ್ಲದೆ ಕಣ್ಣಿಗೆ ನಿದ್ದೆ ಬಾರದು."

"ನೀವು ಬಹಳ ದುಃಖ ಪಡುತ್ತೀರಿ."

"ದುಃಖಿಸಬಾರದೆಂದು ಎಷ್ಟೋ ಬಾರಿ ನಿರ್ಧರಿಸಿದ್ದೇನೆ. ಆದರೆ ಒಮ್ಮೊಮ್ಮೆ ಮೈಮರೆತು ದುರ್ಬಲಳಾಗಿಬಿಡುವೆ. ಹೋಗಲಿ ಬಿಡು. ಇನ್ನತ್ತು ಮಾಡುವುದೇನು? ನಿಮ್ಮಗಳ ಉದ್ಧಾರವೇ ನನ್ನ ಜೀವನ.ಆದರೂ ಬಾಳುದ್ದಕ್ಕೂ ನರಕಯಾತನೆಯಲ್ಲಿ ಕಳೆಯುವಂತಾದುದು ಒಮ್ಮೆಲೆ ಮರೆಯ

ಲಾಗುವುದಿಲ್ಲ ರವಿ."

"ಕಳೆದುಹೋದುದರ ಸ್ಮರಣೆ ಇನ್ನೇಕೆ? ಭವಿಷ್ಯವನ್ನೆದುರಿಸಲು ಸಿದ್ಧರಾಗೋಣ. ನಿಮ್ಮ ಆಶೀರ್ವಾದವೊಂದಿದ್ದರೆ ಎಲ್ಲಾ ಕ್ಷೇತ್ರಗಳಲ್ಲೂ ಗೆದ್ದು ಬರುವೆನೆಂಬ ನೆಚ್ಚಿದೆ. ದುಃಖವನ್ನು ಬದಿಗಿಟ್ಟು ನಮ್ಮನ್ನು ಹರಸಿರಿ.... ....ಅಂದರೆ ನಮ್ಮ ಚೇತನ ನೂರ್ಮಡಿಯಾಗುತ್ತದೆ!"

ಶಿವೆ ರವಿಯ ಮೇಲೆ ಕೈಯಾಡಿಸುತ್ತಾ ಹೇಳಿದಳು."ಹೆಣ್ಣಾಗಿ ಹುಟ್ಟುವುದೇ ತಪ್ಪು. ಹೆಣ್ತನದೊಂದಿಗೆ ನಾನಾ ಸಂಕಟಗಳು ಉದಯವಾಗುತ್ತವೆ." ಕಂಬನಿಯನ್ನು ತೊಡೆದುಕೊಂಡು ತುಸು ತಡೆದು "ಮಗೂ ಮಲಗಿಕೊ, ಹೊತ್ತು ಮೀರಿತು. ಭಗವಂತನ ಕೃಪೆ ನಿಮ್ಮ ಮೇಲಿರಲಿ, ಅದೇ ನಾನು ಹಾರೈಸುವ ಹಾರೈಕೆ."

ತನ್ನ ಹಾಸಿಗೆ ಬಿಟ್ಟು ರವಿ ತಾಯಿಯ ಬಳಿ ಮಲಗಿಕೊಂಡ. ತಾಯಿಯ ಹೃದಯದಲ್ಲಿನ ಏರಿಳಿತದ ಪರಿಚಯವಾದ ಅವನಿಗೆ ನಿದ್ದೆ ಹತ್ತಲಿಲ್ಲ. ಹೊತ್ತು ಕ್ಷಣೇ ಕ್ಷಣೇ ಉರುಳತೊಡಗಿತು. ನಿದ್ದೆಯಲ್ಲಿ ಸರಸು ಮುಸು ಮುಸು ಎನ್ನ ತೊಡಗಿ ಹಾಗಿಂದ ಹೀಗೆ ಕೊಸರಾಡಿಕೊಳ್ಳುತ್ತಾ "ನನ್ನ ಕರೂ! ನನ್ನ ಕರೂ!" ಎಂದು ಕನವರಿಸಿದಳು. ಒಡನೆ ಶಿವೆ ಹಣೆಯ ಮೇಲೆ ಕೈಯಾಡಿಸುತ್ತಾ "ಸರಸೂ, ಸರಸೂ" ಎಂದು ಕರೆದು ಅಲುಗಿಸಿದಳು. ಅರೆನಿದ್ದೆಯಲ್ಲಿ ಹೊರಳಾಡಿದ ಸರಸು "ಕರೂ ಕರೂ!" ಎಂದು ಪುನಃ ಕನವರಿಸಿದೊಡನೆ ಹೃದಯಕ್ಕೆ ಚೂರಿಯಲುಗು ಹೊಕ್ಕಂತೆ ಅನುಭವಿಸಿದ ನಿತಾಂತ ವೇದನೆಯಲ್ಲಿ ಅದೆಷ್ಟು ಹೊತ್ತು ಉರುಳಿತೋ .ಪಕ್ಕದಲ್ಲಿದ್ದ ರವಿ ತೋಳು ಹಿಡಿದು ಜಗ್ಗುತ್ತಾ "ಅಮ್ಮಾ ಮಲಗಿ ಕೊಳ್ಳಿರಿ, " ಎಂದಾಗಲೇ ಶಿವಮ್ಮನಿಗೆ ತಾನು ಇನ್ನೂ ಕುಳಿತಿರುವುದರ ಅರಿವಾದುದು.

ಶಿವೆ ಮಲಗಿಕೊಂಡಳು. ಬಲು ಹೊತ್ತಿನ ಮೇಲೆ ನಿದ್ದೆ ಹೋದರವಿ ಬೆಳಗಿನ ಸುಮುಹೂರ್ತದಲ್ಲಿ ಕಂಡ ಸ್ವಪ್ನ ಸಾಮ್ರಾಜ್ಯದಲ್ಲಿ ಪೂಜ್ಯಮಾತೆಯ ಅಮೃತಪುತ್ರನಾಗಿದ್ದ ತುಂಬು ದೃಶ್ಯವನ್ನು ಕಂಡಾಗ ಅದೇ ಕನಸು ಇನ್ನೊಮ್ಮೆ ಬರಲಿ ಎಂದು ಕಣ್ಮುಚ್ಚಿ ಮಲಗಿದ. ಕನಸು ಬರಲಿಲ್ಲ: ನಿದ್ದೆ ಬಂದಿತು.

ಸುಯ್ಯಲರು ಸುಯ್ ಸುಯ್ಯನೆ ಸುಯ್ಯುತ್ತ ತೀಡುತ್ತಿದೆ. ಸಾಸಿರ

ಪಕ್ಷಿಗಳ ಕಲಕಲರವದ ಮಧ್ಯೆ ಹರಿದ ಸುಪ್ರಭಾತದ ಎಳೆಬೆಳಕು ತೆರೆಯ ಮೇಲೆ ತೆರೆತೆರೆಯಾಗಿ ಹರಡಿ, ಕಿಟಕಿಯಲ್ಲಿ ಮಸುಕು ಮಸುಕಾಗಿ ಮೈ ದೋರಿತು. ಇನ್ನಷ್ಟು ಹೊತ್ತಿನೊಳಗಾಗಿ ಮುಂಬೆಳಕು ಮುಂಬರಿದು ಬೆಳ್ಳನೆ ಬೆಳಗತೊಡಗಿತು. ಬೆಳಗಾದ ಮೇಲೆ ಮಲಗಿರುವುದೇನು ಚೆನ್ನ? ಏಳಬೇಕು; ಏಳಲಾರಳು. ಏನೋ ಒಂದು ಬಗೆಯ ಮಂಪರ ಇನ್ನೇನೋ ದುಗುಡ....ಮತ್ತೇನೋ ಒಂದು ರೀತಿಯ ಅಸಡ್ಡೆ-ಉದಾಸೀನ ತನುಮನಗಳನ್ನು ಮಂತ್ರವತ್ತಾಗಿ ಬಿಗಿದು ಕಟ್ಟಿವೆ. ಏಳಲಾರವೇ ಹಾಗೇ ಬಿದ್ದುಕೊಂಡಿದ್ದಾಳೆ. ರವಿಯನ್ನು ಕೈಗಳು ಇನ್ನೂ ತಬ್ಬಿಕೊಂಡಿವೆ. ನೆಟ್ಟನೋಟ ಬೆಳಕನ್ನು ನಿಟ್ಟಿಸುತ್ತಿತ್ತು. ಲಿಂಗಣ್ಣ ಹಾಸಿಗೆ ಬಿಟ್ಟು ಬಂದಾಗ ಇನ್ನೂ ಮಲಗಿದ್ದ ಮಗಳನ್ನು ನೋಡಿ "ಏಳುವುದಿಲ್ಲವೇ ಶಿವೆ?" ಎಂದ. ತುಟಿಗಳಲ್ಲಿ ಊಹಿಸಲೂ ಆಗದಂತಹ ಎಳೆನಗು ಮಿನುಗಿ ಮಾಯವಾಯಿತು. ಶಿವೆ ಲಜ್ಜಿತಳಂತೆ, ಅಂಜಿತಳಂತೆ ತಟ್ಟನೆ ಎದ್ದು ಹಾಸಿಗೆ ಸುತ್ತಿದಳು. ರವಿಯೂ ದಡಕ್ಕನೆ ಎದ್ದು ಚಿಕ್ಕವರನ್ನು ಎಬ್ಬಿಸಿದ.

ಅಂದು ಹೆಣ್ಣು ಮಕ್ಕಳ ಶಾಲೆ ತೆರೆಯುವುದಿದ್ದು ಸರಸು ವಿಮಲೆಯರು ಆತುರಾತುರವಾಗಿ ತಯಾರಾಗುತ್ತಿದ್ದರು. ಶಾಲೆಗೆ ಹೊರಡುವ ಮುನ್ನ ಸರಸು ಮನೆಗೆಲಸದಲ್ಲಿ ಮಗ್ನಳಾಗಿದ್ದರೂ ಮನೋವೇದನೆಯಿಂದ ಮುಖ ಕಪ್ಪಿಟ್ಟಿತ್ತು. ಸ್ನಾನವನ್ನು ಮುಗಿಸಿ ಶಾಲೆಯ ದಾರಿಯನ್ನು ತುಳಿಯುವ ಮೊದಲು ಕೊಟ್ಟಿಗೆಗೆ ಧಾವಿಸಿದಳು. ದುಃಖಭರಿತ ಶರೀರ ಕಂಪಿಸುತ್ತಿತ್ತು. ಮನಸ್ಸು ಉಗ್ರವಾಗಿತ್ತು. ಕಂಗಳು ಅಶ್ರುಪೂರ್ಣವಾಗಿದ್ದವು. ಎರಡೂ ಕೈಗಳಿಂದ ಕಣ್ಣುಗಳನ್ನುಜ್ಜಿಕೊಳ್ಳುತ್ತಾ ಒಳಹೊಕ್ಕಳು. ಎದುರಿಗೆ ಕಂಡದ್ದೇನು? ಅನಿರೀಕ್ಷಿತವಾದ ದೃಶ್ಯ ಕಣ್ಣಿಗ ಬಿದ್ದೊಡನೆ ಡಂಗು ಬಡಿದು ಮಂಜು ಮಂಜಾದ ಅಶ್ರುಪೂರ್ಣ ಲೋಚನಗಳನ್ನು ತೊಡೆದುಕೊಂಡು ನೋಡಿದಳು! ನೋಡಿಯೇ ನೋಡಿದಳು!

"ಅಮ್ಮಾ, ಹಸು ಕರುವನ್ನೀದಿದೆ!" ತಕ್ಷಣ ಅಲ್ಲಿಂದಲೇ ಗಟ್ಟಿಯಾಗಿ ಕೂಗಿಕೊಂಡಳು. ದನಿಯಲ್ಲಿ ಸಂತೋಷ ದುಃಖಗಳೆರಡೂ ಸಮ್ಮಿಲನವಾಗಿದ್ದವು. ದನಿ ಹೊರ ಬಿತ್ತೋ ಇಲ್ಲವೋ ಎಲ್ಲರೂ ಅತ್ತ ಓಡಿದರು. ಪವಿತ್ರವಾದ ಜೀವಾತ್ಮವೊಂದು ಕಳಂಕ ಪೂರಿತವಾದ ಈ ಜಗತ್ತಿಗೆ ಆಗತಾನೇ

ಕಾಲಿಟ್ಟಿತ್ತು. "ಹೆಣ್ಣು ಕರು !" ಸಂತಸದಿಂದ ನುಡಿದ ರವಿ. "ಎಷ್ಟು ಮುದ್ದಾಗಿದೆ!" ಚಿಕ್ಕವರು ಹೌಹಾರಿದರು. ಪುಟ್ಟ ಹೃದಯಗಳು ಉಕ್ಕಿ ಬಂದ ಸಂತೋಷದಿಂದ ಉಬ್ಬಿದುವು. ಆಗ ಸರಸುವಿನ ಮುಖದ ಮೇಲೂ ಸಂತೋಷದ ತೆರೆ ಸುಳಿದಾಡಿತು. ಕರು ಪುಷ್ಟಿಯಾಗಿದ್ದು ನೋಟಕ್ಕೆ ಅತ್ಯಂತ ಸುಂದರವಾಗಿತ್ತು. ಕರುವನ್ನು ನೋಡಿ ಚಿಕ್ಕವರಿಗೆ ಸಡಗರವೋ ಸಡಗರ! ಕೊಟ್ಟಿಗೆಯನ್ನು ಸ್ವಚ್ಛಗೊಳಿಸಿ ಹಸುವಿಗೆ ಹುಲ್ಲು ನೀರು ಮುಂತಾದುವುಗಳನ್ನು ಲಗುಬಗೆಯಿಂದ ಒದಗಿಸಿದರು.

"ಸರಸೂ, ಅದಕ್ಕಿಂತ ಇದೇ ಮುದ್ದಾಗಿದೆ!" ಒಮ್ಮೆಲೇ ಅನೇಕ ಕಂಠಗಳು ಮೊಳಗಿದುವು.

"ಎಷ್ಟು ಪುಷ್ಟಿಯಾಗಿದೆ ನೋಡು! ಹಾರ್ಲಿಕ್ಸ್ ಕುಡಿದರೂ ಹೀಗಿರುವುದಿಲ್ಲ! ಇದನ್ನೇ ಸಾಕು; ಇದೂ ನಿನ್ನದೇ." ಗೋಪಿ ನಗುನಗುತ್ತಾ ಹೇಳಿದ.

"ಗೋಪಿ ಹೇಳಿದ್ದು ನಿಜ. ಕರು ಬಹಳ ಮುದ್ದಾಗಿದೆ. ಇನ್ನು ನೀನು ವ್ಯಥೆಪಡುವ ಕಾರಣವಿಲ್ಲ ಇದನ್ನೇ ಸಾಕು; ಇದೂ ನಿನ್ನದೇ" ತಕ್ಷಣ ಶ್ಯಾಮುವೂ ಸಮಾಧಾನಪೂರ್ವಕವಾಗಿ ನುಡಿದ. ಆದರೂ ಸರಸು ಕಣ್ಣುಗಳಲ್ಲಿ ಫಳಫಳ ನೀರು,

"ಸರಸೂ ನನ್ನ ಮಾತು ಕೇಳೇ" ಮೇಲುಮೇಲಕ್ಕೆ ಮತ್ತೊಮ್ಮೆ ಸರಸುವನ್ನು ಮುದ್ದಿಟ್ಟು ಸಂತೈಸಿದರೂ ರವಿ ಮನದಲ್ಲೇ ಮೂಕವೇದನೆಯನ್ನನುಭವಿಸಿದ. ಸರಸು ಮ್ಲಾನ ಮುದ್ರೆ ತಳೆದಿದ್ದಳು. ಭಾರವಾದ ಹೃದಯವನ್ನು ಹೊತ್ತು ಕಾಲುಗಳು ಬಳುಕಿದುವೇನೋ....ಕೊನೆಯ ಬಾರಿ ತನ್ನ ಪ್ರೀತಿಯ ಕರುವನ್ನು ಮುದ್ದಿಟ್ಟು ಅಲ್ಲಿ ನಿಲ್ಲಲಾರದೆ ಹೊರಟಳು. ಕಣ್ಣುಗಳಂಚಿನಲ್ಲಿ ಹರಿದಾಡುತ್ತಿದ್ದ ಕಂಬನಿ ಕೆನ್ನೆಯ ಮೇಲೆ ಧಾರಾಪೂರ್ವಕವಾಗಿ ಇಳಿಯಿತು. ಸರಸುವನ್ನು ಹಿಂಬಾಲಿಸಿದ ವಿಮಲೆ ತನ್ನಲ್ಲಿ ತಾನೇ 'ತುಂಬ ಅನ್ಯಾಯ' ಎಂದು ಹೇಳಿಕೊಂಡಳು, ಸ್ವಲ್ಪ ದೂರ ಶಾಲೆಯ ಹಾದಿಯನ್ನು ನಡೆದಿದ್ದ ಸರಸು ದುಃಖದುಬ್ಬರವನ್ನು ತಡೆಯಲಾಗದೆ ಹಿಂದಿರುಗಿದಳು. ಯಾವುದೋ ಕಾಣದ ಕೈ ಎಳೆಯು ಹೃದಯವನ್ನು ಹಿಸುಕುತ್ತಿತು—ಅಪ್ರಬುದ್ಧ ಮನವನ್ನು ಗಾಣವಾಡುತ್ತಿತ್ತು.

ಬಾಲಕಿಯರಿಬ್ಬರೂ ಕಂಬನಿ ಸುರಿಸುತ್ತ ಹಿಂದಿರುಗಿಬಂದ ಕರುಣಾಜನಕ

ದೃಶ್ಯ ಎಲ್ಲರ ಮುಖದ ಮೇಲೂ ಮ್ಲಾನತೆಯ ಕಪ್ಪು ತೆರೆಯನ್ನೆಳೆಯಿತು.ರವಿ ತಂಗಿಯನ್ನಪ್ಪಿಕೊಂಡು ನಾನಾ ಪರಿ ಸಂತೈಸಿದ. ಲಿಂಗಣ್ಣ ಜೀವನ ಪರಿಸ್ಥಿತಿಯನ್ನು ವಿವರಿಸಿದ, ಆದರೂ ಅವಳ ದುಃಖ ಶಮನವಾಗದು. ಶಿವೆ ಅಲ್ಲಿ ನಿಲ್ಲಲಾರದೆ ಒಳಗಡೆ ಹೋದಳು.ಕಣ್ಣುಗಳಲ್ಲಿ ಕಂಬನಿ ತುಂಬಿ ಕೋಡಿ ಹರಿಯಿತು

ಸರಸು ಕರುವನ್ನು ಮುದ್ದಿಟ್ಟುಕೊಂಡು ಗಳಗಳನೆ ಅಳುತ್ತ "ರವೀ, ನನಗೇನೋ ಇದು ತಾಳಲಾರದಾಗಿದೆ. ಮನೆಯಲ್ಲೂ ಇರಲಾರೆ. ಶಾಲೆಗೂ ಹೋಗಲಾರೆ."

ರವಿ ಅವಳನ್ನು ಬಹಳವಾಗಿ ಸಂತೈಸಿ, ಇಬ್ಬರನ್ನೂ ಶಾಲೆಯವರೆಗೆ ಕಳುಹಿಸಿ ಬಂದ,

ಗೋಪಿ ಕೃಷ್ಣಭಟ್ಟರ ಮನೆಗೆ ಬಂದಾಗ ಭಟ್ಟರು ಮನೆಯಲ್ಲಿಯೇ ಇದ್ದರು. ಗೋಪಿಯನ್ನು ಕಾಣುತ್ತಲೂ "ಏನಪ್ಪಾ ಮಗು?" ಎಂದರು. ಕಣ್ಣುಗಳಲ್ಲಿ ಅಚ್ಚರಿಯ ನೆರೆಯುಕ್ಕಿತು.

"ಅಮ್ಮ ಕರುವನ್ನು ಕೊಡುತ್ತಾರಂತೆ ನಿಮಗೆ ಹೇಳು ಎಂದರು." ಗೋಪಿ ಖಿನ್ನನಾಗಿ ಹೇಳಿದ.

"ಹಾಗೇನು? ಬೆಲೆಯೇನು ಹೇಳಿದ್ದಾರೆ?"

"ನೀವು ಹಿಂದೆ ಕೇಳಿದ ಬೆಲೆಗೇನೇ ಕೊಡುವಂತಿದೆ, ನೀವೇ ಬಂದು ಮಾತಾಡಿರಿ."

"ಇರು ಮಗೂ. ಈಗಲೇ ಬಂದುಬಿಡುವೆ" ಮುಖದಲ್ಲಿ ಸಂತಸ ಮೂಡಿತು. ನಿಮಿಷಾರ್ಧದಲ್ಲಿ ಭಟ್ಟರು ತಯಾರಾದರು.ದಾರಿ ಸಾಗುತ್ತಿದ್ದಂತೆ ಮನದಲ್ಲಿ ಆ ದಿನ ಕೇಳಿದಾಗ ಮಾರುವುದಿಲ್ಲ ಎಂದಿದ್ದರು; ಕಷ್ಟಕ್ಕೆ ಸಿಕ್ಕಿದುದರಿಂದಲೇ ಮಾರಬೇಕಾಯ್ತು, ಪಾಪ!" ಎಂದುಕೊಂಡರು. ಹಾದಿ ಸವೆದು ಕೆಲವೇ ನಿಮಿಷಗಳಲ್ಲಿ ಮನೆಗೆ ಬಂದಾಗಿತ್ತು. ಶಿವೆ ಒಳಗಡೆ ಕುಳಿತುಕೊಂಡು ನಿರಾತಂಕವಾಗಿ ಕಂಬನಿಗರೆಯುತ್ತಿದ್ದಳು. ರಾತ್ರಿ ಸರಸು "ನನ್ನ ಕರೂ! ನನ್ನ ಕರೂ!" ಎಂದು ಕನವರಿಸಿದುದು ಪುನಃಪುನಃ ಸ್ಮೃತಿಪಟಲದಲ್ಲಿ ಸುಳಿಸುಳಿದಳಿಯಿತು. ಸ್ವಾಮಿ ಕಳೆದುಹೋದಾಗ ಹೃದಯವು ಕಳೆದುಹೋಗಿತ್ತು. ಆದರೀಗ ಪ್ರಾಣವೇ ಚಿಮ್ಮುತ್ತಿರುವಂತೆ ಭಾಸವಾಗತೊಡಗಿತು. ಸಂತಾಪದಿಂದ ಮೈಯಲ್ಲಿ ಕಂಪನದ ಅಲೆ ಹರಿದಾಡಿ ಹೋಯಿತು. ಒಮ್ಮೆಲೇ ಹೊರ

ಗಡೆ ಗೋಪಿ ಶ್ಯಾಮುರವರು ಮುಸು ಮುಸು ಅಳತೊಡಗಿದ ಸದ್ದು ಕೇಳ ಬಂದಿತು. ಶಿವೆ ತಾಳಲಾರದೆ ಅಲ್ಲಿಂದೆದ್ದು ಹಿತ್ತಲ ಕಡೆ ಹೋದಳು. ಹೃದಯ ತುಡಿದುಕೊಳ್ಳತೊಡಗಿತು.

ಇನ್ನರ್ಧ ಗಂಟೆಯೊಳಗಾಗಿ ಲಿಂಗಣ್ಣ ಅಲ್ಲಿಗೆ ಬಂದು ತೊಂಬತ್ತು ರೂಪಾಯಿಗಳ ನೋಟುಗಳನ್ನು ಕೊಡುತ್ತ ಹೇಳಿದ. "ಕೆಲಸದವರೂ ಬಂದು ಬಿಟ್ಟಿದ್ದಾರೆ. ಅವರ ಲೆಖ್ಖಾಚಾರವನ್ನು ಮುಗಿಸಿದ್ದಾಯ್ತು."

"ಅಮ್ಮಾ, ಕರು ಹೋಗಲು ಬಹಳ ಗಲಾಟೆ ಮಾಡಿತು, ರವಿಯೂ ಅದರೊಂದಿಗೆ ಹೋಗಿದ್ದಾನೆ ಎಳೆದುಕೊಂಡೇ ಹೋದರು." ಗೋಪಿ ತೊಟ್ಟ ಬಟ್ಟೆಯಿಂದಲೇ ಕಂಬನಿಯನ್ನು ಒರೆಸಿಕೊಳ್ಳುತ್ತ ದುಃಖವನ್ನು ತೋಡಿ ಕೊಂಡ. ಕೊಟ್ಟಿಗೆಯಲ್ಲಿ ಹಸುವೂ ಕರುವಿಗಾಗಿ ಒಂದೇ ಸಮನೆ ಅರಚಿಕೊಳ್ಳ ತೊಡಗಿತು. ಶಿವೆ ಪ್ರಯತ್ನಪೂರ್ವಕವಾಗಿ ದುಃಖವನ್ನು ಹತ್ತಿಕ್ಕಿ ಹಣವನ್ನು ಕೈಗೆ ತೆಗೆದುಕೊಂಡಳು.

ಮರುದಿನ ಲಿಂಗಣ್ಣ ಊರಿಗೆ ಹೊರಡಲನುವಾದಾಗ ಅಂಗಡಿಗಳನ್ನು ಬಾಡಿಗೆಗೆ ಕೊಟ್ಟು ಪುಟ್ಟಮ್ಮನೊಡನೆ ಮಗಳ ಸಂಸಾರವನ್ನು ನೋಡಿಕೊಳ್ಳಲು ಇನ್ನೊಮ್ಮೆ ವಂದನಾಪೂರ್ವಕವಾಗಿ ಕೇಳಿಕೊಂಡ. ಅಂದೇ ಆನಂದ ಮನೆ ಯಲ್ಲಿ ತಾನೇ ಇದ್ದು ಬಾಡಿಗೆ ಕೊಡುವುದಾಗಿ ಕೇಳಿಕೊಂಡಿದ್ದರಿಂದ ಶಿವೆ ಹಾಗೇ ಆಗಲೆಂದಳು. ಅದೇ ಉತ್ತಮವೆಂದ ಲಿಂಗಣ್ಣ. ಆದರೆ ಮನೆ ಯವನಾದ ಆನಂದನಿಂದ ಬಾಡಿಗೆ ತೆಗೆದುಕೊಳ್ಳುವುದು ಹೇಗೆಂಬ ಪ್ರಶ್ನೆ ಉದ್ಭವಿಸಿದಾಗ ಆನಂದ ಆ ಬಗ್ಗೆ ಸಂಕೋಚ ಬೇಡವೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಂಡಿದ್ದರ ಮೇಲೆ ಶಿವೆ ಸಂತಸದಿಂದ ಒಪ್ಪಿಕೊಂಡಳು.

ಮಧ್ಯಾಹ್ನ ಬಸ್ಸಿಗೆ ಲಿಂಗಣ್ಣ ಹೊರಡಲಿದ್ದುದರಿಂದ ತುಸು ವಿಶ್ರಾಂತಿ ಗಾಗಿ ಮಲಗಿಕೊಂಡ. ತಂದೆಯ ಬಟ್ಟೆಗಳನ್ನು ಜೋಡಿಸುವಾಗ ಶಿವೆ ಕಣ್ಣೀ ರಿನ ಕಾಲುವೆಯನ್ನು ಹರಿಸಿದಳು, ಇದುವರೆವಿಗೆ ಕೈತುಂಬ ಕೆಲಸವಿದ್ದುದ ರಿಂದ ದಿನಗಳುರುಳಿದರ ಪರಿವೇ ಆಗಿರಲಿಲ್ಲ. ಇನ್ನೆರೆಡು ದಿನಗಳಲ್ಲಿ ಗಂಡು ಮಕ್ಕಳಿಗೂ ಶಾಲೆ ಆರಂಭವಾಗುತ್ತದೆ. ಆನಂತರ ಮನೆಯಲ್ಲಿ ಒಬ್ಬಳೇ ಹೇಗೆ ಕಾಲಹರಣ ಮಾಡುವುದೆಂಬ ಯೋಚನೆ ಮೂಡಿತು. ವೃಥಾ ಕಾಲಹರಣ ಮಾಡುವುದಕ್ಕಿಂತ ಏನಾದರೂ ಕೆಲಸ ಮಾಡುವುದೊಳ್ಳಿತೆನಿಸಿದರೂ ಹೇಗೆಂಬ

ಪ್ರಶ್ನೆ ತಕ್ಷಣ ಉದ್ಭವಿಸಿತು. ಮೊದಲಾಗಿ ತನಗೆ ವಿದ್ಯೆಯಿಲ್ಲ. ಎರಡನೆಯದಾಗಿ ಸ್ವಾಮಿಗೆ ಹೆಣ್ಣು ಹೊಸ್ತಿಲು ದಾಟುವುದೂ ಇಷ್ಟವಿರಲಿಲ್ಲ. ಆತನ ದೃಷ್ಟಿಯಲ್ಲಿ ಹೆಣ್ಣು ಗೃಹಬಂದಿಯಾಗಿಯೇ ಉಳಿಯಬೇಕು. ಆಕೆಗೆ ಸ್ವಾತಂತ್ರ್ಯ ಕೂಡದು. ಮತ್ತು ಆಕೆಗೆ ವಿದ್ಯೆಯ ಅವಶ್ಯಕತೆಯೇ ಇಲ್ಲ ಎಂಬ ನಿಷ್ಠೂರವಾದಿ. ಓಹ್! ಎಂದೆಂದೂ ಸರ್ವಾಧಿಕಾರಿಯಂತೆಯೇ ವರ್ತಿಸುತ್ತಿದ್ದ. ...... ಅಂದ ಮೇಲೆ ಕೆಲಸ ಮಾಡುವುದು ಸಾಧ್ಯವೇ ಇಲ್ಲ. ಒಂದು ವೇಳೆ ಸ್ವಾಮಿಗದು ತಿಳಿದು ಬಂದರೆ ಈ ಎಲುಬುಗಳೊಂದು ಉಳಿಯಲಾರವು! ಎಷ್ಟಾದರೂ ಹೆಣ್ಣಾಗಿ ಹುಟ್ಟಬಾರದು ಎಂದುಕೊಂಡಳು ಶಿವೆ. ಒಡನೆ ಸರಸು ವಿಮಲೆಯರ ಚಿತ್ರ ಮನದಲೆಯಲ್ಲಿ ಮೂಡಿಬಂದಿತು. ಈ ಮಕ್ಕಳೂ ಗಂಡಾಗಿ ಹುಟ್ಟಬಾರದಿತ್ತೇ ಎಂದು ಮರುಗಿತು ಜೀವ,

ಲಿಂಗಣ್ಣ ಕಾಫಿಯನ್ನು ಕುಡಿದು ಶಿವಮ್ಮನಿಗೆ ಹೇಳಬೇಕಾದುದೆಲ್ಲವನ್ನೂ ಹೇಳಿ ಬಸ್ಸಿನ ನಿಲ್ದಾಣಕ್ಕೆ ಹೊರಡಲನುವಾದ. ರವಿ ಕೈಚೀಲವನ್ನು ತೆಗೆದುಕೊಂಡು ಲಿಂಗಣ್ಣನನ್ನು ಕಳುಹಿಸಿ ಬರಲು ಹಿಂಬಾಲಿಸಿದ. ತಂದೆಯನ್ನು ಕಣ್ಮರೆಯಾಗುವವರೆಗೂ ನೋಡುತ್ತಿದ್ದ ಶಿವೆ ಏಕಾಂಗಿಯಾಗಿ ಒಳಹೊಕ್ಕಳು. ಜನನಿಬಿಡವಾದ ತಾವಿನಲ್ಲಿದ್ದರೂ ತನ್ನವರಾರೂ ಇಲ್ಲದ ಪರಿ ಕಣ್ಣಿನಲ್ಲಿ ಕಂಬನಿಯನ್ನು ತರಿಸಿತು. ಹೊರಲಾರದ ಹೃದಯವನ್ನು ಹೊತ್ತ ದೇಹವು ಬಳುಕಿತು. ಶಿವೆ ಕಾಲೆಳೆದುಕೊಂಡು ಒಳ ಬಂದು ಚಾಪೆಯ ಮೇಲೆ ಕುಳಿತುಕೊಂಡಳು. ಸ್ವಾಮಿ ಕಾಣೆಯಾಗಿ ಮೂರು ತಿಂಗಳು ಕಳೆದುವು. ಇದುವರೆವಿಗೆ ತಂದೆಯ ಆಶ್ರಯವಿತ್ತು, ಇನ್ನು ತನ್ನದೆ ಆದ ಜೀವನವನ್ನು ರೂಪಿಸಿಕೊಳ್ಳಬೇಕಾಗಿದೆ. ನಾವೊಂದು ನೆನೆದರೆ ದೈವವೊಂದು ನೆನೆಯಿತು. ಎಂಬಂತೆ ಕಾಲವು ಪ್ರತಿಕೂಲವಾಗಿ ನಡೆಯುತ್ತಲಿದೆ ಹಾ! ವಿಧಿ.

ಎದುರಿನ ಗೋಡೆಯ ಮೇಲಿನ ಗಡಿಯಾರ ಟಣ್ ಟಣ್ ಎಂದು ಐದು ಹೊಡೆಯಿತು. ಶಿವೆ ತಲೆ ಬಾಗಿಲಿಗೆ ಹೋದಳು. ಮಕ್ಕಳು ಶಾಲೆಯಿಂದ ಬರುವ ಹೊತ್ತು. ತುಸು ಹೊತ್ತಿನೊಳಗಾಗಿ ಓಡೋಡಿ ಬಂದ ಸರಸು ವಿಮಲೆಯರು ಕೊಟ್ಟಿಗೆಗೆ ನೇರವಾಗಿ ಹೋದರು, ಬಾಗಿಲಲ್ಲಿ ನಿಂತ ಶಿವೆ ಖಿನ್ನವದನಳಾಗಿ ನಿಟ್ಟುಸಿರು ಬಿಟ್ಟಳು. ಹಸು 'ಅಂಬಾ!' ಎಂದು ಗಟ್ಟಿಯಾಗಿ ಅರಚಿಕೊಂಡಿತು. ಕಣ್ಣುಗಳು ತೇವವಾಗಿದ್ದುವು.

೫

ಶ್ರಾವಣ ಮಾಸ....ಶಾಂತ ವಾತಾವರಣ.

ಜಡಿಮಳೆ ಹೊಯ್ದು ಆಗತಾನೇ ನಿಂತಿತ್ತು. ಎಲ್ಲೆಲ್ಲೂ ಹಸುರು ಸೂಸುವ ಗದ್ದೆಯ ಕೋಗು ನಯನ ಮನೋಹರವಾಗಿ ಕಂಗೊಳಿಸುತ್ತಿತ್ತು. ಜಡಿಮಳೆಯಿಂದ ಗದ್ದೆಯಂಚು ಅಲ್ಲಲ್ಲಿ ಜರಿದುಹೋಗಿದ್ದುದರಿಂದ ರಾಮಣ್ಣ ಅದನ್ನು ಸರಿಪಡಿಸಲು ಆಗಲೇ ಹೋಗಿದ್ದಾನೆ. ರಾಜಮ್ಮ ಮನೆಗೆಲಸಗಳಲ್ಲಿ ನಿರತಳಾಗಿದ್ದಾಳೆ. ಹೊತ್ತು ಏರುವುದರೊಳಗಾಗಿ ರಾಮಣ್ಣನ ಸ್ನೇಹಿತ ಚಂದು ಕಾವೇರಿಯೊಡಗೂಡಿ ಬಂದ. ಚಂದು ವಾಸಿಸುವುದು ನೆರೆ ಹಳ್ಳಿಯಾದರೂ ಅಚ್ಚುಮೆಚ್ಚಿನ ಸ್ನೇಹಿತನಾದ ರಾಮಣ್ಣನ ಮನೆಗೆ ವಿರಾಮವಾಗಿ ಸತಿಯೊಡನೆ ಬಂದುದು ಇಂದೇ. ರಾಜಮ್ಮ ಕಾವೇರಿಯನ್ನು ಕರೆದು ಕೊಂಡು ಬರಲು ಹೇಳಿದ್ದಳು. ಮರಡಿಹಳ್ಳಿಗೆ ಹೋಗುವ ಮಾರ್ಗವಾಗಿ ಚಂದು ರಾಮಣ್ಣನ ಮನೆಯಲ್ಲಿ ತುಸು ಹೊತ್ತು ತಂಗಿದ್ದು ಮುಂದಿನ ಪ್ರಯಾಣ ಬೆಳೆಸುತ್ತಿದ್ದ. "ಎಂದಾದರೂ ಒಪ್ಪತ್ತು ಇದ್ದು ಹೋಗುವಂತೆ ಬಾ ಚಂದೂ" ಎಂದು ರಾಮಣ್ಣ ಅನೇಕ ಬಾರಿ ಹೇಳಿದ್ದ. "ಎಲ್ಲೋ ಅವಸರದಲ್ಲಿ ಹೊರಡುವೆ. ವಿರಾಮವಾಗಿ ಹೊರಡಲು ನನಗೆ ಬಿಡುವೆಲ್ಲಿದೆ?" ಎಂದೇ ಚಂದು ತಪ್ಪಿಸಿಕೊಳ್ಳುತ್ತಿದ್ದ.

ಚಂದು ಚಿಕ್ಕವನಾಗಿದ್ದಾಗ ಮರಡಿ ಹಳ್ಳಿಯ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದು ರಾಮಣ್ಣನ ಪ್ರೇಮದ ಸಂಗಾತಿಯಾಗಿದ್ದ. ಆಗಿನಿಂದಲೂ ಇಬ್ಬರೂ ಪರಮಸ್ನೇಹಿತರು. ವಿರಾಮ ಸಿಕ್ಕಿದಾಗಲೆಲ್ಲ ರಾಮಣ್ಣ ರಾಂಪುರಕ್ಕೆ ಹೋಗಿ ಸ್ನೇಹಿತನೊಂದಿಗೆ ಸ್ವಲ್ಪ ಹೊತ್ತು ಸಂತೋಷವಾಗಿ ಕಾಲಕಳೆದು ಬರುವ ಪದ್ಧತಿಯನ್ನಿಟ್ಟುಕೊಂಡಿದ್ದ. ಅಪರೂಪವಾಗಿ ಚಂದು ಪತ್ನೀ ಸಮೇತನಾಗಿ ಬಂದುದನ್ನು ಕಾಣುತ್ತಲೂ ರಾಜಮ್ಮ ಮುಗುಳ್ನಗೆಯಿಂದ ಸ್ವಾಗತಿಸುತ್ತಾ "ನೀವು ಬಂದಿರೆಂದು ಇಂದು ಬಿಸಿಲು ಬಂದಿದೆ!" ಎಂದಳು. ಒಮ್ಮೆಲೇ ಎಲ್ಲರ ಮುಖದಲ್ಲೂ ನಗುವಿನಲೆಯೆದ್ದಿತು.

"ಇಷ್ಟು ದಿನಗಳ ಮೇಲಾದರೂ ನಿನಗೆ ನೆನಪಾಯಿತಲ್ಲಾ?" ನಗುತ್ತಾ ಕಾವೇರಿಯನ್ನು ಹೀಯಾಳಿಸಿದಳು ರಾಜಮ್ಮ.

"ಮೊದಲು ನೀವೇ ಬರಬೇಕಾಗಿತ್ತು."

"ನಿನಗಿರುವಷ್ಟು ಅನುಕೂಲ ನನಗಿದ್ದರೆ ಅದರ ರೀತಿಯೇ ಬೇರೆಯಾಗಿರುತ್ತಿತ್ತು." ಎನ್ನುತ್ತ ರಾಜಮ್ಮ ಅತಿಥಿಗಳನ್ನು ಒಳಗೆ ಬರಮಾಡಿಕೊಂಡಳು.

"ನಾನು ಗದ್ದೆಯ ಕಡೆ ಹೋಗಿ ರಾಮಣ್ಣನೊಂದಿಗೆ ಬರುವೆ. ಇಲ್ಲಿದ್ದೇನು ಮಾಡಲಿ?" ಎಂದ ಚಂದು.

"ಈಗಲೇ ಏನು ಅವಸರ? ಕಾಫಿ ತೆಗೆದುಕೊಂಡು ಹೋದರಾಯಿತು."

"ಇಲ್ಲ. ಹೋಗಿಯೇ ಬರುವೆ ರಾಜಮ್ಮಾ" ಎನ್ನುತ್ತಾ ಉತ್ತರಕ್ಕೂ ನಿರೀಕ್ಷೆ ಮಾಡದೆ ಗದ್ದೆಯ ಕಡೆ ತೆರಳಿದ ಚಂದು. ಕಾವೇರಿಯು ರಾಜಮ್ಮನೊಡನೆ ಒಳಗಡೆ ಹೋದಳು.

"ಮಕ್ಕಳೆಲ್ಲಿ?" ಕಾವೇರಿ ಕೇಳಿದಳು.

"ಸಾವಿತ್ರಿ ಅತ್ತೆಯ ಮನೆಯಲ್ಲಿದ್ದಾಳೆ. ನಿರ್ಮಲ ಅಜ್ಜಿಯ ಮನೆಯಲ್ಲಿದ್ದಾಳೆ. ವೆಂಕಟೇಶ, ರಮೇಶ ಇಬ್ಬರೂ ಶಾಲೆಗೆ ಹೋಗಿದ್ದಾರೆ."

"ಮರಡಿಹಳ್ಳಿ ಶಾಲೆ ಬಲು ದೂರ."

"ಮೂರು ಮೈಲಿ ಮೇಲಾಗುವುದರಿಂದ ಶಾಲೆ ಮುಗಿಸಿಕೊಂಡು ಮನೆ ಸೇರುವಷ್ಟರಲ್ಲಿ ಬಲು ಹೊತ್ತಾಗುತ್ತದೆ." ಎಂದು ರಾಜಮ್ಮ ಕಾವೇರಿಯನ್ನು ಕೂಡಲು ಹೇಳಿ ಚಾಪೆಯನ್ನು ಹರವಿದಳು. ಮಾತುಕತೆಗಳಲ್ಲಿ ತುಸು ಹೊತ್ತು ಉರುಳಿತು.

"ಅಂದಹಾಗೆ ಸ್ವಾಮಿಯ ವಿಚಾರವೇನು?" ಕಾವೇರಿ ಕೇಳಿದಳು.

"ಏನೆಂದು ಹೇಳುವುದು? ಆತನಿಗೆ ಬುದ್ಧಿಯಿಲ್ಲ."

"ಶಿವೆ ಗುಣಾಢ್ಯೇ. ಬಹಳ ಕಷ್ಟಕ್ಕೆ ಸಿಕ್ಕಿದಳು. ಮುಂದೆ ಅವರ ಜೀವನ ನಡೆಯುವುದು ಹೇಗೆ?"

"ದೇವರಿಗೇ ಗೊತ್ತು."

"ಭಾರ ಇನ್ನು ನಿಮ್ಮ ತಲೆಯ ಮೇಲೆ ಬೀಳುತ್ತೆ. ಗೌರಿಯ ಮಕ್ಕ

ಳಿರಡು ಬೇರೆ ಇವೆ."

"ಅಬ್ಬಬ್ಬಾ! ಆರುಮಂದಿಯ ಭಾರವನ್ನು ಹೊರುವುದು ಸಾಮಾನ್ಯವಲ್ಲ; ನಮ್ಮದೇ ನಮಗೆ ಹೊರೆಯಾಗಿದೆ ಕಳೆದ ವರ್ಷ ಹೊಸಮನೆ ಕಟ್ಟಿದರು. ಅದರ ಹಿಂದಿನ ವರ್ಷ ಸಾವಿತ್ರಿಯ ಮದುವೆ ಮಾಡಿದ್ದಾರೆ. ಕೈಯಲ್ಲಿ ಕಾಸು ಇರುವುದಿರಲಿ, ತಲೆಯ ಮೇಲಿನ ಹೊರೆ ಇಳಿಸಿಕೊಂಡರೆ ಮಾನ ಉಳಿದೀತು. ಇಷ್ಟೆಂದಮೇಲೆ ಶಿವೆಯ ಭಾರವನ್ನು ಹೊರುವುದಾದರೆ ನಾವು ಕೆರೆ ಬಾವಿ ಕಾಣಬೇಕಾದೀತು. ಸಂಸಾರದಲ್ಲಿ ಆತನೇ ಮಾಡಿಕೊಂಡ ವಿರಸದಿಂದ ಎಷ್ಟು ಜನರಿಗೆ ತಲೆನೋವು ? ಲಿಂಗಣ್ಣ ಆಗಾಗ ಬರುತ್ತಿರುತ್ತಾರಂತೆ. ಪಾಪ, ಅವರಿಗೂ ಕಷ್ಟ. ಗದ್ದೆ, ಹೊಲ, ಮನೆ, ಮಠ ಬಿಟ್ಟು ಇಲ್ಲಿರುವುದಾದೀತೆ? ಸ್ವಾಮಿ ಕಾಣೆಯಾದ ಮೇಲೆ ಆ ಕಡೆ ಹೋಗಲಾಗಲಿಲ್ಲ."

"ರಾಮಣ್ಣನವರೂ ಹೋಗಲಿಲ್ಲವೇ ?"

"ಅವರೊಮ್ಮೆ ಹೋಗಿದ್ದರು."

"ಗಂಗಮ್ಮ ತೀರಿಕೊಂಡ ಮೇಲೆ ಶಿವಮ್ಮನಿಗೆ ಅರ್ಧಪಾಲು ಯಾತನೆ ಕಡಿಮೆಯಾಗಿತ್ತೆಂದು ತೋರುತ್ತದೆ."

"ಅಯ್ಯೋ, ಸ್ವಾಮಿಯೇನು ಕಡಿಮೆಯೆ ? ಆಕೆಯನ್ನು ಹಣ್ಣು ಮಾಡಿದ್ದಾನೆ. ತೌರಿಗೂ ಕಳುಹಿಸುತ್ತಿರಲಿಲ್ಲ. ನಾಲ್ಕಾರು ವರ್ಷಗಳಿಗೊಮ್ಮೆ ಇಷ್ಟಬಂದಾಗ ಒಪ್ಪೊತ್ತಿಗೆ ಕರೆದುಕೊಂಡು ಹೋಗಿ ಬರುತ್ತಿದ್ದ. ಇಷ್ಟಾದರೂ ಲಿಂಗಣ್ಣ ತುಟಿ ಪಿಟಕ್ಕೆನ್ನುತ್ತಿರಲಿಲ್ಲ. ಸ್ವಾಮಿ ಇರುವಾಗ ಲಿಂಗಣ್ಣ ಈ ಕಡೆ ಕಾಲಿಡಲಿಲ್ಲ. ಈಗ ಬಂದು ಹೋಗುತ್ತಿದ್ದಾರಂತೆ."

"ಅಂತೂ ಶಿವೆ ಬಹಳ ಕಷ್ಟಕ್ಕೆ ಸಿಕ್ಕಿದಳು."

"ಸ್ವಾಮಿ ಎಂದಾದರೂ ಬರಬಹುದು. ಅಲ್ಲಿಯ ತನಕ ಕೊಂಚ ಕಷ್ಟವಾದೀತಷ್ಟೆ."

"ಗೌರಿ ಪ್ರಾಣ ಬಿಟ್ಟಾಗಿನಿಂದ ಗಿರೀಶನ ಪತ್ತೆ ಇಲ್ಲ. ಅವನು ಮಕ್ಕಳನ್ನು ಪೂರ್ಣ ಮರೆತುಬಿಟ್ಟಿದ್ದಾನೆಂದು ತೋರುತ್ತದೆ."

"ಶುದ್ಧ ತಿಳಿಗೇಡಿ."

ಹೊರಗಡೆ ಕಾಲಸಪ್ಪಳ ಕೇಳಿ ಬರುತ್ತಲೂ ರಾಜಮ್ಮ ಹೊರ ಬಂದಳು. ಚಂದ್ರುವಿನೊಂದಿಗೆ ರಾಮಣ್ಣ ಒಳಬಂದ. ನೀವು ಮನೆಗೆ ಹೋಗಿ ಕೈಕಾಲು

ತೊಳೆದುಕೊಂಡು ಬಂದು ಜಗಲಿಯ ಮೇಲೆ ಕುಳಿತುಕೊಂಡರು. ರಾಜಮ್ಮ ಬಿಸಿ ಕಾಫಿಯನ್ನು ತಂದಿಟ್ಟರು. ಕಾಫಿಯನ್ನು ಗುಟುಕಿಸುತ್ತಾ ಚಂದು ಕೇಳಿದ. "ರಾಜಣ್ಣನ ಸುಳಿವೇ ಇಲ್ಲವಲ್ಲಾ ? ಊರಿನಲ್ಲಿಲ್ಲವೇನು? "

"ಅವನ ಹೆಂಡತಿ ನಾಲ್ಕನೆಯ ಗಂಡುಮಗುವಿಗೆ ಜನ್ಮವಿತ್ತಿದ್ದಾಳೆ. ರಾಜಣ್ಣನಿಗೆ ಹೆಣ್ಣು ಮಗುವಿನ ಮೇಲೆ ಮಮತೆಯಿತ್ತು. ಈ ಸಲವೂ ಗಂಡುಮಗುವಾದುದು ಅವನಿಗೆ ಸಮಾಧಾನವಿಲ್ಲ. ಆಕೆ ಹೆತ್ತು ತಿಂಗಳಾಯ್ತು. ಈಗ ನೋಡಿಕೊಂಡು ಬರಲು ಹೋಗಿದ್ದಾನೆ."

"ಹೆಣ್ಣು ಮಗುವಾದರೆ ಅಂದೇ ಹೋಗುತ್ತಿದ್ದನೇನೋ" ಎಂದು ನಸು ನಕ್ಕ. ಚಂದು ತುಸು ತಡೆದು ಪುನಃ ಕೇಳಿದ. "ಈಗ ರಾಜಣ್ಣ ಅಡುಗೆ ಮಾಡಿಕೊಳ್ಳುತ್ತಾನೇನು?"

"ಇಲ್ಲ ಆಕೆ ತೌರಿಗೆ ಹೋದಾಗಿನಿಂದ ಇಲ್ಲಿಯೇ ಇದ್ದಾನೆ. ಈ ವರ್ಷ ಹೊಸಮನೆ ಕಟ್ಟಬೇಕೆಂದಿದ್ದಾನೆ. ಹಳೆಯ ಮನೆಯಲ್ಲಿ ವಾಸಮಾಡುವಂತಿಲ್ಲ. ಕಳೆದ ವರ್ಷದವರೆಗೆ ನಾವೆಲ್ಲರೂ ಅಲ್ಲಿ ಕಾಲಯಾಪನೆ ಮಾಡಿದುದು ರೌರವ ನರಕವೆಂದೇ ಹೇಳಬೇಕು. ಅದನ್ನು ಕೆಡವಿ ಅದೇ ಸ್ಥಳದಲ್ಲಿ ಕಟ್ಟಬೇಕೆಂದು ಅವನ ಇಚ್ಛೆ."

"ನಿನ್ನ ಮನೆಯ ಗೃಹಪ್ರವೇಶಕ್ಕೆ ಕಾವೇರಿಯನ್ನು ಕರೆತರಲಾಗಲಿಲ್ಲವೆಂದೇ ಈಗ ಕರೆದುಕೊಂಡು ಬಂದಿದ್ದೇನೆ."

"ಅಂತೂ ದೊಡ್ಡ ಮನಸ್ಸು ಮಾಡಿದ್ದೀಯೆ" ರಾಮಣ್ಣ ಗಟ್ಟಿಯಾಗಿ ನಕ್ಕುಬಿಟ್ಟ.

ಚಂದು ಸಿಗುತ್ತ ಕಾಫಿಯನ್ನು ಗುಟುಕು ಗುಟುಕಾಗಿ ಹೀರುತ್ತಿದ್ದ. ಮನಸ್ಸು ಸ್ವಾಮಿಯ ವಿಚಾರದೆಡೆ ಹರಿಯಿತು. "ರಾಮಣ್ಣ ಸ್ವಾಮಿಯ ಪತ್ತೆಯೇ ಆಗಲಿಲ್ಲ. ನೀವು ಸರಿಯಾದ ಕ್ರಮ ಕೈಗೊಳ್ಳದಿದ್ದರೆ ಪತ್ತೆಯಾಗುವುದೂ ಇಲ್ಲ."

"ನಾನೇನು ಮಾಡಲಿ ? ಸರಿಯಾಗಿ ಉಸಿರಾಡುವುದಕ್ಕೂ ಈಗ ನನಗೆ ಬಿಡುವಿಲ್ಲ. ಇನ್ನು ಅವನ ಚಿಂತೆಯನ್ನಿಷ್ಟು ಹಚ್ಚಿಕೊಂಡರೆ ತಲೆಯೇ ಕೆಟ್ಟೀತು. ಏನಾದರೂ ಆಗಲಿ, ಬುದ್ಧಿ ಬಯಸಿದಾಗ ತಾನಾಗಿಯೇ ಹಿಂದಿರುಗುತ್ತಾನೆ. ಅವನಿಗೆ ತಿಳಿವಳಿಕೆ ಕಡಿಮೆಯೇ ? ವಿದ್ಯೆ ಬುದ್ಧಿ ಕಡಿಮೆಯೇ ?

ಅಂದ ಮೇಲೆ ....ಯಾರಾದರೂ ಏಕೆ ಮರುಗಿಯಾರು?"

"ಛೇ! ಹಾಗೆಂದರಾಗುತ್ತದೆಯೆ? ಹೆಂಡತಿ ಮಕ್ಕಳ ಗತಿಯೇನು? ಹಿರಿಯವನಾದ ನೀನು ...." ಮುಂದೆ ಮಾತು ಮುಂದುವರಿಸಗೊಡದೆ ರಾಮಣ್ಣ ನಡುವೆ ಬಾಯಿ ಹಾಕಿದ "ಚಂದೂ ಇಲ್ಲಿ ಕೇಳು, ಆರುಮಂದಿಯ ಭಾರವನ್ನು ಹೊರುವಷ್ಟು ಚಕ್ರವರ್ತಿಯಲ್ಲ ನಾನು. ಹೆಂಡತಿ ಮಕ್ಕಳನ್ನು ಸಾಕಲಾರದವನು ಮದುವೆಯಾದುದೇ ತಪ್ಪು !"

"ಹಾಗೆಂದು ಅವರನ್ನು ಉಪವಾಸ ಬೀಳಿಸುವುದಕ್ಕಾಗುತ್ತದೆಯೇ? ಪಾಪ; ಲಿಂಗಣ್ಣನಾದರೂ ಎಷ್ಟು ಭಾರ ಹೊತ್ತಾರು?"

"ಈ ಮಣ್ಣೊಂದಿಗೆ ಮಣ್ಣಾಗಿ ಬೆರೆತು ಇವನಿಗೆ ವಿದ್ಯಾಭ್ಯಾಸ ಕೊಟ್ಟೆ. ಸ್ವಾಮಿಗೂ ಆನಂದನಿಗೂ ಇಂಟರ್ ಪರೀಕ್ಷೆಯವರೆಗೆ ಓದಿಸಲು ಖರ್ಚು ಸಾಮಾನ್ಯವಾಗಿರಲಿಲ್ಲ ನಾನಂತೂ ಓದಲಿಲ್ಲ. ಇವರಾದರೂ ಓದಲಿ ಎಂಬ ಆಸೆಯಿತ್ತು. ಈಗ ನೋಡಿದರೆ ವಿದ್ಯೆಯೇ ವ್ಯತ್ಯವಾಯಿತೇನೋ ಎಂಬಂತಾಗಿದೆ, ನಾವು ಈ ಮಣ್ಣನಲ್ಲಿ ಬೆವರಿನೊಂದಿಗೆ ನೆತ್ತರನ್ನು ಸೂಸಿ ದುಡಿದಿದ್ದೇವೆ. ಅಸಾಧ್ಯ ಪರಿಶ್ರಮದಿಂದ ಹತ್ತು ಎಕರೆ ಜಮೀನನ್ನು ಹೊಸ ದಾಗಿ ರೂಢಿಸಿಕೊಂಡೆ. ದುಡಿಯದೆ ಉಣ್ಣುವುದಾದರೂ ಹೇಗೆ? ದೇಹ ದಂಡನೆಯಿಲ್ಲದೆ ಬಾಳು ನಡೆದೀತೆ? ಮಣ್ಣಿಗಂಟಿಕೊಳ್ಳಚ್ಚಿಸದೆ ಇಬ್ಬರೂ ಪಟ್ಟಣ ಸೇರಿದರು. ಸ್ವಾಮಿಯ ಗತಿ ಈ ರೀತಿಯಾದರೆ ಆನಂದನದು ಇನ್ನೊಂದು ರೀತಿಯಾಗುತ್ತಿದೆ. ಯಾವ ಕೆಲಸವನ್ನೂ ಸರಿಯಾಗಿ ಮಾಡದೆ ಸೋಮಾರಿಯಾಗಿ ಅಲೆಯುತ್ತಿದ್ದಾನೆ. ಇವರೆಲ್ಲರ ಭಾರವನ್ನು ನಾವು ಹೊರುವುದಾದರೆ ಮುಗಿದೇ ಹೋಯಿತು.ವಿದ್ಯಾವಂತರಾದ ಇವರು ನಮಗೆ ಮಾರ್ಗದರ್ಶಕರಾದಾರು ಎಂದುಕೊಂಡಿದ್ದರೆ ಕೊರಳಿಗೆ ಉರುಳೇ ಆದರು!" ತುಸು ತಡೆದು ಮತ್ತೆ ಮುಂದುವರಿದ ರಾಮಣ್ಣ "ಚಂದೂ. ಇವರ ವಿದ್ಯಾ ಭ್ಯಾಸಕ್ಕಾಗಿ ಬಹಳಷ್ಟು ಖರ್ಚು ಮಾಡಿದ್ದೇನೆ. ಅಂದೇ ಸ್ವಾಮಿ ನಮಗಿಷ್ಟು ವಿದ್ಯೆ ಕೊಟ್ಟರೆ ಸಾಕು. ಆಸ್ತಿಯಲ್ಲಿ ಎಳ್ಳಷ್ಟೂ ಭಾಗ ಬೇಕಿಲ್ಲ. ನಮ್ಮ ಅನ್ನ ವನ್ನು ನಾವೇ ಗಳಿಸಿಕೊಳ್ಳುತ್ತೇವೆ ಎಂದು ಹೇಳಿದ್ದರಿಂದ ವಿದ್ಯಾಭ್ಯಾಸ ಮಾಡಿ ಸಿದೆ.ಈಗಿನ ಪರಿಸ್ಥಿತಿಯನ್ನು ನೋಡಿದರೆ ಇವರು ಭಾಗಕ್ಕಾಗಿ ನಮ್ಮನ್ನು ತೊಂದರೆ ಪಡಿಸಲೂ ಸಿದ್ಧವೆಂದು ತೋರುತ್ತದೆ, ಆದ್ದರಿಂದ ಈಗಿನಿಂದಲೇ

ಕಾನೂನಿನ ರಕ್ಷಣೆ ಮಾಡಿಕೊಳ್ಳಬೇಕಾಗುತ್ತದೆ. ಕಲಿತವರು ಬಾಳಿಗೊಂದು ದಾರಿಯಾದಾರು ಎಂದುಕೊಂಡಿದ್ದೆನೇ ಹೊರತು ಹೊರೆಯಾದಾರೆಂದು ತಿಳಿದಿರಲಿಲ್ಲ." ತನ್ನ ಕಷ್ಟವನ್ನು ತೋಡಿಕೊಳ್ಳುವವರೊಂದಿಗೆ ಸ್ವಾರ್ಥದ ಸೀಮೆಯನ್ನೇ ಮುಟ್ಟಿದ್ದ ರಾಮಣ್ಣ.

ಮಾತು ಮುಗಿಯುವಷ್ಟರಲ್ಲಿ ರಾಜಣ್ಣ ಬಂದ, ಆಗ ತಾನೇ ಬಸ್ಸಿನಿಂದಿಳಿದು ಕಾಲುದಾರಿಯ ಮಾರ್ಗವಾಗಿ ನಡೆದುಕೊಂಡು ಬಂದಿದ್ದ. ಪ್ರಯಾಣದ ಆಯಾಸ ಮುಖದ ಮೇಲೆ ಎದ್ದು ತೋರುತ್ತಿತ್ತು. ಚಂದುವನ್ನು ಕಾಣುತ್ತಲೂ "ಓಹೋ. ಚಂದೂ, ಬಹಳ ಅಪರೂಪ! ಎಲ್ಲರೂ ಚೆನ್ನಾಗಿದ್ದೀರಾ?" ಎಂದು ಕುಶಲ ಪ್ರಶ್ನೆ ಮಾಡಿದ.

"ಹೆಂಡತಿ ಮಕ್ಕಳು ಚೆನ್ನಾಗಿದ್ದಾರೆಯೇ?" ಮರುಪ್ರಶ್ನಿಸಿದ ಚಂದು ಪುನಃ ಹೇಳಿದ. "ಕುಳಿತುಕೋ ರಾಜಣ್ಣ".

"ಕಾಲು ಕೆಸರಾಗಿದೆ ತೊಳೆದುಕೊಂಡು ಬರುವೆ." ಎಂದೆನ್ನುತ್ತ ರಾಜಣ್ಣ ಹಿತ್ತಲ ಕಡೆ ಹೋದ. ಕೈಕಾಲು ತೊಳೆದುಕೊಂಡು ಒಳಗಡೆ ಹೋಗಿ ಕಾವೇರಿಯನ್ನು ಕಂಡು ಕುಶಲ ಪ್ರಶ್ನೆ ಮಾಡಿ ರಾಜಮ್ಮನಿತ್ತ ಕಾಫಿಯನ್ನು ತೆಗೆದುಕೊಂಡು ಜಗುಲಿಗೆ ಬಂದ.

"ತುಂಬ ಹೊತ್ತಾಗಿದೆ. ಬಸ್ಸು ಹೊರಡುವುದು ತಡವಾಯಿತೇ?" ರಾಮಣ್ಣ ಕೇಳಿದ.

"ನಾನು ನಿನ್ನೆ ಮೈಸೂರಿಗೆ ಹೋಗಿ ಅಲ್ಲಿ ಉಳಿದು ಇಂದು ಅಲ್ಲಿಂದ ಹೊರಟೆ." ಎಂದ ರಾಜಣ್ಣ ಕುಳಿತುಕೊಂಡು ಕಾಫಿಯನ್ನು ಕುಡಿಯುತ್ತ ಮುಂದುವರಿದ "ಸ್ವಾಮಿ ಕಾಣೆಯಾದ ಮೇಲೆ ಅತ್ತ ಹೋಗಲು ಬಿಡುವೇ ಆಗಿರಲಿಲ್ಲ, ಈ ಸಲ ಹೋಗಿ ಬರೋಣವೆನ್ನಿಸಿತು ಹೋಗಿ ಬಂದೆ.

"ಇದುವರೆವಿಗೂ ನೀನು ಹೋಗಿರಲಿಲ್ಲವೆ?" ಚಂದು ದನಿಯಲ್ಲಿ ಅಚ್ಚರಿಯ ಝರಿ ಹರಿದು ಬಂತು. ತುಸು ತಡೆದು ಪುನಃ ಕೇಳಿದ "ಸ್ವಾಮಿಯ ಸಂಸಾರ ಕ್ಷೇಮವೆ?"

"ಚೆನ್ನಾಗಿದ್ದಾರೆ ಲಿಂಗಣ್ಣ ಬಂದಿದ್ದರಂತೆ.ಬೀದಿಗೆದುರಾಗಿ ಎರಡಂಗಡಿ ಕಟ್ಟಿಸಿದ್ದಾರೆ. ಮನೆಯನ್ನು ಎರಡು ವಿಭಾಗ ಮಾಡಿ ಬಾಡಿಗೆಗೆ ಕೊಡಲು ಅನುಕೂಲ ಮಾಡಿದ್ದಾರೆ. ಅವರಲ್ಲಿ ಆನಂದ ತಾನೇ ಇರುವುದಾಗಿ ಕೇಳಿ

ಕೊಂಡಿದ್ದಾನಂತೆ. ಎರಡಂಗಡಿಗಳನ್ನೂ ಇನ್ನೂರು ರೂಪಾಯಿಗಳಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಒಂದೊಂದನ್ನೇ ಇನ್ನೂರಕ್ಕೆ ಕೊಡಬಹುದಾಗಿತ್ತು. ವಿಳಂಬವಾಗುತ್ತದೆಂದು ಬಂದಷ್ಟಕ್ಕೆ ಕೊಟ್ಟಿದ್ದಾರೆ. ಹಸು ಕರು ಹಾಕಿದೆ ಹಾಲಿನಿಂದಲೂ ಹಣ ಬರುತ್ತಿದೆ. ಒಟ್ಟಿನಲ್ಲಿ ಖರ್ಚಿಗೆ ಸಾಕಷ್ಟು ಮಾಡಿ ಕೊಂಡಿದ್ದಾರೆ."

"ಅಷ್ಟಕ್ಕೆಲ್ಲಾ ಹಣ ಹೇಗೆ ಒದಗಿತು?"

"ಮನೆಯಲ್ಲಿದ್ದ ಒಡವೆ–ವಸ್ತು–ಪಾತ್ರೆ ಪಗಡಿ ಹಸುವಿನ ಕರು ಎಲ್ಲಾ ಮಾರಿಬಿಟ್ಟಿದ್ದಾರೆ. ಮೇಲಾಗಿ ಲಿಂಗಣ್ಣ ಸಾವಿರ ರೂಪಾಯಿಗಳನ್ನು ಮುಟ್ಟಿಸಿದ್ದಾರೆಂದು ರವಿ ಹೇಳಿದ. ಅಂತೂ ಜೀವನಕ್ಕೆ ಸಾಕಷ್ಟು ಮಾಡಿಕೊಂಡಿದ್ದಾರೆ, ಇನ್ನೇನೂ ಯೋಚಿಸಬೇಕಾಗಿಲ್ಲ."

"ಆನಂದ ಪಕ್ಕದಲ್ಲಿರುವುದಾದರೆ ಶಿವೆಗೂ ಅನುಕೂಲ."

"ಆದರಿಂದಾಗಿಯೇ ಲಿಂಗಣ್ಣ ಒಪ್ಪಿಕೊಂಡರಂತೆ."

"ಸ್ವಾಮಿಯ ವಿಚಾರವೇನೂ ತಿಳಿಯಲಿಲ್ಲವೆ?"

"ಇಲ್ಲ, ಶಿವೆ ಬಹಳ ಸೊರಗಿಬಿಟ್ಟಿದ್ದಾಳೆ. ಎದುರು ಮನೆಯ ಪುಟ್ಟಮ್ಮನವರು ಆಗಾಗ ಬಂದು ವಿಚಾರಿಸಿಕೊಳ್ಳುವುದರಿಂದ ತೊಂದರೆಯಿಲ್ಲ. ಆನಂದ ಕೆಲವು ದಿನಗಳು ಅಲ್ಲಿದ್ದು ಕೆಲಸ ಹುಡುಕಿಕೊಂಡಿದ್ದಾನಂತೆ. ಆದರಿನ್ನೂ ಅವನು ಬಂದಿಲ್ಲ."

"ಚಂದೂ, ಸ್ವಾಮಿ ಮನೆಬಿಟ್ಟು ಹೊರಡುವ ಎರಡು ದಿನ ಮುಂಚೆ ನಾನಲ್ಲಿಯೇ ಇದ್ದೆ. ಅವನಲ್ಲಿ ಈ ಸೂಚನೆಯೇನೂ ಕಂಡುಬರಲಿಲ್ಲ, ಎಂದಿನಂತೆಯೇ ಇದ್ದ. ಕೆಲವು ದಿನಗಳಿಂದ ತಲೆನೋವು ಶುರುವಾಗಿದೆ ಎಂದು ಮಾತ್ರ ನನ್ನೊಂದಿಗೆ ಹೇಳಿದ್ದ ಅದೊಂದು ವಿನಾ ಮತ್ಯಾವ ತೊಂದರೆಯೂ ಇಲ್ಲದೆ ಸುಖದಾಗಿದ್ದ. ಇದೇನು ಬಂತೋ ಗ್ರಹಚಾರ ಎನಿಸುತ್ತಿದೆ." ರಾಮಣ್ಣ ತುಸು ತಡೆದು ಪುನಃ ಮುಂದುವರಿದ. "ನೋಡು ಚಂದೂ. ಇದು ಬರಿಯ ಹುಡುಗಾಟಿಕೆಯ ಮಾತಾಯಿತು. ಇವನಿಗೆ ಸಾಧ್ಯಾಸಾಧ್ಯತೆಗಳ ಪರ್ಯಾಲೋಚನೆಯಿಲ್ಲ. ಸಿಟ್ಟು ಬಂದಾಗ ಕೊಯ್ದುಕೊಂಡ ಮೂಗು ಅನಂತರ ಹಚ್ಚಲು ಬರುವುದಿಲ್ಲ, ಮೊದಲೇ ಒರಟು ಮನುಷ್ಯ. ಏನೋ ಸಿಟ್ಟು ಬಂದಿದೆ ಹೊರಟುಬಿಟ್ಟಿದ್ದಾನೆ ಧೀರ! ದನಿಯಲ್ಲಿ ಜುಗುಪ್ಸೆ ಜಿನುಗಿತು.

"ರಾಮಣ್ಣ, ನೀನು ಕರ್ತವ್ಯಲೋಪ ಮಾಡಿದ್ದೀ? ಎಂದು ಹೇಳದೆ ವಿಧಿಯಿಲ್ಲ."

"ಕರ್ತವ್ಯಲೋಪ ...? ಸರಿ, ಸರಿ....ಶುದ್ಧ ಶುಂಠಿ-ಮುಂಗೋಪಿ-ತಾಳ್ಮೆಯಿಲ್ಲದ ಹುಡುಗ....ಮುಡುಕಿ ಓಡಿಹೋದರೆ ಈ ಬ್ರಹ್ಮಾಂಡದಲ್ಲಿ ಹುಡುಕಿ ತೆಗೆಯುವುದಾದರೂ ಹೇಗೆ? ನನಗೂ ವ್ಯಸನವಾಗಿದೆ. ಆದರೂ ಮಾಡುವುದೇನು?"

"ಅಲ್ಲಯ್ಯಾ, ನೀನು ಮನೆ ಬಿಟ್ಟು ಆಚೆ ಹೋಗಿದ್ದರೆ ತಾನೆ ವಿಚಾರ ತಿಳಿಯುವುದು? ನಿನಗೇ ಬೇಕಿಲ್ಲದ ಮೇಲೆ ಪೋಲೀಸರು ಏನು ಮಾಡಿ ಯಾರು? ಮಕ್ಕಳ ಗತಿಯೇನು ಎಂಬುದನ್ನಾದರೂ ಯೋಚಿಸಬೇಡವೆ?"

"ನಾನು ಒಬ್ಬಂಟಿಗ ಹಾಗೂ ನಿಸ್ಸಹಾಯಕ. ಗದ್ದೆ ತೋಟಗಳ ವ್ಯವಸ್ಥೆಯಾಗಬೇಕು. ಒಂದು ದಿನ ಮನೆಯಲ್ಲಿಲ್ಲದಿದ್ದರೆ ಕಳೆಯುವುದಿಲ್ಲ. ಒಂದು ವೇಳೆ ಚಿಕ್ಕವರಾಗಿದ್ದರೆ ಏನು ಬಂತೋ ಎಂದು ಮರುಗಬೇಕು. ಈತನಿಗೆ ಮರುಗಿ ಏನು ಪ್ರಯೋಜನ?"

"ರಾಮೂ, ಸಮಯ ಸಂದರ್ಭ ಬಂದಾಗ ಯಾರ ಗತಿ ಏನಾಗುತ್ತೋ? ಮನಸ್ಸು ಕೆಟ್ಟಾಗ, ಅದೃಷ್ಟಹೀನನಾದಾಗ ಎಂತೆಂತಹ ಸನ್ನಿವೇಶಗಳು ಒದಗುತ್ತವೆಯೋ ಯಾರಿಗೆ ಗೊತ್ತು? ಅಂತಹವರಿಗಾಗಿ ಮರುಗಬೇಕೆ ವಿನಾ ಜುಗುಪ್ಸೆಪಟ್ಟುಕೊಳ್ಳಬಾರದು."

"ಪೋಲೀಸರ ಮುಖಾಂತರ ಲಿಂಗಣ್ಣ ಬಹಳ ಪ್ರಯತ್ನಪಟ್ಟಿದ್ದಾರೆ. ಆದರೂ ಸುದ್ದಿ ಹೊರಬೀಳಲಿಲ್ಲ. ಆದ್ದರಿಂದ ಸುಮ್ಮನಾದೆ. ಅವನಿಗೆ ದೇವರು ಒಳ್ಳೆಯ ಮನಸ್ಸು ಕೊಡಲಿ ಎಂದು ಪ್ರಾರ್ಥಿಸುವುದರ ಹೊರತು ನಾನಿನ್ನೇನೂ ಮಾಡಲಾರೆ."

"ಈಗಾಗಲೇ ಮಕ್ಕಳಿಗೆ ಶಾಲೆ ಪ್ರಾರಂಭವಾಗಿರಬಹುದು. ಹಿರಿಯ ನಾದ ನೀನು ಹೋಗಿ ನೋಡಿಕೊಳ್ಳದಿದ್ದರೆ ಹೇಗೆ? ಗೌರಿಯ ಮಕ್ಕಳೂ ಅಲ್ಲಿದ್ದಾರೆ. ಈ ಕಾಲದಲ್ಲಿ ಮಕ್ಕಳ ವಿದ್ಯಾಭ್ಯಾಸ ಸಾಮಾನ್ಯವಲ್ಲ."

"ನೀನು ನನ್ನನ್ನೇ ಮಾಡು ಎನ್ನುವುದು ತಪ್ಪು! ನನ್ನಿಂದ ಅಷ್ಟು ಭಾರವನ್ನು ಹೊರುವುದಕ್ಕಾಗುವುದಿಲ್ಲ. ನಾನೀಗ ಸಹಾಯ ಮಾಡುವ ಸ್ಥಿತಿ ಯಲ್ಲಿಲ್ಲ" ಗೋಣು ಅಲ್ಲಾಡಿಸಿ ನುಡಿದ ರಾಮಣ್ಣ,

"ಚಂದೂ, ಇನ್ನು ಸಹಾಯದ ಪ್ರಶ್ನೆ ಏಳುವುದಿಲ್ಲ. ಮಾಧವರಾಯರು ಮಕ್ಕಳೈವರಿಗೂ ಪುಸ್ತಕಗಳನ್ನು ಕೊಂಡು ಕೊಟ್ಟಿದ್ದಾರಲ್ಲದೆ ವಿದ್ಯಾರ್ಥಿವೇತನ ವನ್ನೂ ಕೊಡಿಸುವುದಾಗಿ ಹೇಳಿದ್ದಾರಂತೆ. ಊಟಕ್ಕೆ ಸಾಕಷ್ಟು ಬರುತ್ತದೆ. ಶಿವೆ ಬುದ್ಧಿವಂತಿಕೆಯಿಂದ ವರ್ತಿಸಿದ್ದಾಳೆ. ಒಡವೆಗಳನ್ನು ಒಂದೊಂದೇವಾರಿ ತಿಂದಿದ್ದರೆ ಮುಗಿದೇ ಹೋಗುತ್ತಿತ್ತು ಅಷ್ಟರಿಂದಲೇ ಆಜನ್ಮ ಪರ್ಯಂತರ ದಕ್ಕಿಸುವ ಯೋಜನೆ ಹೂಡಿದ್ದಾಳೆ," ರಾಜಣ್ಣ ನುಡಿದ.

"ಒಬ್ಬಳೇ ತಂಗಿ ಗೌರಿ, ಅವಳ ತಬ್ಬಲಿ ಮಕ್ಕಳನ್ನು ನೀವು ನೋಡ ಲಾರದೆ ಕೈಬಿಟ್ಟಿರಿ. ಸ್ವಾಮಿಯಿಲ್ಲವಾದರೂ ಶಿವೆ ಕೈಬಿಡಲಿಲ್ಲ,"

"ಮೈಸೂರಿನಲ್ಲಿದ್ದು ಮಕ್ಕಳು ವಿದ್ಯಾವಂತರಾಗುತ್ತಾರೆಂದು ಸುಮ್ಮ ನಾದೆವು ಅಷ್ಟೆ" ರಾಮಣ್ಣ ಕಾರಣವನ್ನು ಮುಂದಿಟ್ಟ.

"ಅದು ಸ್ವಾಮಿಯಿದ್ದಾಗಿನ ಮಾತು. ಇಂದು?"

"ಚಂದೂ, ಈಗಾಗಲೇ ಏನೇನು ಮಾಡಬೇಕೋ ಅದನ್ನೆಲ್ಲಾ ಮಾಡಿ ಕೊಂಡಿದ್ದಾಳೆ. ಗೌರಿಯ ಮಕ್ಕಳು ಅಲ್ಲಿಯೇ ಇದ್ದು ಒಗ್ಗಿದ್ದಾರೆ, ಮತ್ತೇಕೆ ಆ ಪ್ರಸ್ತಾಪ? "ಜೀವನಕ್ಕೇನಾದರೂ ಸಹಾಯ ಮಾಡಬೇಕೆ ಎಂದು ಕೇಳ ಬಹುದಾದ ಅಗತ್ಯ ಕಾಣದುದರಿಂದ ಆ ಬಗ್ಗೆ ನನಗೂ ಪ್ರಸ್ತಾಪಿಸಲು ಮನಸ್ಸಾಗಲಿಲ್ಲ " ರಾಜಣ್ಣನೆಂದ.

"ಸದ್ಯ ಹೋಗಿ ವಿಚಾರಿಸಬೇಕೆಂದುಕೊಂಡಿದ್ದೆ. ಹಾಗಿದ್ದರೆ ಹೋಗು ವುದಿಲ್ಲ" ರಾಮಣ್ಣ ನಗುತ್ತಾ ನುಡಿದ.

ರಾಜಣ್ಣ ಕಾಫಿಯನ್ನು ಗುಟುಕುಗುಟುಕಾಗಿ ಹೀರುತ್ತಿದ್ದ. ರಾಮಣ್ಣನ ಮನಸ್ಸಿಗೆ ತುಸು ಕಸಿವಿಸಿಯುಂಟಾಯಿತು. ಮೂವರು ಅಣ್ಣತಮ್ಮಂದಿರಿದ್ದು ಸಮಯಕ್ಕೆ ಒದಗದಿದ್ದುದು ನಿಜವಾಗಿಯೂ ಲಜ್ಜೆಯೆನಿಸಿತು. ಆದರೂ ಅದನ್ನು ತೋರಗೊಡದೆ ರಾಜಣ್ಣನತ್ತ ತಿರುಗಿ "ಗಿರೀಶನ ವಿಚಾರವೇನಾದರೂ ತಿಳಿಯಿತೇ?" ಎಂದು ಪ್ರಶ್ನಿಸಿದ. ಉತ್ತರವಾಗಿ ಗೋಣು ಅಲ್ಲಾಡಿಸಿ ಇಲ್ಲ ವೆಂದು ರಾಜಣ್ಣ ಸೂಚಿಸಿದ, ಒಟ್ಟಿನಲ್ಲಿ ಚಂದುವಿನ ಮುಂದೆಯೇ ಶಿವಮ್ಮ ನಿಗೆ ಲಿಂಗಣ್ಣ ನೆರವಾದ ಬಗೆ ತಿಳಿದು ಬಂದುದು ನಾಚಿಕೆಗೇಡೆನಿಸಿತು, ಜೊತೆಗೆ ಗೌರಿಯ ಹಾಲು ಹಸುಳೆಗಳ ಚಿತ್ರ ಮನದಲೆಯಲ್ಲಿ ಮೂಡಿ ಮಾಯ ವಾಯಿತು. ರಾಮಣ್ಣ ಮಾತಿಲ್ಲದೆ ಕುಳಿತುದನ್ನು ನೋಡಿ ಚಂದು ಹೇಳಿದ

"ರಾಮಣ್ಣಾ, ಒಂದು ವೇಳೆ ನೀನೇ ಕಳೆದು ಹೋಗಿದ್ದರೆ ಸ್ವಾಮಿ ನಿನ್ನಂತೆ ಕೈಕಟ್ಟಿ ಕುಳಿತುಕೊಳ್ಳುತ್ತಿದ್ದನೇ? ಅವನು ಹೃದಯ ವೈಶಾಲ್ಯತೆಯನ್ನು ಹೊಂದಿದ ವ್ಯಕ್ತಿ. ಒಡಹುಟ್ಟುಗಳಲ್ಲಿ ಪ್ರೇಮವಿತ್ತು. ನೀವು ಕಣ್ಣಿದ್ದೂ ಕುರುಡರು!"

"ಹೌದಪ್ಪಾ, ಆರು ಮಂದಿಯ ಜೀವನ ಸಾಮಾನ್ಯವೇನಲ್ಲ. ಈ ಕಾಲದಲ್ಲಿ ಒಂದೊಂದು ಜೀವವೂ ದೊಡ್ಡ ಹೊರೆಯಾಗುತ್ತದೆ!"

"ರಾಜಣ್ಣಾ, ಇಲ್ಲಿ ಕೇಳು, ಲಿಂಗಣ್ಣ ಈಗ ಅವರನ್ನೇನು ತೀರಹೊತ್ತು ಕೊಂಡಿಲ್ಲ, ಸಮಯಕ್ಕೆ ಆದರು ಅಷ್ಟೆ. ಅಷ್ಟೂ ಕರುಣೆಯಿಲ್ಲದ ಜನ ನೀವು?" ಚಂದು ದನಿಯೇರಿಸಿ ಪುನಃ ಹೇಳಿದ "ನಿಮ್ಮಷ್ಟೇ ಸ್ವಾಮಿಯೂ ನನಗೆ ಬೇಕಾದವನು. ನನಗಿದು ತಿಳಿದು ಬಂದುದು ಈಗಲೇ. ನಮ್ಮ ಕಡೆಯಿಂದ ಇತ್ತ ಯಾರೂ ಬರದಿದ್ದುದರಿಂದ ವಿಷಯ ತಿಳಿಯಲಿಲ್ಲ.ತಿಳಿದೊಡನೆಯೇ ವಿಚಾರಿಸಿ ಕೊಂಡೇ ಹೋಗೋಣವೆಂದು ಬಂದೆ. ಇನ್ನೊಮ್ಮೆ ಹೇಳುವೆ. ಚಿಕ್ಕ ಮಕ್ಕಳನ್ನು ನೋಡಿಕೊಳ್ಳಬೇಕಾದುದು ನಿಮ್ಮ ಮೊದಲ ಕರ್ತವ್ಯ."

"ಓಹೋ,ಇಲ್ಲವಾಗಿದ್ದಿದ್ದರೆ ತಮ್ಮ ಸವಾರಿ ಇಲ್ಲಿಯ ತನಕ ಪ್ರಯಾಣ ಬೆಳೆಸುತ್ತಿರಲಿಲ್ಲವೆನ್ನಿ;" ಜೋರಾಗಿ ನಕ್ಕು ರಾಜಣ್ಣ ಪುನಃ ಹೇಳಿದ "ಚಂದೂ, ನೀನು ಬಹಳ ಮುಂದೆ ಹೋಗಿ ಬಿಡುತ್ತಿ. ನಮ್ಮ ಪಾಡೇ ನಮಗಾಗಿದೆ. ಇವರನ್ನು ಮೈಸೂರಿನಲ್ಲಿಟ್ಟು ಪೋಷಿಸಬೇಕಾದ ಪ್ರಮೇಯ ಕಾಣಲಿಲ್ಲ. ಇಲ್ಲಿ ಇದ್ದು ತೋಟದಲ್ಲಿ ದುಡಿದರೆ ತುತ್ತು ತಾನಾಗಿಯೇ ಬರುತ್ತದೆ. ತವರು ಮನೆಯಲ್ಲಿ ಕೆಲವು ದಿನ, ಇಲ್ಲಿ ಕೆಲವು ದಿನ ಇದ್ದು ಕಾಲಯಾಪನೆ ಮಾಡುವ ಇಚ್ಛೆ ಆಕೆಗಿಲ್ಲ!, ರಾಜಣ್ಣ ತುಸು ಜೋರಿನಿಂದಲೇ ಉತ್ತರಿಸಿದ.

"ಸರಿ ರಾಜಣ್ಣಾ, ನಿನ್ನ ವಾದವನ್ನೇ ಒಪ್ಪೋಣ ಮಕ್ಕಳ ವಿದ್ಯಾಭ್ಯಾಸ ಹೇಗೆ?"

"ಮೊದಲನೆಯದಾಗಿ ತುತ್ತಿನ ಪ್ರಶ್ನೆ."

"ಈಗ ತುತ್ತು ವಿದ್ಯೆ ಎರಡಕ್ಕೂ ದಾರಿಯಾಗಿದೆ! ಏನುಹೇಳುತ್ತಿ?"

"ಅಷ್ಟೇ ಅಲ್ಲ, ಮೂರನೆಯದಕ್ಕೂ ದಾರಿಯಾಗಿದೆ!"

"ಹಾಗೆಂದರೆ?"

"ಚಂದೂ, ನಾವು ಹಳೇ ಸಂಪ್ರದಾಯದವರು. ಹೆಣ್ಣು ಹೊರಗೆ ಅಡ್ಡಾಡುವುದು ಸ್ವಾಮಿಗಿನಿತೂ ಇಷ್ಟವಿರಲಿಲ್ಲ. ಅವನಿದ್ದಾಗ ಶಿವೆ ಹೊರ ಬರುತ್ತಿರಲಿಲ್ಲ. ಈಗ ನೋಡು, ಸ್ವಾಮಿ ಕಾಣೆಯಾಗಿ ಕೆಲವೇ ಕೆಲವು ದಿನ, ಅಷ್ಟರಲ್ಲೇ ಹೆಂಗಸು ಗಂಡಸಾಗಿಬಿಟ್ಟಿದ್ದಾಳೆ. ಇದು ಒಳ್ಳೆಯತನದ ಕುರುಹಲ್ಲ! ಕುಂಕುಮಾಂಕಿತೆಯಾಗಿ ಹೊರಗಡೆ ಓಡಾಡುವುದು ನನಗಿನಿತೂ ಇಷ್ಟವಾಗಲಿಲ್ಲ. ನಾನು ಇದನ್ನೆಲ್ಲಾ ರವಿಯಿಂದ ತಿಳಿದುಕೊಂಡೆ. ಅಮ್ಮ ಅದು ಮಾಡಿದರು, ಇದು ಮಾಡಿದರು ಎಂದು ಉತ್ಸಾಹದಿಂದ ಹೇಳಿದ ಅವನು ಹಸು ಮಗು, ಇದು ಹೇಗೆ ಅರ್ಥವಾದೀತು ? ಯಾರೋ ಗೊತ್ತು ಗುರಿಯಿಲ್ಲದ ಜನರೊಂದಿಗೆ ವ್ಯವಹಾರ ಹೂಡಿ ಸಲುಗೆಯಿಂದ ವರ್ತಿಸುವುದು ಸರಿಯಲ್ಲ!" ರಾಜಣ್ಣ ಬಹು ಉದ್ರೇಕದಿಂದ ಹೇಳಿದ.

"ರಾಜಣ್ಣಾ, ಒಮ್ಮೆಲೇ ಹಾಗೆ ಉದ್ರೇಕಗೊಳ್ಳಬೇಡ. ಇದೇ ಸ್ವಲ್ಪ ಮೊದಲು ಶಿವಮ್ಮನ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದವನೂ ನೀನೇಯೋ ಎಂದು ಆಶ್ಚರ್ಯಪಡುವಂತಹ ಸನ್ನಿವೇಶ ಇದು! ಆಗ ನೀನಾಡಿದ್ದು ಮೇಲು ಮೇಲಕ್ಕೆ ಎಂದು ಈಗ ಅರ್ಥವಾಗುತ್ತೆ. ಭಾವಂದಿರಾದ ನೀವು ಸಹಾಯ ಮಾಡುವ ಗೋಜಿಗೆ ಹೋಗಲಿಲ್ಲ ಅಂದಮೇಲೆ ಅವಳೂ ಮಾಡಿಕೊಳ್ಳದಿದ್ದ ರಾದೀತೆ ? ಅವಳು ಧೈರ್ಯ ಮಾಡಿದುದರಿಂದಲೇ ಇಂದು ಅನಾಥ ಮಕ್ಕಳ ಜೀವನಕ್ಕೆ ದಾರಿಯಾಯಿತು."

"ನೀನು ಏನೇ ಅನ್ನು, ನಿನ್ನ ವಾದವನ್ನು ನಾನು ಒಪ್ಪಲಾರೆ. ಗಂಡ ನಿಲ್ಲದ ಹೆಂಗಸು ಯೌವ್ವನೆ, ಮೇಲಾಗಿ ಸುಂದರಿ! ಹೇಗೆ ಬಾಳಬೇಕೋ ಹಾಗೆ ಬಾಳದವಳನ್ನು ಮೆಚ್ಚಿಕೊ ಎನ್ನುತ್ತಿದ್ದೀಯೋ ! ನಿನ್ನೆ ರಾತ್ರಿ ನನಗೆ ನಿಜವಾಗಿಯೂ ನಿದ್ರೆಯೇ ಬರಲಿಲ್ಲ. ಈ ಅತಿವರ್ತನೆ ಯಾರಿಗೂ ಸಲ್ಲ. ಮುಂದೆ ಇವಳ ದಾರಿಯನ್ನೇ ಮಕ್ಕಳು ತುಳಿಯುತ್ತಾರೆ. ನಮ್ಮ ಕುಲಕ್ಕೆ ಕಳಂಕ ! ನಮ್ಮ ಕಣ್ಮುಂದೆಯೇ ಈಕೆಗೆ ದಿಟ್ಟತನವೇ ? ಮುಖವು ಕೋಪ ದಿಂದ ಕೆಂಪಡರಿತು.

"ಚಂದೂ, ನನಗೂ ಆ ವಿಚಾರ ಹಿಡಿಸಲಿಲ್ಲ. ಈಗಾಗಲೇ ಹೀಗಾ ದುದು ಅಸಹ್ಯವೆನಿಸುತ್ತಿದೆ. ಇದು ಸರ್ವಥಾ ಅವಮಾನಕರ!" ರಾಮಣ್ಣನ ದನಿ ಕೋಪದಿಂದ ಹೊರಬಿತ್ತು.

"ಓಹೋ, ಇಬ್ಬರೂ ಒಂದಾದಿರಿ. ಆಕೆ ಗಂಡನನ್ನು ಕಳೆದುಕೊಂಡಾಗ ಈ ಶೂರತ್ವ ಎಲ್ಲಿ ಹೋಗಿತ್ತು ? ಹುಡುಕಿ ತರಲಿಲ್ಲವೇಕೆ? __ ಹೇಗೆ ಸುಮ್ಮನಾದಿರಿ ?"

"ಅವಳು ನಮ್ಮ ಸಹಾಯದ ನಿರೀಕ್ಷಣೆ ಮಾಡಲಿಲ್ಲವೇಕೆ ? ಸಹಾಯ ಕೋರಿದರೆ ನಮ್ಮ ಅಂಕೆಯೊಳಗೆ ಇರಬೇಕಾದೀತೆಂದೋ ?"

"ಇದಕ್ಕೆ ಉತ್ತರಿಸುವ ಕರ್ತವ್ಯ ನನ್ನದಲ್ಲ. ಆದರೆ ಒಂದು ಮಾತು ... ಸ್ವಾಮಿಯ ಕ್ಷೇಮಕ್ಕಾಗಿ ಇನಿತೂ ಮರುಗದ ನೀವು ಶಿವಮ್ಮನನ್ನು ಹತ್ತಿಕ್ಕು ವುದಕ್ಕಾಗಿ ಎಷ್ಟು ಹೋರಾಡುತ್ತಿದ್ದೀರಿ ! ಅದೇ ಆಶ್ಚರ್ಯ."

"ಇಲ್ಲಿ ಹತ್ತಿಕ್ಕುವುದೇನಿದೆ ? ನಾವು ನಮ್ಮ ಸಮಾಜದ ಕಟ್ಟುನಿಟ್ಟು ಗಳಿಗೆ ತಲೆಬಾಗದಿರುವುದೇ ? ನಮ್ಮ ಹಿರಿಯರಿಗೆ ಗೌರವಾರ್ಪಣೆ ಮಾಡ ದಿರುವುದೇ ?" ರಾಜಣ್ಣ ಜೋರಿನಿಂದ ಹೇಳಿದ.

"ರಾಜಣ್ಣಾ, ಈ ವ್ಯರ್ಥಾಲಾಪಕ್ಕಿಂತ ಸ್ವಾಮಿಯ ಪತ್ತೆಗಾದರೂ ಪ್ರಯತ್ನಪಡುವುದು ಲೇಸು. ನೀನು ಏನೇ ಅನ್ನು, ಈ ವಾದ ನಾನು ಒಪ್ಪಿ ಕೊಳ್ಳಲಾರೆ. ನಿಮ್ಮಿಬ್ಬರ ವಾದ ನೀವು ಒಂದೇ ಬಸುರಿನಿಂದ ಬಂದವರು ಎಂಬುದನ್ನು ಎತ್ತಿ ತೋರಿಸುತ್ತಿದೆ. ಇಷ್ಟರ ಮೇಲೆ ನಾನಿನ್ನು ಏನೂ ಹೇಳ ಲಾರೆ." ಎದೆಯಾಳದಿಂದ ಹೊಮ್ಮಿದ ಧ್ವನಿ ವಿಷಾದಪೂರ್ಣವಾಗಿತ್ತು.

"ಚಂದೂ, ನೀನು ಒತ್ತಾಯಿಸುವ ಕಾರಣವಿಲ್ಲ. ಇದು ಜಗನ್ನಿಯಮ. ಎಲ್ಲಕ್ಕೂ ಕಾರಣಕರ್ತನೊಬ್ಬನಿರುವಾಗ ನಮಗೇಕೆ ಹುಡುಕುವ ಚಿಂತೆ ? ಆತನ ಸಂಕಲ್ಪ ಹೇಗಿದೆಯೋ ಹಾಗೆ ಆಗಲೇಬೇಕು. ನಾವು ಹೇಗೆ ಈ ಪ್ರಪಂಚಕ್ಕೆ ಹೇಳದೇ ಕೇಳದೇ ಬಂದಿದ್ದೇವೋ ಹಾಗೆಯೇ ಹೇಳದೆ ಕೇಳದೆ ಇಲ್ಲಿಂದ ಹೊರಡುವವರಿದ್ದೇವೆ. ಸ್ವಾಮಿ ಒಂದು ರೀತಿಯಲ್ಲಿ ಹೋಗಿದ್ದರೆ ನಾವು ಇನ್ನೊಂದು ರೀತಿಯಲ್ಲಿ ಹೋಗುತ್ತೇವೆ. ಈಗ ನಾನು ಸತ್ತರೆ ನೀನು ಹುಡುಕಿ ತರುತ್ತೀಯೇನು ?"

"ಸ್ವಾಮಿ ಇಷ್ಟಕ್ಕೂ ಸಾಯಲಿಲ್ಲವಲ್ಲಾ ?"

"ಹೇಗೆ ಹೇಳುತ್ತಿ ?"

"ರಾಜಣ್ಣಾ, ನೀನು ಹೃದಯವಿಲ್ಲದ ವ್ಯಕ್ತಿ ! ನಿನ್ನ ತಮ್ಮ ಖಂಡಿತ ವಾಗಿಯೂ ಸತ್ತಿಲ್ಲ. ಹಾಗೆ ವಾರಸುದಾರರಿಲ್ಲದ ಹೆಣದ ಸುದ್ದಿ ಎಲ್ಲೆಲ್ಲೂ

ಕೇಳಿಬರಲಿಲ್ಲ. ಆದ್ದರಿಂದ ನಾನು ದೃಢವಾಗಿ ಹೇಳುವೆ, ನಿನ್ನ ತಮ್ಮ ಸತ್ತಿಲ್ಲ.

"ಅದು ನಿನ್ನ ಅಭಿಪ್ರಾಯವಾಗಿರಲಿ. ನೀನು ಏನಾದರೂ ತಿಳಿದುಕೊ ಚಿಂತೆಯಿಲ್ಲ. ನಾನಂತೂ ಸ್ವಾಮಿ ಬದುಕಿರುವಿಕೆಯನ್ನು ನಂಬುವುದಿಲ್ಲ. ಜೀವನದಲ್ಲಿ ಆರ್ಥಿಕವಾಗಿ, ದೈಹಿಕವಾಗಿ, ಮಾನಸಿಕವಾಗಿ ಸುಖವಾಗಿದ್ದವರು ಹೇಳದೆ ಕೇಳದೆ ಹೊರಟು ಹೋಗುವ ಕಾರಣವಿಲ್ಲ. ಹೋಗಲಿ, ಬುದ್ಧನಾಗಿ ಹೊರಡುವಷ್ಟು ಜ್ಞಾನಸಂಪತ್ತು ಸ್ವಾಮಿಯಲ್ಲಿರಲಿಲ್ಲ ಎಂದರೆ ಒಪ್ಪಿ ಕೊಳ್ಳುತ್ತೀ ತಾನೇ ? ಅಂದಮೇಲೆ ಯಾರೋ ಆಗದವರಿಂದ ಪ್ರಾಣಕ್ಕೆ ಸಂಚಕಾರ ಒದಗಿದ್ದು ದೇಹವನ್ನು ಅಡಗಿಸಿದ್ದಾರೆಂದೇ ನನ್ನ ಭಾವನೆ. ಕುಂಕುಮಾಂಕಿತೆ ಶಿವೆ ಬಳೆಗಳ ಟಿಂಟಿಣಿ ಸದ್ದಿನೊಡನೆ ಓಡಾಡುವುದು ನನ್ನ ಮನಸ್ಸಿಗೆ ಹಿಡಿಸಲಿಲ್ಲವಾದರೂ ಹಾಗೆ ಹೇಳುವುದು ಸಮಂಜಸವಲ್ಲವೆಂದು ಸ್ವಾಮಿ ಬದುಕಿರುವುದು ಅಸಂಭವವೆಂದು ಸೂಕ್ಷ್ಮವಾಗಿ ಹೇಳಿ ಬಂದಿದ್ದೇನೆ.

"ನೀನೊಬ್ಬ ಧೂರ್ತ ಕಣಯ್ಯಾ!"

"ಇರಲಿ, ಚಂದೂ, ನೀನಂತೂ ಬಹಳ ಮುಂದೆ ಹೋಗಿಬಿಡುತ್ತಿ! ನೀನೂ ನಾವೂ ಹುಟ್ಟಿರುವುದು ಒಂದೇ ಹಳ್ಳಿಯಲ್ಲಿ, ಕುಡಿದಿರುವುದೂ ಒಂದೇ ಕೆರೆಯ ನೀರು. ನೀನು ಒಮ್ಮೆಲೇ ಹಾಗೆ ಕುಪ್ಪಳಿಸಿ ಹೋಗುವುದು ಸಾಧ್ಯವಿಲ್ಲ ಎಂಬುದನ್ನು ಇನ್ನೊಮ್ಮೆ ಒತ್ತಿ ಹೇಳುವೆ."

"ಹೋಗಲಿ, ನಿನ್ನ ವಾದವನ್ನೇ ಪುಷ್ಟೀಕರಿಸೋಣ. ಈಗ ಶಿವೆ ಏನು ಮಾಡಬೇಕು ?"

"ಮನೆತನದ ಪದ್ಧತಿಗೆ ಹೊಂದಿಕೊಳ್ಳಬೇಕು. ಗಂಡನಿಲ್ಲದಾಗ ಆತನ ಅಣ್ಣತಮ್ಮಂದಿರ ಅಭಿಪ್ರಾಯದಂತೆ ನಡೆದುಕೊಳ್ಳಬೇಕು."

"ರಾಜಣ್ಣಾ, ನೀನಂತೂ ಶುದ್ಧ ಒರಟ. ನಿನ್ನೊಡನೆ ಮಾತನಾಡು ವುದು ಪ್ರಯೋಜನವಿಲ್ಲ. ಈ ವಾದ–ವಿವಾದಗಳು ಒಡಕನ್ನು ತರುವುದಾದರೆ ಅಂತಹ ವಾದವನ್ನು ಏಕೆ ಹೂಡಬೇಕು? ನನ್ನ ವಾದ ಇಷ್ಟೆ. ಹೆಣ್ಣು ಹೊರ ಹೋಗುವುದರಲ್ಲಿ ತಪ್ಪೇನಿಲ್ಲ. ಆಕೆ ಶಕ್ತಿವಂತಳಾಗಿ ಬಾಳ ಹೊರೆಯನ್ನು ಹೊರಲು ಶಕ್ತಳಾದರೆ ನಿಮ್ಮ ಅಡ್ಡಿಯಿರಕೂಡದು, ಅಲ್ಲದೆ ನಿನ್ನಲ್ಲಿ ನನ್ನ ಕೊನೆಯ ಅರಿಕೆಯೇನೆಂದರೆ ಈ ಧೋರಣೆಯನ್ನು ದಯಮಾಡಿ ಶಿವಮ್ಮನ

ಮುಂದೆ ವ್ಯಕ್ತಪಡಿಸಬೇಡ. ಇದು ಎಂದೆಂದಿಗೂ ಶಿವಮ್ಮನಿಗೆ ತಿಳಿಯುದಿರಲಿ ಎಂದೇ ನನ್ನ ಹಾರೈಕೆ. ಈ ಧೋರಣೆಯಿಂದ ಮುಕ್ತಳಾದರೇನೇ ಅವಳು ಜೀವನದ ಭಾರವನ್ನು ಹೊರಲು ಶಕ್ತಳಾದಳು. ಇಲ್ಲದಿದ್ದಲ್ಲಿ ಆ ಮಕ್ಕಳಿಗೆ ತಾಯಿಯೂ ಇರುವುದಿಲ್ಲವೆಂಬುದನ್ನು ಅರಿತುಕೊ. ಈ ಒರಟುತನ ದು:ಖಕ್ಕೆ ನಾಂದಿ." ಚಂದುವಿನ ವಾದಸರಣಿ ಹೃದಯಾಂತರಾಳದಿಂದ ಹೊರಹೊಮ್ಮಿತಾದರೂ ರಾಜಣ್ಣನ ಮನ ಕರಗಲಿಲ್ಲ. ಒಡನೆಯೇ ತೊಟು ಕಳಚಿದಂತೆ ಉತ್ತರಿಸಿದ.

"ಚಂದೂ, ಜೀವ ಬೆಲ್ಲಕ್ಕಿಂತ ಸಿಹಿ! ಅಂತಲೇ ನೂರಾರು ಕಷ್ಟ ಕಾರ್ಪಣ್ಯಗಳನ್ನು ಹೊತ್ತು ಜನಜೀವನಕ್ಕೆ ಅಂಟಿಕೊಂಡಿದ್ದಾರೆ. ಇಲ್ಲವಾಗಿದ್ದಲ್ಲಿ ಈ ಕಷ್ಟನಷ್ಟಗಳ ಆಂದೋಳನದಲ್ಲಿ ಜನ ಬದುಕುತ್ತಿದ್ದರೆ ? ಆ ಬಗ್ಗೆ ನೀನು ನನ್ನ ಮರುಳು ಮಾಡಲಾರೆ!" ಹ ಹ್ಹ ಹ್ಹಾ ! ರಾಜಣ್ಣ ಅಟ್ಟಹಾಸದಿಂದ ನಗೆಯಾಡಿದ. ತುಸು ತಡೆದು ಪುನಃ ಮುಂದುವರಿದ, "ನನ್ನ ತಮ್ಮನ ವಿಧವೆ ಬೀದಿಯಲ್ಲಿ ಅಲೆದಾಡುವುದು ನಮಗೆ ಅವಮಾನವಲ್ಲವೇ ? ಸ್ವಾಮಿಯಿಲ್ಲದಿದ್ದರೇನು ? ನಾವು ಬದುಕಲಿಲ್ಲವೆ ? ಆಕೆಯ ದಾರಿ ಇಲ್ಲಿಯವರೆಗೆ ಸುಗಮವಾಗಿದೆ ಮುಂದೆ ಹೇಗೋ ? ನಮ್ಮ ಸಮಾಜಕ್ಕೆ ತಲೆಬಾಗುವ ಮನೋಭಾವವನ್ನು ನಾವೆಂದೂ ಬಿಡಬಾರದು ಚಂದೂ."

"ರಾಜಣ್ಣ ಹೇಳುವುದರಲ್ಲಿ ಹುರುಳಿದೆ ಚಂದೂ. ಶಿವೆ ಜವ್ವನೆ... ಇದುವರೆವಿಗೂ ಅಂಕೆಯಲ್ಲಿದ್ದು ಕಟ್ಟಿದ ಕುದುರೆಯನ್ನು ಬಿಚ್ಚಿದಂತಾಗಬಾರದಷ್ಟೆ? ಈಗ ನಾವು ಆಕೆಗೆ ಬೇಡವಾದರೂ ಕಾಲಾನುಕಾಲಕ್ಕೆ ನಮ್ಮ ಸಹಕಾರ ಬೇಕೇ ಬೇಕು ಎಂಬುದನ್ನು ಆಕೆ ಮನಗಾಣಲೇಬೇಕು." ರಾಮಣ್ಣ ತಮ್ಮನ ವಾದವನ್ನು ಪುಷ್ಟೀಕರಿಸಿದ.

"ರಾಮಣ್ಣ, ನಿಮಗೆ ದೈವ ಸೃಷ್ಟಿಯ ಅರಿವೇ ಆಗಿಲ್ಲ. ನೀವೇ ಕಾರಣಪುರುಷರೆಂಬಂತೆ ವರ್ತಿಸುತ್ತಿದ್ದೀರಿ! ಇದೆಂತಹ ವಾದ? ಭಗವಂತನ ಸೃಷ್ಟಿಯಲ್ಲಿ ಹೆಣ್ಣುಗಂಡು ಒಂದೇ. ಅವರನ್ನು ನಿರ್ಬಂಧಿಸಲು ನೀವು ಯಾರು? ಅವರ ಮೇಲಿನ ಅಧಿಕಾರಿಗಳಾಗಿ ಬಾಳುವೆ ಮಾಡುವುದಕ್ಕಿಂತ ಅವರ ಸ್ನೇಹ ಸಹಕಾರಗಳನ್ನು ಪಡೆದು ನೆಮ್ಮದಿಯ ಜೀವನ ನಡೆಸುವುದು ಲೇಸು." ಚಂದುವಿನ ವಾದಸರಣಿ ಸಾವಧಾನದಿಂದ ಹೊರಹೊಮ್ಮಿತು. ಸ್ವಲ್ಪ ತಡೆದು

ಪುನಃ ಮುಂದುವರಿದ "ನನ್ನ ವಾದದಿಂದ ನಿಮಗೆ ಅಸಮಾಧಾನವಾಗಿದೆ ಯೆಂಬುದು ನನಗೆ ಗೊತ್ತು. ಆದರೂ ಆತ್ಮೀಯರಾದ ನಿಮ್ಮಲ್ಲಿ ಮುಚ್ಚು ಮರೆಮಾಡಲು ನನಗೆ ಮನಸ್ಸಾಗಲಿಲ್ಲ. ಈಗಲೂ ಇನ್ನೊಮ್ಮೆ ಹೇಳುವೆ. ಈ ಸಲ್ಲದ ಧೋರಣೆಯನ್ನು ಬದಿಗಿಟ್ಟು ನವಜೀವನಕ್ಕೆ ಹೊಂದಿಕೊಳ್ಳುವುದು ಲೇಸು. ಇದನ್ನು ಉದ್ಧಟತನವೆಂದಾದರೂ ಅನ್ನಿ. ಇದೇ ನನ್ನ ಆಶಯ, ಈ ವಾದ ವಿವಾದ ನಮ್ಮಗಳ ಸ್ನೇಹಕ್ಕೆ ಎರವಾಗದಿರಲಿ, ಇನ್ನು ಅಪ್ಪಣೆ ಕೊಟ್ಟರೆ ನಾವು ಹೊರಡುವೆವು" ಎನ್ನುತ್ತಾ ಚಂದು ಎದ್ದು ನಿಂತ, ಆದರೆ ಸ್ನೇಹಿತರಿಬ್ಬರೂ ಒಪ್ಪಲಿಲ್ಲ, ಊಟ ಮುಗಿಸಿ ಸಂಜೆಯವರೆಗೆ ಇರಲೇ ಬೇಕಾಯಿತು. ಅನಿರೀಕ್ಷಿತವಾದ ವಾದ ವಿವಾದ ಮನದಲ್ಲಿ ಆಂದೋಳನ ವೆಬ್ಬಿಸಿತು ... ಹಳೆಯ ಕಟ್ಟುಪಾಡಿಗೆ ಈಗಲೂ ಏಕೆ ಈ ಜನ ತಲೆಬಾಗು ತ್ತಾರೆ? ಎಂದಿಗೆ ಈ ಜನರ ಮೌಢ್ಯವಳಿದು ಜ್ಞಾನೋದಯವಾದೀತು? ಎಂದಿಗೆ ನಮ್ಮವರ ಬಾಳು ನಿರ್ಮಲವಾಗಿ ಭಗಿನಿಯರ ಕಂಬನಿಯನ್ನು ತೊಡೆ ದೇವು? ...ಎಂಬ ವಿಚಾರ ತಲೆಯಲ್ಲಿ ಹುಚ್ಚೆದ್ದು ನರ್ತಿಸತೊಡಗಿದಾಗ ಚಂದು ಅತ್ಯಂತ ಮನೋವೇದನೆಗೊಳಗಾದ .. ಅಜ್ಞಾನವೆಂಬ ಪೆಡಂಭೂತ ನಮ್ಮನ್ನು ಕೊಲ್ಲುತ್ತಿದೆ, ಯಾರ ಅಜ್ಞಾನದಿಂದ ಯಾರು ಬಳಲಬೇಕು? ಇದು ಮಾನವ ಜೀವನ! ಇದು ಸಮಾಜ! ..ಎಂಬ ಉದ್ಗಾರ ನಿಮಿರಿ ನಿಂತಿತು. ಚಂದು ಸಮಾಜ ಸುಧಾರಕನಲ್ಲವಾದರೂ ಭಗಿನಿಯರಿಗಾಗಿ ಮರು ಗುವ ಹೃದಯವನ್ನು ಹೊಂದಿದ್ದು ಅವರಿಗಾಗಿ ನಿಷ್ಕಲ್ಮಶವಾದ ಸಹಕಾರ ವನ್ನು ನೀಡಲು ತಯಾರಿದ್ದ...ಯಾರು ತನಗೆ ಜನ್ಮವಿತ್ತರೋ ಯಾರು ತನ್ನೊಡನೆ ಸಹಬಾಳ್ವೆ ಮಾಡುತ್ತಿರುವರೋ ಅಂತಹವರ ಹೃದಯದ ಬೆಲೆ ಯೇನೆಂಬುದರ ಅರಿವಾಗದೇ? ಹೆಣ್ಣು ಭೋಗಕ್ಕಾಗಿಯಲ್ಲ. ಆಕೆ ಜೀವನದ ಸಂಗಾತಿ . ಸಹಧರ್ಮಿಣಿ ಆಕೆಯನ್ನು ದೇವಿಯಂತೆ ಕಾಣುವ ಹೃದಯವನ್ನು ಎಂದು ಪ್ರತಿಯೊಬ್ಬ ಭಾರತೀಯನೂ ಹೊಂದುವನೋ ಅಂದು ನವಜೀವನ ಸುಧೆ ತುಂಬಿ ಹರಿದೀತು....ಎಂದೆನಿಸಿದಾಗ ಈ ಜನ್ಮ ಸಾರ್ಥಕವಾಗಬೇಕಾದರೆ ನನ್ನ ಕೈಯಿಂದಾದಷ್ಟು ಈ ಜನಜೀವನದ ಕೊಳೆಯನ್ನು ತೊಳೆಯಲೇಬೇಕು ಎಂದು ಮನದಲ್ಲಿ ಪಣತೊಟ್ಟ ಚಂದು.

ಸಂಜೆಯ ವಾತಾವರಣ ಅತ್ಯಂತ ಹಿತಕರವಾಗಿತ್ತು: ಬಿತ್ತರದ

ಬಾಂದಳದಲ್ಲಿ ಸಂಜೆಯ ರವಿ ಆನಂದ ತುಂದಿಲನಾಗಿದ್ದಾನೆ. ಒಯ್ಯೊಯ್ಯನೆ ಸುಯ್ದುಬರುವ ಸುಯ್ಯೆಲರು ಕೆನ್ನೆಗೆ ಹೂ ಮುತ್ತನಿಡುತ್ತಿತ್ತು. ಮೊಸರಿನ ತುಂಡುಗಳೋಪಾದಿಯಲ್ಲಿ ಮೋಡಗಳ ಮಾಲೆ ಅಲೆಯಲೆಯಾಗಿ ಹರಡಿವೆ ಶುಭ್ರ ನೀಲ ಗಗನದಡಿಯಲ್ಲಿ ಕರಿಯ ಚುಕ್ಕಿಗಳಂತೆ ನಾನಾ ಪಕ್ಷಿಗಳು ತೇಲಿ ನಲಿಯುತ್ತಿವೆ. ವಾತಾವರಣ ಮನಸ್ಸಿಗೆ ಹರ್ಷವನ್ನು ನೀಡಿದ್ದರೂ ಗೆಳೆಯರು ಆದರದಿಂದ ಉಪಚರಿಸಿದ್ದರೂ ವ್ಯತಿರಿಕ್ತ ಮನೋಭಾವನೆಗಳಿಂದಾಗಿ ಮನಸ್ಸಿನ ಮಹಾ ಸರಸ್ಸು ಕದಡಿ ಬಗ್ಗಡವಾಗಿತ್ತು. ಚಂದು ದಿಟ್ಟಿಯನ್ನು ದೂರ ದಿಗಂತದಲ್ಲಿ ನೆಟ್ಟು ವಕ್ಷಸ್ಥಳದ ಮೇಲೆ ಕೈಕಟ್ಟಿ ಮಹೀರುಹದಂತೆ ಅಲುಗದೆ ಅಂಗಳದಲ್ಲಿ ನಿಂತಿದ್ದಾನೆ. ಚಿತ್ತಭಿತ್ತಿಯಲ್ಲಿ ಅನೇಕಾನೇಕ ನಿತ್ಯ ಜೀವನದ ದಾರುಣ ದೃಶ್ಯಗಳು ಒಂದೊಂದಾಗಿ ಸುಳಿಯತೊಡಗಿದವು. ಗ್ರಾಮ್ಯ ಜೀವನದಲ್ಲಿ ...ಅಲ್ಲ ಮೌಢ್ಯ ಜೀವನದಲ್ಲಿ ಪ್ರಗತಿಯನ್ನು ಸಾಧಿಸುವ ಬಗೆ ಹೇಗೆಂಬ ಸಮಸ್ಯೆ ಬೃಹದಾಕಾರವಾಗಿ ಬೆಳೆದು ನಿಂತಿತ್ತು. ಹೇಗಾದರೂ ಈ ಸಮಾಜದ ಕೊಳೆಯನ್ನು ತೊಳೆಯಲೇಬೇಕೆಂಬ ದೃಢ ನಿಶ್ಚಯ ಮನದಲ್ಲಿ ಮೂಡಿತು. ಆದರೆ ಮರುಕ್ಷಣದಲ್ಲಿ ನಿರಾಶೆಯ ನಿಟ್ಟುಸಿರು ಬಿಟ್ಟು ಆಶಾಭಾವವನ್ನು ಹತ್ತಿಕ್ಕಿ ನಿಮಿರಿ ನಿಂತು ಪ್ರಶ್ನಿಸಿತು ಮನಸ್ಸು "ಮಾನವತೆಯ ರೋಗಿನಲ್ಲಿ ನಲಿಯುವ ಮೃಗ ವಿಶೇಷದ ನಿರ್ಮೂಲನ ಸಾಧ್ಯವೇ? ಅಪಾರವಾದ ಪಾಪರಾಶಿಗೆ ಪುಣ್ಯಜಲದ ಪ್ರೋಕ್ಷಣೆ ......? ಹ ಹ್ಹ ಹ್ಹಾ!" ತಿರಸ್ಕಾರದ ನಗೆ ಹೊರಹೊಮ್ಮಿತು.

"ಇರಲಿ, ಪುಣ್ಯಜಲದ ಪ್ರೋಕ್ಷಣೆಯಿಂದ ಪಾಪರಾಶಿಯಲ್ಲಿನ ಒಂದು ಕಣ....ಒಂದೇ ಒಂದು ಕಣ ಪುನೀತವಾಗುವುದಾದರೆ ಈ ಶ್ರಮ ಸಾರ್ಥಕವಾದಂತೆ." ಅಂತರಾತ್ಮ ಸಮಾಧಾನ ಹೇಳಿತು.

"ಸಾಧ್ಯವೇ ದೇವ?"

"ಶನೈಃಪಂಥಾ ಶನೈಃಕಂಥಾ ಶನೈಃಪರ್ವತ ಮಸ್ತಕೇ "

ಅಂತರಾತ್ಮ ನುಡಿದ ಪುರಾಣೋಕ್ತಿ ಸಮಯಸ್ಫೂರ್ತಿಯಾಗಿ ಮನಸ್ಸನ್ನು ಮುಗಿಲೆತ್ತರಕ್ಕೆ ಚಿಮ್ಮಿಸಿತು. "ನಿಜ ನಿಜ. ಪ್ರತಿಯೊಂದನ್ನೂ ಸ್ವಲ್ಪಸ್ವಲ್ಪವಾಗಿ ಸಾಧಿಸಬೇಕೇ ಹೊರತು ಒಮ್ಮೆಲೇ ಯಾವುದನ್ನೂ ಸಾಧಿಸಲಾಗುವುದಿಲ್ಲ" ಎಂದಿತು ಮನಸ್ಸು. ಭುಜದ ಮೇಲೆ ಭಾರವಾದಂತಾಗಲು

ಚಂದು ಇತ್ತ ತಿರುಗಿದ. ಭುಜದ ಮೇಲೆ ಕೈಯಿಟ್ಟಿದ್ದ ರಾಮಣ್ಣ ನಗು ನಗುತ್ತ ಕೇಳಿದ "ಏನಪ್ಪಾ, ಅಷ್ಟೊಂದು ಯೋಚನೆ?"

"ಏನೂ ಇಲ್ಲ, ವಾತಾವರಣ ಶುಭ್ರವಾಗಿತ್ತು. ನೋಡುತ್ತಾ ನಿಂತೆ, ಎಲ್ಲಿ ಕಾವೇರಿ? ಹೊರಡಲಿಲ್ಲವೇನು?"

"ಇನ್ನೇನು ಬಂದುಬಿಡುತ್ತಾಳೆ. ಮೂರು ಮೈಲಿ ದಾರಿಗಾಗಿ ಆತುರ ವೇಕೆ?"

"ಕತ್ತಲಾಗುವ ಮುನ್ನ ಮನೆ ಸೇರಬೇಕಷ್ಟೆ. ಅಲ್ಲದೆ ಕಾವೇರಿಯ ನಡಿಗೆ ಸ್ವಲ್ಪ ನಿಧಾನ."

"ಆದರೂ ಬೇಕಾದಷ್ಟು ಹೊತ್ತಿದೆ."

ಮಾತು ಮುಗಿಯುವುದರೊಳಗಾಗಿ ಕಾವೇರಿ ರಾಜಮ್ಮನಿಂದ ಬೀಳ್ಕೊಂಡು ಹೊರಬಂದಳು. ಗದ್ದೆಯಂಚಿನವರೆಗೆ ಸ್ನೇಹಿತರಿಬ್ಬರೂ ಹೋಗಿ ಅತಿಥಿಗಳನ್ನು ಬೀಳ್ಕೊಟ್ಟರು.

೬

ಮಾಲಿನಿ ತೌರಿಗೆ ಬಂದು ಎರಡು ವಾರಗಳಾದುವು. ಅತ್ಯಂತ ಆಹ್ಲಾದಕರವಾದ ವಾತಾವರಣದಲ್ಲಿ ದಿನಕಳೆದದುದೇ ಗೊತ್ತಾಗಲಿಲ್ಲ. ಮಾಲಿನಿ ಸದಾ ಕುಲು ಕುಲು ನಗುವ ಸ್ವಭಾವದವಳು. ಏನಾದರೂ ಅದು ಇದು ಹೇಳಿ ನಗಿಸುವ ಮನೋಭಾವ ಹೊಂದಿದ ಅವಳು ಎಲ್ಲರನ್ನು ನಗಿಸಿ ನಲಿಸುತ್ತಿದ್ದಳು. ಚಂದಿರೆಯೊಂದಿಗೆ ಬೊಂಬೆಯಾಟ, ಕಣ್ಣು ಮುಚ್ಚಾಲೆಯಾಟ, ಚೆಂಡಾಟ ಎಲ್ಲದರಲ್ಲೂ ಪಾಲುಗಾರಳಾಗಿ ಎಲ್ಲರನ್ನೂ ನಗೆಗಡಲಲ್ಲಿ ಮುಳುಗಿಸುತ್ತಿದ್ದಳು. ಒಮ್ಮೆ ಶಾರದ ಹೇಳಿದಳು "ನೀನು ಚಿಕ್ಕವಳಾಗಿದ್ದಿದ್ದರೆ ನಿನ್ನನ್ನೇ ದತ್ತು ಮಗಳನ್ನಾಗಿ ಮಾಡಿಕೊಂಡುಬಿಡುತ್ತಿದ್ದೆ."

"ಅದಕ್ಕೇನಂತೆ? ಈಗಲೂ ಮಾಡಿಕೊಳ್ಳಿ"

"ಈಗ ಮಾಡಿಕೊಂಡೇನು ಪ್ರಯೋಜನ? ನಿನ್ನ ಯಜಮಾನರು ಬಿಡುತ್ತಾರೆಯೇ? ಅಥವಾ ನೀನು ಬಿಟ್ಟು ಇರುತ್ತಿಯೆ?"

"ನಾನೇನೋ ಬಿಟ್ಟಿರುತ್ತೇನೆ!"

"ನಿಜವಾಗಿಯೂ?"

"ನಿಜವಾಗಿಯೂ ಬಿಡುತ್ತೇನೆ! ಆದರೆ ನನ್ನ ನಿಮ್ಮೊಳಗೆ ಒಂದು ಒಪ್ಪಂದವಾಗಬೇಕು, ಒಪ್ಪುತ್ತೀರೋ ಹೇಳಿರಿ."

"ನಿನ್ನಂಥಾ ಮಗಳು ಸಿಕ್ಕುವುದಾದರೆ ಯಾಕಾಗಬಾರದು?"

"ಖಂಡಿತವಾಗಿಯೂ ಒಪ್ಪಿಕೊಳ್ಳುತ್ತೀರೋ?"

"ಅಷ್ಟೇಕೆ ಅನುಮಾನ?"

"ನೀವು ಎಂದೆಂದೂ ಮಕ್ಕಳನ್ನು ಹೆರಬಾರದು."

"ಎಂಥಾಹವಳೇ ನೀನು."

"ನಾನೇ ಇರುವಾಗ ಇನ್ನೇಕೆ ನಿಮಗೆ ಮಕ್ಕಳು?"

ಶಾರದೆಯು ಮಾಲಿನಿಯ ಕೆನ್ನೆ ಚಿವುಟಿ ಅಲ್ಲಿಂದ ಓಡಿಹೋದಳು. ಕೆಂಪು ಕೆಂಪಾದ ಕೆನ್ನೆಯನ್ನು ಕೈಯಿಂದ ಸವರಿಕೊಳ್ಳುತ್ತಾ ಹೇಳಿದಳು.

ಮಾಲಿನಿ "ನಿಮ್ಮ ಮಗಳಾದರೆ ನನ್ನನ್ನು ಚಿವುಟಿಯೇ ಮುಗಿಸಿಬಿಡ್ತುತ್ತೀರಿ."

"ಮಾಲಿನಿ ನಿನಗೊಂದು ಕಾಗದವಿದೆ!" ಎನ್ನುತ್ತಾ ಮಾಧವರಾಯ ಒಳಬಂದಾಗ ಮಾಲಿನಿಗಾದ ಸಂತೋಷ ಅಷ್ಟಿಷ್ಟಲ್ಲ. ಬಹಳ ದಿನಗಳಿಂದ ಪತಿಯು ಕಾಗದ ನಿರೀಕ್ಷೆಯಲ್ಲಿದ್ದಳು. ಮಾಧು ಕಾಗದವನ್ನು ತೋರಿಸದೆ "ಕಾಗದವಿನ್ನೂ ನಿನ್ನ ಕೈಸೇರಲಿಲ್ಲ; ಆಗಲೇ ಉಬ್ಬಿಹೋಗಿದ್ದೀಯೆ!" ಎಂದು ತಮಾಷೆ ಮಾಡಿದ. ಆದರೂ ಅತ್ತ ಗಮನ ಕೊಡದೆ "ಕೊಡಿ ಅಣ್ಣಾ!" ಎಂದು ಗೋಗರೆದಳು ಮಾಲಿನಿ. ಮಾಧು ಎರಡು ಜೇಬುಗಳಲ್ಲೂ ತುಡುಕಾಡಿ ಕಾಗದವೊಂದನ್ನು ತೆಗೆದ. ವಿಳಾಸ ಹಿಮ್ಮೊಗವಾಗಿದ್ದುದರಿಂದ ಯಾರ ಕಾಗದವೆಂಬುದು ತಿಳಿಯಲಾಗದಿದ್ದರೂ ಮಾಲಿನಿಗೆ ಅವಸರವಾಗಿತ್ತು.

"ನಿನ್ನ ಪತಿದೇವರ ಕಾಗದಕ್ಕಾಗಿ ಎಷ್ಟೊಂದು ದಿನಗಳಿಂದ ಕಾಯುತ್ತಿದ್ದೆ ತೆಗೆದುಕೊ," ಎಂದು ಕಾಗದವನ್ನು ಕೈಗಿಟ್ಟಾಗ ಉತ್ಸುಕತೆಯಿಂದಲೇ ತೆಗೆದುಕೊಂಡ ಅವಳು ನೋಡಿ ಸಪ್ಪೆಯಾದಳು, ಅದು ಪಶುಪತಿಯದಾಗಿರಲಿಲ್ಲ. ಮಾಧು ಬೇಕು ಬೇಕಾಗಿಯೇ ಕಾಗದವನ್ನು ಹಿಮ್ಮೊಗವಾಗಿ ತಿರುಗಿಸಿ ಸುಳ್ಳು ಹೇಳಿದ್ದ. ಅಲ್ಲಿಂದ ಬಂದ ಮೇಲೆ ಎರಡು ಕಾಗದಗಳನ್ನು ಬರೆದಿದ್ದಳಾದರೂ ಉತ್ತರವಿಲ್ಲ. ಪಶುಪತಿ ಉದಾಸೀನ ಮಾಡುವವನಲ್ಲ. ಕಾಗದ ಬರಲಿಲ್ಲವೇಕೆಂದು ಮಾಲಿನಿ ಯೋಚನಾ ಪರಳಾದಳು. ಸಮಸ್ಯೆ ಬಗೆಹರಿಯಲಿಲ್ಲ. ಮಧ್ಯಾಹ್ನ ಅಣ್ಣ ಮನೆಗೆ ಬರುವಾಗ ಇಂದಿನ ಕಾಗದವಿದ್ದರೆ ತರಬಹುದೆಂಬ ಸಮಾಧಾನವಿದ್ದರೂ ಮನದಲ್ಲಿ ದುಗುಡವಿದ್ದೇ ಇತ್ತು.

ಅದು ಮಧ್ಯಾಹ್ನ ಮಾಧು ಮನೆಗೆ ಬರುವಾಗ ಒಂದು ಗಂಟೆಯಾಗಿತ್ತು. ಬೆಳಗಿನಿಂದ ಮಾಲಿನಿ ಅಣ್ಣನಿಗಾಗಿ ಎದುರು ನೋಡುತ್ತಿದ್ದಳು. ಕ್ಷಣವೊಂದೊಂದೂ ಬಹು ದೀರ್ಘವಾಗಿ ಉರುಳಿ ಅತ್ಯಂತ ಮನೋವೇದನೆಯನ್ನನುಭವಿಸಿದಳು. ಬಂದವನೇ ಮಾಧು ಹೇಳಿದ "ನಿನಗೊಂದು ಕಾಗದವಿತ್ತು. ಅವಸರದಲ್ಲಿ ಮರೆತುಬಂದೆ."

"ಅಯ್ಯೋ, ಎಂಥಾ ಕೆಲಸ ಮಾಡಿದಿರಿ?"

"ಅಷ್ಟೇಕೆ ಬೇಜಾರು? ಅದು ಪಶುಪತಿಯದಲ್ಲ."

"ನೀವು ನನ್ನನ್ನು ಗೋಳು ಹುಯ್ಯಲೆಂದು ಸುಳ್ಳು ಸುಳ್ಳೇ ಹೇಳುತ್ತಿದ್ದೀರಿ." ಮಾಲಿನಿಯು ಅಂಗಲಾಚಿದರೂ ಮಾಧು ಉತ್ತರಿಸದೆ ನಗತೊಡ

ಗಿದ. ತನುಮನಗಳನ್ನು ಭ್ರಾತೃಸ್ನೇಹ ಆವರಿಸಿತ್ತು.

"ಅದು ಯಾರದೇ ಇರಲಿ. ನೀವೊಮ್ಮೆ ತಂದುಕೊಡಿರಿ."

"ಸಾಯಂಕಾಲ ಬರುವಾಗ ತರುವೆ."

ಮಾಲಿನಿಯು ಪೆಚ್ಚುಮೋರೆಯಿಂದ ಒಳಗಡೆ ಹೋದಳು. ಬರವಣಿಗೆ ಬೇರೆಯವರದೆಂದು ಹೇಳಿರುವುದರಿಂದ ಗೆಳತಿಯದಿರಬೇಕೆಂದು ಬಗೆದರೂ ಅಣ್ಣ ತನ್ನನ್ನು ಕಾಡಿಸಲೆಂದು ಸುಳ್ಳು ಹೇಳುತ್ತಿದ್ದಾರೆ ಎಂಬ ಯೋಚನೆಯೇ ಹೆಚ್ಚು ತೂಗಿತು. ಅಷ್ಟರಲ್ಲಿ ಮಾಧು ಬಟ್ಟೆಯನ್ನು ಬದಲಿಸಿ ಕೊಠಡಿಯಿಂದ ಹೊರಬಂದ. ಮಾಲಿನಿ ಬಾಗಿಲಿಗಡ್ಡ ನಿಂತು ಹೇಳಿದಳು, "ಮೊದಲು ಕಾಗದ ಕೊಟ್ಟು ಒಳಗಡೆ ಹೋಗಿರಿ. ಬೇಕೆಂದು ನನ್ನನ್ನು ಗೋಳು ಹುಯ್ಯು ತ್ತಿದ್ದೀರಿ!"

"ನೆನವಾಗಿಯೂ ಮರೆತು ಬಂದೆ."

"ಶುದ್ಧ ಸುಳ್ಳು!"

"ನನ್ನನ್ನು ನಂಬುವುದಿಲ್ಲವೇ?"

"ಅನ್ಯಥಾ ನೀವು ಕಾಡುತಿದ್ದೀರಿ?"

"ನಿನ್ನನ್ನು ಕಾಡಿದರೆ ಏನು ಬಂದೀತು,"

"ಅದೇನೇ ಇರಲಿ, ಕೊಡದ ಹೊರತು ದಾರಿ ಬಿಡುವುದಿಲ್ಲ!"

"ಹೋಗಲಿ ಬಿಡು, ಇಂದು ಹಾಯಾಗಿ ಮಲಗಿ ಬಿಡುವೆ. ನಿನ್ನ ಅತ್ತಿಗೆ ನಿನ್ನನ್ನು ಸರಿ ಮಾಡಿಬಿಡುತ್ತಾಳೆ."

"ಅದೆಲ್ಲಾ ಪೊಳ್ಳು ಮಾತು."

ಮಾಧು ನಗತೊಡಗಿದ. ಕುತೂಹಲ ಕೆರಳಿದ್ದ ಮನಸ್ಸಿಗೆ ಪರಿಹಾರ ದೊರೆಯದೆ ಮಾಲಿನಿಯ ಮುಖ ಲಜ್ಜೆಯಿಂದ ಕೆಂಪು ಕೆಂಪಾಯಿತು. ಅಣ್ಣನ ತುಂಟ ನಗು ಅವಳ ಮನದಲ್ಲಿನ ಅನುಮಾನವನ್ನು ಇನ್ನಷ್ಟು ಹೆಚ್ಚಿಸಿತು. ತಕ್ಷಣ ಬಾಗಿಲನ್ನು ಭದ್ರವಾಗಿ ಹಿಡಿದು ನಿಂತು ಹೇಳಿದಳು. "ನೀವು ಕೊಡದ ಹೊರತು ಒಳಗೆ ಹೋಗುವಂತಿಲ್ಲ.

ಮಾಧುವಿನ ಮಧುರ ನಗುವೇ ಉತ್ತರವಾಯಿತು.

"ಅದೇನೋ ಮಾಧು?" ಎನ್ನುತ್ತ ಪುಟ್ಟಮ್ಮ ಹೊರಬಂದಳು. ಹಿಂದೆಯೇ ಶಾರದೆ ಸೀತೆಯರೂ ಬಂದರು.

"ಅಮ್ಮಾ! ಅಣ್ಣ ನನ್ನನ್ನು ಸುಮ್ಮಸುಮ್ಮನೆ ಗೋಳು ಹ ಯ್ಯುತ್ತಿದ್ದಾರೆ!" ಎಳೆಯ ಮಕ್ಕಳಂತೆ ದೂರು ಹೇಳಿದಳು ಮಾಲಿನಿ. ಒಡನೆಯೇ ಎಲ್ಲರ ಮುಖದಲ್ಲೂ ನಗುವಿನಲೆಯೆದ್ದಿತು. ಮಾಲಿನಿ ಅಣ್ಣನ ಅಂಗಿ ಹಿಡಿದು ಜಗ್ಗಿ ಜೇಬಿಗೆ ಕೈಹಾಕಲು ತೊಡಗಿದಾಗ ಮತ್ತೆ ಎಲ್ಲರ ಮುಖದಲ್ಲೂ ಕಿಲಕಿಲ ನಗುವಿನಲೆಯೆದ್ದಿತು. ಅಡುಗೆಯ ಮನೆಯಲ್ಲಿ ಮೊಸರುವಡೆಯ ಸವಿಯು ಲ್ಲಿದ್ದ ಚಂದಿರಾ ನಗುವಿನ ಸದ್ದು ಕೇಳಿ ಅರ್ಧ ಊಟವನ್ನು ಬಿಟ್ಟು ಹೊರ ಬಂದಳು.

"ನೋಡು ಮಗೂ, ನಿನ್ನ ಚಿಕ್ಕಮ್ಮ ನನ್ನನ್ನು ಹೋಗಲು ಬಿಡುವುದಿಲ್ಲ!" ಮಾಧು ಚಂದಿರೆಯ ಮನವನ್ನು ತನ್ನೆಡೆಗೆ ಸೆಳೆದುಕೊಂಡಾಗ ಮಗುವಿಗೆ ತುಸು ಅಚ್ಚರಿಯಾಯಿತು, ಚಿಕ್ಕಮ್ಮ ನಿಜವಾಗಿಯೂ ದಾರಿಗಡ್ಡಲಾಗಿ ನಿಂತಿದ್ದಾಳೆ! ಮಾಮನಿಗೆ ತಾನೇ ಮೊಸರುವಡೆಯನ್ನು ಬಡಿಸಬೇಕೆಂದಿದ್ದ ಉತ್ಕಟ ಆಕಾಂಕ್ಷೆಗೆ ಸಂಚಕಾರ ಬಂದೀತೇ? ಚಂದಿರೆ ಓಡಿ ಹೋಗಿ ಬಳಿಯಲ್ಲಿ ನಿಂತು ನೋಡಿದಳು. ಮಾಲಿನಿ ಬಾಗಿಲಿಗೆ ಎಡಗೈಗೊಟ್ಟು ಭದ್ರವಾಗಿ ಹಿಡಿದುಕೊಂಡು ನಿಂತಿದ್ದಳು.

"ದಾರಿ ಬಿಡಿ. ಮಾಮ ಇನ್ನೂ ಊಟ ಮಾಡಲಿಲ್ಲ." ಬಾಲಸಹಜವಾದ ದುಮ್ಮಾನದಿಂದ ನುಡಿದಳು ಚಂದಿರೆ.

"ನನ್ನ ಕಾಗದ ಕೊಟ್ಟರೆ ಬಿಡುವೆ."

"ನಿಜವಾಗಿಯೂ ತೆಗೆದುಕೊಂಡಿದ್ದೀರಾ ಮಾಮ?" ಅರಳಿದ ಕಣ್ಣುಗಳಲ್ಲಿ ಪ್ರಶ್ನೆಯ ಭಾವ ಮಿನುಗುತಿತ್ತು.

"ಇಲ್ಲ ಮಗೂ."

ಮತ್ತೇಕೆ ತಡೆ?....ಚಂದಿರೆಗೆ ಆಶ್ಚರ್ಯವಾಯಿತು.

"ನೀನವರ ಮಾತು ನಂಬಬೇಡ. ಅವರು ಹೇಳುವುದೆಲ್ಲ ಸುಳ್ಳು."

ಚಂದಿರೆಗೆ ವಿಷಯ ಒಗಟಾಗಿತ್ತು. ಅವಳ ಪ್ರೀತಿ ಮಾಮನ ಕಡೆ ಹೆಚ್ಚಾಗಿದ್ದುದರಿಂದಲೂ, ಮಾಮನಿಗೆ ತಾನೇ ವಡೆ ಬಡಿಸಬೇಕೆಂಬ ಆಸೆ ಮನದಲ್ಲಿದ್ದುದರಿಂದಲೂ, ಊಟ ಅರ್ಧ ಮಾಡಿದ್ದ ಹಸಿವು ಹಿಂಗದಿದ್ದುದರಿಂದಲೂ ಮಾಲಿನಿ ಅನಾವಶ್ಯಕವಾಗಿ ತೊಂದರೆ ಒಡ್ಡಿದ್ದಾಳೆಂಬ ಸಿದ್ಧಾಂತಕ್ಕೆ ನಯವಾಗಿ ಜಾರಿಕೊಂಡಳು. ಅವಳ ಒಲುಮೆ ಸಹಜವಾಗಿ ಮಾಮನ ಕಡೆ

ವಾಲಿತು. ಎರಡೂ ಕೈಗಳಿಂದ ಮಾಧುವನ್ನು ತಬ್ಬಿಕೊಂಡಳು. ಮಗು ವನ್ನು ಎದೆಗೊತ್ತಿಕೊಂಡು ಮಾಧು ಹೇಳಿದ "ಮಗೂ ಕೈ ತೊಳೆಯುವೇ ಬಂದು ಬಿಟ್ಟಿದ್ದೀಯೇ?'

"ನೋಡಿ, ತೊಳೆದುಕೊಂಡೇ ಬಂದೆ." ಎಂದೆನ್ನುತ್ತ ಚಂದಿರೆ ಕೈ ಬಿಚ್ಚಿ ತೋರಿದಳು. ಕೈಯಲ್ಲಿ ಅರ್ಧ ಮುಸುರೆ ಹಾಗೇ ಉಳಿದಿತ್ತು.ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ಚಂದಿರೆ ಮಾಮನ ಕೈಯಿಂದ ಸರಸರನೆ ಕೆಳಗಿಳಿದು ಮಾಲಿನಿಯನ್ನು ತಳ್ಳುತ್ತಾ "ದಾರಿ ಬಿಡಿ ಚಿಕ್ಕಮ್ಮಾ; ಮಾಮ ಇನ್ನೂ ವಡೆ ತಿಂದಿಲ್ಲ, ಮೊಸರುವಡೆ!" ಎಂದಳು. ಮಾಲಿನಿ ಅಲುಗದೆ ನಿಂತು ಹೇಳಿದಳು.

"ನಿನ್ನ ಮಾಮ ತುಂಟ ಮಾಮ! ನನ್ನ ಕಾಗದ ಬಚ್ಚಿಟ್ಟಿದ್ದಾರೆ. ಅದನ್ನು ಕೊಡಿಸು ಮಗೂ! ನೀನು ತುಂಬಾ ಜಾಣೆ,"

"ಹೌದೇ ಮಾಮ?" ಕಣ್ಣು ಅರಳಿಸಿ ಮತ್ತೆ ಕೇಳಿದಳು ಚಂದಿರೆ.

"ಇಲ್ಲ ಮಗೂ. ನಿನ್ನ ಚಿಕ್ಕಮ್ಮ ಸುಮ್ಮನೆ ಕಾಡಿಸುತ್ತಿದ್ದಾಳೆ."

ಈಗ ಅವಳಿಗೆ ನಿಜವಾಗಿಯೂ ಚಿಕ್ಕಮ್ಮ ಒಳ್ಳೆಯ ಮಾಮನಿಗೆ ಅನ್ಯಥಾ ತೊಂದರೆ ಕೊಡುತ್ತಿದ್ದಾಳೆ ಎಂದೆನಿಸಿತು. ಬಾಗಿಲಿಗಡ್ಡಲಾಗಿ ನಿಂತ ಮಾಲಿನಿ ಯನ್ನು ತನ್ನ ಶಕ್ತಿಯನ್ನೆಲ್ಲಾ ಪ್ರಯೋಗಿಸಿ ತಳ್ಳತೊಡಗಿದಳು.

"ಸರಿ ನಿನ್ನ ಕೈಕೊಳೆಯನ್ನು ನನ್ನ ಬಟ್ಟೆಗೂ ಹಚ್ಚಿಬಿಟ್ಟೆ!"

"ದಾರಿ ಬಿಡಿ, ಮಾಮನಿಗೆ ಊಟ ಬಡಿಸಬೇಕು?"

"ನಿನ್ನ ಮಾಮ ಬಹಳ ಕೆಟ್ಟವರು!"

"ಹೌದೇ ಅಜ್ಜಿ? ಕಾಗದ ಬಚ್ಚಿಟ್ಟಿದ್ದಾರೆಯೆ?" ಎಂದೊಮ್ಮೆ ಎಲ್ಲರ ಮುಖದ ಕಡೆಯೂ ಚಂದಿರೆ ತಿರುತಿರುಗಿ ನೋಡಿದಳು. ಒಡನೆಯೇ ಮಾಲಿನಿಯು "ಅಲ್ಲವೇ ಅಮ್ಮಾ? ಅಲ್ಲವೇ ಅತ್ತಿಗೆ? ಎನ್ನುತ್ತಾ ತನ್ನ ಪರ ವಾಗಿ "ಹ್ಞೂ" ಎನ್ನಲಿ ಎಂದು ಎಲ್ಲರನ್ನೂ ಕೇಳಿದಳು. ಆದರೆ ಎಲ್ಲ ರಿಂದಲೂ "ಗೊತ್ತಿಲ್ಲ" ಎಂದು ಉತ್ತರ ಬಂದಿತು. ಮಾಧು ಮಗುವನ್ನು ಮುದ್ದಿಟ್ಟುಕೊಂಡು "ನೋಡು, ನಿನ್ನ ಚಿಕ್ಕಮ್ಮ ಹೇಳುವುದೆಲ್ಲಾ ಸುಳ್ಳು. ಸುಮ್ಮನೆ ನನ್ನನ್ನು ಗೋಳು ಹುಯ್ಯುತ್ತಿದ್ದಾಳೆ" ಎಂದ.

ಚಂದಿರೆಗೆ ನಿಜವಾಗಿಯೂ ಸಿಟ್ಟು ಬಂತು.ಚಿಕ್ಕಮ್ಮ ಹೇಳುತ್ತಿರುವುದೆಲ್ಲ ಶುದ್ಧ ಸುಳ್ಳು ಎಂದು ಭಾವಿಸಿ ಪುನಃ ಮಾಲಿನಿಯನ್ನು ತಳ್ಳತೊಡಗಿದಳು.

ಎಲ್ಲೆಲ್ಲೂ ನಗುವಿನ ಗುಲ್ಲು ಮತ್ತಷ್ಟು ಹೆಚ್ಚಿತು. ನಗು ನಗುತ್ತಲೇ "ಜೋರಾಗಿ ತಳ್ಳು!" ಎಂದು ಮಾಧು ಉತ್ತೇಜನ ಕೊಡಲಾರಂಭಿಸಿದ.ನಗು ಮುಖದ ಮಾಲಿನಿ ಅಲುಗದೆ ಹಾಗೇ ಬಾಗಿಲಿಗಡ್ಡಲಾಗಿ ನಿಂತುಕೊಂಡು ಬಾಗಿಲನ್ನು ಭದ್ರವಾಗಿ ಹಿಡಿದುಕೊಂಡಿದ್ದಾಳೆ. ಚಂದಿರೆಗೆ ತಾನು ತಳ್ಳಲಾರೆನ್ನಿಸಿದಾಗ ದುಃಖವುಕ್ಕಿ ಬಂದಿತು. ತಡೆಯಲಾರದೆ ತಳ್ಳುತ್ತಲೇ "ಹೋ" ಎಂದು ಅಳಲಾರಂಭಿಸಿದಳು. ಇನ್ನು ಮಾಲಿನಿಗೆ ದಾರಿಗಟ್ಟಲಾಗಲಿಲ್ಲ. ಸರಿದು ನಿಂತು "ಹೋಗು ಮಹರಾಯಿತಿ! ನಿನ್ನ ರಾಗ ಕೇಳಲಾರೆ." ಎಂದಳು ಮುಖದಲ್ಲಿ ಸೋಲಿನ ನಗುವಿತ್ತು.

"ನೀನು ನನ್ನ ಬಂಗಾರ!"

ಮಾಧು ಗೆದ್ದ ಹೆಮ್ಮೆಯಿಂದ ಮಗುವನ್ನು ಎತ್ತಿಕೊಂಡು ಕಂಬನಿಯನ್ನು ತೊಡೆದು ಮುದ್ದಿಟ್ಟ.ಕೈಕಾಲು ತೊಳೆಯಲು ಹೋಗುತ್ತ "ನೋಡಿದೆಯೋ? ಹೇಗಿದೆ ನನ್ನ ಬಾಣ!" ಎಂದು ಮಾಲಿನಿಯ ಕಡೆ ಹುಬ್ಬು ಹಾರಿಸಿ ಮೂದಲಿಸಿದಾಗ ನಗುವಿನ ಲಹರಿ ಮತ್ತೆ ಹರಿಯಿತು.

"ನಿನಗೆ ಅಳುವುದೊಂದೇ ದಾರಿ. ನಿನ್ನಿಂದ ಮತ್ತೇನಾದೀತು? ಇನ್ನು ಮೇಲೆ ನಿನ್ನೊಂದಿಗೆ ಆಟಕ್ಕೆ ಬರುವುದಿಲ್ಲ. ನನ್ನನ್ನು ಮಾತಾಡಿಸಬಾರದು ತಿಳಿಯಿತೇ?" ಮಾಲಿನಿ ನಸುಕೋಪದಿಂದ ನುಡಿದಳು,

"ಬೇಡ! ನಾನು ನಿಮ್ಮನ್ನು ಕರೆಯುವುದಿಲ್ಲ!" ಸೆಟೆದು ನಿಂತು ಹೇಳಿದಳು ಚಂದಿರೆ.

"ಹೇಳು ಮಗೂ, ಹಾಗೆಂದು ಇನ್ನೊಮ್ಮೆ ಹೇಳು. ಅಷ್ಟು ದೊಡ್ಡವಳು ನಿನ್ನೊಂದಿಗೆ ಆಡುವುದೆಂದರೇನು? ನಾಚಿಕೆಗೇಡು!"

ಮಾಧು ಇನ್ನೊಂದು ಬಾಣ ಬಿಟ್ಟು ನೀರು ಮನೆಗೆ ಹೋದ.

"ಅದೇನೇ? ಮಾತು ಮಾತಿಗೆ ಅಳುತ್ತಿ? ಇದು ನಿನಗೆ ನಾಚಿಕೆಗೇಡು ಮಾಲಿನಿಗಲ್ಲ." ಮೂದಲಿಸಿದಳು ಸೀತೆ.

ಮಾಲಿನಿಯು ಕೆನ್ನೆಯನ್ನು ಚಿವುಟಿ "ನೀನು ತುಂಬಾ ಕೆಟ್ಟ ಮಗು, ನಿನ್ನ ಚಂಡಿ ಎಂದು ಕರೆಯುತ್ತೇನೆ." ಎಂದಳು.

"ನಾನೇನು ಚಂಡಿಯಲ್ಲ ನೀವೇ ಚಂಡಿ!" ಮಗು ಜೋರಾಗಿ ನುಡಿಯಿತು.

"ನಾನು ನಿನ್ನ ಹಾಗೆ ತಂಟೆ ಮಾಡುವುದಿಲ್ಲ."

"ಇಷ್ಟು ದೊಡ್ಡವರಾಗಿ ತಂಟೆ ಮಾಡುತ್ತೀರಿ! ಮಾವನೊಂದಿಗೆ ಜಗಳವಾಡುತ್ತೀರಿ!" ಚಂದಿರೆ ದಿಟ್ಟತನದಿಂದ ಎದುರಿಸಿದಳು.

"ಹಾಗೇ ಇನ್ನೊಮ್ಮೆ ಹೇಳು ಮಗೂ!" ಎಂದೆನ್ನುತ್ತ ಮಾಧು ಬಚ್ಚಲ ಮನೆಯಿಂದ ಹೊರಬಂದ. ಎಲ್ಲರ ಮುಖದಲ್ಲೂ ನಗು ನಲಿಯು ತ್ತಿತ್ತು. ಮಾಲಿನಿಗೆ ಶಾಂತಿಯಿರಲಿಲ್ಲವಾದರೂ ನಡೆದ ತಮಾಷೆಯಿಂದಾಗಿ ಮುಖದಲ್ಲಿ ನಗು ಮೂಡಿತು. ಮೊಸರುವಡೆಯ ಊಟ ರುಚಿಕರವಾಗಿದ್ದು ಎಲ್ಲರೂ ಕೂಡಿ ಸಂತಸದಿಂದ ಊಟ ಮಾಡಿದರು. ಚಂದಿರಾ ಬಡಿಸುವ ಸಡಗರದಲ್ಲಿ ಸಾರಿನ ಪಾತ್ರೆಯನ್ನು ಎತ್ತಿಹಾಕಿ ಮೈಯೆಲ್ಲಾ ತೋಯಿಸಿ ಕೊಂಡಾಗ ಮಾಲಿನಿಯು "ಅವಮಾನ! ಅವಮಾನ!" ಎಂದು ಮೂದಲಿಸಿ ದಳು. ಯಾರೂ ತನ್ನ ಕಡೆ ವಾದಿಸದಿದ್ದುದು ಚಂದಿರೆಗೆ ನಿಜವಾಗಿಯೂ ಅವಮಾನವೆನಿಸಿ ಮೂಲೆಯನ್ನು ಸೇರಿಕೊಂಡು ಎರಡೂ ಕೈಗಳಿಂದ ಮುಖ ವನ್ನು ಮುಚ್ಚಿಕೊಂಡು ಗಳಗಳನೆ ಅಳತೊಡಗಿದಳು,

ಆ ದಿನ ಸಂಜೆ ಮಾಧು ಅಫೀಸಿನಿಂದ ಬರುವಾಗ ಏಳು ಗಂಟೆ ಯಾಗಿತ್ತು. ಮಧ್ಯಾಹ್ನದಿಂದ ಮಾಲಿನಿ ಅಣ್ಣನಿಗಾಗಿ ಕಾದಿದ್ದಳು. ಮನ ದಲ್ಲಿ ಕಳವಳ ತುಂಬಿತ್ತು....ನಿಜವಾಗಿಯೂ ತನ್ನ ಪ್ರಿಯಕರನಿಂದ ಕಾಗದ ಬಂದೇ ಇಲ್ಲವೇ? ಕೋಪ ಬಂದಿರಬಹುದೇ? ಅಥವಾ ಮೈಚೆನ್ನಾಗಿಲ್ಲವೆ? ಎಂಬ ನಾನಾ ಪ್ರಶ್ನೆಗಳು ಮನದಲ್ಲಿ ತಲೆದೋರಿದುವು. ಇದೆಲ್ಲಾ ತಪ್ಪು ಕಲ್ಪನೆ. ಬಿಡುವು ದೊರೆಯದಿರಬಹುದು, ಎಂದೊಮ್ಮೆ ತನಗೆ ತಾನೇ ಸಮಾಧಾನ ಪಟ್ಟುಕೊಂಡಳಾದರೂ ಅದು ಒಂದೇ ಒಂದು ಕ್ಷಣ, ಮರು ಕ್ಷಣದಲ್ಲಿಯೇ ಅಕಾರಣವಾಗಿ ಚಿಂತೆ ಮೂಡಿ ನಾನಾ ಬಗೆಯ ಆಲೋಚನೆ ಗಳು ಅಲೆಯುಲೆಯಾಗಿ ಮನದಲ್ಲಿ ಸುಳಿಯತೊಡಗಿ ತತ್ತರಿಸಿಹೋದಳು.... ಅಣ್ಣ ಹೇಳುವುದೆಲ್ಲ ಸುಳ್ಳು. ಅವರನ್ನು ನಂಬಿಕೊಂಡು ಇದುವರೆವಿಗೂ ಕಾದುಕೊಂಡಿದ್ದೇನೇಕೆ? ನನ್ನ ಕಾಗದಗಳೆರಡಕ್ಕೂ ಉತ್ತರವಿಲ್ಲವೇಕೆ? ಯೋಚಿಸಿದಂತೆಲ್ಲಾ ವಿಷಯ ಗಹನವಾಗತೊಡಗಿತೇ ಹೊರತು ಪ್ರಶ್ನೆ ಬಗೆ ಹರಿಯದು. ಮಾಲಿನಿ ಮನೋವೇಗದಲ್ಲಿ ಸಿಲುಕಿ ಕಾಗದ ಲೇಖನಿ ತೆಗೆದುಕೊಂಡು ಕೂಡಲೇ ಪಶುಪತಿಗೆ ಕಾಗದ ಬರೆದು ಹಾಕಿದಳು. ಅದರಲ್ಲಿ

ದುಃಖದ ಮಹಾಪೂರವೆಷ್ಟಿತ್ತೋ ಅಷ್ಟೇ ಕೋಪದ ಕೋಡಿಯೂ ಹರಿದಿತ್ತು. ಸಂಜೆಗಪ್ಪು ಮೆಲ್ಲಮೆಲ್ಲನೆ ಆವರಿಸುತ್ತಿದ್ದಂತೆ ಬಗೆಗೆಟ್ಟ ಮನಸ್ಸಿನ ಮೇಲೂ ಕಪ್ಪಿನ ಛಾಯೆ ಆವರಿಸತೊಡಗಿತು. ಮಾಲಿನಿ ಮನದ ದುಗುಡವನ್ನು ಯಾರ ಮುಂದೆಯೂ ತೋರಿಕೊಳ್ಳಲಿಚ್ಛಿಸದೆ ಹೊರಗಣ ಹೂತೋಟಕ್ಕೆ ಹೋದಳು. ಅತ್ತಿಂದಿತ್ತ ಶತಪಥ ತಿರುಗುತ್ತಾ ಮನೋವೇಗವನ್ನು ಹತ್ತಿಕ್ಕಲು ಪ್ರಯತ್ನಿಸಿದಳು.

ಮಾಧು ಬರುವಾಗ ಕಾಗದ ತರಬಹುದು, ಮತ್ತೇಕೆ ಕಳವಳ? ಅಂತರಾತ್ಮ ಸಮಾಧಾನ ಹೇಳಿತು. ಅಷ್ಟರಲ್ಲಿ ಪಕ್ಕದ ಮನೆಯ ರೇಡಿಯೋ "ತಲ್ಲಣಿಸದಿರು ಕಂಡ್ಯಾ ತಾಳು ಮನವೇ" ಎಂಬ ದಾಸರ ಗೀತವನ್ನು ಸುಶ್ರಾವ್ಯವಾಗಿ ಹಾಡಿತು. ಹಾ, ಮಧುರ ಗಾನ; ದಿವ್ಯ ಸಮಾಧಾನ.

ನಿಮಿಷಗಳೈದು ಕಳೆದುವು. "ಈ ಗಂಡಸರಿಗೆ ಹೃದಯವೇ ಇಲ್ಲ. ಎಷ್ಟು ಬೇಗ ಮರೆತು ಬಿಡುತ್ತಾರೆ? ಇವರಿಗಾಗಿ ಪರಿತಪಿಸುವುದು ಮೂರ್ಖತನ" ಎಂದು ಹಳಿದುಕೊಂಡಳು. ಪ್ರಾಕಾರದ ಬಾಗಿಲು ಸದ್ದು ಮಾಡಿದೊಡನೆ ದೃಷ್ಟಿ ಅತ್ತ ಹರಿಯಿತು. ಮಾಧು ಒಳ ಬಂದ. ಇದೀಗ ತಾನೇ ಇವರಿಗಾಗಿ ಪರಿತಪಿಸುವುದು ಮೂರ್ಖತನ ಎಂದು ಗಂಡು ಜಾತಿಯನ್ನೇ ಹಳಿದುದು ನಿಮಿಷಾರ್ಧದಲ್ಲಿ ಮರೆತುಹೋಯಿತು. ಮಾಲಿನಿ ಕಾಗದಕ್ಕಾಗಿ ಕೈ ಚಾಚಿದಳು.

"ಏನು ಆಸೆಯೋ? ಬರುವುದರೊಳಗಾಗಿ ಕೈಚಾಚುತ್ತಿದ್ದೀ?" ಎಂದು ನಗುಮುಖದಿಂದ ತಲೆಯನ್ನು ನೇವರಿಸಿ ಮತ್ತೆ ಹೇಳಿದ "ಬರಿಯ ಕಾಗದ ದರ್ಶನದಿಂದ ಗುಲಾಬಿ ಹೂವಿನಂತಾಗಿ ಬಿಟ್ಟೆಯಲ್ಲೇ? ಸಾಕ್ಷಾತ್ ನಿನ್ನ ಸ್ವಾಮಿ ಪ್ರತ್ಯಕ್ಷನಾಗಿದ್ದರೆ ಇನ್ನು ಹೇಗಿರುತ್ತಿದ್ದಿ?" ಕಿಸೆಯಲ್ಲಿ ತಡುಕಾಡಿ ಕೆಲವು ಕಾಗದಗಳನ್ನು ತೆಗೆದು "ನಿನ್ನನ್ನು ಇನ್ನಷ್ಟು ಗೋಳು ಹುಯ್ಯ ಬೇಕೆನಿಸಿತ್ತು. ಆದರೆ ಈಗ ಮನಸ್ಸು ಬರುವುದಿಲ್ಲ" ಎಂದ. ಕಾಗದಗಳು ಮೂರು. ಹತ್ತು ದಿನಗಳಿಂದ ಅವನ್ನು ತಡೆ ಹಿಡಿದಿದ್ದ. ವಿಷಯ ಮನವರಿಕೆಯಾದೊಡನೆ ಇಂದು ಬರೆದು ಹಾಕಿದ ಕಾಗದ ನೆನಪಿಗೆ ಬಂದಿತು. "ಎಂತಹ ಪ್ರಮಾದ!" ಎಂದು ತನಗೆ ತಾನೇ ಹೇಳಿಕೊಂಡಳು. ತಾನದರಲ್ಲಿ ಕೋಪದ ಕೋಡಿ ಹರಿಸಿ ಅನ್ಯಾಯವಾಗಿ ಪತಿಯ ಮನ ನೋಯಿಸಿದೆನಲ್ಲಾ ಎಂದು

ಹತ್ತಬಹುದು." ಎಂದು ಪುಟ್ಟಮ್ಮ ಶಿವೆಯನ್ನು ಸಂತೈಸುವುದರೊಂದಿಗೆ ಆಸೆಯ ಮೊಳಕೆಯನ್ನೂ ಮೂಡಿಸಿದಳು.

"ಅಷ್ಟಾದರೆ ಸಾಕು. ನಾನೂ ಅದೇ ಆಸೆಯಲ್ಲಿದ್ದೇನೆ."

"ದೇವರಿದ್ದಾನೆ."

ಅಷ್ಟರಲ್ಲಿ ಮಾಲಿನಿ ಸೀತೆಯರೂ ಅಲ್ಲಿಗೆ ಬಂದರು. ಇಬ್ಬರೂ ಬಳಿಯಲ್ಲಿ ಕುಳಿತುಕೊಂಡರು.

"ಶಿವಮ್ಮಾ, ನಿಮ್ಮನ್ನು ನೋಡಿದರೆ ವ್ಯಸನವಾಗುತ್ತೆ. ಅರ್ಧ ಇಳಿದು ಹೋಗಿದ್ದೀರಿ ಎನ್ನುವುದಕ್ಕಿಂತ ಅರ್ಧ ಸತ್ತು ಹೋಗಿದ್ದೀರಿ ಎಂದರೂ ಸರಿಯೇ. ನಿಮಗರಿಯದಂತೆ ಚಿಂತೆ ನಿಮ್ಮನ್ನು ಸುಡುತ್ತಿದೆ, ಮನುಷ್ಯರಾಗಿ ಹುಟ್ಟಿ ಹೇಡಿಯಂತೆ ಬಾಳಬಾರದು." ತುಸು ತಡೆದು ಮಾಲಿನಿ ಮುಂದುವರಿದಳು "ಸ್ವಾಮಿ ಇಚ್ಛೆಪಟ್ಟಿದ್ದರೆ ತಾನೂ ಸುಖವಾಗಿದ್ದು ನಿಮ್ಮನ್ನೂ ಸುಖವಾಗಿಡಬಹುದಾಗಿತ್ತು. ಆದರೆ ಇದಾದುದು ತೀರ ವ್ಯತಿರಿಕ್ತ. ಜ್ಞಾನ ವಿಕಾಸ ಹೊಂದದವರ ಪರಿಯೇ ಹೀಗೆ. ನೀವೇ ಯೋಚಿಸಿರಿ. ಸ್ವಾಮಿ ಮತ್ತು ಗಿರೀಶ ನಿಮ್ಮಂತೆಯೇ ಕೊರಗಿ ದೇಹ ಸವೆಸುತ್ತಿದ್ದಾರೆಯೇ? ಆಗು ಹೋಗುಗಳನ್ನು ಪರಮಾತ್ಮನಿಗರ್ಪಿಸಿ ನಿಮ್ಮ ಕರ್ತವ್ಯವನ್ನು ಮಾಡುತ್ತಾ ಹೋಗಿರಿ."

"ಸ್ವಾಮಿ ಎಂದೆಂದೂ ನನ್ನನ್ನು ಸುಖವಾಗಿಡಲಿಲ್ಲ ನಿಜ, ಆದರೆ ಸುಖದ ಅರಿವೇ ಇಲ್ಲದ ನನಗೆ ಅದು ಬೇಕಾಗಿರಲಿಲ್ಲ, ಸ್ವಾಮಿಯ ಗೃಹ ಬಂಧನದಲ್ಲಿದ್ದ ನನಗೆ ಅಲ್ಲಿಯೇ ಸೌಖ್ಯವಿತ್ತು. ಇಂದು ಬಂಧಮುಕ್ತಳಾದ ನಾನು ಸೌಖ್ಯವಾಗಿದ್ದೇನೆಯೇ? ಎಂದಾದರೂ ಸ್ವಾಮಿಗೆ ಜ್ಞಾನೋದಯವಾದೀತೆಂಬ ಆಸೆಯಿತ್ತು, ಅದು ಈ ರೀತಿ ಕೊನೆಯಾಗಬಾರದಿತ್ತು."

"ಕಳೆದು ಹೋದುದರ ಸ್ಮರಣೆ ಮಾಡುತ್ತಾ ತನುಮನಗಳನ್ನು ದಂಡಿಸುವುದರಿಂದ ಪ್ರಯೋಜನವೇನೂ ಇಲ್ಲ, ವೃಥಾ ಆರೋಗ್ಯ ಹಾಳು."

ಕತ್ತಲಾಗುವವರೆಗೂ ಕೆಲಸ ಕಾರ್ಯಗಳಲ್ಲಿ ನೆರವಾದ ಶಿವೆ ವಿಮಲೆಯೊಂದಿಗೆ ಮನೆಗೆ ಹಿಂದಿರುಗಿದಳು. ಚಂದಿರೆ ವಿಮಲೆಯನ್ನು ಬೀಳ್ಕೊಡುವಾಗ "ವಿಮಲೂ ನಾಳೆ ನಿಮ್ಮ ಮನೆಗೆ ನಾನೇ ಬರುವೆ" ಎಂದಳು,

"ನಾಳೆ ಸಂಜೆ ವಿಮಲೆ ನನ್ನೊಂದಿಗೆ ಇಲ್ಲಿಗೆ ಬರುತ್ತಾಳೆ. ನೀನು

ಬೆಳಿಗ್ಗೆಯೇ ನಮ್ಮನೆಗೆ ಬಾ" ಶಿವೆ ನಲ್ಮೆಯಿಂದ ನುಡಿದಳು.

ಶಿವೆ ಮನೆ ಸೇರಿದಾಗ ಸರಸು ಮನೆಗೆಲಸವನ್ನು ಮುಗಿಸಿದ್ದಳು. ರವಿ ಎಲ್ಲರನ್ನೂ ಕೂರಿಸಿಕೊಂಡು ಪಾಠ ಹೇಳುತ್ತಿದ್ದ. ಕೈಗೆ ಕೆಲಸವೇನೂ ಇರದಿದ್ದುದರಿಂದ ಶಿವೆ ಅವನು ಪಾಠ ಹೇಳುತ್ತಿದ್ದ ರೀತಿಯನ್ನು ಗಮನಿಸುತ್ತಾ ಕುಳಿತುಕೊಂಡಳು. ಬಿಡುವಿದ್ದಾಗ ತಾನೂ ಏಕೆ ಕಲಿಯಬಾರದೆಂಬ ಯೋಚನೆ ಮೂಡಿತು. ಅಂದಿನಿಂದ ಬಿಡುವಿನ ವೇಳೆಯನ್ನು ವಿದ್ಯೆಗಾಗಿ ಮೀಸಲಿಟ್ಟಳು... ಎದೆ ಬಯಕೆಯ ಬೀಡಾದರೆ ಮನಸ್ಸು ಕ್ಷೇತ್ರದ ಕಟ್ಟೆಯಾಯಿತು ...

ಮರುದಿನ ರವಿ ಪತ್ರಿಕೆಗಳನ್ನು ಹಂಚಿ ಹಿಂದಿರುಗಿದವನೇ ಹೇಳಿದ "ಈ ದಿನ ನನ್ನ ಮೊದಲ ಸಂಬಳ ಬಂದಿದೆ" ಮಾತು ಮುಗಿಯುವುದರೊಳಗಾಗಿ ಕಿಸೆಯಿಂದ ಹತ್ತು ರೂಪಾಯಿಗಳ ಹತ್ತು ನೋಟುಗಳನ್ನು ತೆಗೆದು ತಾಯಿಯ ಕೈಗೆ ನೀಡಿದ. ಬಂದ ಹಣ ಅಲ್ಪವಾದರೂ ಅದು ಅತ್ಯಮೂಲ್ಯವಾಗಿ ತೋರಿ ಇಬ್ಬರ ಮುಖವೂ ಅರಳಿತು. ಶಿವೆ ರವಿಯನ್ನು ಅಪ್ಪಿಕೊಂಡು "ಹಣ ಅಲ್ಪವಾದರೂ ಚಿಂತೆಯಿಲ್ಲ; ಅದು ನಿನ್ನ ಸಂಪಾದನೆ ಎಂಬುದೇ ಸಂತೋಷ." ಎಂದಳು.

"ಈ ಸಲ ನನಗೆ ವಿದ್ಯಾರ್ಥಿ ವೇತನ ಬಂದರೆ ನನ್ನ ದುಡಿಮೆ ದ್ವಿಗುಣವಾಗುತ್ತದೆ!" ರವಿ ಅತ್ಯಂತ ಉತ್ಸಾಹದಿಂದ ಹೇಳಿದ.

"ನಿಜ ರವೀ."

"ವಿದ್ಯಾರ್ಥಿ ವೇತನ ನನಗೂ ಬರುತ್ತೆ!" ಕಣ್ಣರಳಿಸಿ ಹೇಳಿದ ಶ್ಯಾಮು. ಅನಂತರ ಎಲ್ಲರೂ ಅದೇ ಪಲ್ಲವಿಯನ್ನು ಹಾಡಿದರು. ಜಿಗಿದಾಡುತ್ತಾ ಶ್ಯಾಮು ಪುನಃ ಹೇಳಿದ "ನಾನು ಈ ಸಲ ಖಂಡಿತ ಪಡೆಯುವೆ!"

"ನೀನು ಓದುವುದೇಯಿಲ್ಲ, ಅದ್ಹೇಗೆ ಪಡೆಯುತ್ತಿ?" ಗೋಪಿಯ ಪ್ರಶ್ನೆ.

"ನಿನಗೇನು ಗೊತ್ತು? ನಾನು ಒಂದು ಗಳಿಗೆಯನ್ನೂ ಹಾಳು ಮಾಡದಂತೆ ಉಪಯೋಗಿಸಿಕೊಳ್ಳುವೆ."

ಮಕ್ಕಳೆಲ್ಲರೂ ಸಂತಸದುಬ್ಬರದಲ್ಲಿ ಕುಣಿದಾಡುತ್ತಾ "ನಾನು ಮುಂದೆ

ತಾನು ಮುಂದೆ" ಎಂದು ಒಬ್ಬರಿಗೊಬ್ಬರು ಸವಾಲು ಹಾಕಿಕೊಳ್ಳತೊಡಗಿದುದನ್ನು ನೋಡಿ ಶಿವೆಯ ಮುಖ ಪ್ರಸನ್ನವಾಯಿತು.ರವಿ ನಗುಮುಖದಿಂದದಿಂದ ಹೇಳಿದ "ಹಾಗಿದ್ದರೆ ಅಮ್ಮನಿಗೆ ಸುಲಭವಾಯಿತು. ಎಲ್ಲರ ಓದು ಖರ್ಚಿಲ್ಲದೆ ಸಾಗುತ್ತದೆ,"

"ರವಿ, ಶ್ಯಾಮು ಚೆನ್ನಾಗಿ ಓದುವುದಿಲ್ಲ. ಅವನದೆಲ್ಲಾ ಬೂಟಾಟಿಕೆ!" ಗೋಪಿ ದನಿಯೇರಿಸಿ ಹೇಳಿದ "ಅಮ್ಮ ನೀವೇ ಹೇಳಿರಿ, ಚನ್ನಾಗಿ ಓದುವುದು ನಾನೋ ಶ್ಯಾಮುವೋ?" ಗೋಪಿ ಬಹಳ ಉತ್ಸುಕತೆಯಿಂದ ಉತ್ತರವನ್ನು ನಿರೀಕ್ಷಿಸಿದ್ದ. ಯಾರ ಪರವಾಗಿ ಉತ್ತರಿಸಬೇಕೆಂಬುದನ್ನು ಕುರಿತು ಶಿವೆ ಕ್ಷಣಕಾಲ ಯೋಚಿಸಿ ಹೇಳಿದಳು "ನೀವಿಬ್ಬರೂ ಓದುತ್ತಿರುವುದು ಕಡಿಮೆ. ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗದ ಹೊರತು ಪ್ರಯೋಜನವಿಲ್ಲ."

ತಾಯಿಯ ಕೈಯಲ್ಲಿನ ಹತ್ತು ನೋಟುಗಳನ್ನು ನೋಡಿದ ವಿಮಲೆ "ಅಮ್ಮಾ, ನಾನೂ ಸರಸೂ ರವಿಯಂತೆ ಕೆಲಸ ಮಾಡಬೇಕೆಂದು ಮಾತಾಡಿಕೊಂಡಿದ್ದೇವೆ! ಅದರಿಂದ ನಮಗೂ ಹಣ ಬರುತ್ತದೆ!" ನೂರ್ಮಡಿಯ ಉತ್ಸಾಹದಿಂದ ನುಡಿದಳು.

"ಹೇಗೆ? ಎಂಥಾ ಕೆಲಸ?" ರವಿ ಕೇಳಿದ.

"ಅದು ಗುಟ್ಟು!" ಕಿಲಕಿಲನೆ ನಕ್ಕಳು ವಿಮಲೆ.

"ಸ್ವಲ್ಪ ಹೇಳಬಾರದೆ?"

ಉಹೂ; ನಾನು ಹೇಳುವುದಿಲ್ಲ."

"ನೀನು ಹೇಳದಿದ್ದರೂ ಕೆಲಸ ಮಾಡುವಾಗ ತಿಳಿಯುವುದಿಲ್ಲವೇ?"

"ಆಗ ತಿಳಿಯಲಿ ಪರವಾಗಿಲ್ಲ."

"ಹೇಳಿದರೆ ಆಗುವ ತೊಂದರೆಯೇನು?"

"ಉಹೂ! ಸರಸು ಹೇಳಬೇಡ ಎಂದಿದ್ದಾಳೆ."

"ನಾನು ಹೇಳು ಎನ್ನುತ್ತಿದ್ದೇನಲ್ಲಾ?"

"ಉಹೂ; ಉಹೂ"

"ನನಗೆಲ್ಲಾ ಗೊತ್ತು!" ಗೋಪಿ ಕಣ್ಣರಳಿಸಿ ತುಂಟ ನಗೆ ಬೀರಿ ಹೇಳಿದ, ಮಾತು ಮುಗಿಯುವುವರೊಳಗಾಗಿ ವಿಮಲೆ ಚಂಗನೆ ಹಾರಿ ಗೋಪಿಯ ಬಾಯಿಯನ್ನು ಮುಚ್ಚಿ ಹಿಡಿದುಕೊಂಡಳು.ಎಲ್ಲರೂ ನಗೆಗಡಲಲ್ಲಿ

ಮುಳುಗಿದರು. ಕಿಲಕಿಲನೆ ನಗುತ್ತ ವಿಮಲೆ ಎಲ್ಲರ ಮುಖದತ್ತಲೂ ದೃಷ್ಟಿಯನ್ನು ಹರಿಸಿ "ಹೇಳಬೇಡವೋ ಗೋಪಿ" ಎಂದಳು, ಗೋಪಿ ಕೊಸರಾಡಿ ಬಿಡಿಸಿಕೊಂಡು "ಅಮ್ಮಾ ಇವರಿಬ್ಬರೂ ದೊಡ್ಡಮನೆ ಯಜಮಾನಿಯೊಂದಿಗೆ ಮಾತಾ..." ಮಾತು ಪೂರ್ಣವಾಗಗೊಡದೆ ವಿಮಲೆ ಪ್ರಯತ್ನ ಪೂರ್ವಕವಾಗಿ ಗೋಪಿಯ ಬಾಯಿಯನ್ನು ಅದುಮಿ ಹಿಡಿದಳು. ಮತ್ತೆ ಎಲ್ಲರೂ ನಗತೊಡಗಿದರು. ಅಷ್ಟರಲ್ಲಿ ಅಲ್ಲಿಗೆ ಬಂದ ಸರಸು ಎಲ್ಲರ ಮುಖದ ಮೇಲಿನ ನಗುವನ್ನು ನೋಡಿ "ಏನದು?" ಎಂದು ತಾಯಿಯನ್ನು ಪ್ರಶ್ನಿಸಿದಳು. ವಿಮಲೆ ಇನ್ನೂ ಗೋಪಿಯ ಬಾಯಿಯನ್ನು ಒತ್ತಿ ಹಿಡಿದುಕೊಂಡಿದ್ದು "ಸರಸೂ, ಗೋಪಿ ನಮ್ಮ ಗುಟ್ಟೆಲ್ಲಾ ತಿಳಿದುಕೊಂಡಿದ್ದಾನೆ!" ಎಂದಳು. ಸರಸು ಅತ್ತ ತಿರುಗಿ ನಿನಗೆ ಹೇಗೆ ಗೊತ್ತು?" ಎಂದಳು ಪ್ರಶ್ನೆಯಲ್ಲಿ ಅಚ್ಚರಿಯಿತ್ತು.

"ಗೊತ್ತು....ಗೊತ್ತು! ಆ ದಿನ ನೀನು ವಿಮಲೆ ದೊಡ್ಡ ಮನೆಯ ಯಜಮಾನಿಯೊಂದಿಗೆ ಏನೇನು ಮಾತಾಡಿದ್ದೀರೋ ಅದೆಲ್ಲಾ ಗೊತ್ತು!" ಗೋಪಿ ಕೇಕೆ ಹಾಕಿ ನಗತೊಡಗಿದ. ವಿಚಾರ ಸಂಪೂರ್ಣ ಹೊರಬೀಳದಿದ್ದರೂ ಎಲ್ಲರ ಮುಖದಲ್ಲೂ ಕುತೂಹಲದೊಂದಿಗೆ ನಗುವಿನಲೆಯೂ ಎದ್ದಿತು.

"ಏನಮ್ಮಾ ಅದು?" ಶಿವೆ ಸರಸುವನ್ನು ಕೇಳಿದಳು.

"ಯಾರಿಗೂ ಹೇಳಲೇಕೂಡದು ಎಂದುಕೊಂಡಿದ್ದೆ. ಅಷ್ಟರೊಳಗಾಗಿ ನಿಮಗೆ ಸುಳಿವು ಹತ್ತಿ ಹೋಗಿದೆ." ಸರಸುವಿನ ಮುಖದಲ್ಲಿ ಎಳೆನಗು ಹರಡಿತು.

"ಓ, ಅವಳಾಗಲೇ ಹೇಳಿಬಿಟ್ಟಿದ್ದಾಳೆ!" ತಕ್ಷಣ ಗೋಪಿ ನುಡಿದ.

"ನೀನು ಹೇಳಿ ಬಿಟ್ಟೆಯೇನು?" ಸರಸು ಅಚ್ಚರಿಯಿಂದ ಕೇಳಿದಳು.

"ನಾನಲ್ಲ! ಗೋಪಿ ಹೇಳಿದ್ದು!"

"ಇಲ್ಲ ಸರಸೂ, ಅವಳೇ ಹೇಳಿದ್ದು! ಅಮ್ಮನನ್ನೇ ಕೇಳು ಬೇಕಾದರೆ ಅವಳೇ ಹೇಳಿದ್ದು!"

"ಮೊದಲು ಹೇಳಿದ್ದು ಗೋಪಿ. ದೊಡ್ಡ ಮನೆಯಲ್ಲಿ ಮಾತಾಡುತ್ತಿದ್ದರು ಎಂದು ಹೇಳಿದ."

"ಓ, ಅದೆಲ್ಲಾ ಇರಲಿ, ಕೆಲಸ ಮಾಡುತ್ತೇವೆ ಅಂತ ಅವಳೇ ಹೇಳಿದ್ದು!"

"ಸರಿ ಇಬ್ಬರೂ ನಮ್ಮ ಗುಟ್ಟನ್ನು ರಟ್ಟು ಮಾಡಿಬಿಟ್ಟರಿ!"

ಎಲ್ಲರೂ ಹರ್ಷ ಚಿತ್ತರಾದರು, ಸರಸು ತಾಯಿಯ ಕಡೆ ತಿರುಗಿ "ನಾವು ದೊಡ್ಡ ... ..." ಮಾತು ಹೊರ ಬೀಳುವುದರೊಳಗೆ ವಿಮಲೆ ಅತ್ತ ಚಿಮ್ಮಿ "ನಾನು ಮೊದಲು ಹೇಳುತ್ತೇನೆ!" ಎಂದು ಕೂಗಿ ಸರಸುವಿನ ಬಾಯಿಯನ್ನು ಹೇಳದಂತೆ ಗಟ್ಟಿಯಾಗಿ ಮುಚ್ಚಿ ಹಿಡಿದುಕೊಂಡು "ನಾವು ದೊಡ್ಡಮನೆಯ ಹೂದೋಟಕ್ಕೆ ನೀರು ಹಾಕುತ್ತೇವೆ!" ಎಂದು ನೂರ್ಮಡಿಯ ಉತ್ಸಾಹದಿಂದ ಕೂಗಿ ಹೇಳಿದಳು. "ಅವರು ನಮಗೆ ತಿಂಗಳಿಗೆ ಹದಿನೈದು ರೂಪಾಯಿ ಕೊಡುತ್ತಾರೆ!"

"ನಿಜವಾಗಿ?" ರವಿ ಕೇಳಿದ.

"ಹೌದು ರವಿ."

"ನೀನು ಹೇಗೆ ಈ ಕೆಲಸವನ್ನು ಗೊತ್ತು ಮಾಡಿಕೊಂಡೆ?"

"ಶಾಲೆಯಿಂದ ಬರುವಾಗ ಅವರ ಮಗಳೊಂದಿಗೆ ಮಾತಾಡಲು ಸ್ವಲ್ಪ ನಿಂತೆವು. ಅವರೇ ನೀರು ಹಾಕುತ್ತಿದ್ದುದನ್ನು ನೋಡಿ ನಾವು ನೀರು ಹಾಕಿದೆವು. ಅನಂತರ ಅವರೇ ಕೆಲಸ ಕೊಡುವುದಾಗಿ ಹೇಳಿದರು. ನಾಳೆಯಿಂದ ನಾವು ನೀರು ಹಾಕುತ್ತೇವೆ."

"ಆ ಹಣವೆಲ್ಲಾ ನಮಗೆ! ಹೊಸ ಬಟ್ಟೆ ಹೊಲಿಸಿಕೊಳ್ಳುತ್ತೇವೆ." ವಿಮಲೆ ಸಂತಸದಿಂದ ಹೇಳಿದಳು. ನೋಡು ನೋಡುತ್ತಾ ಶಿವೆ ಉತ್ಸಾಹಶಾಲಿನಿಯಾಗಿ ಮಕ್ಕಳನ್ನು ಮುದ್ದಿಟ್ಟು "ಹೇಗೂ ನಿಮಗೆ ಬೆಳಗಿನ ಹೊತ್ತು ಕೆಲಸವಿರುವುದಿಲ್ಲ. ಹೋಗಿ ನೀರು ಹಾಕಿರಿ." ಎಂದಳು. ಶ್ಯಾಮು ವಿಷಯ ತಿಳಿದು ಸಪ್ಪೆಯಾದ. ಉಕ್ಕಿಬಂದ ದುಃಖದಿಂದ ಮುಖ ಕೆಂಪು ಕೆಂಪಾಯಿತು. ಅದನ್ನು ಕಂಡ ಶಿವೆ "ಏಕೆ ಶ್ಯಾಮು? ಏನಾಯಿತು?" ಎಂದು ಕೇಳಿದಳು. ಉತ್ತರವಿಲ್ಲ. ಪುನಃ ಪುನಃ ಕೇಳಿದಳು. ಎಷ್ಟೋ ಹೊತ್ತಿನ ನಂತರ ಶ್ಯಾಮು ಹೇಳಲಾರದೆ ಹೇಳಿದ "ನಾನೂ ಕೆಲಸ ಮಾಡುವೆ " ಮಾತು ಮುಗಿಯುವುದರೊಳಗಾಗಿ ಅವನು ಬಿಕ್ಕಿ ಬಿಕ್ಕಿ ಅಳತೊಡಗಿದ.

"ಅಳಬೇಡವೋ ಶ್ಯಾಮೂ ನೀನೂ ಸಂಪಾದಿಸುವೆಯಂತೆ" ರವಿ ಸಮಾ

ಧಾನಗೊಳಿಸಲೆತ್ನಿಸಿದ. ಆದರೂ ಶ್ಯಾಮುವಿನ ದು:ಖ ಭರಣಿಯಲ್ಲಿಟ್ಟ ಬೆಂಕಿಯಂತಿತ್ತು. ಶಿವೆ ಅಪ್ಪಿಕೊಂಡು ಹೇಳಿದಳು "ನಿನಗೂ ಒಂದು ಕೆಲಸ ವನ್ನು ಹುಡುಕೋಣ, ನೀನೂ ಸಂಪಾದಿಸುವೆಯಂತೆ. ಅದರಿಂದ ನೀನೂ ಹೊಸಬಟ್ಟೆ ಹೊಲಿಸಿಕೊಳ್ಳಬಹುದು."

ಶ್ಯಾಮು ತುಸು ಸಮಾಧಾನಗೊಂಡರೂ ಎಲ್ಲರೂ ತನಗಿಂತ ಮುಂದೆಯೇ ಸಂಪಾದನೆಯ ಹಾದಿಯಲ್ಲಿದ್ದಾರೆಂಬುದು ಕೊರೆಯತೊಡಗಿತು. ಅವನ ಸ್ಥಿತಿಯನ್ನರಿತು ಅವನಿಗೆ ಕೆಲಸ ಸಿಗುವವರೆಗೆ ತನ್ನ ಕೆಲಸವನ್ನು ಬಿಟ್ಟು ಕೊಡಲು ವಿಮಲೆಯನ್ನು ಒಪ್ಪಿಸಿದಳು ಶಿವೆ, ಮರುದಿನದಿಂದ ಶ್ಯಾಮು ಮತ್ತು ಸರಸು ಗಿಡಗಳಿಗೆ ನೀರು ಹಾಕಲು ಹೋಗುವುದೆಂದು ತೀರ್ಮಾನ ವಾಯಿತಾದರೂ ವಿಮಲೆ ತನ್ನ ಮೊಟ್ಟ ಮೊದಲ ಉತ್ಸಾಹದ ಮೊಳಕೆ ಯನ್ನೇ ಮೊಟಕು ಮಾಡಿದಂತಾಗಿ ನಿರುತ್ಸಾಹಿಯಾದಳು. ಆಗ ರವಿ ಮೂವರೂ ನೀರು ಹಾಕಿರಿ ಎಂದು ಸಲಹೆ ಮಾಡಿದ. ವಿಮಲೆಯು "ಹ್ಞೂ" ಎನ್ನುವುದರೊಳಗಾಗಿ ಗೋಪಿ ಕೇಳಿದ "ನಾನೂ ಹೋಗಲೇ?" ಕಣ್ಣುಗಳು ಆಸಕ್ತಿಯಿಂದ ಅರಳಿದ್ದುವು.

"ಓ, ಅದಿನ್ನೂ ಒಳ್ಳೆಯದು ಎಲ್ಲರೂ ಕೂಡಿ ಮಾಡಿದರೆ ಬೇಗನೆ ಮುಗಿಯುತ್ತದೆ." ಶಿವೆ ನುಡಿದಳು. ಮಕ್ಕಳ ಉತ್ಸಾಹವು ಮನದಲ್ಲಿ ಸಂತಸ ವನ್ನು ಮೂಡಿಸಿತು. ದೇವರು ಒಳ್ಳೆಯ ದಾರಿಗೆ ಹಚ್ಚುತ್ತಿದ್ದಾನೆ ಎಂದು ಕೊಂಡಳು ಶಿವೆ. ಮರುದಿನ ಮಕ್ಕಳ ದಂಡು ನೀರು ಹಾಕಲು ಹೊರಟಿ ತೆಂದು ಹೇಳಬೇಕಾದುದಿಲ್ಲ.

'ಅಸಂತೋಷಂ ಶ್ರೀಯೋರ್ಮೂಲಂ'

ರಾಮಪುರದಲ್ಲಿ ಚಂದು ಸಂಸಾರ ಹೂಡಿ ಆರುವರ್ಷಗಳಾದವು. ತನ್ನ ಹುಟ್ಟು ಊರಾದ ಮರಡಿ ಹಳ್ಳಿಯಲ್ಲಿ ನಾಲ್ಕು ಎಕರೆ ಗೇಣಿ ಜಮೀನಿನಲ್ಲಿ ಅಜ್ಜನ ಕಾಲದಿಂದಲೂ ದುಡಿದು ಉಣ್ಣುತ್ತಿದ್ದುದು ಅರೆ ಹೊಟ್ಟೆಗೂ ಸಾಲುತ್ತಿರಲಿಲ್ಲ. ಮರಡಿಹಳ್ಳಿಯ ಶಾಲೆಯಲ್ಲಿ ಆರನೆ ಇಯತ್ತೆಯವರೆಗೆ ಓದಿದ ಚಂದು ಮುಂದೆ ನಂಜನಗೂಡಿಗೆ ಹೋಗಿ ವಿದ್ಯಾಭ್ಯಾಸ ಮಾಡುವಷ್ಟು ಶಕ್ತನಾಗದುದರಿಂದ ಅಷ್ಟಕ್ಕೆ ಮೊಟಕು ಮಾಡಿ ಆರಂಭ ಜೀವನ ಆರಂಭಿಸಿದ. ರಾಮಪುರದಲ್ಲಿ ಬೀಳು ಜಮೀನನ್ನು ಸರಕಾರದಿಂದ ಪಡೆದುಕೊಂಡು ಅದನ್ನು ರೂಡಿಸಲು ಬಲು ಕಷ್ಟ ಪಟ್ಟಿದ್ದ. ಪ್ರಗತಿ ಪಥದಲ್ಲಿ ಹೆಜ್ಜೆಯಿಟ್ಟ ಚಂದು ಬಹಳ ಉತ್ಸಾಹಶಾಲಿ ಹಾಗೂ ಪ್ರತಿಭಾನ್ವಿತ ವ್ಯಕ್ತಿ. ವಿದ್ಯೆ ಲಭಿಸವೆ ಹೋದರೂ ಜ್ಞಾನಾರ್ಜನೆಗಾಗಿ ಸತತ ಪ್ರಯತ್ನಪಟ್ಟಿದ್ದ.

ಚಂದು ರಾಮಪುರದಲ್ಲಿನ ಬೀಳು ಜಮೀನಿಗಾಗಿ ಸರಕಾರಕ್ಕೆ ಅರ್ಜಿ ಹಾಕಿದಾಗ ತಂದೆಯಾದ ತಿಮ್ಮಯ್ಯನಿಗೆ ದಂಗುಬಡಿಯಿತು. ಚಂದು ಅಷ್ಟು ದೂರ ಹೋಗುವನೇ? ಮುಂದೇನು ಗತಿಯೆಂದು ಯೋಚನೆಗೀಡಾದ. ನಾನಾ ವಿಧದಲ್ಲಿ ಮಗನಿಗೆ ಹೇಳಿಕೊಂಡು "ಯಾವುದೋ ಕಾಣದ ಸೀಮೆಗೆ ಹೋಗುತ್ತಿದ್ದಿಯೇ, ನಾನಿಲ್ಲಿ ಸತ್ತುಹೋದರೆ ನಿನಗೆ ಮೂರು ದಿನಗಳ ನಂತರ ಸುದ್ದಿ ತಿಳಿದೀತು. ನೀನಲ್ಲಿ ಕಾಹಿಲೆ ಬಿದ್ದರೂ ನಮಗೆ ತಿಳಿಯುವುದಿಲ್ಲ," ಎಂದು ಅತ್ಯಂತ ಕಳಕಳಿಯಿಂದ ಹೇಳಿಕೊಂಡಿದ್ದ. ತಾಯಿ ನಂಜಮ್ಮನೂ ಮಗನಿಗಾಗಿ ಮೂರು ದಿನಗಳ ಪರ್ಯಂತ ಕಣ್ಣೀರು ಕರೆದಿದ್ದಳು. ಚಂದುಗೆ ಇಬ್ಬರಿಗೂ ಸಮಾಧಾನ ಹೇಳಬೇಕಾದರೆ ಸಾಕು ಸಾಕಾಯಿತು.

ಅಜ್ಜನ ಕಾಲದಿಂದಲೂ ಅನ್ನ ನೀಡಿದ ಭೂಮಿಯನ್ನು ಮಗನ ಕಾಲಕ್ಕೆ ಕಡೆಗಣಿಸುವಂತಾಯಿತೇ? ಇಂಥ ಪಾಪಿ ಮಗನನ್ನೇಕೆ ದೇವರು ಕೊಟ್ಟನೋ ಎಂದು ಸದಾ ಕೊರಗುತ್ತಿದ್ದ ತಿಮ್ಮಯ್ಯ ...ರೇಜಿನಿಂದ ರಾಮಪುರಕ್ಕೆ ಬರಲಾರೆ

ಎಂದು ಹಟ ಬೇರೆ ಹಿಡಿದ. ಚಂದು ಉಭಯಸಂಕಟಕ್ಕೊಳಗಾದರೂ ಏಳೆಂಟು ವರ್ಷಗಳ ಸತತ ಪ್ರಯತ್ನದಿಂದ ಜಮೀನನ್ನು ಉತ್ತಮಸ್ಥಿತಿಗೆ ತಂದ. ತೆಂಗಿನ ಮರಗಳು ನಳನಳಿಸಿ ಬೆಳೆದುವು. ಜಮೀನು ಹುಲುಸಾದ ಬೆಳೆ ನೀಡಿತು. ಮಗ್ಗುಲಲ್ಲಿ ಒಂದು ಸೊಗಸಾದ ಹುಲ್ಲಿನ ಜೋಪಡಿಯನ್ನು ಕಟ್ಟಿದ. ಗಾಳಿ ಬೆಳಕು ದಟ್ಟವಾಗಿ ಬರುವಂತೆ ಅಗಲವಾದ ಕಿಟಕಿಗಳನ್ನಿಟ್ಟು ಅಚ್ಚುಕಟ್ಟಾಗಿರುವಂತೆ ರೂಪಿಸಿದ, ವಿಷಯ ತಿಮ್ಮಯ್ಯನಿಗೆ ತಿಳಿದಾಗ ತಲೆಯ ಮೇಲೆ ಕೈಹೊತ್ತು ಕುಳಿತುಕೊಂಡು ತನ್ನ ಓರಗೆಯವರಿಗೆ ಮಗನ ಬಗ್ಗೆ ದೂರು ಹೇಳಿದುದಲ್ಲದೆ ಹಗಲಿರುಳೂ ಛೀಮಾರಿ ಹಾಕತೊಡಗಿದ.

"ದೊಡ್ಡ ಕಿಟಕಿಗಳಿದ್ದರೆ ಶನಿಪೀಡೆಗಳು ಒಳಗಡೆ ಸೇರಿಕೊಳ್ಳುತ್ತವೆ, ನಿನ್ನ ಜೀವಕ್ಕೂ ಅಪಾಯ. ಎಂದೆಂದೂ ನಿನಗೆ ಕಿರುಕುಳ ತಪ್ಪದು. ರಾತ್ರಿ ಹೊತ್ತು ಕಿಟಕಿಗಳನ್ನು ಮುಚ್ಚಿಯೇ ಮಲಗಿಕೊ." ಎಂದು ಚಂದುವಿಗೆ ತಪ್ಪದೆ ಹೊರಡುವಾಗ ಹಿತವಚನವನ್ನು ಹೇಳುತ್ತಿದ್ದ. ಚಂದು ಎಲ್ಲಕ್ಕೂ 'ಹೂ' ಎಂದು ಸುಮ್ಮನಾಗುತ್ತಿದ್ದುದು ತಿಮ್ಮಯ್ಯನ ಗಮನಕ್ಕೆ ಬರದಿರಲಿಲ್ಲ.

ತಂದೆ ತಾಯಿಯರು ರಾಂಪುರಕ್ಕೆ ಬರಲೊಪ್ಪದುದು ಬಹಳ ಕಷ್ಟಕ್ಕಿಟ್ಟುಕೊಂಡಿತು. ಚಂದು ಪ್ರಯಾಣ ಸಿದ್ಧತೆಗಾಗಿ ತಂದಿದ್ದ ಚಕ್ಕಡಿಯನ್ನು ಹಿಂದಿರುಗಿಸುವ ಮುನ್ನ ಎಷ್ಟೆಷ್ಟು ಕೇಳಿಕೊಂಡರೂ ಫಲಪ್ರದವಾಗಲಿಲ್ಲ. ಮುಪ್ಪು ಮತ್ತು ಬಡತನದಿಂದ ಜೀರ್ಣವಾದ ಶರೀರ, ಮನೆಯಲ್ಲಿ ನುಚ್ಚಿಲ್ಲ, ನೀರಿಗಾಗಿ ದೂರದ ಹೊಂಡಕ್ಕೆ ಹೋಗಬೇಕು. ಬಡತನದ ರುದ್ರ ದೇವತೆ ಮನೆಯಲ್ಲಿ ನರ್ತಿಸುತ್ತಿದ್ದಾಳೆ. ಆದರೂ ತಿಮ್ಮಯ್ಯ ಹಟ ಬಿಡಲಿಲ್ಲ. ಆಗ ಚಂದುಗೆ ಇಪ್ಪತ್ತರ ಹರಯ ಸುಮಾರು ಹದಿನೈದು ವರ್ಷಗಳ ಹಿಂದೆ ಚಂದುವಿನ ಜೀವನದಲ್ಲಿ ಸಂದು ಹೋದ ದಿನಗಳ ಚಿತ್ರವಿದು.

ಹೆತ್ತ ಏಳು ಮಕ್ಕಳಲ್ಲಿ ಚಂದು ಮೂರನೆಯವನು. ಮೊದಲನೆಯವರಿಬ್ಬರನ್ನು ಮೃತ್ಯು ದೇವತೆ ಸ್ವಾಹ ಮಾಡಿದ್ದಳು. ನಾಲ್ಕನೆಯ ಹೆಣ್ಣು ಮಗಳನ್ನು ಅದೇ ಊರಿನ ನಿರುದ್ಯೋಗಿಯೊಬ್ಬನಿಗೆ ಕೊಟ್ಟು ಮದುವೆಯಾಗಿತ್ತು. ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದ ಚಿನ್ನಪ್ಪ ತಂಗಿಯನ್ನು ನಾನಾ ವಿಧದಲ್ಲಿ ಹಿಂಸಿಸುತ್ತಿದ್ದ ರೀತಿ ಚಂದುವಿನ ಸ್ಥೈರಣೆಯನ್ನು ಮೀರಿಸಿತು

ಒಡನೆ ತಂಗಿಯನ್ನು ಕರೆತಂದು ಮನೆಯಲ್ಲೇ ಇಟ್ಟುಕೊಂಡ. ಎಷ್ಟಾದರೂ ಮದುವೆಯಾದ ಮೇಲೆ ಹೆಣ್ಣು ತೌರುಮನೆ ಸೇರುವುದು ವಿಹಿತವಲ್ಲವೆಂದು ತಿಮ್ಮಯ್ಯ ವಿರೋಧಿಸಿದ್ದ. ಆದರೂ ಚಂದು ಕೇಳುವಂತಿರಲಿಲ್ಲ.ಅದೊಂದು ಹಗರಣವಾಗಿ ಪರಿಣಮಿಸಿತು. ಐದನೆಯವಳಿಗೂ ಎಳೆ ವಯಸ್ಸಿನಲ್ಲಿಯೇ ಮದುವೆಯಾಗಿತ್ತು. ಅವಳು ಐದು ಮಕ್ಕಳ ತಾಯಿ. ಜೀವನ ನೂರಾರು ಕಷ್ಟಕಾರ್ಪಣ್ಯಗಳಿಂದ ಕೂಡಿತ್ತು. ಆರನೆಯವನು ಹದಿನೈದು ವರ್ಷದ ತಮ್ಮ ಏಳನೆಯವನು ಹತ್ತನೆಯ ವಯಸ್ಸಿನಲ್ಲಿ ಸ್ವರ್ಗಾರೋಹಣ ಮಾಡಿದ್ದ, ಒಟ್ಟಿನಲ್ಲಿ ತಿಮ್ಮಯ್ಯನ ಸಂಸಾರದ ಚಿತ್ರ ದಾರುಣವಾಗಿತ್ತು. ಚಂದು ಹೇಗಾದರೂ ಈ ಗಂಡಾಂತರಗಳಿಂದ ಪಾರಾಗಿ ನಿರ್ಮಲವಾದ ಜೀವನ ನಡೆಸಬೇಕೆಂದು ಆತ್ಮಾಸಕ್ತಿಯಿಂದ ಜೀವನಕ್ಕೆ ಕಾಲಿಟ್ಟ ವ್ಯಕ್ತಿ. ಆದರೆ ತಿಮ್ಮಯ್ಯನ ರೀತಿಯೇ ಬೇರೆ. ಮಗನ ಒಂದೊಂದು ಹೆಜ್ಜೆಯಲ್ಲೂ ವಿಪರೀತವನ್ನು ಕಾಣುತ್ತಿದ್ದು ದಿನವೂ ಬೈಗುಳದ ಮಳೆಯನ್ನೇ ಕರೆಯುತ್ತಿದ್ದ. ಚಂದು ಎಲ್ಲವನ್ನೂ ಮರು ಮಾತಿಲ್ಲದೆ ಸ್ವೀಕರಿಸುತ್ತಿದ್ದ. ಇದು ಚಂದು ಸಂಸಾರದ ಪರಿಚಯ.

ಚಂದು ತಮ್ಮನನ್ನು ವಿದ್ಯಾಭ್ಯಾಸಕ್ಕಾಗಿ ನಂಜನಗೂಡಿಗೆ ಕಳುಹಿಸಬೇಕೆಂದು ಮನಸ್ಸು ಮಾಡಿದ್ದ. ಆದರೆ ಸುಬ್ಬು ಮರಡಿಹಳ್ಳಿಯ ವಿದ್ಯಾಭ್ಯಾಸವನ್ನೂ ಜೀರ್ಣಿಸಿಕೊಳ್ಳದಾದ. ಚಂದು ಬಲವಂತವಾಗಿ ತಮ್ಮನನ್ನು ಕೂರಿಸಿ ಓದಿಸುತ್ತಿದ್ದರೂ ಅವನು ರಾಮಪುರಕ್ಕೆ ಹೋದನಂತರ ಸಂಪೂರ್ಣ ಮರೆತು ಬಿಡುತ್ತಿದ್ದ. ಚಂದು ಮರಳಿ ಮನೆಗೆ ಬಂದಾಗ ಯಥಾರೀತಿ ಪಾಠ ಪ್ರವಚನಗಳ ಸುರಿಮಳೆ ನಡೆಯುತ್ತಿತ್ತು.

"ಕಲಿತು ಮಾಡುವುದೇನು? ಕಲಿತವರಿಗಿಂತ ಕಲಿಯದವರೇ ಉತ್ತಮ" ಎಂದು ತಿಮ್ಮಯ್ಯ ಚಂದುವಿನ ಉತ್ಸಾಹಕ್ಕೆ ತಿಲಾಂಜಲಿಯನ್ನು ಬಿಡುವುದರಲ್ಲಿ ಹಿಂದೆಗೆಯಲಿಲ್ಲ.

ನಾನಾ ಕಷ್ಟ ಪರಂಪರೆಗಳನ್ನೆದುರಿಸಿದ ಚಂದು ತೋಟದ ಮೊದಲನೆ ಬೆಳೆ ಬಂದೊಡನೆ ತಂದೆಗಾಗಿ ಮರಡಿಹಳ್ಳಿಯಲ್ಲಿ ಕೊಂಚ ಜಮೀನನ್ನು ಕೊಂಡು ಅಲ್ಲೊಂದು ಉತ್ತಮವಾದ ಜೋಪಡಿಯನ್ನು ಕಟ್ಟಿ ಸಂಸಾರವನ್ನು ಅಲ್ಲಿಗೆ ವರ್ಗಾಯಿಸಿದ. ಅಲ್ಲಿನ ಅಗಲವಾದ ಗವಾಕ್ಷಿಯನ್ನು ಕಂಡೊಡನೆಯೇ

ಅದನ್ನು ಭದ್ರಪಡಿಸಿ ಅಲ್ಲಿಗೊಂದು ಮಂತ್ರಿಸಿದ ತೆಂಗಿನ ಕಾಯಿಯನ್ನು ಕಟ್ಟಿ ತಿಮ್ಮಯ್ಯ ಅನಿಷ್ಟಗಳಿಗೆ ತಡೆ ಹಾಕಿದ. ಚಂದು ಅದನ್ನು ನೋಡಿ ನಕ್ಕರೂ ಈ ಮೌಢ್ಯತೆಯ ನಿವಾರಣೆ ಹೇಗೆ? ಎಂದು ಮನದಲ್ಲೇ ಚಿಂತಿಸಿದ. ಕಾರ್ಯತಃ ಏನೂ ಮಾಡಲಾಗಲಿಲ್ಲ.

ಹೊಸಮನೆಗೆ ವರ್ಗಾಯಿಸಿದ ಹೊಸದರಲ್ಲಿಯೇ ತಿಮ್ಮಯ್ಯ ಛಳಿಜ್ವರ ಪೀಡಿತನಾಗಿ ಮಲಗಿದುದರಿಂದ ಹೊಸಮನೆಯಲ್ಲಿರಬಹುದಾದ ರಾಹು ಪೀಡೆಗಳೇ ಕಾರಣವೆಂದು ಬಗೆದು ಅಲ್ಲಿ ಕ್ಷಣವೂ ನಿಲ್ಲದೆ ಹಳೆಯ ಜೋಪಡಿಗೆ ಹಿಂದಿರುಗಿದ. ನಂಜಮ್ಮ ಊರ ಮಾರಮ್ಮನಿಗೆ ಕಾಯೊಡೆಸುವುದಾಗಿ ಹರಕೆ ಇಟ್ಟುಕೊಂಡಳು. ಚಂದು ತಂದ ಔಷಧವನ್ನು ಕಣ್ಣೆತ್ತಿಯೂ ನೋಡದೆ, ನೀನು ದಿನೇ ದಿನೇ ವಿಪರೀತಕ್ಕೆ ಹೋಗುತ್ತಿದ್ದಿಯೆಂದು ಬೈಗುಳದ ಮಳೆಗರೆದ ತಿಮ್ಮಯ್ಯ.

"ಹಾಳು ಜಾಗದಲ್ಲಿ ಮನೆಕಟ್ಟಿ ನಿಮ್ಮಪ್ಪನ ಜೀವಕ್ಕೆ ಸಂಚಕಾರ ತಂದಿದ್ದಲ್ಲೋ ಮಹರಾಯ! ನನಗೆ ಕೆರೆ ಬಾವಿ ನೋಡುವಂತಹ ದಾರಿ ಮಾಡಿದ್ದೆ" ಎಂದಳು ನಂಜಮ್ಮ. ಏನುತ್ತರ ಹೇಳಬೇಕೋ ತಿಳಿಯದಾಯಿತು. ಮಾತಾಡುವುದಕ್ಕಿಂತ ಮಾತಾಡದಿರುವುದೇ ಲೇಸೆಂದು ಸುಮ್ಮನಾದ ಚಂದು.

"ಜೋಯಿಸರ ಹತ್ತಿರ ಫಲಾಫಲ ಕೇಳಿಸದೇನೇ ಮನೆಕಟ್ಟಿದರೆ ದಕ್ಕೀತೇ? ಹೆಣ್ಣು ಹೊನ್ನು ಮಣ್ಣು ಋಣಾನುಬಂಧವಿಲ್ಲದೇನೇ ದೊರಕಿಯಾವೇ? ನೀನು ಕಷ್ಟಪಟ್ಟು ಕೊಂಡುಕೊಂಡರೂ ದಕ್ಕಲಿಲ್ಲ ನೋಡು." ನಂಜಮ್ಮ ಮತ್ತೆ ಅದೇ ಪಲ್ಲವಿಯನ್ನು ಹಾಡಿದಳು. ಚಂದು ಮರು ಮಾತಾಡದೆ ಎದ್ದು ಹೋದ.

ತಿಮ್ಮಯ್ಯನಿಗೆ ಔಷಧೋಪಚಾರವಿಲ್ಲದೇನೇ ಕಾಹಿಲೆ ಹರಿಯಿತು. ಚಂದು ತಂದ ಔಷಧ ನಿರುಪಯುಕ್ತವಾಗಿ ಕಿಟಕಿಯ ಮೇಲೆ ಉಳಿದಿತ್ತು. ಇನ್ನಾದರೂ ತಂದೆ ಹೊಸಮನೆಗೆ ಹೋದರೆ ಅನುಕೂಲವೆಂದು ಯೋಚಿಸಿದ ಚಂದು ಸುಬ್ಬುವಿನೊಡನೆ ಆ ಬಗ್ಗೆ ಪ್ರಸ್ತಾಪಿಸಿದ. ನುಡಿ ಕೇಳಿದ ತಿಮ್ಮಯ್ಯ "ನಾನು ಸತ್ತರೂ ಇಲ್ಲಿಯೇ ಸಾಯುವೆ, ನಮಗೆ ಹೊಸ ಮನೆ ಬೇಕಿಲ್ಲ." ಎಂದು ಹಾಸಿಗೆಯಿಂದಲೇ ಖಡಾಖಂಡಿತವಾಗಿ ಉತ್ತರಿಸಿದ, ಬಾಗಿಲಲ್ಲಿ ನಿಂತ ಚಂದು ಚಿಂತಾಕ್ರಾಂತನಾದ. ಹೊಸ ಜಮೀನು ಹೊಸ ಮನೆಯ

ಉಸ್ತುವಾರಿ ಹೇಗೆಂಬ ಚಿಂತೆ ಮನದಲ್ಲಿ ಮೂಡಿತು. ಹೊಗೆ ಹತ್ತಿದ ಕಿಷ್ಕಿಂದವಾದ ಜೋಪಡಿಯಲ್ಲಿ ತಿಮ್ಮಯ್ಯ ಮಲಗಿದ ತಾಣ ಗುರುತಿಸಲಾಗದಷ್ಟು ಕತ್ತಲು ಮುಸುಗಿತ್ತು. ಸ್ಥಿತಿಗತಿಯನ್ನು ನೋಡಿದರೆ ಎಂತಹವರಿಗೂ ಮರುಕವಾಗುವಂತಹ ದೃಶ್ಯ. ಆದರೂ ತಿಮ್ಮಯ್ಯ ಹಠ ಬಿಡಲೊಲ್ಲ. ಹೊಸ ಮನೆ ಗೆದ್ದಲು ಹತ್ತಲಾರಂಭಿಸಿತು. ತಾನೇ ಕಷ್ಟಪಟ್ಟು ಕಟ್ಟಿದ ಮನೆ ಹೀಗೆ ನಿರುಪಯುಕ್ತವಾದೀತೆಂದು ಭಾವಿಸಿರಲಿಲ್ಲ. ಪರಿಹಾರ ಕಾಣದೆ ಮನದಲ್ಲೆ ವ್ಯಥಿತನಾದ. ಈ ಜನ್ಮದಲ್ಲಂತೂ ಇವರ ಸುಧಾರಣೆ ಸಾಧ್ಯವಿಲ್ಲವೆಂಬುದು ಖಚಿತವಾಯಿತು. ಯೋಚನೆಯ ಪದಹತಿಯಲ್ಲಿ ಮನಸ್ಸು ಮಿಲಿಮಿಲಿಗೊಂಡಿತು ....

ಚಂದು ರಾಮಪುರಕ್ಕೆ ಹೋಗಿ ಮರಳಿ ಮನೆಗೆ ಬಂದಾಗ ತಾನೇ ನಿಂತು ಹೊಸ ಮನೆಯನ್ನು ಶುದ್ಧಿಗೊಳಿಸಿದ. ಜೇಡನ ಬಲೆ ಎಲ್ಲೆಡೆಯೂ ನೇತಾಡುತ್ತಿದ್ದು ಕ್ರಿಮಿಕೀಟಗಳಿಗೆ ವಾಸಸ್ಥಾನವಾದ ಮನೆಯನ್ನು ನೋಡಿ ಮನದಲ್ಲಿ ಎಲ್ಲಿಲ್ಲದ ಕಸಿವಿಸಿಯುಂಟಾಯಿತು. ತಿಮ್ಮಯ್ಯನಿಗೆ ನಾನಾ ಬಗೆಯಿಂದ ಹೇಳಿಕೊಂಡರೂ ಪ್ರಯೋಜನವಾಗಲಿಲ್ಲ. ಅದಕ್ಕೆ ಬದಲಾಗಿ ಬೈಗುಳನ್ನು ಕೇಳಬೇಕಾಯಿತು. ಸುಬ್ಬು ಜಮೀನನ್ನೇನೋ ಹೋಗಿ ನೋಡಿಕೊಳ್ಳುತ್ತಿದ್ದ. ಆದರೆ ಆತನ ಬಹು ವೇಳೆ ನಡಿಗೆಯಲ್ಲಿ ಕಳೆಯುತ್ತಿತ್ತು. ಅಲ್ಲದೆ ಸಮಯ ಸಾಧಿಸಿ ಫಸಲನ್ನು ಕದ್ದೊಯ್ಯುವವರಿಗೂ ಕಡಿಮೆಯಿರಲಿಲ್ಲ. ಒಳ್ಳೆಯ ಜಮೀನಲ್ಲವಾದ್ದರಿಂದ ಸಾಕಷ್ಟು ಬೆಳೆ ಬರುವುದಿಲ್ಲವೆಂದು ಭಾವಿಸಿದ ಸುಬ್ಬು. ವೃದ್ಧಾಪ್ಯದಿಂದ ಜಮೀನಿಗೆ ದಿನವೂ ನಡೆದುಹೋಗಲು ಅಶಕ್ತನಾದುದರಿಂದ ತಿಮ್ಮಯ್ಯನಿಗೆ ಜಮೀನಿನ ಗುಣವನ್ನು ತಿಳಿದುಕೊಳ್ಳಲಾಗಲಿಲ್ಲ. ಜಮೀನನ್ನು ಹೇಗಾದರೂ ಅಪಹರಿಸಬೇಕೆಂದು ಹೊಂಚು ಹಾಕುತ್ತಿದ್ದ ನೀಲಕಂಠಯ್ಯನಿಗೆ ಇದೊಂದು ಸುಸಮಯವಾಗಿ ತೋರಿತು. ತಿಮ್ಮಯ್ಯನ ಯೋಗಕ್ಷೇಮವನ್ನು ವಿಚಾರಿಸಲೆಂಬಂತೆ ಆಗಾಗ್ಗೆ ಬರತೊಡಗಿದ. ಆ ಮಾತು ಈ ಮಾತುಗಳನ್ನಾಡುತ್ತಾ ಚಂದು ನಿಷ್ಪ್ರಯೋಜನವಾದ ಜಮೀನಿಗೆ ತಿಳಿಯದೆಲೆ ಹೊನ್ನು ಸುರಿದು ಅನ್ಯಾಯ ಮಾಡಿದ್ದಾನೆ ಎಂದು ಉದ್ದಿಶ್ಯ ಪೂರ್ವಕವಾಗಿ ಹೇಳತೊಡಗಿದ. ತಿಮ್ಮಯ್ಯ ಅದನ್ನು ಸಂಪೂರ್ಣ ನಂಬಿಬಿಟ್ಟ.

ಚಂದು ಮಾರಡಿಹಳ್ಳಿಗೆ ಮರಳಿ ಬಂದಾಗ ತಿಮ್ಮಯ್ಯ "ಯಾವುದೋ

ಕಾಣದ ದೇಶದಲ್ಲಿ ನೀನು ಹೋಗಿ ಸೇರಿಕೊಂಡೆ, ಈ ಹಾಳು ಜಮೀನಿನಿಂದ ಉತ್ಪತ್ತಿಯೂ ಇಲ್ಲ. ಜಮೀನು ಕಟ್ಟಿಕೊಂಡಿದ್ದರಿಂದ ಸುಬ್ಬು ಕೂಲಿಯೂ ಮಾಡುವಂತಿಲ್ಲ. ಒಟ್ಟಿನಲ್ಲಿ ಉಪವಾಸ ಸಾಯುವ ಕಾಲ ತಂದಿಟ್ಟೆ. ಈ ಬಾರಿ ಜಮೀನನ್ನು ಯಾರಿಗಾದರೂ ಮಾರಿಯೇ ಹೋಗು" ಎಂದು ಬಲವಂತ ಮಾಡಿದ.

ಚಂದುಗೆ ಏನು ಮಾಡುವುದೆಂಬುದು ಬಗೆ ಹರಿಯದಾಯಿತು.

ಹಾಗೇ ಯೋಚಿಸುತ್ತಾ ಎದ್ದು ಜಮೀನಿನ ಕಡೆ ಹೊರಟ. ತುಸು ದೂರ ಹೋಗುವುದರೊಳಗಾಗಿ ದಾರಿಯಲ್ಲಿ ಒಬ್ಬ ಭೈರಾಗಿ ಎದುರಾದ.ಅವನನ್ನು ನೋಡುತ್ತಲೂ ಕತ್ತಲಲ್ಲಿ ಬೆಳಕು ಮೂಡಿದಂತೆ ತಕ್ಷಣ ಯೋಚನೆಯೊಂದು ಮನದಲ್ಲಿ ಮೂಡಿ ಬಾಡಿದ ವದನ ಪ್ರಫುಲ್ಲವಾಯಿತು, ಚಂದು ಭೈರಾಗಿಯೊಡನೆ ಸ್ವಲ್ಪ ಹೊತ್ತು ಮಾತಾಡಿ ಕಿಸೆಯಿಂದ ಎರಡು ರೂಪಾಯಿಗಳನ್ನು ತೆಗೆದು ಭೈರಾಗಿಯ ಕೈಗಿಟ್ಟು ಅವನೊಂದಿಗೆ ಮನೆಯ ಕಡೆ ಹೆಜ್ಜೆ ಹಾಕಿದ. ಭೈರಾಗಿಗೆ ದೂರದಿಂದ ಮನೆಯನ್ನು ತೋರಿ ಚಂದು ನಡಿಗೆಯನ್ನು ನಿಧಾನಗೊಳಿಸಿದ, ಭೈರಾಗಿ ನೇರವಾಗಿ ತಿಮ್ಮಯ್ಯನ ಮನೆಗೆ ಬಂದ. ಭೈರಾಗಿಯನ್ನು ಕಾಣುತ್ತಲೂ ತಿಮ್ಮಯ್ಯ ಭಕ್ತಿಯಿಂದ ಎರಡೂ ಕೈಗಳನ್ನು ಜೋಡಿಸಿ ನಮಸ್ಕರಿಸಿದ.

ಭೈರಾಗಿ ಏರಿದ ದನಿಯಲ್ಲಿ ಹೇಳಿದ "ಮಹರಾಜ್, ನಿನಗೆ ಬಹಳ ದಿನಗಳಿಂದ ಮೈ ಸ್ವಸ್ಥವಿಲ್ಲವಲ್ಲವೆ?"

ತಿಮ್ಮಯ್ಯ ಹೌದೆಂದು ತಲೆಯಲ್ಲಾಡಿಸಿ ಸೂಚಿಸಿದ. ಭೈರಾಗಿಯ ದನಿಯನ್ನು ಕೇಳುತ್ತಲೂ ಆಸಕ್ತಿಯಿಂದ ನಂಜಮ್ಮ ಹೊರಬಂದಳು.

"ನಿನಗೆ ಎಳೆಯ ದಿನಗಳಿಂದ ಶನಿಕಾಟವಿದೆ. ಜೊತೆಗೆ ಈ ಮನೆಯೊಳಗೆ ಒಂದು ದುಷ್ಟ ಪಿಶಾಚಿಯೂ ಸೇರಿಕೊಂಡಿದೆ! ಅದರಿಂದ ನೀನು ಬಹಳ ತೊಂದರೆಗೊಳಗಾಗಿದ್ದಿ."

"ಸ್ವಾಮೀ, ಅದಕ್ಕೇನು ಮಾಡಬೇಕೆಂಬುದನ್ನಾದರೂ ಹೇಳಿರಿ."

ತಿಮ್ಮಯ್ಯ ಕೈಮುಗಿದು ಅಂಗಲಾಚಿದ, ನಂಜಮ್ಮನೂ ಪರಿಹಾರವನ್ನು ಕೇಳಿಕೊಂಡಳು,

"ನಿನಗೆ ಐದು ಕಲ್ಲುಗಳನ್ನು ಮಂತ್ರಿಸಿಕೊಡುತ್ತೇನೆ. ಅವುಗಳಲ್ಲಿ

ಒಂದನ್ನು ಈ ಮನೆಯ ಹಿಂದಣ ಬಾಗಿಲಿಗೆ ಇಡು. ಇನ್ನೊಂದನ್ನು ಮುಂದಣ ಬಾಗಿಲಿಗೆ ಇಟ್ಟು ಈ ಮನೆಯನ್ನು ಬಿಟ್ಟು ಹೊರಡು. ದಾರಿಯಲ್ಲಿ ನೀನು ಹೋಗುವಾಗ ಮಧ್ಯದಲ್ಲಿ ಒಂದನ್ನು ಹಾಕು. ಇನ್ನೆರಡನ್ನು ನೀನು ವಾಸ ಮಾಡುವ ಮನೆಯ ಮುಂದಣ ಬಾಗಿಲಿಗೊಂದು ಹಿಂದಣ ಬಾಗಿಲಿಗೊಂದ ರಂತೆ ಮೆಟ್ಟಲಿನ ಕಲ್ಲಿನಡಿಯಲ್ಲಿ ಭದ್ರಪಡಿಸು. ಅಂದರೆ ಈ ಜನ್ಮದಲ್ಲಿ ಇನ್ನು ಈ ಪೀಡೆಗಳ ಕಾಟ ಬರುವುದಿಲ್ಲ!"

"ಸ್ವಾಮಿ, ಹಾಗಿದ್ದರೆ ಈ ಮನೆಯನ್ನು ಬಿಡಬೇಕೆಂದಾಯ್ತು?"

ತಿಮ್ಮಯ್ಯ ಕಳಕಳಿಯಿಂದ ಕೇಳಿದ.

"ಹೌದಪ್ಪಾ, ಹೌದು. ಈ ಮನೆಯನ್ನು ಬಿಡದ ಹೊರತು ನಿನಗೆ ಉಳಿಗಾಲವಿಲ್ಲ. ಅಲ್ಲದೆ, ನೀವು ಇಲ್ಲಿಯೇ ಉಳಿದರೆ ನಿಮ್ಮಗಳ ಸರ್ವನಾಶ ವಾಗುತ್ತದೆ!"

"ನನ್ನ ಮಗ ಒಂದು ಮನೆಯನ್ನು ಕಟ್ಟಿದ್ದಾನೆ, ಅಲ್ಲಿಗೆ ಹೋದೊಡನೆ ಕಾಹಿಲೆ ಬಿದ್ದೆ. ಅನಂತರ ಅಲ್ಲಿಂದ ಹಿಂದಿರುಗಿದುದಾಯಿತು. ಈಗೇನು ಮಾಡಲಿ?"

"ಈ ಪಿಶಾಚಿ ನೀನೆಲ್ಲಿಗೆ ಹೋದರೂ ಬೆನ್ನಿಡಿದು ಬರುತ್ತದೆ! ಅದಕ್ಕಾಗಿಯೇ ಈ ದಿಗ್ಬಂಧನ! ಇದನ್ನು ಮಾಡಿದೆಯಾದರೆ ಪಿಶಾಚಿಯು ಇದೇ ಮನೆಯಲ್ಲಿ ಅನ್ನನೀರುಗಳಿಲ್ಲದೆ ಸತ್ತುಹೋಗುತ್ತದೆ!"

"ಹಾಗಿದ್ದರೆ ನಾವೀಗ ಏನು ಮಾಡಬೇಕು?"

"ನಿನ್ನ ಮಗ ಕಟ್ಟಿದ ಹೊಸ ಮನೆಗೆ ಹೋಗು. ನಿನಗೆ ಒಳ್ಳೆಯದಾಗುತ್ತದೆ."

"ದಯಮಾಡಿ ಕಲ್ಲುಗಳನ್ನು ಮಂತ್ರಿಸಿಕೊಡಿರಿ."

ಭೈರಾಗಿ ಮನೆಯ ನಾಲ್ಕು ದಿಕ್ಕುಗಳಿಂದ ನಾಲ್ಕು ಕಲ್ಲುಗಳನ್ನು ಹೆಕ್ಕಿಕೊಂಡ. ಇನ್ನೊಂದನ್ನು ಮನೆಗೆದುರಾಗಿದ್ದುದನ್ನು ಆರಿಸಿಕೊಂಡು ಮಂತ್ರೋಚ್ಚಾರ ಮಾಡುತ್ತಾ ಮಂತ್ರಿಸತೊಡಗಿದ. ತಿಮ್ಮಯ್ಯ ಬೆರಗಾಗಿ ಅತ್ತಲೇ ನೋಡುತ್ತ, ಎರಡೂ ಕೈಗಳನ್ನು ಜೋಡಿಸಿ ಈ ಮಂತ್ರ ಫಲಿಸಲಿ ಎಂದು ದೇವರನ್ನು ಮನದಲ್ಲಿ ಬೇಡಿಕೊಂಡ. ಅದೇ ಸಮಯಕ್ಕೆ ಸರಿಯಾಗಿ ಬಂದ ಚಂದು ಏನೂ ತಿಳಿಯದವನಂತೆ ಭೈರಾಗಿಗೆ ಕೈಮುಗಿದು ಒಂದೆಡೆ ಕುಳಿತು

ಕೊಂಡ. ನಂಜಮ್ಮ ಹತ್ತಿರ ಬಂದು ಭೈರಾಗಿ ಹೇಳಿದ ವಿಚಾರವನ್ನು ಚಾಚೂ ತಪ್ಪದಂತೆ ವಿವರಿಸಿ "ಚಂದೂ, ನಮ್ಮ ಭಾಗದ ದೇವರೇ ಇಂದು ಭೈರಾಗಿಯ ರೂಪದಲ್ಲಿ ಪ್ರತ್ಯಕ್ಷನಾಗಿ ಮುಂದೆ ನಮಗೊದಗಲಿದ್ದ ಗಂಡಾಂತರವನ್ನು ತಪ್ಪಿಸಿದ!" ಎಂದು ಮೆಲ್ಲನೆ ಉಸುರಿದಳು. ಚಂದು ಒಳಗೊಳಗೇ ನಕ್ಕು ಸುಮ್ಮನಾದ.

ಭೈರಾಗಿ ಕಾರ್ಯ ತತ್ಪರನಾಗಿದ್ದ.

ತಿಮ್ಮಯ್ಯ ಮಂತ್ರ ಮುಗ್ಧನಂತೆ ಕುಳಿತಿದ್ದ.

"ಅಮ್ಮಾ. ಇನ್ನಾದರೂ ನಮಗೆ ಹಿಡಿದಿದ್ದ ಶನಿ ತೊಲಗೀತು." ಎಂದೆನ್ನುತ್ತ ಚಂದು ಎರಡು ರೂಪಾಯಿಯ ನೋಟೊಂದನ್ನು ಕಿಸೆಯಿಂದ ತೆಗೆದು ಭೈರಾಗಿಗೆ ಕೊಡಲೆಂದು ತಾಯಿಯ ಕೈಗಿಟ್ಟ,

ಭೈರಾಗಿಯ ಆದೇಶದ ಪ್ರಕಾರ ಅಂದೇ ಮನೆಯನ್ನು ಬಿಡಲು ತಿಮ್ಮಯ್ಯ ಅಣಿಯಾದ. ಇದ್ದ ಒಂದೆರಡು ಪಾತ್ರೆಗಳು ಕಂಬಳಿ ಚಾಪೆಗಳನ್ನೂ ಹೊತ್ತುಕೊಂಡು ಸುಬ್ಬು ಚಂದು ಮುಂದೆ ನಡೆದರು. ತಿಮ್ಮಯ್ಯ ಭೈರಾಗಿಯು ಹೇಳಿದಂತೆ ಮಂತ್ರಿತ ಕಲ್ಲುಗಳನ್ನು ಬಾಗಿಲ ಬಳಿ ಹುಗಿದು ಹೆಂಡತಿಯೊಡನೆ ಮನೆ ಬಿಟ್ಟ. ತಿಮ್ಮಯ್ಯನ ಸಂಸಾರ ಹೊಸ ಮನೆಯಲ್ಲಿ ತಳವೂರಿತು. ಚಂದು ಎರಡು ದಿನ ನಿಂತು ತ್ವರಿತವಾಗಿ ಆಗಲೇಬೇಕಾದ ಕೆಲಸಗಳನ್ನು ತಾನೆ ನಿಂತು ಮಾಡಿ ನೀಲಕಂಠಯ್ಯನನ್ನು ಮನೆಯ ಬಳಿ ಸೇರಿಸದಂತೆ ಸುಬ್ಬುವಿಗೆ ಹೇಳಿ ರಾಮಪುರಕ್ಕೆ ಹೊರಡಲು ಅಣಿಯಾದ. ಆಗ ನಂಜಮ್ಮ ಕಳಕಳಿಯಿಂದ "ನೀನು ಇನ್ನೂ ಕೆಲವು ದಿನ ಈ ಕಡೆಯೇ ಇದ್ದಿದ್ದರೆ ಒಳ್ಳೆಯದಿತ್ತು. ಸುಬ್ಬು ಚಿಕ್ಕವನು, ಅವನಿಗೆ ಏನೂ ತಿಳಿಯದು, ಹೊಸ ಮನೆಗೆ ಬಂದಿದ್ದೇವೆ. ಮತ್ತೇನು ಗಂಡಾಂತರವಿದೆಯೋ ಎಂಬ ಭಯವಾಗುತ್ತಿದೆ."

"ಮತ್ತೇಕೆ ಈ ಯೋಚನೆ? ಭೈರಾಗಿ ಹೇಳಿದ್ದು ತಿಳಿಯಲಿಲ್ಲವೇ? ನಮಗೆ ಈ ಜನ್ಮದಲ್ಲಿ ಇನ್ನು ಪೀಡೆಗಳೇ ಇಲ್ಲದಂತೆ ದಿಗ್ಬಂಧನ ಮಾಡಿದ್ದಾರೆ! ಇನ್ನೇನೂ ಯೋಚಿಸಬೇಕಿಲ್ಲ,"

ಭೈರಾಗಿ ಹೇಳಿದುದನ್ನು ಚಂದು ನೆನಪು ಮಾಡಿಕೊಟ್ಟಾಗ ನಂಜಮ್ಮ "ನಿಜ; ಮರೆತುಬಿಟ್ಟಿದ್ದೆ" ಎಂದುಕೊಂಡಳು,

ತಿಮ್ಮಯ್ಯ ಜಮೀನಿಗೆ ಬಂದು ನೆಲೆಸಿದ ಮೇಲೆ ಬೆಳೆ ಹುಲುಸಾಗಿ

ಬಂತು. ಗಾಳಿ ಬೆಳಕು ಸಮೃದ್ಧಿಯಾಗಿದ್ದ ಮನೆಯಲ್ಲಿ ಆರೋಗ್ಯಭಾಗ್ಯವೂ ಕೂಡಿ ಬಂತು. ತಿಮ್ಮಯ್ಯನಿಗೆ ಭೈರಾಗಿಯಲ್ಲಿ ಭಕ್ತಿ ಗೌರವಗಳು ಸಹಜವಾಗಿ ಅಧಿಕವಾದುವು. ಅದೇ ವರ್ಷ ಚಂದು ತೆಂಗಿನ ಸಸಿಗಳನ್ನು ನಾಟಿ ಹಾಕಿ ಜಮೀನನ್ನು ಅಭಿವೃದ್ಧಿಗೊಳಿಸಿದ. ಕಾಲ ಕ್ರಮೇಣ ಚಂದುವಿನ ಪರಿಶ್ರಮದಿಂದ ಮರಡಿಹಳ್ಳಿಯ ಜಮೀನೂ ತೋಟವೂ ಸ್ವಚ್ಛಂದವಾಗಿ ನಳನಳಿಸಿ ಬೆಳೆದುವು. ಅನಂತರ ಚಂದು ಕಾವೇರಿಯನ್ನು ಮದುವೆಯಾಗಿ ರಾಮಪುರದಲ್ಲಿ ಜೀವನಾರಂಭ ಮಾಡಿದ.

ಶಕ್ತಿಯಿಂದಾಗದುದನ್ನು ತಾನು ಯುಕ್ತಿಯಿಂದ ಸಾಧಿಸಿದ ವಿಚಾರ ಚಂದುವಿನ ಮನದಲ್ಲಿ ಅಚ್ಚಳಿಯದುಳಿದಿತ್ತು.

೮

ಪ್ರಾತಃಕಾಲೇ ಪ್ರಶಾಂತ ಸಮಯೇ...

ರೈಲು ನಿಲ್ದಾಣವು ಜನಗಳ ಗುಜುಗುಂಪಲಿನಿಂದ ತುಂಬಿತ್ತು. ಕಾಫಿ ಸಿಗರೇಟು, ತಿಂಡಿ-ತಿನಿಸು, ಹಣ್ಣು-ಹಂಪಲು, ಪುಸ್ತಕ-ಪತ್ರಿಕೆ ಮೊದಲಾದುವುಗಳನ್ನು ಮಾರುವವರ ಗಲಾಟೆಯೊಂದಿಗೆ ಅವರ ಕೂಗು ಚೀರಾಟಗಳು ಕಿವಿಗೆ ಕರ್ಕಶವಾಗಿದ್ದುವು, ಮಿಠಾಯಿ ಮತ್ತು ಆಟದ ಸಾಮಾನುಗಳ ಮಾರಾಟಗಾರರು ಮಕ್ಕಳ ಆಸೆಯನ್ನು ಪ್ರಚೋದನೆಗೊಳಿಸಲು ಮಕ್ಕಳ ಬಳಿಸಾರಿ ತಮ್ಮೆಡೆಗೆ ಅವರ ಗಮನ ಸೆಳೆಯಲು ಪ್ರಯತ್ನಪಡುತ್ತಿದ್ದರು. ಕೂಲಿಗಳ ಓಡಾಟ ಜನಗಳ ಮಾತುಕತೆ ಗಲಾಟೆ ಗಡಿಬಿಡಿಗಳಿಂದ ತುಂಬಿದ ವಾತಾವರಣವು ಕಾರಖಾನೆಯನ್ನು ನೆನಪಿಗೆ ತರುವಂತಿತ್ತು. ಒಂದೆಡೆ ಅಗಲಿ ದೂರ ಹೋಗುವವರ ಹೃದಯವು ಸಂತಾಪದಿಂದ ಮಿಡಿಯುತ್ತಿದ್ದರೆ ಇನ್ನೊಂದೆಡೆ ದೂರದಿಂದ ಬರುವವರಿಗಾಗಿ ಕಾದಿರುವವರ ಮಧುರ ಮಿಲನದ ಮನೋವೇಗದೊಡನೆ ಹೃದಯ ಹಾತೊರೆಯುತಿತ್ತು. ಆಸೆಗೆ ನಿಲುಕದ ವಸ್ತುಗಳಿಗಾಗಿ ಮಕ್ಕಳ ಕ್ರಂದನ. ಮಾರಾಟಗಾರರ ಚೀರಾಟ ಒಂದೊಂದೂ ಒಂದೊಂದು ಭಾವನೆಯನ್ನು ಹುಟ್ಟಿಸುವಂತಿತ್ತು.

"ಕಾಫಿ! ಕಾಫಿ! ಕಾಫಿ!" ಕೂಗು ಕರ್ಕಶವಾಗಿದ್ದರೂ ಕಾಫಿಗಾಗಿ ಕಾದಿರುವವರ ಆಸೆ ಗಗನ ಮುಟ್ಟಿತ್ತು. ಪ್ರಾಯಶಃ ಆ ಕಾಫಿ ಕುಡಿದಾಗಲೇ ಅವರ ಮುಗಿಲೆತ್ತರದ ಆಸೆ ಕುಸಿದು ಬಿದ್ದು ಮಣ್ಣುಪಾಲಾಗುವುದೇನೋ... ಕೈಗಾಡಿಗಳ ಗಡಗಡ ಸದ್ದು ಮಿತಿ ಮೀರಿ ಒಬ್ಬರ ಮಾತು ಒಬ್ಬರಿಗೆ ಕೇಳಿಸದಷ್ಟು ಗದ್ದಲವೆಬ್ಬಿಸಿತ್ತು. ಮಾಧವರಾಯ ಸಕುಂಟುಂಬ ಸಮೇತನಾಗಿ ತೀರ್ಥಯಾತ್ರೆ ಹೊರಟಿದ್ದಾನೆ. ಬಹು ಮಂದಿ ಬಂಧು ಬಾಂಧವರು ಇಷ್ಟ ಮಿತ್ರರು ಹಾರ್ದಿಕವಾಗಿ ಬೀಳ್ಕೊಡುವ ಸಲುವಾಗಿ ಬಂದು ನೆರೆದಿದ್ದಾರೆ. ಎಷ್ಟೊಂದು ಮಂದಿ ತನಗಾಗಿ ತನ್ನವರಿಗಾಗಿ ಬಂದು ನೆರೆದಿದ್ದಾರೆಂಬುದು ಮನವರಿಕೆಯಾದಾಗ ರಾಯನ ಹೃದಯ ತುಂಬಿ ಬಂದಿತು. ಗುಂಪಿನಲ್ಲಿ

ನುಸುಳಿ ಎಲ್ಲರನ್ನೂ ಕುಶಲ ಪ್ರಶ್ನೆ ಮಾಡಿ ಎಲ್ಲರಿಗೂ ವಂದನೆಯನ್ನರ್ಪಿಸಿ, ಡಬ್ಬಿಯ ಬಾಗಿಲಿಗೆ ಬಂದಾಗ ರವಿಯನ್ನು ಕಂಡು ಗಾಢಾಲಿಂಗನೆ ಮಾಡಿಕೊಂಡ.

"ಮಗೂ, ಇಲ್ಲಿಯ ತನಕ ಬರುವ ಶ್ರಮವನ್ನೇಕೆ ತೆಗೆದುಕೊಂಡೆ?" ಎಂದವನೆ ಪುನಃ ಹೇಳಿದ "ದಿನನಿತ್ಯ ಸರ್ವೇ ಸಾಮಾನ್ಯವಾಗಿ ಬರುವ ಎಡರು ತೊಡರುಗಳನ್ನು ಎದುರಿಸಲು ಧೈರ್ಯವಂತನಾಗಿರಬೇಕು. ಏನೇ ಬರಲಿ, ಎದೆಗುಂದಬೇಡ." ಆಗ ರವಿಯ ಮುಖದಲ್ಲಿ ಮೂಡಿದ ದೈನ್ಯಭಾವವನ್ನು ನೋಡಿ ರಾಯನ ತುಂಬು ಹೃದಯ ಕರಗಿತು.

ರವಿ ಮಾತಾಡಲಿಲ್ಲ. ಕಣ್ಣಂಚಿನಲ್ಲಿ ಹನಿಯಾಡುತಿತ್ತು.

"ಕ್ಯೂ!" ರೈಲು ಕರ್ಣಕಠೋರವಾಗಿ ಕೂಗಿ ಹೊರಡುವ ಸೂಚನೆ ಕೊಟ್ಟಿತು. ಪಯಣಿಗರು ಸರಸರನೆ ಡಬ್ಬಿಯೊಳಗೆ ಹತ್ತಿದರು. ಪುಟ್ಟಮ್ಮ ನೊಡನೆ ಡಬ್ಬಿಯೊಳಗಿದ್ದ ಶಿವೆ ಕೆಳಗಡೆ ಇಳಿದಾಗ ಕಂಠ ಬಿಗಿದು ಬಂದಿತ್ತು. ಅತ್ತ ತಿರುಗಿ ಉಕ್ಕಿ ಬಂದ ಕಂಬನಿಯನ್ನು ತೊಡೆದುಕೊಂಡಳು. ಪುಟ್ಟಮ್ಮ ಶಿವೆಯ ಸ್ಥಿತಿಯನ್ನು ನೋಡಿ ಮನಮರುಗಿ ಕಿಟಿಕಿಯಲ್ಲಿ ಕೈಚಾಚಿ ನಲ್ಮೆಯಿಂದ ಕೈಹಿಡಿದುಕೊಂಡು "ಶಿವೆ,ನಿನಗೆ ಕಾಗದ ಬರೆಯುವೆ, ಯೋಚಿಸಬೇಡ ಅನಾಥ ರಿಗೆ ದೇವರೇ ನಾಥನು ಎಂಬುದನ್ನು ಮರೆಯದಿರು" ಎಂದಳು. ಆದರೂ ಶಿವಮ್ಮನ ಕಣ್ಣ ಹನಿಗುತ್ತರವಾಗಿ ಪುಟ್ಟಮ್ಮನೂ ಕಣ್ಣಿನಲ್ಲಿ ನೀರುದುಂಬಿದಳು. ಶಿಶುವನ್ನಗಲುವಾಗ ಮಾತೆಗೆ ನೋವಾಗುವಂತೆ ಅವಳ ಹೃದಯ ಕರಗಿ ಹನಿ ಯಾಗಿ ಹೊರಸೂಸಿತು. ರೈಲು ನಿಧಾನವಾಗಿ ಸರಿಯತೊಡಗಿತು. ರಾಯ ಕೊನೆಯ ಬಾರಿ ಎಲ್ಲರಿಗೂ ಕೈಮುಗಿದ. ರೈಲಿನ ವೇಗ ಹೆಚ್ಚಿ ನಿಲ್ದಾಣವನ್ನು ದಾಟಿತು, ಕಣ್ಣನೋಟಕ್ಕೂ ದೂರದೂರವಾಗತೊಡಗಿತು.ಶಿವೆ ನಿಂತಲ್ಲಿಯೇ ನಿಟ್ಟುಸಿರು ಬಿಟ್ಟಳು.ಬೀಳ್ಕೊಡಲು ಬಂದ ಇಷ್ಟ ಮಿತ್ರರು ನಿಲ್ದಾಣವನ್ನು ಬಿಟ್ಟು ಹೊರಡಲನುವಾದರೂ ಅಲುಗದೆ ಅತ್ತಲೆ ದಿಟ್ಟಿಯನ್ನು ಹರಿಸಿ ನಿಂತಿ ದ್ದಾಳೆ.ರವಿ ಮೈಮುಟ್ಟಿ "ಅಮ್ಮಾ ಹೋಗೋಣವೇ" ಎಂದಾಗಲೇ ಇತ್ತ ಗಮನ.ಬಂದವರೆಲ್ಲ ಆಗಲೇ ಬಾಗಿಲನ್ನು ದಾಟಿ ಹೊರಹೋಗತೊಡಗಿದ್ದರೂ ತನಗದರ ಗಮನವೇ ಇಲ್ಲವಲ್ಲಾ ಎಂಬ ಯೋಚನೆ ಸ್ಮೃತಿ ಪಟಲದಲ್ಲಿ ಮೂಡಿತು, ಎದೆಯಾಳದಲ್ಲಿನ ಸುಖ-ದುಃಖಗಳ ಹೋರಾಟದಲ್ಲಿ ತತ್ತರಿಸಿ

ಆತುರಾತುರವಾಗಿ ನಿಲ್ದಾಣವನ್ನು ಬಿಟ್ಟಳು. ಹೆಜ್ಜೆ ಭಾರವಾಗಿತ್ತು. ಶಾಂತಿ ಸಮಾಧಾನಗಳು ದೂರ ಸರಿದಿದ್ದುವು.

ಪಂಕದಲ್ಲಿ ಮೈವೆತ್ತ ಪಂಕಜದಂತೆ ಅಬ್ರಾಹ್ಮಣರಲ್ಲಿ ಜನ್ಮವೆತ್ತಿ ರಮಣೀಮಣಿಯಾಗಿದ್ದ ಶಿವಮ್ಮ ಬ್ರಾಹ್ಮಣೀ ಪುಟ್ಟಮ್ಮನಲ್ಲಿ ಸಖ್ಯ ಬೆಳೆಸಿ ಆಕೆಯ ಮಾತೃ ಹೃದಯದಲ್ಲಿ ಮಗುವಿನಂತೆ ಸ್ಥಾನವನ್ನಾಕ್ರಮಿಸಿದ್ದು ಇಂದಿನಗಲಿಕೆಯಿಂದ ನೊಂದು ಬಹಳವಾಗಿ ಅತ್ತಳು. ಅಲ್ಲದೆ ಯಾತ್ರಿಕರು ಸುಖವಾಗಿ ಹಿಂದಿರುಗಲೆಂದು ಭಗವಂತನನ್ನು ಮನಸಾ ಪ್ರಾರ್ಥಿಸಿಕೊಂಡಳು. ಹಾಗೂ ಮೇಲಿಂದ ಮೇಲೆ ಪ್ರಾರ್ಥಿಸಿಕೊಳ್ಳತೊಡಗಿದಳು.

ಆನಂದ ಬಂದಾಗ ಹತ್ತು ಗಂಟೆಯಾಗಿತ್ತು, ಮಕ್ಕಳು ಶಾಲೆಗೆ ಹೊರಡಲು ತಯಾರಾಗುತ್ತಿದ್ದರು. ರವಿ ಅವಸರವಸರವಾಗಿ ಒಳ ಬಂದುದನ್ನು ನೋಡಿ ಆನಂದ ಕೇಳಿದ "ರವೀ, ನಿನಗಿಂದು ಶಾಲೆಯಿಲ್ಲವೇ?"

"ಇದೆ; ಹೋಗಬೇಕು. ಬೆಳಿಗ್ಗೆ ಮಾಧವರಾಯರನ್ನು ಬೀಳ್ಕೊಡಲು ರೈಲು ನಿಲ್ದಾಣಕ್ಕೆ ಹೋಗಿದ್ದುದರಿಂದ ಈಗ ಪತ್ರಿಕೆ ಹಂಚಿ ಬಂದೆ" ಎಂದವನೇ ಪುನಃ ಕೇಳಿದ "ನೀವೆಂದು ಇಲ್ಲಿಗೆ ಒಕ್ಕಲು ಬರುತ್ತೀರಿ? ಬರುತ್ತೇನೆ, ಬರುತ್ತೇನೆ ಎಂದೇ ದಿನಗಳೆಯುತ್ತಿದ್ದೀರಿ?"

"ಇಂದೇ ಸಂಜೆಯ ಹೊತ್ತು ಬರುವೆ. ಇದುವರೆಗೆ ನನಗೆ ಬರಲಿಕ್ಕಾಗಲಿಲ್ಲ,"

"ನಿಮ್ಮ ಕೆಲಸ ಏನಾಯಿತು?"

"ಅದೇ ತೊಂದರೆಯಾಗಿತ್ತು, ಮುಂದಿನ ತಿಂಗಳು ಸಿಕ್ಕುವ ಸಂಭವವಿದೆ. ಅದುವರೆವಿಗೆ ಕಾಯಬೇಕು. ಸುಮ್ಮನೆ ಮುಂದೂಡುತ್ತಿದ್ದಾರೆ."

"ಬಾಬೂಜಿಯ ಅಂಗಡಿಯಲ್ಲಿ ಅಪ್ಪನಿಗೆ ಬದಲಾಗಿ ಬೇರೆ ಯಾರನ್ನೋ ತೆಗೆದುಕೊಂಡಿದ್ದಾರೆ, ಅದನ್ನು ನೀವು ಪಡೆಯಬಹುದಾಗಿತ್ತು."

"ಸ್ವಾಮಿ ಅಲ್ಲಿ ಬಹಳವಾಗಿ ದುಡಿಯುತ್ತಿದ್ದುದಲ್ಲದೆ ವ್ಯಾಪಾರಕ್ಕಾಗಿ ಎಲ್ಲೆಡೆಯೂ ಸುತ್ತಬೇಕಾಗಿತ್ತು. ನಾನು ಅಷ್ಟು ಕೆಲಸ ಮಾಡುವಷ್ಟು ಶಕ್ತನಾಗಿಲ್ಲ. ನನಗೆ ಸುಲಭವಾಗಿ ಕುಳಿತಲ್ಲಿಯೇ ಮಾಡುವಂತಹ ಕೆಲಸ ಬೇಕಾಗಿದ್ದುದರಿಂದ ಆ ಕಡೆ ಹೋಗುವ ಯೋಚನೆ ಮಾಡಲಿಲ್ಲ." ದನಿಯಲ್ಲಿ ಉದಾಸೀನತೆ ಇತ್ತು. ತುಸು ತಡೆದು ಆನಂದ ಕೇಳಿದ "ಮಾಧವರಾಯರು

ಹಿಂದಿರುಗುವುದೆಂದು?"

"ಮೂರು ನಾಲ್ಕು ತಿಂಗಳಾಗಬಹುದು."

"ನಿಲ್ದಾಣಕ್ಕೆ ನೀನೊಬ್ಬನೇ ಹೋಗಿದ್ದೆಯಾ?"

"ಅಮ್ಮ ನಾನು ಹೋಗಿದ್ದೆವು. ಅವರ ನೆಂಟರಿಷ್ಟರು ಬಹುಮಂದಿ ಬಂದಿದ್ದರು."

ಅಮ್ಮನೂ ಬಂದಿದ್ದರೆಂದು ರವಿ ಸಹಜವಾಗಿ ನುಡಿದಿದ್ದರೂ ಅದು ಆನಂದನ ಮನದಲ್ಲಿನ ಕಳಂಕಪೂರ್ಣವಾದ ಅಲೆಗಳನ್ನು ಹೊಡೆದೆಬ್ಬಿಸಿತು. ನಿಲ್ದಾಣದತನಕ ಹೋಗಿ ಬೀಳ್ಕೊಡಬಹುದಾದ ಪ್ರಸಂಗವಾದರೂ ಏನಿತ್ತು? ಎಂದೆನಿಸಿತು. ತುಸು ಹೊತ್ತು ಮಾತಾಡದೆ ಅದನ್ನೇ ಮೆಲುಕು ಹಾಕುತ್ತ ಕುಳಿತುಕೊಂಡ. ರವಿ ಅವಸರವಸರವಾಗಿ ಶಾಲೆಗೆ ಹೋಗುತ್ತ ಕೇಳಿದ "ನೀವು ಈ ಮನೆಗೆ ಬರುವುದು ಖಂಡಿತವಷ್ಟೆ?"

"ಹೌದು, ಈ ಕಾಲದಲ್ಲಿ ಮನೆ ಸಿಕ್ಕುವುದೇ ಕಷ್ಟ. ಬೇರೆ ಯಾರಿಗೂ ಕೊಡಬೇಡ, ನಾನೇ ಬರುವೆ." ಆನಂದ ಆತಂಕಪೂರ್ಣವಾಗಿ ನುಡಿದಾಗ ರವಿಗೆ "ಅಯ್ಯೋ" ಎನ್ನಿಸಿತು. ಒಡನೆಯೇ ಎಲ್ಲಿಯಾದರುಂಟೆ?" ಎಂದ ರವಿ, ತುಟಿಗಳಲ್ಲಿ ಮುಗುಳ್ನಗೆ ಮಿನುಗಿತು.

ಆನಂದ ಊಟ ಮುಗಿಸಿ ಹೊರಡುವಾಗ ಶಿವೆಯೊಂದಿಗೂ ಮನೆಯನ್ನು ಬೇರೆ ಯಾರಿಗೂ ಕೊಡಬಾರದೆಂದು ಕೇಳಿಕೊಂಡು ಹೊರಬಿದ್ದ. ಕದವನ್ನು ಮುಚ್ಚಿಕೊಂಡು ಶಿವೆ ಚಾಪೆಯ ಮೇಲೆ ಕುಳಿತುಕೊಂಡಳು. ಹುಡುಕಿದರೂ ಮಾಡಲು ಕೆಲಸವಿಲ್ಲ. ಭಾರವಾದ ಮಸ್ತಕವು ಕೈದಳದಾಶ್ರಯ ಪಡೆದಿತ್ತು. ಮನಸ್ಸು ಭವಿಷ್ಯದ ಮಹಾಗರ್ಭವನ್ನು ಹೊಕ್ಕಿತು. ವೃಥಾ ಕಾಲಹರಣ ಮಾಡುವುದಕ್ಕಿಂತ ಏನಾದರೊಂದು ಕೆಲಸ ಮಾಡುವುದು ಉತ್ತಮವಲ್ಲವೇ ಎಂಬ ಪ್ರಶ್ನೆ ತಲೆಯೆತ್ತಿತು. ಜೀವನಕ್ಕಾಗಿ ದುಡಿಯಬೇಕೆಂಬ ಹಂಬಲ ವಿತ್ತಾದರೂ ಹೇಗೆ ಎಂಬ ಸಮಸ್ಯೆಯೂ ಮೂಡಿತು. ಕಾರಖಾನೆಯಲ್ಲಿ ಕೂಲಿಕಾರಳಾಗಿ ದುಡಿದರೂ ಅನ್ನಗಳಿಸಬಹುದು ಎಂಬ ಯೋಚನೆ ಬಂತು. ಆದರೆ ಮರುಕ್ಷಣದಲ್ಲಿ ಸ್ವಾಮಿಯ ಚಿತ್ರ ಮನದಲೆಯಲ್ಲಿ ಮೂಡಿ ಬಂದಾಗ ಮೈ ಕಂಪಿಸಿತು. "ಜಗಲಿಗೂ ಸುಳಿಯಗೊಡಿಸದಿದ್ದ ಸ್ವಾಮಿ ಕೂಲಿಗಾರಳಾಗಿ ದುಡಿಯಗೊಡಿಸುವನೇ?" ಮೂದಲಿಸುವಂತೆ ಮನಸ್ಸು ಕಠಿಣವಾಗಿ

ಪ್ರಶ್ನಿಸಿತು. ಶಿವೆ ನಿಸ್ಸಹಾಯಕಳಂತೆ ಕುಳಿತುಕೊಂಡಳು. ಒಳಗುದಿ ಯುದ್ಧ ಮುಂದುವರಿಯಿತು.

'ಇಷ್ಟಕ್ಕೂ ಈಗ ಸ್ವಾಮಿ ಇಲ್ಲವಲ್ಲಾ? ಮತ್ತೇಕೆ ಅಷ್ಟೊಂದು ಭಯ? ಸ್ವಾಮಿ ಹಿಂತಿರುಗಿದ ಮೇಲೆ ಕೆಲಸವನ್ನು ಬಿಟ್ಟರಾಯ್ತು" ಸಮಾಧಾನ ಹೇಳಿತು ಅಂತರಾತ್ಮ.

"ಸ್ವಾಮಿ ಇಲ್ಲವಾದ ಈ ದುರ್ದಿನಗಳಲ್ಲಿ ವಿದ್ಯಾವಂತೆಯಾಗಿದ್ದಿದ್ದರೆ ಸುಲಭವಾಗಿ ಸಂಸಾರದ ಭಾರವನ್ನು ಹೊರಬಹುದಾಗಿತ್ತು. ಆದರೆ ಆ ಬಗ್ಗೆ ಯೋಚಿಸುವವರಾರಿದ್ದಾರೆ? ಭಗವಂತನ ದೃಷ್ಟಿಯಲ್ಲಿ ಹೆಣ್ಣು ಗಂಡು ಒಂದೆಯಾದರೂ ಮಾನವನ ದೃಷ್ಟಿಯಲ್ಲಿ ಭೋ ...."

"ಜಡತೆಯೇ ಮೌಢ್ಯಕ್ಕೆ ಕಾರಣ. ಮೊದಲನೆಯದಾಗಿ ಜಡತೆಯು ನಿರ್ಮೂಲನವಾಗಲಿ."

ಕೈಗಳೆರಡೂ ಮೊಣಕಾಲುಗಳನ್ನು ತಬ್ಬಿ ಹಿಡಿದಿವೆ. ದೃಷ್ಟಿ ಹತ್ತಿರದಲ್ಲಿದ್ದರೂ ಏನನ್ನೂ ನೋಡದಿತ್ತು. ಅಂತರ್ಮುಖಿಯಾಗಿ ತಾನು ಅಡರಿ ಬಂದ ಜೀವಮಾನದ ಸೋಪಾನಗಳತ್ತ ನೋಡತೊಡಗಿದಳು. ಒಂದೇ ಹತ್ತೇ ನೂರಾರು ದಾರುಣ ಚಿತ್ರಗಳು ಒಂದರ ಹಿಂದೊಂದರಂತೆ ಸುಳಿಯು ತೊಡಗಿದುವು. ಕಂಬನಿಯು ಧಾರಾಕಾರವಾಗಿ ಹರಿಯತೊಡಗಿತು.

"ಈ ಜನ ಎಂದೆಂದೂ ಹಿಂದುಳಿದವರೇ. ಇವರಿಗೆ ಜ್ಞಾನದ ಚಕ್ಷು ತೆರೆಯಲಿಲ್ಲವಾಗಿ ವಿವೇಚನಾಶಕ್ತಿಯಿಲ್ಲ. ಮೊದಲು ಜ್ಞಾನ ದೀವಿಗೆ ಬೆಳಗಲಿ" ನುಡಿಯಿತು ಅಂತರ್ವಾಣಿ.

"ಸ್ವಾಮಿಯೇನು ಅವಿದ್ಯಾವಂತನೇ? ವ್ಯವಹಾರ ಜ್ಞಾನವುಳ್ಳ ವ್ಯಕ್ತಿ. ಅಂದ ಮೇಲೆ ಹೀಗೇಕೆ ದೇವಾ?"

"ಜ್ಞಾನ ವಿಕಾಸ ಹೊಂದಬೇಕು ಮಗೂ."

"ಸ್ವಾಮಿಗೇನು ಕಡಿಮೆಯಾಗಿತ್ತು? ವಿದ್ಯೆಯಿತ್ತು. ರೂಪವಿತ್ತು. ಜ್ಞಾನವಿತ್ತು, ಆರೋಗ್ಯವಿತ್ತು ಸಾಕಷ್ಟು ಸ್ಥಿತಿವಂತನೂ ಹೌದು, ಮನುಷ್ಯನಾದವನಿಗೆ ಇನ್ನೇನು ಬೇಕು? ಕಾಣದ ಜನರಿಗೆ ಸ್ವಾಮಿಯ ರೀತಿಯನ್ನು ಹೇಳ ಹೋದರೆ ನಂಬಲಾರರಲ್ಲವೇ?"

"ನಿಜ, ಸ್ವಾಮಿಯಲ್ಲಿ ಬಾಹ್ಯರೂಪವಿತ್ತು ಆಂತರಿಕರೂಪವಿರಲಿಲ್ಲ.

ಹೊರಗಣ್ಣು ತೆರೆದಿದ್ದರೂ ಒಳಗಣ್ಣು ತೆರೆದಿರಲಿಲ್ಲ ..." ತಟ್ಟನೆ ಯೋಚನೆ ತುಂಡುಗಡಿಯಿತು. ಹೊರಗಡೆ ಮಕ್ಕಳು ಓಡೋಡಿ ಬರುವ ಸದ್ದು ಕೇಳಿ ಶಿವೆ ಎದ್ದು ಕದ ತೆರೆದಳು. ಹೃದಯ ಭಾರವಾಗಿತ್ತು. ಕಣ್ಣುಗಳು ಮಂಜು ಮಂಜಾಗಿದ್ದುವು.

ಚಾಂದ್ರಮಾನಗಳು ಒಂದೊಂದಾಗಿ ಉರುಳಿದರೂ ಆನಂದನ ಸುಳಿವೇ ಯಿಲ್ಲ. ಇಂದು ಬರುತ್ತಾನೆ; ನಾಳೆ ಬರುತ್ತಾನೆ ಎಂದು ಎದುರು ನೋಡು ತ್ತಿದ್ದಂತೆಯೇ ಕಾಲ ಕಳೆಯಿತು. ದೊಡ್ಡವರಿಲ್ಲದ ಮನೆ ಪಕ್ಕಕ್ಕೆ ಆನಂದ ಬಂದರೆ ಧೈರ್ಯವಾಗಿರಬಹುದೆಂದು ಯೋಚಿಸಿದ್ದ ಶಿವೆ ಈಗೇನು ಮಾಡು ವುದೆಂದು ಚಿಂತಾಕ್ರಾಂತಳಾದಳು. ಬಾಡಿಗೆಗೂ ಕಲ್ಲು ಬಿತ್ತು. ಜೀವನವೂ ದುಸ್ತರವಾಗತೊಡಗಿತು.

ಪ್ರಕೃತ,

ಮಕ್ಕಳು ಶಾಲೆಗೆ ಹೋಗಿ ಎಷ್ಟೋ ಹೊತ್ತು ಉರುಳಿತ್ತು. ಏಕಾಂಗಿ ಯಾದ ಶಿವೆ ಅರೆಹುಚ್ಚರಂತೆ ಅತ್ತಿಂದಿತ್ತ ಶತಪಥ ನಡೆಯಲಾರಂಭಿಸಿದಳು. ಎಷ್ಟೆಷ್ಟು ಪ್ರಯತ್ನ ಪಟ್ಟರೂ ಕದಡಿದ ಮನಸ್ಸಿಗೆ ಶಾಂತಿಯನ್ನು ತರಲಾಗದೆ ಪರಿತಪಿಸಿದಳು.

"ಶಾಂತಿಗಾಗಿ ಅರಸುವವರು ಯೋಚಿಸಿದರಾದೀತೇ? ಯೋಜನೆಯನ್ನು ತಳ್ಳಿ ಕಾರ್ಯೋನ್ಮುಖಳಾಗು. ಅಂದರೆ ಮನಸ್ಸಿಗೆ ಶಾಂತಿಯು ತಾನಾಗಿಯೇ ದೊರೆಯುತ್ತದೆ. ಇನ್ನು ಸಾಕು ಈ ಜಡತ್ವ. ಸಾಧನೆ, ಸಾಧನೆ, ಸಾಧನೆ, ಸಾವಿನಂಚಿನವರೆವಿಗೂ, ಸಾಧನೆಯೇ ಗುರಿಯಾಗಿರಲಿ. ಕದವಿಕ್ಕಿ ಕುಳಿತು ಕೊಳ್ಳುವ ಹೇಡಿತನವಿನ್ನು ಸಾಕು. ಈಗಲೇ ಸಾಧನೆಯತ್ತ ಸೆಟೆದು ಹಾರು!" ಅಂತರ್ವಾಣಿ ನುಡಿಯಿತು.

ಅಂತರ್ವಾಣಿಯ ಕರೆಗೆ ಓಗೊಟ್ಟು ಶಿವೆ ಎದ್ದು ನಿಂತಳು. ಹುಮ್ಮಸ್ಸು ಉಕ್ಕಿತು. ಮೈಯಲ್ಲಿ ಒಮ್ಮೆಲೇ ಚೇತನಭರಿತ ಮಿಂಚಿನ ಹೊನಲು ತುಂಬಿ ಹರಿಯಿತು. ಶಿವೆ ಜಡತೆಯನ್ನು ಬದಿಗೊತ್ತಿ ಶ್ರದ್ಧಾವಾರಿಯಲ್ಲಿ ಮಿಂದು ಮಡಿಯುಟ್ಟಳು. ಸಂಧ್ಯಾಕಾಂತಿಯಲ್ಲಿ ಜೀವನ ಜ್ಯೋತಿ ಉಜ್ವಲವಾಗಿ ಬೆಳಗುತ್ತಿರುವುದು ಗಮನಕ್ಕೆ ಬಂತು.

ಸಂಜೆಯಲ್ಲಿ ರವಿಯೂ ಶ್ಯಾಮುವೂ ದರ್ಜಿಯಂಗಡಿಯಲ್ಲಿ ಕೈಹೊಲಿಗೆ

ಯನ್ನು ಹೊಲಿದು ಚಿಲ್ಲರೆ ಕೆಲಸಗಳನ್ನು ಮಾಡಿಕೊಟ್ಟು ಕಾಸಿನ ಖರ್ಚಿಲ್ಲದೆ ಹೊಲಿಗೆಯನ್ನು ಕಲಿತುಕೊಂಡು ಕಂತಿನ ಪ್ರಕಾರ ಹೊಲಿಗೆಯ ಯಂತ್ರವನ್ನು ಕೊಂಡು ತಂದರು. ಶಿವೆಯೂ ಮಕ್ಕಳೊಂದಿಗೆ ಹೊಲಿಗೆಯನ್ನು ಕಲಿತು ಕೊಂಡಳು. ಅದರಿಂದ ಕೈಗೆ ಕೆಲಸವು ಮನಸ್ಸಿಗೆ ನೆಮ್ಮದಿಯು ದೊರಕಿತಾದರೂ ಶಾಂತಿ–ಸಮಾಧಾನಗಳನ್ನು ಪಡೆದುಕೊಳ್ಳಲು ಸಮರ್ಥಳಾಗಲಿಲ್ಲ.

ದಿನಗಳ ಗಾಲಿಯುರುಳುತ್ತಲೇ ಇವೆ.

ಸ್ವಾಮಿಯು ಕಾಣೆಯಾಗಿ ತಿಂಗಳೊಂಬತ್ತು ಸಂದುವು. ಎಲ್ಲಿಯೂ ಆತನ ಸುಳಿವಿಲ್ಲ. ಪುಟ್ಟಮ್ಮನಿಂದ ಕಾಗದವನ್ನು ಪಡೆದಾಗಲೆಲ್ಲ ಶಿವೆ ಬಹಳ ಆತುರವಾಗಿ ಕಾಗದವನ್ನು ಒಡೆದು ಒಳಗಣ ವಿಚಾರಧಾರೆಯನ್ನು ಹೀರಿದ ನಂತರ ಸ್ವಾಮಿಯ ಸುದ್ದಿಯನ್ನು ಕಾಣದೆ ನಿರಾಶಳಾಗುತ್ತಿದ್ದಳು. ಮೈಸೂರನ್ನು ಬಿಟ್ಟ ನಂತರ ಪುಟ್ಟಮ್ಮನಿಗೆ ಕೆಲವು ದಿನಗಳು ಆರೋಗ್ಯವು ಕೆಟ್ಟು ಮದರಾಸಿನಲ್ಲಿ ನಿಲ್ಲುವಂತಾಗಿತ್ತು. ಮೈ ಸುಧಾರಿಸಿದ ಮೇಲೆ ಅಲ್ಲಿಂದ ಹೊರಡುವುದಾಗಿ ಕಾಗದ ಬರೆದಿದ್ದಳು. "ಯಾತ್ರೆಗಾಗಿ ಹೊರಟವರಿಗೂ ಈ ತೊಂದರೆಯೇ ದೇವಾ! ನೀನೇ ನಿನ್ನ ದರ್ಶನಕ್ಕೆ ತಡೆಹಾಕಿದ್ದೀಯೇ?" ಎಂದು ಮರುಗಿದಳು ಶಿವೆ.

ಅಂದು ರಾತ್ರಿ ಬಹು ಹೊತ್ತಿನ ತನಕ ಹೊಲಿಗೆಯ ಕೆಲಸವನ್ನು ಮಾಡಿ ಮಲಗಿದ ಶಿವೆ ಕಣ್ಣಿಗೆ ನಿದ್ದೆ ಬಾರದೆ ಹೊರಳಾಡಿದಳು. ಮಕ್ಕಳೈವರೂ ಸುಖ ನಿದ್ದೆಯಲ್ಲಿದ್ದಾರೆ. ನೂರಾರು ಹಾಳು ಯೋಚನೆಗಳು ಮುತ್ತಿ ಮನಸ್ಸಿನ ಮಹಾಸರಸ್ಸನ್ನು ಬಗ್ಗಡಗೊಳಿಸಿದುವು. ಸ್ವಾಮಿ ಎಲ್ಲಿರಬಹುದೋ ಎಂಬ ಯೋಚನೆ ಸುಳಿಯಿತು. ಆಗ ...ಮನಸ್ಸು ನಿಮಿರಿ ನಿಂತು ಹೃದಯ ರಹಿತ ವ್ಯಕ್ತಿಗಾಗಿ ಏಕೆ ಪರಿತಪಿಸಬೇಕು? ಭಗವಂತನ ಇಚ್ಛೆಯಿದ್ದಂತಾಗುತ್ತದೆ" ಎಂದಿತು.

ಶಿವ, ಶಿವಾ! ಇಂತಹ ದುರ್ಯೋಚನೆ ಬಾರದಿರಲಿ" ಅಂತರಾತ್ಮ ಮರುಗಿ ನುಡಿಯಿತು.

"ಗುಣಕ್ಕೆ ಮಾತ್ಸರ್ಯವಿಲ್ಲ, ಸ್ವಾಮಿ ದಿನೇ ದಿನೇ ತನ್ನ ಮನಸ್ಥಿತಿಯನ್ನು ಸುಧಾರಿಸಿಕೊಂಡಿದ್ದರೆ ಸಂತೋಷವಿತ್ತು; ಈ ಜನ್ಮದ ಮಾತಿರಲಿ

ಮುಂದಿನ ಜನ್ಮದಲ್ಲಿಯೂ ಸುಧಾರಿಸಿಕೊಳ್ಳಲಾರ. ಜನ್ಮ ಜನ್ಮಾಂತರದ ಕಲ್ಮಶ ಆತನಲ್ಲಿ ತುಂಬಿಕೊಂಡಿವೆ. ಎಂತಹ ಕರ್ಮವೋ ಅಂತಹ ಫಲ!"

ಶಿವೆ ಮನಸ್ಸಿನ ಧೋರಣೆಗೆ ಗಡಗಡ ನಡುಗಿದಳು. ಶಿವ ಶಿವ! ಈ ಹಾಳು ಯೋಚನೆ ಬೇಡ ನಿದ್ದೆ ಬರಲಿ, ಎಂದು ಈಶ್ವರನಲ್ಲಿ ಮೊರೆಯಿಟ್ಟಳು, ಗೋಡೆಯ ಮೇಲಿನ ಗಡಿಯಾರ ಹನ್ನೆರಡು ಬಾರಿಸಿತು. ದೂರದಲ್ಲಿ ನಾಯಿಗಳು ಆಗಾಗ್ಗೆ ಬೊಗಳುವ ಸದ್ದು ವಿನಾ ಎಲ್ಲೆಲ್ಲೂ ನಿಶ್ಶಬ್ದ ಒಂದೊಂದು ನಿಮಿಷವೂ ಒಂದೊಂದು ಗಂಟೆಯಂತೆ ದೀರ್ಘವಾಗಿ ತೋರಿ ಶಿವೆ ಹೊರಳಾಡತೊಡಗಿದಳು. ಯೋಚನೆ ಆನಂದನೆಡೆಗೆ ಹರಿಯಿತು...

...ಆನಂದನಿಗೆ ನಮ್ಮ ಕಷ್ಟವೇನೆಂಬುದು ಗೊತ್ತು. ಮನೆಯನ್ನು ಬೇರಾರಿಗೂ ಕೊಡದಂತೆ ತಡೆದವನು ಒಂದು ಕಾಗದವನ್ನಾದರೂ ಬರೆಯಕೂಡದೆ? ಗಂಜಿಗಾಗಿ ಕಣ್ಣೀರಿಡುವ ಈ ಕಾಲದಲ್ಲಿ ತಮ್ಮವನಾದ ಆನಂದ ಎಷ್ಟು ನಿರ್ದಯತೆಯಿಂದ ವರ್ತಿಸಿದ...ಎಂದೆನಿಸಿದಾಗ ಮನಸ್ಸಿಗೆ ಅತ್ಯಂತ ನೋವಾಯಿತು.

ಹೊತ್ತು ಮೆಲ್ಲನುರುಳುತ್ತಿದೆ.

ಹೊರ ಜಗತ್ತಿನಲ್ಲಿ ತಂಗಾಳಿಗಾಡುವ ಎಲೆಗಳ ಮರ್ಮರ ಸದ್ದು. ನಿಶಾಚರ ಪಕ್ಷಿಗಳ ರೆಕ್ಕೆಗಳ ಬಡಿತ-ಕೂಗು. ಅಲ್ಲಲ್ಲಿ ಕೇಳಿ ಬರುವ ನಾಯಿಗಳ ಬೊಗಳುವಿಕೆ. ಸುದೀರ್ಘವಾದ ಸುಯ್ಯಲರ ಸುಯ್ಲು, ತಿಂಗಳಿನ ತಿಳಿಯಾದ ಎಳೆ ಬೆಳಕು. ಅತ್ಯಂತ ಪ್ರಶಾಂತ ವಾತಾವರಣ. ಸುಂದರ ಸುರಮ್ಯ ಬ್ರಾಹ್ಮೀ ಮುಹೂರ್ತ...

ಆದರೇನು?

ಮನೋಸಂಜನಿತ ಅಸಹನೀಯ ಆಂದೋಳನ...

ದುಃಖದಿಂದ ಜರ್ಜರಿತ ಮೃದು ಹೃದಯ....

ಹಚ್ಚ ಹಸುರಿನ ಸುಂದರವಾದ ಸಾನು ಪ್ರದೇಶ. ಮಂದಮಾರುತ ಒಯ್ಯೊಯ್ಯನೆ ತೀಡಿ ತಣ್ಣಗೆ ಬರುತ್ತಿದ್ದಾನೆ. ಗಿಡ ಮರಗಳ ಮರ್ಮರ ಸದ್ದಿನ ಹಿಮ್ಮೇಳದಲ್ಲಿ ಪಕ್ಷಿಗಳ ಕಲಕಲರವದ ಇಂದನಿಯು ಕೋಗಿಲೆಯ ಆಲಾಪನೆಯೊಡನೆ ಅಲೆಯಲೆಯಾಗಿ ಹರಿದು ಬರತೊಡಗಿತ್ತು. ಕಣ್ಣನೋಟ ಹರಿಯುವವರೆಗೆ ಎಲ್ಲೆಲ್ಲಿಯೂ ಹಚ್ಚ ಹಸುರು. ಮೇಲೆ ನೀಲಾಕಾಶ.

ಅಂಬರದಲ್ಲಿ ಮೆಲ್ಲಮೆಲ್ಲನೆ ತೇಲುವ ಬೆಳ್ಮುಗಿಲುಗಳು ತಮ್ಮ ಅನಂತ ಯಾತ್ರೆಯಲ್ಲಿ ತನ್ಮಯವಾಗಿವೆ. ಪೂರ್ವ ದಿಶೆಯಲ್ಲಿ ಉದಯ ರವಿ ಇದೀಗ ತಾನೇ ಹಣಿಕಿಹಾಕಲಿದ್ದಾನೆ. ಕಿರಣ ರಹಿತ ಅರುಣೋದಯ ಶ್ರೀ! ಭಗವಂತನ ಸಾನ್ನಿಧ್ಯವೋ ಎಂಬಂತೆ ಪ್ರಕೃತಿದೇವಿ ಹರ್ಷಚಿತ್ತೆಯಾಗಿದ್ದಾಳೆ. ಈಶ್ವರನ ಸಾಕ್ಷಾತ್ಕಾರಕ್ಕೆ ಇದುವೇ ಸರಿಯಾದ ಸ್ಥಳ! ಶಿವೆ ಹೌಹಾರುತಿದ್ದ ಎದೆಯನ್ನು ಎರಡು ಕೈಗಳಿಂದಲೂ ಅದುಮಿ ಹಿಡಿದುಕೊಂಡು ಮುಂದೆ ಮುಂದೆ ಹೆಜ್ಜೆಯಿಟ್ಟಳು. ಇದಾವ ಸ್ಥಳ? ಹೇಗೆ ಇಲ್ಲಿಗೆ ಬಂದೆ? ಎಂಬುದರ ಪರಿವೆಯೇ ಇಲ್ಲದೆ ಎಲ್ಲಿಂದಲೋ ಕೇಳಿ ಬರುತ್ತಿದ್ದ ಕೀರಲು ದನಿಯೊಂದನನ್ನುಸರಿಸಿ ಬಿರುಬಿರನೆ ಹೆಜ್ಜೆಯಿಕ್ಕತೊಡಗಿದಳು. ಓ, ಚಿರಪರಿಚಿತವಾದ ದನಿ ಅದು! ಯಾರಿದ್ದಿರಬಹುದು? ಎತ್ತಣಿಂದ ಬರುತ್ತಿದೆ? ಆಶ್ಚರ್ಯಭರಿತಳಾದ ಶಿವೆ ಸುತ್ತಿಸುತ್ತಿ ದಣಿದಳಾದರೂ ಅದರ ಸುಳವು ಹತ್ತಲಿಲ್ಲ. ಬಾಲರವಿ ಬಾನೇರಿದ. ಕ್ಷಣೇ ಕ್ಷಣೇ ಹೊತ್ತುಉರುಳುತ್ತಿದೆ. ಈಗ ಶಿವಮ್ಮನಿಗೆ ನಿಜವಾಗಿಯೂ ಗಾಬರಿಯಾಯಿತು. ದನಿ ತಾನಾಗಿಯೇ ಕೇಳಿಬರುತ್ತಿದೆ-ಅಲ್ಲ-ಕರೆ ಬರುತ್ತಿದೆ ಬೀಸಿ ಬರುವ ತಂಗಾಳಿಯಲ್ಲಿ ದೇಹವು ತೇಲುವಂತಿರಲು ಸೆರಗು ಗಾಳಿಯಾಟಕ್ಕೆ ಚಟಪಟನೆ ಬಡಿದು ಬೆನ್ನಹಿಂದಿನ ಅಂಗರಕ್ಷಕನಂತೆ ಅನುಸರಿಸುತಿತ್ತು ಕೆದರಿದ ಕೂದಲು ಚದುರಿ ಸುತ್ತಲೂ ಹರಡಿಕೊಂಡಿತ್ತು. ದನಿಯು ಹೆಚ್ಚು ಸ್ಪಷ್ಟವಾಗತೊಡಗಿ ತಾನು ಹತ್ತಿರ ಹತ್ತಿರ ಬಂದುದನ್ನು ಸೂಚಸಿತೋ! ಇಲ್ಲವೋ ಚಿಗರೆಯಂತೆ ಜಿಗಿದು ಹಾರಿದಳು. ಸ್ವಲ್ಪ ದೂರದಲ್ಲಿ ಬಯಲ ಮಧ್ಯೆ ವಿಶಾಲವಾದ ಕೊಳವೊಂದು ಕಂಗೊಳಿಸಿತು. ಅದೇನು ಕೆನ್ನೀರಿನ ಕೊಳವೇ? ಅಲ್ಲ. ಅಲ್ಲ, ರಕ್ತದ ಮಡುವು! ಅಬ್ಬಾ, ಎಂಥ ಭಯಾನಕ! ಒಮ್ಮೆಲೇ ಚಿಟ್ಟನೆ ಚೀರಿದಳು. ದುಷ್ಟ ಮೃಗಗಳ ದಂಡೊಂದು ಅಬ್ಬರಿಸುತ್ತಾ ಮಡುವಿನಿಂದೆದ್ದು ಮೇಲಾಯ್ದು ಬಂದುವು! ಶಿವೆ ಮತ್ತೊಮ್ಮೆ ಚೀರಿ ಮೂರ್ಛಿತಳಾದಳು. ಮರುಗಳಿಗೆಯಲ್ಲಿ ಮೈಮುಟ್ಟಿ ಅಲುಗಿಸುತ್ತಾ "ಶಿವೇ, ಏಕಿಷ್ಟು ಭಯಭೀತಳಾಗಿದ್ದಿ?" ಎಂಬ ಪ್ರಶ್ನೆಯೊಂದು ಹೊರಬಿದ್ದಾಗ ದನಿ ಕರ್ಣಾನಂದಕರವಾಗಿ ಕೇಳಿಬಂದಿತು. ಶಿವೆ "ಹಾ!" ಎಂದು ಕಣ್ದೆರೆದಳು. ಅಬ್ಬಾ! ಭಯಾನಕ!! ಸ್ವಾಮಿಯೂ ಅದೇ ಮಡುವಿನಲ್ಲಿ ಮುಳುಗೆದ್ದು ಬಂದಿದ್ದಾನೆ! ರಕ್ತ! ರಕ್ತ!! ಶಿವೆ ಚಿಟ್ಟನೆ ಚೀರಿ ಮೂರ್ಛಿತ

ಳಾದಳು.

"ಅಮ್ಮಾ, ಏನಾಯ್ತು?" ರವಿ ಮೈಮುಟ್ಟಿ ಅಲುಗಿಸಿ ಕೂಗಿ ಕರೆದರೂ ಇನ್ನೂ ಬಿಗಿಯಾಗಿ ಕಣ್ಣುಮುಚ್ಚಿಕೊಂಡಿದ್ದಾಳೆ "ಅಮ್ಮಾ, ಅಮ್ಮಾ, ಅಮ್ಮಾ!" ನಾಲ್ಕಾರು ಎಳೆದನಿಗಳು ಸನಿಹದಲ್ಲಿ ಮೊಳಗಿದುವು. ಮೈಮುಟ್ಟಿ ಅಲುಗಿಸಿ ಪುನಃ ಪುನಃ ಕರೆದುವು. ಶಿವೆ ತಟ್ಟನೆ ಕಣ್ಣು ಬಿಟ್ಟು "ಅಬ್ಬಾ! ಭಯಾನಕ ದೃಶ್ಯ!" ಎನ್ನುತ್ತ ಎದ್ದು ಕುಳಿತಳು, "ಭಗವಂತ, ನಾನು ದುರ್ದೈವಿ. ಕಣ್ಣು ಬಿಡುವುದೇ ನನಗೆ ಕಷ್ಟವಾಗಿತ್ತು" ಎಂದಾಗ ಎದೆ ಡಬ ಡಬ ಬಡಿದುಕೊಳ್ಳುತಿತ್ತು. ಕಣ್ಣುಗಳಲ್ಲಿ ಭಯವು ತಾನೇ ತಾನಾಗಿತ್ತು. ಮಕ್ಕಳು "ಏನಾಯ್ತು?" ಎಂದು ಮತ್ತೆ ಮತ್ತೆ ಕೇಳತೊಡಗಿದರು. ಎರಡು ಕೈಗಳಿಂದಲೂ ಎದೆಯನ್ನು ಒತ್ತಿ ಹಿಡಿದುಕೊಂಡು "ಹಾಳು ಕನಸು. ಎಲ್ಲೋ ಸ್ವಲ್ಪ ಹೊತ್ತು ನಿದ್ದೆ ಮಾಡಿದ್ದೆ. ಅದರಲ್ಲೂ ಇಂಥ ದುಸ್ವಪ್ನವನ್ನು ಕಾಣುವಂತಾಯಿತೇ?" ಎಂದು ನಿಟ್ಟುಸಿರು ಬಿಟ್ಟಳು ಶಿವೆ. ಬೆಳಗಿನ ತಿಳಿ ಬೆಳಕು ಕಿಟಕಿಗಳ ಮೂಲಕ ಜೆಳ್ಳನೆ ಹರಡತೊಡಗಿತ್ತು.

೬

ಅರವತ್ತೈದು ವರುಷಗಳ ತುಂಬು ಜೀವನ ನಡೆಸಿದ ಲಿಂಗಣ್ಣನ ನೀಳ
ವಾದ ಶರೀರ ಸುಮಾರು ನಲ್ವತ್ತು ನಲ್ವತ್ತೈದರ ವಯಸ್ಸನ್ನು ಸಾರುವಷ್ಟು
ಎಳಸಾಗಿತ್ತು. ಎಣ್ಣೆಗೆಂಪಿನ ತೆಳ್ಳನೆಯ ಮೈ ಕೃಷಿ ಜೀವನದಲ್ಲಿ ಕಠಿಣ
ಜೀವನ ನಡೆಸಿದ್ದರೂ ಗಟ್ಟಿಮುಟ್ಟಾಗಿದ್ದು ಹಳ್ಳಿಗರ ದೇಹದಾರ್ಢ್ಯತೆಯನ್ನು
ಎತ್ತಿ ತೋರಿಸುವಂತಿತ್ತು. ಮುಖದ ಮೇಲೆ ಅಲ್ಲಲ್ಲಿ ಹಣಿಕಿಹಾಕಿದ ಬಿಳಿ
ಗಡ್ಡಗಳ ವಿನಾ ಮತ್ತಾವ ಕುರುಹೂ ವೃದ್ಧಾಪ್ಯವನ್ನು ಸೂಸುತ್ತಿರಲಿಲ್ಲ.
ಮುಖದಲ್ಲಿನ ದೃಢಭಾವ ದೃಷ್ಟಿಯಲ್ಲಿನ ಶ್ರೀಮದ್ಗಾಂಭೀರ್ಯಗಳನ್ನುನೋಡಿ
ದೊಡನೆಯೇ ಏನೋ ಒಂದು ಬಗೆಯ ಗೌರವವನ್ನು ಹುಟ್ಟಿಸುವಂತಹ
ಗೌರವಾನ್ವಿತ ವ್ಯಕ್ತಿ ಲಿಂಗಣ್ಣ. ನವಿಲೂರಿನಲ್ಲಿ ಮನೆಯ ಮುಂದಿನ ಕಿರು
ಅಂಗಳದಲ್ಲಿ ಎಳೆ ಬಿಸಿಲಿಗೆ ಮೈಗೊಟ್ಟು ಅಂಗಳದಲ್ಲಿನ ಕಳೆ ಕಸ ಕಡ್ಡಿಗಳ
ನಿರ್ಮೂಲನ ಕಾರ್ಯದಲ್ಲಿ ಮಗ್ನನಾಗಿದ್ದಾನೆ,

ಕನ್ಯಾರ್ಥಿಯಾಗಿ ಬರಲಿದ್ದ ಪರದಳ್ಳಿಯ ಚೆನ್ನಪ್ಪನು ಹೆಂಡತಿ ಮತ್ತು
ಮಗನೊಂದಿಗೆ ಹನ್ನೆರಡು ಗಂಟೆಯ ಬಸ್ಸಿನಲ್ಲಿ ಬರುವುದಾಗಿ ತಿಳಿಸಿದ್ದ.
ಭಾವೀ ಬೀಗರಿಗಾಗಿ ಭಕ್ಷ್ಯ ಭೋಜ್ಯಗಳ ತಯಾರಿಕೆಯಲ್ಲಿ ಮಗ್ನಳಾಗಿದ್ದಳು
ಪಾರ್ವತಿ. ಮನೆಯಲ್ಲಿ ಎಲ್ಲೆಲ್ಲೂ ಶುಭ್ರತೆಯು ಎದ್ದು ತೋರುತಿತ್ತು.
ಜಗುಲಿಯನ್ನು ಹೊಸ ಜಮಖಾನೆಯು ಅಲಂಕರಿಸಿತ್ತು. ಹಸನಾದ ರಂಗೋ
ಲಿಯು ಹಸಿವನ್ನು ಇಂಗಿಸುವಷ್ಟು ಚಿತ್ತಾಕರ್ಷಕವಾಗಿ ಮೈತಳೆಯುತಿತ್ತು.
ಅದರ ಕರ್ತೃ ಕಲ್ಯಾಣಿಯು ಇನ್ನೂ ರಂಗೋಲಿಯನ್ನಿಡುತ್ತಿದ್ದಾಳೆ. ಕಲಿತವ
ನೆಂದು ಶಿವಮ್ಮನನ್ನು ಸ್ವಾಮಿಗೆ ಧಾರೆಯೆರೆದು ಕೊಟ್ಟು ಕೈಸುಟ್ಟುಕೊಂಡಿದ್ದ
ಲಿಂಗಣ್ಣನಿಗೆ ಕಲ್ಯಾಣಿಯನ್ನು ಗುಣವಂತನ ಮಡಿಲಲ್ಲಿ ಹಾಕಬೇಕೆಂಬ ಮಹ
ದಿಚ್ಛೆ ಮನದಲ್ಲಿ ಬೇರೂರಿತ್ತು

ಕನ್ಯಾರ್ಥಿಗಳು ಕಲ್ಯಾಣಿಯನ್ನು ಸೊಸೆಯಾಗಿ ಸ್ವೀಕರಿಸಲು ಸಂತಸ
ದಿಂದ ಒಪ್ಪಿದರು. ಪರಸ್ಪರ ಒಪ್ಪಂದ ನಡೆದು ಸಂಜೆಯಲ್ಲಿ ಅವರು ಊರಿ

ಗಭಿಮುಖವಾಗಿ ಹೊರಟುಹೋದರು. ವರನ ಕಡೆಯವರಿಗೆ ಮದುವೆ ಜಾಗ್ರತೆಯಾಗೆ ನಡೆಯಬೇಕೆಂಬ ಇಚ್ಛೆ. ಲಿಂಗಣ್ಣನಿಗೆ ಈಗಲೇ ಹೇಗೆ ಹಣವನ್ನು ಹೊಂದಿಸಿಕೊಳ್ಳುವುದೆಂಬ ಯೋಚನೆ. ಆದರೂ ಒಳ್ಳೆಯ ವರ ದೊರೆತಿರುವುದರಿಂದ ಬಿಡಲಾಗದೆಂಬ ಆಸೆ. ಹಾಗೇ ಯೋಚಿಸುತ್ತ ಲಿಂಗಣ್ಣ ಅಂಗಳದಲ್ಲಿ ನಿಂತುಕೊಂಡಿದ್ದ. ದೃಷ್ಟಿ ದೂರ ದಿಗಂತದಲ್ಲಿ ನೆಟ್ಟಿತ್ತು.

ಬಸ್ಸಿನ ತನಕ ಕಳುಹಿಸಲು ಹೋದ ನಾಗರಾಜನಿನ್ನೂ ಹಿಂದಿರುಗಿರಲಿಲ್ಲ. ಮೂರ್ತಿ ಕಲ್ಯಾಣಿಯ ಕೈಹಿಡಿಯಲೊಪ್ಪಿದುದು ಅತ್ಯಂತ ಸಂತೋಷವನ್ನುಂಟು ಮಾಡಿತ್ತು. ಮೂರ್ತಿಯ ಪರಿಚಯವಾದಾಗಿನಿಂದ ಆತನ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದ ನಾಗರಾಜನಿಗೆ ಮೂರ್ತಿಯ ಗುಣಾವಗುಣಗಳು ಕರತಲಾಮಲಕವಾಗಿದ್ದುವು. ಗೆಳೆತನದಲ್ಲಿ ಒಂದಾದ ತನುಮನಗಳು ಸಂಬಂಧದಿಂದ ಸಂಪೂರ್ಣ ಬೆಸೆದುಕೊಳ್ಳಲೆಂಬ ಹಿರಿಯ ಆಕಾಂಕ್ಷೆ ಅಂದೇ ಎದೆಯಲ್ಲಿ ಬೇರು ಬಿಟ್ಟಿತ್ತು. ಎಷ್ಟೋ ಬಾರಿ ಮೂರ್ತಿಯೊಂದಿಗೆ ನಾಗರಾಜ ರಜೆದಿನಗಳನ್ನು ಅವರ ಮನೆಯಲ್ಲಿ ಕಳೆದಿದ್ದು ಅವರ ಸ್ಥಿತಿಗತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದ. ಅಲ್ಲಿಂದ ಮನೆಗೆ ಬಂದೊಡನೆಯೆ ನಾಗರಾಜನಿಗೆ ಮನೆಮಂದಿಯ ಮುಂದೆ ಮೂರ್ತಿಯನ್ನು ಬಣ್ಣಿಸುವುದೆಂದರೆ ಅದೊಂದು ಹೆಗ್ಗಳಿಕೆಯೆನಿಸುತ್ತಿತ್ತು. ಬಣ್ಣನೆಯನ್ನು ಕೇಳಿ ಕೇಳಿ ಆ ಸಂಬಂಧ ಬೆಳೆಸಬೇಕೆಂಬ ತರಾತುರಿಯುಂಟಾಗಿತ್ತು ಮನೆಮಂದಿಗೆ.

ನಾಗರಾಜ ಹಿಂದಿರುಗುವ ಹೊತ್ತಿಗೆ ಕತ್ತಲು ಮುಸುಗುತಿತ್ತು. ಬರಬರುತ್ತ ಅವನೆಂದ "ಅವರು ಆದಷ್ಟು ಜಾಗ್ರತೆ ಮದುವೆ ಮಾಡಬೇಕೆಂಬ ಇಷ್ಟದಿಂದಿದ್ದಾರೆ. ಅವರು ನಮ್ಮ ಸಂಬಂಧವನ್ನು ಪೂರ್ಣ ಮನಸ್ಸಿನಿಂದ ಒಟ್ಟಿಕೊಂಡಿದ್ದಾರೆ." ಮಾತು ಹೊರಡುವಾಗ ಮುಖ ಹೂವಿನಂತೆ ಅರಳಿತು.

"ಎಲ್ಲರಿಗೂ ಸಂತೋಷವೇನೋ ಸರಿಯೆ. ಹಣದ ಪೂರೈಕೆ ಕಷ್ಟವಾಗಿದೆ, ಕೈಯಲ್ಲಿದ್ದ ಹಣ ಅಂಗಡಿಗಾಗಿ ಖರ್ಚು ಮಾಡಿದ್ದಾಯಿತು."

ಅಷ್ಟರಲ್ಲಿ ಅಲ್ಲಿಗೆ ಬಂದ ಪಾರ್ವತಿ ಹೇಳಿದಳು. "ಇನ್ನು ಆ ಹಣ ಹಿಂದಿರುಗೀತೆಂದು ನಿರೀಕ್ಷಿಸುವುದು ಬೇಡ. ಹಣ ಕೊಟ್ಟ ಬಗ್ಗೆ ಮಾಹಿತಿಯೂ ಇಲ್ಲ: ಸ್ವಾಮಿಯ ಮುಂದೆ ನೀವು ಮಾತಾಡಿ ಸೈ ಎನ್ನಿಸಿಕೊಳ್ಳುವಂತೆಯೂ ಇಲ್ಲ. ಹೇಗೂ ಹಣಕ್ಕೆ ಬೇರೆ ಏರ್ಪಾಡು ಮಾಡಿಕೊಳ್ಳಲೇ ಬೇಕು. ಮಾಡಿಬಿಡಿ"

ಎಂದಳು.

"ಮನುಷ್ಯ ಸುಖವಾಗಿದ್ದಾಗ ಅಂಕದ ಕೋಳಿಯಂತೆ ತಾನೇ ತಾನಾಗಿ ಮೆರೆಯುತ್ತಾನೆ. ಇಂದಿನ ಸುಖ ನಾಳಿನ ದು:ಖಕ್ಕೆ ನಾಂದಿ ಎಂಬುದನ್ನು ಮರೆತು ಮಹಾ ಸ್ವಾರ್ಥಿಗಳಾಗಿ ಜ್ಞಾನಾಂಧರಾಗಿ ಬಾಳುವ ಜನಕೋಟಿಯಲ್ಲಿ ಸ್ವಾಮಿಯೂ ಒಬ್ಬ. ವಿಜ್ಞಾನಿಯ ಸಾಹಸ ಕಾರ್ಯಗಳನ್ನು ನೋಡಿದರೆ ಹೃದಯ ತಣಿಯುತ್ತದೆ. ಅಪಾರವಾದ ಸಂತೋಷವುಂಟಾಗುತ್ತದೆ.ಆದರೂ ಗಾಢವಾಗಿ ಯೋಚಿಸಿದರೆ ಪ್ರಕೃತಿಯ ಮುಂದೆ ವಿಜ್ಞಾನಿಯ ಸಾಹಸ ತೃಣಕ್ಕಿಂತ ಕಡೆ ಎಂಬುದು ಅರ್ಥವಾಗುತ್ತದೆ. ಭಗವಂತನ ಸೃಷ್ಟಿಯಲ್ಲಿನ ಒಂದು ಹಿಡಿ ಮಣ್ಣು, ಒಂದು ಹನಿ ರಕ್ತ, ಒಂದೇ ಒಂದು ತೃಣವನ್ನು ಮನುಷ್ಯ ಸೃಷ್ಟಿಸಬಲ್ಲನೇ? ಈ ಬ್ರಹ್ಮಾಂಡವಾದ ಜಗತ್ತಿನ ನಿರ್ಮಾಣ, ಅದರ ಭವ್ಯ ವೈವಿಧ್ಯತೆ, ವಾತಾವರಣ ಮತ್ತು ಅದರ ನಿಯಮ ಮೇಲಾಗಿ ಪ್ರಾಣಿವರ್ಗ ಸಸ್ಯವರ್ಗ ಪ್ರಕೃತಿಜನ್ಯವಾದ ಯಾವುದೇ ವಿಚಾರವನ್ನು ತೆಗೆದುಕೊಂಡರೂ ಅದು ಯೋಚನಾತೀತವಾದ ವಿಚಾರವಾಗುತ್ತದೆ. ಆದರೂ ನಾವು ಪರಮಾತ್ಮನ ಇರುವನ್ನು ಮರೆತು ಮೆರೆಯುತ್ತೇವೆ.........ಸ್ವಾಮಿಯಿದ್ದಾಗಿನ ಮಾತು. ಆತನ ಎದುರು ನಾವೇನು ಮಾತಾಡುವ ಹಾಗಿತ್ತೇ? ಇಂದು ಸ್ವಾಮಿಯ ಕತೆಯೇನಾಗಿದೆಯೋ ಭಗವಂತನಿಗೇ ಗೊತ್ತು." ಮುಖದಲ್ಲಿ ವ್ಯಸನದ ಕಪ್ಪು ಛಾಯೆ ಸುಳಿದಳಿಯಿತು.

ಪಾರ್ವತಿ ಮಾತಾಡಲಿಲ್ಲ. ಲಿಂಗಣ್ಣ ಮುಂದುವರಿದ "ನಾವು ಕಾಲೋಚಿತವಾಗಿ ನಡೆಯುವುದನ್ನು ಕಲಿತುಕೊಳ್ಳಬೇಕು, ಪ್ರೀತಿಯಿಂದ ಗೆದ್ದಂತೆ ಕೋಪದಿಂದ ಗೆಲ್ಲಲಾರೆವು ಎಂಬುದನ್ನು ಸ್ವಾಮಿ ಅರಿತುಕೊಳ್ಳಲಿಲ್ಲ. ವಿದ್ಯಾವಂತನಾಗಿಯೂ ಪ್ರಯೋಜನವಿಲ್ಲವಾಯ್ತು.ಭಗವಂತನ ಸೃಷ್ಟಿಯಲ್ಲಿ ಹೆಣ್ಣು ಗಂಡು ಒಂದೇ.ಎಲ್ಲರೂ ಈ ಪ್ರಪಂಚದಲ್ಲಿ ಸ್ವತಂತ್ರರು. ಇತರೆಯವರಮೇಲೆ ಅಧಿಕಾರ ನಡೆಸಲು ನಾವ್ಯಾರು ಎಂಬುದನ್ನು ಕಿಂಚಿತ್ತಾದರೂ ಸ್ವಾಮಿ ಅರಿತುಕೊಳ್ಳಬೇಕಿತ್ತು. ಆತನ ಅತಿವರ್ತನೆಯೇ ಬುದ್ಧಿಯನ್ನು ಕೆಡಿಸಿ ಊರು ಬಿಡಿಸಿ ಹೆಂಡತಿ ಮಕ್ಕಳನ್ನು ತೊರೆಸಿಕೊಂಡೊಯ್ಯಿತು." ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ. ಮತ್ತೆ ಮುಂದುವರಿದ ಲಿಂಗಣ್ಣ "ಹ್ಞೂ ಹೋಗಲಿ, ಈಗ ಮಾತಾಡಿ ಏನು ಪ್ರಯೋಜನ? ಆದರೆ ಬುದ್ಧಿಯಿದ್ದೂ

ತಿಳಿವಳಿಕೆಯಿದ್ದೂ ಮನುಷ್ಯ ಅಹಂಭಾವವನ್ನು ಬಿಡುವುದಿಲ್ಲವಲ್ಲಾ ಎಂಬದೇ ಪರಮಾಶ್ಚರ್ಯ. ಸತ್ಯ-ಧರ್ಮ-ನೀತಿ-ಪ್ರೀತಿಗಳ ಪತನಕ್ಕೆ ಅಹಂಕಾರವೇ ಮೂಲ ಕಾರಣ,"

"ಅಪ್ಪಾ, ಇದಕ್ಕೆ ಮದ್ದೇನು?"

"ಭಗವಂತನೇ ಬಲ್ಲ."

"ಧರ್ಮದ ಪುನರುದ್ಧಾರಕ್ಕೆ ಭಗವಂತ ಜನ್ಮಧಾರಣೆ ಮಾಡುತ್ತಾನೆಯೇ?" ನಾಗರಾಜನ ಪ್ರಶ್ನೆಯಲ್ಲಿ ಕುತೂಹಲವಿತ್ತು.

"ಈಶ್ವರೇಚ್ಛೆ"

"ಅಪ್ಪಾ, ಇನ್ನೊಂದು ವಿಚಾರ.... ಸತ್ಯಸಂಧರಿಗೆ ಹೆಚ್ಚು ಅನ್ಯಾಯ ವಾಗುತ್ತಿದೆ. ಅನಾಚಾರಿಗಳು ಸುಖವಾಗಿರುತ್ತಾರೆ, ಪ್ರಕೃತಿಯ ವಿಕೋಪಕ್ಕೆ ತುತ್ತಾಗುವವರೆಲ್ಲಾ ಬಹುತೇಕವಾಗಿ ಒಳ್ಳೆಯವರೇ ಆಗಿರುತ್ತಾರೆ, ಇದು ಏಕೆ? ಇದೊಂದು ಸೋಜಿಗವಲ್ಲವೇ?"

"ಬಹುಶಃ ಇದು ಮನುಷ್ಯನ ಅಗ್ನಿಪರೀಕ್ಷೆ. ಸಜ್ಜನರಿಗೆ ನಾನಾ ವಿಧ ವಾದ ಸಂಕಟ ಪ್ರಾಪ್ತಿಯಾಗುತ್ತಿರುವುದು ನಿಜ. ಅದರಿಂದಲೇ ಜನ ರೋಸಿ ಹೋಗಿ ಅನ್ಯಾಯಗಳಲ್ಲಿ ತೊಡಗುತ್ತಾರೆಯೇ? ಎಂಬ ಯೋಚನೆ ಒಮ್ಮೊಮ್ಮೆ ಬರುತ್ತದೆ. ಆದರೆ ಅದೇನೇಯಿರಲಿ, ನ್ಯಾಯವನ್ನು ಬಿಡದವನೇ ನಿಜವಾದ ಮನುಷ್ಯ." ಮುಖದಲ್ಲಿ ಅಪೂರ್ವ ಶಾಂತಿ ಹೊಳೆಯುತಿತ್ತು, ದೃಷ್ಟಿ ದೂರದಲ್ಲಿ ಚಲಿಸುತ್ತಿದ್ದು ಕಣ್ಣುಗಳಲ್ಲಿ ತೇಜಸ್ಸಿತ್ತು.

"ಇಲ್ಲಿ ಪ್ರಕೃತಿಯೇ ಧರ್ಮಕ್ಕೆ ವಿರೋಧವಾಗಿದೆ ಎಂದಾಯ್ತು,"

"ಛೀ! ನಿನ್ನ ಭಾವನೆ ತಪ್ಪು. ಹಾಗೆಂದು ಹೇಗೆ ನಿರ್ಧರಿಸುವೆ? ಕಷ್ಟ-ಸುಖಗಳು ಒಂದೇ ಫಲದ ಎರಡು ಭಾಗಗಳು ಸುಖದ ಸಿಹಿಯೊಂದಿಗೆ ಕಷ್ಟದ ಕಹಿಯೂ ಇದ್ದೇ ತೀರಬೇಕಷ್ಟೆ?"

ಸಂಜೆಗಪ್ಪು ನಿಧಾನವಾಗಿ ಸರಿದು ಬರತೊಡಗಿತು, ಪಾರ್ವತಿ ಒಳ ಗಡೆ ಹೋದಳು. ನಾಗರಾಜ ಲಾಂದ್ರವನ್ನು ಹತ್ತಿಸಲೆಂದು ತಾಯಿಯನ್ನು ಹಿಂಬಾಲಿಸಿದ. ಜಗಲಿಯ ಮೇಲಿನ ಜಮುಖಾನೆಯ ಮೇಲೆ ಲಿಂಗಣ್ಣ ಯೋಚನಾಪರನಾಗಿ ಕುಳಿತುಕೊಂಡಿದ್ದಾನೆ, ಕಹಿ-ಸಿಹಿಗಳ ಮಥನದಿಂದ ಬಗೆ ಒಗರಾಗಿತ್ತು. ನಾನಾ ವಿಚಾರಗಳು ಒಂದೊಂದಾಗಿ ಜಲನ

ಚಿತ್ರಗಳಂತೆ ಸುಳಿಯ ತೊಡಗಿವೆ. ಹಿಂದೆ ಬಹು ಹಿಂದೆ, ತಾನು ಚಿಕ್ಕವನಾಗಿದ್ದಾಗಿನ ಜೀವನ ಚಿತ್ರ, ಆ ಬಾಳಿನ ಬವಣೆ, ಆ ಅಜ್ಞಾನದ ಕೂಪ ಹಂತ ಹಂತವಾಗಿ ಸುಳಿಯುತೊಡಗಿದುವು-ಅಲ್ಲ-ಅಂತರ್ಮುಖಿಯಾಗಿ ಗತ ಜೀವನವನ್ನು ನೋಡತೊಡಗಿದ. ನೀರಿಲ್ಲದ ಊರು; ಸ್ನಾನ ಕಾಣದ ಮೈ; ದಾರಿದ್ರ್ಯವೇ ಮೈವೆತ್ತು ತಾಂಡವ ನೃತ್ಯಗೈಯುತ್ತಿದ್ದ ಗ್ರಾಮದೇವತೆ. ತಂದೆ ಪುಟ್ಟಣ್ಣನಿಗೆ ದೊಡ್ಡ "ಅಮ್ಮ" ಆದ ಬಗೆ, ಅವರಿಗೆ ಸಿಕ್ಕಿದ ವೈದ್ಯೋಪಚಾರ ನೆನಪಿಗೆ ಬಂದಾಗ ನಿಜವಾಗಿಯೂ ಮೈ ಜುಮ್ಮೆಂದಿತು. ತನಗಾಗ ಹದಿನಾರರ ಎಳೆತನ, ತಂದೆಗೆ ಜ್ವರ ವಿಪರೀತ ಬಂದು ಹಾಸಿಗೆಯಿಂದ ಏಳಲೇಯಿಲ್ಲ. ಮೂರು ನಾಲ್ಕು ದಿನಗಳ ಪರ್ಯಂತ ಕಗ್ಗತ್ತಲೆಯ ಕೋಣೆಯಲ್ಲಿ ಹರಕು ಚಾಪೆಯ ಮೇಲೆ ಮಲಗಿದ್ದ. ಅಲ್ಲಿ ಗಾಳಿ ಬೆಳಕುಗಳಿಗೆ ಅಸ್ಪದವಿರದಿದ್ದುದರಿಂದ ಒಳಗಿನ ಯಾವ ವಸ್ತುವೂ ಕಣ್ಗೋಚರಿಸುತ್ತಿರಲಿಲ್ಲ. ಆಗಾಗ ವೈಸೋವಿನಿಂದ ಚೀರಿಡುವ ದನಿ ವಿನಾ ಅಪ್ಪನ ಸ್ಥಿತಿ ಗತಿಗಳ ಪರಿಚಯ ಯಾರಿಗೂ ಆಗಲಿಲ್ಲ. ಜ್ವರದ ತಾಪದಿಂದ ಎಚ್ಚರ ತಪ್ಪಿ ಹುಚ್ಚುಚ್ಚಾಗಿ ಅರಚತೊಡಗಲು ಊರ ಹಿರಿಯರು ಬಂದು ರೋಗಿಯನ್ನು ಪರೀಕ್ಷಿಸಲು ಬೆಳಕಿಗೆ ಎತ್ತಿಕೊಂಡು ಬಂದರು. ನೋಡುವುದೇನು? ಎಷ್ಟು ಭಯಾನಕವಾಗಿತ್ತು ಆ ನೋಟ? ಆ ಕ್ಷಣ ಹಿರಿಯರು ತಿರುಗಿ ನೋಡದೆಯೇ ಓಟ ಕಿತ್ತರು! ಅಂದೇ "ಅಮ್ಮ" ಆದವರಿಬ್ಬರು ಅಪ್ಪನನ್ನು ಊರಾಚೆಗೆ ಬಂಡಿಯ ಮೂಲಕ ಸಾಗಿಸಿದರು. ತಾಯಿಯ ದುಃಖ ಹೇಳತೀರದು. ಅದು ಅರಣ್ಯ ರೋದನವಾಗುಳಿಯಿತು. ಊರಾಚೆಯ ಗುಡಿಸಿಲಲ್ಲಿ ರೋಗಿಯನ್ನಿಟ್ಟರು. ಆತನಿಗಾಗ ನಾಲ್ವತ್ತರ ಪ್ರಾಯ. ಗಂಜಿ ಕಾಯಿಸಿಕೊಡಲು ಮುದುಕನೊಬ್ಬನಿದ್ದನಂತೆ. ಅದೇ ವೈದ್ಯೋಪಚಾರ ಮತ್ತು ಶೈತ್ಯೋಪಚಾರ! ಕೆಲವು ದಿನಗಳ ನಂತರ ಅಪ್ಪ ಸತ್ತು ಹೋದ ವಿಚಾರ ತಿಳಿದು ಬಂತು. ಊರ ಜನ ಅತ್ತ ಸುಳಿಯಲಿಲ್ಲ: ಹೆಂಡತಿ ಮಕ್ಕಳನ್ನೂ ಸುಳಿಯಗೊಡಲಿಲ್ಲ. ಅಪ್ಪ ಕೊಳೆತು ಹುಳಿತು ಮೃತ್ಯುವನ್ನಪ್ಪಿದ ಬಗೆ ಮತ್ತೊಮ್ಮೆ ಮೈ ಜುಂವ್ಮೆನ್ನಿಸಿತು. ಶರೀರದಾದ್ಯಂತ ಮೆಲ್ಲನೆ ಬಹು-ಮೆಲ್ಲನೆ ಕಂಪಿಸಿತು. ಕಾಲಚಕ್ರ ಎಷ್ಟು ನಾಗಾಲೋಟದಿಂದ ಉರುಳುತ್ತಿದೆಯೋ ನಮ್ಮ ಜನ ಅಷ್ಟೇ ಹಿಂದೆ ಬೀಳುತ್ತಿದ್ದಾರೆ. ಇವರಿಗೆ ಜ್ಞಾನ ಶ್ರದ್ಧೆಯೂ ಇಲ್ಲ; ಧರ್ಮ

ಶ್ರದ್ಧೆಯೂ ಇಲ್ಲ.........ಎಂದೆನಿಸಿದಾಗ ಮನಸ್ಸಿಗೆ ಜಿಗುಪ್ಸೆಯುಂಟಾಯಿತು.

ಲಿಂಗಣ್ಣ ಹೊತ್ತು ಉರುಳುತ್ತಿರುವುದರ ಪರಿವೆ ಇಲ್ಲದೆ ಹಾಗೇ ಕುಳಿತಿದ್ದ. ಅಂಗಳದಲ್ಲೆಲ್ಲಾ ಬೆಳ್ಳನೆ ಬೆಳದಿಂಗಳು ಪಸರಿಸಿತು. ಕಣ್ಣ ನೋಟ ಆನಂದದಿಂದ ನಿಟ್ಟಿಸುತಿತ್ತು. ಯೋಚನೆ ಮುಂದುವರಿಯಿತು.........ತಾನು ಶಾಲೆಗೆ ಹೋಗುತ್ತಿದ್ದಾಗಿನ ದೃಶ್ಯ ಸುಳಿಯತೊಡಗಿತು. ಆಗ ಶಾಲೆಗೆ ಹೋಗಲು ಅತ್ತು ಗೋಳಾಡಿ ರಂಪ ಮಾಡುತ್ತಿದ್ದುದೂ, ಮನೆಯಲ್ಲಿ ಶಾಲೆಗೆ ಹೋಗುವೆನೆಂದು ಸುಳ್ಳು ಹೇಳಿ ಅಲ್ಲಿ ಇಲ್ಲಿ ಸುತ್ತಿ ಕಾಲಹರಣ ಮಾಡಿ ಮನೆ ಸೇರುತ್ತಿದ್ದುದೂ ನೆನಪಿಗೆ ಬಂದು ನಗುವುಕ್ಕಿ ಬಂತು. ಅದಾದ ಮೇಲೆ ಬಹಳ ವಿದ್ಯೆ ಕಲಿತರೆ ಹುಡುಗ ಕೆಟ್ಟು ಹೋಗುತ್ತಾನೆಂದು ಹಿರಿಯರು ತನ್ನನ್ನು ಮೂರನೆಯ ತರಗತಿಗೇ ಶರಣು ಹೊಡೆಸಿ ಶಾಲೆಯತ್ತ ಸುಳಿಯಲೂ ಬಿಟ್ಟಿರಲಿಲ್ಲ.........ಮತ್ತೆ ನಗುವುಕ್ಕಿ ಬಂದು ಯೋಚನೆಯನ್ನು ಬದಿಗಿಟ್ಟು ಎದ್ದು ಹೋದ.

ಅಂದು ನಡುಮನೆಯಲ್ಲಿ ಮಲಗಿದ್ದ ಕಲ್ಯಾಣಿಯ ಮನಸ್ಸು ಸಂತೋಷದ ಭರದಲ್ಲಿ ನಿದ್ದೆಯನ್ನು ದೂರಗೊಳಿಸಿತ್ತು. ತನ್ನ ಭಾವೀ ಪತಿಯು ರೂಪವಂತ, ಗುಣವಂತ ಮೇಲಾಗಿ ಧನವಂತ! ಆತನರ್ಧಾಂಗಿಯಾಗಿ ತಾನು ಬಾಳುವೆ ಮಾಡಬಹುದಾದ ಚಿತ್ರವನ್ನು ಈಗಿನಿಂದಲೇ ಚಿತ್ರಿಸಿಕೊಳ್ಳತೊಡಗಿದ್ದಾಳೆ. ಇದೇ ಹೊತ್ತಿನಲ್ಲಿ ಮೂರ್ತಿಯೂ ನಿದ್ದೆಯನ್ನು ದೂರೀಕರಿಸಿ ತನ್ನನ್ನೇ ಕುರಿತು ನೆನೆಯುತ್ತಿರಬಹುದೆಂದೆನಿಸಿ ಉಂಟಾದ ಆನಂದಕ್ಕೆ ಪಾರವೇ ಇರಲಿಲ್ಲ. ಸಂತಸದುಬ್ಬರವನ್ನು ಹೃದಯ ತಡೆಗಟ್ಟಲಾರದೆ ತತ್ತರಿಸುವಂತೆ ಭಾಸವಾಯಿತು. ಆತನೆಡೆಗೆ ಪ್ರಾಣವು ಚಿಮ್ಮುವಂತೆ ತೋರಿ ಮೈ ಪುಳಕಿತವಾಯಿತು. ಆತನ ಚಿತ್ರವನ್ನು ಚಿತ್ರಿಸಿಕೊಳ್ಳಲು ಮನಸ್ಸು ತವಕಿಸುತ್ತಿತ್ತು. ಆದರೆ ಚಿತ್ರಿಸಿಕೊಳ್ಳುವುದು ಹೇಗೆ? ಪ್ರಯತ್ನಪಟ್ಟರೂ ಆತನ ಮುಖವನ್ನು ತನ್ನಿಂದ ನೋಡಲಾಗಲಿಲ್ಲ. ಹಾಳು ನಾಚಿಕೆ ಅಡ್ಡಗಟ್ಟಿತ್ತು. ಬಹುಶಃ ಮೂರ್ತಿಯೂ ನನ್ನನ್ನು ಸರಿಯಾಗಿ ನೋಡಿಲ್ಲದೆ ಭಾವೀ ಸತಿಯ ಚಿತ್ರವನ್ನು ಚಿತ್ರಿಸಿಕೊಳ್ಳಲಾಗದೆ ತನ್ನಂತೆಯೇ ನಿಸ್ಸಹಾಯಕನಾಗಿರಬಹುದು ಎಂದೆನಿಸಿದಾಗ ತನಗೆ ತಾನೇ ನಗುವುಕ್ಕಿ ಬಂತು.

ಹೊರಗಡೆ ಆಗೊಮ್ಮೆ ಈಗೊಮ್ಮೆ ನಾಯಿ ಬೊಗಳಿಕೆಯ ಸದ್ದು ವಿನಾ

ಎಲ್ಲೆಲ್ಲೂ ನೀರವ. ನಿಷ್ಪಂದ. ಶಾಂತ ಸಾಮ್ರಾಜ್ಯದಲ್ಲಿ ಮಹಾಶಾಂತಿಯು ಸಿಂಹಾಸನಾರೂಢಳಾಗಿದ್ದಾಳೆ. ಚಂದ್ರಮನು ಬೆಳಗಿ ದೀವಟಿಗೆಯನ್ನಿಟ್ಟಿದ್ದರೆ ಮಂದ ಸಮೀರನು ಬೀಸಿ ಚಾಮರವನ್ನಿಕ್ಕುತ್ತಿದ್ದಾನೆ. ಜಗತ್ತು ಆಕೆಯ ಅಭಯ ಹಸ್ತದ ಕೃಪೆಯಿಂದ ಸದ್ದಿಲ್ಲದೆ ನಿದ್ದೆ ಹೋಗುತ್ತಿದೆ. ಹೊತ್ತು ಮೆಲ್ಲನುರುಳಿ ಇರುಳು ಕಳೆಯತೊಡಗಿತು. ಸ್ವಪ್ನ ಸಾಮ್ರಾಜ್ಯದಲ್ಲಿ ಕಲ್ಯಾಣಿ ಮೂರ್ತಿಯ ಕೊರಳಿಗೆ ಮಧುರವಾದ ಮಲ್ಲಿಗೆಯ ಹಾರವನ್ನಿಕ್ಕುತ್ತಿದ್ದಾಳೆ. ಪಕ್ಕದಲ್ಲಿದ್ದ ಸುಂದರಿ ನಿದ್ದೆಯಲ್ಲಿ ಕನಲಿ ಕೂಗಿದಾಗ ಮಧುರ ಸ್ವಪ್ನವೊಡೆದು ಎಚ್ಚರವಾಯಿತು. ಎಂತಹ ಅನ್ಯಾಯ! ಮಧುರ ನಿಮಿಷವು ಒಡೆದು ಚೂರಾಯಿತೇ ಎಂದೆನಿಸಿದಾಗ ಕಲ್ಯಾಣಿಗೆ ನಿಜವಾಗಿಯೂ ಸಿಟ್ಟು ಬಂದು ತಂಗಿಯನ್ನು ಅಲುಗಿಸಿ ಎಚ್ಚರಿಸಿ ಅತ್ತ ತಳ್ಳಿ ಮಲಗಿಸಿ ಕಣ್ಮುಚ್ಚಿದಳು, ಪುನಃ ಅದೇ ಕನಸು ಬರಲೆಂದು ಹೃದಯ ಹಾತೊರೆಯುತಿತ್ತು. ಮನಸ್ಸು ತುಡಿದುಕೊಳ್ಳುತಿತ್ತು. ಕನಸು ಬರಲಿಲ್ಲ, ನಿದ್ದೆ ಬಂದಿತು.

೧೦

ಅಂದು ಶಾಲೆಗೆ ಬಿಡುವಿದ್ದುದರಿಂದ ಶಿವೆ ಮಕ್ಕಳನ್ನು ಕರೆದು ಹೇಳಿದಳು. "ಸಾಕಷ್ಟು ತಾವಿದೆ ನಾವೊಂದು ತೋಟ ಮಾಡಿಕೊಳ್ಳುವುದು ಒಳ್ಳೆಯದು."

"ನಿಜ ಅಮ್ಮಾ, ಬೇಕಾದಷ್ಟು ಸ್ಥಳವಿದೆ" ಎಂದ ಗೋಪಿ ಪುಟ್ಟ ಪುಟ್ಟ ಕಣ್ಣುಗಳನ್ನರಳಿಸಿ ಕೇಳಿದ ಪುನಃ "ಹೋಗಿ ಎಲ್ಲಾದರೂ ಗಿಡಗಳನ್ನು ತರಲೇ?"

"ಎಲ್ಲಿಂದ ತರುತ್ತಿ?"

"ರಾಯರ ಮನೆಯ ಮಾಲಿಯನ್ನು ಕೇಳಿದರೆ ಸಿಕ್ಕುತ್ತೆ."

"ಓ, ನರ್ಸರಿ ರಾಮಸ್ವಾಮಿಯ ಮಗ ನನ್ನ ಜೊತೆ ಓದುತ್ತಾನೆ! ಅವನೊಂದಿಗೆ ಕೇಳಿದರೆ ಎಲ್ಲಾ ದೊರೆಯುತ್ತೆ." ಶ್ಯಾಮು ಉತ್ಸಾಹದಿಂದ ಹೇಳಿದ.

"ಮೊದಲು ಪಾತಿ ಮಾಡಿಕೊಳ್ಳೋಣ. ಹೇಗೂ ಸೊಗಸಾದ ಗೊಬ್ಬರ ವಿದೆ." ರವಿಯ ಬಾಯಿಂದ ಮಾತು ಹೊರಬಿತ್ತೋ ಇಲ್ಲವೋ ಚಿಕ್ಕವರು ಗುದ್ದಲಿ ತರಲು ಓಡಿದರು.

ಮಕ್ಕಳೈವರೂ 'ನಾ ಮುಂದು ತಾ ಮುಂದು' ಎಂದು ಮುಂದಾದರು.

ಕೆಲಸ ಲಗುಬಗನೆ ಸಾಗತೊಡಗಿತು.

ಮಾತೆಯೂ ಮಕ್ಕಳೊಡನೆ ಪಾಲ್ಗೊಂಡಳು.

...ಎಷ್ಟೇ ಮುಂದಾದರೂ, ಎಷ್ಟೇ ನಿಶ್ಚಯಿಸಿದರೂ ಯಾವುದೋ ಕಂಡರಿಯದ ಕೈ ಹಿನ್ನೆಳೆಯುತ್ತಿರುವಂತೆಯೇ ಭಾಸವಾಗುತ್ತದೆ...ಸಾಮಾಜಿಕ ಪ್ರಾಕಾರದಲ್ಲಿ ಸಿಡಿದೇಳುವ ಸಿಡಿಮದ್ದು, ಜೀವನದ ನೆಲೆಯಲ್ಲಿ ಸಂಜನಿಸುವ ಜಟಿಲತೆ, ಹೃದಯ ತಂತುಗಳನ್ನು ಎಂದೋ ತುಂಡರಿಸಿಬಿಟ್ಟಿವೆ. ಶೃಂಖಲಾ ಬದ್ಧ ನಾರಿಯರ ರೋದನದಂತೆ, ಪರಾಧೀನಳಾದ ಅಸ್ವಂತ್ರ ದೇಶಮಾತೆಯ ಆಕ್ರಂದನದಂತೆ ಹೃದಯಂಬನದ ಪಕ್ಷಿಯ ನಿಸ್ಸಾಯಕ ಸ್ಥಿತಿ ತನುಮನಗಳನ್ನು

ಆವರಿಸಿ ಬಿಟ್ಟಿದೆ—ಜಗತ್ತಿನ ಸಮಸ್ತ ಜೀವಜಾತಿ ತಮ್ಮ ದುಸ್ಸಹವಾದ ದೌರ್ಬಲ್ಯವನ್ನು ನೈರಾಶ್ಯಪೂರ್ಣವಾಣಿಯಲ್ಲಿ ವ್ಯಕ್ತಪಡಿಸುವಂತೆ... ಯೋಚಿಸಿದರೂ ಊಹಿಸಲಾಗದ ಯಾವುದೋ ಶಬ್ದಸಂಪತ್ತಿ ಕರ್ಣಪಟಲಗಳನ್ನು ಮುತ್ತಿ ಪ್ರತಿಧ್ವನಿಸುತ್ತಿದೆ...ನಿರಂತರವಾಗಿ...ಅನಂತವಾಗಿ.

ಅದು ತನ್ನ ಮನೋದೌರ್ಬಲ್ಯವೋ, ದೈಹಿಕ ದೌರ್ಬಲ್ಯವೋ ಅಥವಾ ನಿಜಸ್ಥಿತಿಯೋ ಎಂಬುದನ್ನು ಆಕೆ ಊಹಿಸಲಾರಳು. ದುಃಖ–ದುಗುಡ-ಭ್ರಮೆ ಭಯಗಳ ಒಕ್ಕೂಟದಲ್ಲಿ ಮನಃಪ್ರಾಣಗಳು ದಣಿದಿದ್ದುವು. ಮುಖಮಂಡಲ ಮ್ಲಾನವಾಗಿತ್ತು. ಕಣ್ಣುಗಳು ಕಾಂತಿಹೀನವಾಗಿದ್ದುವು. ಆದರೂ ಕೆಲಸ ಸಾಗುತಿತ್ತು.

ಮಕ್ಕಳ ಮಾತಿನ ರವ—ಪಕ್ಷಿಗಳ ಕಲಕಲ ರವ—ವಾಹನಾದಿಗಳ ಸದ್ದು ಗದ್ದಲ....ಎಣೆಯಿಲ್ಲದೆ ಕಿವಿಯ ಮೇಲೆ ಬೀಳುತಿತ್ತು.

ಓಡಾಡುವ ದಾರಿಯೊಂದನ್ನುಳಿದು ಮತ್ತೆಲ್ಲ ಸ್ಥಳವೂ ಪಾತಿಗಳಾದುವು. ಗೊಬ್ಬರವನ್ನು ಚೆಲ್ಲಿ ಭೂಮಿಯನ್ನು ಹದಗೊಳಿಸುವುದರಲ್ಲಿ ಶಿವೆ ತನ್ಮಯಳಾದಳು. ಮಕ್ಕಳೆಲ್ಲರೂ ಅವರವರ ಗೆಳೆಯರಿಂದ ತರಕಾರಿ ಬೀಜಗಳನ್ನು ಹೂಗಿಡಗಳನ್ನು ಪಡೆದು ಅತ್ಯಂತ ಆಸ್ಥೆಯಿಂದ ಕೂಡಿ ಬೀಜ ಬಿತ್ತಿ ಗಿಡಗಳನ್ನು ನೆಟ್ಟರು.

ತಿಂಗಳ ಗಾಲಿಗಳುರುಳಿದುವು. ಬೆಳೆಗಳು ನಳನಳಿಸಿ ಬೆಳೆದುವು. ಮನೆಯನ್ನು ಕಟ್ಟಿದಾರಭ್ಯದಿಂದಲೂ ಹಾಳು ಸುರಿಯುತ್ತಿದ್ದ ನೆಲ ಹಸುರು ಹೊದ್ದು ಮೈ ಸಿಂಗರಿಸಿಕೊಂಡಿತು. ಲಿಂಬೆ ದಾಳಿಂಬೆ ಬಾಳೆ ಸೀಬೆ ಕಿತ್ತಲೆ ಮೊದಲಾದ ಫಲವೃಕ್ಷಗಳು ಚಿಗುರಿ ಕವಲೊಡೆದುವು. ತರಕಾರಿಯ ಬಳ್ಳಿಗಳು ಚಪ್ಪರವನ್ನೇರಿದುವು. ಆನಂದ ತುಂಬಿದ ಕಣ್ಣುಗಳಿಂದ ನೋಡುನೋಡುತ್ತ ರವಿ ಹೇಳಿದ "ತರಕಾರಿ ಬೇಕಾದಷ್ಟು ಸಿಗುತ್ತದೆ ಅರ್ಧ ಹಸಿವು ಇದರಲ್ಲೇ ಹಿಂಗಿಸಬಹುದು,"

"ಅಪ್ಪ ಇದ್ದಾಗ ಏಕೆ ತೋಟ ಬೆಳೆಸಲಿಲ್ಲ?" ಕೇಳಿದಳು ವಿಮಲಾ.

"ಅವರಿಗೆ ಬಿಡುವಿರಲಿಲ್ಲ"

"ಆಗಲೂ ನಾವೇ ಬೆಳೆಸಬಹುದಾಗಿತ್ತಲ್ಲಾ?"

"ಏನೋ ಅವರಿಗೆ ಅದರಲ್ಲಿ ಆಸಕ್ತಿ ಇರಲಿಲ್ಲ."

"ಮಾವ ಈಗ ಎಲ್ಲಿದ್ದಾರೋ ಏನೋ."

"ಅವರಿಗೆ ಸಂಸಾರ ಬೇಡವೆನಿಸಿದಂತೆ ತೋರುತ್ತೆ ಗೋಪೀ; ಅದರಿಂದಲೇ ಕಣ್ಮರೆಯಾಗಿದ್ದಾರೆ."

"ಹಾಗೆಂದರೆ?" ಗೋಪಿ ಕಣ್ಣರಳಿಸಿ ಕೇಳಿದ.

"ಹೆಂಡತಿ ಮಕ್ಕಳು ಬೇಡವೆನಿಸಿದರೆ ಹೇಳದೆ ಕೇಳದೆ ಹೊರಟು ಹೋಗುವುದು ಕೆಲವರ ಸ್ವಭಾವ,"

"ರವೀ, ನಿಜವಾಗಿಯೂ ನಾವು ಅವರಿಗೆ ಬೇಡವಾದೆವೇ?" ವಿಮಲೆಯ ಕಣ್ಣುಗಳಲ್ಲಿ ನೀರಾಡಿತು ಪ್ರಶ್ನೆ ಆಸಕ್ತಿಯಿಂದ ತುಂಬಿತ್ತು.

"ಹಾಗಾದರೆ ನಮ್ಮಪ್ಪ. ಮಾವ ಇಬ್ಬರೂ ಸನ್ಯಾಸಿಯಾದರೆ?"

"ಹಾಗೆಂದು ಹೇಳುವುದು ಕಷ್ಟ; ಊಹೆ ಅಷ್ಟೆ."

"ಅವರೆಂದೂ ಹಿಂದಿರುಗಿ ಬರುವುದಿಲ್ಲವೇ?"

"ಹೇಗೆ ಹೇಳಲಿ ಶ್ಯಾಮೂ?"

"ನಿಮ್ಮಗಳ ಮೇಲೆ ಆಸೆ ಹುಟ್ಟಿದರೆ ಹಿಂದಿರುಗಿಯಾರು." ಶಿವೆ ನಡುವೆ ಬಾಯಿ ಹಾಕಿದಳು.

"ಸನ್ಯಾಸಿಗಳಾದವರು ಪುನಃ ಸಂಸಾರಿಗಳಾಗುತ್ತಾರೆಯೆ?"

"ಅವರವರ ಇಷ್ಟ."

"ಅಪ್ಪನ ಇಷ್ಟ ಹೇಗಿದೆಯೋ?"

"ದೇವರಿಗೇ ಗೊತ್ತು ಸರಸೂ."

ವಿಷಯ ಅಷ್ಟಕ್ಕೆ ಉಳಿಯಿತು.

ಎಲ್ಲರೂ ಕೂಡಿ ಗಿಡಗಳಿಗೆ ನೀರೆರೆದು ಕಳೆಗಳನ್ನು ಕೀಳತೊಡಗಿದರು. ಗೋಪಿ ಕಿತ್ತ ಕಳೆಯನ್ನು ಒಟ್ಟುಗೂಡಿಸುತ್ತ ಹೇಳಿದ. "ನಾನು ನೆಟ್ಟ ದಾಳಿಂಬೆ ಚೆನ್ನಾಗಿ ಚಿಗುರೊಡೆದಿದೆ."

"ಓ! ಅದಕ್ಕಿಂತ ಮುಂಚಿತವಾಗಿ ನನ್ನ ಸೀಬೆಯ ಗಿಡ ಹಣ್ಣು ಬಿಡುತ್ತದೆ!".

"ವಿಮಲೂ, ನೀನು ತಿಳಿದುಕೊಂಡಿರುವುದು ಹಾಗೆ. ನಂದೇ ಮೊದಲು ಬಿಡುತ್ತೆ!"

"ಇಲ್ಲ ಇಲ್ಲ." ತಲೆಯಲ್ಲಾಡಿಸುತ್ತಾ ವಿಮಲು ಹೇಳಿದಳು "ನಂದೇ

ಮೊದಲು!"

"ನೋಡೋಣ?"

ಚಪ್ಪರವನ್ನು ಸರಿಪಡಿಸುತ್ತಿದ್ದ ರವಿ "ಯಾರ ಗಿಡ ಹಣ್ಣು ಬಿಟ್ಟರೂ ಒಳ್ಳೆಯದು!" ಪುನಃ ಕಣ್ಣರಳಿಸಿ ಹೇಳಿದ "ಎರಡೂ ಬಿಟ್ಟರಂತೂ ಮತ್ತೂ ಒಳ್ಳೆಯದು!"

ಎಳೆನಗು ಎಲ್ಲೆಡೆಯೂ ಮೂಡಿತು.

"ಇಷ್ಟು ದಿನ ಸ್ಥಳವಿದ್ದರೂ ಬೆಳೆಯಲಿಲ್ಲವಲ್ಲಾ ಎಂದು ಈಗ ಎನ್ನಿಸುತ್ತೆ."

"ಮಲ್ಲಿಗೆಯ ಗಿಡಗಳನ್ನು ಹೆಚ್ಚಿಸಿಕೊಂಡರೆ ಒಳ್ಳೆಯ ಬೆಲೆಯಿದೆ."

"ನಿಜ ನಿಜ."

ಶಿವೆ ನೀರೆರೆಯುತ್ತಾ ಹೇಳಿದಳು. "ಈ ಮನೆ ಕಟ್ಟಿ ಎಂಟು ವರ್ಷಗಳಾಗುತ್ತಾ ಬಂತು. ಅಂದಿನಿಂದಲೂ ನೆಲ ಹಾಳುಬಿದ್ದಿತ್ತು."

"ನಾನು ಈ ಮನೆಗಿಂತ ಮೂರು ತಿಂಗಳು ದೊಡ್ಡವಳು!" ವಿಮಲೆ ನಗೆ ಚಟಾಕಿಯನ್ನು ಹಾರಿಸಿದಳು.

"ಹೌದು ಕಣೆ! ನಿನ್ನನ್ನು ತೊಟ್ಟಿಲು ಸಹಿತ ಮನೆ ತುಂಬಿಸಿ ಕೊಂಡಿದ್ದಾರಂತೆ" ನಕ್ಕು ನುಡಿದ ಗೋಪಿ.

"ನಿನ್ನನ್ನೂ ಮನೆ ತುಂಬಿಸಿಕೊಂಡಿದ್ದಾರೆ ಕಣೋ. ಪುಟ್ಟ ಪುಟ್ಟ ಹೆಜ್ಜೆಯಿಟ್ಟು ನೀನು ಅಮ್ಮ-ಅತ್ತೆಯರ ಕೈಹಿಡಿದುಕೊಂಡು ಒಳ ಬಂದದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ಅದಕ್ಕೇ ನೀನೂ ನಮ್ಮೊಂದಿಗುಳಿದಿದ್ದು!"

"ನನಗೆ ಅಪ್ಪ ಅಮ್ಮನ ಜ್ಞಾಪಕವೇ ಇಲ್ಲ." ಎಂದ ಗೋಪಿ.

"ಇಲ್ಲದಿರುವುದೇ ಲೇಸು ಬಿಡು."

"ಅಪ್ಪನೂ ಬರಲಿಲ್ಲ. ಮಾಮನೂ ಬರುತ್ತಾರೋ ಇಲ್ಲವೋ" ಸಪ್ಪೆ ಮೋರೆಯಿಂದ ನುಡಿದ ಶ್ಯಾಮು. ಮುಖದಲ್ಲಿ ನೋವಿನ ಛಾಯೆ ಸುಳಿದಳಿಯಿತು.

"ದೇವರಿದ್ದಾನೆ." ಶಿವೆಯ ದನಿ ಭಾರವಾಗಿದ್ದರೂ ಮಕ್ಕಳಿಗೆ ನಿರಾಸೆಯುಂಟುಮಾಡಲಿಚ್ಛಿಸದೆ ನುಡಿದಳು. ಮಾತು ಮುಗಿಯುವಷ್ಟರಲ್ಲಿ ಕಣ್ಣು ತೇವವಾಗಿತ್ತು, ಅದನ್ನು ತೋರಗೊಡದಂತೆ ಅತ್ತ ತಿರುಗಿ ಸೆರಗಿನ ತುದಿ

ಯಿಂದ ಒರಿಸಿಕೊಂಡಳು.

ದಿನದ ಗಾಲಿ ಎಂದಿನಂತೆ ಉರುಳಿ ಸಂಜೆಯು ತಿಳಿಗಾಳಿ ತಣ್ಣನೆ ಬೀಸ ತೊಡಗಿತು. ಅಂಗಳದಲ್ಲಿ ನಿಂತ ಶಿವೆಯ ಸೆರಗು ಗಾಳಿಯಾಟದಿಂದ ಬಾವುಟ ದಂತೆ ಹಾರಾಡುತ್ತಿದೆ. ಮಾಟವಾದ ಮುಖಕ್ಕೆ ಸೊಬಗನ್ನೊಡಿಸುತ್ತಿದ್ದ ತೆಳ್ಳನೆಯ ನೀಳವಾದ ಆಕೃತಿಯ ಹಿಂದೆ ನೀಳವಾದ ನೆರಳು ಗೋಡೆಯ ಮೇಲೆ ಅಂಗರಕ್ಷಕನಂತೆ ನಿಂತಿತ್ತು. ಒಡಲ ಬೇಗೆಗೆ ಭವಿಷ್ಯದ ಚಿಂತೆ ಇನ್ನಷ್ಟು ಕಿಚ್ಚನ್ನು ನೀಡುತ್ತಲೂ ತನುಮನಗಳು ನಸು ಕಂಪಿಸಿದುವು, ಶಿವೆ ತುಸು ಹೊತ್ತು ಹಾಗೇ ನಿಂತಳು.ದೃಷ್ಟಿ ಹತ್ತಿರದಲ್ಲಿದ್ದರೂ ಏನನ್ನೂ ನೋಡ ದಿತ್ತು. ಎದೆಯಾಳದಲ್ಲಿ ಸುಪ್ತವಾಗಿದ್ದ ಯೋಚನೆಯಲೆಗಳಿಂದ ಹೃದಯ ಭಾರವಾಗಿತ್ತು. ಹೊರಲಾರದೆ ಹೊತ್ತ ಕಾಲುಗಳು ಬಳುಕಿದಂತಾಗಿ ಮೆಟ್ಟಿಲ ಮೇಲೆ ಕುಳಿತುಕೊಂಡಳು. ಕೈಗಳೆರಡೂ ಮೊಣಕಾಲುಗಳನ್ನು ಬಳಸಿ ಹಿಡಿದುವು. ಮರದಡಿಯಲ್ಲಿ ಚಿಕ್ಕವರನ್ನು ಸುತ್ತಲೂ ಕುಳ್ಳಿರಿಸಿಕೊಂಡು ರವಿ ಪಾಠ ಹೇಳುತ್ತಿದ್ದ. ದೃಷ್ಟಿ ಅತ್ತ ತಾನಾಗಿ ಹೊರಳಿತು. ಗೋಪಿ ಕೊರಳು ಕೊಂಕಿಸಿಕೊಂಡು ತದೇಕಚಿತ್ತನಾಗಿ ಪಾಠವನ್ನು ಗಮನಿಸುತ್ತಿದ್ದ. ಸಧ್ಯ, ಆ ಚಿತ್ರ ಆರು ವರ್ಷಗಳ ಹಿಂದಿನ ಘಟನೆಯೊಂದರ ಕಡೆ ಗಮನವನ್ನು ಹೊರಳಿಸಿತು.

ಮೊದಲ ನೋಟದಿಂದಲೇ ಗೌರಿಗೂ ಶಿವಮ್ಮನಿಗೂ ಎಲ್ಲಿಲ್ಲದ ಸ್ನೇಹ ಮೊಳೆತಿತ್ತು. ಶಿವೆ ಅತ್ತೆ ಮನೆಯನ್ನು ಸೇರಿದಾಗ ಸಮವಯಸ್ಕಳಾದ ಗೌರಿಗಿನ್ನೂ ಆಗ ಮದುವೆಯಾಗಿರಲಿಲ್ಲ. ಎರಡು ವರ್ಷಗಳ ನಂತರ ಮದುವೆ ಯಾದ ಅವಳು ಎಡೆಬಿಡದೆ ಶಿವೆಯ ಒಡನಾಡಿಯಾಗಿದ್ದಳು. ಗಂಗಮ್ಮನ ಕಿರುಕುಳದಿಂದ ಸೂಸುತ್ತಿದ್ದ ಅತ್ತಿಗೆಯ ಕಂಬನಿಯನ್ನು ಒಲವಿನ ನುಡಿಗಳಿಂದ ತೊಡೆದು ಸಮಾಧಾನ ತುಂಬುತ್ತಿದ್ದ ಅವಳು ಪ್ರೇಮ ಸ್ನೇಹಗಳ ಸಂಜೀವಿನಿ. ಅವಳೊಮ್ಮೆ ಮಕ್ಕಳೊಂದಿಗೆ ಬಂದಿದ್ದಾಗ ಅತ್ತಿಗೆ ನಾದಿನಿಯರಿಬ್ಬರೂ ಹಿತ್ತಿಲ ಅಂಗಳದಲ್ಲಿ ಕುಳಿತಿದ್ದರು. ಮೂರು ವರ್ಷದ ಗೋಪಿಯನ್ನು ರವಿ ಬೆನ್ನಿನ ಮೇಲೆ ಕೂಡಿಸಿಕೊಂಡು ಉಪ್ಪಿನ ಮೂಟೆಯಾಟ ಆಡುತ್ತಿದ್ದ. ಹಸುಳೆಯಾದ ಗೋಪಿ ಕಿಲಕಿಲನೆ ನಕ್ಕು ನಲಿಯುತ್ತಿದ್ದ. ನೋಡುನೋಡುತ್ತ ಗೌರಿಯೆಂದಳು "ಅತ್ತಿಗೆ. ನಾನಂತೂ ಮಕ್ಕಳನ್ನು ಎತ್ತಿ ನಗಿಸಿ ನಲಿಸಲಿಲ್ಲ.

ಇದುವರೆಗೆ ಇಬ್ಬರೂ ಅರ್ಧ ಕಾಲವನ್ನು ಇಲ್ಲಿ ಕಳೆದಿದ್ದರೆ ಇನ್ನರ್ಧ ಕಾಲವನ್ನು ನೆರೆಹೊರೆಯ ಮಕ್ಕಳೊಂದಿಗೆ ಕಳೆದಿದ್ದಾರೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆ ಎಂಬುದು ಸುಳ್ಳಲ್ಲ."

"ನಿಜ ಗೌರಿ, ನಾವು ನಿಮಿತ್ತ ಮಾತ್ರ."

"ಏದಾದರೂ ನನ್ನ ಮಕ್ಕಳು ನಿನ್ನ ಉಡಿಯಲ್ಲಿ ಬೀಳಲಿದ್ದಾರೆ. ಹೇಗಿದ್ದರೂ ನಮ್ಮೂರಿನಲ್ಲಿ ಶಾಲೆಯಿಲ್ಲ. ಅವರು ನಾಲ್ಕಕ್ಷರ ಕಲಿಯ ಬೇಕಾದರೆ ಇಲ್ಲಿಯೇ ಕಲಿಯಬೇಕು."

"ಇರಲಿ, ಇಬ್ಬರೂ ಜಾಣ ಮಕ್ಕಳು."

"ವಿದ್ಯೆ ಕಲಿಯುವಷ್ಟು ಕಾಲ ಮಾತ್ರವಲ್ಲ, ಅನುಗಾಲವೂ!"

"ಓ! ಅದೇಕೆ ಹಾಗೆನ್ನುತ್ತಿ? ನಿನಗೆ ಮಕ್ಕಳು ಬೇಡವೇ?"

"ನಮಗೆ ಹೊತ್ತಿನ ನುಚ್ಚಿಗೂ ಗತಿಯಿಲ್ಲ. ಇನ್ನು ಮಕ್ಕಳನ್ನೂ ಇಟ್ಟುಕೊಂಡು ಏನು ಮಾಡಲಿ? ವಿದ್ಯೆ ಕಲಿತರೆ ಇಲ್ಲಿ ದುಡಿದು ಉಣ್ಣುತ್ತಾರೆ ಊರಲ್ಲಿದ್ದರೆ ಉಪವಾಸ ಬೀಳುವುದೇ ಸರಿ."

ಅದಾದ ಮರುವರ್ಷ ಗೌರಿ ಊರಿನಲ್ಲಿ ಕಾಹಿಲೆ ಹಿಡಿದು ಮಲಗಿದಳು. ಸ್ವಾಮಿ ಹೋಗಿ ಕರೆದುಕೊಂಡು ಬಂದ. ಔಷಧೋಪಚಾರ ಮಾಡಿದರೂ ಪ್ರಯೋಜನವಾಗದೆ ಮಕ್ಕಳನ್ನು ಶಿವೆಯ ಉಡಿಯಲ್ಲಿ ಹಾಕಿ ಗೌರಿ ಕಣ್ಮುಚ್ಚಿದಳು. ಅದನ್ನೇ ಯೋಚಿಸುತ್ತಾ ಕುಳಿತ ಶಿವೆ ಪ್ರಾಸಂಗಿಕವಾಗಿ ಅಂದು. ಅವಳಾಡಿದ ಮಾತು ಮರುವರ್ಷವೇ ಸತ್ಯವಾಗಿ ಪರಿಣಮಿಸಿದುದನ್ನು ನೆನೆಸಿಕೊಂಡಾಗ ಅವಳ ಅಂತರಾತ್ಮವೇ ನುಡಿದಿದ್ದಿರಬಹುದು ಎಂದುಕೊಂಡಳು. ಅವಳಿಗರಿಯದಂತೆ ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು. ಗೌರಿಯ ಅಕಳಂಕ ಮೂರ್ತಿ ಮನದಲೆಯಲ್ಲಿ ಮೂಡಿ ನಿಂತಿತು- "ನನ್ನ ಮಾತು ಹುಸಿಯಾಗಲಿಲ್ಲ ಅತ್ತಿಗೆ." ಕಿಲಕಿಲನೆ ನಕ್ಕಳು ಗೌರಿ,

"ಅಯ್ಯೊ...!"

"ಆಸೆ ಈಡೇರಿದ್ದರೂ ಅದಿನ್ನೂ ಅಪರಿಪೂರ್ಣ."

"......"

"ಕಾಲ ಪಕ್ವವಾಗಿ ಮಕ್ಕಳು ವಿದ್ಯಾವಂತರಾದರೆ ನಿನ್ನ ಶ್ರಮ ಸಾರ್ಥಕವಾಗುತ್ತದೆಯಲ್ಲದೆ ನನ್ನ ಮನದಳಲೂ ಈಡೇರಿದಂತೆ."

"ದೇವರಿದ್ದಾನೆ."

ಪಾಠ ಮುಗಿಸಿ ದೇವರ ಸ್ತುತಿಯನ್ನು ಹೇಳಿಕೊಡುತ್ತಿದ್ದ ರವಿ.ಎಲ್ಲರೂ ಒಂದಾದ ಮೇಲೊಂದರಂತೆ ಹತ್ತಾರು ದೇವರ ಸ್ತುತಿಗಳನ್ನು ಹಾಡಿದರು. ಎಳೆಯ ಕಂಠಗಳ ಸ್ತುತಿ ಕಿವಿಗಿಂಪಾಗಿ ಕೇಳಿಸಿತು. ಶಿವೆ ಹಾಗೇ ಕಿವಿಗೊಟ್ಟಳು. ಗೀತಾ ಪಠನ ಮಾಡಿ ಅರ್ಥ ವಿವರಿಸತೊಡಗಿದ ರವಿ.

ಯೇತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ॥
ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್
ಭವಾಮಿ ನ ಚಿರಾತ್ ಪಾರ್ಥ ಮಯ್ಯಾವೇಶಿತ ಚೇತಸಾಮ್

ಶ್ರೀ ಕೃಷ್ಣ ಭಗವಾನ್ ಉವಾಚ ಯೋಚನೆಯನ್ನು ನೂರುಗಾವುದ ಹಿಂದಕ್ಕೆ ಹೊಡೆದಟ್ಟಿತು. ತನುಮನಗಳು ಚಕಮಕಿಯಾದುವು.

೧೧

ಏಳು ಬೆಟ್ಟಗಳೊಡೆಯ ಶ್ರೀ ವೆಂಕಟೇಶ್ವರನ ದರ್ಶನ ಲಾಭಕ್ಕಾಗಿ ತಿರುಮಲೆಯಲ್ಲಿ ಬೆಳಗಿನಿಂದ ಬಹು ಮಂದಿ ಕಾದು ಬಳಲಿದ್ದಾರೆ. ಮಿಂದು ಮಡಿಯುಟ್ಟು ಪಾವನರಾದೆವೆಂಬಂತೆ ಹರ್ಷಚಿತ್ತರಾಗಿ ತಾ ಮುಂದು ನಾ ಮುಂದು ಎಂಬ ತರಾತುರಿಯಲ್ಲಿ ದಿವ್ಯದರ್ಶನಕ್ಕಾಗಿ ಕಾದವರಲ್ಲಿ ರಾಯನ ಸಂಸಾರವೂ ಒಂದು. ಭವ್ಯ ದೇವಮಂದಿರದಲ್ಲಿನ ಭೀಮಕಾಯನೂ ಅತುಳೈಶ್ವರ್ಯ ಸಂಪನ್ನನೂ ಸತ್ಯ ಸುಂದರನೂ ಆದ ಶ್ರೀ ವೆಂಕಟೇಶ್ವರನನ್ನು ಕಣ್ದಣಿಯೆ ನೋಡಿ ಆನಂದಿಸಿದ ಪುಟ್ಟಮ್ಮ ಮನಸ್ಸಿನ ಭಾರವನ್ನಿಳುಹಿ ಸಂತುಷ್ಟಳಾದಳು. ದೇಹ ಪ್ರಕೃತಿಯು ಕೊಂಚ ಸುಧಾರಿಸಿಕೊಂಡನಂತರ ವೆಂಕಟೇಶ್ವರನ ಸನ್ನಿಧಿಯಿಂದ ಯಾತ್ರೆಯನ್ನು ಪ್ರಾರಂಭಿಸಬೇಕೆಂದು ಸಂಕಲ್ಪಿಸಿಕೊಂಡಿದ್ದಳು. ದಿನದಿನವೂ ವಿಧವಿಧವಾದ ಅರ್ಚನೆಗಳನ್ನು ಮಾಡಿಸಿ ಮನಸ್ಸು ತೃಪ್ತಿಯಾಗುವವರೆಗೆ ಸೇವೆ ಸಲ್ಲಿಸಿದರು ಎಲ್ಲರೂ ಕೂಡಿ.

ನೆರೆದಿದ್ದ ಅಗಣಿತ ಜನಸ್ತೋಮದಲ್ಲಿ ನಾನಾ ವರ್ಣೀಯರು ನಾನಾ ವೇಷ ಭೂಷಣಗಳಿಂದಲಂಕೃತರಾಗಿ ನಾನಾ ಭಾಷೆಗಳಲ್ಲಿ ಮಾತನಾಡುತ್ತ ಕಣ್ಮನಗಳಿಗೆ ವರ್ಣರಂಜನೆಯನ್ನುಂಟು ಮಾಡಿದ್ದರು. ಯಾತ್ರಿಕರಲ್ಲಿ ಹಲವರು ವಜ್ರಾಭರಣಗಳಿಂದ ಅಲಂಕೃತರಾಗಿದ್ದ ರೀತಿ ಒಡವೆ ವಸ್ತುಗಳ ತೋರುಗಾಣಿಕೆಗಾಗಿಯೇ ಇವರಿದ್ದಾರೆಯೋ ಎಂದು ಎಂಥ ದಡ್ಡನೂ ಆಶ್ಚರ್ಯಪಡುವಷ್ಟು ಜಗಜಗಿಸುತ್ತಿದ್ದರು! ಜ್ಞಾನಾಜ್ಞಾನಗಳ ಪರಿವೆ ಇಲ್ಲದ ಜಡಮತಿಗಳಾಗಿ ತಮ್ಮದೇ ಆದ ಸಾಮ್ರಾಜ್ಯದಲ್ಲಿ ವಿಹರಿಸಿ ಹೋಗುವ ಮಾನವರೂಪಿಗಳು! ಒಟ್ಟಿನಲ್ಲಿ ಪರಿಪರಿಯ ವರ್ಣರಾಶಿ: ನೊಡೆ, ನೋಡೆ ನಾನಾವಿಧವಾದ ವೇಷ ಭೂಷಣಗಳಲ್ಲಿ ಚಿತ್ರವಿಚಿತ್ರ ಭಾವಭಂಗಿಯಲ್ಲಿ ಭಾರತೀಯರ ಸಂಸ್ಕೃತಿಯನ್ನೇ ಅಲ್ಲಿ ಪ್ರದರ್ಶಿಸಿದಂತಿತ್ತು.

ಎಲ್ಲರೂ ಪೂಜೆಯನ್ನು ಮುಗಿಸಿಕೊಂಡು ಮನೆಯ ಆವರಣಕ್ಕೆ ಬರುತ್ತಲೂ ಎದುರಾದ ಗ್ರಾಮ್ಯ ಮಹಿಳೆಯೊಬ್ಬಳು ಕೊಂಕುಳಲ್ಲಿ ಮಗು

ವೊಂದನ್ನು ಎತ್ತಿಕೊಂಡಿದ್ದಳು. ಆರೇಳು ತಿಂಗಳ ಹಸುಗೂಸು ದಟ್ಟಪುಷ್ಟಿಯಾಗಿ ಮುದ್ದು ಮುದ್ದಾಗಿತ್ತು. ಮಗುವನ್ನು ಕಾಣುತ್ತಲೂ ಶಾರದೆಯ ಜೀವ ಮಿಡಿಯಿತು. ಮಗುವನ್ನು ನೋಡುತ್ತಾ ಮಾಲಿನಿಯೆಂದಳು "ಅತ್ತಿಗೆ, ನೀವು ಇನ್ನೊಂದಾವರ್ತಿ ಇಲ್ಲಿಗೆ ಬರುವಾಗ ಇಂತಹ ಮಗುವನ್ನು ಎತ್ತಿಕೊಂಡು ಬರುತ್ತೀರಿ!" ಎಲ್ಲರೆದುರಿಗೆ ಮಾಲಿನಿಯೆಂದ ಮಾತು ಶಾರದೆಯ ಮುಖದಲ್ಲಿ ಲಜ್ಜೆಯನ್ನು ಮೂಡಿಸಿತು. ಆದರೂ ಅದನ್ನು ತೋರಗೊಡಧೆ "ನೀನೂ ಸಹ" ಎಂದಳು.

"ಈಗಲೇ ನನಗದರ ಅಗತ್ಯವಿಲ್ಲ."

"ಅಂತೂ ಬೇಕು ತಾನೆ?"

"ದೈವೇಚ್ಛೆ ಇದ್ದಂತಾಗಲಿ."

"ದೇವರ ಸ್ಥಳದಲ್ಲಿ ಅತಿವರ್ತನೆ ಬೇಡ." ಎಂದು ಪುಟ್ಟಮ್ಮ ಅಂದೇ ಎಚ್ಚರಿಸಿದ್ದುದರಿಂದ ಲಜ್ಜೆಯಿಂದಾದರೂ 'ಬೇಡ' ಎನ್ನಲು ಇಬ್ಬರಿಗೂ ಧೈರ್ಯವಾಗಲಿಲ್ಲ. ತಿಮ್ಮಪ್ಪನಿಗೆ ಕೋಪ ಬರುವ ರೀತಿಯಲ್ಲಿ ವರ್ತಿಸಬಾರದೆಂದು ಪುಟ್ಟಮ್ಮ ಆಗಾಗ ಎಚ್ಚರಿಸುತ್ತಿದ್ದಳು. ಹುಡುಗಿಯರು ಎಲ್ಲರೆದುರಿಗೆ ನಗೆ ಪಾಟಲಿಗೊಳಗಾದರೂ ಬೇಡ ಎನ್ನಲಿಲ್ಲ. ಅಲ್ಲಿದ್ದ ಹೆಮ್ಮರ ದಡಿಯಲ್ಲಿ ಗಾಳಿಗೆ ಮೈಯೊಡ್ಡಿ ಎಲ್ಲರೂ ಕುಳಿತುಕೊಂಡರು. ಬಲಗಡೆ ನೂತನ ಗೃಹ ಶ್ರೇಣಿಗಳು ಸಾಲು ಸಾಲಾಗಿ ನಿಂತು ಮನವನ್ನಾಕರ್ಷಿಸುತ್ತಿದ್ದುವು. ಎದುರಿಗೆ ವಿಶಾಲವಾದ ಸರೋವರ. ಅಲ್ಲಲ್ಲಿ ತಳಿರನ್ನು ಹೊತ್ತ ಹೆಮ್ಮರಗಳು. ಬೀಸಿ ಬರುವ ತಂಗಾಳಿಯು ಸರೋವರದ ತಂಪನ್ನು ತೀಡಿ ತರುತಿತ್ತು. ತುಸುದೂರದಲ್ಲಿ ಮಿರುಗುವ ದುಂಡನೆಯ ಕಲ್ಲುಗಳನ್ನು ಸಂಗ್ರಹಿಸುವ ಮಹಾಕಾರ್ಯದಲ್ಲಿ ತನ್ಮಯಳಾಗಿದ್ದ ಚಂದಿರೆ ಬೊಗಸೆಯ ತುಂಬ ಕಲ್ಲುಗಳನ್ನು ಹೆಕ್ಕಿಕೊಂಡು ಓಡಿ ಬಂದಳು "ಮಾಮಾ. ಇಲ್ಲಿ ನೋಡಿ!" ಉಕ್ಕಿ ಬಂದ ಸಂತಸದಿಂದ ಕಣ್ಣುಗಳು ಅರಳಿದ್ದುವು. ಪಕ್ಕದಲ್ಲಿ ಕುಳಿತುಕೊಂಡು ಕಲ್ಲುಗಳಲ್ಲಿ ಕೈಯಾಡಿಸುತ್ತ ಎಲ್ಲರ ಗಮನವನ್ನು ಸೆಳೆಯಲು ಮತ್ತೊಮ್ಮೆ ಗಟ್ಟಿಯಾಗಿ ಹೇಳಿದಳು, "ಮಾಮಾ, ಎಷ್ಟು ಸೊಗಸಾಗಿವೆ!"

"ಹೌದು ಮಗೂ." ಸಮರ್ಥಿಸಿದ ಮಾಧು ಮಗುವನ್ನು ನಲ್ಮೆಯಿಂದ ಮುದ್ದಿಸಿದ. ಗಾಳಿಗುದುರಿದ ಮಾಮರದ ಎಲೆಯ ಗೊಂಚಲೊಂದು ಚಪ್ಪನೆ

ಅವಳ ಮೈಮೇಲೆ ಬಿದ್ದಿತು. ಮೊದಲು ಮಿಡುಕಿಬಿದ್ದ ಅವಳು ಅನಂತರ ಕಿಲಕಿಲನೆ ನಗತೊಡಗಿದಳು. ಅದನ್ನು ಪುನಃ ಅವಳ ಮೇಲೆ ಹಾಕಿ ಮತ್ತಷ್ಟು ನಗಿಸಿದ ಮಾಧು.

"ಮಗೂ, ನಿನ್ನ ಅಮ್ಮ ಮದರಾಸಿಗೆ ಹೋಗಲಿ: ನೀನು ನಮ್ಮೊಂದಿಗೆ ಮೈಸೂರಿಗೆ ಬಾ." ಮಾಧು ಅಂದ.

"ಬಂದರೆ ಏನು ಕೊಡುತ್ತೀರಿ?"

"ನೀನು ಕೇಳಿದ್ದೆಲ್ಲಾ ಉಂಟು, ಎಂದಿಟ್ಟುಕೊ."

"ಅನಂತರ ಅದನ್ನೆಲ್ಲಾ ಎತ್ತಿಕೊಂಡು ಮದರಾಸಿಗೆ ಹೋಗುವೆ!"

ಮಾತು ಕೇಳಿ ಎಲ್ಲರೂ ಗೊಳ್ಳನೆ ನಕ್ಕರು. ಚಂದಿರೆಯೂ ಒಂದು ಗೂಡಿ ನಕ್ಕಳು. ಮರುದಿನ ಮಧ್ಯಾಹ್ನ ಅಲ್ಲಿಂದ ಮದರಾಸಿಗೆ ಹೊರಡುವು ದೆಂದು ತೀರ್ಮಾನಿಸಿದರು. ಪುಟ್ಟಮ್ಮನ ಇಚ್ಛೆಯಂತೆ ಏಳು ದಿನಗಳ ಸೇವೆ ಸಂದಿತು. ಸಂಜೆಯ ಸಮಯಕ್ಕೆ ಚಂದಿರೆಗೆ ಕೆಲವು ಆಟದ ಸಾಮಾನನ್ನು ಕೊಳ್ಳುವ ಕಾರ್ಯಕ್ರಮವಿತ್ತು. ಬೆಳಗಿನ ಅರ್ಚನೆಯನ್ನು ಮುಗಿಸಿಕೊಂಡು ಮದರಾಸಿಗಭಿಮುಖವಾಗಿ ಹೊರಡಲು ಅಣಿಮಾಡಿಕೊಂಡರು.

ಮರುದಿನ ದೇವಸ್ಥಾನದಿಂದ ಪೂಜೆಯನ್ನು ಮುಗಿಸಿಕೊಂಡು ಬರುತ್ತಿ ರುವಾಗ ಸರೋವರದ ದಂಡೆಯ ಮೇಲೆ ಜನ ಗಾಬರಿಯಿಂದ ಅತ್ತಿತ್ತ ಓಡಾಡುತ್ತಿದ್ದುದನ್ನು ಗಮನಿಸಿ ಮಾಧು ರಾಮಕೃಷ್ಣನೊಂದಿಗೆ ವಿಚಾರಿಸಲು ಹೋದ. ಅವರು ಆ ಕಡೆ ಹೋದುದನ್ನು ಕಂಡ ಚಂದಿರೆಯು "ಅಪ್ಪಾ, ನಾನು ಬರುತ್ತೇನೆ," ಎಂದು ಕೂಗಲಾರಂಭಿಸಿದಳು,

"ಬೇಡ ಮಗೂ. ನಾನೀಗ ಬಂದು ಬಿಡುವೆ." ಎಂದ ರಾಮಕೃಷ್ಣ.

ಬೇಡವೆಂದು ತಡೆಯುತ್ತ ಪುಟ್ಟಮ್ಮ ಮಗುವನ್ನು ಹಿಡಿದುಕೊಂಡಳು. ಎಲ್ಲರ ಗಮನವೂ ಅತ್ತ ಹರಿಯಿತು. ಪಶುಪತಿ ಚಂದಿರೆಯನ್ನು ಎದೆಗೆತ್ತಿ ಕೊಂಡು ಹೇಳಿದ "ಜನರ ತೀವ್ರಗತಿಯನ್ನು ಗಮನಿಸಿದರೆ ಯಾರೋ ಕೆರೆ ಯಲ್ಲಿ ಮುಳುಗಿರುವಂತಿದೆ!" ತಕ್ಷಣ ಎಲ್ಲರ ನೋಟವೂ ಗಾಬರಿಯಿಂದ ಅತ್ತ ಹರಿಯಿತು. ಜನ ಮತ್ತೂ ತೀವ್ರಗತಿಯಿಂದ ಓಡಾಡಹತ್ತಿದರು, ಇನ್ನಷ್ಟು ಹೊತ್ತಿನಲ್ಲಿ ಅಲ್ಲಿ ಜನರು ದಟ್ಟವಾಗಿ ನೆರೆಯಲಾರಂಭಿಸಿದರು. ದೋಣಿಯಾಳುಗಳು ಪರಿಶೋಧನೆಯ ಕಾರ್ಯದಲ್ಲಿ ತೊಡಗಿದರು. ಅತ್ತಲಾಗಿ

ಹೋದ ರಾಮಕೃಷ್ಣ ಮತ್ತು ಮಾಧವರಾಯರಿನ್ನೂ ಹಿಂದಿರುಗಿರಲಿಲ್ಲ. ಪುಟ್ಟಮ್ಮ ದಾರಿಯ ಪಕ್ಕದಲ್ಲಿದ್ದ ಕಲ್ಲಿನ ಮೇಲೆ ಕುಳಿತುಕೊಂಡಳು. ಬೀಸಿ ಬರುತ್ತಿದ್ದ ತಂಗಾಳಿಯು ದೂರದಲ್ಲಿನ ಕ್ರಂದನವನ್ನು ಮೆಲ್ಲನೆ ಹೊತ್ತು ತಂದಿತು.

"ಯಾರೋ ಅಳುತ್ತಿದ್ದಾರೆ. ಬಹುಶಃ ಮುಳುಗಿದವರ ಕುಟುಂಬ ದವರಿರಬೇಕು". ಎಂದು ನಿಟ್ಟುಸಿರು ಬಿಟ್ಟಳು ಸೀತೆ.

"ಸ್ಥಳೀಕರೇ ಇರಬೇಕೆಂದು ತೋರುತ್ತದೆ, ಛೀ, ತುಂಬ ಅನ್ಯಾಯ." ಎಂದು ಮರುಗಿದಳು ಪುಟ್ಟಮ್ಮ.

ತುಸು ಹೊತ್ತಿನಲ್ಲಿ ಮಾಧವರಾಯ ರಾಮಕೃಷ್ಣನೊಂದಿಗೆ ಹಿಂದಿರುಗಿ ಬಂದು ಹೇಳಿದ "ಕೊಳದಲ್ಲಿ ಮುಳುಗಿದ ವ್ಯಕ್ತಿ ಬೆಂಗಳೂರಿನವರು. ಇದೇ ತಾನೇ ಪಿ. ಹೆಚ್. ಡಿ. ಪರೀಕ್ಷೆಯನ್ನು ಮುಗಿಸಿದ ಓದು ಸುಸೂತ್ರವಾಗಿ ಸಾಗಿತೆಂದು ಸಂತೋಷದಿಂದ ದೇವರ ದರ್ಶನಕ್ಕೆ ಬಂದವರು. ಜೊತೆಗೆ ತಾಯಿ ತಂದೆಯರಿದ್ದಾರೆ. ಇಂದು ಬೆಳಗಿನ ಬಸ್ಸಿಗೆ ಹೊರಡಬೇಕಾಗಿದ್ದ ಅವರನ್ನು ನಿಲ್ಲಿಸಿ, ಈ ದಿನವಿದ್ದು ಹೋಗೋಣವೆಂದು ಮಗ ಹೇಳಿದನಂತೆ. ಪಾಪ, ನಿನ್ನೆಯೇ ಅವರು ಅರ್ಚನೆ ಮುಗಿಸಿದ್ದಾರೆ. ವೃದ್ಧ ದಂಪತಿಗಳ ನ್ನುಳಿದು ಇನ್ಯಾರೂ ಇಲ್ಲಿ ಇಲ್ಲದಿರುವುದರಿಂದ ಸಹಾಯಕರಿಲ್ಲದಂತಾಗಿದೆ. ವ್ಯಕ್ತಿ ಮುಳುಗಿ ಅರ್ಧಗಂಟೆ ಕಳೆಯಿತು. ಸರೋವರ ಆಳವಾಗಿರುವುದರಿಂದ ಎತ್ತುವುದು ಸುಲಭವಲ್ಲ. ಛೆ! ಅವರ ಗೋಳು ಹೇಳತೀರದು. ದೇವರೇ ಅವರನ್ನು ಕಾಪಾಡಬೇಕು. ನಾವು ಅಲ್ಲಿಗೆ ಹೋಗಿ ಏನಾದರೂ ಸಹಾಯ ಮಾಡುತ್ತೇವೆ. ನೀವೆಲ್ಲರೂ ಮನೆಗೆ ಹೋಗಿರಿ." ವಿಷಯ ತಿಳಿದು ಎಲ್ಲರ ಮುಖಗಳೂ ಕಪ್ಪಿಟ್ಟುವು. ಮರ್ಮರ ಮರುಗಿದ ಹೃದಯಗಳು ಕರಗಿ ನೀರಾದವು.

ಮಾಧು ರಾಮಕೃಷ್ಣನೊಂದಿಗೆ ಪುಷ್ಕರಣಿ ತೀರಕ್ಕೆ ಹಿಂದಿರುಗಿದ ನಂತರ ಪುಟ್ಟಮ್ಮ ಎಲ್ಲರೊಡನೆ ಬಿಡಾರಕ್ಕೆ ಹಿಂದಿರುಗಿದಳು. ತೀರದಲ್ಲಿ ಜನ ಸ್ತೋಮ ತುಂಬಿ ನೆರೆದಿತ್ತು. ಪುಟ್ಟಮ್ಮ ಶೋಕತಪ್ತ ಹೃದಯದಿಂದ ಮೆಟ್ಟಿಲಿನ ಮೇಲೆ ಕುಳಿತುಕೊಂಡಳು. ಎಡಗೈಯಾಶ್ರಯ ಪಡೆದು ಮಸ್ತ ಕವು ವಿರಮಿಸಿತ್ತು. ಎಷ್ಟೊತ್ತಾದರೂ ಕೊಳದ ಕಡೆ ಹೋದವರು ಹಿಂದಿರುಗ

ಲಿಲ್ಲ. ಹೋಟೆಲಿನಿಂದ ಬಂದ ಊಟ ತಣ್ಣಗಾಗಿತ್ತು.

ಮಧ್ಯಾಹ್ನದ ನಂತರ ನತದೃಷ್ಟ ತಂದೆತಾಯಿಗಳನ್ನು ಮಾಧು ಮತ್ತು ರಾಮಕೃಷ್ಣರು ಮನೆಯ ಕಡೆ ಕರೆತರುತಿದ್ದುದನ್ನು ನೋಡಿ ಪುಟ್ಟಮ್ಮ ಕಂಗಾಲಾದಳು. ಅವರು ತಮ್ಮ ನೆರೆಯ ಬಿಡಾರದವರೇ ಆಗಿದ್ದು ಮೂರು ದಿನಗಳ ಹಿಂದೆ ಪರಿಚಯುವೂ ಆಗಿತ್ತು. ಪುಟ್ಟಮ್ಮ ಅವರ ಬಳಿ ಇದ್ದು ಸಮಾಧಾನಗೊಳಿಸಲು ಸರ್ವ ಪ್ರಯತ್ನ ಪಟ್ಟಳು. ಅವರ ಬಂಧುಗಳಿಗೆ ತಾರುಕೊಟ್ಟು ವೃದ್ಧ ದಂಪತಿಗಳನ್ನು ನೋಡಿಕೊಳ್ಳುವುದಕ್ಕೂ, ಶವದ ಶೋಧನೆಗೂ ದೇವಾಲಯದ ಅಧಿಕಾರಿ ವರ್ಗದವರು ಸತತ ಶ್ರಮಿಸಿದರು. ಪುಟ್ಟಮ್ಮ ಮಾಧು ರಾಮಕೃಷ್ಣರೊಂದಿಗೆ ಅವರ ಬಿಡದಿಯಲ್ಲಿ ಉಳಿದಳು. ಕತ್ತಲಾದುದರಿಂದ ಶವದ ಶೋಧನೆ ನಿಂತಿತು.

ದೇವರ ದರ್ಶನಕ್ಕಾಗಿ ಬಂದವರಿಗೆ ಸ್ವರ್ಗಪ್ರಾಪ್ತಿಯಾಯಿತೇ? ಎಂದು ಮರುಗಿದರು ಜನ. ಬೀಷಣ ರಾತ್ರಿ ದೀರ್ಘವಾಗಿ ಉರುಳಿತು. ನಸು ಬೆಳಕು ಪಸರಿಸಿತೋ ಇಲ್ಲವೋ ಜನ ಮತ್ತೆ ತೀರದ ಮೇಲೆ ನೆರೆಯಲಾರಂಭಿಸಿದರು. ಶವವು ಮೇಲೆದ್ದು ತೇಲಲಿಲ್ಲವಾದರೂ ಜನರು ನಿಂತು ನೋಡುವುದರಲ್ಲಿ ಬೇಸರಿಸಲಿಲ್ಲ. ಬಿಡಾರದ ಬಳಿಯೂ ತಂಡೋಪತಂಡವಾಗಿ ನಾಟಕ ಸಿನಿಮಾ ಮಂದಿರಗಳ ಮುಂದೆ ನೆರೆಯುವಂತೆ ಜಡತೆಯೋ ಮೈವೆತ್ತು ಬಂದ ಜನತೆ ನಿಂತು ನೋಡುವುದರಲ್ಲಿ ತಲ್ಲೀನವಾಗಿತ್ತು. ಪುಟ್ಟಮ್ಮ ತಡೆಯಲಾರದೆ ಕದ ಮುಚ್ಚಿಕೊಂಡಳು. ಅಲ್ಲಿಗೂ ಬಿಡದೆ ಕಿಟಕಿಯಲ್ಲಿ ಹಣಿಕಿದರು ಜನ. ಕೊನೆಗೂ ಅದನ್ನೂ ಮುಚ್ಚಬೇಕಾಯಿತು.

ಎಂದಿನಂತೆ ಇಂದೂ ಪೂರ್ವದಿಶೆಯಲ್ಲಿ ಪ್ರಕಾಶಮಾನವಾದ ಬಾಲರವಿ ಬಾನೇರತೊಡಗಿದ್ದಾನೆ, ಆದರೆ ತಿರುಮಲೆಯ ವಾತಾವರಣ ಎಂದಿನಂತಿಲ್ಲದೆ ಕಲಕಿ ಹೋಗಿತ್ತು. ಮನೆಯಂಗಳದಲ್ಲಿ ನೆರೆದ ಜನರನ್ನು ನೋಡಿ ಬೇಸರದಿಂದ ಸೀತೆ ಶಾರದೆಯರು ಕದ ಮುಚ್ಚಿಕೊಂಡರು. ಚಂದಿರೆಗೆ ಇದೊಂದು ನುಂಗಲಾರದ ತುತ್ತಿನಂತಾಯಿತು. ಸುತ್ತುಮುತ್ತು ಓಡಾಡಿ ಕಿಟಕಿಯಿಂದ ಹಣಿಕಿ ನೋಡಿ ಗಾಬರಿಯಿಂದ "ಏಕೆ ಇಷ್ಟೊಂದು ಮಂದಿ ಬಂದಿದ್ದಾರೆ ?" ಎಂದು ಕೇಳತೊಡಗಿದಳು. ಮುಖದಲ್ಲಿ ಎಲ್ಲಿಲ್ಲದ ಆಶ್ಚರ್ಯ ಮೂಡಿತ್ತು.

"ಇಲ್ಲಿ ತಮಾಷೆ ನೋಡಲು ಬಂದಿದ್ದಾರೆ!" ತಂಟಿಕಚ್ಚಿ ನುಡಿದಳು ಮಾಲಿನಿ.

"ಎಂಥ ತಮಾಷೆ?" ಪ್ರಶ್ನೆಯಲ್ಲಿ ಬಾಲಸಹಜವಾದ ಮುಗ್ಧತೆ ತುಂಬಿ ತುಳುಕುತಿತ್ತು.

"ಇನ್ನೊಬ್ಬರ ಮನಸ್ಸನ್ನು ನೋಯಿಸಬಾರದೆಂಬುದು ಈ ಜಡಮತಿಗಳಿಗೆ ಅರ್ಥವಾಗುವುದಿಲ್ಲ ಕಂಡೆಯಾ" ಶಾರದೆಯ ಮುಖ ಅನುಕಂಪದಿಂದ ವಿವರ್ಣವಾಗಿತ್ತು. ವಿಷಯ ಒಗಟಾಗಿದ್ದು ಶಾರದೆಯ ಮಾತು ಅರ್ಥವಾಗದುದರಿಂದ ಚಂದಿರೆ ನಿರಿಯನ್ನು ಹಿಡಿದು ಜಗ್ಗಿ "ಏಕೆ ಬಂದಿದ್ದಾರೆ? ಸರಿಯಾಗಿ ಹೇಳಿರಿ." ಎಂದು ಪುನಃ ಕೇಳಿದಳು. ಶಾರದೆಯು ವಗುವನ್ನು ತಬ್ಬಿಕೊಂಡು ಹೇಳಿದಳು "ನಿನ್ನೆ ಪುಷ್ಕರಣಿಯಲ್ಲಿ ಮುಳುಗಿ ದುರಂತಕ್ಕೊಳಗಾದ ಮಗನಿಗಾಗಿ ತಂದೆ ತಾಯಿಯರು ದುಃಖಿಸುತ್ತಿದ್ದಾರಷ್ಟೆ? ಅವರನ್ನು ನೋಡಲು ಈ ಜನ ಇಲ್ಲಿ ನೆರೆಯುತ್ತಿದ್ದಾರೆ."

"ಅದೇಕೆ?" ಶಿಶು ಸಹಜವಾದ ಮುಗ್ಧವಾಣಿ ಮತ್ತೆ ಮೊಳಗಿತು.

"ಅದೇಕೆಂದು ಹೇಳಲಿ ಮಗೂ? ಸಂಸ್ಕಾರವಿಲ್ಲದ ಜನರಿಗೆ ನಡವಳಿಕೆ ತಿಳಿಯುವುದಿಲ್ಲ. ಆದ್ದರಿಂದಲೇ ಇಲ್ಲಿ ನೆರೆದು ದುಃಖಿತರಿಗೆ ಅಡಚಣೆಯುಂಟು ಮಾಡುವುದೂ ಅಲ್ಲದೆ ತಮ್ಮ ಕಾಲವನ್ನೂ ವ್ಯಯ ಮಾಡುತ್ತಿದ್ದಾರೆ." ಎಂದು ತಿಳಿಯ ಹೇಳಿದಳು ಶಾರದೆ.

ಬಿಸಿಲು ಏರುತ್ತಿದ್ದಂತೆ ಶವದ ಪರಿಶೋಧನೆಯು ಬಿರುಸಿನಿಂದ ಸಾಗತೊಡಗಿತು. ದೋಣಿಯಾಳುಗಳು ಉದ್ದವಾದ ಬಿದಿರಿನ ಗಳುಗಳಿಂದ ಹುಟ್ಟು ಹಾಕುತ್ತಾ ಸರ್ವ ಪ್ರಯತ್ನಪಡುತ್ತಿದ್ದರು. ತಾರು ಮುಟ್ಟಿದೊಡನೆಯೇ ಹೊರಟ ಹತ್ತಿರದ ಬಂಧುಗಳು ಬಂದು ತಲುಪಿದಾಗಲೂ ಶವದ ಶೋಧನೆ ನಡೆದೇಯಿತ್ತು. ಮಧ್ಯಾಹ್ನದ ಎರಡು ಗಂಟೆಯ ಸುಮಾರಿಗೆ ಅಂಬಿಗರು ಬಹು ಸಾಹಸದಿಂದ ಶವವನ್ನು ಗೊತ್ತು ಹಚ್ಚಿ ತೀರಕ್ಕೆ ತಂದರು. ದೇವಾಲಯದ ಅಧಿಕಾರಿವರ್ಗದವರೂ ರಾಯನ ಸಂಸಾರದವರೂ ಮೃತನ ತಂದೆ ತಾಯಿಯರನ್ನು ಶವದೊಂದಿಗೆ ಕಂಬನಿದುಂಬಿ ಬೀಳ್ಕೊಟ್ಟರು. ನೆರೆದ ಜನ ಹರಕೆ ಸಲ್ಲಿಸಿದವನಿಗೆ ದುರ್ವಿಧಿ ಕತ್ತು ಹಿಸುಕುವುದೇ? ಎಂದು ಮರ್ಮರ ವರ್ಗಿವರು. ಹಿಂದಿನ ದಿನದಿಂದಲೂ ಗಲಾಟೆಯಿಂದ ತುಂಬಿದ್ದ ವಾತಾವರಣ ಒಮ್ಮೆಲೇ

ತಿಳಿಯಾಯಿತಾದರೂ ಮನಸ್ಸಿನ ಮೇಲಿನ ಕಹಿ ಅಚ್ಚಳಿಯದಿತ್ತು. ಪುಟ್ಟಮ್ಮ ತೀವ್ರ ತಲೆನೋವಿನಿಂದ ಮಲಗಿದ್ದರಿಂದ ಅಂದು ಹೊರಡಲಾಗಲಿಲ್ಲ. ರಾಯ ಚಂದಿರೆ ಮತ್ತು ಭಾವಂದಿರೊಡನೆ ಹೊರಗಡೆ ಅಡ್ಡಾಡಿ ಬರಲು ಹೊರಟ. ಸೀತೆ, ಶಾರದೆ ಮಾಲಿನಿಯರು ಒತ್ತಟ್ಟಿಗೆ ಕುಳಿತುಕೊಂಡರು. ಎಷ್ಟು ಪ್ರಯತ್ನಪಟ್ಟರೂ ಮನಸ್ಸನ್ನು ಆ ದುರ್ಭರ ಪ್ರಸಂಗದಿಂದ ಹಿಂದಿರುಗಿಸ ಲಾಗಲಿಲ್ಲ. ಎದೆಯ ಕಡಲಿನ ಅಲೆಗಳು ಅಲ್ಲೋಲಕಲ್ಲೋಲವಾಗಿದ್ದುವು.

ಶವದೊಂದಿಗೆ ಪಯಣದ ಹಾದಿಯಲ್ಲಿರುವ ಅವರಿಗೆ ಈ ಸಂಜೆ ಎಷ್ಟು ಕರ್ಕಶವಾಗಿ ತೋರಬಹುದು ? ಈಶ್ವರಾ ! ನೀನೇ ರಕ್ಷೆ." ಎಂದಳು ಶಾರದೆ, ಕಣ್ಣಂಚಿನಲ್ಲಿ ಹನಿಯಾಡುತಿತ್ತು.

೧೨

ಹಸುರು ವಾಣಿಯ ಚಪ್ಪರ ನಳನಳಿಸುತಿತ್ತು.

ಬಣ್ಣಬಣ್ಣದುಡಿಗೆ ತೊಡಿಗೆಗಳಿಂದಲಂಕೃತರಾದ ಜನ ಮದುವೆಗಾಗಿ ಒಂದುಗೂಡಿ ನೆರೆದಿದ್ದಾರೆ. ಹಸೆಮಣೆಯ ಹೆಣ್ಣಾಗಿ ಕಲ್ಯಾಣಿ ಸರ್ವಾಲಂಕಾರ ಭೂಷಿತೆಯಾಗಿದ್ದಾಳೆ. ಶಿವೆ ಮಕ್ಕಳೈವರೊಂದಿಗೆ ಬಂದು ಒಂದು ವಾರ ವಾಗಿತ್ತು. ತವರು ಮನೆಯವರ ಮನನೋಯಬಾರದೆಂದು ಕುಮಾರ ನೊಂದಿಗೆ ಬಂದಿದ್ದರೂ ತನ್ನೀಸ್ಥಿತಿಯಲ್ಲಿ ಬಂಧು ಬಳಗದವರ ಮುಂದೆ ಕಾಣಿಸಿಕೊಳ್ಳಲು ಇಷ್ಟವಿರಲಿಲ್ಲ. ಚಿಕ್ಕಮ್ಮ ಬಟ್ಟೆಬರೆಗಳನ್ನು ಕೊಳ್ಳಲು ಮೈಸೂರಿಗೆ ಬಂದಿದ್ದಾಗ ನಾಲ್ಕು ದಿನ ಮುಂಚಿತವಾಗಿ ಬರಲು ಕಡ್ಡಾಯದ ಆಹ್ವಾನ ನೀಡಿದ್ದಳು.

"ಅಕ್ಕಾ. ಭಾವೀ ಭಾವ ತುಂಬ ಒಳ್ಳೆಯವನು, ಸಾಧುಸ್ವಭಾವದ ಮನುಷ್ಯ, ರೂಪವಂತ ಹಣವಂತ ಗುಣವಂತ ಕಲ್ಯಾಣಿ ಪುಣ್ಯವಂತೆ !" ಎಂದು ಮುಂತಾಗಿ ಕುಮಾರ ಅಂದು ವರ್ಣಿಸಿದಾಗ ಉಂಟಾದ ಸಂತೋಷ ವೆಷ್ಟೋ ಅಷ್ಟೇ ತನ್ನ ಸ್ಥಿತಿ ಮನವನ್ನು ಹಿಂಡಿತ್ತು. ಆದರೂ ಅದನ್ನು ತೋರ ಗೊಡದೆ ತಮ್ಮನ ಮುಂದೆ ಸಂತೋಷವನ್ನು ವ್ಯಕ್ತಪಡಿಸಬೇಕಾದಾಗ ಅದೆಷ್ಟು ನೋವನ್ನು ಸಹಿಸಬೇಕಾಗಿ ಬಂತು ? ಅಕ್ಕ ಹೊಸ ಭಾವನ ಹಿರಿಮೆಗೆ ಕರುಬಿ ಮುಖ ಚಿಕ್ಕದು ಮಾಡಿಕೊಂಡಳೆಂದು ತಮ್ಮ ತಿಳಿದುಕೊಂಡರೇನು ಗತಿ ?.... ಶಿವೆ ಪ್ರಯತ್ನಪೂರ್ವಕವಾಗಿ ಮುಖದಲ್ಲಿ ಎಳೆನಗುವನ್ನು ಸೂಸಿ "ದೇವರ ದಯದಿಂದ ಲಗ್ನಫಲ ಕೂಡಿ ಬಂತು. ದಂಪತಿಗಳು ಸುಖವಾಗಿದ್ದರೆ ಸಾಕು." ಎಂದು ಶುಭವನ್ನು ಹಾರೈಸಿದ್ದಳು. ಆದರೆ ತನ್ನದು ಹಾಗಿಲ್ಲವಲ್ಲಾ? ಮೂರು ಮಕ್ಕಳ ತಾಯಿಯಾಗಿದ್ದರೂ ತಂದೆಗೆ ಹೊರೆಯಾಗಿರುವುದೇ? ಎಂಬ ನೋವು ಮನದಲ್ಲಿ ಮನೆ ಮಾಡಿತ್ತು. ಏನೇ ಆಗಲಿ, ತಂದೆ ಖರ್ಚುಮಾಡಿದ ಹಣವನ್ನು ಕೇಳುವ ಮುನ್ನ ಹಿಂದಿರುಗಿಸಿ ಹೆಗಲ ಭಾರವನ್ನು ಇಳಿಸಿಕೊಳ್ಳಬೇಕು. ಇದರಿಂದ ನಿಷ್ಠೂರಕ್ಕೆ ಎಡೆಯಾಗಬಾರದು ಎಂದು ಮನಸ್ಸು ಎಚ್ಚರಿಸುತಿತ್ತು.

ಕುಮಾರ ಕಿಸೆಯಿಂದ ಚಿತ್ರಪಟವೊಂದನ್ನು ತೆಗೆದು ಹೊಸ ಭಾವನ ದೆಂದು ಹೆಮ್ಮೆಯಿಂದ ತೋರಿದ್ದ. ಮುಖದಲ್ಲಿ ಮಂದಹಾಸ ತಳೆದಿದ್ದ ಮೂರ್ತಿಯ ಪ್ರತಿ ಚಿತ್ರ ಅಂದವಾಗಿತ್ತು. ಗುಂಗುರು ಗುಂಗುರಾಗಿ ಉಬ್ಬಿ ನಿಂತಿದ್ದ ಹಣೆಗೂದಲು ಮುಖದಾಕೃತಿಗೆ ಕಳೆಗೊಟ್ಟಿತ್ತು. ಶಿವೆ ಪಟವನ್ನು ನೋಡುತ್ತ "ಈ ಚಿತ್ರ ನನಗಿರಲಿ." ಎಂದಳು.

"ಕಲ್ಯಾಣಿಯಿಲ್ಲದ ಚಿತ್ರ ಕಳೆಗೂಡುವುದಿಲ್ಲ. ಮದುವೆಯಲ್ಲಿ ತೆಗೆಸಿದ ಚಿತ್ರ ಇಟ್ಟುಕೊಳ್ಳಿರಿ." ಎಂದ ಕುಮಾರ. ಮರುಕ್ಷಣದಲ್ಲಿ ಮನೆಯಲ್ಲಿ ಸ್ವಾಮಿಯ ಚಿತ್ರವೇ ಇಲ್ಲದಿರುವಾಗ ಇನ್ನೊಬ್ಬರದು ತನಗೇಕೆ ಎನ್ನಿಸಿತು. ಸ್ವಾಮಿಗೆ ನಾಗರಿಕತೆ ಬೇಕಿರದೆ ಪಟತೆಗೆಸಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಒಮ್ಮೆ ಸ್ವಾಮಿ ಸಂಪ್ರೀತನಾಗಿದ್ದಾಗ ಶಿವೆ ಮಕ್ಕಳ ಚಿತ್ರ ತೆಗೆಸಬೇಕೆಂದು ಮೆಲ್ಲನೆ ಕೇಳಿಕೊಂಡಳು. ಉತ್ತರವಾಗಿ "ಭಾವಚಿತ್ರವಿಲ್ಲದಿದ್ದರೆ ಪ್ರಪಂಚ ಮುಳುಗಿ ಹೋಗುವುದಿಲ್ಲ !" ಎಂದು ಹೌಹಾರಿದ ಸ್ವಾಮಿ. ಅಲ್ಲಿಗೆ ಭಾವ ಚಿತ್ರದ ಇಚ್ಛೆ ಪರಿಸಮಾಪ್ತಿಯಾಯಿತು. ಇಂದಿನ ಪರಿಸ್ಥಿತಿಯಲ್ಲಿ ಭಾವ ಚಿತ್ರಗಳು ಬೇಕಿರಲಿಲ್ಲವಾದರೂ ಸ್ವಾಮಿಯ ಚಿತ್ರವಿಲ್ಲದಿರುವುದು ಒಂದು ಕೊರತೆಯಾಗುಳಿಯಿತು.

ಮದುವೆಯ ಮನೆಯಲ್ಲಿ ಶಿವೆ ಕಣ್ಣಿಗೆ ಬಿದ್ದೊಡನೆ ಗ್ರಾಮ್ಯ ಮಹಿಳೆ ಯರ ಗೋಷ್ಠಿಯಲ್ಲಿ ಅವಳ ವಿಚಾರ ಅನೇಕ ತರ್ಕವಿತರ್ಕಕ್ಕೆಡೆಗೊಟ್ಟಿತು.

"ಅದೇನೇ, ಹಾಗೆ ಹೇಳದೆ ಕೇಳದೆ ಓಡಿ ಹೋಗಿರಬೇಕಾದರೆ ಏನೋ ನಡೆಯಬಾರದ್ದು ನಡೆದಿದೆ ಎಂದಾಯ್ತು. ಕಾಲ ಕೆಟ್ಟುಹೋಗಿದೆ."

"ಖೂನಿ ಮಾಡಿ ವಿಷಯ ಮರೆಮಾಚಿರಬೇಕು."

"ಹಾಗಾಗಿದ್ದರೆ ಶಿವೆ ಹೇಗೆ ಕುಂಕುಮಾಂಕಿತೆಯಾಗಿರುತ್ತಾಳೆ ?"

"ಸರಿ ಬಿಡಮ್ಮ; ಇದೆಲ್ಲ ಚೆನ್ನಾಗಿಲ್ಲ." ಕಿಸಕ್ಕನೆ ನಕ್ಕು ಮತ್ತೆ ಮುಂದು ವರಿದಳು "ಕೈತುಂಬ ಬಳೆ, ಹಣೆಯಲ್ಲಿ ಕುಂಕುಮ ಎಷ್ಟಾದರೂ ಅಸಹ್ಯ."

"ಅವನು ಬದುಕಿದ್ದಾನೆಂದು ನಂಬಿದ್ದಾರೆ."

"ಸತ್ತಿದ್ದಾನೆಂದರೆ ಶ್ರಾದ್ಧ ಮಾಡಬೇಕಲ್ಲ ?"

"ಸ್ವಾಮಿಯೆಂದರೆ ಇನ್ನೊಮ್ಮೆ ನೋಡೋಣವೆನ್ನಿಸುವಂತಹ ರೂಪು ! ಅಂಥವನನ್ನೂ ಮಣ್ಣು ಮುಕ್ಕಿಸಿದಳು !"

"ಅನಾಹುತಕ್ಕೆ ಹೆಣ್ಣೇ ಕಾರಣ."

ಶಿವೆ ವಾಗ್ಬಾಣಗಳನ್ನು ತಪ್ಪಿಸಿಕೊಳ್ಳಲು ವಿಮಲೆಯನ್ನು ಸೇರಿಕೊಂಡಳು. ಮದುವೆ ಮುಗಿದು ವರನ ಕಡೆಯವರು ಹೆಣ್ಣಿನೊಂದಿಗೆ ಹೊರಟು ಹೋದರು. ಒಮ್ಮೆಲೆ ಜಡಿ ಮಳೆ ಹೊಯ್ದು ನಿಂತು ಹೋದಂತೆ ಗದ್ದಲ ಹರಿದು ತಣ್ಣಗಾಯಿತು. ಶಿವೆ ತುಸು ಹಾಯಾಗಿ ಉಸಿರು ಬಿಟ್ಟಳು. ವಾಗ್ದಾಳಿಯನ್ನು ಗಮನಿಸಿದ ರವಿಗೆ ಒಮ್ಮೆ ಇಲ್ಲಿಂದ ಹೊರಟುಬಿಡುವುದು ಲೇಸೆನಿಸಿತ್ತು. ತಾಯಿ ಮನನೊಂದು ಪ್ರಾಣಕ್ಕೆ ಸಂಚಕಾರ ತಂದುಕೊಂಡರೇನುಗತಿ ಎಂಬ ಯೋಚನೆ ಅವನ ಎಳೆಯೆದೆಯನ್ನು ತಲ್ಲಣಿಸುವಂತೆ ಮಾಡಿತು. ತುಂಬ ಚಿಕ್ಕವರಾದ ಸರಸು ವಿಮಲೆಯರಿಗೆ ಅದಾವುದೂ ತಲೆಗೆ ಹೋಗಿರಲಿಲ್ಲ. ರವಿ ಒಂದೇಸಮನೆ ಹೊರಡಲು ಅವಸರಿಸ ಹತ್ತಿದ. ಕಲ್ಯಾಣಿ ಹಿಂದಿರುಗುವ ಮೊದಲು ಹೊರಡುವುದೇ ಎಂದು ಶಿವಮ್ಮನ ಯೋಚನೆ. ಯಾಂತ್ರಿಕವಾಗಿ ಕೈಗಳು ಕೆಲಸ ಮಾಡುತ್ತಿದ್ದರೂ ವಾಗ್ಬಾಣಗಳಿಗೆ ಸಿಕ್ಕಿ ನುಚ್ಚುನೂರಿಯಾಗಿತ್ತು ಮನಸ್ಸು. ಬೇಡಬೇಡವೆಂದರೂ ಕಣ್ಣುಗಳಲ್ಲಿ ಕಂಬನಿಯು ಕೋಡಿಗಟ್ಟಿ ಹರಿಯತೊಡಗಿತು. ಮನೋವೇದನೆಯನ್ನು ತೋರಗೊಡದಂತೆ ಕೆಲಸ ಕಾರ್ಯಗಳಲ್ಲಿ ಮಗ್ನಳಾದಳು.

ಮದುವೆಗೆ ಬಂದಿದ್ದ ರಾಮಣ್ಣ ಸಂಜೆಯಲ್ಲಿ ಹೆಂಡತಿಯೊಡನೆ ಹೊರಡಲೆಂದು ಒಳಬಂದಾಗ ಅವನನ್ನು ಲಿಂಗಣ್ಣನೂ ಪಾರ್ವತಿಯೂ ಉಳಿಸಿಕೊಂಡರು. ನಾಲ್ಕಾರು ಮೈಲಿ ನಡೆಯಬೇಕಾಗಿದ್ದುದರಿಂದ ಕತ್ತಲಾಗಬಹುದೆಂದು ಯೋಚಿಸಿ ಉಳಿದುಕೊಂಡ. ಜಮಖಾನೆಯನ್ನು ಕೊಡವಿ ಕಸ ಬಳಿಯುತ್ತಿದ್ದ ಶಿವೆಯನ್ನು ಕಂಡು ರಾಮಣ್ಣ ಕೇಳಿದ "ನೀನು ನಮ್ಮೊಂದಿಗೆ ಬರುತ್ತೀಯೇನು ?"

"ಮಕ್ಕಳಿಗೆ ಶಾಲೆ ಇದೆ." ಶಿವೆ ತಲೆಯೆತ್ತದೆ ನುಡಿದಳು.

"ನಾಲ್ಕು ದಿನ ಶಾಲೆ ಇಲ್ಲದಿದ್ದರೆ ಆಗುವುದೇನು ?"

ಅಷ್ಟರಲ್ಲಿ ಅಲ್ಲಿಗೆ ಬಂದ ರವಿ ನುಡಿದ "ಮುಂದಿನ ತಿಂಗಳು ಪರೀಕ್ಷೆ ಇದೆ, ನಾವೀಗ ಬರುವಂತಿಲ್ಲ."

ರಾಮಣ್ಣ ಮಾತಾಡಲಿಲ್ಲ. ಜಮಖಾನೆಯ ಮೇಲೆ ಕುಳಿತುಕೊಂಡ. ಅತಿಥಿಯೊಬ್ಬ ಕೇಳಿದ "ರಾಮಣ್ಣನವರೇ ಸ್ವಾಮಿಯ ವಿಷಯವೇನು ?"

"ದೇವರೇ ಬಲ್ಲ."

"ಹಸನಾದ ಹಾಲಿಗೆ ತೊಟ್ಟು ಹುಳಿ ಬಿತ್ತು !"

"ಅದು ನಿಜ."

"ಸಿಕ್ಕುವ ಭರವಸೆ ಇಲ್ಲವೇನು ?"

"ನಾನೀಗ ಅವನ ಯೋಚನೆಯನ್ನೇ ಬಿಟ್ಟುಬಿಟ್ಟಿದ್ದೇನೆ."

ಮನೆಯ ಮಗ್ಗುಲಲ್ಲಿ ನಾಲ್ಕಾರು ಮಂದಿ ಕೂಳಿತುಕೊಂಡು ಬೀಡಿ ಸಿಗರೇಟುಗಳ ಸೇವನೆಯೊಂದಿಗೆ ಇದೇ ವಿಚಾರವನ್ನು ಮೆಲ್ಲುತ್ತಿದ್ದರು. "ಜನ ಬಾಹುಳ್ಯವಿರುವ ಕಡೆ ಹೆಣ್ಣು ಕೆಟ್ಟುಹೋಗುತ್ತಾಳೆ."

"ಬೊಗಸೆ ಕಣ್ಣಿನ ಹೆಣ್ಣನ್ನು ಎಂಥಹವರು ನೋಡಿದರೂ ಮರುಳಾಗುವುದೇ ಸೈ."

"ಆದುದರಿಂದಲೇ ಸ್ವಾಮಿ ಅಂಕೆಯಲ್ಲಿಟ್ಟಿದ್ದ."

"ಅವನೇ ಏಕೆ ? ಗಂಗಮ್ಮನೂ ಅವಳ ಮೇಲೆ ಕಾವಲುಗಾರಳಾಗಿರಲಿಲ್ಲವೇ ?"

"ರೂಪವತಿಯಾದ ಹೆಣ್ಣೇ ಗಂಡನಿಗೆ ಮೃತ್ಯು."

"ಸ್ವಾಮಿ ಮನನೊಂದು ಕೆರೆ ಬಾವಿ ಹಾರಿದ್ದಾನು."

"ಶಿವೆ ಇನ್ನೂ ಮುತ್ತೈದೆಯಾಗಿದ್ದಾಳೆ.?"

"ನಿತ್ಯ ಮುತ್ತೈದೆ"

ಇತ್ಯಾದಿ, ಇತ್ಯಾದಿ.

ಹತ್ತು ಮಂದಿ ಕೂಡಿದವರಿಗೆ ಹರಟೆಗೊಂದು ವಿಷಯ ಲಭಿಸಿ ಅದು ಎಲ್ಲೆಡೆಯೂ ಚರ್ವಿತಚರ್ವಣವಾಯಿತು. ಶಿವೆ ಮದುವೆಗೆ ಬಂದುದು ತಪ್ಪಾಯ್ತೆಂದು ತನ್ನನ್ನು ತಾನೇ ಹಳಿದುಕೊಂಡಳು.

ಕಲ್ಯಾಣಿಯು ಮನೆಗೆ ಹಿಂದಿರುಗಿದನಂತರ ಶಿವೆ ಮೈಸೂರಿಗೆ ಹೊರಡಲು ಅಣಿಯಾದಳು. ಮಕ್ಕಳ ಓದು ಕುಂಠಿತವಾದೀತೆಂದು ಲಿಂಗಣ್ಣನೂ ಅನುಮತಿಯನ್ನು ಕೊಟ್ಟ.

ಬೆಳಗಿನ ಬಸ್ಸು ಒಂಭತ್ತು ಗಂಟೆಗೆ ಸರಿಯಾಗಿ ಹೆದ್ದಾರಿಗೆ ಬರುವುದರಿಂದ ಅರ್ಧ ಗಂಟೆ ಮುಂಚೆಯೇ ಅಲ್ಲಿರುವುದು ಒಳ್ಳೆತೆಂದು ರವಿ ಒತ್ತಾಯಪಡಿಸಿದ್ದ. ಹೊತ್ತಿಗೆ ಮುಂಚೆ ಮಕ್ಕಳಿಗೆ ಸ್ನಾನಮಾಡಿಸಿ ಬಟ್ಟೆಗಳನ್ನು

ಜೋಡಿಸಿಟ್ಟು ಶಿವೆ ಸ್ನಾನಮಾಡಲೆಂದು ಬಚ್ಚಲಿಗೆ ಹೋದಳು. ಅದು ವರೆವಿಗೆ ಅದುಮಿಟ್ಟಿದ್ದ ಮನೋವೇಗವು ಹುಚ್ಚೆದ್ದು ಹರಿಯತೊಡಗಿತು. ಬಹುಕಾಲಕ್ಕೆ ತೌರಿನಲ್ಲಿ ನಾಲ್ಕು ದಿನ ಹಾಯಾಗಿರಬಹುದೆಂದು ಬಯಸಿದ್ದ ಮನಸ್ಸಿಗೆ ಇಂತು ಗಾಸಿಯಾಗಬೇಕೆ ?

ಅನೇಕ ಬಾರಿ ಬಾಳೇ ಬೇಡವೆಂದು ಯೋಚಿಸಿದ್ದ ದಿನಗಳು ಚಿತ್ತ ಭಿತ್ತಿಯಲ್ಲಿ ಸುಳಿದು ಹೋದುವು. ಮಕ್ಕಳ ಮೇಲಿನ ಅಪಾರವಾದ ಮಮತೆ ಬಾಳಿನಲ್ಲಿ ಬಿಗಿದು ಬಂಧಿಸಿತ್ತು. ಇಂದಿಗೂ ಎಂದೆಂದಿಗೂ ಅದು ತುಂಡರಿಯದ ಬಂಧನ. ಹೆಣ್ಣಾಗಿ ಹುಟ್ಟುವುದೇ ಪಾಡು ಪಡುವುದಕ್ಕೆ ಎಂದುಕೊಂಡಳು ಶಿವೆ.

"ಅದು ಹೇಗೆ ? ಭಗವಂತನ ಸೃಷ್ಟಿಯಲ್ಲಿ ಆ ವಿಧಾಯಕವುಂಟೇ ?" ಬಾಳಗತ್ತರಿಯಲ್ಲಿ ಸಿಲುಕಿ ಉಗ್ರವಾದ ಮನಸ್ಸು ಪ್ರಶ್ನೆ ಹಾಕಿತು.

"ಹೆಣ್ಣು ಅಬಲೆ ಅಂತಲೇ ಆಕೆ ಎಂದೆಂದೂ ಅಧೀನಳು." ಸಮಾಧಾನ ದಿಂದ ನುಡಿಯಿತು ಅಂತರಾತ್ಮ.

"ಪುರುಷ ಸಿಂಹನ ಮುಂದೆ ಆಕೆ ಸಬಲೆಯಾಗುವುದಾದರೂ ಹೇಗೆ ದೇವಾ ?"

"ಹೆಣ್ಣಿನ ಅಬಲತೆಯಿಂದಲೇ ಪುರುಷಸಿಂಹನಾದ."

"ಶಿವ, ಶಿವಾ ! ಇದು ಎಂದಿಗೂ ಕೊನೆಗಾಣದ ವಿಚಾರ."

"ನಿಜ; ಅದನ್ನು ಅರಿತಾದರೂ ಅಬಲತೆಯನ್ನು ಹೋಗಲಾಡಿಸಿಕೊ."

"ಜೀವನದಲ್ಲಿ ಸಹಕಾರವಿಲ್ಲದೇನೇ ಸಾಮರಸ್ಯವೊದಗೀತೇ ? ಚಪ್ಪಾಳೆ ತಟ್ಟಬೇಕಾದರೆ ಎರಡೂ ಕೈಗಳು ಬೇಕಷ್ಟೆ?"

"ಪುರುಷ ಬಲದಿಂದ ಚಪ್ಪಾಳೆ ತಟ್ಟುವುದು ಸಹಕಾರವಿಲ್ಲದಿದ್ದರೂ ಸಾಧ್ಯವಾಗುತ್ತೆ."

"ಬಲದಿಂದ ದೇಹವನ್ನು ಗೆಲ್ಲಬಹುದೇ ಹೊರತು ಹೃದಯವನ್ನಲ್ಲ."

ವಿಚಾರ ಮಥನದಿಂದ ಮನಸ್ಸು ಕದಡಿ ಬಗ್ಗಡವಾಗಿತ್ತು. ಸುಮಾರು ಹದಿನೈದು ವರುಷಗಳ ಹಿಂದೆ ಇದೇ ಮನೆಯಿಂದ ನವ ವಧುವಾಗಿ ತಾನು ಹೊರಟುದುದು ಮನದಲೆಯಲ್ಲಿ ಸುಳಿದು ಬಂತು.

ಹುಚ್ಚೆದ್ದ ದುಃಖದಾವೇಗವು ತುಸು ಕಡಿಮೆಯಾದನಂತರ ಶಿವೆ

ಮುಖವನ್ನು ಮತ್ತೊಮ್ಮೆ ತೊಳೆದುಕೊಂಡು ಹೊರ ಬಂದಳು. ರವಿ ಬಾಗಿಲಲ್ಲಿ ಕಾದಿದ್ದು ಹೊತ್ತಾಯಿತೆಂದು ಅವಸರಿಸಿದ. ತಾಯಿಯ ಮುಖದ ಮೇಲಿನ ದುಃಖದ ಛಾಯೆಯನ್ನು ಕಂಡು ರವಿಯ ಕಣ್ಣುಗಳೂ ಹನಿತುವು ಶಿವೆ ಬಹು ಕಷ್ಟದಿಂದ ಎಲ್ಲರಿಗೂ ಹೇಳಿಕೊಂಡು ಹೊರಟಳು.

ಶಿವೆಯ ಮನಸ್ಥಿತಿಯನ್ನು ಗಮನಿಸಿದ ಪಾರ್ವತಿಯೂ ಸುಂದರಿಯೂ ಕಂಬನಿಗರೆದರು. ಕಂಬನಿಯನ್ನು ಸೆರಗಿನ ತುದಿಯಿಂದ ಒರೆಸಿಕೊಳ್ಳುತ್ತ ಭಾರವಾದ ಕಾಲುಗಳನ್ನು ಎಳೆದುಕೊಂಡು ಹೆಜ್ಜೆ ಹಾಕಿದಳು. ಹಿಂದೆಯೇ ಹೆಜ್ಜೆಹಾಕುತಿದ್ದ ಮಕ್ಕಳು ಪುನಃ ಪುನಃ ಹೋಗಿ ಬರುತ್ತೇವೆ." ಎಂದು ಕೂಗಿ ಹೇಳುತ್ತಿದ್ದಂತೆ ಹಲವಾರು ದನಿಗಳು "ಹ್ಲೂ" ಎಂದು ಮರುದನಿ ಕೊಟ್ಟುವು. ದೂರದ ತಿರುವಿನವರೆಗೆ ಲಿಂಗಣ್ಣ ಕಳುಹಿಸಿಕೊಡಲು ಹೋದ. ಜೊತೆಗೆ ಕುಮಾರ ಹೊರಟಿದ್ದ.

೧೩

ರಾಮಪುರದಲ್ಲಿನ ಚಂದುವಿನ ಮನೆ ಚಿಕ್ಕದಾದರೂ ಅಚ್ಚುಕಟ್ಟಾಗಿತ್ತು. ಅವನ ಚಿಕ್ಕಮ್ಮ ನಿರ್ಗತಿಕಳಾಗಿದ್ದುದರಿಂದ ಇಲ್ಲೇ ಆಶ್ರಯ ಪಡೆದಿದ್ದಳು. ತನ್ನೊಂದಿಗೆ ತಾಯಿ ಬರಲೊಪ್ಪದಿದ್ದರೂ ಚಿಕ್ಕಮ್ಮ ಬರಲೊಪ್ಪಿದುದು ಅತ್ಯಂತ ಸಂತೋಷವನ್ನುಂಟುಮಾಡಿತ್ತು ಚಂದುವಿಗೆ. ಕಾವೇರಿಯನ್ನು ಮನೆ ತುಂಬಿಸಿಕೊಂಡ ದಿನವೇ ಚಿಕ್ಕಮ್ಮ ಸಹ ಪದಾರ್ಪಣೆ ಮಾಡಿದ್ದು ಸ್ವಂತ ತಾಯಿ ಎಂಬಂತೆ ಹೊಂದಿಕೊಂಡಿದ್ದಳು.

ಕೆಲಸ ಕಾರ್ಯಗಳಲ್ಲಿ ಸದಾ ನೆರವಾಗುವಷ್ಟು ಗಟ್ಟಿಮುಟ್ಟಾಗಿದ್ದ ಚಿಕ್ಕಮ್ಮನ ಹೆಸರೂ ಚಿಕ್ಕಮ್ಮನೇ ಆಗಿತ್ತು. ಹೊರ ಜಗಲಿಯ ಮೇಲೆ ಅಡಿಕೆಲೆಯನ್ನು ಮೆಲ್ಲುತ್ತ ಕುಳಿತಿದ್ದ ಚಿಕ್ಕಮ್ಮ ಮಕ್ಕಳಾಟವನ್ನು ಗಮನಿಸುತಿದ್ದಳು. ಕಾವೇರಿಗೆ ಮೂರು ಹೆಣ್ಣು ಮಕ್ಕಳನಂತರ ಒಂದು ಗಂಡು ಮಗು. ನಾಲ್ಕು ವರ್ಷದ ಮಗು ಶಂಭೂ ಆಗಲೇ ಶಾಲೆಗೆ ಹೋಗಲು ಪ್ರಾರಂಭಿಸಿದ್ದ. ತುಂಗ-ಭದ್ರ-ಸಿಂಧೂ ಮೂವರೂ ಕಣ್ಣು ಮುಚ್ಚಾಲೆಯ ಆಟ ಆಡುತ್ತಿದ್ದರು. ಶಂಭು ಅಂಗಳದಲ್ಲಿ ಮಲಗಿದ್ದ ನಾಯಿಯೊಂದಿಗೆ ಚೆಲ್ಲಾಟವಾಡುತ್ತಿದ್ದ.

ಚಿಕ್ಕಮ್ಮ ಗದ್ದೆಯ ಕಡೆ ದೃಷ್ಟಿಯನ್ನು ಹೊರಳಿಸಿ ಹೇಳಿದಳು "ಕಾವೇರಿ, ಚಂದುವಿನೊಂದಿಗೆ ಯಾರೋ ಬರುತ್ತಿದ್ದಾರೆ." ಕಾವೇರಿ ಸ್ವಲ್ಪ ಹೊತ್ತು ಅತ್ತಲೇ ನಿಟ್ಟಿಸಿ ನೋಡಿದಳು. ದೂರದಲ್ಲಿ ಬರುತಿದ್ದ ಅವರು ಹತ್ತಿರವಾದರು; ಜೊತೆಗೆ ಬಂದವನು ರಾಮಣ್ಣನೆಂದು ಗುರುತಿಸಿದ ಕಾವೇರಿ "ರಾಮಣ್ಣ ಬರುತ್ತಿದ್ದಾರೆ." ಎಂದು ವರದಿ ಮಾಡಿದನಂತರ ಒಳಗಡೆ ಹೋಗಿ ಪಾನಕವನ್ನು ಅತಿಥಿಗಾಗಿ ತಯಾರಿಸಿದಳು.

ಮೆಟ್ಟಿಲನ್ನು ಹತ್ತುತಿದ್ದ ರಾಮಣ್ಣ ಚಿಕ್ಕಮ್ಮನನ್ನು ನೋಡಿ ಕೇಳಿದ "ಹೇಗಿದ್ದೀರಿ ?"

"ಚಿಕ್ಕಮ್ಮ ಚೆನ್ನಾಗಿಲ್ಲದಿದ್ದರೆ ನಮ್ಮ ಜಂಗಾಬಲವೇ ಬಿದ್ದು ಹೋಗುತ್ತದೆ. ಅವರೇ ನಮಗೆ ಆಧಾರ." ಮುಗುಳು ನಕ್ಕು ನುಡಿದ ಚಂದು.

"ಚಂದು ಅನ್ನೋದೇ ಹಾಗೆ ರಾಮಣ್ಣ ! ಚಂದು ಆಶ್ರಯ ನೀಡದಿದ್ದಿದ್ದರೆ ನಾನೆಂದೋ ಸತ್ತು ಹೋಗಿರುತ್ತಿದ್ದೆ." ಚಿಕ್ಕಮ್ಮ ನಗು ಮುಖದಿಂದ ಉತ್ತರ ನೀಡಿದಳು.

ಚಂದು ರಾಮಣ್ಣನಿಗೆ ಕೈಕಾಲು ತೊಳೆಯಲು ಬಿಸಿನೀರು ಕೊಟ್ಟು ಟವಲೊಂದನ್ನು ನೀಡಿದ. ಕಾವೇರಿಯು ಪಾನಕದೊಂದಿಗೆ ತಿಂಡಿ ತಿನಿಸುಗಳನ್ನು ತಂದಿತ್ತು ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡಳು.

ಚಿಕ್ಕಮ್ಮ ರಾಮಣ್ಣನಿಗೆ ಅಡಿಕೆಲೆಯನ್ನು ನೀಡಿ "ರಾಮಣ್ಣ ಈಚೀಚೆಗೆ ಬಲು ಅಪರೂಪ" ಎಂದಳು ಪ್ರಾಸಂಗಿಕವಾಗಿ.

"ಈಚೀಚೆಗೆ ತುಂಬಾ ಕೆಲಸ. ಹೊಸ ಜಮೀನು ಬೇರೆ ಕೊಂಡುಕೊಂಡೆ. ಹುಡುಗರಿಬ್ಬರೂ ಶಾಲೆಗೆ ಹೋಗುವುದರಿಂದ ಮನೆಯ ಕಡೆ ನಾನೊಬ್ಬನೆ, ಬಿಡುವೇ ಸಿಕ್ಕುವುದಿಲ್ಲ."

"ಅಚ್ಚು ಕಟ್ಟಾಗಿ ಹೊಸ ಮನೆ ಕಟ್ಟಿ ರಾಮಣ್ಣ ಬಹಳ ನಾಜೂಕಾಗಿಬಿಟ್ಟಿದ್ದಾನೆ. ಕೈಯಲ್ಲಿ ನಾಲ್ಕು ಕಾಸೂ ಓಡಾಡುತ್ತಿದೆ. ಇನ್ನು ನಮ್ಮ ನೆನಪು ಕಡಿಮೆಯಾದರೂ ಆದೀತು." ಚಂದು ನಗೆ ಚಟಾಕಿಯನ್ನು ಹಾರಿಸಿದ.

"ಚಂದುಗೇನು ಕಡಿಮೆ ? ಎಲ್ಲದರಲ್ಲೂ ಅಚ್ಚುಕಟ್ಟಾಗಿದ್ದಾನೆ. ನನಗಿಂತ ಮುಂದಾಗಿ ಅವನೇ ಮರೆಯಬಹುದು ಚಿಕ್ಕಮ್ಮ !" ರಾಮಣ್ಣ ಹುಬ್ಬೇರಿಸಿದ. ಕಣ್ಣುಗಳಲ್ಲಿ ಹೊಳಪು ಮೂಡಿತು.

"ದುಡ್ಡು ಕಾಸಿನ ವಿಷಯ ಹಾಗಿರಲಿ, ಮುಖ್ಯವಾಗಿ ದೇವರು ಆಯುಸ್ಸು ಕೊಟ್ಟರೆ ಸಾಕು." ಎಂದ ಚಿಕ್ಕಮ್ಮ ಪುನಃ ಹೇಳಿದಳು "ಚಂದುಗೆ ನಿಮಿಷವೂ ಬಿಡುವಿಲ್ಲ. ಕತ್ತಲೆ ಕವಿಯುವ ತನಕ ಜಮೀನಿನಲ್ಲಿ ದುಡಿದು ಮನೆಗೆ ಬಂದರೆ ಊರಿನವರು ಕಾದಿರುತ್ತಾರೆ. ಅವರ ಕಷ್ಟ ಸುಖ ವಿಚಾರಿಸಿದ ನಂತರ ಮಕ್ಕಳಿಗೆ ಪಾಠ ಹೇಳುತ್ತಾನೆ. ಹಗಲಿರುಳೂ ದುಡಿಯುವ ವ್ಯಕ್ತಿಗೆ ಜಂಭ ಮಾಡಲು ಬಿಡುವೆಲ್ಲಿ ?"

ಮಾತು ಕೇಳಿ ಇಬ್ಬರೂ ನಕ್ಕುಬಿಟ್ಟರು. ಚಿಕ್ಕಮ್ಮ ಅಡುಗೆಯ ಮನೆಗೆ ತೆರಳಿದಳು. ರಾಮಣ್ಣ ಕರವಸ್ತ್ರದಿಂದ ಮುಖವನ್ನು ಒರೆಸಿಕೊಳ್ಳುತ್ತ ಹೇಳಿದ "ಒಮ್ಮೆಯೂ ತಿಮ್ಮಯ್ಯ ಇತ್ತಕಡೆ ಬರಲಿಲ್ಲ."

ಅವರು ಯಾವಾಗಲೂ ನನ್ನ ಮಗ ಪರದೇಶಿಯಾದ ಎನ್ನುತ್ತಾರೆ !

ಅವರು ತಿಳಿದುಕೊಂಡಿರುವುದೇ ಹಾಗೆ." ಚಂದು ಸಸುನಕ್ಕು ನುಡಿದ; ರಾಮಣ್ಣನ ಮುಖದಲ್ಲೂ ಮುಗುಳುನಗೆ ಪಸರಿಸಿತು. ಚಂದು ಮುಂದುವರಿದ "ಸುಬ್ಬು ಅಷ್ಟು ಚಾಲೂಕಿನ ಹುಡುಗನಲ್ಲ. ಕಳೆದ ತಿಂಗಳು ಹೋಗಿ ಒಂದು ವಾರವಿದ್ದು ತೋಟದ ಕಾಮಗಾರಿ ಮಾಡಿ, ಮನೆಯ ಸುತ್ತೂ ಬೆಳೆದಿದ್ದ ಕಸ ಕಡ್ಡಿಗಳನ್ನು ಕಿತ್ತು ಮನೆಗೆ ಸುಣ್ಣ ಬಳಿದು ಸ್ವಚ್ಛಗೊಳಿಸಿ ಬಂದೆ. ಈ ಸಲ ಮನೆಗೊಂದು ಕೊಠಡಿಯನ್ನು ಸೇರಿಸಬೇಕಾಗಿದೆ. ಕಾಳು-ಕಡ್ಡಿಗಳ ಜೋಡನೆಗೊಂದು ಉಗ್ರಾಣಬೇಕು. ಅಲ್ಲಿ ಕೆಲವು ಕಾಲ ಇದ್ದು ಕೆಲಸ ಕಾರ್ಯಗಳನ್ನು ಮುಗಿಸಬೇಕು. ಎರಡೂ ಕಡೆ ನೋಡಿಕೊಳ್ಳುವುದು ನನಗೆ ಸಾಕಾಗಿ ಬಿಡುತ್ತೆ. ಏನೇ ಆಗಲಿ, ಈ ಸಲ ಅಲ್ಲಿ ನಿಂತು ಮನೆಗೆ ಹೆಂಚಿನ ಮಾಡನ್ನೂ ಹಾಕಿಸಬೇಕೆಂದಿದ್ದೇನೆ."

"ಚಂದೂ! ನೀನು ಯಾವುದೋ ಶುಭ ಮುಹೂರ್ತದಲ್ಲಿ ಜನ್ಮ ಎತ್ತಿದ್ದಿ. ನೀನು ಮುಟ್ಟಿದ್ದೆಲ್ಲಾ ಚಿನ್ನ.... ಈ ಅದೃಷ್ಟ ಎಲ್ಲರಿಗೂ ಬರುವುದಿಲ್ಲ."

"ಸರಿ; ಸರಿ ನನ್ನ ಕಷ್ಟ ನಿನಗೆ ಹೇಗೆ ಗೊತ್ತಾದೀತು ?"

"ಏನೇಯಿರಲಿ, ಹಿಡಿದಿದ್ದು ಕೈಗೂಡಿ ಬರುತ್ತದೆ, ಅದು ಸಾಲದೇ?"

"ಹಾಗಲ್ಲಪ್ಪಾ ! ಎಲ್ಲವನ್ನೂ ಕ್ರಮವರಿತು ಮಾಡಬೇಕು ಅಷ್ಟೆ....ಬಾ ಒಳಗಡೆ. ಈಚೆಗೆ ಕಟ್ಟಿದ ಕೊಠಡಿ ನೀನು ನೋಡಲಿಲ್ಲ ಎಂದೆನ್ನುತ್ತ ಚಂದು ರಾಮಣ್ಣನನ್ನು ಒಳಗಡೆ ಎಳೆದೊಯ್ದು. ಹೊಸದಾಗಿ ಕಟ್ಟಿದ ಕೊಠಡಿ ಗಳೆರಡೂ ವಿಶಾಲವಾಗಿದ್ದುವು. ಗಾಳಿ ಬೆಳಕು ದಟ್ಟವಾಗಿ ಬರುವಂತೆ ಅಗಲ ವಾದ ಕಿಟಕಿಗಳಿಂದ ಕೂಡಿತ್ತು. ಕಾವೇರಿಯ ಚಾಕಚಕ್ಯತೆಯಿಂದ ಮನೆ ಎಲ್ಲೆಲ್ಲೂ ಅಚ್ಚುಕಟ್ಟಾಗಿತ್ತು. ಹುಲ್ಲಿನ ಮಾಡು ಹಿರಿದು ಹೆಂಚಿನ ಮಾಡು ಹೊದಿಸಿದ್ದ. ರಾಮಣ್ಣ ಎಲ್ಲವನ್ನೂ ನೋಡಿಕೊಂಡು ಚಂದುವಿನೊಂದಿಗೆ ಹೊರಗಡೆ ಬಂದು, ಆನಂದ ಪ್ರಮತತೆಯಿಂದ ಮುಖದ ಮೇಲೆ ಎಳೆನಗು ಸೂಸಿ ಹೇಳಿದ "ನಿನ್ನ ಮನೆ ಈಗ ಸೊಗಸಾಗಿದೆ."

"ನನ್ನದೊಬ್ಬನದೇ ಆಗಿದ್ದರೆ ಈ ಕೆಲಸ ಎಂದೋ ಆಗಿ ಹೋಗುತಿತ್ತು. ಮರಡಿ ಹಳ್ಳಿಯಲ್ಲಿ ಸುಬ್ಬು ಸ್ಥಿತಿ ಉತ್ತಮವಾಗುವವರೆಗೆ ಈ ಮನೆಗೆ ಹೆಂಚು ಹೊದಿಸುವುದಿಲ್ಲವೆಂದು ಅಂದೇ ನಿಶ್ಚಯಿಸಿದ್ದೆ. ಅದರಿಂದಾಗಿಯೇ ಇದು ಉಳಿದು ಹೋಗಿತ್ತು. ಈ ಸಲ ಕೊಂಡುಕೊಂಡ ಜಮೀನು ಬಹಳ ಹುಲು

ಸಾಗಿದೆ. ಎರಡೆಕರೆಗೆ ಕಳೆದ ಸಾರಿ ಹೋದಾಗ ತೆಂಗಿನ ಸಸಿಗಳನ್ನು ನಾಟಿ ಹಾಕಿದೆ. ಇನ್ನೊಮ್ಮೆ ಹೋದರೆ ಉಳಿದೆರಡು ಎಕರೆಗೂ ತೆಂಗಿನ ಸಸಿಗಳನ್ನು ನಾಟಿ ಹಾಕಿ ಮುಗಿಸಿ ಬಿಡುವೆ. ಇದಿಷ್ಟಾದರೆ ಸದ್ಯಕ್ಕೆ ನಾನು ಮರಡಿ ಹಳ್ಳಿಯಲ್ಲಿ ಮಾಡಬೇಕಾದುದೇನೂ ಉಳಿಯುವುದಿಲ್ಲ. ಅನಂತರ ಸುಬ್ಬು ನೋಡಿಕೊಳ್ಳುತ್ತಾನೆ."

"ಇದು ನಿಶ್ಚಿಂತೆಯಾದರೂ ಊರ ಕಾರ್ಯ ಬೇರೆ ಹಚ್ಚಿಕೊಂಡಿದ್ದಿ."

"ಅದೆಂದಿಗೂ ಮುಗಿಯದ ಕೆಲಸ ರಾಮಣ್ಣಾ. ಊರ ಮಂದಿಯ ಕಷ್ಟ-ಕಾರ್ಪಣ್ಯ, ರೋಗ-ರುಜಿನ, ಜಗಳ-ಪಂಚಾಯಿತಿ, ಕೆರೆ-ಕಟ್ಟೆ ಇವುಗಳ ತಾಪತ್ರಯ ತಪ್ಪುವುದೇಯಿಲ್ಲ. ಬುದ್ಧಿಯಿಲ್ಲದ ಜನರನ್ನು ನೋಡಿದರೆ ಸುಮ್ಮನೆ ಕೂಡುವುದಕ್ಕಾಗುವುದಿಲ್ಲ. ನಾನಾ ತಾಪತ್ರಯಗಳನ್ನು ಬಗೆ ಹರಿಸಿಕೊಳ್ಳುವುದು ಅವರಿಂದ ಸಾಧ್ಯವಾಗದು. ಹೇಗಾದರೂ ಮಾಡಿ ಇವರನ್ನು ಪ್ರಗತಿಯ ಮಾರ್ಗಕ್ಕೆ ಹಚ್ಚಬೇಕೆಂಬುದು ನನ್ನಾಸೆ. ಈ ಸಲ ಎಂಟು ಸಂಸಾರಗಳನ್ನು ಕೇರಿಯಿಂದ ಹೊರಡಿಸಿದೆ. ಎಲ್ಲರೂ ಅವರವರ ಗದ್ದೆಯಂಚಿನಲ್ಲಿ ಸೊಗಸಾದ ಕುಟೀರ ಕಟ್ಟಿಕೊಂಡಿದ್ದಾರೆ. ಹೆಂಚು-ಗಳು ಗಳನ್ನು ಒದಗಿಸಿಕೊಳ್ಳಲು ಅವರೊಂದಿಗೆ ಪತ್ತಾರು ಬಾರಿ ತಾಲ್ಲೂಕು ಆಫೀಸಿಗೆ ಸುತ್ತಿದ್ದಾಯ್ತು."

"ಪುಣ್ಯಕಾರ್ಯ ಚಂದೂ! ನಿನ್ನ ಒತ್ತಾಯವಿಲ್ಲದಿದ್ದರೆ ನಾವೆಂದೂ ಮನೆ ಕಟ್ಟುವ ಯೋಚನೆ ಮಾಡುತ್ತಿರಲಿಲ್ಲ. ಈಗ ನಿನ್ನನ್ನು ದಿನವೂ ಜ್ಞಾಪಿಸಿಕೊಳ್ಳುತ್ತೇನೆ. ವಿಶಾಲವಾದ ಮನೆ, ಗಾಳಿ ಬೆಳಕು ಹಾಯಾಗಿ ಬರುತ್ತೆ. ಸುಖವಾಗಿ ನಿದ್ದೆಯೂ ಬರುತ್ತೆ."

"ಅದಿರಲಿ, ನಿನ್ನನ್ನು ಒಪ್ಪಿಸಬೇಕಾದರೆ ಎಷ್ಟು ಕಾಲ ಹಿಡಿಯಿತಯ್ಯಾ? ನಾಲ್ಕಕ್ಷರ ಕಲಿತವನಾಗಿಯೂ ಹಿಂದು ಮುಂದು ನೋಡುತ್ತಿದ್ದೆ. ಇನ್ನು ನಮ್ಮವರ ವಿಚಾರ ದೊಡ್ಡದಾಗಲಿಲ್ಲ." ಇಬ್ಬರ ಮುಖದಲ್ಲೂ ನಗು ಮಿನುಗಿತು. ಪುನಃ ಚಂದು ಮುಂದುವರಿದ. "ಊರು ಮುಂದುವರಿದು ಜನ ಜಾಗೃತರಾಗಲಿ ಎಂಬುದು ನನ್ನಾಸೆ. ಅದಕ್ಕೆ ಸರಿಯಾದ ಸಹಕಾರವೂ ಒದಗುತ್ತಿದೆ. ಹೇಗೆ ಹೇಳಿದರೆ ಜನ ಹಾಗೆ ಕೇಳುತ್ತಾರೆ. ಅದೊಂದು ಹೃದಯ ಹಿಡಿಸಲಾರದಷ್ಟು ಸಂತೋಷ ನೀಡುತ್ತದೆ. ಹಗಲೂ ರಾತ್ರಿ

ದುಡಿಯುತ್ತೇನೆ. ನನಗೆ ಶ್ರಮವೇ ತೋರುವುದಿಲ್ಲ. ಈ ಊರಿಗೆ ಮಿಡ್ಲ್‌ಸ್ಕೂಲ್ ಕೇಳಿದ್ದೇನೆ. ಶಾಲಾ ಕಟ್ಟಡ ನಾವೇ ಕಟ್ಟಿಕೊಡುವುದರಿಂದ ಈ ಸಲವೇ ಶಾಲೆ ಬರುತ್ತದೆ. ಕಟ್ಟಡ ಈಗಾಗಲೇ ಬಹುಪಾಲು ಮುಗಿದಿದೆ. ಬಾ ಆ ಕಡೆ ಹೋಗೋಣ ತೋರಿಸುವೆ."

ಇಬ್ಬರೂ ಅತ್ತ ನಡೆದರು. ರಾಮಣ್ಣ ಹೇಳಿದ. "ರಾಜಣ್ಣನ ಮನೆ ಸಂಪೂರ್ಣವಾಗಿದೆ. ಇನ್ನು ಹೆಂಚು ಹೊಚ್ಚಿದರೆ ಮುಗಿಯಿತು. ಮುಂದಿನ ತಿಂಗಳು ಗೃಹ ಪ್ರವೇಶ ಮಾಡುತ್ತಾನೆ."

ಅವನ ಮನೆಯೂ ಚೆನ್ನಾಗಿದೆ. ನಮ್ಮ ಜನ ಅಷ್ಟು ತಿಳಿದುಕೊಂಡರೆ ಬೇಕಾದಷ್ಟಾಯಿತು. ನಾಲ್ಕು ಕಾಸು ಗಳಿಸಿಕೊಂಡರೆ ಅದನ್ನು ಕೂಡಿಡುವ ವಿಚಾರವೂ ತಿಳಿಯದು. ಅನ್ಯಥಾ ಹಾಳು ಮಾಡುತ್ತಾರೆ."

"ಎಲ್ಲರೂ ನಿನ್ನಂತೆಯೇ ಇರುತ್ತಾರೆಯೇ?"

ಇನ್ನಷ್ಟು ಹೊತ್ತಿನೊಳಗಾಗಿ ಇಬ್ಬರೂ ಶಾಲೆಯಂಗಳಕ್ಕೆ ಬಂದಿದ್ದರು. ಕಟ್ಟುತ್ತಿದ್ದ ಶಾಲೆಯ ಕಟ್ಟಡ ಭದ್ರವಾಗಿಯೂ ದೊಡ್ಡದಾಗಿಯೂ ಇತ್ತು. ಚಂದು ಹೇಳಿದ "ಸರಕಾರದ ಕಟ್ಟಡಕ್ಕಾಗಿಯೇ ನಾವು ಕಾದು ಕುಳಿತಿದ್ದರೆ ಇಲ್ಲಿ ಶಾಲೆ ಕಾಣುವುದು ಸದ್ಯಕ್ಕೆ ಸಾಧ್ಯವಿರಲಿಲ್ಲ. ಇದಾದ ನಂತರ ಹೈಸ್ಕೂಲು ಕಟ್ಟುತ್ತೇವೆ."

"ಎಷ್ಟಾದರೂ ಧೀರ ಕಣಯ್ಯಾ. ನಿನ್ನಂತಹ ಹತ್ತು ಮಂದಿ ಒಂದು ಕಡೆಯಿದ್ದರೆ ಹಳ್ಳಿಯೇ ದಿಳ್ಳಿಯಾದೀತು."

ಅಲ್ಲಿಂದ ತೋಟದ ಕಡೆ ಇಬ್ಬರೂ ಒಂದು ಸುತ್ತು ಹಾಕಿ ಬಂದರು. ತೋಟ ನಳನಳಿಸಿ ಬೆಳೆದಿತ್ತು. ಗೆಳೆಯನೊಂದಿಗೆ ಆನಂದವಾಗಿ ಹೊತ್ತು ಕಳೆದು ಸಂಜೆಯುವರೆಗೆ ಇದ್ದು ಊರಿಗೆ ಹೊರಟು ಹೋದ ರಾಮಣ್ಣ.

೧೪

ಗ್ರಾಮ ಸಾಮ್ರಾಜ್ಯದಲ್ಲಿ ಸುಗ್ಗಿ....

ಜೋಗಿ ಹಳ್ಳಿಯಲ್ಲಿನ ರಾಮಣ್ಣನ ಮನೆಯಲ್ಲಿ ಊರ ಮಂದಿ ಆಗಲೇ ಬಂದು ನೆರೆದಿದ್ದಾರೆ. ಸುಗ್ಗಿ ಹಬ್ಬದಾಚರಣೆಯು ಯಥಾರೀತಿ ನಡೆಯಲಣಿಯಾಗಿದೆ. ಧಾನ್ಯಗಳ ರಾಶಿಗೆ ಬಂಧುಗಳೊಡನೆ ಸೋದರರಿಬ್ಬರೂ ಪೂಜಾವಿಧಿಗಳನ್ನು ಸಡಗರದಿಂದ ಮುಗಿಸಿದ ನಂತರ ಎಲ್ಲರೂ ಜಗಲಿಯ ಮೇಲೆ ಕುಳಿತುಕೊಂಡರು. ರಾಜಣ್ಣ ತನ್ನ ಇತ್ತೀಚಿನ ಮಗುವನ್ನು ಎತ್ತಿಕೊಂಡು ಎಲ್ಲರಿಗೂ ತೋರಿಸಿದ. ಮಗು ಕೈಯಿಂದ ಕೈಗೆ ಬದಲಾಯಿಸುತ್ತಿದ್ದಂತೆ ಎಳೆನಗು ಬೀರಿ ನಲಿಯಹತ್ತಿತು.

"ರಾಜಣ್ಣಾ, ನಿನ್ನ ಮಗನಿಗೆ ಹೊಸಬರೆಂಬ ಭಯವಿಲ್ಲ."

"ಸುತರಾಂ ಇಲ್ಲ."

"ಧೀರ ಮಗನನ್ನು ಹೆತ್ತಿದ್ದೀಯೆ"

"ಮಗುವಿನ ಹೆಸರೇನು"? ದನಿಯೊಂದು ಪಕ್ಕದಿಂದ ಬಂದಿತು.

"ಶಿವಮೂರ್ತಿ."

"ಸಾಕ್ಷಾತ್ ಶಿವನೆ ಕಣಯ್ಯಾ."

ರಾಜಣ್ಣ ಮಗುವನ್ನು ಎತ್ತಿಕೊಂಡು ಹೋಗಿ ಸಾವಿತ್ರಿಯ ಕೈಗೆಕೊಟ್ಟ ಮಗುವಿನೊಂದಿಗೆ ಲಲ್ಲೆ ಗೈಯುತ್ತಾ ಸಾವಿತ್ರಿ ಒಳಹೋದಳು. ಜಗಲಿಯಲ್ಲಿ ಆರಾಮವಾಗಿ ಮಾತುಕತೆಗಳಲ್ಲಿ ಅತಿಥಿಗಳು ಮಗ್ನರಾಗಿದ್ದರು. ರಾಮಣ್ಣ ಗೋಡೆಗಾಂತು ಕುಳಿತುಕೊಂಡು ಒಮ್ಮೆ ದೃಷ್ಟಿಯನ್ನು ಸುತ್ತಲೂ ಹರಿಸಿದ. ಆಹ್ವಾನಿತರೆಲ್ಲರೂ ಬಂದಿದ್ದರು. ವರ್ಷವೂ ಖರ್ಚು ವೆಚ್ಚವನ್ನು ಕಡಿಮೆ ಮಾಡಲೆಂದು ಸುಗ್ಗಿಯಾಚರಣೆಯನ್ನು ಇಬ್ಬರೂ ಕೂಡಿ ಮಾಡುತ್ತಿದ್ದರು. ಬೆಳೆ ಹುಲುಸಾಗಿ ಬೆಳೆದಿದ್ದುದರಿಂದ ಈ ಸಲ ಹಬ್ಬವನ್ನು ಅದ್ದೂರಿಯಿಂದ ಆಚರಿಸಿದ ಸೋದರರ ಮುಖದಲ್ಲಿ ಸಂತಸದ ತೆರೆ ಲಾಸ್ಯವಾಡುತಿತ್ತು.

ರಾಮಣ್ಣ ಹೇಳಿದ "ನಮ್ಮ ದೇಶದಲ್ಲಿ ಉತ್ತರದ ಕಡೆ ನಡೆದ ಅತಿ ವೃಷ್ಟಿಯನ್ನೂ ದಕ್ಷಿಣದ ಕಡೆ ಆದ ಅಕಾಲ ವೃಷ್ಟಿಯನ್ನೂ ನೆನೆದರೆ ನಮ್ಮವರ ಮೇಲೆ ದೈವಕ್ಕೆ ಪ್ರಕೋಪ ಎಂದು ತೋರುತ್ತದೆ. ಒಂದಲ್ಲ ಒಂದು ಕಡೆ ಅತಿವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿ ಇದ್ದೇ ಇರುತ್ತದೆ. ಇದು ಉದ್ದೇಶ ಪೂರ್ವಕವಾಗಿಯೇ ನಡೆಯುತ್ತಿದೆಯೇನೋ ಎಂದೆನಿಸುತ್ತೆ."

"ಅದು ನಿಜ, ನಮ್ಮಲ್ಲಿ ಆಂತರಿಕ ಪರಿಶುದ್ಧತೆಯಿಲ್ಲದೆ ದೇಶ ಹಾಳಾಗಿ ಹೋಗುತ್ತಿದೆ. ರಾಮರಾಜ್ಯವಾಗಿದ್ದ ನಮ್ಮ ನಾಡು ಮೋಸ ಅಸೂಯೆ ಅಕೃತ್ಯಗಳಿಂದ ತುಂಬಿ, ಜನ ಜೀವನ ಕೆಡುತ್ತಿರುವುದರಿಂದಲೇ ನಾವು ಪ್ರಕೃತಿಯ ವಿಕೋಪಕ್ಕೆ ಒಳಗಾಗಿದ್ದೇವೆ," ಎಂದ ಚಂದು ಭಾವಾವಿಷ್ಟನಾಗಿ, ಪುನಃ ಒಮ್ಮಿಂದೊಮ್ಮೆಲೇ ಜಲಪ್ರಳಯ ಅಥವಾ ಭೂಕಂಪಗಳಿಂದ ಈಗಿನ ಜನ ಸಾಂದ್ರತೆಯು ಸಂಪೂರ್ಣ ನಾಶಹೊಂದಿ ಹೊಸ ರಕ್ತದಿಂದ ಹೊಸ ಜೀವನ ಆರಂಭವಾದರೆ ನಮ್ಮ ದೇಶ ಶುದ್ಧಿಯಾದೀತು !"

"ಚಂದೂ, ನಿನ್ನ ಕೇಡನ್ನೇ ನೀನು ಹಾರೈಸುತ್ತಿದ್ದಿ ಎಂಬುದು ನಿನ್ನ ಗಮನಕ್ಕೆ ಬಂದಿದೆಯೇನು ? ಎಲ್ಲರೂ ಅಳಿದ ಮೇಲೆ ನೀನು ಉಳಿಯುವ ಸಂಭವವಿಲ್ಲವಲ್ಲಾ ?" ಎಂದು ಪಕ್ಕದಿಂದ ಬಂದ ದನಿಯಿಂದ ಎಲ್ಲರ ಮುಖದ ಮೇಲೂ ನಗು ಮಿನುಗಿತು "ಚಂದು ನಕ್ಕು ನುಡಿದ. 'ಎಲ್ಲರೂ ಅಳಿದಮೇಲಿ ನಾನುಳಿಯಬೇಕೆಂಬ ಉದ್ದೇಶ ನನಗಿಲ್ಲ. ಎಲ್ಲರಿಗಾದುದು ನನಗೂ ಆಗಲಿ."

"ಧೀರ ಧೀರ !" ರಾಜಣ್ಣ ಹಾಸ್ಯದ ಚಟಾಕಿಯನ್ನು ಹಾರಿಸಿದ. ಒಡನೆ ಎಲ್ಲೆಲ್ಲೂ ನಗುವಿನ ಹೊನಲು ಹರಿಯಿತು

"ಸುಗ್ಗಿ ಹಬ್ಬಕ್ಕಾಗಿ ಕೂಡಿದವರು ಬರೀ ಉಂಡು ಹೋಗುವುದಕ್ಕಿಂತ ನಮ್ಮ ಸುಧಾರಣೆಗಾಗಿಯೂ ಕೊಂಚ ಯೋಜನೆ ಮಾಡುವುದೊಳ್ಳಿತು. ಗ್ರಾಮಜೀವನವನ್ನು ಸುಧಾರಿಸಬೇಕಾದರೆ ಆಗಾಗ ಹೀಗೆ ನಾಲ್ಕು ಮಂದಿ ಕೂಡಿ ಮಾತಾಡಿ ಒಗ್ಗಟ್ಟಿನಿಂದ ಸಾಧನೆ ಮಾಡಬೇಕು. ಒಮ್ಮೊಮ್ಮೆ ಒಂದೊಂದು ಕಡೆ ಕೂಡಿರಿ. ಸುಧಾರಣೆಯು ಒಬ್ಬೊಬ್ಬರಿಂದಾಗುವ ಕೆಲಸ ವಲ್ಲ." ಚಂದು ತನ್ನ ಸಲಹೆಯನ್ನು ಮುಂದಿಟ್ಟ.

"ಗಾಂಧೀಜಿಯವರ ಸಮಾಜ ಸುಧಾರಣೆಯ ಸೂತ್ರಗಳಲ್ಲಿಯೇ ಇಂದು ಕಾಂಗ್ರೆಸ್ ಸರಕಾರ ಅಧಿಕಾರ ನಡೆಸುತ್ತಿದೆಯಾದರೂ ಇನ್ನೂ ಸುಧಾರಣೆ

ಯಾಗಲಿಲ್ಲವೇಕೆ?" ಲಿಂಗಪ್ಪ ಕೇಳಿದ.

"ಸುಧಾರಣೆಯಾಗುವುದಿರಲಿ; ಅವನತಿಯ ಹಾದಿಯನ್ನು ತುಳಿದಿದೆ ಎಂದು ಜನ ಬೊಬ್ಬಿಡುವುದನ್ನು ಕೇಳುತ್ತಿದ್ದೇವೆ." ಏರಿದ ದನಿಯಲ್ಲಿ ರಾಜಣ್ಣ ಹೇಳಿದ.

ಸರಕಾರ ಸುಧಾರಣೆ ಮಾಡಲಿ ಎಂದು ನಾವು ಕುಳಿತರಾಗುತ್ತದೆಯೇ? ನಮ್ಮ ಸುಧಾರಣೆ ನಮ್ಮ ಕೈಯಲ್ಲಿದೆ."

"ಚಂದೂ, ಇಲ್ಲಿ ಕೇಳು. ಜೀವನವು ದಿನದಿನಕ್ಕೂ ದುಸ್ತರವಾಗುತ್ತಿರುವ ಈ ಕಾಲದಲ್ಲಿ ಹೇಗೆ ಸುಧಾರಣೆ ಸಾಧ್ಯ? ನೋಡು ನೋಡುತ್ತಿದ್ದಂತೆ ಬೆಲೆಗಳು ಗಗನಕ್ಕೇರುತ್ತಿವೆ. ವಾಸ್ತವವಾಗಿ ನಮ್ಮ ಗೋರಿಯನ್ನು ನಾವೇ ಕಟ್ಟುತ್ತಿದ್ದೇವೆ ಎಂದರೆ ತಪ್ಪಾಗುವುದಿಲ್ಲ."

"ಅಷ್ಟು ನಿರಾಶರಾದರೆ ಹೇಗೆ ಸಿದ್ದಣ್ಣಾ? ಈ ಕಾಲದಲ್ಲಿ ಜೀವನ ದುಸ್ತರವೆಂಬುದು ಸಹಜ. ಆದರೂ ನಾವು ಜೀವಿಸುತ್ತಿದ್ದೇವಷ್ಟೆ? ಅಂದ ಮೇಲೆ ಅದರೊಂದಿಗೆ ನಾವು ಸ್ವಲ್ಪಸ್ವಲ್ಪವಾಗಿ ಸುಧಾರಿಸಿಕೊಳ್ಳಬೇಕು. ಯಾವತ್ತೂ ಸರಕಾರವೇ ಮಾಡಲಿ ಎಂದು ಕುಳಿತರಾಗುತ್ತದೆಯೇ? ಈಗ ನಮ್ಮಲ್ಲಿ ವಿದ್ಯಾವಂತರಿಗೆ ಕೊರತೆಯಿಲ್ಲ. ಆದರೂ ನಮ್ಮವರು ಸುಧಾರಿಸಿಕೊಳ್ಳಲಿಲ್ಲವೇಕೆ? ಎಂಬುದು ಯೋಚಿಸಬೇಕಾದ ವಿಚಾರ. ಇಲ್ಲಿ ಕಾಣಸಿಗುವ ಜಟಿಲ ಸಮಸ್ಯೆಗಳು ಮೂರು. ಅಜ್ಞಾನ, ನಿರುದ್ಯೋಗ, ಬಡತನ, ಅಜ್ಞಾನ ಮತ್ತು ಬಡತನಗಳೇ ಅಕೃತ್ಯಗಳಿಗೆ ಮೂಲ ಕಾರಣ."

"ನೀವು ತಪ್ಪು ತಿಳಿದುಕೊಂಡಿದ್ದೀ ಕೃಷ್ಣಪ್ಪಾ. ಅನಾಚಾರಗಳು ನಡೆಯುವುದು ಅಜ್ಞಾನಿಗಳಲ್ಲಿ ಅಥವಾ ಬಡವರಲ್ಲಿ ಮಾತ್ರವೇನು? ಹಾಗೆ ನೋಡಿದರೆ ಮೋಸ ಹುಟ್ಟಿರುವುದು ವಿದ್ಯಾವಂತರಲ್ಲಿ ಎನ್ನುತ್ತೇನೆ. ಏನು ಹೇಳುತ್ತೀರಿ?" ಒಡನೆ ಏರಿದ ದನಿಯಲ್ಲಿ ಸವಾಲು ಹಾಕಿದ ರಾಜಣ್ಣ.

"ವಿದ್ಯಾವಂತರೂ ಅಕೃತ್ಯಗಳನ್ನೆಸಗುತ್ತಾರೆ ನಿಜ. ಏಕೆ ಹೀಗೆ? ಎಂಬುದನ್ನು ಪರ್ಯಾಲೋಚಿಸಿ ಅದಕ್ಕೆ ಪರಿಹಾರವನ್ನು ಹುಡುಕಿರಿ." ಲಿಂಗಪ್ಪ ವಿಚಾರವನ್ನು ಮುಂದಿಟ್ಟ.

"ಇಲ್ಲಿ, ಪರಿಹಾರವನ್ನು ಸೂಚಿಸುವುದು ಅಷ್ಟು ಸುಲಭವಲ್ಲ. ಇದರ ಮೂಲಕಾರಣವನ್ನು ಹುಡುಕುವುದಗತ್ಯ. ಹೊರ ದೇಶಗಳಲ್ಲಿ ಪತ್ರಿಕೆಗಳ

ಮಾಲಿಕರು ಪತ್ರಿಕೆಗಳನ್ನೂ, ಡಬ್ಬಿಗಳನ್ನೂ ಬೀದಿಯ ಮಗ್ಗುಲಲ್ಲಿ ಇಡುತ್ತಾರಂತೆ ಓದುವವರು ಡಬ್ಬಿಯಲ್ಲಿ ಕಾಸನ್ನಿಟ್ಟು ಪತ್ರಿಕೆಯನ್ನು ತೆಗೆದುಕೊಳ್ಳುತ್ತಾರೆ. ನಮ್ಮಲ್ಲಾದರೆ ಆ ನಿಮಿಷವೇ ಮಾಲನ್ನು ಹಾರಿಸಿಬಿಡುತ್ತಾರೆ! ಮುಖ್ಯವಾಗಿ ನಮ್ಮ ನೈತಿಕಮಟ್ಟ ಹೇಗೆ ಸುಧಾರಿಸಬೇಕು ಎನ್ನುವುದಕ್ಕಿಂತ ಹೇಗೆ ಕುಗ್ಗಿತು ಎಂಬುದನ್ನು ಯೋಚಿಸುವುದೊಳ್ಳಿತು. ನಮ್ಮಲ್ಲಿನ ತೊಂದರೆಯೇನೆಂದರೆ ಮೊದಲನೆಯದಾಗಿ ಅತಿ ಶ್ರೀಮಂತಿಕೆ ಅಥವಾ ಕಡು ಬಡತನ. ಎರಡನೆಯದಾಗಿ ಒಂದೆಡೆ ಸುಸಂಸ್ಕಾರ ಇನ್ನೊಂದೆಡೆ ಕುಸಂಸ್ಕಾರ; ಒಂದೆಡೆ ಅವಿದ್ಯೆ ಇನ್ನೊಂದೆಡೆ ಮಹಾವಿದ್ಯೆ ಮೇಲಾಗಿ ಜಾತಿ-ಜಾತಿ-ಜಾತಿಮನೋಭಾವದ ಅದ್ಭುತ ರೋಗ! ಮೇಲು-ಕೀಲುಗಳ ಹೀನ ಜಾಡ್ಯ! ಈ ಮಹಾರೋಗಗಳೇ ನಮ್ಮ ನೈತಿಕ ಮಟ್ಟವನ್ನು ಕುಗ್ಗಿಸಲು ಕಾರಣ ರಾಮಣ್ಣಾ. ಇದರ ಪರಿಹಾರವೆಂದರೆ ಈ ಎಲ್ಲಾ ಬಾಬಿನಲ್ಲೂ ಸುಧಾರಣೆಯಾಗಬೇಕು."

"ಎಲ್ಲಾ ಕನಸಿನ ಗಂಟು!"

ಗ್ರಾಮಗಳ ಮಟ್ಟದಲ್ಲಿ ಮೊದಲು ಸುಧಾರಣೆಯಾಗಲಿ. ಮೊದಲನೆಯ ಅಂಗವಾಗಿ ನಾವು ಬೆಳೆದ ದವಸ ಧಾನ್ಯಗಳನ್ನು ನಮ್ಮ ಗ್ರಾಮಗಳಲ್ಲಿ ನೇರವಾಗಿ ಮಾರಿಕೊಳ್ಳುವ ವ್ಯವಸ್ಥೆಗಾಗಿ ಉತ್ತಮ ಮಾರುಕಟ್ಟೆಗಳು ಬರಬೇಕು. ಅಂದರೆ ನಮ್ಮ ಧಾನ್ಯವು ಕಲಬೆರಕೆಯ ಮೋಸಕ್ಕೊಳಗಾಗದೆ ಶುದ್ಧವಾಗಿದ್ದು ಉತ್ತಮ ಬೆಲೆಯನ್ನು ಪಡೆದು ತನ್ಮೂಲಕ ನಮ್ಮ ಪುರೋಭಿವೃದ್ಧಿಯಾಗಲಿ ಹಾಗೂ ನಮ್ಮಿಂದ ಅಗ್ಗದ ಬೆಲೆಗೆ ಕೊಂಡುಹೋಗಿ ಅಧಿಕ ಲಾಭಸಂಪಾದಿಸಿ ಮೋಸವನ್ನು ಉತ್ಪಾದಿಸುವ ವರ್ತಕರ ಹಾವಳಿ ತಗ್ಗಲಿ."

"ನಮ್ಮಿಂದ ಕೊಂಡುಹೋದ ಕಾಳು ಕೊಳ್ಳುವವರ ಕೈ ಸೇರಬೇಕಾದರೆ ಗುಣದಲ್ಲಿ ತಗ್ಗಿ ಬೆಲೆಯಲ್ಲಿ ಹಿಗ್ಗಿ ದೇಶದ ಹೆಸರನ್ನೇ ಕೆಡಿಸುತ್ತದೆ. ಎಲ್ಲಿ ನೋಡಿದರೂ ಕಲಬೆರಕೆ ಮತ್ತು ಕಾಳಸಂತೆ."

"ಇದರಿಂದ ರೈತರಿಗೆ ಅನ್ಯಾಯ; ದೇಶಕ್ಕೆ ಅಪಕೀರ್ತಿ."

"ಸರಕಾರ ಕಲಬೆರಕೆಯ ದವಸವನ್ನು ಇಟ್ಟವರನ್ನು ಬಲಿಹಾಕಬೇಕು! ಈಗ ಏನಾಗಿದೆ ಎಂದರೆ ತಪ್ಪು ಮಾಡಿದವನ ಬೆಂಬಲವಾಗಿಯೂ ಹತ್ತಾರು ಮಂದಿ ನಿಲ್ಲುತ್ತಾರೆ. ಹಿರಿಯ ವ್ಯಕ್ತಿಗಳನ್ನು ಹಿಡಿದು ಕಾಡಿಬೇಡಿ ಹತ್ತೂ ಕಡೆ ಹೇಳಿಸಿ ಉಣಚಿಕೊಳ್ಳುವ ಸಾಹಸ ಮಾಡುತ್ತಾರೆ. ಹೀಗಾಗಿ ಪ್ರಜಾ

ಸರಕಾರದಲ್ಲಿ ಎಲ್ಲೆಲ್ಲೂ ಹಸ್ತಕ್ಷೇಪ ನಡೆದು ಸದರ ಹುಟ್ಟಿತು. ಸರಕಾರ ಬಿಗಿ ಇರದ ಹೊರತು ಇದರ ನಿಲುಗಡೆ ಸಾಧ್ಯವೇ ಇಲ್ಲ."

"ಇದನ್ನು ಪರಿಹರಿಸುವುದು ನಮ್ಮಿಂದಾದೀತೇ?"

"ಆಗದೇ ಏನು? 'ನಿಮ್ಮತನ'ವನ್ನು ಬೆಳೆಸಿಕೊಂಡರೆ ನಿಮ್ಮಿಂದಾಗದ ಕಾರ್ಯವಿಲ್ಲ. ಸ್ವಾಮಿ ವಿವೇಕಾನಂದರು ಹೇಳಿದ್ದೇನು? ಜಡ ನಿದ್ದೆಯಿಂದ ಎದ್ದೇಳಿ ಜಾಗೃತರಾಗಿ! ಅವರೆಂದಂತೆ ಜಾಗೃತವಾಗದ ಹೊರತು ಯಾವುದೂ ನಮ್ಮಿಂದ ಸಾಧ್ಯವಿಲ್ಲ."

"ಕೇಳಿ ಕೇಳಿ!"

"ಚಂದೂ, ಸುಮಾರಾಗಿ ಪ್ರಕೃತಿಯ ನಿಯಮ ನಮಗೆ ವಿರೋಧವಾಗಿರುವುದೇ ಕಂಡುಬರುತ್ತದೆ. ಎಲ್ಲಿ ಮಳೆಯ ಅನಾಹುತ ನಡೆದಿದೆಯೋ ಎಲ್ಲಿ ಭೂಕಂಪಗಳಿಂದ ಸರ್ವನಾಶವಾಗಿದೆಯೋ ಅಲ್ಲಿ ಅತ್ಯಂತ ಮುಗ್ಧ ಜನರೇ ಅನಾಹುತಕ್ಕೊಳಗಾಗಿದ್ದಾರೆ ಇದಕ್ಕೇನೆನ್ನುವೆ?"

"ವಿಚಾರ ಯೋಚನಾತೀತವಾದರೂ ನಮ್ಮ ನಮ್ಮ ಕರ್ಮಾನುಸಾರ ನಡೆದೀತು ಎಂದೆನಿಸುತ್ತದೆ." ಸ್ವಲ್ಪ ತಡೆದು ಮತ್ತೆ ಹೇಳಿದ. "ಪ್ರತಿಯೊಬ್ಬರೂ ತಮ್ಮ ತಮ್ಮ ಆತ್ಮೋನ್ನತಿಗಾಗಿ ಶ್ರಮಿಸಿದರೆ ಸಾಕು. ಸಮಾಜ ಸುಧಾರಣೆಯು ತಾನಾಗಿಯೇ ಆಗುತ್ತದೆ."

ಕಗ್ಗತ್ತಲನ್ನು ಛೇಧಿಸಿ ನಸುತಿಂಗಳ ಬೆಳಕು ಎಲ್ಲೆಲ್ಲೂ ತೆಳುವಾದ ತೆರೆಯಂತೆ ಹರಡತೊಡಗಿತು ದೊಡ್ಡವರು ಉತ್ಸುಕತೆಯಿಂದ ಮಕ್ಕಳ ಕೂಟದಲ್ಲಿ ಸೇರಿಕೊಂಡು ಪಟಾಕಿ ಸುಡುವುದರಲ್ಲಿ ನಿಮಗ್ನರಾದರು. ಬೆಂಕಿಯ ಕಿಡಿ ದವಸ ಧಾನ್ಯಗಳ ರಾಶಿಗೆ ಬಿದ್ದೀತೋ ಎಂಬ ಭಯದಿಂದ ರಾಜಮ್ಮ ಒಮ್ಮೆ ಹಣಿಕಿ ನೋಡಿ.. ಜೊತೆಗೆ ದೊಡ್ಡವರೂ ಸೇರಿಕೊಂಡಿದ್ದರಿಂದ ನಿಶ್ಚಿಂತೆಯಿಂದ ಒಳಗಡೆ ಹೋದಳು. ಹತ್ತಾರು ಮಂದಿ ಗಂಡಸರೂ ಹತ್ತಾರು ಮಂದಿ ಮಕ್ಕಳೂ ಊಟಕ್ಕೆ ಕುಳಿತಿದ್ದರು. ಊಟ ರುಚಿಯಾಗಿದ್ದುದರಿಂದ ಹರಟೆಯೂ ಜೋರಾಗಿತ್ತು. ಬಂದ ಅತಿಥಿಗಳು ಹತ್ತಿರದವರಾದ್ದರಿಂದ ಊಟವಾದ ನಂತರ ಹೊರಟು ಹೋದರು. ಅತಿಥಿಗಳನ್ನು ಬೀಳ್ಕೊಡುವಷ್ಟರಲ್ಲಿ ತುಂಬ ಹೊತ್ತಾದುದರಿಂದ ಅಂದು ರಾಜಣ್ಣ ಹೆಂಡತಿಯೊಡನೆ ಅಲ್ಲಿಯೇ ತಂಗಿದ್ದು ಬೆಳಗ್ಗೆ ಹೋಗುವುದೆಂದು ನಿಶ್ಚಯಿಸಿದ.

ಬೆಳಿಗ್ಗೆ ಸ್ವಲ್ಪ ಹೊತ್ತಾಗಿ ಎದ್ದ ಸಾವಿತ್ರಿ ನಸುದೂರದಲ್ಲಿ ಮಲಗಿದ್ದ ನೀಲಮ್ಮನ ಮಗುವನ್ನು ಮೆಲ್ಲಗೆ ಮುದ್ದಿಟ್ಟು ಹಾಸಿಗೆಯಿಂದ ಎದ್ದು ಒಳ ಹೋದಳು. ಐದು ತಿಂಗಳು ತುಂಬಿದ್ದ ಅವಳ ಮೈ ರಸದುಂಬುವ ಕಿತ್ತಳೆ ಯಂತೆ ರಸವೂಡಿಕೊಳ್ಳುತಿತ್ತು. ತನುಮನಗಳಲ್ಲಿ ತಾಯ್ತನದ ಹುಮ್ಮಗರಿ ತಳೆಯುತಿತ್ತು. ಮುಖ ತೊಳೆದುಕೊಂಡು ಹೊರಬಂದಾಗ ಎದುರಾದ ನೀಲಮ್ಮ ಮಗುವನ್ನೆತ್ತಿಕೊಂಡಿದ್ದಳು.

"ಸಾವಿತ್ರೀ, ನಿನಗೆ ಈ ಬಾರಿ ಹುಟ್ಟುವುದು ಹೆಣ್ಣು!" ನೀಲಮ್ಮ ಹಾರೈಸಿದಳು.

"ಹಾಗಿದ್ದರೆ ನೀವೂ ನಾನೂ ಬದಲಾಯಿಸಿಕೊಳ್ಳೋಣ."

"ಅಂದರೆ ನಿನಗೆ ಗಂಡು ಬೇಕೆಂದಾಯ್ತು?"

ಕಿಲಕಿಲ ನಗುವೇ ಉತ್ತರವಾಯ್ತು.

"ಅಯ್ಯೋ, ಗಂಡುಮಕ್ಕಳನ್ನು ಏನೆಂದು ಬಯಸೀಯೊ? ಇವರನ್ನು ಸಲಹುವುದರಲ್ಲಿ ನಾವು ಹಣ್ಣಾಗಿ ಬಿಡುವುದೇ ಸೈ. ಗಂಡು ಮಕ್ಕಳ ತುಂಟ ತನ ತಡೆಯುವುದು ಕಷ್ಟ."

"ಆದರೂ ಮುಂದೆ ಅವರೇ ಬೇಕಲ್ಲ?"

"ಹೆಣ್ಣಾದರೆ ಬೇಡವೇನು?"

"ಹೆಣ್ಣು ಎಂದೆಂದೂ ಪರರ ಮನೆಯ ಸೊತ್ತು."

"ಪರರ ಸೊತ್ತಾದರೂ ಚಿಂತೆಯಿಲ್ಲ. ಹೆತ್ತವರ ಬಗ್ಗೆ ಅನುಕಂಪ ತೋರಿಯಾರು?"

ಸಾವಿತ್ರಿಯು ನೀಲಮ್ಮನ ಕೈಯಿಂದ ಮಗುವನ್ನು ಎತ್ತಿಕೊಂಡು ಹೊರಬಂದಳು. ಚೀಲಗಳಲ್ಲಿ ಬತ್ತವನ್ನು ಭರ್ತಿಮಾಡುವ ಕಾರ್ಯದಲ್ಲಿ ಮಗ್ನರಾಗಿದ್ದ ಅಣ್ಣತಮ್ಮಂದಿರ ಮುಖ ಸಂತಸದಿಂದ ಅರಳಿತ್ತು. ರಾಮಣ್ಣ ಆನಂದಪ್ರಮತ್ತನಾಗಿ ಅಂದ. "ರಾಜ್ಯದಲ್ಲಿ ಅನೇಕ ಕಡೆ ಅಕಾಲವೃಷ್ಟಿ ಯಿಂದ ಬೆಳೆಗೆ ಹಾನಿ ತಟ್ಟಿದರೂ ದೇವರ ದಯದಿಂದ ನಮ್ಮ ಕಡೆ ತೊಂದರೆ ಯಾಗಲಿಲ್ಲ ...ದೇವರು ದೊಡ್ಡವನು."

"ನಾವ್ಯಾರಿಗೂ ಅನ್ಯಾಯ ಮಾಡಲಿಲ್ಲ." ರಾಜಣ್ಣ ನಗುಮುಖದಿಂದ ನುಡಿದ. ಮುಖ ಅರಳಿ ಹೂವಾಯಿತು.

"ಮಕ್ಕಳ ವಿದ್ಯಾಭ್ಯಾಸ-ನಿರ್ಮಲೆಯ ಮದುವೆ ಹೇಗಾಗುವುದೆಂಬ ಯೋಚನೆಯಾಗಿತ್ತು. ದೇವರೇ ಕಡೆ ಹಾಯಿಸಿದ."

"ಸಾವಿತ್ರೀ, ಮೈಸೂರಿಗೆ ಹೋಗಿದ್ದೆಯೇನು?" ರಾಜಣ್ಣ ಕೇಳಿದ.

"ಹೋಗಬೇಕೆಂದು ತುಂಬ ಮನಸ್ಸಿತ್ತು. ಆದರೆ ಅವರು ಮನಸ್ಸು ಮಾಡಲಿಲ್ಲ." ಮುಖದಲ್ಲಿ ನೀರಸಭಾವ ಮುದ್ರೆಯೊತ್ತಿತು. ಸ್ವಲ್ಪ ತಡೆದು ಪುನಃ ಮುಂದುವರಿದಳು. "ನೀವ್ಯಾರೂ ಚಿಕ್ಕಪ್ಪನನ್ನು ಹುಡುಕುವ ಗೋಜಿಗೆ ಹೋಗಲಿಲ್ಲ. ಪಾಪ, ಬದುಕಿದ್ದಾರೋ ಇಲ್ಲವೋ ಅದೂ ತಿಳಿಯಲಿಲ್ಲ." ಅವರ ಕತೆ ಏನಾಗಿದೆಯೋ?"

"ಅವನ ಮನಸ್ಸಿನ ಮೇಲೆ ದುಷ್ಪರಿಣಾಮವಾಗುವ ರೀತಿಯಲ್ಲಿ ಏನೋ ನಡೆದಿದೆ.

"ಹಾಗೆಂದರೆ?"

"ಈ ಕಾಲದಲ್ಲಿ ನಡೆಯಬಾರದ್ದು ನಡೆಯುತ್ತದೆ. ಅದರ ಆಳ ಸಾಕ್ಷಾತ್ ಪರಬ್ರಹ್ಮನಿಗೂ ತಿಳಿಯಲಿಕ್ಕಿಲ್ಲ.!"

"ನೀವೊಂದು ವಿಚಿತ್ರ ವ್ಯಕ್ತಿ." ಸಾವಿತ್ರಿ ಉಕ್ಕಿ ಬಂದ ನಗುವನ್ನು ತಡೆದುಕೊಂಡಳು. ರಾಜಣ್ಣನಿಗೆ ಸಾವಿತ್ರಿಯ ವರ್ತನೆ ಅಚ್ಚರಿಯನ್ನು ಮೂಡಿಸಿತು. ಒಡನೆ ಕೇಳಿದ "ಏಕೆ ಹಾಗೆಂದೆ?"

"ನಿಮ್ಮ ಮಾತಿನ ಧೋರಣೆ ಹಾಗಿದೆ." ಧೈರ್ಯದಿಂದಲೇ ಹೇಳಿದಳು ಸಾವಿತ್ರಿ. ಇದುವರೆಗೆ ಹಿತವೋ, ಅಹಿತವೋ ಮೂಕವೇದನೆಯಿಂದ ಸಹಿಸಿಕೊಳ್ಳುತ್ತಿದ್ದವಳಿಗೆ ಇಂದು ಎಲ್ಲಿಲ್ಲದ ಧೈರ್ಯ ಎದೆಯನ್ನಾವರಿಸಿದುದು ತನಗೇನೇ ಅಚ್ಚರಿಯನ್ನುಂಟು ಮಾಡಿತ್ತು.

"ನೀನಿನ್ನೂ ಚಿಕ್ಕವಳು. ನಿನಗೆ ಹೇಗೆ ಇದೆಲ್ಲಾ ಅರ್ಥವಾದೀತು?"

"ಸ್ವಲ್ಪ ಅರ್ಥವಾಗುವಂತೆ ಹೇಳಿರಿ."

"ಸಂಸಾರ ಬಿಟ್ಟು, ಮನೆ ಬಿಟ್ಟು, ದೇಶ ಬಿಟ್ಟು ಹೋಗಿರಬೇಕಾದರೆ ಅವನಿಗೆಷ್ಟು ನೋವಾಗಿರಬೇಕು ನೀನೇ ಯೋಚಿಸು. ಸಂಸಾರದಲ್ಲಿ ಏನೋ ಆಗಬಾರದ್ದು ಆಗಿದೆ!"

ಒಂದೆರಡು ಗಳಿಗೆ ಸುಮ್ಮನಿದ್ದು ಅನಂತರ ಸಾವಿತ್ರಿ ಹೇಳಿದಳು "ನಿಮ್ಮ ಊಹೆ ತಪ್ಪು."

"ಬೆಳ್ಳಗಿರುವುದೆಲ್ಲಾ ಹಾಲೆಂದು ತಿಳಿಯಬೇಡ." ಹಹ್ಹಹ್ಹಾ! ತಿರಸ್ಕಾರದ ನಗೆ ನಕ್ಕ ರಾಜಣ್ಣ. ಒಡನೆ ರಾಮಣ್ಣನ ಮುಖದಲ್ಲೂ ಪ್ರತಿ ನಗು ಮೂಡಿತು. "ಶಿವೆ ಈಗ ಬಹಳ ಬದಲಾಯಿಸಿದ್ದಾಳೆ. ಒಂದಲ್ಲ ಒಂದು ರೀತಿಯಲ್ಲಿ ಇವಳು ನಮ್ಮ ಕುಲಕ್ಕೆ ಕಳಂಕ ತರುವುದರಲ್ಲಿ ಸಂಶಯವಿಲ್ಲ." ಒತ್ತಿ ಹೇಳಿದ ರಾಜಣ್ಣ. ದನಿಯಲ್ಲಿ ಜಿಗುಪ್ಸೆಯು ತುಂಬಿ ತುಳುಕುತಿತ್ತು.

"ಅಯ್ಯೋ, ಎಂಥ ಮಾತು ಹೇಳುತಿದ್ದೀರಿ?" ಎಂದ ಸಾವಿತ್ರಿ ತುಸು ತಡೆದು ಪುನಃ ಹೇಳಿದಳು. ಒಡಹುಟ್ಟಿದವರು ಆಪತ್ತಿಗೊಳಗಾದರೂ ಲೆಕ್ಕಿಸದ ನೀವು ಟೀಕೆ ಮಾಡುವುದರಲ್ಲಿ ತಜ್ಞರಿದ್ದೀರಿ ಸಾಕು. ನಮ್ಮೆಲ್ಲರನ್ನೂ ಸ್ವಾಮಿ ಚಿಕ್ಕಪ್ಪ ಎಷ್ಟು ಪ್ರೀತಿಯಿಂದ ನೋಡಿದ್ದಾರೆ!" ಕಣ್ಣಂಚಿನಲ್ಲಿ ಥಳಕ್ಕನೆ ಹನಿಗಳು ಮೂಡಿದವು. ಬೇರೆಡೆಗೆ ತಿರುಗಿ ಕಾಣದಂತೆ ಒರಿಸಿಕೊಂಡಳು.

"ನಮ್ಮಲ್ಲೀಗ ಪ್ರೀತಿಯಿಲ್ಲವೇನು?" ರಾಜಣ್ಣ ನಕ್ಕುಬಿಟ್ಟ.

"ನಿಮಗೆ ತಮಾಷೆ; ಅವರಿಗೆ ಪ್ರಾಣಸಂಕಟ . ಅಷ್ಟೆ"

"ಚಿಕ್ಕಮಗು ತಪ್ಪಿಸಿಕೊಂಡರೆ ಹುಡುಕಬೇಕಾದುದು ನಮ್ಮ ಕರ್ತವ್ಯ. ಕಾರ್ಯಾಕಾರ್ಯಗಳ ಪರಿಜ್ಞಾನವಿದ್ದು ಬೇಕುಬೇಕಾಗಿ ಹೋದವರಿಗಾಗಿ ನಾನೆಂದೂ ಮರುಗಲಾರೆ. ಬದುಕಿದ್ದರೆ ಬಂದೇ ಬರುತ್ತಾನೆ. ಅವನಿಗೆ ಯಾವುದೇ ಬಗೆಯ ತೊಂದರೆಯಿದ್ದರೂ ನಮ್ಮೊಂದಿಗೆ ಹೇಳಲಿಲ್ಲವೇಕೆ? ಈಗ ಹುಡುಕುವ ತೊಂದರೆಯನ್ನು ನಾವೇಕೆ ತೆಗೆದುಕೊಳ್ಳಬೇಕು?" ರಾಜಣ್ಣ ಜೋರಾಗಿ ಹೇಳಿದ; ಕಣ್ಣುಗಳಲ್ಲಿ ಕೋಪದ ಕಿಡಿ ಮಿಂಚುತ್ತಿತ್ತು.

"ನಿಮಗೆ ಮರುಕವಿಲ್ಲ."

"ಸರಿಯಮ್ಮಾ, ಈಗ ಏನು ಮಾಡು ಅಂತಿ? ಊರಿಂದೂರಿಗೆ ಹೋಗಿ ಮನೆ ಮನೆ ಸುತ್ತಿ ಸ್ವಾಮಿಯಿದ್ದಾನೆಯೇ ಎಂದು ಕೇಳಲಾದೀತೆ?" ಎಂದು ರಾಜಣ್ಣ ಘಕಘಕನೆ ನಕ್ಕುಬಿಟ್ಟ. ಒಂದುಗೂಡಿ ರಾಮಣ್ಣನೂ ನಗತೊಡಗಿದ. ಸಾವಿತ್ರಿಗೆ ಬೇಸರವೆನಿಸಿ ನೋಟವನ್ನು ಬೇರೆಡೆಗೆ ಹರಿಸಿ. "ಸಾಕು, ನಿಮ್ಮ ನಗೆ" ಎಂದಳು. ಪುನಃ ಇಬ್ಬರೂ ಗೊಳ್ಳನೆ ನಕ್ಕುಬಿಟ್ಟರು. ಸಾವಿತ್ರಿ ತಕ್ಷಣ ಮಗುವಿನೊಂದಿಗೆ ಒಳಗಡೆ ಹೋದಳು. ಮನದಲ್ಲಿ ಎಲ್ಲಿಲ್ಲದ ನೋವು ಸಂಕಟ ಮೂಡಿತು. ಹೃದಯ ಕಲ್ಲು ಹೊತ್ತಂತೆ ಭಾರವಾಯಿತು.

ಪಾತ್ರೆಗಳನ್ನು ತೊಳೆದು ಮನೆಗೆಲಸವನ್ನು ಮುಗಿಸಿ ನೀಲಮ್ಮ ತನ್ನ

ಮನೆಗೆಂದು ಹೊರಟಾಗ ಸಾವಿತ್ರಿ ತಡೆದು ಹೇಳಿದಳು "ಇದೇನು ಈಗಲೇ ಹೊರಟುಬಿಟ್ಟರಿ ? ಚಿಕ್ಕಪ್ಪ ಇನ್ನೂ ಇಲ್ಲೇ ಇದ್ದಾರೆ ಅವರ ಕೆಲಸವಿನ್ನೂ ಮುಗಿಯದಿರುವಾಗ ನಿಮಗೇನವಸರ ? ರಾತ್ರಿಯ ಅಡುಗೆ ಹೇಗೂ ಮಿಕ್ಕಿದೆ ಉಂಡು ಹೋದರಾಗದೆ ?"

ಅಷ್ಟರಲ್ಲಿ ಎದುರಾದ ರಾಜಮ್ಮನೂ ಹಾಗೇ ಅಂದಳು. ಆದರೆ ರಾಜಣ್ಣ ಬೆಳಗ್ಗೆಯೇ ಹೊರಡಲು ಹೇಳಿದ್ದುದರಿಂದ ಏನು ಮಾಡುವುದೆಂದು ನೀಲಮ್ಮ ಯೋಚನೆಗೊಳಗಾದಳು. ಸ್ವಲ್ಪ ಯೋಚಿಸಿದ ನಂತರ "ಇಲ್ಲ, ಈಗಲೇ ಹೋಗಿಬಿಡುವೆ. ಮನೆಯಲ್ಲಿ ಬಹಳ ಕೆಲಸವಿದೆ. ಇನ್ನೂ ನಾನಿಲ್ಲಿರುವುದು ಕಂಡರೆ ರೇಗಿಬಿಟ್ಟಾರು." ಎಂದಳು: ದನಿಯಲ್ಲಿ ದುಗುಡವಿತ್ತು ಶ್ರದ್ಧೆ ಇತ್ತು. ಭಯಭೀತಿಯಿತ್ತು

"ಈಗಾಗಲೇ ಬಹಳ ಹೊತ್ತಾಗಿಬಿಟ್ಟಿದೆ. ಇನ್ನು ಹೋಗಿ ಅಡುಗೆ ಯಾಗುವುದೆಂದಿಗೆ ? ಸುಮ್ಮನೆ ಇದ್ದುದನ್ನು ಉಂಡು ಹೋಗಿರಿ."

ನೀಲಮ್ಮ ಅಕ್ಕನ ಮಾತಿಗೆ ಎದುರಾಡದೆ ಬಟ್ಟೆಗಳನ್ನಾದರೂ ಒಗೆ ಯೋಣವೆಂದು ಪಕ್ಕದಲ್ಲಿ ಹರಿಯುತ್ತಿದ್ದ ಹಳ್ಳದ ಕಡೆ ಹೋದಳು. ಜೊತೆಗೆ ಸಾವಿತ್ರಿಯೂ ಬಂದಳು. ನೀಲಮ್ಮ ಬಟ್ಟೆಯನ್ನು ಒಗೆಯುತ್ತಿದ್ದಂತೆ ಸಾವಿತ್ರಿಯು ಪಕ್ಕದಲ್ಲಿದ್ದ ಕಲ್ಲಿನ ಮೇಲೆ ಕುಳಿತುಕೊಂಡಳು. ನೀಲಮ್ಮನ ಕೈಯಿನ ಚಟುವಟಿಕೆಯನ್ನು ಗಮನಿಸುತ್ತಾ ಸಾವಿತ್ರಿಯೆಂದಳು "ನಿನ್ನೆಯಿಂದ ನಿಮಗೆ ನಿಮಿಷವೂ ಬಿಡುವು ದೊರೆಯಲಿಲ್ಲ"

"ಕೈ ಕೆಸರಾದರೇನೇ ಬಾಯಿ ಮೊಸರು"

"ಮನಸ್ಸಿಗೆ ನೆಮ್ಮದಿಯಿಲ್ಲದಮೇಲೆ ಮೊಸರೂಟ ಹಿತವನ್ನು ತಂದೀತೆ ?"

"ಇದ್ದುದರಲ್ಲೇ ತೃಪ್ತಿ ಪಡಬೇಕು ಸಾವಿತ್ರೀ. ಇಲ್ಲದುದನ್ನು ಬಯಸಿದ ರಾದೀತೆ ?"

"ಸಂಸಾರದಲ್ಲಿ ಸುಖವಿರಬೇಕಾದರೆ ಹೆಣ್ಣು ಗಂಡು ಇಬ್ಬರೂ ಬುದ್ಧಿ ವಂತರಾಗಬೇಕು. ವಿದ್ಯೆಯಿಲ್ಲ; ಬುದ್ಧಿಯಿಲ್ಲ. ಈ ಬಾಳೊಂದು ಪಶು ಜೀವನ; ಅದಕ್ಕಿಂತ ಕೀಳೆಂದರೂ ಸರಿಯೆ. ನಮ್ಮವರ ದೃಷ್ಟಿಯಲ್ಲಿ ಹೆಣ್ಣೆಂಬುದು ಭೋಗಸಾಮಗ್ರಿ ಹಾಗೂ ಮನೆಗೊಂದು ತೊತ್ತು. ಈ ಪರಿಯ ಜೀವನ

ನನಗಿನಿತೂ ಇಷ್ಟವಿಲ್ಲ."

"ಹಾಗೆಂದರಾದೀತೆ ? ನೀನು ಜೀವನಕ್ಕೆ ಇದೀಗ ಕಾಲಿಟ್ಟವಳು. ಈಸಬೇಕು; ಇದ್ದು ಜೈಸಬೇಕು. ಎಂದು ದಾಸರು ಹಾಡಿಲ್ಲವೆ ?"

"ಎಷ್ಟಾದರೂ ನಯವಿಲ್ಲ; ನಾಜೋಕಿಲ್ಲ. ಒಂದಿಷ್ಟಗಲ ಜಾಗದಲ್ಲಿ ಹತ್ತಾರು ಮಂದಿಯ ಜೀವನ. ನಮ್ಮವರಿಗೇನು ಕಮ್ಮಿ? ಆಸ್ತಿಯಿದೆ; ಉತ್ಪತ್ತಿಯಿದೆ; ಭೋಗಿಸುವ ವಿಧಾನ ಗೊತ್ತಿಲ್ಲ. ಅಚ್ಚುಕಟ್ಟಾಗಿ ಒಂದು ಮನೆಯನ್ನು ಕಟ್ಟಿರಿ ಎಂದರೆ ಕೇಳುವವರಾರು ?"

"ನಾವು ಪಡೆದು ಬಂದಿರುವುದೇ ಅಷ್ಟು."

"ಒಟ್ಟಿನಲ್ಲಿ ಹೆಣ್ಣಾಗಿ ಹುಟ್ಟುವುದೇ ತಪ್ಪು." ಎಂದು ಸಾವಿತ್ರಿ ಯೋಚನೆಯ ಭರದಲ್ಲಿ ತುಸುಹೊತ್ತು ಸುಮ್ಮನಾದಳು. ನೀಲಮ್ಮನೂ ಮಾತಾಡಲಿಲ್ಲ. ಒಗೆದ ಬಟ್ಟೆಗಳನ್ನು ಹಿಂಡಿ ಕಲ್ಲಿನ ಮೇಲಿಡುತ್ತಿದ್ದಳು. ಅದನ್ನೇ ನೋಡುತ್ತ ಸಾವಿತ್ರಿ ಪುನಃ ಮುಂದುವರಿದಳು "ಚಿಕ್ಕಮ್ಮಾ, ನಾವು ಬೆಳಗಿನಿಂದ ರಾತ್ರಿಯವರೆಗೆ ದುಡಿದರೂ ದುಗ್ಗಾಣಿಗಾಗಿ ಕಣ್ಣೀರಿಡ ಬೇಕು. ಒಮ್ಮೆ ಮೈಸೂರಿಗೆ ಹೋಗಿ ಚಿಕ್ಕಮ್ಮನನ್ನು ನೋಡಬೇಕೆನ್ನುವ ನನ್ನ ಹಂಬಲ ಹೇಳತೀರದು. ಆದರದು ತೀರದ ಹಂಬಲ ಯಾರೊಂದಿಗೆ ಹೇಳಿಕೊಳ್ಳಲಿ ಹೇಳಿರಿ."

"ಅದು ನಿಜ ಸಾವಿತ್ರೀ, ಎಲ್ಲರ ಪಾಡೂ ಹಾಗೇ ಆಗಿದೆ. ನಿನ್ನ ಮದುವೆಯಲ್ಲಿ ಶಿವೆಯನ್ನು ನೋಡಿದ್ದು. ಒಮ್ಮೆ ಹೋಗಿ ಬರೋಣ ವೆನ್ನಿಸುತ್ತೆ. ಹೋಗಲಿ ಬಿಡು. ಹೇಳಿಕೊಂಡೇನು ಫಲ ? ಇಲ್ಲದುದನ್ನು ಬಯಸುವುದಕ್ಕಿಂತ ಬದುಕಿರುವಷ್ಟು ಕಾಲ ಈ ಬಾಳನ್ನು ಸಾಗಿಸಿ ಕೊಳ್ಳುವುದು ಲೇಸು ಎಂಬುದನ್ನು ಮನದಟ್ಟು ಮಾಡಿಕೊ ಸಾವಿತ್ರೀ."

"ನಾನಂತೂ ಹಾಗೆನ್ನಲಾರೆ. ಇದು ಸರಿ ಹೋಗಲೇಬೇಕು. ಈ ಬಗೆಯ ಜೀವನ ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ. ಈಚೆಗೆ ನಮ್ಮ ನೆರೆಯವರಲ್ಲಿ ನಡೆದ ವಿಚಾರ ಕೇಳಿರಿ; ಗಂಡ ಶುದ್ಧ ಕುಡುಕ. ಹೆಂಡತಿ ಯನ್ನು ನಾನಾಪರಿ ಹಿಂಸಿಸಿ ತೌರಿಗೆ ಅಟ್ಟಿಬಿಟ್ಟ. ಅವಳಿಗೆ ಮೂರು ಮಕ್ಕಳು. ಅವರನ್ನು ತಾಯಿಯೊಂದಿಗೆ ಹೋಗಗೊಡಿಸಲಿಲ್ಲ. ಆ ಪುಟ್ಟ ಮಕ್ಕಳು ತಾಯಿ ಗಾಗಿ ಗೋಳಿಡುವ ರೀತಿ ಕರುಳು ಕಿತ್ತು ಬರುವಂತಿರುತ್ತೆ. ಇತ್ತ ಮಕ್ಕ

ಳನ್ನೂ ಈತ ಸರಿಯಾಗಿ ನೋಡಿಕೊಳ್ಳುವುದಿಲ್ಲ. ಆದರೂ ಜನ ಅವನ ಕಡೆಗೆ! ಅಲ್ಲಿ ತಾಯಿ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾಳೆ. ಇದು ಸಮಾಜ ಚಿಕ್ಕಮ್ಮಾ. ಪಶು ಜೀವನ ಇದಕ್ಕಿಂತ ಉತ್ತಮವಲ್ಲವೇ?"

"ನಿಜ." ನಿಟ್ಟುಸಿರು ಬಿಟ್ಟು ನೀಲಮ್ಮ ಹೇಳಿದಳು. "ಬಾಳನ್ನು ಹೊಗುವಾಗ ಮೈಯಲ್ಲಿ ಶಕ್ತಿಯು ಸಂಚಾರವಿರುತ್ತೆ. ಕಷ್ಟದ ಸೋಂಕೇ ತೋರುವುದಿಲ್ಲ. ಜೀವನ ಸ್ವರ್ಗಮಯವಾಗಿ ತೋರಿ ಸಂತೋಷದಿಂದ ಕಾಲಿಡುತ್ತೇವೆ" ನೀರಸ ನಗುವನ್ನು ಬೀರಿ ಪುನಃ ಮುಂದುವರಿದಳು. "ಬಾಳು ಕಷ್ಟವೆಂಬುದು ನಿಜ. ಹಾಗೆಂದು ಬಾಳಿಲ್ಲದೆ ಒದುಕಲಾದೀತೆ? ಹೇಗೋ ಹಾಗೆ ಸರಿತೂಗಿಸಿಕೊಳ್ಳಬೇಕು. ಮೊನ್ನೆ ಚಂದಣ್ಣ ಇಂತಹದೇ ಒಂದು ವಿಚಾರ ಹೇಳಿದರು. ಅವರೂರಿನ ಬ್ರಾಹ್ಮಣರಲ್ಲಿ ನಡೆದುದು: ಐದು ಮಕ್ಕಳ ತಾಯಿ ಗಂಡನ ಹಿಂಸೆ ತಡೆಯಲಾರದೆ ಮಕ್ಕಳೊಂದಿಗೆ ತೌರು ಸೇರಿಕೊಂಡಳು. ಮಕ್ಕಳೊಡನೆಯೂ ಒಡವೆ ವಸ್ತುಗಳೊಡನೆಯೂ ತೌರು ಸೇರಿಕೊಂಡಳೆಂದು ಗಂಡ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದನಂತೆ. ಅವಳು ಒಡವೆ ವಸ್ತುಗಳೊಡನೆ ಹೋದುದು ಸುಳ್ಳಾದರೂ ಬೇಕೆಂತಲೇ ಹಾಗೆ ಮಾಡಿದ. ಅವನಿಗೆ ಮಾವನ ಮನೆಯಲ್ಲಿ ಒಡವೆಗಳೇನೇನಿತ್ತೆಂಬುದು ಗೊತ್ತಿತ್ತು. ಅವನ್ನೇ ತನ್ನವೆಂದು ವಾದಿಸಿದ. ಕೋರ್ಟು ಐದು ಮಕ್ಕಳನ್ನೂ, ಅವನು ಬೇಡಿದ್ದ ಮಾವನ ಮನೆಯ ಆಭರಣವನ್ನೂ ಕೊಡಿಸಿತು! ಆಕೆ ಮಕ್ಕಳು ಬೇಕೆಂದು ಎಷ್ಟು ಬೇಡಿಕೊಂಡರೂ ದಕ್ಕಲಿಲ್ಲ. ಪಾಪ, ಅವಳ ಮತ್ತು ಮಕ್ಕಳ ಗೋಳು ಹೇಳತೀರದು ಎನ್ನುತ್ತಿದ್ದರು ಚಂದಣ್ಣ."

"ಇದು ಜೀವನ! ಇದು ನ್ಯಾಯ?"

ಅಷ್ಟರಲ್ಲಿ ಶಂಕರ ಅಲ್ಲಿಗೆ ಬಂದು ಹೇಳಿದ. "ಅಪ್ಪ ಅವಸರಿಸುತಿದ್ದಾರೆ. ಹೋಗಲು ಹೊತ್ತಾಯ್ತಂತೆ."

"ನೀವು ಊಟ ಮಾಡಿದಿರೋ?" ಸಾವಿತ್ರಿ ಕೇಳಿದಳು.

"ಹ್ಞೂ."

ಒಡನೆಯೇ ನೀಲಮ್ಮ ಉಳಿದೆರಡು ಬಟ್ಟೆಗಳನ್ನು ಲಗುಬಗನೆ ಹಿಂಡಿ ಬುಟ್ಟಿಯಲ್ಲಿ ತುಂಬಿಕೊಂಡು ಎದ್ದಳು. ಅಂಗಳದಲ್ಲಿ ಎದುರಾದ ರಾಜಣ್ಣ "ಏನು? ಇನ್ನೂ ಮುಗಿಯಲಿಲ್ಲವೇ?" ಎಂದು ಕಣ್ಣುಗಳಲ್ಲಿ ಕಿಡಿಕಾರಿದ.

ನೀಲಮ್ಮನ ಮಾರುದ್ದ ದೇಹ ಗೇಣುದ್ದವಾಯಿತು. ಹುಲಿಯನ್ನು ಕಂಡು ಬೆಚ್ಚಿದ ಹರಿಣಿಯಂತೆ ಒಳತೂರಿಕೊಂಡಳು. ಬಟ್ಟೆಯನ್ನು ಬದಿಗಿಟ್ಟು "ಸಾವಿತ್ರೀ, ಅವರು ಹೊರಟು ನಿಂತಿದ್ದಾರೆ. ಇನ್ನೂ ತಡಮಾಡಿದರೆ ಹೆಬ್ಬುಲಿಯಾಗುವುದೇ ಸೈ. ನಾನೀಗ ಹೊರಟೇ ಬಿಡುವೆ" ಎಂದಳು ಒಂದೇ ಉಸುರಿಗೆ.

"ಅವರೆಲ್ಲರೂ ಉಂಡಿದ್ದಾರೆ. ನಿಮಗೆ ಊಟ ಬೇಡವೇನು? ಇದೇನು ಉಪವಾಸ ಬೀಳುವುದೇ? ಸುಮ್ಮನೆ ಉಂಡು ಹೋಗಿರಿ." ಮಾತು ಮುಗಿಯುವುದರೊಳಗಾಗಿ ಸಾವಿತ್ರಿ ಎಲೆ ಹಾಕಿದಳು. ರಾಜಮ್ಮನೂ ಹಾಗೆಂದೇ ಒತ್ತಾಯ ಮಾಡಿದಳು. ನೀಲಮ್ಮನಿಗೆ ತುತ್ತು ಗಂಟಲ ಗಾಳ ವಾಯಿತು. ಚಿಕ್ಕಮ್ಮನ ಸ್ಥಿತಿಯನ್ನು ನೋಡಿ ಸಾವಿತ್ರಿ ಮರುಕಗೊಂಡು ಚಿಕ್ಕಪ್ಪನಿದ್ದಲ್ಲಿಗೆ ಹೋಗಿ ಹೇಳಿದಳು. "ನಿಮಗೆ ಹೊತ್ತಾದರೆ ಹೋಗಿರಿ. ಚಿಕ್ಕಮ್ಮ ಇನ್ನೂ ಊಟ ಮಾಡಲಿಲ್ಲ. ಅವರು ಅನಂತರ ಬರುತ್ತಾರೆ." ದನಿಯಲ್ಲಿ ತುಸು ಕೋಪವೂ ಸಮ್ಮಿಳಿತವಾಗಿತ್ತು.

ದಿನವೂ ಊಟದ ನಂತರ ಹಾಯಾಗಿ ನಿದ್ದೆ ಹೋಗುವ ಸ್ವಭಾವದವ ನಾದ ರಾಜಣ್ಣನಿಗೆ ಕಣ್ಣು ತೂಕಡಿಸುವ ಸ್ಥಿತಿಯಲ್ಲಿತ್ತು. ಸಾವಿತ್ರಿಯ ಮಾತಿನಿಂದಾಗಿ ಕೋಪವುಕ್ಕೇರಿತು. "ಆಗಲೇ ಹೇಳಬಾರದಿತ್ತೆ? ವೃಥಾ ನನ್ನ ಸಮಯ ಹಾಳು!" ಸಿಡಿಕಿನಿಂದ ನುಡಿದು ಅಂಗವಸ್ತ್ರವನ್ನು ಹೆಗಲ ಮೇಲೆ ಹಾಕಿಕೊಂಡು ತ್ವರಿತವಾಗಿ ತನ್ನ ಮನೆಯ ಕಡೆ ಹೆಜ್ಜೆ ಹಾಕಿದ. ರಾಜಣ್ಣ ನಡೆದು ಹೋದ ರೀತಿ ಸಾವಿತ್ರಿಯ ಎದೆ ನಡುಗಿಸಿತು. ಒಳ ಬಂದೊಡನೆಯೇ ನೀಲಮ್ಮ ದಿಗ್ಭ್ರಾಂತಳಾಗಿ ಏನು ಮಾಡಿಬಿಟ್ಟೆ?" ಎಂದಳು.

"ಹೋಗಲಿ ಬಿಡಿ. ಇಂದು ನಾನೂ ನಿಮ್ಮೊಂದಿಗೆ ಬರುವೆ. ಉಂಡು ನಿಧಾನವಾಗಿ ಹೋದರಾಯ್ತು. ಅಷ್ಟೇ ಸಮಾಧಾನದಿಂದ ನುಡಿದಳು ಸಾವಿತ್ರಿ.

"ನಿನ್ನ ಮೂಲಕ ನನ್ನ ಉತ್ತರವೇ ಬಂದಿದೆಯೆಂದು ಅವರು ತಿಳಿಯು ತ್ತಾರೆ." ಎಂದ ನೀಲಮ್ಮ ಒಂದು ಗಳಿಗೆ ತಡೆದು ಮತ್ತೆ ಹೇಳಿದಳು. ಇಂದವರಿಗೆ ಕೋಪ ನೆತ್ತಿಗೇರಿದೆ. ನಾನೀಗಲೇ ಹೋಗಿದ್ದರೆ ಒಳ್ಳೆಯದಿತ್ತು."

ಜೊತೆಗೆ ರಾಜಮ್ಮನೂ ಸಾವಿತ್ರಿಯೂ ಕುಳಿತು ಊಟ ಮುಗಿಸಿದರು. ನೀಲಮ್ಮ ಮನೆ ಬಿಡುವಷ್ಟರಲ್ಲಿ ಮಧ್ಯಾಹ್ನ ಮೂರು ಗಂಟೆಯಾಗಿತ್ತು. ಸುಡು ಬಿಸಿಲು ಎಲ್ಲೆಲ್ಲೂ ತುಂಬಿ ಹರಡಿತ್ತು. ಜೊತೆಗೂಡಿ ಬರುವೆನೆಂದು ಹೊರಟ ಸಾವಿತ್ರಿಯನ್ನು ತಡೆದು, ಬಿಸಿಲ ಝಳ ಬಹಳವಾಗಿದ್ದುದರಿಂದ ಸಂಜೆಯ ತಂಪು ಹೊತ್ತಿನಲ್ಲಿ ಬರಲು ಹೇಳಿದ ನೀಲಮ್ಮ ಮಕ್ಕಳೊಂದಿಗೆ ತನ್ನ ಮನೆಗಭಿಮುಖವಾಗಿ ಹೊರಟಳು. ಮನಸ್ಸು ನಾನಾ ಕಾರ್ಯರಂಗದಲ್ಲಿ ವಿಹರಿಸುತ್ತಿತ್ತು.

ಮುಂದಿನ ಮೆಟ್ಟಿಲಿನ ಮೇಲೆ ಸಂಪಿಗೆಯ ನೆರಳು ಹರಡಿದ್ದುದರಿಂದ ತಂಪಾಗಿತ್ತು. ರಾಜಮ್ಮನೂ ಸಾವಿತ್ರಿಯೂ ಮೆಟ್ಟಿಲಿನ ಮೇಲೆ ಕುಳಿತು ಕೊಂಡರು. ದೂರದ ತಿರುವಿನಲ್ಲಿ ನೀಲಮ್ಮ ಮಕ್ಕಳೊಂದಿಗೆ ಕಣ್ಮರೆಯಾದಳು. ಗದ್ದೆಯ ಕೋಗಿನಾಚೆ ಹತ್ತಾರು ಮರಗಳ ಹಿಂಬದಿಯಲ್ಲಿ ರಾಜಣ್ಣನ ಹೊಸ ಮನೆ....ಮರಗಳು ದಟ್ಟವಾಗಿ ಬೆಳೆದಿದ್ದುದರಿಂದ ಕಾಣಿಸುತ್ತಿರಲಿಲ್ಲ.

ಅಂಗಳದಲ್ಲಿ ದಟ್ಟವಾಗಿ ಹರಡಿದ ತಣ್ಣನೆಯ ನೆರಳಲ್ಲಿ ಕರಿಯ ನಾಯೊಂದು ಸದ್ದಿಲ್ಲದೆ ನಿದ್ದೆ ಹೋಗಿತ್ತು. ಅಲ್ಲಿಯೇ ನಿಂತಿದ್ದ ವೆಂಕಟೇಶ ಮೆಲ್ಲಗೆ ಅದರ ಬಾಲದ ಮೇಲೆ ಕಾಲಿಟ್ಟು ಒತ್ತಿದ. ನಾಯಿ ಬೆಚ್ಚಿಬಿದ್ದು ಕಣ್ಣುಬಿಟ್ಟು ನೋಡಿತು. ಅಲ್ಲಿಗೂ ಬಿಡದೆ ಮತ್ತೆ ಮತ್ತೆ ಅಮುಕಿದ. ನಾಯಿ ಕೂಗಿಕೊಳ್ಳುತ್ತ ಅಲ್ಲಿಂದ ಓಡಿ ಹೋಗಲು ಕೊಸರಾಡತೊಡಗಿತು.

"ಅದಕ್ಕೇಕೆ ತೊಂದರೆ ಕೊಡುತ್ತಿ ?"

ವೆಂಕಟೇಶನ ಕಿಲಕಿಲ ನಗುವೇ ಉತ್ತರವಾಯಿತು. ರಮೇಶ ತನ್ನ ಅಚ್ಚುಮೆಚ್ಚಿನ ನಾಯಿಯ ಗೋಳನ್ನು ನೋಡಿದೊಡನೆಯೇ ಓಡಿ ಹೋಗಿ ಎತ್ತಿಕೊಂಡು ಹುಸಿ ಮುನಿಸಿನಿಂದ "ಅದರ ನೋವು ನಿನಗೆ ಹೇಗೆ ಗೊತ್ತಾದೀತು ?" ಎಂದೆನ್ನುತ್ತ ನಲ್ಮೆಯಿಂದ ಅದರ ತಲೆಯನ್ನು ನೇವರಿಸಿ ಮುದ್ದಿಸಿದ. ತನುಮನಗಳು ಆನಂದದ ಬೀಡಾದುವು.

"ವೆಂಕಟೇಶನನ್ನು ಕಳುಹಿಸಿ ನಿರ್ಮಲೆಯನ್ನು ಕರೆಸಿರಿ. ಒಬ್ಬಳೇ ಇರುವುದೆಂದರೆ ಬೇಜಾರು." ಸಾವಿತ್ರಿ ತಾಯಿಗೆಂದಳು.

"ಅಮ್ಮ ಮುಂದಿನ ತಿಂಗಳು ಕಳುಹಿಸುತ್ತೇನೆ ಎಂದಿದ್ದಾರೆ."

"ಅವಳಿಗೂ ಅಜ್ಜಿಮನೆ ಬಿಟ್ಟು ಬರಲು ಇಷ್ಟವಿಲ್ಲ" ವೆಂಕಟೇಶ ನುಡಿದ.

"ನಾನು ಬಂದಿರುವುದು ಗೊತ್ತಾದರೆ ಬರುತ್ತಾಳೆ."

"ಭಾನುವಾರ ವೆಂಕಟೇಶನನ್ನು ಕಳುಹಿಸೋಣ."

ರಮೇಶನೊಂದಿಗೆ ರಮಿಸುತಿದ್ದ ಕರಿಯ ನಾಯಿ ಅತ್ತಿಂದಿತ್ತ ಜಿಗಿದಾಡುತಿತ್ತು. ರಮೇಶ ಮಲ್ಲಿಗೆಯ ಪೊದೆಯಲ್ಲಿ ಅಡಗಿ ಕುಳಿತುಕೊಂಡ. ನಾಯಿ ಕ್ಷಣಾರ್ಧದಲ್ಲಿ ಗೆಳೆಯನನ್ನು ಪತ್ತೆ ಹಚ್ಚಿತು. ಅತ್ತಲೇ ನೋಡುತಿದ್ದ ಸಾವಿತ್ರಿ ಸಾನಂದದಿಂದ "ಬಲು ಚುರುಕು ನಾಯಿ" ಎಂದಳು. ಮಾತು ಮುಗಿಯುವುದರೊಳಗಾಗಿ ರಾಜಣ್ಣನ ಮನೆಯ ಕಡೆಯಿಂದ ಮಕ್ಕಳ ಚೀತ್ಕಾರ ಕರ್ಣ ಕಠೋರವಾಗಿ ಕೇಳ ಬಂದು ಸಾವಿತ್ರಿಯ ಮುಖ ಬಿಳಿಚಿಕೊಂಡಿತು. ರಾಜಮ್ಮ "ಅಯ್ಯೋ, ಪಾಪ. ಇಂದು ನೀಲೆಯ ಎಲುಬು ಮುರಿದು ಬಿಡುತ್ತಾನೆ ರಾಜಣ್ಣ" ಎಂದು ನಿಟ್ಟುಸಿರು ಬಿಟ್ಟಳು.

೧೫

ಬೆಳಗಿನಹೊತ್ತು. ಎಂಟೂವರೆ ಒಂಭತ್ತರ ಸಮಯ. ಮನೆಯ ಆವರಣ ದಲ್ಲೆಲ್ಲಾ ಜನ ತುಂಬಿ ನೆರೆದಿದ್ದಾರೆ. ಮನೆಯಲ್ಲಿ ಗದ್ದಲವೋ ಗದ್ದಲ. ಪುಟ್ಟ ಮಕ್ಕಳು ಪೊಲೀಸರ ಅನಿರೀಕ್ಷಿತ ಧಾಳಿಯಿಂದ ಕಂಗೆಟ್ಟು ದಿಕ್ಕು ತೋಚ ದಂತಾಗಿದ್ದಾರೆ. ನೆರೆದ ಮಂದಿಗೂ ಇದರ ಮರ್ಮ ತಿಳಿಯದೆ ತಮ್ಮ ತಮ್ಮೊಳಗೆ ಗುಸುಗುಸು ಮಾತಾಡಿಕೊಳ್ಳುತ್ತಿದ್ದರು. ಅತ್ಯಂತ ಅವಮಾನದಿಂದ ಉಡುಗಿಹೋದ ಶಿವೆ ಮೂಲೆಯಲ್ಲಿ ಕುಸಿದು ಕುಳಿತು ಮುಸುಗಿಕ್ಕಿ ಕಂಬನಿ ಗರೆಯುತ್ತಿದ್ದಾಳೆ. ಹಿಂದಣ ಮುಂದಣ ಬಾಗಿಲುಗಳೆರಡರಲ್ಲೂ ಪೊಲೀಸರು ಪಹರೆ ಇದ್ದು ಮನೆಯನ್ನು ತೀವ್ರ ಶೋಧನೆ ಮಾಡತೊಡಗಿದ್ದಾರೆ ಹೆದರಿ ಗಟ್ಟಿಯಾಗಿ ಅಳುತ್ತಿದ್ದ ಚಿಕ್ಕ ಮಕ್ಕಳನ್ನು ಸಂತೈಸಲು ಪ್ರಯತ್ನಿಸಿದ ರವಿಯು ಫಲಕಾರಿಯಾಗದೇ ಒಂದೆಡೆ ಗರ ಬಡಿದವನಂತೆ ನಿಂತುಬಿಟ್ಟ. ಎಳೆಯ ಹೃದಯ ಈಗಲೀಗ ಬಿರಿಯುವಂತೆ ವ್ಯಾಪ್ತಿಗೆ ಮೀರಿ ಮಿಡಿಯುತಿತ್ತು.

ಚಿಕ್ಕ ಬಾಬೂಜಿ ಪೊಲೀಸರ ತಂಡದೊಂದಿಗಿದ್ದು ಶೋಧನೆಯನ್ನು ಗಮನಿಸುತ್ತಿದ್ದ. ಕಾಳವರ್ಣದ ರುದ್ರಾಕಾರದ ಪೋಲೀಸ್ ಇನ್ಸ್‌ಪೆಕ್ಟರನ ಮುಖಂಡತ್ವದಲ್ಲಿ ಶೋಧನೆ ನಡೆಯುತಿತ್ತು. ಪೆಟ್ಟಿಗೆ ಹಾಸಿಗೆ ಬೀರು ಬಟ್ಟೆ ವಗೈರೆಗಳ ಪರಿಶೋಧನೆಯಿಂದ ಏನೂ ದೊರೆಯದಿರಲು ಮಕ್ಕಳ ಪುಸ್ತಕ ಅಟ್ಟದಲ್ಲಿದ್ದ ಕಟ್ಟಿಗೆಗಳನ್ನು ಚೆಲ್ಲಿಕೊಟ್ಟರು. ಅನಂತರ ದವಸ ಧಾನ್ಯಗಳ ನ್ನಿಟ್ಟಿದ್ದ ಡಬ್ಬಗಳ ಪರಿಶೋಧನೆಗೆ ಇನ್ಸ್‌ಪೆಕ್ಟರ್ ಮಹಾಶಯ ಅಪ್ಪಣೆ ಮಾಡಿದ. ಅಡಿಯಲ್ಲಿ ಹಣವನ್ನಿಟ್ಟು ಮೇಲೆ ದವಸವನ್ನು ತುಂಬಿರಬಹುದೆಂಬ ಅನುಮಾನ ತೋರಿದಾಗ ಕಾಳುಗಳನ್ನು ಸುರಿದು ನೋಡಲು ಅಪ್ಪಣೆ ಯಾಯಿತು. ಆಗಲೇ ನೆಲದಲ್ಲಿ ಸಮಸ್ತ ವಸ್ತುಗಳೂ ಚೆಲ್ಲಾಪಿಲ್ಲಿಯಾಗಿ ಹರಡಿ ಬಿದ್ದಿದ್ದುವು. ಇನ್ನು ಕಾಳುಗಳು ಕಲಬೆರಕೆಯಾಗುವುದೊಂದು ಬಾಕಿ.

"ಅದರಲ್ಲಿ ಏನೂ ಇಲ್ಲ. ಕಲ್ಲು ಮಣ್ಣಿನೊಂದಿಗೆ ಕಾಳುಗಳು ಸೇರಿ ಹೋಗುತ್ತವೆ." ರವಿ ತಡೆಯಲಾರದೆ ಹೇಳಿದ. ದನಿ ಗದ್ಗದವಾಯಿತು.

"ಗೊತ್ತಿದ್ದಲ್ಲಿ ಕಷ್ಟವೇನಿತ್ತು? ವೃಥಾ ಮಾತಾಡಿ ಏನು ಪ್ರಯೋಜನ?" ಎಂದ ರವಿ ಸ್ವಲ್ಪ ಯೋಚಿಸಿ ಮತ್ತೆ ಮುಂದುವರಿದ "ನಮ್ಮ ತಂದೆ ಕಣ್ಮರೆಯಾದಾಗಿನಿಂದ ನಾವು ಪಟ್ಟ ಪಾಡು ದೇವರೊಬ್ಬನಿಗೇ ಗೊತ್ತು. ಇಪ್ಪತ್ತು ವರ್ಷಗಳ ಕಾಲ ನಿಷ್ಠೆಯಿಂದ ಕೆಲಸ ಮಾಡಿದ ಸೇವಕನ ಪತ್ತೆ ಹಚ್ಚದೆ ಆತನ ಕುಟುಂಬಕ್ಕೂ ಸಹಾಯಮಾಡದೆ ಇಂಥ ಅತ್ಯಾಚಾರಕ್ಕೂ ಬಾಬೂಜಿಯವರು ಕೈ ಹಚ್ಚುತ್ತಾರೆಂದು ನಾವು ತಿಳಿದಿರಲಿಲ್ಲ!" ಮಾತು ಮುಗಿಯುವಷ್ಟರಲ್ಲಿ ಮನೆಯ ಹೊರಗಡೆ ನೆರೆದ ಜನರ ಗುಂಪಿನಿಂದ ಧ್ವನಿಯೊಂದು ಹೊರಬಿತ್ತು. "ಸ್ವಾಮಿ ಕಳ್ಳತನ ಮಾಡಿರುವುದು ಶುದ್ಧ ಸುಳ್ಳು. ಆತನನ್ನು ನಾನೂ ಬಾಲ್ಯದಿಂದಲೂ ಬಲ್ಲೆ. ಇದೆಲ್ಲಾ ಬಾಬೂಜಿಯ ತಂತ್ರ ಮತ್ತು ಮೋಸ!" ಆ ಮಹಾನುಭಾವರಾರಿರಬಹುದೆಂದು ಅರಿಯಲು ಶಿವೆ ಕಣ್ಣೆತ್ತಿ ನೋಡಲಿಲ್ಲವಾದರೂ ಅವರು ಕೃಷ್ಣಭಟ್ಟರೆಂಬುದನ್ನು ದನಿಯಿಂದಲೇ ಅರಿತುಕೊಂಡಳು. "ಈ ಆಪಾದನೆ ನಿರಾಧಾರ!" ಹಲವಾರು ದನಿಗಳು ಮತ್ತೆ ಮೊಳಗಿದುವು.

"ಇಷ್ಟು ದಿನಗಳ ನಂತರ ಸ್ವಾಮಿ ಕಳವು ಮಾಡಿದ್ದಾನೆಂದು ಹೇಳುವುದು ಸರಿಯೆ? ಒಂದು ವೇಳೆ ಸ್ವಾಮಿ ಕಳವು ಮಾಡಿರುವುದು ನಿಜವಾಗಿದ್ದಲ್ಲಿ ಆಗಲೇ ವಿಚಾರ ಮಾಡಲಿಲ್ಲವೇಕೆ?" ಪುನಃ ಗುಂಪಿನಿಂದ ದನಿಯೊಂದು ಮೊಳಗಿತು. ಹಿಂದೆಯೇ ಅನೇಕ ದನಿಗಳು ಮೊಳಗಿದುವು.

"ಇದೆಲ್ಲಾ ಶುದ್ಧ ಮೋಸ!"

"ಹೆಂಗಳೆಯರ ಮೇಲೆ ದೌರ್ಜನ್ಯ ಕೂಡದು."

ಪಹರೆಯಲ್ಲಿದ್ದ ಪೋಲೀಸರು ದೊಣ್ಣೆಯನ್ನು ಬೀಸಿ ಗದ್ದಲ ಮಾಡಬಾರದೆಂದು ಜನರಿಗೆ ಸೂಚಿಸಿದರು.

"ನಮ್ಮ ಹಣಕ್ಕಾಗಿ ಈ ಮನೆಯನ್ನು ವಶಪಡಿಸಿಕೊಳ್ಳುತ್ತೇವೆ. ಏನು ಹೇಳುತ್ತೀರಿ?" ಎಂದ ಚಿಕ್ಕ ಬಾಬೂಜಿ.

"ನಮ್ಮನ್ನು ಬೀದಿಗೆಳೆಯುತ್ತೀರೇನು?" ಉದ್ವೇಗದಿಂದ ಕೇಳುವಾಗ ರವಿಯ ಎಳೆಯ ಮುಖ ಕೋಪ ದುಃಖಗಳಿಂದ ಕೆಂಪು ಕೆಂಪಾಗಿತ್ತು ಕಣ್ಣಂಚಿನಲ್ಲಿ ಹನಿಯಾಡುತಿತ್ತು.

"ದಯವಿಟ್ಟು ಯಜಮಾನರ ಪತ್ತೆ ಹಚ್ಚಿರಿ." ಶಿವೆ ಕೈ ಮುಗಿದು

"ಹೊಸದಾಗಿ ಕಟ್ಟಿದ ಕಟ್ಟಡಗಳಿಗಾಗಿ ಖರ್ಚು ಮಾಡಿರಬಹುದು" ಬಾಬೂಜಿ ಇನ್ಸ್‌ಪೆಕ್ಟರನೊಂದಿಗೆ ಉಸುರಿದ.

ಪೆಟ್ಟಿಗೆಯಲ್ಲಿ ಕಾಗದಗಳ ಕಟ್ಟೊಂದು ದೊರೆಯಿತು. ಅವು ಕೈಯಿಂದ ಕೈಗೆ ಚಲಿಸಿದುವು. ಅವುಗಳಲ್ಲಿ ಮನೆಗಾಗಿ ಕೊಂಡ ಮತ್ತು ಮಾರಿದ ವಸ್ತುಗಳ ರಶೀದಿಗಳೂ ಸ್ವಾಮಿ ಹಿಂದೆ ವ್ಯಾಪಾರಕ್ಕಾಗಿ ಹೋಗಿದ್ದಾಗ ಬರೆದ ಕಾಗದಗಳೂ ಇದ್ದುವಲ್ಲದೆ ಬೇರೇನೂ ಇರಲಿಲ್ಲ. ಶಿವೆಯತ್ತ ಕ್ರೂರ ದೃಷ್ಟಿಯನ್ನು ಹರಿಸಿ ಇನ್ಸ್‌ಪೆಕ್ಟರ್ ಕೇಳಿದ "ನಿಮ್ಮ ಯಜಮಾನರು ಎಲ್ಲಿದ್ದಾರೆಂಬುದು ಗೊತ್ತೋ ?"

"ಇಲ್ಲ." ಒಣಗಿದ ತುಟಿಗಳನ್ನು ನಾಲಿಗೆಯಿಂದ ಒರಸಿಕೊಳ್ಳುತ್ತ ಅದುರುವ ದನಿಯಲ್ಲಿ ನುಡಿದಳು ಶಿವೆ.

"ಆತ ಎಂಥಾ ಬದ್‌ಮಾಷ್ ಕೆಲಸ ಮಾಡಿದ್ದಾನೆ !" ಕೆಂಗಣ್ಣ ಕುಡಿನೋಟ ಈಟಿಯಂತೆ ಎರಗಿತು.

ಇನ್ಸ್‌ಪೆಕ್ಟರನು ಮತ್ತೊಮ್ಮೆ ತನ್ನ ಕರಾಳ ದಿಟ್ಟಿಯನ್ನು ಬೀರಿ ಹೇಳಿದ "ನಿಮ್ಮ ಯಜಮಾನ ಬಾಬೂಜಿಯು ಅಂಗಡಿಯಿಂದ ಆರು ಸಾವಿರ ರೂಪಾಯಿಗಳನ್ನು ದೋಚಿಕೊಂಡು ಹೋಗಿದ್ದಾನೆ ! ಆ ಹಣದಲ್ಲಿ ಸ್ವಲ್ಪ ಭಾಗ ನಿಮ್ಮ ಕಡೆಗೆ ಬಂದಿರಬೇಕಷ್ಟೆ ?" ದನಿ ದರ್ಪಪೂರ್ಣವಾಗಿದ್ದು ಗುಂಡಿನಂತೆ ಕಿವಿಗೆ ತಾಗಿದಾಗ ಹೃದಯ ಈಗಲೀಗ ಬಿರಿಯುತ್ತಿದೆಯೋ ಎಂಬಂತೆ ಭಾಸವಾಯಿತು. ಕಣ್ಣುಗಳಲ್ಲಿ ಕಂಬನಿಯು ಕೋಡಿಗಟ್ಟಿ ಹರಿಯಿತು. ಶಿವೆ ಮಾತಾಡದಾದಳು.

"ಆರು ಸಾವಿರ ರೂಪಾಯಿಗಳನ್ನಾತ ಅಪಹರಿಸಿದ್ದಾನೆ. ನೀವೇನೆನ್ನುತ್ತೀರಿ ?" ಅದೇ ದನಿ ಮತ್ತೆ ಕರ್ಕಶವಾಗಿ ಮೊಳಗಿತು.

"ಇದು ಶುದ್ಧ ಸುಳ್ಳು. ಅಪ್ಪ ಇಂಥ ಹೀನ ಕೃತ್ಯ ಎಸಗುವವರಲ್ಲ. ಅವರು ನಮಗೆ ಇತರರ ಒಂದು ದುಗ್ಗಾಣಿಯನ್ನೂ ಮುಟ್ಟಬಾರದೆಂದು ಹಿತೋಪದೇಶ ಮಾಡುತ್ತಿದ್ದರು. ಅಂದಮೇಲೆ. ಅವರು ಕಳ್ಳತನ ಮಾಡುವುದೆಂದರೇನು ?" ರವಿ ಹಲ್ಲು ಕಚ್ಚಿ ನುಡಿದ.

"ಸ್ವಾಮಿ ಇರುವ ಸ್ಥಳ ನಿಮಗೆ ಗೊತ್ತಿರಲೇಬೇಕು. ಬೇಕೆಂತಲೇ ಮರೆಮಾಚುತ್ತಿದ್ದೀರಿ."

ಕೇಳಿಕೊಂಡಳು. ಭಯದಿಂದ ಮೈ ಕಂಪಿಸುತಿತ್ತು. ಕಣ್ಣುಗಳಲ್ಲಿ ಕಂಬನಿ ಧಾರೆಧಾರೆಯಾಗಿಳಿಯುತಿತ್ತು.

"ಆತನ ಪತ್ತೆ ಸಾಧ್ಯವಾಗಲಿಲ್ಲ. ಎಲ್ಲಿಯೋ ಅಡಗಿಕೊಂಡಿದ್ದಾನೆ ಬದ್‌ಮಾಷ್!" ಚಿಕ್ಕ ಬಾಬೂಜಿ ಹಲ್ಲು ಕಚ್ಚಿ ನುಡಿದ. ಅನಂತರ ಇನ್ಸ್‌ಪೆಕ್ಟರನೊಂದಿಗೆ ಪಿಸುದನಿಯಲ್ಲಿ ಏನೇನೋ ಉಸುರಿದ.

"ನೀವೀಗ ಮನೆಯನ್ನು ಬಿಟ್ಟುಕೊಡಬೇಕು. ಅಥವಾ ಹಣವನ್ನು ಕಂತು ರೂಪದಲ್ಲಾದರೂ ಕಟ್ಟಬೇಕು. ಅಂದಿನಿಂದ ಅದರ ಬಡ್ಡಿಯೂ ಸೇರುತ್ತದೆ. ಇಲ್ಲವಾದರೆ ಬಾಬೂಜಿ ನಿಮ್ಮ ಮೇಲೆ ಕ್ರಮ ಜರುಗಿಸುತ್ತಾರೆ. ಎಚ್ಚರಿಕೆ!" ಇನ್ಸ್‌ಪೆಕ್ಟರನ ದನಿ ಗುಡುಗಿತು. ನಯನದ್ವಯಗಳು ಕ್ರೂರವಾಗಿದ್ದುವು.

ಶಿವೆಯ ಕಂಬನಿಯೇ ಉತ್ತರವಾಯಿತು.

"ನಾವು ತಂದೆಯವರ ಕಾಹಿಲೆಯಿಂದಾಗಿ ಹಣದ ಲೆಕ್ಕಾಚಾರದ ಕಡೆಗೆ ಅಷ್ಟಾಗಿ ಗಮನಕೊಡಲಿಲ್ಲ. ಆದ್ದರಿಂದ ಹಣ ಕಳುವಾದುದು ನಮ್ಮ ಗಮನಕ್ಕೆ ಆಗ ಬರಲಿಲ್ಲ. ಸ್ವಾಮಿಗೆ ಸರಕು ಕೊಳ್ಳಲು ಕೊಟ್ಟ ಹಣ ನಾಪತ್ತೆಯಾಗಿದೆ." ಎಂದು ಚಿಕ್ಕ ಬಾಬೂಜಿ ಹಣ ಕಳುವಾದ ಬಗೆಯನ್ನು ವಿವರಿಸಿದ. ಹೊರಗಡೆ ನೆರೆದ ಜನಸ್ತೋಮ ಸ್ತಬ್ಧರಾಗಿ ಸಂಭಾಷಣೆಯನ್ನು ಕೇಳುತ್ತಿದ್ದು ಅನಂತರ "ಇದೆಲ್ಲಾ ಶುದ್ಧ ಮೋಸ!" ಎಂದು ಕೂಗಿದರು.

"ಏನು ಹೇಳುತ್ತೀರಿ?" ರುದ್ರಕಾಯದಿಂದ ದನಿ ಗುಡುಗಿನಂತೆ ಹೊರಟಿತು.

"ಹೇಳುವುದೇನು? ಅಪ್ಪನನ್ನು ಪತ್ತೆ ಹಚ್ಚಿದರೆ ವಿಷಯ ಹೊರ ಹೊಮ್ಮುತ್ತದೆ" ರವಿ ನುಡಿದ.

"ಅದು ಸಾಧ್ಯವಾಗದ ಮಾತು."

"ಹಣ ತೆರುವುದು ನಮಗೂ ಸಾಧ್ಯವಾಗದ ಮಾತು."

"ಇಂದೇ ನಿಮ್ಮನ್ನು ಹೊರಹಾಕಿಯೇನು ತಿಳಿಯಿತೇ?"

"ಹಣವನ್ನು ಅಪ್ಪನೇ ತೆಗೆದುಕೊಂಡಿದ್ದಾರೆಂಬುದಕ್ಕೆ ಮಾಹಿತಿಯೇನು?"

"ಸ್ವಾಮಿ ಕಾಣೆಯಾಗಿರುವುದೇ ಸಾಕ್ಷಿ!"

"ಮನೆ ಮಠಬಿಟ್ಟು ನಿಮ್ಮ ಹಣದೊಂದಿಗೆ ಪರಾರಿಯಾಗುವುದುಂಟೆ? ಇದು ಅಸಂಭವ, ಅಪಾರ್ಥ."

"ಈ ಪ್ರಲಾಪ ಇನ್ನು ಸಾಕು. ಸ್ಟೇಶನ್ನಿಗೆ ಬನ್ನಿರಿ." ಇನ್ಸ್‌ಪೆಕ್ಟರನ ದನಿ ಮೂಡು ಮುಟ್ಟುವಂತೆ ಮೊಳಗಿತು. ಶಿವೆ ದೇಹದಾದ್ಯಂತ ತರತರ ನಡುಗಿದಳು. ಭಯಭೀತಿಯಿಂದ ಹೃದಯ ಬಿರಿಯುವಂತಾಯಿತು.

"ನಮ್ಮಗಳ ಮಾನಹಾನಿಗೂ ಪ್ರಾಣಹಾನಿಗೂ ಬಾಬೂಜಿ ಹೂಡಿದ ತಂತ್ರ ಇದು !" ರವಿ ಕೋಪದಿಂದ ತುಟಿಕಚ್ಚಿ ನುಡಿದ. "ಅಪ್ಪ ನಿಮ್ಮಲ್ಲಿ ನಿಷ್ಠೆಯಿಂದ ಸೇವೆ ಮಾಡಿದುದರ ಪರಿಣಾಮವಿದು.

ಒಂದೇ ಬಾರಿಗೆ ನುಂಗಿ ಬಿಡುವಂತೆ ಚಿಕ್ಕ ಬಾಬೂಜಿ ರವಿಯನ್ನು ದುರುಗುಟ್ಟಿ ನೋಡಿ ಹೇಳಿದ "ಸ್ವಲ್ಪ ಬಿಗಿ ಹಿಡಿದು ಮಾತಾಡು. ನಿನ್ನನ್ನು ಈಗಲೇ ಜೈಲಿಗೆ ಒಯ್ದೇನು ! ನಿಮ್ಮಪ್ಪನನ್ನು ಇಷ್ಟು ದಿನ ಪೋಷಿಸಿದುದರ ಪರಿಣಾಮವಿದು ! ನಿಷ್ಠೆಯಂತೆ ನಿಷ್ಠೆ ! ಎಲ್ಲಿದೆ ಈ ಕಾಲದಲ್ಲಿ ನಿಷ್ಠೆ ?"

ಒಡನೆ ಶಿವೆ ರವಿಯನ್ನು ತಡೆದು ಹೇಳಿದಳು "ಮಗೂ ಮಾತಾಡ ಬೇಡ." ಅನಂತರ ಬಾಬೂಜಿಯತ್ತ ತಿರುಗಿ ದೈನ್ಯದಿಂದ ಕೇಳಿಕೊಂಡಳು "ಅರಿಯದ ಮಗು ಏನೋ ಮಾತಾಡಿತು. ದಯಮಾಡಿ ಕ್ಷಮಿಸಿರಿ. ಸ್ವಾಮಿ ಇಲ್ಲವಾದ ಕಾಲದಲ್ಲಿ ನಮ್ಮನ್ನು ಹಣ ಕೇಳಿದರೆ ಹೇಗೆ ? ಮಕ್ಕಳ ತುತ್ತಿಗೂ ಗತಿಯಿಲ್ಲದ ನಾವು ನಿಮ್ಮ ಹಣವನ್ನು ತೀರಿಸುವುದಾದರೂ ಸಾಧ್ಯವೇ ? ದಯಮಾಡಿ ಈ ವ್ಯವಹಾರವನ್ನು ಸ್ವಾಮಿಯ ಮೂಲಕ ಬಗೆಹರಿಸಿಕೊಳ್ಳಿ."

ಚಿಕ್ಕ ಬಾಬೂಜಿಯ ಕಣ್ಣೋಟ ಮತ್ತೆ ಮತ್ತೆ ಎಲ್ಲೆಡೆಯೂ ಹರಿಯಿತು. ಶಿವೆಯ ಬೇಡಿಕೆಯನ್ನು ಕೇಳಿಯೂ ಕೇಳದಂತೆ ಸುಮ್ಮನಾದ. ಸ್ವಾಮಿಯ ಇತ್ತೀಚಿನ ಕಾಗದ ಪತ್ರಗಳು ದೊರೆತು ಆತನ ಪತ್ತೆ ತರದೂದು ಸಲೀಸಾಗಬಹುದೆಂದು ನಂಬಿದ್ದ ಚಿಕ್ಕ ಬಾಬೂಜಿಗೆ ಕೊಂಚ ನಿರಾಶೆಯೂ ಆಯಿತು. ಹೆಂಡತಿ ಮಕ್ಕಳಿಗೆ ದೂರದಿಂದಲೇ ಸಹಾಯ ಮಾಡುತ್ತಿದ್ದಾನೆಂಬ ನಂಬಿಕೆ ಪೂರ್ಣ ಕಡಿದುಬಿತ್ತು. ಇನ್ಸ್‌ಪೆಕ್ಟರೊಡನೆ ಪಿಸುಮಾತಿನಲ್ಲಿ ಏನನ್ನೋ ಪುನಃ ಉಸುರಿದ.

"ಸ್ವಾಮಿಯ ಸೊತ್ತನ್ನು ವಶಪಡಿಸಿಕೊಳ್ಳುತ್ತೇವೆ " ಎಂದ ಇನ್ಸ್‌ಪೆಕ್ಟರ್ ಮಹಾಶಯ. ಮುಖದಲ್ಲಿ ಉತ್ಸುಕತೆ ಹೊಮ್ಮುತಿತ್ತು.

"......"

ಅತ್ತ ಇತ್ತ ನೋಡುವವನಂತೆ ರವಿಯ ಬಳಿ ಸರಿದ ಇನ್ಸ್‌ಪೆಕ್ಟರನು "ಸ್ವಾಮಿಯ ನೆಲೆಯನ್ನು ತಿಳಿಸಿದೆಯಾದರೆ ನಿನಗೆ ಬಹುಮಾನ ಕೊಡುವೆ. ನಿಮ್ಮ ತಂಟೆಗೆ ಪುನಃ ಬರುವುದಿಲ್ಲ," ಎಂದು ಮೆಲುದನಿಯಲ್ಲಿ ಕೇಳಿದ. ರವಿಯು ಉತ್ತರಿಸಲಿಲ್ಲ. ಕಣ್ಣುಗಳಲ್ಲಿ ಕೋಪದ ಜ್ವಾಲೆ ಜ್ವಲಿಸಿತು. ತಂತ್ರ ಫಲಿಸದೆ ಇನ್ಸ್‌ಪೆಕ್ಟರ್ ಪುನಃ "ಸ್ಟೇಶನ್ನಿಗೆ ಬನ್ನಿರಿ."

ರವಿ ಅತ್ಯಂತ ಉದ್ವಿಗ್ನನಾಗಿ ನುಡಿದ. "ಈ ಅಪಮಾನದ ನಿವಾರಣೆಗೋಸುಗ ಅಂಗಡಿ ಬಾಡಿಗೆಯನ್ನು ಹಾಗಿಂದ್ಹಾಗೇ ಕಟ್ಟಿಬಿಡುವೆ. ಇನ್ನು ನಮ್ಮ ತಂಟೆಗೆ ನೀವು ಬರಕೂಡದು."

ರವಿಯ ವಾಗ್ದಾನದಿಂದ ಏನು ಮಾಡಬೇಕೆಂಬುದನ್ನು ಅರಿಯದಾದಳು ಶಿವೆ. ಒಟ್ಟಿನಲ್ಲಿ ಆ ಕ್ಷಣ ಬಂದೊದಗಿದ ಗಂಡಾಂತರವೊಂದು ನಿವಾರಣೆಯಾದರೆ ಸಾಕೆನಿಸಿತ್ತು. ಶಿವೆ ಏನೂ ಹೇಳದುದನ್ನು ನೋಡಿ ಚಿಕ್ಕಬಾಬೂಜಿ.

"ಹಾಗಿದ್ದರೆ ಪತ್ರ ಬರೆದುಕೊಡಿರಿ."

"ನಾವೇ ಬರೆದರೆ ಅವರು ಋಜು ಹಾಕುತ್ತಾರೆ" ಎಂದ ಇನ್ಸ್‌ಪೆಕ್ಟರ್ ಶಿವೆಯತ್ತ ತಿರುಗಿ ಕೇಳಿದ "ಇದು ನಿಮಗೆ ಸಮ್ಮತವೇ?" ಇರಿಯುವ ನೋಟ ಶಿವೆಯನ್ನು ಮತ್ತೆ ತಾಗಿತು. ಶಿವೆ ತುಸು ಹೊತ್ತು ಮಾತಾಡಲಿಲ್ಲ. ಪುನಃ ಅದೇ ದನಿ ಮೊಳಗಿತು. "ಏನು ಹೇಳುತ್ತೀರಿ?"

"ಆಗಲಿ" ಎಂದಳು ಶಿವೆ; ನಾಲಿಗೆಯೊಣಗಿ ಬಂದಿತ್ತು.

ಚಿಕ್ಕ ಬಾಬೂಜಿಯ ಜೊತೆ ಬಂದಿದ್ದ ಕರಣಿಕನೊಬ್ಬ ಯಜಮಾನನ ಆದೇಶದ ಪ್ರಕಾರ ಪತ್ರವನ್ನು ಬರೆದ. ಶಿವೆ ಅಳುತ್ತಲೇ ಅದಕ್ಕೆ ಋಜು ಹಾಕಿದಳು. ಅಂಕದ ಕೋಳಿ ಹುಂಜದಂತೆ ಇನ್ಸ್‌ಪೆಕ್ಟರ್ ತನ್ನ ಪರಿವಾರದೊಂದಿಗೆ ಹೊರಬಿದ್ದ. ನೆರೆದವರಲ್ಲಿ ಸ್ವಾಮಿಯ ಸಮೀಪವರ್ತಿಗಳು ಅನುತಾಪ ವ್ಯಕ್ತಪಡಿಸುತ್ತ "ಇದು ಶುದ್ಧ ಅನ್ಯಾಯ. ಸ್ವಾಮಿ ಇಷ್ಟು ಕೀಳು ಮನುಷ್ಯನಲ್ಲ." ಎಂದು ಮರ್ಮರ ಮರುಗಿದರು.

ಕೃಷ್ಣಭಟ್ಟರು ರವಿಯ ತಲೆಯನ್ನು ನೇವರಿಸಿ "ತೊಂದರೆ ಬಂದರೆ ಹೀಗೆಯೇ. ಮೇಲಿಂದ ಮೇಲೆ ಬರುತ್ತಲೇ ಇರುತ್ತವೆ. ಧೈರ್ಯಗೆಡಬೇಡ ಮಗೂ" ಎಂದರು. ರವಿ ಮಾತಾಡಲಿಲ್ಲ. ಕಣ್ಣಂಚಿನಲ್ಲಿ ಮಿನುಗುತಿದ್ದ

ಹನಿಯೇ ಉತ್ತರವಾಯಿತು. ತಲೆ ಬಾಗಿಲಲ್ಲಿ ಮಾತಿಲ್ಲದೆ ನಿಂತ ರವಿಯನ್ನು ಕಂಡು ಜನರ ಮನ ಮರುಗಿತು. ನಾಲ್ಕು ಸಮಾಧಾನದ ಮಾತುಗಳನ್ನು ಹೇಳಿ ಹೊರಟುಹೋದರು. ರವಿ ಕದವನ್ನಿಕ್ಕಿಕೊಂಡು ಒಳಗಡೆ ಬಂದ. ನೆಲದ ಮೇಲೆ ಅಸ್ತವ್ಯಸ್ತವಾಗಿ ಹರಡಿ ಬಿದ್ದಿದ್ದ ಸಕಲ ವಸ್ತು ಬಿಕ್ಕಿ ಬಿಕ್ಕಿ ಅಳುವ ತಾಯಿ ಮಕ್ಕಳು: ಅವಮಾನ, ಅನುತಾಪ, ದುಃಖ, ದುಗುಡ, ಭಯ–ಭೀತಿ. ಸಂಕಟ-ಘೋರಸಂಕಟ ಹೃದಯವನ್ನು ಗಾಣಕ್ಕೆ ಕೊಟ್ಟಂತೆ ಹಿಂಡಿದುವು. ಭ್ರಮಿತ ಬುದ್ಧಿ, ಎಳೆಯ ಮನಸ್ಸು, ಅಪ್ರಬುದ್ಧ ಜ್ಞಾನ ತನುಮನಗಳನ್ನು ಬಿಗಿದು ಕಟ್ಟಿದಂತೆ ಮೂರ್ತಿಮತ್ತಾಗಿ ನಿಲ್ಲಿಸಿದುವು. ರವಿ ವಿಚಾರಮಗ್ನನಾಗಿ ಅಲುಗದೆ ನಿಂತುಬಿಟ್ಟ. ಈಗ ಅಳುತ್ತೇನೆಂದರೂ ಕಂಬನಿ ಮೊಳೆಯವು. ನುಡಿಯುತ್ತೇನೆಂದರೂ ಮಾತುಗಳು ಹೊರಡವು. ವ್ಯಾಪ್ತಿಗೆ ಮೀರಿ ಮಿಡಿಯುವ ಹೃದಯಘೋಷ ಮಾತ್ರ ಸ್ಪಷ್ಟವಾಗಿ ಕೇಳಿಸುತ್ತಿದೆ. ಅದು ವಿನಾ ಇನ್ನೇನೂ ಅರಿಯು. ಹಾಗೆ ಅದೆಷ್ಟು ಹೊತ್ತು ಉರುಳಿತೋ.... ಕಳ್ಳನ ಮಕ್ಕಳಿಗೆ ಗೌರವ ದೊರಕೀತೇ ಎಂಬ ಪ್ರಶ್ನೆ ಮೆಲ್ಲನೆ ಮನದಲೆಯಲ್ಲಿ ತೇಲಿ ಬಂತು. ಒಡನೆ ಅನುಭವಿಸಿದ ಮನೋವೇಗದಿಂದ ಎಳೆಯ ಮೈ ಬಸವಳಿದು ಬಂದಂತಾಗಿ ತಾಯಿಯ ಬಳಿ ಕುಸಿದು ಕುಳಿತುಕೊಂಡು ಸಂತೈಸತೊಡಗಿದ. ಶಿವೆ ಮಕ್ಕಳನ್ನು ಅಪ್ಪಿಕೊಂಡು ಅತ್ತಳು. ದುಃಖದ ಮಹಾಪೂರ ಉಕ್ಕಿ ಹರಿಯಿತು.

ಸ್ವಲ್ಪ ಹೊತ್ತು ಉರುಳಿತು.

ಕಟ, ಕಟ, ಕಟ, ಕಟ …

ಹೊರ ಬಾಗಿಲನ್ನು ತಟ್ಟಿದ ಸದ್ದು.

ಒಡನೆ ದುರ್ದಮನೀಯ ಭಯಭೀತಿ ಎಲ್ಲರ ತನುಮನಗಳನ್ನೂ ಮತ್ತೆ ಆವರಿಸಿ ಶ್ರವಣೇಂದ್ರಿಯಗಳು ನಿಮಿರಿದುವು. ದುಃಖತಪ್ತ ಹೃದಯಗಳು ಮೇರೆ ಮೀರಿ ಮಿಡಿಯಹತ್ತಿದುವು. ತಾಯಿ ಮಕ್ಕಳು ಪರಸ್ಪರ ಮುಖ ನೋಡಿಕೊಂಡರು. ಬಾಗಿಲ ಬಳಿಗೆ ಮುಂದುವರಿಯಲು ಯಾರಿಗೂ ಧೈರ್ಯ ಮೂಡಲಿಲ್ಲ. ಪುನಃ ಬಾಗಿಲು ತಟ್ಟಿದ ಸದ್ದಿನೊಂದಿಗೆ ಆನಂದನ ದನಿಯೂ ಕೇಳ ಬಂದಿತು, ಒಡನೆ ಶ್ಯಾಮು ತುಟಿಕಚ್ಚಿ ಅಂದ,

"ಆನಂದಣ್ಣ ಮನೆಯಲ್ಲಿದ್ದರೂ ಆಗ ನಮ್ಮ ಸಹಾಯಕ್ಕೆ ಬರಲಿಲ್ಲ;

ಈಗ ನಾಚಿಕೆಯಿಲ್ಲದೆ ಬಾಗಿಲು ತಟ್ಟುತಿದ್ದಾರೆ."

"ಮನೆಯಲ್ಲಿ ಇರಲಿಲ್ಲವೆಂದು ತೋರುತ್ತೆ." ಸರಸು ನುಡಿದಳು.

"ಪೋಲೀಸರು ಒಳಬರುವ ಮುಂಚೆ ಆನಂದಣ್ಣ ಅಂಗಳದಲ್ಲಿದ್ದರು. ಅವರು ಬೇಕಾಗಿಯೇ ಒಳ ಸೇರಿಕೊಂಡರು."

ರವಿಯ ಮುಖ ಕೋಪದಿಂದ ಕೆಂಪು ಕೆಂಪಾಯಿತು. ಸರಸು ಹೋಗಿ ಕದ ತೆರೆದಳು. ಒಳಗಿನ ದೃಶ್ಯ ಎದೆಯನ್ನು ತಲ್ಲಣಿಸುವಂತಿತ್ತು. ಆನಂದ ಒಳಬಂದವನೇ ಒಂದು ಹೆಜ್ಜೆ ಹಿಮ್ಮೆಟ್ಟಿ ನಿಂತ. ಕಣ್ಣುಗಳಲ್ಲಿ ಭಯ. ತವಕಗಳು ತುಂಬಿದ್ದುವು. ಒಂದೆಡೆ ಕಟ್ಟಿಗೆಯ ರಾಶಿ. ಇನ್ನೊಂದೆಡೆ ಮಕ್ಕಳ ಪುಸ್ತಕಗಳ ರಾಶಿ. ಹಾಸಿಗೆ, ಬಟ್ಟೆ. ದವಸ, ಧಾನ್ಯಗಳು ಎಲ್ಲೆಲ್ಲೂ ಹರಡಿ ಬಿದ್ದ ರೀತಿ ಘೋರವಾಗಿತ್ತು. ಪೋಲೀಸರ ಪಾದರಕ್ಷೆಗಳಲ್ಲಿನ ಮಣ್ಣು ಮನೆಯನ್ನೆಲ್ಲಾ ವ್ಯಾಪಿಸಿತ್ತು. ನೋಡುನೋಡುತ್ತಾ ಆನಂದ ಸ್ಥಂಭೀಭೂತನಾಗಿ ನಿಂತುಬಿಟ್ಟ. ಹೃದಯ ಡವಡವನೆ ಹೊಡೆದುಕೊಳ್ಳತೊಡಗಿತು. ಒಂದೇ ಉಸುರಿಗೆ ಏದುತ್ತಾ ಕೇಳಿದ "ರವಿ ಇದೇನು? ಏನು ಸಮಾಚಾರ?"

"........"

"ಅತ್ತಿಗೇ, ಏನೆಂದು ಹೇಳಬಾರದೇ?"

"ಏನೆಂದು ಹೇಳಲಿ?" ದನಿ ದುಃಖಪೂರಿತವಾಗಿತ್ತು.

"ಅಪ್ಪ ಬಾಬೂಜಿಯ ಅಂಗಡಿಯಿಂದ ಆರು ಸಾವಿರ ರೂಪಾಯಿಗಳನ್ನು ಕದ್ದಿದ್ದಾರಂತೆ! ಅದಕ್ಕಾಗಿ ಮನೆಯನ್ನು ಶೋಧಿಸಿದರು" ಸರಸು ಹೇಳಲಾರದೆ ಹೇಳಿದಳು.

"ಆ್ಞ! ಇದು ನಿಜವೇ?" ಆನಂದ ಕಣ್ಣರಳಿಸಿ ಕೇಳಿದ.

"ಚಿಕ್ಕಪ್ಪಾ, ಇಷ್ಟೆಲ್ಲಾ ಆದಮೇಲೆ ನೀವೀಗ ಬಂದು ವಿಚಾರಿಸುವ ಅಗತ್ಯವಿಲ್ಲ" ರವಿ ತುಟಿ ಕಚ್ಚಿ ಹೇಳಿದ.

"ನಾನೇನಯ್ಯಾ ಮಾಡಲಿ?"

"ಪಕ್ಕದಲ್ಲಿದ್ದು ನಮಗಿಷ್ಟು ಸಹಾಯ ಮಾಡಲಿಲ್ಲವೆಂದಮೇಲೆ ನೀವೀಗ ಬಂದೇನು ಪ್ರಯೋಜನ?"

"ಪೋಲೀಸರೆಂದರೆ ನಾನೆಂದೂ ಹತ್ತುಮಾರು ಹಿಂದೆ. ಅವರ ಕಣ್ಣಿಗೆ ಬಿದ್ದರೆ ಸುಮ್ಮನೆ ಬಿಟ್ಟಾರೆಯೆ.?"

"ಅವರು ಶೋಧನೆ ಮಾಡಿದ್ದು ನಮ್ಮ ಮನೆಯಷ್ಟೆ ?"

"ಆದರೂ, ಅವರ ಕಣ್ಣಿಗೆ ಬಿದ್ದಿದ್ದರೆ ನಮ್ಮನ್ನೂ ಬಿಡುತ್ತಿರಲಿಲ್ಲ."

"ಅಂತಹ ಹೇಡಿ ಜನ್ಮ ಇದ್ದರೂ ಒಂದೇ; ಇಲ್ಲದಿದ್ದರೂ ಒಂದೇ !"

"ನನ್ನ ಮೇಲೇಕೆ ಕೋಪ ? ನನ್ನಿಂದೇನಾಗುತಿತ್ತು ?"

"ನೋಡಿ ಚಿಕ್ಕಪ್ಪಾ, ನನ್ನ ಮನಸ್ಸಿಗೀಗ ತುಂಬ ನೋವಾಗಿದೆ. ನೀವು ಆಗಲೇ ಬಂದಿದ್ದರೆ ಅದರ ರೀತಿಯೇ ಬೇರೆಯಾಗುತಿತ್ತು ಇನ್ನು ಇಲ್ಲಿ ನಿಮ್ಮ ಅಗತ್ಯವಿಲ್ಲ !" ಒಡನೆ ಶಿವೆ ರವಿಯನ್ನು ತಡೆದು "ದೊಡ್ಡವರಿಗೆ ಹಾಗೆ ಮಾತಾಡಬಾರದು" ಎಂದಳು. ಪುನಃ ಆನಂದನೆಡೆಗೆ ತಿರುಗಿ "ಸ್ವಾಮಿ ನಮ್ಮೊಂದಿಗೆ ಪತ್ರ ವ್ಯವಹಾರವನ್ನಿಟ್ಟುಕೊಂಡಿರಬಹುದೆಂದು ಅವರು ನಂಬಿದ್ದಂತೆ ತೋರುತ್ತದೆ. ಇಲ್ಲಿ ಅವರಿಗೆ ಆ ಬಗ್ಗೆ ಮಾಹಿತಿಯೇನೂ ದೊರೆಯಲಿಲ್ಲವಾದರೂ ಬಡಪಾಯಿಗಳಾದ ನಮ್ಮನ್ನು ಅವರು ಬಿಡುವಂತಿಲ್ಲ. ಕಳುವಾದ ಹಣಕ್ಕೆ ಈ ಮನೆಯನ್ನು ವಶಪಡಿಸಿಕೊಳುವುದಾಗಿ ಹೇಳಿದರು. ಮನೆಯನ್ನು ಬಿಟ್ಟುಕೊಟ್ಟೆವಾದರೆ ಹೋಗುವುದೆಲ್ಲಿಗೆ ? ಅಂಗಡಿಯ ಬಾಡಿಗೆಯನ್ನು ಇನ್ನು ಮುಂದೆ ಅವರಿಗೆ ಕೊಡುವುದಾಗಿ ಬರೆದು ಕೊಟ್ಟಿದ್ದಾಯ್ತು. ಮುಂದೆ ದೇವರೇ ಗತಿ." ಮಾತು ಮುಗಿಸಿ ಉಟ್ಟ ಬಟ್ಟೆಯಿಂದಲೇ ಕಣ್ಣುಗಳನ್ನು ತೀಡಿಕೊಳ್ಳುತ್ತ "ನಮ್ಮ ಪರವಾಗಿ ಯಾರೂ ಇಲ್ಲದುದರಿಂದಲೇ ನಾವು ಹಣ ಕಟ್ಟಲು ಒಪ್ಪಬೇಕಾಯಿತು. ಸ್ವಾಮಿ ಕದ್ದಿರುವುದು ಸರ್ವಥಾ ಸುಳ್ಳು. ವಿನಾಕಾರಣ ನಾವು ತೊಂದರೆಗೊಳಗಾದೆವು. ನನ್ನ ದುರಾದೃಷ್ಟಕ್ಕೆ ಮಾಧವ ರಾಯರೂ ಊರಿನಲ್ಲಿಲ್ಲ " ಎಂದು ಪುನಃ ಕಂಬನಿಗರೆದಳು.

"ನಿಜ ಅತ್ತಿಗೆ, ಇದು ಶುದ್ಧ ಮೋಸ. ನೀವು ಇಷ್ಟರಲ್ಲೇ ಹಣ ಕೊಡಲೇಕೆ ಒಪ್ಪಿಕೊಂಡಿರಿ ?"

"ನನ್ನಿಂದ ಇನ್ನೇನಾದೀತು ? ಸದ್ಯ ಬಂದೊದಗಿದ ಗಂಡಾಂತರ ತೊಲಗಿದರೆ ಸಾಕಾಗಿತ್ತು."

"ಸ್ವಾಮಿ ಕಾಣೆಯಾಗಿ ಇಷ್ಟು ದಿನಗಳು ಇವರೇನು ಮಾಡುತ್ತಿದ್ದರು? ಈಗ ಹೇಗೆ ಸ್ವಾಮಿಯ ಮೇಲೆ ಆರೋಪಿಸುತ್ತಾರೆ ? ಇದೆಲ್ಲಿಯ ನ್ಯಾಯ ? ಕೋರ್ಟು ಕಛೇರಿ ಯಾವುದೂ ಇಲ್ಲವೇ ?"

"ಆದರ ವ್ಯವಹಾರ ನೋಡಿಕೊಳ್ಳುವವರಾರು ? ಅದು ನಮ್ಮಿಂ

ದಾದೀತೆ ?"

"ಆದರೂ ನೀವು ಅಷ್ಟು ಬೇಗನೆ ಬರೆದುಕೊಡಬಾರದಿತ್ತು."

ಮಕ್ಕಳು ಹರಡಿ ಬಿದ್ದಿದ್ದ ಸಾಮಾನುಗಳನ್ನು ಜೋಡಿಸುವುದರಲ್ಲಿ ಮಗ್ನರಾದರು. ಆನಂದನ ಹಿಂದೆಯೇ ನಿಂತಿದ್ದ ರತ್ನ ಎವೆಯಿಕ್ಕದೆ ನೋಡುತ್ತ ಅವರ ಸಂಭಾಷಣೆಯನ್ನು ಕೇಳುತ್ತಿದ್ದಳು. ರವಿಯು ಪುಸ್ತಕಗಳನ್ನು ಜೋಡಿಸುತ್ತ ಹೇಳಿದ "ಬರೆದು ಕೊಡಬಾರದಿತ್ತು ಎಂದರೆ ನಿಸ್ಸಹಾಯಕ ರಾದ ನಾವು ಇನ್ನೆಷ್ಟು ಅವರನ್ನು ಎದುರಿಸಲಾದೀತು ? ನಮಗೆ ಕಾನೂನಿನ ಪರಿಚಯವಿಲ್ಲ. ಹಿರಿಯರ ಆಶ್ರಯವೂ ಇಲ್ಲ. ದೈವ ಬಲವೂ ಇಲ್ಲ ಅಂದಮೇಲೆ ವೃಥಾ ಮಾತಾಡಿ ಪ್ರಯೋಜನವಿಲ್ಲ. ನಮ್ಮವರೇ ನಮ್ಮ ಭಾಗಕ್ಕೆ ಮುಳ್ಳಾಗಿರುವಾಗ ಚಿಕ್ಕ ಬಾಬೂಜಿಯ ವರ್ತನೆ ದೊಡ್ಡದಲ್ಲ !"

"ನಾವು ಹತ್ತಿರ ಬಂದುದೇ ತಪ್ಪಾಯ್ತು" ರತ್ನ ಅಣಕದ ದನಿಯಲ್ಲಿ ನುಡಿದಳು.

"ತಂದೆಯಾದವರು ನಮ್ಮನ್ನು ನಡುದಾರಿಯಲ್ಲಿ ಕೈ ಬಿಟ್ಟುಬಿಟ್ಟರು. ಚಿಕ್ಕಪ್ಪಂದಿರಾದ ನಿಮ್ಮಿಂದ ಎಂಟು ತಿಂಗಳು ಮನೆ ಖಾಲಿ ಬಿತ್ತು. ನೀವು ಬಂದು ಇಷ್ಟು ದಿನಗಳಾದರೂ ಬಾಡಿಗೆಯಿಲ್ಲ. ಆದರೂ ಚಿಂತೆಯಿಲ್ಲ. ಪಕ್ಕದಲ್ಲಿದ್ದು ನಮ್ಮ ಆಪತ್ತಿಗೆ ಆಗಲಿಲ್ಲವೆಂದಮೇಲೆ ಇದೆಲ್ಲಾ ನಮ್ಮ ಪ್ರಾರಬ್ಧಕರ್ಮವೆನ್ನಲೇ ಅಥವಾ ಇನ್ನೇನೆನ್ನಲಿ ?" ರವಿಯ ನುಡಿಯಲ್ಲಿ ಕೋಪ ಸಂತಾಪಗಳು ಸಂಮಿಳನವಾಗಿದ್ದುವು.

"ರವಿ ನನ್ನ ಹಣವೆಲ್ಲಾ ಔಷದೋಪಚಾರಕ್ಕೆ ಖರ್ಚಾಯಿತು. ಸಾಲ ದಿಂದ ಕಾಲಯಾಪನೆ ಮಾಡುತ್ತಿದ್ದೇನೆ. ಕೈಯಲ್ಲಿ ಹಣ ಕೂಡಿಬಂದಾಗ ನಿಮ್ಮ ಹಣದಿಂದ ಋಣಮುಕ್ತನಾಗುವೆ." ಆನಂದ ಏರಿದ ದನಿಯಲ್ಲಿ ಹೇಳಿದ.

"ಇದು ಋಣದಿಂದ ಮುಕ್ತನಾಗುವ ಪ್ರಶ್ನೆಯಲ್ಲ. ನಮ್ಮ ಜೀವನದ ಪ್ರಶ್ನೆ. ಒಂದು ದಿನ ನಿಮ್ಮ ಮಕ್ಕಳು ಹೀಗೆ ಕಷ್ಟಕ್ಕೆ ಸಿಕ್ಕಿದರೆನ್ನಿ. ಆಗಲೂ ನಿರ್ಲಕ್ಷ್ಯದಿಂದಿರುತ್ತೀರೇನು ?"

"ರವೀ, ಸಮಾಧಾನ ಹೊಂದು. ದೊಡ್ಡವರೊಂದಿಗೆ ವಾಗ್ಯುದ್ಧ ಬೇಡ." ಶಿವೆ ರವಿಗೆ ಹಿತವಾದ ಹೇಳಿದಳು. ಕಂಗೆಟ್ಟ ಮುಖಮಂಡಲ ಎಡಗೈದಳದ ಆಶ್ರಯ ಪಡೆದಿತ್ತು. ಚದರಿದ ಕೂದಲು ಸುತ್ತಲೂ ಹರಡಿತ್ತು.

ತಲೆಯೆತ್ತದೆ ಶಿವೆ ಆನಂದನಿಗೆಂದಳು". ರವಿ ದುಃಖದ ಭರದಲ್ಲಿ ದುಡುಕಿದ್ದಾನೆ. ಏನೂ ತಿಳಿದುಕೊಳ್ಳಬೇಡಿರಿ".

"ನಾವೂ ನಿಮ್ಮಂತೆ ವಿಧಿಯ ಹೊಡೆತಕ್ಕೆ ಸಿಕ್ಕಿದವರು, ನಮ್ಮ ಸಹಾಯಕ್ಕೀಗ ಯಾರಾದರೂ ಇದ್ದಾರೆಯೇ? ನಾವು ಇನ್ನೊಬ್ಬರ ಸಹಾಯ ನಿರೀಕ್ಷಿಸುವುದು ಸರಿಯಲ್ಲ. ಎಲ್ಲರ ಭಾಗಕ್ಕೂ ಎಂತಹ ಕರ್ಮವೋ ಅಂತಹ ಪ್ರಾಯಶ್ಚಿತ್ತ ಉಂಟು". ಎಂದ ಆನಂದ ದಡದಡನೆ ಹೊರಟು ಹೋದ ಹಿಂದೆಯೇ ರತ್ನಳೂ ಹೊರಬಿದ್ದಳು,

೧೬

ಬಾಲರವಿ ಬಾನೇರುತ್ತಿದ್ದ. ಹೊಂಬಿಸಿಲು ತುಂಬಿ ಹರಡಿತ್ತು.

ನಸುಕಿನಲ್ಲೆದ್ದ ರವಿ ಪತ್ರಿಕೆಗಳನ್ನು ಹಂಚಿ ಮನೆಗೆ ಬಂದಾಗ ಮೈ ಹಲವೆಡೆಗಳಲ್ಲಿ ಗಾಯಗಳಾಗಿದ್ದು ಅಲ್ಲಲ್ಲಿ ಬಟ್ಟೆಯ ಪಟ್ಟಿಗಳಿಂದ ಕಟ್ಟಲ್ಪಟ್ಟು, ತೊಟ್ಟ ಬಟ್ಟೆಯನ್ನು ರಕ್ತದಿಂದ ತೊಯಿಸಿಕೊಂಡು ಬಂದ ದೃಶ್ಯ ತಾಯಿಯ ಎದೆಯನ್ನು ನಡುಗಿಸಿತು. "ಅಯ್ಯೋ! ರವಿ!" ಎಂದು ಚೀರಿ ಭಯದಿಂದ ಬಿಗಿದಪ್ಪಿಕೊಂಡಳು. ಕಣ್ಣುಗಳಿಗೆ ಕತ್ತಲೆ ಕವಿದುಬಂದಿತು. ಚಿಕ್ಕವರೂ ರವಿಯನ್ನು ಮುತ್ತಿಕೊಂಡರು ಎಲ್ಲರಿಗೂ ರವಿ "ನನಗೇನೂ ತೊಂದರೆ ಯಾಗಲಿಲ್ಲ. ಗಾಬರಿಯಾಗಬೇಡಿರಿ." ಎಂದು ಸಮಾಧಾನ ಹೇಳಿದ. "ಏನಾಯ್ತು? ಏನಾಯ್ತು ?" ಎಂದು ಎಲ್ಲರೂ ಮೇಲಿಂದ ಮೇಲೆ ಕೇಳ ತೊಡಗಿದರೂ. ರವಿ ಉಸಿರಿಡಿದು ಹೇಳಿದ "ಆ ಒಂದು ಕ್ಷಣನಡುಗಿ ಹೋದೆ. ತಲೆ ಗಿರ್ರನೆ ತಿರುಗಿತು. ನಿಮ್ಮೆಲ್ಲರನ್ನೂ ಒಮ್ಮೆ ಜ್ಞಾಪಿಸಿಕೊಂಡೆ. ದೇವ ರನ್ನೂ ಜ್ಞಾಪಿಸಿಕೊಂಡೆ. ಅಲ್ಲಲ್ಲಿ ತೆರೆಚಿ ಮೈಚರ್ಮ ಹರಿದಿದೆ ಅಷ್ಟೇ, ನನಗಿನ್ನೇನೂ ತೊಂದರೆಯಾಗಲಿಲ್ಲ. ಹಿಂದಿಲಿಂದ ಬಂದ ಮೋಟಾರೊಂದು ರಸ್ತೆಯ ಪಕ್ಕದಲ್ಲಿ ಹೋಗುತಿದ್ದ ನನಗೆ ಡಿಕ್ಕಿಹೊಡೆದುದರಿಂದ ನಾನು ಆಯ ತಪ್ಪಿ ದೂರಕ್ಕೆ ಎಸೆಯಲ್ಪಟ್ಟೆ. ಸದ್ಯ. ಪ್ರಾಣಾಪಾಯವಾಗಲಿಲ್ಲ. ಅಲ್ಲಿಯೇ ಇದ್ದ ಪೋಲೀಸರು ಡ್ರೈವರನ್ನು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ರಸ್ತೆಯ ಪಕ್ಕದಲ್ಲಿ ಹೋಗುತ್ತಿದ್ದ ನಾನು ನಿರಪರಾಧಿ. ನನ್ನ ಸೈಕಲ್ಲಿಗೆ ಪೆಟ್ಟುತಾಗಿ ಮುರಿದು ಹೋಗಿದೆ. ಪೋಲೀಸಿನವನೇ ನನ್ನನ್ನು ಹತ್ತಿರದಲ್ಲಿದ್ದ ಡಾಕ್ಟರಲ್ಲಿಗೆ ಒಯ್ದು ಚಿಕಿತ್ಸೆ ಮಾಡಿಸಿದ. ನನ್ನ ಗಾಯಗಳನ್ನೆಲ್ಲಾ ತೊಳೆದು ಔಷಧ ಹಾಕಿ ಕಟ್ಟಿದರು. ಕ್ಷಣಾರ್ಧದಲ್ಲಿ ಆಕಸ್ಮಿಕ ನಡೆದು ಹೋಯಿತು. ದೇವರು ದೊಡ್ಡವನು ! ನನ್ನನ್ನು ಕಾಪಾಡಿದ." ಮಾತು ಮುಗಿದಾಗ ತಾಯಿಯ ಕಣ್ಣಿನಲ್ಲಿ ಹನಿಯನ್ನು ಕಂಡು "ಕಣ್ಣಿನಲ್ಲಿ ನೀರೇಕೆ ? ಬದುಕಿ ಬಂದಿದ್ದೇನೆ ಸಂತೋಷ ಪಡಿರಿ!"ಎಂದವನೇ ಏನೋ ಜ್ಞಾಪಿಸಿಕೊಂಡವನಂತೆ

"ಅಮ್ಮಾ, ಆ ಡಾಕ್ಟರ್ ಯಾರು ಗೊತ್ತೇ? ನಮ್ಮ ಗೌರತ್ತೆ ಮತ್ತು ಅಜ್ಜಿ ಖಾಹಿಲೆ ಬಿದ್ದಾಗ ಅಪ್ಪ ಡಾ॥ ಚಂದ್ರರವರನ್ನು ಕರೆತಂದಿರಲಿಲ್ಲವೇ? ಅವರೇ! ನನ್ನನ್ನು ಕೂರಿಸಿಕೊಂಡು ತುಂಬ ಮಾತಾಡಿದರು. ನಮ್ಮ ಕಷ್ಟಗಳನ್ನು ಕೇಳಿ ನೊಂದುಕೊಂಡುದುದಲ್ಲದೆ ನಿಮ್ಮನ್ನು 'ನರ್ಸ್' ಕೆಲಸಕ್ಕೆ ಅರ್ಜಿ ಹಾಕಿ ಕೊಳ್ಳಲು ಹೇಳಿದ್ದಾರೆ. ಅವರು ಕೆಲಸ ಕೊಡಿಸುತ್ತಾರಂತೆ. ಸದ್ಯದಲ್ಲಿಯೇ ನರ್ಸ್ ಕೆಲಸಕ್ಕೆ ಆಯ್ಕೆ ಮಾಡುತ್ತಾರಾದುದರಿಂದ ಈಗಲೇ ಅರ್ಜಿ ಹಾಕಲು ಹೇಳಿದರು. ಅವರು ತುಂಬ ಕರುಣಾಳು. ನಮ್ಮನ್ನು ಚೆನ್ನಾಗಿ ಓದಲು ಪ್ರೋತ್ಸಾಹ ಕೊಟ್ಟುದುದಲ್ಲದೆ ವಿದ್ಯಾರ್ಥಿವೇತನ ಕೊಡಿಸಲು ಸಹಾಯ ಮಾಡುವುದಾಗಿ ಹೇಳಿದ್ದಾರೆ. ನಮ್ಮವರೇ ನಮ್ಮ ಭಾಗಕ್ಕಿಲ್ಲ. ಯಾರೋ ಮೂರನೆಯವರು ನಮ್ಮನ್ನು ಅಕ್ಕರೆಯಿಂದ ಕಾಣುತ್ತಿದ್ದಾರೆ. ಅವರ ಮೃದು ನುಡಿಗಳಿಗೆ ಮಾರು ಹೋಗುವಂತಾಯ್ತು. ಅವರ ಮುಂದೆ ಮಗುವಿನಂತೆ ಕಂಬನಿಗರೆದೆ. ಅವರು ನನ್ನನ್ನು ಅಪ್ಪಿ ಮೈದಡವಿ ಸಮಾಧಾನಗೊಳಿಸಿದರು. ಅವರ ಪ್ರೇಮಕ್ಕೆ ಸೀಮೆಯೇ ಇಲ್ಲ. ನಿಜವಾದ ಮನುಷ್ಯತ್ವ ಅಂದರೆ, ಅದು ಅವರಲ್ಲಿದೆ. "ಕಳೆದೆರಡು ವರ್ಷಗಳಿಂದ ಅವರ ಮುಖವನ್ನೇ ನೋಡಿರಲಿಲ್ಲ. ಡಾಕ್ಟರರಂತಹವರು ನಮ್ಮ ಮಾಧವರಾಯರಂತಹವರು ಶೇಕಡಾ ಹತ್ತರಷ್ಟು ಮಂದಿ ನಮ್ಮಲ್ಲಿದ್ದಿದ್ದರೆ ನಮ್ಮ ದೇಶ ಸ್ವರ್ಗಧಾಮವಾಗುತಿತ್ತಲ್ಲವಮ್ಮಾ" ಎನ್ನುವಾಗ ರವಿಯ ಕಣ್ಣುಗಳಲ್ಲಿ ಆನಂದಾಶ್ರುಗಳು ಮೊಳೆತುವು. ಮನೋವೇಗ ತುಸು ಕಡಿಮೆಯಾಗುತ್ತಲೂ ಶಿವೆ "ರವೀ, ದೇವರು ದೊಡ್ಡವನು!" ಎಂದಳು. ಎದೆಯಾಳದಲ್ಲಿ ಬಿಸಿಯುಸಿರು ಹರಿದಾಡುತಿತ್ತು.

"ಅಮ್ಮಾ ಡಾಕ್ಟರು ಹೇಳಿದಂತೆ ನೀವು ಕೆಲಸಕ್ಕೆ ಸೇರಿರಿ. ಹಗಲೆಲ್ಲ ಕುಳಿತು ಕಂಬನಿ ಕರೆಯುವುದಕ್ಕಿಂತ ಅದು ಸರ್ವೋತ್ತಮವಾದುದು. ಜೀವನಕ್ಕೂ ದಾರಿಯಾಯಿತು; ಮನಸ್ಸಿಗೂ ನೆಮ್ಮದಿಯಾಯಿತು."

"ಓದು ವಿದ್ಯೆಯಿಲ್ಲದೆ ಏನು ಕೆಲಸ ಮಾಡಲಾದೀತು?"

"ಇಂದಿನಿಂದಲೇ ಕಲಿಯಲು ಪ್ರಾರಂಭಿಸಿರಿ. ನಾನೇ ನಿಮಗೆ ಉಪಾಧ್ಯಾಯ!" ರವಿ ಹಸನಾದ ನಗು ಹರಿಸಿದ.

"ಹೌದಮ್ಮಾ, ಹಾಗೆ ಮಾಡಿರಿ. ಹೊಲಿಗೆಯ ಯಂತ್ರವನ್ನು ನಮ್ಮ ಭಾಗಕ್ಕೆ ಬಿಡಿರಿ; ನಾವು ಅದರಲ್ಲಿ ಸಂಪಾದಿಸುತ್ತೇವೆ." ಎಂದ ಶ್ಯಾಮು ಮತ್ತೆ

ಹೇಳಿದ "ಇನ್ನೊಂದು ತಿಂಗಳು ನಾನು ದುರ್ಗೋಜಿಯಲ್ಲಿ ಕಲಿತರೆ ಸಾಕು. ನನಗೆ ಎಲ್ಲಾ ಚೆನ್ನಾಗಿ ಬಂದ ಹಾಗೆ. ಶಾಲೆಯಿಂದ ಬಂದನಂತರ ನಾನು ಸರಸು ಹೊಲಿಯುತ್ತೇವೆ" ನುಡಿ ಎದೆಯಾಳದಿಂದ ಹೊರಬಿತ್ತು.

"ಇನ್ನು ಕೆಲವೇ ದಿನಗಳಲ್ಲಿ ನಾನೂ ಚೆನ್ನಾಗಿ ಕಲಿತುಕೊಳ್ಳುವೆ." ಸರಸು ಧೈರ್ಯದಿಂದ ಹೇಳಿದಳು.

ಕೈಕಾಲು ತೊಳೆದುಕೊಂಡು ಒಳಬಂದ ರವಿ ಬೆನ್ನನ್ನು ನೀವಿ ಕೊಳ್ಳುತ್ತಾ-"ಬೆನ್ನಿಗೆ ಪೆಟ್ಟು ತಾಗಿದುದರಿಂದ ನೋವು ಬಹಳವಾಗಿದೆ. ನಾಳೆಯ ವೇಳೆಗೆ ನೋವು ಕಡಿಮೆಯಾಗದಿದ್ದರೆ ಪತ್ರಿಕೆ ಹಂಚಲು ಹೋಗ ಲಾಗುವುದಿಲ್ಲ."

ಮಾತು ಮುಗಿಯುವುದರೊಳಗಾಗಿ ಗೋಪಿ ಉತ್ತರಿಸಿದ "ನಾಳೆ ಯಿಂದ ನಾನೇ ಹಂಚಿ ಬರುವೆ. ನೀನೇನೂ ಯೋಚಿಸಬೇಡ."

ವಿಮಲೆ ರವಿಯ ಹಾಸಿಗೆಯನ್ನು ಹಾಸಿ ಸಜ್ಜುಗೊಳಿಸಿದಳು. ಅವನು ಮಲಗಿಕೊಳ್ಳುತ್ತಲೂ ಬದಿಯಲ್ಲಿ ಕುಳಿತುಕೊಂಡು ಊದಿ ಹಸುರುಗಟ್ಟಿದ್ದ ಹಣೆಯನ್ನು ಕೈಯಿಂದ ಉಜ್ಜುತ್ತಾ ಎದೆಯ ಹಾರೈಕೆಯನ್ನು ಹೊರತಂದಳು, "ರವೀ ನೀನಿಲ್ಲದ ಒಂದು ಕ್ಷಣವನ್ನೂ ಯೋಚಿಸಿಕೊಳ್ಳಲಾರೆ. ದೇವರೇ ನಿನ್ನನ್ನು ಕಾಪಾಡಿದ." ತಕ್ಷಣ ಕಣ್ಣಂಚಿನಲ್ಲಿ ಹನಿ ಮಿನುಗಿತು.

ವಿಮಲೆಯ ಕೈಯನ್ನು ಅದುಮಿ ಹಿಡಿದುಕೊಂಡು ರವಿ ಅಂದ "ವಿಮಲೂ ಒಂದುವೇಳೆ ನಾನು ಅಲ್ಲೇ ಸತ್ತುಹೋಗಿದ್ದೆ ಎಂದಿಟ್ಟುಕೋ...." ಮಾತು ಮುಗಿಯುಗೊಡದೆ ಅವನ ಬಾಯಿಯನ್ನು ಗಟ್ಟಿಯಾಗಿ ಒತ್ತಿ ಹಿಡಿದು ಕೊಂಡಳು. ಬಿಡಿಸಿಕೊಳ್ಳಲು ರವಿ ಕೊಸರಾಡಿದರೂ ವಿಮಲೆ ಬಿಡಲಿಲ್ಲ.

"ನಾನು ಹೇಳುವುದೇನು ಎಂಬುದನ್ನಾದರೂ ಒಂದಿಷ್ಟು ಕೇಳ ಕೊಡದೇ?" ವಿಮಲೆಯ ಎರಡೂ ಕೈಗಳನ್ನು ಹಿಡಿದುಕೊಂಡು ರವಿ ಕೇಳಿದ.

"ನೀನು ನನಗೇನೂ ಹೇಳಲೇ ಬೇಡ."

ಚಿಕ್ಕವರು ಶಾಲೆಗೆ ಹೊರಟಾಗ ಶಿವೆ ಕೈಗಳನ್ನು ಜೋಡಿಸಿಕೊಂಡು "ಈ ಮಕ್ಕಳಿಗೆ ನೀನೇ ರಕ್ಷೆ." ಎಂದು ದೇವರನ್ನು ಅತ್ಯಂತ ಸಂಕಟದಿಂದ ಪ್ರಾರ್ಥಿಸಿಕೊಂಡಳು. ರವಿ ಹಾಸಿಗೆಯಿಂದಲೇ ದನಿಯನ್ನು ಹರಿಯಬಿಟ್ಟ, "ವಿಧಿವತ್ತಾಗಿ ಏನೇನು ಆಗುವುದಿದೆಯೋ ಅದು ಆಗಲೇಬೇಕು. ಅದನ್ನು

ತಪ್ಪಿಸಲು ಯಾರಿಂದ ಆದೀತು ? ಮುಖ್ಯವಾಗಿ ಧೈರ್ಯಮಾಡಿಕೊಳ್ಳಿರಿ."

"ಅಯ್ಯೊ, ಧೈರ್ಯ ಬರುವುದು ಹೇಗೆ ? ನನ್ನ ಮನಸ್ಸು ಕ್ಷಣ ಕ್ಷಣಕ್ಕೂ ದುರ್ಬಲವಾಗುತ್ತಿದೆ." ಕಂಬನಿ ತುಂಬಿದಳು ಶಿವೆ.

"ಅಮ್ಮಾ, ಮನಸ್ಸು ದುರ್ಬಲವಾದರೆ ಬದುಕೇ ನಿರರ್ಥಕ. ಮನಸ್ಸನ್ನು ಅತ್ತ ಹರಿಯಗೊಡದಂತೆ ತಡೆಗಟ್ಟಿರಿ." ಎಂದ ರವಿ ಸ್ವಲ್ಪ ತಡೆದು "ನಿನ್ನೆ ನಮ್ಮ ಅಂಗಡಿಯವರಿಗೆ ಬಾಡಿಗೆ ಹೆಚ್ಚಿಸುತ್ತೇನೆಂದು ಹೇಳಿದ್ದೇನೆ. ಇಬ್ಬರೂ ಒಪ್ಪಿಕೊಂಡಿದ್ದಾರೆ. ಚಿಕ್ಕಬಾಬೂಜಿಗೆ ನೂರು ಕೊಟ್ಟು ನಮಗೆ ನೂರು ಉಳಿಯುತ್ತದೆ... ದೊಡ್ಡ ಬಾಬೂಜಿ ಊರಲಿಲ್ಲವಂತೆ. ಇವನು ಇನ್ನೂ ಏನೇನು ತೊಂದರೆ ಕೊಡುತ್ತಾನೋ ಎಂಬ ಭಯವಾಗುತ್ತಿದೆ. ಈ ಮಹಾರಾಯ ಒಂದಕ್ಕೆರಡು ಬಡ್ಡಿ ಸೇರಿಸಿ ಹಿಂಡಿಬಿಡುತ್ತಾನೆಂದು ತೋರುತ್ತದೆ....ದೊಡ್ಡ ಬಾಬೂಜಿಯವರನ್ನು ಕಂಡು ಮಾತಾಡಿದ್ದರೆ ಒಳ್ಳೆಯದಿತ್ತು. ಅವರಿಲ್ಲದೆ ತೊಂದರೆಯಾಯಿತು."

"ನೀನು ಬರೆದುಕೊಳ್ಳುವುದು ಲೇಸು. ಇಷ್ಟು ದಿನ ಇವರ ಸೇವೆ ಮಾಡಿದುದಕ್ಕೆ ಇಂಥ ಪ್ರತಿಫಲ ...?" ಶಿವೆ ಕಳಕಳಿಯಿಂದ ನುಡಿದಳು. ಮುಖ ಮ್ಲಾನವಾಗಿತ್ತು. ಹಾಗೇ ಯೋಚಿಸುತ್ತಾ "ಈ ವಿಚಾರ ತಂದೆಯವರಿಗೂ ತಿಳಿಯದು. ಇಂದೇ ಒಂದು ಕಾಗದ ಬರೆದು ಹಾಕು; ಅವರೊಮ್ಮೆ ಬಂದು ಹೋದರೂ ವಾಸಿ." ಧ್ವನಿ ಸಂಕಟದ ಕಾಲುವೆಯಲ್ಲಿ ಹರಿದು ಬಂತು.

ಬೆನ್ನು ನೋವಿನಿಂದಾಗಿ ರವಿ ಬಹಳ ದಿನಗಳವರೆಗೆ ಮನೆ ಬಿಟ್ಟು ಹೊರಡಲಾಗಲಿಲ್ಲ. ಆ ವೇಳೆಯನ್ನೆಲ್ಲಾ ಶಿವೆ ವಿದ್ಯೆ ಕಲಿಯಲು ಉಪಯೋಗಿಸಿಕೊಂಡಳು. ಹಳ್ಳಿಯ ಶಾಲೆಯಲ್ಲಿ ಕಲಿತ ಎರಡಕ್ಷರ ಹಾಗೇ ಹುಗಿದು ಹೋಗಿತ್ತು. ಈಗದು ನೀರೆರೆದ ಬಳ್ಳಿಯಂತೆ ಚಿಗುರಲಾರಂಭಿಸಿತು. ವಿದ್ಯೆ ಹತ್ತುತ್ತಿರುವ ರೀತಿಯನ್ನು ನೋಡಿ ಶಿವೆ ತನಗೆ ತಾನೇ ಅಚ್ಚರಿಪಟ್ಟುಕೊಂಡಳು. ತನ್ನಲ್ಲಿ ಅಷ್ಟೊಂದು ಪಟುತ್ವವಿರುವುದು ತನಗೆ ತಿಳಿಯದಲ್ಲಾ ಎಂದೆನಿಸಿತು. ವಿದ್ಯೆ ಕರಗತವಾಗುತ್ತಿದ್ದಂತೆ ಉತ್ಸುಕತೆಯೂ ಹೆಚ್ಚತೊಡಗಿ ಮೈಯಲ್ಲಿ ವಿದ್ಯುತ್ ಸಂಚಾರವಾಗತೊಡಗಿತು.

ರವಿ ಚೇತರಿಸಿಕೊಂಡಮೇಲೆ ಒಮ್ಮೆ ಆನಂದನನ್ನು ಕಂಡು ಹಣದ ಅಗತ್ಯ ಬಹಳವಿದೆಯಾಗಿ ಹೇಳಿ ಹಣಬೇಕೆಂದು ಕೇಳಿದ. ಅದಕ್ಕುತ್ತರವಾಗಿ

ಆನಂದ ತನ್ನ ಸಂಪಾದನೆಯಲ್ಲಿ ಬಹುಪಾಲು ಹಿಂದಿನ ಸಾಲಕ್ಕಾಗಿ ಕಟ್ಟು ತ್ತಿರುವುದಾಗಿ ಹೇಳಿ ತನ್ನಿಂದ ಸದ್ಯಕ್ಕೆ ಏನೂ ಸಹಾಯ ಮಾಡಲಾಗುವುದಿಲ್ಲ ವೆಂದು ನಿರ್ದಾಕ್ಷಿಣ್ಯವಾಗಿ ಉತ್ತರಿಸಿದುದು ರವಿಯ ಮನಸ್ಸಿಗೆ ಖೇದ ವನ್ನುಂಟುಮಾಡಿತು. ಆನಂದನಿಂದ ಹಣವನ್ನು ನಿರೀಕ್ಷಿಸುವುದಕ್ಕಿಂತ ಅಮ್ಮ ಕೆಲಸಕ್ಕೆ ಸೇರುವುದು ಒಳ್ಳಿತೆಂಬುದು ಮನದಟ್ಟಾಯಿತು. ಬಿಡುವಿನ ಕಾಲದಲ್ಲೆಲ್ಲಾ ಅಮ್ಮನಿಗೆ ಪಾಠ ಹೇಳಿ ಆಕೆಯನ್ನು ವಿದ್ಯಾವಂತಳನ್ನಾಗಿ ಮಾಡಬೇಕೆಂಬ ಉತ್ಕಟ ಆಕಾಂಕ್ಷೆ ಎಳೆಯ ಮನದಲ್ಲಿ ಬೇರೂರಿತು-ಇನಿತೂ ಬೇಸರವಿಲ್ಲದಂತೆ.

ರವಿಯ ಕಾಗದ ತಲುಪಿದೊಡನೆಯೆ ಲಿಂಗಣ್ಣ ಮೈಸೂರಿಗೆ ಬಂದ. ಸ್ವಾಮಿ ಹಣ ಕಳವು ಮಾಡಿಕೊಂಡು ಹೋಗಿದ್ದಾನೆಂಬುದು ಅತ್ಯಂತ ಅಚ್ಚರಿ ಯನ್ನುಂಟುಮಾಡಿತು. ಚಿಕ್ಕ ಬಾಬೂಜಿಯೊಂದಿಗೆ ಇದು ಸರ್ವಥಾ ಸುಳ್ಳೆಂದು ಎಷ್ಟು ಹೇಳಿಕೊಂಡರೂ ಪ್ರಯೋಜನವಾಗದೆ ಲಿಂಗಣ್ಣ ಇಳಿಮೋರೆಯೊಂದಿಗೆ ಹಿಂದಿರುಗಿದ. ವಿನಾಕಾರಣ ಹಣ ಕೊಡಬೇಕಾಗಿ ಬಂದ ಬಗೆ ಮನಸ್ಸಿಗೆ ಅತ್ಯಂತ ನೋವನ್ನುಂಟು ಮಾಡಿತು. ಹಾಗೇ ಯೋಚಿಸುತ್ತ ಲಿಂಗಣ್ಣ ಹೇಳಿದ "ಶಿಲೆ, ಈ ಆಪತ್ತುಗಳ ರೀತಿಯನ್ನು ನೋಡಿದರೆ ನೀನು ಕೆಲಸಕ್ಕೆ ಸೇರಿಕೊಳ್ಳುವುದು ವಿಹಿತವೆಂದು ತೋರುತ್ತದೆ. ಇನ್ನು ಸ್ವಾಮಿ ದಕ್ಕಿಯಾನೆಂಬ ಆಸೆಯನ್ನು ಬಿಡು."

"ಏನು ಮಾಡಬೇಕೋ ಒಂದೂ ಬಗೆಹರಿಯದಾಗಿದೆ. ಇದುವರೆ ವಿಗೂ ನಾಲ್ಕು ಗೋಡೆಯೊಳಗೆ ಬಾಳಿ ಈಗ ಹೊರ ಹೋಗುವುದೆಂದರೆ ಭಯವಾಗುತ್ತದೆ." ಕಣ್ಣೊರಸಿಕೊಂಡಳು ಶಿವೆ.

"ನಾವೊಂದು ನೆನೆದರೆ ದೈವವೊಂದು ನೆನೆದಂತೆ ಎಂಬಂತೆ ಕಾಲವು ಪ್ರತಿಕೂಲವಾಗಿದೆ. ಇನ್ನು ನೀನು ಸಂಪಾದನೆಯ ಹಾದಿಯನ್ನು ಕಂಡು ಕೊಳ್ಳಲೇಬೇಕು. ಈ ಕೆಲಸ ಸಿಕ್ಕಿರುವುದು ನಿನ್ನ ಪುಣ್ಯವೆಂದೇ ಹೇಳುವೆ."

"ಡಾಕ್ಟರು ನಮಗಾಗಿ ಬಹಳ ಶ್ರಮವಹಿಸಿದ್ದಾರೆ. ಅವರು ಅರ್ಜಿ ಹಾಕಲು ಹೇಳಿದಾಗ ಹೇಗೆ ಬರೆಯಬೇಕೋ ತಿಳಿಯದು ಎಂದು ಅಂಜುತ್ತಲೇ ಹೇಳಿದೆ. ತಕ್ಷಣ ಅವರೇ ಬರೆದು, ಅವರೇ ಅದನ್ನು ತೆಗೆದುಕೊಂಡು ಹೋಗಿ ಮೆಡಿಕಲ್ ಆಫೀಸರಿಗೆ ಕೊಟ್ಟು ಕೆಲಸ ದೊರಕಿಸಿಕೊಟ್ಟಿದ್ದಾರೆ. ಏನು

ತೋಂದರೆ ಬಂದರೂ ಚಿಂತೆಯಿಲ್ಲ. ಅಮ್ಮ ಕೆಲಸ ಮಾಡಲೇಬೇಕು. ಇಲ್ಲವಾದರೆ ಡಾಕ್ಟರಿಗೇನೆಂದು ಹೇಳಲಿ?" ರವಿ ಒತ್ತಾಯಪೂರ್ವಕವಾಗಿ ಹೇಳಿದರೂ ಸ್ವಲ್ಪ ಹೊತ್ತು ಯೋಚಿಸುತ್ತ ನಿಂತಳು ಶಿವೆ. ವ್ಯೆ ಮರವಟ್ಟಂತಾಯಿತು.

"ಇನ್ನೇನು ಅಡ್ಡಿ ಆತಂಕಗಳು ಹುಟ್ಟಿಕೊಳ್ಳಲಿವೆಯೋ ದೇವರೇ ಬಲ್ಲ" ಮನಸ್ಸು ಅಳುಕಿ ನುಡಿಯಿತು.

"ಭಯವನ್ನು ಬದಿಗಿಟ್ಟು ಕೆಲಸಮಾಡು." ನುಡಿಯಿತು ಅಂತರಾತ್ಮ.

"ಎನ್ನಂತರಂಗಕ್ಕೆ ನೀನೇ ಚೈತನ್ಯವನ್ನು ತುಂಬು ದೇವಾ!"

"ಮನದಾಗಸದಲ್ಲಿನ ಕತ್ತಲೆಯ ತೆರೆಯನ್ನು ಕಿತ್ತೊಗೆದು ಮುನ್ನುಗ್ಗು"

"ನನಗಾರು ಮಾರ್ಗದರ್ಶಿ?"

"ಪರಮಾತ್ಮ"

೧೬

ಬೆಳಗಿನ ಹೊತ್ತು: ಒಂಭತ್ತರ ಸಮಯ.

ಅತ್ಯಂತ ಪ್ರಶಾಂತ ವಾತಾವರಣದಲ್ಲಿ ಬಾಲರವಿಯು ಹೂ ಬಿಸಿಲು ತುಂಬಿ ಹರಡಿತ್ತು. ಎಳೆ ಬಿಸಿಲಿಗೆ ಮೈಗೊಟ್ಟು ಅಂಗಳದಲ್ಲಿ ಅಡ್ಡಾಡುತ್ತಿದ್ದ ಆನಂದ ಶಿವಮ್ಮನ ಮನೆಯ ಕಡೆ ದಿಟ್ಟಿಯನ್ನು ಹೊರಳಿಸಿದಾಗ ಬಾಗಿಲಿಗೆ ಬೀಗ ಬಿದ್ದುದು ಗೋಚರಿಸಿತು. ಹೊತ್ತಿಗೆ ಮುಂಚೆ ಎಲ್ಲರೂ ಎಲ್ಲಿಗೆ ಹೋಗಿರಬಹುದೆಂಬ ಯೋಚನೆ ಮನಸ್ಸಿಗೆ ಅಚ್ಚರಿ ಮೂಡಿಸಿತು. ಅಲ್ಲೇ ನಿಂತ ನೋಟ ಮತ್ತೆ ಅತ್ತಲೇ ನಿಟ್ಟಿಸಿತು. "ಸ್ವಾಮಿ ಇರುವಂದು ಇಲಿಯಾಗಿದ್ದುದು ಈಗ ಹುಲಿಯಾಗಿ ಬಿಟ್ಟಿದೆ! ಹಹ್ಹಹ್ಹಾ!" ಎಂದು ತನ್ನಷ್ಟಕ್ಕೆ ತಾನೇ ನಕ್ಕ. ಅಷ್ಟರಲ್ಲಿ ರತ್ನ ಸೀರೆಯ ಸೆರಗಿನಿಂದ ಕೈ ಒರಿಸಿಕೊಳ್ಳುತ್ತ ಹೊರಬಂದಳು. ಮಡದಿಯ ಮುಖ ನೋಡುತ್ತಲೂ ಆನಂದ ಹುಬ್ಬು ಹಾರಿಸಿ ಅಂದ "ನೋಡಿದಯೋ ಹೇಗಿದೆ? ಆಗಲೇ ನಿಮ್ಮ ಅಕ್ಕ ಗಾಳಿ ಸಂಚಾರ ಹೊರಟಿದ್ದಾಳೆ!"

"ಕಟ್ಟಿದ ಕುದುರೆಯ ಕಾಲು ಬಿಚ್ಚಿದಂತಾಯ್ತು." ರತ್ನ ಕಿಸಕ್ಕನೆ ಹಲ್ಲು ಬಿಟ್ಟಳು. ಮನದಲ್ಲಿನ ನಂಜು ತುಟಿಗಳಲ್ಲಿ ಹರಿದಾಡಿತು.

"ಪೋಲೀಸರ ದಾಳಿಗೂ ಅಂಜಲಿಲ್ಲ ಹೆಣ್ಣು!"

"ಮಾನಿಷ್ಠರ ಮನೆ ಸೇರಿಯೂ...."

"ಮಾನ ಎಂದೋ ಮೂರಾಬಟ್ಟೆಯಾಯ್ತು. ಇನ್ನೆಲ್ಲಿಯ ಮಾನ?"

"ನಿಮ್ಮ ಉತ್ತರದಿಂದ ರವಿ ಪೆಚ್ಚಾದಂತಿದೆ. ಅಂದಿನಿಂದ ಈ ಕಡೆ ಬರಲಿಲ್ಲ. ಲಿಂಗಣ್ಣ ಬಂದರೂ ನಮ್ಮ ಕಡೆ ಮುಖ ಹಾಕಲಿಲ್ಲ."

"ನಮ್ಮದು ಅವಿಭಕ್ತ ಕುಟುಂಬ. ಅಣ್ಣನ ಮನೆಗೆ ತಮ್ಮ ಬಾಡಿಗೆ ಕೊಡುವುದೇಂದರೇನು? ಹಾಗೆಂದೇ ಹೇಳಬೇಕೆಂದಿದ್ದೆ ಆದರೂ ಸ್ವಲ್ಪ ಸುಧಾರಿಸಿಕೊಂಡೆ. ನನಗೂ ನಾನಾ ಕಷ್ಟಗಳಿವೆ; ಇವರಿಗೆ ಮಾತ್ರವಲ್ಲ."

"ಅವರು ಮನೆ ಬಿಡಲು ತಗಾದೆ ಮಾಡಿದರೆ?"

"ಮಾಡಲಿ, ಆಗ ನೋಡಿಕೊಳ್ಳುವೆ." ಆನಂದ ಅಣಕದ ನಗೆಬೀರಿದ. ಕಣ್ಣುಗಳು ತುಂಟ ಕುದುರೆಯಾದುವು.

"ಅಂತೂ ಇದು ಕಿಚ್ಚು ಹತ್ತಿಸುತ್ತದೆ."

"ಇರಲಿ, ಶಿವಮ್ಮನಿಗೆ ಮಕ್ಕಳನ್ನು ಶಾಲೆ ಬಿಡಿಸಿ ಎಲ್ಲಿಯಾದರೂ ಕೆಲಸಕ್ಕೆ ಹಾಕಿರಿ ಎಂದೆ; ಅದು ಆಕೆಗೆ ಸಮ್ಮತವಿಲ್ಲ. ಮಾತು ಮುಗಿಯು ವುದರೊಳಗಾಗಿ ಪ್ರಕಾರದ ಬಾಗಿಲು "ಖಣಲ್" ಎಂದು ಸದ್ದು ಮಾಡಿತು. ಇಬ್ಬರೂ ದಿಟ್ಟಿಯನ್ನು ಅತ್ತ ಹರಿಸಿದರು. ಬಾಗಿಲನ್ನು ತೆಗೆದುಕೊಂಡು ಒಳ ಬಂದವನು ರಾಜಣ್ಣ. ಭಾವನನ್ನು ಕಾಣುತ್ತಲೂ ರತ್ನ ಸರಕ್ಕನೆ ಒಳ ಸೇರಿಕೊಂಡಳು. ಆನಂದ ಮುಗುಳ್ನಗುವನ್ನು ಬೀರಿ ಕೇಳಿದ "ಬೆಳಗಿನ ಬಸ್ಸಿಗೆ ಬಂದಿರೇನು ?"

"ಹೌದು" ಎಂದ ರಾಜಣ್ಣ ಪುನಃ "ನೀನಿಂದು ಕೆಲಸಕ್ಕೆ ಹೋಗ ಲಿಲ್ಲವೇ ?" ಎಂದು ಕೇಳಿದ.

"ಮೈ ಚೆನ್ನಾಗಿರಲಿಲ್ಲ. ಅದರಿಂದಾಗಿ ಹೋಗಲಿಲ್ಲ." ಆಕಳಿಸುತ್ತ ಆಲಸ್ಯದಿಂದ ಉತ್ತರಿಸಿದ ಆನಂದ.

"ಶುದ್ಧ ಸೋಮಾರಿ. ಹೀಗಾದರೆ ಈ ಕೆಲಸವನ್ನೂ ನೀನು ದಕ್ಕಿಸಿ ಕೊಳ್ಳುವುದಿಲ್ಲ." ಎಂದು ಅಸಮಾಧಾನವನ್ನು ಸೂಚಿಸಿ ಹೇಳುತ್ತಿರುವಾಗ ದೃಷ್ಟಿ ಶಿವಮ್ಮನ ಮನೆಯತ್ತ ಹರಿಯಿತು. ಬಾಗಿಲಿಗೆ ಬೀಗ ಬಿದ್ದುದನ್ನು ಕಂಡು "ಏನು, ಇವರೆಲ್ಲ ತೌರಿಗೆ ಹೋಗಿದ್ದಾರೆಯೇ ?" ಎಂದು ತವಕದಿಂದ ಕೇಳಿದ. ಮತ್ತೆ ಕಣ್ಣು ಎಲ್ಲೆಡೆಯೂ ಹೊರಳಿತು. ಹಸುರನ್ನು ಹೊತ್ತ ಕೈತೋಟವನ್ನು ನೋಡಿ ಮನಸ್ಸು ಬಿಗಿದುಕೊಂಡಿತು. ಅಂದೇ ಕೈತೋಟದ ವಿಚಾರ ತಿಳಿದುಬಂದಿದ್ದು ಈಗ ಶಿವೆಯ ಚಟುವಟಿಕೆ ಕರತಲಾಮಲಕ ವಾಯಿತು.

"ಹೋಗಿರುವುದು ಸ್ವಂತ ಕಾರ್ಯಾರ್ಥವಾಗಿ ತೌರಿಗಲ್ಲ." ಆನಂದ ವ್ಯಂಗವಾಗಿ ನುಡಿದ.

"ಅಂದರೆ ?" ರಂಗೊರೆದ ಕಣ್ಣುಗಳು ಅರಳಿದುವು.

"ಹೊರಗೆಲ್ಲೋ ಅಡ್ಡಾಡಲು ಹೋಗಿರಬೇಕು. ಅಂದಹಾಗೆ ನಿಮಗೆ ಮುಖ್ಯವಾದ ವಿಚಾರ ತಿಳಿಯಲಿಲ್ಲವೆಂದು ತೋರುತ್ತೆ. ನನ್ನ ಕಾಗದ

ನಿಮಗೆ ತಲುಪಲಿಲ್ಲವೆ ?"

"ಇಲ್ಲವಲ್ಲಾ ?"

"ಇವರ ಮನೆಯನ್ನು ಪೋಲೀಸರು ನುಗ್ಗಿ ಜಪ್ತಿ ಮಾಡಿ ಶಿವಮ್ಮ ನಿಂದ ಮುಚ್ಚಳಿಕೆಯನ್ನು ಬರೆಸಿಕೊಂಡು ಹೋಗಿದ್ದಾರೆ !"

"ಹಾ ! ಅದೇನು ಸಮಾಚಾರ ?" ಆಚ್ಚರಿಯಿಂದ ಕೇಳಿದ ರಾಜಣ್ಣ.

"ಬಾಬೂಜಿಯ ಅಂಗಡಿಯಿಂದ ಸ್ವಾಮಿ ಆರು ಸಾವಿರ ರೂಪಾಯಿ ಗಳನ್ನು ಕದ್ದುಕೊಂಡು ಹೋಗಿದ್ದಾನಂತೆ. ಅವರ ಪರಿಶೋಧನೆಗಾಗಿ ಮನೆ ಜಪ್ತಿಮಾಡಿದರು. ಸ್ವಾಮಿ ಅಡಗಿಕೊಂಡಿದ್ದು ಇವರೊಡನೆ ಪತ್ರ ವ್ಯವಹಾರ ವನ್ನಿಟ್ಟುಕೊಂಡಿರಬಹುದೆಂಬ ಕಲ್ಪನೆ ಅವರಿಗಿತ್ತು. ಆದರೆ ಅವರಿಗೆ ಏನೂ ದೊರೆಯಲಿಲ್ಲ. ಹಣವನ್ನು ಕಟ್ಟಿಕೊಡಬೇಕೆಂದು ಶಿವಮ್ಮನನ್ನು ಕೇಳಿದ್ದಾರೆ. ಅದಕ್ಕೆ ಒಪ್ಪಿ ಇವರು ಮುಚ್ಚಳಿಕೆ ಬರೆದುಕೊಟ್ಟಿದ್ದಾರೆ."

"ಎಲ್ಲಿಯಾದರುಂಟೇ ?"

"ತುಂಬ ಅನ್ಯಾಯ."

"ಸ್ವಾಮಿ ಕದ್ದಿದ್ದಾನೆಂಬುದಕ್ಕೆ ಮಾಹಿತಿಯೇನು ? ಇದುವರೆವಿಗೆ ಸುಮ್ಮನಿದ್ದು ಈಗ ಒಮ್ಮೆಲೆ ಧಾಳಿಮಾಡುವುದಕ್ಕೆ ಕಾರಣವೇನು ?"

"ಅವರು ಹೇಳಿದ್ದು; ಇವರು ಕೇಳಿದ್ದು."

"ಹಾಗಿದ್ದರೆ ಜೀವನಕ್ಕೆ ಕಲ್ಲು ಬಿತ್ತು. ಸ್ವಾಮಿ ಹಣ ಕದ್ದೊಯ್ಯುವುದಾದರೂ ಎಲ್ಲಿಗೆ ? ಇದು ಆಶ್ಚರ್ಯಕರವಾದ ಸಂಗತಿ. ಹಣದದೆಸೆಯಿಂದಾಗಿ ಯಾರಾದರೂ ಅವನನ್ನು ಖೂನಿಮಾಡಿರಬಹುದೇ ? ಇದೊಂದು ಸಮಸ್ಯೆಯಾಗುಳಿಯಿತು. ಇದುವರೆವಿಗೆ ಹಣದ ಸೊಲ್ಲೇ ಇರಲಿಲ್ಲ. ಈಗ ಹೇಗೆ ಈ ವಿಚಾರ ಹುಟ್ಟಿಕೊಂಡಿತು ? ಸ್ವಾಮಿ ಎಂದೂ ಪರರ ಒಡವೆಗೆ ಆಸೆ ಪಟ್ಟವನಲ್ಲ. ಅವನೆಂದೂ ಈ ಹೀನ ಕೃತ್ಯ ಎಸಗಿರಲಾರ."

"ಇದೊಂದು ಸೋಜಿಗವೇ ಸರಿ."

ಆನಂದನೊಡನೆ ರಾಜಣ್ಣ ಒಳ ಬಂದು ಚಾಪೆಯಮೇಲೆ ಕುಳಿತು ಕೊಂಡು ಹೇಳಿದ "ಮನೆಯಲ್ಲಿ ಮಾಡಿ ಮುಗಿಸಲಾರದಷ್ಟು ಕೆಲಸಬಿದ್ದಿದೆ. ಸ್ವಲ್ಪವೂ ಬಿಡುವಿಲ್ಲ. ಅಗತ್ಯ ಕೆಲಸ ಬಿದ್ದುದರಿಂದ ಅವನ್ನೆಲ್ಲಾ ಬಿಟ್ಟು ಬಂದುದಾಯ್ತು."

ಮೈಯಲ್ಲಿನ ದಣಿವು ಮುಖದಲ್ಲಿ ಮುದ್ರೆಯೊತ್ತಿತ್ತು. ಕರವಸ್ತ್ರದಿಂದ ಮುಖವನ್ನು ಒರಿಸಿಕೊಂಡು "ನಾನಿನ್ನೂ ಸ್ನಾನ ಮಾಡಲಿಲ್ಲ" ಎಂದ ರಾಜಣ್ಣ. ಆದರೆ ತಲೆಯು ಕಾರಾಗಾರದಲ್ಲಿ ತುಂಬಿದ್ದ ವಿಚಾರವೇ ಬೇರೆ.

"ನೀರಿದೆ ಸ್ನಾನಮಾಡಿರಿ" ಎನ್ನುತ್ತ ಆನಂದ ಟವಲೊಂದನ್ನು ಕೈಗಿಟ್ಟ.

ಬೀದಿಯಕಡೆಗೆ ದೃಷ್ಟಿಹೊರಳುತ್ತಲೂ ರಾಜಣ್ಣ ಕೇಳಿದ "ಶಿವೆ ಎಲ್ಲಿಗೆ ಹೋಗಿದ್ದಾಳೆ ?" ಪ್ರಶ್ನೆಯಲ್ಲಿ ಕುತೂಹಲ ಹರಿದು ಬಂತು.

"ದೇವರಿಗೇ ಗೊತ್ತು."

"ಈಕೆಯನ್ನು ಇನ್ನು ಇಲ್ಲಿಡುವುದು ಕ್ಷೇಮವಲ್ಲ." ಆನಂದನಿತ್ತ ಕಾಫಿಯನ್ನು ಕುಡಿಯುತ್ತ ರಾಜಣ್ಣ ಮುಂದುವರಿದ "ಆರು ಸಾವಿರ ರೂಪಾಯಿಗಳೆಂದರೆ ಏನು ಸಾಮಾನ್ಯ ಗಂಟೇ ? ಅದು ತೀರುವುದೆಂದಿಗೆ ? ಹಣವನ್ನು ಕಟ್ಟಿಕೊಡಲು ಶಿವೆ ಏಕೆ ಒಪ್ಪಿಕೊಂಡಳು ? ಇದರ ಹಿಂದೆ ಏನೋ ಮೋಸ ವಿದೆ. ಸ್ವಾಮಿ ಹಣ ಕದ್ದಿರುವುದು ಅಸಂಭವ."

"ಒಪ್ಪಿಕೊಳ್ಳದಿದ್ದರೆ ಅವರು ಬಿಡುತ್ತಾರೆಯೇ ? ಸ್ವಾಮಿಯ ಸೊತ್ತು ಈ ಮನೆ ಇದೆಯಲ್ಲಾ. ಇದನ್ನೇ ವಶಪಡಿಸಿಕೊಳ್ಳುತ್ತೇವೆ ಎನ್ನುತ್ತಾರೆ. ಆದರಿಂದಾಗಿ ಶಿವಮ್ಮ ಒಪ್ಪಿಕೊಂಡದ್ದು."

"ಇದು ಶುದ್ಧ ಅನ್ಯಾಯ; ಒಮ್ಮೆ ಬಾಬೂಜಿಯನ್ನು ಕಂಡು ಮಾತಾಡಿದರೆ ಒಳ್ಳೆಯದೇನೋ ಎನ್ನಿಸುತ್ತೆ."

"ಸದ್ಯ ಸುಮ್ಮನಿರಿ. ಸ್ವಾಮಿಯ ಅಣ್ಣಂದಿರು ಅನುಕೂಲ ಸ್ಥಿತಿಯಲ್ಲಿದ್ದಾರೆಂದು ತಿಳಿದುಬಂದರೆ ಬಾಬೂಜಿ ನಿಮ್ಮಮೇಲೆಯೇ ಕಣ್ಣಿಟ್ಟಾನು. ಈಗ ಆತನ ಕಣ್ಣಿಗೆ ಬೀಳಬೇಡಿರಿ."

"ಇದರ ಪರಿಹಾರ ಹೇಗೆ ? ಅನ್ಯಥಾ ಹಣ ಕಟ್ಟುವುದೇ ?"

"ಮಾಡುವುದಿನ್ನೇನು ? ನಮ್ಮಿಂದ ಬಾಬೂಜಿಯೊಂದಿಗೆ ಹೋರಾಟ ಸಾಧ್ಯವೇ ? ಈಗ ಹೇಗೂ ಶಿವಮ್ಮ ಹಣ ಕಟ್ಟುವುದಾಗಿ ಬರೆದುಕೊಟ್ಟಿದ್ದಾರೆ, ಅಂದಮೇಲೆ ಮುಗಿಯಿತು. ಅವರು ಕಟ್ಟಿಯೇ ಕಟ್ಟುತ್ತಾರೆ."

"ಗಂಜಿಗೇನು ಗತಿ ?"

"ಅಂಗಡಿ ಬಾಡಿಗೆ ಹೆಚ್ಚಿಸಿದ್ದಾರೆ. ಮಕ್ಕಳೆಲ್ಲರೂ ಕೆಲಸ ಮಾಡು

ತ್ತಾರೆ. ಹೊಲಿಗೆಯಿಂದಲೂ ಸಂಪಾದಸೆಯಿದೆ. ಅಂತೂ ಸಾಕಷ್ಟು ಗಳಿಕೆ ಇದೆ. ಯೋಚಿಸಬೇಕಾಗಿಲ್ಲ.

"ಆದರೂ ನಾಲ್ಕಾರು ಮಂದಿಯ ಜೀವನ ಕಷ್ಟ. ಈ ಮನೆಯನ್ನು ಮಾರಿ ನಾಲ್ಕು ಎಕರೆ ಜಮೀನು ಕೊಂಡು ಇವರನ್ನು ಹಳ್ಳಿ ಸೇರಿಸುವುದು ಲೇಸು."

"ಅದು ಅವರಿಗಿಷ್ಟವಿಲ್ಲ. ಮೊನ್ನೆ ನಾನೇ ಹಾಗೆಂದು ಹೇಳಿದೆ. ಅವರೊಪ್ಪುವುದಿಲ್ಲ."

"ಸರಿ. ಕುರಿ ಕೇಳಿ ಕಾರ ಅರೆದರೆ ಆದೀತೆ ? ಮೊದಲು ಈ ಮನೆಗೊಂದು ಗಿರಾಕಿ ಹುಡುಕು."

"ನೀವು ಮಾರಿದ ಕ್ಷಣ ಬಾಬೂಜಿ ಹಣಕ್ಕಂಟಿಕೊಳ್ಳುತ್ತಾನೆ. ಹಣ ನಿಮ್ಮ ಕೈಗೆ ಬರುವುದೇ ಇಲ್ಲ."

"ಓ, ಇದೊಂದು ದೊಡ್ಡ ಸಮಸ್ಯೆಯಾಯಿತು." ರಾಜಣ್ಣ ಸ್ವಲ್ಪ ಹೊತ್ತು ಯೋಚಿಸುತ್ತಾ ಕುಳಿತುಕೊಂಡ. ರತ್ನ ಬಾಗಿಲ ಮರೆಗೆ ನಿಂತು ಕೊಂಡು "ಸ್ನಾನಕ್ಕೆ ನೀರು ಅಣಿಯಾಗಿದೆ" ಎಂದು ಮೆಲ್ಲನುಸಿರಿದಳು.
ಅಲ್ಲಿಂದೆದ್ದು ರಾಜಣ್ಣ ನೀರು ಮನೆಗೆ ಹೋದ. ಅವನು ಸ್ನಾನ ಮುಗಿಸಿ ಹೊರಬರುವಷ್ಟರಲ್ಲಿ ರವಿ ಅವಸರವಸರವಾಗಿ ಶಾಲೆಗೆ ತಯಾರಾಗುತ್ತಿದ್ದ. ರವಿಯನ್ನು ಕಾಣುತ್ತಲೂ ರಾಜಣ್ಣ ಕೇಳಿದ "ಏನೋ ? ಇಷ್ಟೊತ್ತು ಎಲ್ಲಿಗೆ ಹೋಗಿದ್ದೀರಿ ?"

"ಊರಲ್ಲೆಲ್ಲಾ 'ಅಮ್ಮ' ಹರಡಿದೆಯಂತೆ ಮಕ್ಕಳಿಗೆ 'ದೇವಿ' ಹಾಕಿಸ ಬೇಕೆಂದು ಡಾಕ್ಟರು ಹೇಳಿದರು. ಅದಕ್ಕಾಗಿ ಹೋಗಿದ್ದೆವು."

"ಹಾಕಿಸಿಕೊಂಡಿರೇನು ?"

"ಹೌದು."

ಮಕ್ಕಳೆಲ್ಲರೂ ಸಾಲಾಗಿ ಗಂಜಿಯೂಟಕ್ಕೆ ಕುಳಿತುಕೊಂಡಿದ್ದರು. ರಾಜಣ್ಣ ನೇರವಾಗಿ ಒಳಗಡೆ ಹೋದ. ಶಿವೆ ಬಾಗಿಲ ಮರೆಯಿಂದಲೇ ಕ್ಷೇಮ ಸಮಾಚಾರವನ್ನು ಕೇಳಿದಳು. ರಾಜಣ್ಣ ದನಿಯೇರಿಸಿ ನುಡಿದ "ಶಿವೆ, ನೀನು ಅತಿವರ್ತನೆಗಿಳಿದಂತೆ ತೋರುತ್ತೆ. ಇದು ಮಾನಿಷ್ಠರ ಮನೆ. ಹಾದಿ ತಪ್ಪಿದೆಯಾದರೆ ನಿನ್ನ ಕಾಲು ಮುರಿದು ಕೂರಿಸುತ್ತೇನೆ!"

ಶಿವೆ ಒಮ್ಮೆಲೆ ಅರಳಿಯೆಲೆಯಂತೆ ಥರಥರನೆ ನಡುಗಿದಳು. ಒಡನೆ ರವಿ ಹೇಳಿದ "ನಿಮಗೇಕಿಷ್ಟು ಕೋಪ? ಅಮ್ಮ ಸುಮ್ಮನೆ ಹೋಗಲಿಲ್ಲ. ಅವರೂ ಹತ್ತಿಪ್ಪತ್ತು ವರ್ಷಗಳಿಂದ ದೇವಿ ಹಾಕಿಸಿಕೊಂಡಿರಲಿಲ್ಲ. ಆದ್ದರಿಂದಲೇ ಕರೆದುಕೊಂಡು ಹೋದೆ. ಇನ್ನವರು ಮನೆಯಲ್ಲಿ ಕುಳಿತಿರುವುದು ಸಾಧ್ಯವಿಲ್ಲ. ಅಮ್ಮನಿಗಾಗಿ 'ನರ್ಸ್' ಕೆಲಸಕ್ಕೆ ಅರ್ಜಿ ಹಾಕಿದ್ದೆ. ಅದೀಗ ದೊರೆತಿದೆ ಮುಂದಿನ ತಿಂಗಳಿನಿಂದ ಕೆಲಸಕ್ಕೆ ಹೋಗುತ್ತಾರೆ."

ನುಡಿ ಕೇಳಿ ರಾಜಣ್ಣ ಕಣ್ಣುಗಳಲ್ಲಿ ಕಿಡಿ ಕಾರಿದ. ಊಟಕ್ಕೆ ಕುಳಿತಿದ್ದ ರವಿಯನ್ನು ದರದರನೆ ಎಳೆದು ನಿಲ್ಲಿಸಿ ರೇಜಿನಿಂದ ಹೇಳಿದ. ನಿನ್ನ ಒತ್ತಾಸೆಯಿಂದಲೇ ನಮ್ಮ ಕುಲಕ್ಕೆ ಕಳಂಕ! ಸ್ವಾಮಿಯಿಲ್ಲವಾದುದು ನಿಮಗೆ ಮೋಜೆನಿಸಿತಲ್ಲವೇ? ನಿಮ್ಮಮ್ಮ ನರ್ಸ್ ಕೆಲಸ ಮಾಡುವುದಕ್ಕೆ ಬಿ. ಎ. ಓದಿದ್ದಾಳೆಯೇ? ಈ ನೆವದಲ್ಲಿ ಬೀದಿ ನಾಯಾಗುವುದೊಂದು ಬಾಕಿ!"

ರಾಜಣ್ಣನ ಕೆಂಗಣ್ಣಿನ ಕಿಡಿ ನೋಟ ಎಲ್ಲರನ್ನೂ ನಡುಗುವಂತೆ ಮಾಡಿತು. ರವಿ ಹೆದರಿದರೂ ಸಾವರಿಸಿಕೊಳ್ಳುತ್ತಾ ಹೇಳಿದ. "ನರ್ಸ್ ಕೆಲಸಕ್ಕೆ ಬಿ. ಎ. ಓದಬೇಕಾದ ಅಗತ್ಯವಿಲ್ಲ. ಅವರಿಂದು ದುಡಿಯದಿದ್ದರೆ ಬದುಕು ಸಾಗುವ ಬಗೆ ಹೇಗೆ?"

"ಇದೊಂದು ನೆವ. ಹೊರಡಿ ಇಂದೇ ಊರಿಗೆ ಹೋಗೋಣ. ಇಲ್ಲವೇ ನಿಮ್ಮ ತಾತನ ಮನೆ ಸೇರಿಕೊಳ್ಳಿರಿ. ಇಲ್ಲಿಯ ಕಳಂಕ ಜೀವನ ಇನ್ನು ಸಾಕು."

"ನಾವು ಓದಬೇಕು" ರವಿ ತಡವರಿಸುತ್ತ ನುಡಿಯನ್ನು ಹೊರಹಾಕಿದ.

"ನೀವು ಓದಿ ಅಮಲ್ದಾರಿಕೆ ಮಾಡುವುದು ಅಷ್ಟರಲ್ಲೇ ಇದೆ."

ಛಟೀರನೆ ಏಟುಗಳು ಕೆನ್ನೆಯ ಮೇಲೆ ಬಿದ್ದುವು. ರವಿ ತತ್ತರಿಸಿ ನಿಂತು ಕೈ ಬಿಡಿಸಿಕೊಳ್ಳಲು ಪ್ರಯತ್ನಿಸಿ ವಿಫಲನಾದ. ಕಣ್ಣುಗಳಲ್ಲಿ ನೀರು ಫಳಫಳನೆ ಉದುರಿದುವು. ಶಿವೆ ಮರೆಯಲ್ಲಿ ನಿಂತು ಗಳಗಳನೆ ಅಳತೊಡಗಿದಳು. ಚಿಕ್ಕವರ ಕ್ರಂದನವು ಹೆಂಚು ಚಿಮ್ಮುವಂತೆ ಮೊಳಗಿತು. ರಾಜಣ್ಣ ರವಿಯನ್ನು ಗಟ್ಟಿಯಾಗಿ ಹಿಡಿದುಕೊಂಡು ಹೇಳಿದ "ಸ್ವಾಮಿ ಇಲ್ಲದಿದ್ದರೇನಂ? ನಾವು ಬದುಕಿಲ್ಲವೇ? ನೀನು ಮಿತಿಮೀರಿ ವರ್ತಿಸಿದರೆ ನಿನ್ನ ಗತಿಯೇನು ಎಂಬುದನ್ನು ಯೋಚಿಸಿದ್ದೀಯೇನು?" ದನಿ ಮಾಡು ಮುಟ್ಟುವಂತೆ

ವೊಳಗಿತು. ಕೋಪ-ದುಃಖಗಳಿಂದ ಅಲುಗದೆ ನಿಂತುಕೊಂಡ. ಗಳಿಗೆ ಯೊಂದು ಉರುಳಿತು. ಎದುರು ಬಾಗಿಲಿನಿಂದ ಆನಂದನೊಂದಿಗೆ ಚಂದು ಒಳಬಂದ. ಚಂದುವನ್ನು ನೋಡುತ್ತಲೂ ರವಿಯ ಕೈಬಿಟ್ಟ ರಾಜಣ್ಣ. ಹತ್ತಿರ ಬಂದು ಚಂದು ಹೇಳಿದ "ರಾಜಣ್ಣಾ, ಏಕಿಷ್ಟು ಕೋಪ? ವಿನಾ ಕಾರಣ ಮಗುವಿನ ಮೇಲೆ ರೇಗಿದ್ದೀಯೆ? ನೀನೊಬ್ಬ ಕಿರಾತ ಕಣಯ್ಯಾ!"

ಚಂದುವನ್ನು ಕಾಣುತ್ತಲೂ ಅದುಮಿ ಹಿಡಿದಿದ್ದ ರವಿಯ ದುಃಖ ಕಟ್ಟೆಯೊಡೆದಂತೆ ಉಕ್ಕಿ ಹರಿಯಿತು. ಚಂದುವನ್ನಪ್ಪಿಕೊಂಡು ಗಳಗಳನೆ ಅಳತೊಡಗಿದ. ಚಂದು ರವಿಯ ಮೈದಡವಿ ಅಪ್ಪಿಕೊಂಡು ಸಮಾಧಾನ ಗೊಳಿಸುತ್ತಿದ್ದಂತೆ ರಾಜಣ್ಣ ಏರಿದ ದನಿಯಲ್ಲಿ ಒದರಿದ "ಚಂದೂ, ಗೇಣುದ್ದ ಹುಡುಗನಿಗೆ ಮಾತೆಷ್ಟು? ಅವರಮ್ಮನಿಗೆ ನರ್ಸ್ ಕೆಲಸ ಕೊಡಿಸಿದ್ದಾನಂತೆ! ಸ್ವಾಮಿ ಇಲ್ಲವಾದುದು ಮೋಜೆನಿಸಿತಲ್ಲವೆ?" ಕಣ್ಣುಗಳು ಕಿಡಿ ಕಾರಿದುವು.

"ರಾಜಣ್ಣಾ, ನೀನು ಶುದ್ಧ ಒರಟು ಮನುಷ್ಯ. ಕೆಲಸ ಮಾಡಿದರೆ ತಪ್ಪೇನು? ಅದಕ್ಕೇಕೆ ಮಗುವಿಗೆ ದಂಡನೆ? ಸ್ವಲ್ಪ ಸಮಾಧಾನದಿಂದ ಯೋಚಿಸು." ಅವರು ತುತ್ತು ಗಳಿಸಿಕೊಂಡರ ನಿಮ್ಮ ಮೇಲೆ ಭಾರ ಬೀಳುವುದಿಲ್ಲ."

"ಸ್ವಾಮಿ ಇರುವಂದು ಶಿವೆ ಹೊಸ್ತಿಲು ದಾಟಲಿಲ್ಲ. ನಿನಗದು ತಿಳಿಯದೇ?"

"ಇರಲಿ, ಸ್ವಾಮಿಯ ಇಚ್ಛೆ ಹಾಗಿತ್ತು. ಇಂದು ಸ್ವಾಮಿಯಿಲ್ಲ. ಜೀವನಕ್ಕೆ ದಾರಿ ಮಾಡಿಕೊಳ್ಳಲೇಬೇಕು. ನೀನಿಂದು ಕೆಲಸ ಮಾಡಬಾರ ದೆಂದು ಅಡ್ಡಿಪಡಿಸಿ ಮುಂದೆ ಅವರ ಭಾರ ಹೊರುತ್ತೀಯೇನು?"

"ಚಂದೂ, ಹೊಲದಲ್ಲಿ ದುಡಿದರೆ ಅನ್ನಕ್ಕೆ ಕೊರತೆಯೇನು? ಇಲ್ಲಿಯ ಹೊಲಸು ಜೀವನ ಇನ್ನು ಸಾಕು. ಸ್ವಾಮಿ ಬಿಟ್ಟುಹೋದ ಹೆಣ್ಣು ಹಾದಿ ಗೆಡುವುದನ್ನು ಸಹಿಸಲು ಸಾಧ್ಯವಿಲ್ಲ."

"ಇದು ಅತಿವರ್ತನೆ! ಈಗ ನೀನು ನಿನ್ನನ್ನೇ ತಿದ್ದಿಕೊಳ್ಳಬೇಕು. ಕಾಲಚಕ್ರವು ಇಂದು ನಾಗಾಲೋಟದಿಂದ ಓಡುತ್ತಿದೆ. ಅದರೊಂದಿಗೆ ನೀನೂ ತ್ವರಿತಗತಿಯಿದ ಮುಂದುವರಿಯಬೇಕು....

"ಚಂದೂ, ಈ ಪಟ್ಟಣವಾಸ, ಈ ಷೋಕಿ, ಜೋಕು ನಮಗಿನಿತೂ ಬೇಕಾಗಿಲ್ಲ; ಇವರನ್ನೊಮ್ಮೆ ಹಳ್ಳಿ ಸೇರಿಸಿದರೆ ಸಾಕು."

"ನೀನು ಎಂದೆಂದೂ ಬಲು ದುಡುಕು. ಅನ್ಯಥಾ ರವಿಯನ್ನು ದಂಡಿಸಿದ್ದೀಯೇ? ಕೋಪದಲ್ಲಿ ಕೊಯ್ದುಕೊಂಡ ಮೂಗು ಅನಂತರ ಹಚ್ಚಲು ಬರುವುದಿಲ್ಲ." ಎಂದೆನ್ನುತ್ತಾ ರಾಜಣ್ಣನನ್ನು ಅಲ್ಲಿಂದ ಎಳೆದೊಯ್ದ. ಶಿವೆ ರವಿಯನ್ನು ಅಪ್ಪಿಕೊಂಡು ಬಹಳವಾಗಿ ಅತ್ತಳು. ರವಿ ಸಾವರಿಸಿಕೊಂಡು ತಾಯಿಗೆ ಸಮಾಧಾನ ಹೇಳಿ ಸರಸುವನ್ನು ಅಂದು ಮನೆಯಲ್ಲಿಯೇ ಬಿಟ್ಟು ಶ್ಯಾಮು, ಗೋಪಿ ವಿಮಲೆಯರನ್ನು ಕರೆದುಕೊಂಡು ಶಾಲೆಗೆ ಹೊರಡುತ್ತ ಅಂದ "ಅಮ್ಮ ತುಂಬ ನೊಂದಿದ್ದಾರೆ ಸರಸೂ, ಅವರಿಗೆ ಸಮಾಧಾನ ಹೇಳು. ಅವರನ್ನು ಬಿಟ್ಟು ಎಲ್ಲೂ ಹೋಗಬೇಡ." 'ಹ್ಞೂ' ಎಂದ ಸರಸು ಎಲ್ಲರನ್ನೂ ಹನಿತುಂಬಿದ ಕಣ್ಣುಗಳಿಂದ ಬೀಳ್ಕೊಟ್ಟಳು. ರವಿ ಚಿಕ್ಕಪ್ಪರೊಡನೆ ಕಣ್ಮರೆಯಾಗುವವರೆಗೂ ನೋಡುತ್ತಿದ್ದು ಕದವನ್ನಿಕ್ಕಿಕೊಂಡು ಒಳ ಬಂದವಳೇ ತಾಯಿಯನ್ನು ಅಪ್ಪಿಕೊಂಡು ನುಡಿದಳು. "ನಾನು ಆಗಿನಿಂದಲೂ ಒಂದು ವಿಷಯ ಯೋಚಿಸುತ್ತಿದ್ದೇನೆ. ಅದೇನೆಂದು ಹೇಳಲೇ?"

"ಏನು ಮಗೂ?" ದನಿ ದುಃಖದಿಂದ ಭಾರವಾಗಿತ್ತು.

"ನಾವು ಈ ಜಂಜಾಟದಲ್ಲಿ ಬದುಕುವುದಕ್ಕಿಂತ ಸಾಯುವುದು ಲೇಸಲ್ಲವೇ?" ನುಡಿ ಎದೆಯಾಳದಿಂದ ಹರಿದು ಬಂತು.

ಹಾ ...!

ಥಟ್ಟನೆ ಸಿಡಿಲು ಬಡಿದಂತೆ ಶಿವೆ ಮಾತಾಡದೆ ನಿಂತಳು. ಮನಸ್ಸು ಯೋಚನೆಯಲೆಯಲ್ಲಿ ಸಿಕ್ಕಿಕೊಂಡಿತು. ಹೃದಯ ಒಡೆದು ನುಚ್ಚುನೂರಾದಂತೆ ಭಾಸವಾಯಿತು.

"ಒಬ್ಬರು ಹೋಗಿ ಒಬ್ಬರುಳಿದರೆ ದುಃಖವಾದೀತು. ಅದಕ್ಕಿಂತ ಎಲ್ಲರೂ ವಿಷಪಾನ ಮಾಡಿ ಮಲಗಿದರೆ ಮುಗಿಯಿತು. ಬೆಳಿಗ್ಗೆ ಈ ಪಾಪಪೂರಿತ ಜಗತ್ತಿನಿಂದ ದೂರ ಹೋಗಿರುತ್ತೇವೆ. ಆಗ ಯಾರಿಗೂ ದುಃಖವಾಗುವುದಿಲ್ಲ ಅಮ್ಮಾ!" ದುಃಖಪೂರ್ಣ ಧ್ವನಿ ಮತ್ತೆ ಹೊಮ್ಮಿತು. ಸರಸು ತಾಯಿಯ ಅಭಿಪ್ರಾಯಕ್ಕಾಗಿ ಕಾದು ನಿಂತಳು.

"ಅದು ನಿಜವಾದರೂ ಈ ಕ್ರಮ ಸರಿಯಲ್ಲ ಮಗೂ. ಒಂದೊಂದು ವೇಳೆ ಕೆಲವರು ಸತ್ತು ಕೆಲವರು ಉಳಿಯುವ ಸಂಭವವೂ ಉಂಟು. ವಿಧಿಲೀಲೆಯಿಂದ ಅಂತಹ ಪ್ರಸಂಗಗಳೆಷ್ಟೋ ನಡೆದಿವೆ. ಒಂದು ವೇಳೆ ಹಾಗಾ

ದರೆ ಎಂತಹ ಪ್ರಮಾದ? ನಮಗಾಗಿರುವ ಕಷ್ಟನಷ್ಟಗಳೇ ಸಾಕಾಗಿವೆ." ಮಾತೃಹೃದಯ ಜರ್ಜರಿತವಾಯಿತು. ಬಾಹುಗಳು ಮಗಳನ್ನು ಬಳಸಿದುವು. ಕಣ್ಣುಗಳಲ್ಲಿ ಕಂಬನಿಗಳು ಧಾರೆಧಾರೆಯಾಗಿಳಿದುವು.

ಸರಸು ಹಾಗೇ ಯೋಚಿಸಿದಳು. ರವಿ ಹೊರಡುವಾಗ ಹೇಳಿದ ಮಾತನ್ನು ನೆನಪಿಗೆ ತಂದುಕೊಂಡು ಅದಕ್ಕೆ ವ್ಯತಿರಿಕ್ತವಾಗಿ ವರ್ತಿಸುತ್ತಿದ್ದೇನಲ್ಲಾ ಎಂಬ ಯೋಚನೆಗೊಳಗಾದರೂ ಇದರ ಪರಿಹಾರ ಹೇಗೆ ಎಂದೇ ಚಿಂತಿಸಿತು ಮನಸ್ಸು. ಹಿಂದಿನ ದಿನ ಶಾಲೆಯಲ್ಲಿ ಉಪಾಧ್ಯಾಯಿನಿಯು ಪಾಠ ಹೇಳುವಾಗ ಮಾನವ ಜನ್ಮವೇ ಶ್ರೇಷ್ಠವಾದುದೆಂದು ವಿವರವಾಗಿ ವಿವರಿಸಿದ ಬಗೆ ಮನದಲೆಯಲ್ಲಿ ಮೂಡಿಬಂತು. "ಮಾನವತೆಯ ಸಾಫಲ್ಯಕ್ಕಾಗಿ ಬದುಕಿರಿ, ಹೆಜ್ಜೆ ಹೆಜ್ಜೆಯಲ್ಲಿಯೂ ನೈರ್ಮಲ್ಯವನ್ನು ಕಾಪಾಡಿಕೊಳ್ಳಿರಿ" ಎಂದ ಅವರ ಕೊನೆಯ ಮಾತು ಕಿವಿಯಲ್ಲಿ ಪುನಃಪುನಃ ಮಾರ್ನುಡಿಯಿತು. ಆದರೂ ಸಾವರಿಸಿಕೊಂಡು ಹೇಳಿದಳು ಸರಸು "ನಿಜ; ನಾವು ಸತ್ತುಹೋದರೆ ಏನು ಸಾಧಿಸಿದ ಹಾಗಾಯಿತು? ಮನುಷ್ಯರಾಗಿ ಹುಟ್ಟಿದುದಕ್ಕಾದರೂ ಬದುಕಬೇಕಲ್ಲವೇ? ಏನೋ ಮನಸ್ಸಿಗೆ ತುಂಬ ದುಃಖವಾಯಿತು ಹಾಗೆಂದೆ. ಹೋಗಲಿ ಬಿಡಿ, ಕಳೆದು ಹೋದುದನ್ನು ಕುರಿತು ಚಿಂತಿಸಬಾರದು." ದನಿ ವಿಜಾತೀಯವಾಗಿತ್ತು.

"ಹೌದು ಸರಸೂ," ಎಂದ ಶಿವೆ ಕಂಬನಿಯನ್ನು ತೀಡಿಕೊಂಡು "ಮಕ್ಕಳಿಗಾಗಿ ಈ ಬದುಕು" ಎಂದಳು. ನಾನಾ ಯೋಚನೆಗಳ ಭರದಿಂದ ಹೃದಯ ಭಾರವಾಗಿತ್ತು.

"ಇಂದು ಶ್ಯಾಮು ಬಹಳ ಅತ್ತುಬಿಟ್ಟ. ಎಷ್ಟು ಹೇಳಿದರೂ ಅವನಿಗೆ ಸಮಾಧಾನವಿಲ್ಲ. ಬಹುಶಃ ಅವನು ಶಾಲೆಯಲ್ಲಿಯೂ ಕಣ್ಣೀರು ಹಾಕುತ್ತಾನೆಂದು ತೋರುತ್ತೆ." ಸರಸು ಖಿನ್ನವದನಳಾಗಿ ನುಡಿದಳು.

"ಅವನು ಬಹಳ ಮೆದು."

ಹಿಂದಿನ ದಿನ ಅರ್ಧ ಹೊಲಿದು ಉಳಿದಿದ್ದ ಅಂಗಿಯೊಂದನ್ನು ಹೊಲಿಯಲು ಕುಳಿತಳು. ಯಂತ್ರದೊಡನೆ ಕೈಕೆಲಸ ಮಾಡಿದರೂ ಅಂದಿನ ಘಟನೆ ಮನದಲ್ಲಿ ಅಚ್ಚಳಿಯದೆ ಉಳಿದಿತ್ತು.

ಅಂದು ರವಿ ಶಾಲೆಯಿಂದ ಹಿಂದಿರುದಮೇಲೆ ಚಂದು ಒಳಗಡೆ

ಬಂದು ಹೇಳಿದ "ರಾಜಣ್ಣನಿಗೆ ನಾನೆಲ್ಲಾ ಹೇಳಿದ್ದೇನೆ. ಇಂದು ಇದಿಷ್ಟು ಹೊತ್ತು ನಿಮ್ಮ ಬಗ್ಗೆ ಮಾತಾಡಿದ್ದೇವೆ. ಅವನಿಗೆ ಮನೆ ಮಾರಿ ಜಮೀನು ಕೊಳ್ಳಬೇಕೆಂಬ ಇಚ್ಛೆಇತ್ತು. ಬಾಬೂಜಿ ಹಣಕ್ಕಂಟಿಕೊಳ್ಳುತ್ತಾ ನೆಂಬ ಅಡಚಣೆಯಿಂದಾಗಿ ರಾಜಣ್ಣ ಸುಮ್ಮನಾದ. ಇಲ್ಲದಿದ್ದರೆ ಅವನನ್ನು ಒಪ್ಪಿಸುವುದು ಬ್ರಹ್ಮದೇವನಿಗೂ ಅಸದಳ!" ಸ್ವಲ್ಪ ತಡೆದು ಶಿವೆಯತ್ತ ತಿರುಗಿ- "ಶಿವಮ್ಮಾ, ನೀವು ಕೆಲಸಕ್ಕೆ ಹೋಗಿರಿ; ಈ ಕಾಲದಲ್ಲಿ ಕೆಲಸ ಸಿಕ್ಕುವುದೇ ಕಷ್ಟ. ಅಂಥಾದ್ದರಲ್ಲಿ ಸಿಕ್ಕಿರುವುದು ನಿಮ್ಮ ಅದೃಷ್ಟ. ಏನೇ ಬರಲಿ, ಬಿಡಬೇಡಿ; ಜೊತೆಗೆ ಓದನ್ನೂ ಕಲಿತುಕೊಳ್ಳಿರಿ."

ಶಿವೆಯ ಕಂಬನಿಯೇ ಉತ್ತರವಾಯಿತು.

"ಚಂದಣ್ಣಾ ! ನೀವು ಸಮಯಕ್ಕೆ ಸರಿಯಾಗಿ ಬಂದಿರಿ, ಇಲ್ಲದಿದ್ದರೆ ರವಿಯನ್ನು ಹಣ್ಣು ಮಾಡುತ್ತಿದ್ದರು." ಶ್ಯಾಮು ಕಂಬನಿ ಸೂಸಿ ನುಡಿದ.

"ದೇವರು ಒಂದಲ್ಲ ಒಂದು ರೀತಿಯಲ್ಲಿ ಸಹಾಯ ಮಾಡುತ್ತಾನೆನ್ನು ವುದು ಹೀಗೆಯೆ. ಆದ್ದರಿಂದ ಬಂದದ್ದನ್ನು ಧೈರ್ಯದಿಂದ ಎದುರಿಸಬೇಕು. ಶ್ಯಾಮೂ, ಕಂಬನಿ ಸುರಿಸಿದರಾದೀತೆ ? ನೀವೆಲ್ಲಾ ಎಚ್ಚತ್ತುಕೊಂಡರೆ ಜೀವನ ಕಷ್ಟವಲ್ಲ." ಸ್ನೇಹ ಪ್ರೇಮಗಳ ಸಂಜೀವಿನಿಯಾದ ಚಂದು ಶ್ಯಾಮು ವನ್ನು ಅಪ್ಪಿಕೊಂಡು ಮೈದಡವಿ ಸಮಾಧಾನ ಹೇಳಿದ.

ಅನಂತರ,

"ರವಿ, ಅನಾಥರಿಗೆ ಆತನೇ ನಾಥನು. ಯಾರೇ ಕೈಬಿಟ್ಟರೂ ನಮ್ಮನ್ನು ಸಲಹುವ ತಂದೆಯೊಬ್ಬನಿದ್ದೇ ಇದ್ದಾನೆಂಬುದನ್ನು ಎಂದೆಂದೂ ಮರೆಯಬಾರದು ಅಂದರೆ ನಿನಗೆ ಎಲ್ಲಿಲ್ಲದ ಧೈರ್ಯ ಬರುತ್ತದೆ. ದಾರಿ ಸುಗಮವಾಗಿ ನೀನು ಸುಲಭದಿಂದ ಗುರಿಯನ್ನು ಮುಟ್ಟುತ್ತಿ ಎಂಬುದರಲ್ಲಿ ಸಂದೇಹವಿಲ್ಲ."

ಚಂದುವಿನ ಒಲುವಿನ ನುಡಿಗಳು ಅಮೃತೋಪಮವಾಗಿ ಕಿವಿಗೆ ಬಿದ್ದುವು. ರವಿ ಪುಳಕಿತನಾದ. ಆ ಕಾಣದ ಕೇಳದ ಗುರಿಗಾಗಿ ಮನಸ್ಸು ಹಾತೊರೆಯಿತು. ಚಂದುವನ್ನು ಅಪ್ಪಿಕೊಂಡು ಹೇಳಿದ 'ಚಂದಣ್ಣಾ, ನಾವಿನ್ನೂ ಚಿಕ್ಕವರು. ನಮಗೆ ವ್ಯವಹಾರ ಜ್ಞಾನವಿಲ್ಲ. ನೀವಿತ್ತ ಬಂದಾಗಲೆಲ್ಲಾ ಮನೆಗೆ ಬಂದು ತಿಳಿವಳಿಕೆ ನೀಡಿರಿ." ಕಣ್ಣಿನಲ್ಲಿ ಫಳಕ್ಕನೆ ಹನಿ ಮೂಡಿತು.

"ರವೀ, ನನ್ನನ್ನು ನಿನ್ನ ದೊಡ್ಡಪ್ಪನೆಂದೇ ತಿಳಿ. ಚಿಕ್ಕಂದಿನಿಂದ ರಾಮಣ್ಣನೂ ನಾನೂ ಅಣ್ಣತಮ್ಮಂದಿರಂತೆಯೇ ಬಾಳಿದ್ದೇವೆ. ಅಂದಮೇಲೆ ಸ್ವಾಮಿ ಬೇರೆಯಲ್ಲ; ನಿನಗೆ ಅಗತ್ಯ ಬಿದ್ದರೆ ಕಾಗದ ಬರೆ ಬರುತ್ತೇನೆ. "ತಾಯಿಗಿಂತ ಬಂಧುವಿಲ್ಲ; ಉಪ್ಪಿಗಿಂತ ರುಚಿಯಿಲ್ಲ." ಎಂಬ ನಾಣ್ಣುಡಿ ಅಕ್ಷರಶಃ ಸತ್ಯ. ಮುಖ್ಯವಾಗಿ ನಿನಗೆ ತಾಯಿ ಇದ್ದಾರೆ. ಅದಕ್ಕಿಂತ ಇನ್ನೇನು ಬೇಕು ? ಅವರೇ ನಿನಗೆ ಸರ್ವಸ್ವ. ನೀನೇ ಅವರಿಗೆ ಸರ್ವಸ್ವ. ಅವರನ್ನು ಚೆನ್ನಾಗಿ ನೋಡಿಕೊಂಡು ಚಿಕ್ಕವರಿಗೆ ಮಾರ್ಗದರ್ಶಿಯಾಗುವಂತೆ ಬಾಳು. ಅಷ್ಟಾದರೆ ನೀನು ಕೃತಕೃತ್ಯನಾದಂತೆ." ಚಂದು ರವಿಯ ಗಲ್ಲವನ್ನು ಮುದ್ದಿಸಿ ಪುನಃ-"ರವೀ, ಎಂದಾದರೊಮ್ಮೆ ನಿನಗೆ ಬಿಡುವು ಸಿಕ್ಕಿದಾಗ ನಮ್ಮೂರಿಗೆ ಬಾ. ನಾಲ್ಕು ದಿನ ನಮ್ಮೊಡನೆ ಇದ್ದು ಹೋಗು. ನನಗೇನೋ ನಮ್ಮ ಸಮಾಜ ಸುಧಾರಣೆ ಮಾಡಬೇಕೆಂದು ಬಹಳ ಇಚ್ಛೆ. ಈ ಸಾಲಿನಲ್ಲಿ ನಮ್ಮದೇ ಆದ ಒಂದು ಶಾಲೆಯನ್ನು ತೆರೆಯಬೇಕೆಂದಿದ್ದೇನೆ. ನಿನ್ನಂಥ ಉತ್ಸಾಹೀ ಮಕ್ಕಳು ಅದನ್ನೆಲ್ಲಾ ನೋಡಬೇಕು." ಚಂದು ಸವಿನಯ ಆಮಂತ್ರಣ ನೀಡಿ ಹೊರಬಿದ್ದ. ಚಂದುವಿನ ಮಾತುಗಳನ್ನಾಲಿಸುತ್ತಿದ್ದ ವಿಮಲೆ "ಚಂದಣ್ಣ ಎಷ್ಟು ಒಳ್ಳೆಯವರು !" ಎಂದಳು. ಭಾವಪೂರ್ಣ ಲೋಚನಗಳು ಅರಳಿದ್ದುವು. ರವಿ ಉತ್ತರಿಸಲಿಲ್ಲ. ಮನಸ್ಸು ವಿಚಾರಗತ್ತರಿಯಲ್ಲಿ ಸಿಲುಕಿತ್ತು.

"ಶ್ಯಾಮು ಖಿನ್ನನಾಗಿದುದನ್ನು ಕಂಡು ಶಿವೆ ಮೈದಡವಿ ಕೇಳಿದಳು "ಶ್ಯಾಮು ಏಕೆ ಹೀಗಿದ್ದಿ ? ಮೈ ಚೆನ್ನಾಗಿಲ್ಲವೇ ?"

"ಏನೂ ಇಲ್ಲವಲ್ಲಾ." ಎನ್ನುವುದರೊಳಗಾಗಿ ಎರಡು ಹನಿಗಳು ಕೆನ್ನೆಯ ಮೇಲುರುಳಿದುವು ಶಿವೆ ಉಟ್ಟ ಬಟ್ಟೆಯಿಂದ ಕಂಬನಿಯನ್ನು ತೀಡಿ

"ಛಿ ! ನಿನಗೇತರ ಚಿಂತೆ ?" ಎಂದಳು. ಶ್ಯಾಮು ಮಾತಾಡಲಿಲ್ಲ. ಮುಸು ಮುಸು ಅಳುವೇ ಉತ್ತರವಾಯ್ತು.

ಸರಸು ಓಡಿ ಬಂದು ಹೇಳಿದಳು "ಅವನಿಗೆ ತಂದೆಯೂ ಮಾವಂದಿರೂ ತಮ್ಮನ್ನು ವಿಚಾರಿಸಿಕೊಳ್ಳದೆ ನಮಗೆ ಕಷ್ಟಕ್ಕೆ ತಂದಿಟ್ಟಿದ್ದಾರೆಂದು ವ್ಯಥೆ !"

"ಶ್ಯಾಮು, ಅದೇಕೆ ನಿನಗಷ್ಟು ಯೋಚನೆ ? ಒಂದು ವೇಳೆ ನಿಮ್ಮ ಅಪ್ಪ ಬಂದರೂ ನಾನು ನಿಮ್ಮನ್ನು ಕಳುಹಿಸುವುದಿಲ್ಲ. ಗೌರಿಗೆ ಮರಣ ಶಯ್ಯೆಯಲ್ಲಿ ಕೊಟ್ಟ ಮಾತನ್ನು ನಾನೆಂದೂ ಮರೆಯಲಾರೆ. ನಾನೇ ನಿಮಗೆ

ತಾಯಿ." ಎಂದ ಶಿವೆ ಶ್ಯಾಮುವನ್ನಪ್ಪಿ ಮುದ್ದಿಟ್ಟುಕೊಂಡಳು. ಗೋಪಿ ಮಾತಿಲ್ಲದೆ ಶ್ಯಾಮುವನ್ನು ಎವೆಯಿಕ್ಕದೆ ನೋಡುತಿದ್ದ.

ರವಿ ಶ್ಯಾಮುವನ್ನು ಹೊರಗೆಳೆದೊಯ್ಯುತ್ತ "ನಿನಗೇತರ ಕೊರತೆ ? ಸುಕಷ್ಟು ಸಂಪಾದಿಸುತ್ತಿದ್ದೀಯೆ. ನಿನ್ನಿಂದ ಅನುಕೂಲವೇ ಹೊರತು ಯಾರಿಗೂ ತೊಂದರೆಯಾಗಿಲ್ಲ. ಬಾ ಪಾತಿ ಅಗೆಯೋಣ."

ಹಿಂದಣ ಅಂಗಳದಲ್ಲಿ ವಿಮಲೆಯು ಅತ್ತ ದನಿಯನ್ನು ಕೇಳಿ ಎಲ್ಲರೂ ಅತ್ತ ಓಡಿದರು. ಅವಳು ಕಲ್ಲನ್ನೆಡವಿ ಬಿದ್ದು ತುಟಿಯೊಡೆದು ನೆತ್ತರು ಬಸಿಯುತಿತ್ತು. ಕಾಲ್ಬೆರಳು ಮತ್ತು ಮೊಣಕಾಲಿಗೂ ಪೆಟ್ಟುತಾಗಿತ್ತು. ಅವಳ ಸ್ಥಿತಿಯನ್ನು ಕಂಡು ಕರುಣೆಯಿಂದ ಮೈಕೈಗಳ ಧೂಳನ್ನು ಝಾಡಿಸಿ ಕಂಬನಿಯನ್ನು ತೀಡಿ ನುಡಿದ ರವಿ,

"ಅಷ್ಟಕ್ಕೇಕೆ ಅಳು ? ...ಅಳುವುದು ಅಪಹಾಸ್ಯ. ಬದುಕು ಎಂದೂ ಸುಖದೇಣಿಯಲ್ಲ ವಿಮಲೂ !"

ವಿಮಲ ಮಾತಾಡಲಿಲ್ಲ. ಕಂಬನಿಯಿಂದ ತೊಯ್ದ ಮುಖದಲ್ಲಿ ಅಸ್ತಮಾನ ರವಿಯ ಅರುಣ ಕಿರಣಗಳು ಪ್ರತಿಫಲಿಸುತಿದ್ದುವು.

ಶಿವೆ ಮಗಳನ್ನು ಮುದ್ದುಗೈದು ಹೇಳಿದಳು,

"ನಮಗೆ ಸುಖವೆಂಬುದು ಇದ್ದರಲ್ಲವೇ ಕಷ್ಟಕ್ಕೆ ದುಃಖಿಸುವುದು ? ಬೆಂಕಿಯಲ್ಲಿ ಧುಮುಕಿದರೂ ಈ ಪ್ರಾಣ ಹೋಗುವುದಿಲ್ಲ ಬಿಡು..."

"ಅದೇನೋ ನಿಶ್ಚಯ." ಮುಗುಳು ನಗುತ್ತ ಸರಸು ಮುಂದುವರಿದಳು "ಭಗವಂತ ನಮಗೆ ಪ್ರಾಣ ಕೊಟ್ಟೇ ಇಲ್ಲ. ಅದು ಇದ್ದರೆ ತಾನೆ ಹೋಗುವುದು ?"

ಎಲ್ಲರ ಮುಖದಲ್ಲೂ ಊಹಿಸಲೂ ಆಗದಂತಹ ನೀರಸ ನಗು ಮೂಡಿ ಮಾಯವಾಯಿತು.

೧೮

ಹೊತ್ತು ನೆತ್ತಿಯ ಮೇಲೆ ಉರಿಯುತ್ತಿತ್ತು.

ನಳನಳಿಸುವ ಗದ್ದೆಯಂಚಿನ ಮೇಲೆ ಬಿರುಬಿರನೆ ಹೆಜ್ಜೆಯಿಟ್ಟು ನಡೆಯುತ್ತಿದ್ದ ಲಕ್ಕಮ್ಮ ಎಲೆಯಡಿಕೆಯ ಎಂಜಲನ್ನು ಅತ್ತ ಉಗಿದು ತಲೆಯ ಮೇಲಿನ ಬುಟ್ಟಿಯನ್ನು ಸರಿಪಡಿಸಿಕೊಂಡಳು. ದೂರದ ತೋಟ ದಂಚನ್ನು ಸರಿಪಡಿಸುತ್ತಿದ್ದ ವೆಂಕಪ್ಪನಿಗೆ ಊಟವನ್ನು ಕೊಟ್ಟು ಹಿಂದಿರುಗು ತ್ತಿದ್ದಳಾಮಡದಿ. ವೆಂಕಪ್ಪ ದಿನವೂ ಉಂಡು ಹೋಗುತ್ತಿದ್ದ; ಇಂದು ಹೊತ್ತಿಗೆ ಮುಚೆ ಹೊರಟಿದ್ದುದರಿಂದ ಹೆಂಡತಿಗೆ ಬುತ್ತಿಯನ್ನು ಅಲ್ಲಿಗೆ ತರಲು ಹೇಳಿ ಹೋಗಿದ್ದ.

ಲಕ್ಕಮ್ಮ ಸುಡು ಬಿಸಿಲಿನಲ್ಲಿ ನಡೆದು ದಣಿದಿದ್ದು ಮುಖದ ಮೇಲೆ ಬೆವರಹನಿ ತೊಟ್ಟಿಕ್ಕುತ್ತಿತ್ತು. ಅದನ್ನು ಲೆಕ್ಕಿಸದೆ ತ್ವರಿತಗತಿಯಿಂದ ಮನೆಯ ಕಡೆ ಹೆಜ್ಜೆ ಹಾಕಿದಳು. ಅಂದೇ ಶಾಲೆಯ ಮಾಸ್ತರು ಮುದ್ದ ಈ ಬಾರಿಗೆ ಉತ್ತೀರ್ಣನಾಗುತ್ತಾನೆಂದು ಹೇಳಿದ್ದರೂ ಕಳೆದ ಬಾರಿ ಅನುತ್ತೀರ್ಣನಾದ ಮಗನ ಬಗ್ಗೆ ಮನದಲ್ಲಿ ಇನ್ನೂ ಸಂಶಯ ಉಳಿದಿತ್ತು. ಚಂದಣ್ಣನ ಮಾತು ಕೇಳಿ ಮಗನನ್ನು ಶಾಲೆಗೆ ಸೇರಿಸಿದುದರಿಂದ ಕಷ್ಟವನ್ನೆದುರಿಸಬೇಕಾಯಿತು. ದನಕರುಗಳ ಪಾಲನೆಯು ತಪ್ಪಿದುದರಿಂದ ಮುದ್ದನ ಸಂಪಾದನೆಗೆ ಕಲ್ಲು ಬಿದ್ದಿತಲ್ಲದೆ ಊರ ಗೌಡರಿಗೂ ಕೋಪವನ್ನುಂಟುಮಾಡಿತು. ವೆಂಕಪ್ಪ ಮಗ ನನ್ನು ಶಾಲೆಗೆ ಸೇರಿಸುತ್ತೇನೆಂದಾಗ ಗೌಡರು "ಅವನು ವಿದ್ಯೆ ಕಲಿಯುವುದು ಅಷ್ಟರಲ್ಲೇ ಇದೆ. ಅವನನ್ನು ಕೆಲಸ ಬಿಡಿಸಿ ಶುದ್ಧ ಸೋಮಾರಿಯನ್ನಾಗಿ ಮಾಡುತ್ತೀಯಲ್ಲದೆ ಸಂಪಾದನೆಗೂ ಕಲ್ಲು ಹಾಕಿಕೊಳ್ಳುತ್ತಿ." ಎಂದು ಗದರಿ ಕೊಂಡಿದ್ದರು. ಆದರೆ ಚಂದು ಕೇಳುವಂತಿರಲಿಲ್ಲ. ವೆಂಕಪ್ಪನಿಗೂ ಸಮಾಧಾನ ವಿಲ್ಲದೆ ಗೊಣಗಿಕೊಳ್ಳುತ್ತಲೇ ಮಗನನ್ನು ಕಳುಹಿಸಿದುದು ಸ್ಮೃತಿಪಟಲದಲ್ಲಿ ಮೂಡಿ ಬಂದಿತು. "ಕಳೆದ ಬಾರಿ ಉತ್ತೀರ್ಣನಾಗಲಿಲ್ಲ. ಈ ಬಾರಿ ಇನ್ನೇನೋ ಎಂದುಕೊಳ್ಳುತ್ತ ಹೆಜ್ಜೆ ಹಾಕಿದಳು ಲಕ್ಕಮ್ಮ. "ಮುದ್ದ

ಮನೆಯಕಡೆ ಇದ್ದಿದ್ದರೆ ಕೆಲಸ ಕಾರ್ಯಗಳಾದರೂ ನಡೆಯುತಿತ್ತು. ಅತ್ತ ವಿದ್ಯೆಯೂ ಹತ್ತಲಿಲ್ಲ. ಇತ್ತ ಕೆಲಸವೂ ಹಾಳು. ಈ ಚಂದಣ್ಣ ಮಾಡುವು ದೆಲ್ಲಾ ಮನೆಮುರುಕ ಬುದ್ಧಿ!" ಎಂದು ಮನದಲ್ಲೆ ಸಿಡುಕಿದಳು. ಬಿಸಿಲ ಝಳದಿಂದ ನೆತ್ತಿಯುರಿಯತೊಡಗಿದ್ದುದರಿಂದ ಕೊಂಚ ಹೊತ್ತು ನೆರಳಿನಲ್ಲಿ ಕುಳಿತುಕೊಳ್ಳೋಣವೆನಿಸಿದರೂ ಮನೆಯಲ್ಲಿ ಯಾರೂ ಇಲ್ಲದುದರಿಂದ ಹಾಗೇ ಹೆಜ್ಜೆ ಹಾಕತೊಡಗಿದಳು. ಹತ್ತು ಹೆಜ್ಜೆ ಹೋಗುವುದರೊಳಗಾಗಿ ಎದುರಾದ ಕೆಂಪಿಯು ನಗು ಮುಖದಿಂದ ಕೇಳಿದಳು "ಲಕ್ಕಮ್ಮಾ, ಯಾವ ಕಡೆ ಹೋಗಿದ್ದೆ?"

"ಅವರ ಕಡೆ ಬುತ್ತಿಕೊಂಡು ಹೋಗಿದ್ದೆ ಕಣವ್ವಾ"

"ವೆಂಕಣ್ಣ ತೋಟಕ್ಕೆ ಹೋಗಿದ್ದಾನೇನಂ?"

'ಹೂ' ಎಂದುತ್ತರಿಸಿದ ಲಕ್ಕಮ್ಮ ನಗುಮುಖದಿಂದ ನುಡಿದಳು. "ಈಚೀಚೆಗೆ ನೀನು ಬಹಳ ಅಪರೂಪ. ಮಳೆ ಹೊಯ್ದು ಬೆಳೆ ಚೆನ್ನಾಗಿ ಬಂದಿದೆ. ಇನ್ನು ನಮ್ಮನ್ನು ಮರೆಯುವುದು ಸಹಜವೇ ಕಣವ್ವಾ."

"ಹಾಗಲ್ಲವೇ, ಮಕ್ಕಳು ಶಾಲೆಗೆ ಹೋಗುವುದರಿಂದ ನನಗೆ ಒಂದು ಗಳಿಗೆಯೂ ಬಿಡುವು ಸಿಕ್ಕುವುದಿಲ್ಲ. ಈಗ ನಾನಾಯ್ತು ಮನೆಯಾಯ್ತು. ಮಕ್ಕಳು ಮನೆಯಲ್ಲಿದ್ದಾಗ ಏನಾದರೂ ಸಣ್ಣ ಪುಟ್ಟ ಕೆಲಸ ಮಾಡುತ್ತಿದ್ದರು. ಈಗ ಪ್ರತಿಯೊಂದಕ್ಕೂ ನಾನೇ ನಿಂತುಕೊಳ್ಳಬೇಕು. ಬಿಡುವು ದೊರೆಯು ವುದೇ ಕಷ್ಟ."

"ಸರಿ ನನ್ನ ಗತಿ ನಿನಗೂ ಬಂತು. ಈ ಮಕ್ಕಳು ಕಲಿಯುವುದು ಅಷ್ಟರಲ್ಲೇ ಇದೆ. ಜೊತೆಗೆ ಕೆಲಸಕಾರ್ಯ ಹಾಳು." ಎಂದ ಲಕ್ಕಮ್ಮ ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಅಡಿಕೆಯೆಲೆಯ ಚೀಲವನ್ನು ತೆಗೆದು ಕೆಂಪಿಗೆ ವೀಳೆಯದೆಲೆಯನ್ನು ನೀಡಿ ಹೇಳಿದಳು "ಇಷ್ಟಲ್ಲದೆ ಚಂದಣ್ಣ ಮುದ್ದನಿಗೆ ಮಾಸ್ತರ ಮನೆಗೆ ದಿನವೂ ಹೋಗು ಎಂದಿದ್ದಾನೆ. ಹಗಲೆಲ್ಲಾ ಶಾಲೆ ಯಾಯ್ತು. ಸಂಜೆಯಲ್ಲಿ ಮಾಸ್ತರ ಮನೆಯಾಯ್ತು. ಇನ್ನು ಮನೆ ಕಡೆಯ ತಾಪತ್ರಯವೆಲ್ಲಾ ನಮ್ಮ ತಲೆಯ ಮೇಲೆ. ಮುದ್ದ ಮನೆಯ ಕಡೆ ಇದ್ದಾಗ ಕೆಲಸಕಾರ್ಯ ಚಟಪಟನೆ ನಡೆಯುತಿತ್ತು. ಅವನು ಮನೆಯಲ್ಲಿಲ್ಲಾಂದ್ರೆ ಇನ್ನೇನು ಜೀವಾಳವೇ ಇಲ್ಲದಂತಾಗಿ ಬಿಡುತ್ತೆ. ತೋಟದಿಂದ ಅವರು ಬಂದರೆ ಉರಿದುರಿದು ಬೀಳುವುದೇ ಸೈ. ನನಗಂತೂ ಜೀವನ ಸಾಕಾಗಿಬಿಟ್ಟಿದೆ.

ಒಮ್ಮೊಮ್ಮೆ ತೌರಿಗಾದ್ರೂ ಹೋಗೋಣವೆನ್ನಿಸುತ್ತೆ. ಹೋದರೆ ಇಲ್ಲಿ ಗಂಜಿ ಕಾಯಿಸುವವರಿಲ್ಲ. ಮೊನ್ನೆ ಚಂದಣ್ಣ ಸಿಕ್ಕಿದಾಗ ನನ್ನ ಗೋಳನ್ನೆಷ್ಟು ಹೇಳಿಕೊಂಡೆ. ನಾಲ್ಕು ದಿನ ಕಷ್ಟಪಡು. ಮುಂದೆ ನಿನ್ನ ಮಗ ಅಚ್ಚುಕಟ್ಟಾಗಿ ಜಮೀನಿನ ಉಸ್ತುವಾರಿ ಮಾಡಿಕೊಂಡರೆ ಸಾಲದೋ? ಎನ್ನುತ್ತಾನೆ. ಅದಕ್ಕೆ ನಾನಂದೆ ಇಲ್ಲದಿದ್ದರೆ ಜಮೀನು ಹಾಳು ಬಿದ್ದೀತೇನು? ಈಗ ನಮಗೇನು ವಿದ್ಯೆ ಇದೆ? ನಮ್ಮ ಕೆಲಸ ನಾವು ಅಚ್ಚುಕಟ್ಟಾಗಿ ಮಾಡಿಕೊಳ್ಳುವುದಿಲ್ಲವೇ? ಹಾಗಂದ್ರೆ ಚಂದಣ್ಣ ಖೊಳ್ಳನೆ ನಕ್ಕುಬಿಡುತ್ತಾನೆ,"

"ನಮಗೆ ವಿದ್ಯೆಯಿಲ್ಲದಿದ್ದರೆ ಹೋಗಲಿ. ನಾವು ನಾಲ್ಕು ದಿನ ಕಷ್ಟ ಪಟ್ಟರೂ ಚಿಂತೆಯಿಲ್ಲ. ನಮ್ಮ ಮಕ್ಕಳಿಗಾದರೂ ವಿದ್ಯೆ ಲಭಿಸಿದರೆ ಒಳ್ಳೆಯ ದಲ್ಲವೆ? ನಾವು ಎಷ್ಟೇ ಅಚ್ಚುಕಟ್ಟಾಗಿ ಮಾಡಿಕೊಂಡರೂ ಚಂದಣ್ಣನಂತೆ ನಿರ್ಮಲವಾಗಿ ತೋಟ, ಗದ್ದೆ. ಮನೆ ಮಾಡಿಕೊಂಡೇವೇನು? ಅವನು ವಿದ್ಯೆ ಕಲಿತಿರೋ ರೀತಿಯೇ ಬೇರೆ. ಎಲ್ಲಿ ಹೋದರೂ ಕಷ್ಟ ಸುಖಗಳಿಗೆ ಅವನೇ ಮುಂದು. ಶತ್ರುಗಳಾಗಿದ್ದವರೂ ಅವನ ಬಳಿ ಮಿತ್ರರಾಗಿ ಬಿಡುತ್ತಾರೆ. ಅವನಿಗೆ ಅಂಥ ಜಾಣ್ಮೆಯಿದೆ. ಆದುದರಿಂದಲೇ ಅವನು ಎಳೆದ ಗೆರೆ ದಾಟುವು ದಿಲ್ಲ ನಮ್ಮವರು."

ದಾರಿ ಸಾಗುತ್ತಿತ್ತು. ಸಡಿಲವಾದ ಕೂದಲನ್ನು ಕೊಡವಿ ಮತ್ತೆ ಮುಡಿಕಟ್ಟುತ್ತಾ ಲಕ್ಕಮ್ಮ "ನಿಮ್ಮ ರೀತಿಯೇ ಬೇರೆ ಕಂಪೀ. ನಾಲ್ಕು ಎಕರೆ ಜಮೀನಿದೆ ಬತ್ತ, ರಾಗಿ ಬರುತ್ತೆ ಉಂಡರಾಯ್ತು. ನಮ್ಮದು ಹಾಗಲ್ಲ ಗೌಡರ ಮನೆಯ ಕೂಲಿ ಮಾಡಿ ಉಣ್ಣಬೇಕು. ನಮ್ಮಂತಹವರು ಮಕ್ಕಳಿಗೆ ವಿದ್ಯೆ ಕಲಿಸುವುದಕ್ಕಾಗುತ್ತದೆಯೆ?"

ಲಕ್ಕಮ್ಮ ಹೆಜ್ಜೆ ಹಾಕುತ್ತಿದ್ದಂತೆಲ್ಲಾ ಕೈಯಲ್ಲಿನ ಬೆಳ್ಳಿಯ ಕಡಗಕ್ಕೆ ತಾಗಿ ಬಳೆಗಳು ಸದ್ದು ಮಾಡುತ್ತಿದ್ದುವು. ಕಿಲುಬು ಹಿಡಿದ ಹಿತ್ತಾಳೆಯ ಕರ್ಣಾಭರಣ ಕಿವಿಯನ್ನು ಜೋಲು ಬೀಳಿಸಿತ್ತು. ಕೈ ಬೆರಳುಗಳಲ್ಲಿನ ಹಿತ್ತಾಳೆ ಮತ್ತು ಬೆಳ್ಳಿಯ ಉಂಗುರಗಳು ಜಿಡ್ಡು ಕವಿದಿದ್ದುವು. ಒರಟಾದ ದೇಹ ಅತೀ ದುಡಿಮೆಯನ್ನು ಸಾರಿ ಹೇಳುತಿತ್ತು. ಮುಖದ ಮೇಲಿನ ಬೆವರನ್ನು ಸೀರೆಯ ಸೆರಗಿನಿಂದ ಶೀಡಿಕೊಂಡು, ಎಲೆಯಡಿಕೆಯ ಎಂಜಲನ್ನು ಅತ್ತ ಉಗಿದು ಮತ್ತೆ ತನ್ನ ತಾಪತ್ರಯವನ್ನು ತೋಡಿಕೊಳ್ಳತೊಡಗಿದಳು.

"ಚಂದಣ್ಣ ಹೇಳುವುದು ದುಡ್ಡು ದುಗ್ಗಾಣಿಯಿಲ್ಲದೆ ವಿದ್ಯೆ ಕಲಿಯುವ ಭಾಗ್ಯ ನಿಮ್ಮನೆಯ ಬಾಗಿಲಿಗೆ ಬಂದಿರುವಾಗ ಏಕೆ ವಿಳಂಬ ಮಾಡಬೇಕು ? ನಾಲ್ಕು ದಿನ ಕಷ್ಟವಾದರೂ ಚಿಂತೆಯಿಲ್ಲ ಕಲಿಯಿರಿ ಅಂತ. ಹೋಗಲಿ, ನಾಲ್ಕು ದಿನ ಕಷ್ಟಪಡೋದೇನು ಕಷ್ಟ, ನಮಗೆ ಸುಖ ಬರೋದಾದ್ರೆ ? ನಾವಿದ್ದಲ್ಲಿ ಸುಖ ಬಂದೀತೆ ? ಅಯ್ಯೋ, ಅದೆಲ್ಲಾ ಕನಸಿನಮಾತು ಕೆಂಪೀ " ಮಾತು ಮುಗಿಸಿ ನಿಟ್ಟುಸಿರು ಬಿಟ್ಟು ಪಕ್ಕನೆ ಜ್ಞಾಪಿಸಿಕೊಂಡು "ಅಷ್ಟೇ ಅಲ್ಲ ಕಣೇ, ಬಿಡುವು ದೊರಕಿದಾಗ ನನ್ನನ್ನೂ ಹೋಗಿ ಕಲಿ ಅನ್ನುತ್ತಾನೆ ಚಂದಣ್ಣ ! ನನಗಂತೂ ನಕ್ಕೂ ನಕ್ಕೂ ಸಾಕಾಯ್ತು." ಮಾತು ಮುಗಿಯುವಷ್ಟರಲ್ಲಿ ಖೊಳ್ಳನೆ ನಕ್ಕಳು ಲಕ್ಕಮ್ಮ.

ಒಡನೆ ಇಬ್ಬರೂ ಮನಸಾರೆ ನಕ್ಕರು. ಕೆಂಪಿಯು ಸರಿದ ಸೆರಗನ್ನು ಸರಿಪಡಿಸಿಕೊಳ್ಳುತ್ತ ಹೇಳಿದಳು "ಲಕ್ಕಮ್ಮಾ, ಮುದ್ದ ಬಲು ಬುದ್ಧಿವಂತ ಹುಡುಗ. ಅದಕ್ಕಾಗಿಯೆ ಚಂದಣ್ಣ ಅವನನ್ನು ಕಲಿ ಅಂತ ಒತ್ತಾಯ ಮಾಡು ತ್ತಿದ್ದಾನೆ. ಕೆಲವು ದಿನ ಕಷ್ಟವಾದರೂ ಚಿಂತೆಯಿಲ್ಲ; ಅವನು ಕಲಿಯಲಿ. ಅಷ್ಟು ಕಾಲ ಹೇಗಾದರೂ ಸುಧಾರಿಸಿಕೊ." ಎಂದ ಕೆಂಪಿ ಸ್ವಲ್ಪ ಯೋಚಿಸಿ ಮುಂದುವರಿದಳು "ನೋಡು, ಚಂದಣ್ಣ ಇಲ್ಲಿ ಹತ್ತು ಎಕರೆ ದರಖಾಸ್ತು ಮಾಡಿ ಜಮೀನು ಪಡಕೊಂಡಾಗ ಎಲ್ಲರೂ ತಗಾದೆ ಹೂಡಿದರು. ಪರ ಊರಿನವರಿಗೆ ಇಲ್ಲೇಕೆ ಸ್ಥಳವೆಂದು ದೊಡ್ಡ ಧಾಳಿಯೆಬ್ಬಿಸಿದರು. ಆದರೆ, ಚಂದಣ್ಣ ಬಹಳ ಬುದ್ಧಿವಂತ. ಅವನೇ ಗೆದ್ದುದಲ್ಲದೆ ಕ್ರಮೇಣ ಎಲ್ಲರನ್ನೂ ತನ್ನೆಡೆಗೆ ಸೆಳೆದುಕೊಂಡ. ಈಗ ಚಂದಣ್ಣನಿಲ್ಲದೆ ಯಾವ ಕೆಲಸ ಕಾರ್ಯವೂ ನಡೆಯುವುದಿಲ್ಲವಲ್ಲ ? ಇಂದು ಚಂದಣ್ಣನ ಹೆಸರು ಮನೆ ಮಾತಾಗಿದೆ. ಮನುಷ್ಯ ಅಂದರೆ ಹಾಗಿರಬೇಕು ನೋಡು. ಒಂದು ವೇಳೆ ಮುದ್ದ ಕಲಿತು ಚಂದಣ್ಣನ ಹಾಗೆ ಆಗುವುದಾದರೆ ನಿನಗೆ ಬೇಡವೇನು ?"

"ಕಲಿತೋರೆಲ್ಲಾ ಹಾಗಿರ್ತಾರೇನು ? ಎಲ್ಲಾ ಅವರವರ ಕರ್ಮಾನು ಸಾರ ನಡೆದೀತು ಅಂದೇನು."

"ಚಂದಣ್ಣ ಈ ಊರಿಗೆ ಬಂದದ್ದು ಒಂದು ಭಾಗ್ಯ ಕಣೇ !"

ಅದೇನೋ ನಿಜ ಕಣವ್ವಾ, ಅವನ ಹೊಟ್ಟೆ ತಣ್ಣಗಿರಲಿ, ಬಹಳ ಒಳ್ಳೇ ಮನುಷ್ಯ. ದೇವರು ಅಂತಹವರಿಗೆ ಆಯುಸ್ಸು ಕೊಡಬೇಕು." ಲಕ್ಕಮ್ಮ

ಮನಃಪೂರ್ತಿ ಹರಸಿದಳು. ಅವನ ಬಗ್ಗೆ ಅಪಾರವಾದ ಗೌರವವಿತ್ತು. ಪ್ರೀತಿ ವಿಶ್ವಾಸಗಳಿಗೂ ಮೇರೆಯಿರಲಿಲ್ಲ. ಸ್ವಲ್ಪ ತಡೆದು ಪುನಃ ಹೇಳಿದಳು. "ಮೊನ್ನೆ ಅವನ ಮನೆಗೆ ಹೋಗಿದ್ದೆ. ಅವನ ತಂಗಿ ಮಲ್ಲಿಗೆ ಬಂದಿದ್ದಾಳೆ. ಈಗಿನ ಕೈ ಮಗು ಮುದ್ದು ಮುದ್ದಾಗಿದೆ. ಎರಡು ವಾರ ಇದ್ದು ಹೋಗುವುದಾಗಿ ಹೇಳಿದಳು."

"ನಂಜನಗೂಡಿಗೆ ಕೊಟ್ಟವಳೇನು ?"

"ಹ್ಞೂ ಕಣೆ. ಅವಳ ಮೊದಲ ಗಂಡ ಬಲು ಹಿಂಸೆ ಪಡಿಸುತಿದ್ದನಂತೆ ಈಗಿನವನು ಗಿಣಿಯಂತೆ ಸಾಕಿಕೊಂಡಿದ್ದಾನೆಂದು ಕಾವೇರಿ ಹೇಳಿದಳು. ಹಣ್ಣಿನ ವ್ಯಾಪಾರಿಯಾಗಿದ್ದು ಅಚ್ಚುಕಟ್ಟಾಗಿ ಮನೆಮಠ ಮಾಡಿಕೊಂಡಿದ್ದಾನಂತೆ. ಎರಡು ಮಕ್ಕಳೂ ಮುದ್ದು ಮುದ್ದಾಗಿವೆ. ಮೂರು ಹೊತ್ತೂ ಚಂದಣ್ಣನ ಮೈಮೇಲೆ ಇರುತ್ತವೆ.

"ಹೋಗಲಿ, ಈಗಲಾದರೂ ಸುಖವಾಗಿದ್ದಾಳಲ್ಲ ಅದೇ ಸಂತೋಷ. ಸಂಜೆಯ ಹೊತ್ತಿನಲ್ಲಿ ಮುದ್ದನೊಂದಿಗೆ ಬಾ ಲಕ್ಕಮ್ಮಾ. ಕೆಲಸ ಎಂದಿದ್ದರೂ ಮುಗಿಯುವುದಿಲ್ಲ. ಮತ್ತೇಕೆ ಅದಕ್ಕೆ ಅಂಟಿಕೊಳ್ಳುತ್ತಿ ? ಖಂಡಿತ ಬಾ ಲಕ್ಕಮ್ಮ." ಎಂದು ಸವಿನಯ ಆಮಂತ್ರಣ ನೀಡಿದಳು ಕೆಂಪಿ. ಅಲ್ಲಿಂದ ಸ್ವಲ್ಪ ಮುಂದೆ ಕೆಂಪಿಯ ಮನೆಯ ಕಡೆಗೆ ದಾರಿ ಕವಲೊಡೆದಿತ್ತು.

"ನಿನಗಾದರೂ ಕೊಂಚ ಬಿಡುವು ಸಿಕ್ಕೀತು. ನನಗಿನ್ನೇನು ರಾತ್ರಿ ಹಾಸಿಗೆ ಕಂಡಾಗಲೇ ಬಿಡುವು. ಈಗ ಮುದ್ದ ಮನೆಯಲ್ಲಿರುವುದಿಲ್ಲ. ಎಷ್ಟು ಮಾಡಿದರೂ ಈ ಮಹಾರಾಯನಿಗೆ ತೃಪ್ತಿಯಿಲ್ಲ. ದಿನಕ್ಕೊಂದು ರಗಳೆ ತೆಗೆಯುತ್ತಲೇ ಇರುತ್ತಾರೆ. ನನಗಂತೂ ಸಾಕಾಗಿ ಬಿಡುತ್ತೆ." ಎಂದೆನ್ನುವಾಗ ಲಕ್ಕಮ್ಮನ ಮುಖದಲ್ಲಿ ನೋವಿನ ಛಾಯೆ ಅಚ್ಚೊತ್ತಿತು.

"ಅದಕ್ಕೇನೇ ಚಂದಣ್ಣ ಹೇಳುವುದು, ಎಲ್ಲರೂ ವಿದ್ಯೆ ಕಲಿಯಿರಿ ಅಂತ."

"ಸರಿ ; ವಿದ್ಯೆ ಕಲಿತವರೆಲ್ಲಾ ಚೆನ್ನಾಗಿರುತ್ತಾರೆ ಅನ್ನುವೆಯೇನು ? ವಿದ್ಯೆ ಕಲಿತವರಲ್ಲಿಯೂ ಇದ್ದಾರೆ ಇಂಥ ಜನ. ಮೊನ್ನೆ ಆ ಬ್ರಾಹ್ಮಣರ ಮನೆಯಲ್ಲಿ ನಡೆದ ಕತೆ ಗೊತ್ತಿಲ್ಲವೆ ? ವಿದ್ಯೆ ಕಲಿತವರೆಲ್ಲರೂ ಬುದ್ಧಿವಂತರೂ ಗುಣವಂತರೂ ಆಗಿದ್ದಿದ್ದರೆ ಮತ್ತೇನು ಕಡಿಮೆಯಾಗುತಿತ್ತು ?" ಅಪಹಾಸ್ಯ ದಿಂದ ನುಡಿದಳು ಲಕ್ಕಮ್ಮ. ಕೆಂಪಿಯೂ ನಕ್ಕು ಒಪ್ಪಿಕೊಂಡಳು. "ನಿಜ

ಕಣವ್ವಾ, ನಿಜ". ಕವಲು ದಾರಿಯು ಸಮೀಪಿಸಿತು. ಒಡನೆ ಪ್ರಾಸಂಗಿಕವಾಗಿ "ಕೆಂಪಿ, ನೀನೇ ಒಂದ್ಸಲ ಮನೆಗೆ ಬಾ. ನಿನಗಾದ್ರೂ ಅಷ್ಟು ತಾಪತ್ರಯ ವಿಲ್ಲ. ಈಚೀಚೆಗೆ ನಿನ್ನ ಮುಖ ನೋಡುವುದೇ ಅಪರೂಪವಾಗಿದೆ." ಎಂಬ ವಿನಯಪೂರ್ವಕ ಕರೆ ಹರಿದು ಬಂತು.

ಕವಲು ದಾರಿಯನ್ನು ಹಿಡಿದು ನಡೆದಳು ಕೆಂಪಿ. ತನ್ನ ಮನೆಯ ಕಡೆ ಹೆಜ್ಜೆ ಹಾಕುತ್ತ ಕೆಂಪಿ ಕಣ್ಮರೆಯಾಗುವವರೆಗೂ ದೃಷ್ಟಿಯನ್ನು ಹಿಂದೆಯೇ ಅಟ್ಟಿ ನೋಡುತ್ತಿದ್ದಳು ಲಕ್ಕಮ್ಮ. ಅವಳ ಸೊಂಟದಲ್ಲಿದ್ದ ಬೆಳ್ಳಿಯ ಡಾಬು ಬಿಸಿಲಿನ ಝಳಕ್ಕೆ ಮಿಣಮಿಣನೆ ಹೊಳೆಯುತಿತ್ತು. ಮುಡಿಯಲ್ಲಿದ್ದ ಬೆಳ್ಳಿಯ ಹೂ ಕೈಯಲ್ಲಿದ್ದ ಬೆಳ್ಳಿಯ ಕಡಗ ಜಿಡ್ಡು ಕವಿದು ಮಾಸಿ ಹೋಗಿದ್ದರೂ ಎದ್ದು ತೋರುತಿದ್ದುವು. ಕೈ ಬೀಸುತ್ತ ಅವಳು ನಡೆಯುತಿದ್ದ ರೀತಿ ಲಕ್ಕಮ್ಮನಿಗೆ ನಗು ಬರಿಸಿತು. "ಎಷ್ಟಾದರೂ ಹುಡುಗಿ" ಎಂದುಕೊಂಡಳು. ತುಟಿಗಳಲ್ಲಿ ಶುಷ್ಕನಗೆ ಅರಳಿತು.

ಮನೆ ಹತ್ತಿರವಾಗುತಿದ್ದಂತೆ ಮನೆಯ ವಿಚಾರ ಮನದಲ್ಲಿ ನರ್ತಿಸ ತೊಡಗಿತು. ಹಿಟ್ಟು ಬೀಸಿ ಊರ ಬಾವಿಯಿಂದ ನೀರು ತರಬೇಕು. ಕೂಲಿಯ ಬತ್ತವನ್ನೂ ಕುಟ್ಟಲಿಲ್ಲ. ಅಡುಗೆಗೆ ಕಟ್ಟಿಗೆಯೂ ಇಲ್ಲ ಎಂಬುದು ನೆನಪಾ ದಾಗ ಲಕ್ಕಮ್ಮನ ಹೆಜ್ಜೆ ಇನ್ನಷ್ಟು ಚುರುಕಾಯಿತು. ಬಿಸಿಲಿನ ತಾಪದಿಂದ ಮುಖದ ಮೇಲೆ ಬೆವರಿನ ಹನಿಗಳು ತುಂತುರು ತುಂತುರಾಗಿ ಮೂಡ ತೊಡಗಿ ದುವು. ಜಿಡ್ಡು ಕವಿದ ಸೀರೆಯ ಸೆರಗಿನಿಂದ ಮುಖವನ್ನು ತೀಡಿಕೊಂಡು ಮುಂದುವರಿದಳು, ಚಿಂದಿ ಮಯವಾಗಿದ್ದ ಸೀರೆ ಬಣ್ಣವಳಿದು ಮಾಸಿ ಹೋಗಿತ್ತು. ರೂಪಗೆಟ್ಟ ರವಿಕೆ ಜೋಲು ಬಿದ್ದಿತ್ತು.

ಹೆಮ್ಮರದ ಹಿಂಬದಿಯಲ್ಲಿದ್ದ ಸೋಗೆಯ ಮನೆ ಸ್ವಾಗತ ಬಯಸಿತು. ಲಕ್ಕಮ್ಮ ಮಿಂಚಿನಂತೆ ಒಳಹೊಕ್ಕಳು. ಗಾಳಿ ಬೆಳಕುಗಳಿಗೆ ಆಸ್ಪದವಿಲ್ಲದ ಗುಡಿಸಲೊಳಗೆ ಕತ್ತಲು ಕಣ್ಣಿಗೆ ತಿವಿಯುತಿತ್ತು. ಬಿಸಿಲಲ್ಲಿ ನಡೆದು ಬಂದುದ್ದ ರಿಂದ ಕಣ್ಣು ಮಂಜಾಗಿದ್ದುವು. ಬಾಗಿಲ ಬಳಿ ಬಾಲ ಮುದುಡಿ ಮಲಗಿದ, ಕೆಂಬಣ್ಣದ ನಾಯಿ ಲಕ್ಕಮ್ಮ ಒಳಹೋಗುತ್ತಲೂ ಹಿಂದೆಯೇ ಬಂದಿತ್ತು ಮುದ್ದನಿಗಾಗಿ ಇಟ್ಟಿದ್ದ ಹಿಟ್ಟೂ ಸಾರೂ ಹಾಗೇ ಉಳಿದಿತ್ತು. ಮುದ ಇನ್ನೂ ಉಣ್ಣಲು ಬಂದಿಲ್ಲ. ಏನು ಕೇಡೊ ಎಂದೆನಿಸಿ ಲಕ್ಕಮ್ಮ ಒಮ್ಮೆ

ಹೊರಗೆ ಹಣಿಕಿ ಹಾಕಿ ಹಾದಿಯತ್ತ ನೋಡಿದಳು. ದೂರದಲ್ಲಿ ಮುದ್ದ ಬರುತಿದ್ದುದು ಕಣ್ಣಿಗೆ ಬಿತ್ತು. ಮುದ್ದ ಓಡೋಡಿ ಒಳ ಬಂದವನೇ ಹೇಳಿದ,

"ನಾನಿಂದು ಸೊಗಸಾಗಿ ಉಂಡು ಬಂದಿದ್ದೇನೆ."

"ಎಲ್ಲಿ ?"

"ಚಂದಣ್ಣನ ಮನೆಯಲ್ಲಿ ನಾನೂ ಮಾಸ್ತರೂ ಉಂಡೆವು. ಊಟ ಸೊಗಸಾಗಿತ್ತು. ಚಂದಣ್ಣ ಶಾಲೆಯ ಕಡೆ ಬಂದಾಗ ನಮ್ಮನ್ನು ಅವರ ಮನೆಗೆ ಕರೆದೊಯ್ದರು. ಅಮ್ಮಾ, ನನಗೆ ಈ ಶಾಲೆ ಮುಗಿದನಂತರ ನನ್ನನ್ನು ನಂಜನಗೂಡಿಗೆ ಕಳುಹಿಸುತ್ತಾರಂತೆ ! ಅಲ್ಲೂ ಓದಿ ಮುಗಿಸಿದರೆ ಮೈಸೂರಿಗೆ ಕಳುಹಿಸುತ್ತಾರಂತೆ ! ನಾನು ಖಂಡಿತಾ ಹೋಗುತ್ತೇನೆ !" ಹೇಳುಹೇಳುತ್ತ ಮುದ್ದ ಜಿಗಿದಾಡಿದ. ಮೈ ಹೂವಿಗಿಂತ ಹಗುರವಾಗಿತ್ತು.

"ಬಿಡು, ನನ್ನ ಮಾಳೆ ಹಾಳಾಯ್ತು !"

"ಅದೇಕಮ್ಮಾ ಹಾಗಂತಿ ? ಮನೆ ಹಾಳಾಗಲಿಲ್ಲ ಉದ್ಧಾರವಾಯ್ತು ಅನ್ನು!" ಉತ್ಸಾಹದಿಂದಲೇ ಹೇಳಿದ ಮುದ್ದ.

"ಶಿವ ಶಿವಾ ! ನನ್ನ ಕಷ್ಟ ನಿನಗಾದರೂ ಹೇಗೆ ತಿಳಿದೀತು ? ಆಡೊ. ಮಕ್ಕಳ ಜೀವ ಅಂಗಳದಲ್ಲಿ ಅಂದ ಹಾಗಾಯ್ತು. ನಿನಗೆ ಬೇಕಾಗಿದ್ದೂ ಅದೇ ಬೆಳಗಿನಿಂದ ರಾತ್ರಿಯ ತನಕ ದುಡಿದರೂ ಅರೆಹೊಟ್ಟೆ ತುಂಬುವುದಿಲ್ಲ. ನೀನು ಎಲ್ಲಾದರೂ ಸುಖವಾಗಿ ಓದ್ಕೊಂಡಿರು. ನಾನೆಲ್ಲಾದರೂ ಕೆರೆ ಬಾವಿ ನೋಡುವೆ."

"ಅಯ್ಯೊ, ಅಮಂಗಳ ನುಡಿಯ ಬೇಡ 'ಬಿಡ್ತು' ಅನ್ನು."

"ಬಿಡೋದು ಹಿಡಿಯೋದು ಶಿವನಿಗೇ ಸೇರಿದ್ದು. ನನಗಂತೂ ಈ ಜೀವನ ಸಾಕಾಗಿ ಹೋಗಿದೆ."

"ಸ್ವಲ್ಪ ಕಾಲ ತಾಳ್ಕೊ ಅಮ್ಮ. ಆಮೇಲೆ ನೋಡೋಣ ಒಳ್ಳೆಯ ದಾದೀತೇನೋ."

"ಅದೆಲ್ಲಾ ಕನಸಿನ ಮಾತು" ಎಂದವಳೇ ಪುನಃ ಹೇಳಿದಳು "ಇಂದೇ ನಾದರೂ ಸುಖವಿದ್ದರೆ ಅದನ್ನೇ ಸುಖ ಅಂದುಕೊಳ್ಳುವುದೇ ಹೊರತು ಮುಂದೆ ಸುಖ ಬಂದೀತೆಂದು ಕಾಯುವುದೆಂದರೆ ಭ್ರಾಂತಿ ಅಂದೇನು." ನುಡಿಯಲ್ಲಿ ಸ್ವಾನುಭವದ ಧಾರೆ ಹರಿದು ಬಂತು.

ಮುದ್ದನ ಮುಖದಲ್ಲಿ ವಿಚಾರಪ್ರದ ಮುದ್ರೆ ಮೂಡಿತು. ತಾಯಿಯ ನುಡಿಯಲ್ಲಿದ್ದ ವಾಸ್ತವಿಕತೆಯು ರೂಪವೆತ್ತಿ ಮನದಲೆಯಲ್ಲಿ ತೇಲಿ ಬಂದಿತು. ಮುದ್ದ ಮಾತಾಡಲಿಲ್ಲ. ತುಸು ಹೊತ್ತು ಹಾಗೇ ಯೋಚಿಸಿದ. ಚಂದಣ್ಣ ಹೇಳಿದ ಮಾತು ಕಿವಿಯಲ್ಲಿ ಮೊಳಗಿತು. "ಮಗೂ, ಸಾಧನೆಯಿಲ್ಲದೆ ಯಾವುದೂ ಸಿದ್ಧಿಸದು."

"ನಿಜ, ನಿಜ; ಸಾಧನೆಯಿಂದ ಎಲ್ಲವೂ ಸಾಧ್ಯ ಎಂಬುದನ್ನು ಸಾಧಿಸಿಯೇ ತೀರಬೇಕು." ಎಂಬ ಹಿರಿಯಾಸೆ ಎಳೆ ಮನದಲ್ಲಿ ಬೇರು ಬಿಟ್ಟಿತು. ಮುದ್ದ ವಿಚಾರ ಮಗ್ನನಾದ.

ಮನೆಯ ಮಗ್ಗುಲಲ್ಲಿದ್ದ ಹೆಮ್ಮರದ ಮೇಲೆ ಕುಳಿತು ಕೋಗಿಲೆ ಕೂಗುತಿತ್ತು.

ಕುಹೂಊಊ! ಕುಹೂಊಊ!

೧೯

ರೋಗಿಗಳಿಂದ ತುಂಬಿದ ಜನರಲ್ ವಾರ್ಡ್

ಶ್ವೇತವಸ್ತ್ರಧಾರಿಣಿ ಶಿವೆ ಔಷಧಿಗಳ ಟ್ರೇಯೊಡನೆ ಡಾಕ್ಟರು ಬಂದೊಡನೆಯೆ ಎದುರಾದಳು. ಅದರಲ್ಲಿದ್ದ ಇಂಜಕ್ಷನ್‌ಗಳನ್ನು ಹದಗೊಳಿಸಿ ನಿಸ್ತೇಜವಾಗಿ ಮಲಗಿದ್ದ ರೋಗಿಗೆ ಕೊಟ್ಟು ಅಂದಿನ ಔಷಧಿ ವಗೈರೆಗಳನ್ನು ಕೊಡುವ ಕ್ರಮವನ್ನು ಬರೆದಿಟ್ಟು ಜಾಗರೂಕತೆಯಿಂದ ನೋಡಿಕೊಳ್ಳಲು ಸೂಕ್ತ ಸಲಹೆಗಳನ್ನಿತ್ತು ಡಾಕ್ಟರು ಹೊರಟು ಹೋದರು. ವಿಷಮ ಸ್ಥಿತಿಯಲ್ಲಿದ್ದ ಚಂದ್ರಮೌಳಿ ಮೈಮರೆತು ಮಲಗಿದ್ದ. ಬಳಿಯಲ್ಲಿದ್ದ ಸತಿ ತಂಗಮ್ಮ ಕಂಬನಿಗರೆಯುತ್ತಿದ್ದುದು ಶಿವಮ್ಮನಿಗೆ ಸಂಕಟವನ್ನು ತಂದಿತು. ಕೆಲಸಕ್ಕೆ ಬಂದಾಗಿನಿಂದ ಅದೆಷ್ಟೋ ಕಷ್ಟನಷ್ಟಗಳನ್ನು ಕಂಡದ್ದಾಗಿದೆ. ಒಂದೊಂದು ಅನುಭವವೂ ಎದೆಯನ್ನು ತಲ್ಲಣಿಸುವಂತೆ ಮಾಡಿತ್ತು. ರೋಗಿಗಳ ಮತ್ತು ಅವರ ಕುಟುಂಬದವರ ಬಗ್ಗೆ ಹೃದಯ ಅನುಕಂಪದ ಹೊರೆಯಿಂದ ಕುಸಿಯುತಿತ್ತು. ವಿಧಿ ಸಂಕಲ್ಪದ ಮುಂದೆ ಎಷ್ಟು ಪ್ರೀತ್ಯಾದರದಿಂದ ಶುಶ್ರೂಷೆ ಮಾಡಿದರೇನು?

ಯಾರೊಬ್ಬರ ಕಷ್ಟಕ್ಕೆ ಶಿವೆ ಕಂಬನಿ ತುಂಬಿಕೊಳ್ಳುತಿದ್ದುದನ್ನು ನೋಡಿ ಓರಗೆಯ ದಾದಿಯರು ನಗುತಿದ್ದರು. ಆದರೂ ಶಿವೆಯ ಹೆಂಗರುಳು ಹೆಂಗರುಳಾಗಿಯೇ ಉಳಿದಿತ್ತು. ತಂಗಮ್ಮ ಕಂಬನಿಗರೆಯುತಿದ್ದುದನ್ನು ನೋಡಿ ಭುಜದ ಮೇಲೆ ಕೈಯಿಟ್ಟು ಶಿವೆ ಸಂತೈಸುವ ದನಿಯಲ್ಲಿ ನುಡಿದಳು. “ಅವರೆದು ಕಂಬನಿಗರೆದರೆ ಎದೆಗುಂದಿಯಾರು ಕೊಂಚ ಧೈರ್ಯ ಮಾಡಿಕೊಳ್ಳರಿ.” ಮೆಲು ನುಡಿಗಳು ನೊಂದ ಮನಕ್ಕೆ ತಂಪನ್ನೀಡುತ್ತಲೂ ತಂಗಮ್ಮ ಶಿವೆಯ ಹಿಂದೆ ಜಗಲಿಗೆ ಹೋದಳು. ಸಾಲಾಗಿ ಜೋಡಿಸಿದ್ದ ಹತ್ತಿಪ್ಪತ್ತು ಮಂಚಗಳಲ್ಲಿ ರೋಗಿಗಳು ಮಲಗಿದ್ದರು. ನಿಸ್ತೇಜವಾದ ಮುಖಗಳಲ್ಲಿ ಕಣ್ಣುಗಳು ಗುಳಿ ಬಿದ್ದಿದ್ದುವು. ಎಲುಬಿನ ಹಂದರಗಳಾಗಿದ್ದ ಹಲವಾರು ರೋಗಿಗಳು ಅಸ್ತವ್ಯಸ್ತವಾಗಿ ಮಲಗಿದ್ದ ರೀತಿ ಮನಕರಗಿಸುವಂತಿತ್ತು.

ಶಿವೆ ಹೆಜ್ಜೆಯನ್ನೆಳೆದುಕೊಳ್ಳುತ್ತಾ ಹೊರ ಬಂದಾಗ ತನ್ನನ್ನು ಅನುಸರಿಸಿ ಬಂದ ತಂಗಮ್ಮನಿಗಾಗಿ ಸ್ವಲ್ಪ ಅಲ್ಲಿಯೇ ನಿಂತಳು.

"ಇಂದು ರಾತ್ರಿ ಇಲ್ಲಿರುವವರಾರು ?"

"ನಾನೇ ಇರುವೆ."

"ರಾತ್ರಿ ಎಂಟರ ಸಮಯಕ್ಕೊಮ್ಮೆ ನಾನು ಬರಬಹುದೇ ? ಅವರು ತುಂಬ ಬಳಲಿದ್ದಾರೆ."

"ಅಗತ್ಯವಾಗಿ ಬನ್ನಿರಿ. ರೋಗಿ ಬಳಲಿರುವುದರಿಂದ ನಿಮಗೆ ನೋಡಲವಕಾಶವಿದೆ. ಪುನಃ ಬೆಳಗ್ಗೆ ಅಷ್ಟು ಹೊತ್ತಿಗೇನೇ ಬಂದು ನೋಡಬಹುದು."

"ದಯಮಾಡಿ ಅವರನ್ನು ನೋಡಿಕೊಳ್ಳಿರಿ. ಬಹಳ ಬಳಲಿದ್ದಾರೆ." ದೈನ್ಯವೇ ಮೈವೆತ್ತು ಬಂದಂತೆ ನುಡಿದಳು ತಂಗಮ್ಮ. ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು.

"ನೀವು ಅಧೈರ್ಯಪಡಬೇಡಿರಿ. ಅವರಿಗಿನ್ನು ಜ್ವರ ಬರುವುದಿಲ್ಲವೆಂದು ಡಾಕ್ಟರು ಹೇಳಿದ್ದಾರೆ."

"ಅಷ್ಟಾದರೆ ಸಾಕು." ಎಂದು ತಂಗಮ್ಮ ಮತ್ತೊಮ್ಮೆ ನೊರಗಿ ಮಲಗಿದ್ದ ಪತಿಯನ್ನು ನೋಡಿಕೊಂಡು ಹೊರಟು ಹೋದಳು.

ಓರಗೆಯ ದಾದಿಯು ಬಂದು ಕೆಲಸವನ್ನು ಕೈಕೊಳ್ಳುವವರೆಗೂ ಅಲ್ಲಿದ್ದು, ಶಿವೆ ಮನೆಯ ಕಡೆ ಸರಸರನೆ ಹೆಜ್ಜೆಹಾಕಿದಳು. ದಿನವೂ ನಡೆಯುತ್ತಿದ್ದ ಆ ಮೂರು ಮೈಲಿಯುದ್ದದ ಟಾರು ಬಳಿದ ದಾರಿ ಚಿರಪರಿಚಿತವಾಗಿತ್ತು. ದಾರಿ ಸಾಗುತ್ತಿದ್ದಂತೆ ಗತಕಾಲದ ನಾನಾ ಘಟನೆಗಳು ಮನದಲೆಯಲ್ಲಿ ಚಲನಚಿತ್ರದಂತೆ ಸುಳಿಯತೊಡಗಿದುವು. ದಾದಿಯಾಗಿ ಆಸ್ಪತ್ರೆಗೆ ಬರುವಂದು ಮಕ್ಕಳಿಗಿಲ್ಲದಿದ್ದರೂ ಬಿಳಿಯುಡಿಗೆಯನ್ನು ಕೊಂಡುಕೊಳ್ಳಲೇಬೇಕಾಗಿ ಬಂದ ಬಗೆ ಮನದಲ್ಲಿ ಸುಳಿಯಿತು. ಮಕ್ಕಳು ಹರಿದ ಚಿಂದಿಯಲ್ಲಿರುತಿದ್ದು ತಾನು ಅಂದವಾದ ಉಡಿಗೆಯನ್ನುಟ್ಟುಕೊಳ್ಳುವಾಗ ಅಂದು ಕಂಬನಿಗರೆದುದೆಷ್ಟೋ ? ಚಿಕ್ಕವರ ಕಣ್ಣಿನಲ್ಲಿ ಮಿನುಗುತ್ತಿದ್ದ ಆಶೆ ಮನಸ್ಸನ್ನು ಬಹುವಾಗಿ ನೋಯಿಸಿತ್ತು. ಆಗ ರವಿ ಚಿಕ್ಕವರಿಗೆಂದಿದ್ದ "ಇನ್ನು ಅಮ್ಮ ಸಂಪಾದಿಸುತ್ತಾರೆ. ನಿಮಗೆಲ್ಲಾ ಒಬ್ಬೊಬ್ಬರಿಗಾಗಿ ಬಟ್ಟೆ

ಬರುತ್ತೆ.” ಆದರೇನು ? ಇಂದಿನವರೆಗೆ ನಾಲ್ಕು ಕಾಸು ಉಳಿಸಲಾಗಲಿಲ್ಲ. ಎಲ್ಲರ ಸಂಪಾದನೆಯೂ ತುತ್ತು ಗಂಜಿಗೇ ಸರಿಹೋಗುತಿತ್ತು.

ಮರುಗಳಿಗೆಯಲ್ಲಿ ಕಳೆದ ತಿಂಗಳು ಕಾಳಿಂಗಯ್ಯ ಮತ್ತು ಚಾಮಿಯರು ಆಸ್ಪತ್ರೆಯಲ್ಲಿ ಸಿಕ್ಕಿದಾಗಿನ ದೃಶ್ಯ ಸುಳಿಯಿತು. ನಿಷ್ಠುರವಾಗಿ ಕಾಳಿಂಗಯ್ಯ ಮಾತನಾಡಿದಾಗ ಚಾಮಿ ಅತ್ತ ತಿರುಗಿ ವ್ಯಂಗ ನಗೆ ಬೀರಿದುದೂ ನೆನಪಿಗೆ ಬಂದಿತು. ಒಡನೆ ಮೈ ಜುಂ ಎಂದು ಮೈನವಿರೆದ್ದಿತು. ಚಾಮಿಯನ್ನು ಡಾಕ್ಟರಿಗೆ ತೋರಿಸಿ ಆಕೆಗೆ ಮಾಡಬೇಕಾದ ಸಹಾಯವನ್ನು ಮಾಡಿದ್ದರೂ ಅಣಕದ ನುಡಿಯನ್ನಾಡದೆ ಆಕೆ ಬಿಟ್ಟಿರಲಿಲ್ಲ. “ಅಯ್ಯೋ, ಇದು ನಮ್ಮ ಸಮಾಜ !” ಎಂದು ನಿಟ್ಟುಸಿರು ಬಿಟ್ಟಳು ಶಿವೆ. ದಾರಿ ಸವೆದು ಮನೆ ಹತ್ತಿರ ಹತ್ತಿರವಾಗುತಿತ್ತು. ಸರಸರನೆ ಪಕ್ಕದಲ್ಲೇ ಯಾರೋ ನಡೆದು ಬರುತ್ತಲೂ ತಿರುಗಿ ನೋಡಿದಳು ಶಿವೆ. ಬಂದವಳು ತಂಗಮ್ಮ.

“ನೀವು ಈ ಕಡೆಯೇ ಬರುತಿದ್ದೀರಿ ?”

“ನಾನು ಅಶೋಕಪುರದಲ್ಲಿದ್ದೇನೆ.”

“ನಾನಿರುವುದೂ ಅಲ್ಲಿಯೇ” ಎಂದ ಶಿವೆ ತಂಗಮ್ಮನ ಕೈಯಲ್ಲಿದ್ದ ಬಟ್ಟೆಯನ್ನು ನೋಡಿ ಕೇಳಿದಳು “ಬಟ್ಟೆ ಕೊಂಡುಕೊಳ್ಳಲು ಹೋಗಿದ್ದಿರಾ ?”

“ಇಲ್ಲ. ಹೊಲಿದು ಕೊಡಲು ತಂದ ಬಟ್ಟೆಗಳು. ನಾನು ಹೊಲಿಗೆಯ ಕೆಲಸ ಮಾಡುತ್ತೇನೆ.”

“ನಿಮ್ಮವರು ಯಾವ ಕೆಲಸ ಮಾಡುತ್ತಾರೆ ?”

“ಈಗ ಏನೂ ಮಾಡುತಿಲ್ಲ. ದುರದೃಷ್ಟದಿಂದ ಕೆಲಸ ಕಳೆದುಕೊಂಡರು. ಅಂದಿನಿಂದ ಅದನ್ನೇ ತಲೆಗೆ ಹಚ್ಚಿಕೊಂಡು ಜೀವ ಸವೆಸುತ್ತಿದ್ದಾರೆ. ಬೇರೆ ಯಾವ ಉದ್ಯೋಗ ಮಾಡಲೂ ಅವರಿಗೆ ಮನಸ್ಸಿಲ್ಲ. ಆಗಾಗ ಹೀಗೆ ಕಾಹಿಲೆ ಬೀಳುತ್ತಾರೆ.” ಕಂಬನಿ ಮಿಡಿದಳು ತಂಗಮ್ಮ.

“ಪಾಪ, ಹೇಗೆ ಕೆಲಸ ಹೋಯಿತು ?”

ಪೊಲೀಸು ಇಲಾಖೆಯಲ್ಲಿ ಕೆಲಸ ಮಾಡುತಿದ್ದರು. ಹಿಂದೊಮ್ಮೆ ಪ್ರಧಾನ ಮಂತ್ರಿಯವರು ಕೋಲಾರಕ್ಕೆ ಬಂದಿದ್ದಾಗ್ಗೆ ನಮ್ಮವರನ್ನು 'ಸ್ಪೆಷಲ್ ಡ್ಯೂಟಿಯ ಮೇಲೆ ಅಲ್ಲಿಗೆ ಕಳುಹಿಸಿದ್ದರು. ಕಾರ್ಮಿಕರ ಸಂಘದ ಗಲಾಟೆ

ಇದ್ದುದರಿಂದ ರಕ್ಷಣಾ ವ್ಯವಸ್ಥೆಯನ್ನು ಬಿಗಿಗೊಳಿಸಲಾಗಿತ್ತು. ಪ್ರಧಾನಿಯವರು ಬರುತ್ತಿದ್ದ ಕಾರಿನತ್ತ ದುಷ್ಟ ಮನುಷ್ಯನೊಬ್ಬ ನಮ್ಮವರ ಮಗ್ಗುಲಿಂದ ನುಗ್ಗಿದನಂತೆ. ಅವನ ಕೈಯಲ್ಲೊಂದು ಕೊರಡಿತ್ತು. ಅವನನ್ನು ಹಿಡಿಯಲು ಅಸಮರ್ಥರಾದರೆಂದು ನಮ್ಮವರನ್ನು ಕೆಲಸದಿಂದ ಕಿತ್ತು ಹಾಕಿದರು. ಆತನನ್ನು ಠಾಣೆಯಲ್ಲಿಟ್ಟುಕೊಂಡು ಎಷ್ಟೆಷ್ಟು ಪ್ರಯತ್ನಪಟ್ಟರೂ ಅವನಿಂದ ಒಂದು ಮಾತನ್ನೂ ಹೊರಡಿಸಲಾಗದೆ ವೈದ್ಯ ಪರೀಕ್ಷೆಗಾಗಿ ಆಸ್ಪತ್ರೆಗೆ ಕಳುಹಿಸಿದರು. ಅಲ್ಲಿ ಅವನು ಹುಚ್ಚನೆಂದು ದೃಢಪಟ್ಟು ಹುಚ್ಚರಾಸ್ಪತ್ರೆಗೆ ಕಳುಹಿಸಿದರಂತೆ. ನಮ್ಮವರಿಗೆ ಬಡ್ತಿ ಸಿಕ್ಕಿದ ಸಮಯದಲ್ಲಿಯೇ ಕೆಲಸವೂ ಹೋಯಿತು." ನಿಟ್ಟುಸಿರು ಬಿಟ್ಟ ತಂಗಮ್ಮ ಪುನಃ ಮುಂದುವರಿದಳು. "ಏಳು ಮಂದಿ ಮಕ್ಕಳು. ಸಂಸಾರ ಸಾಗಿಸುವುದೇ ಕಷ್ಟ. ಮೊದಲ ಮಗ ಅದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾನೆ. ಗುಣವಂತ ಎನ್ನಲಾರೆ. ಮನೆಯ ಕಡೆ ಬರುವುದಿಲ್ಲ. ತಂದೆ ಕಾಹಿಲೆ ಬಿದ್ದರೂ ವಿಚಾರಿಸುವುದಿಲ್ಲ. ಅನಂತರ ಇಬ್ಬರು ಹೆಣ್ಣು ಮಕ್ಕಳು. ಅವರಿಗಿನ್ನೂ ಮದುವೆಯಿಲ್ಲ. ಚಿಕ್ಕವರ ವಿದ್ಯಾಭ್ಯಾಸ ಮತ್ತು ಜೀವನದ ಭಾರ ನನ್ನ ಮೇಲೆಯೇ. ಆದಾದರೂ ಹೋಗಲಿ, ಸದಾ ಹೀಗೆ ಕಾಹಿಲೆ ಬೀಳುತ್ತಿದ್ದಾರೆ. ಏನು ಮಾಡಲಿ?" ಮಾತು ಮುಗಿಯುವಾಗ ಕಂಠವು ಗದ್ಗದವಾಗಿತ್ತು. ಬಲು ಕಷ್ಟದಿಂದ ತಡೆದುಕೊಂಡಳು ತಂಗಮ್ಮ.

ತನ್ನದೇ ಬಲು ಕಷ್ಟವೆಂದು ಬಗೆದಿದ್ದ ಶಿವೆ ಹೇಗೆ ಸಂತೈಸಬೇಕೋ ಅರಿಯದಾದಳು. ಚಿತ್ತ ಯೋಚನಾಂಬುಧಿಯಲ್ಲಿ ಮುಳುಗಿತ್ತು. ಶರೀರ ಯಾಂತ್ರಿಕವಾಗಿ ನಡೆಯುತಿತ್ತು. ಸಾವರಿಸಿಕೊಂಡ ತಂಗಮ್ಮ "ನಿಮ್ಮ ಮನೆಯನ್ನು ತೋರಿದರೆ ನಾನು ರಾತ್ರಿ ಅಲ್ಲಿಗೇನೇ ಬರುವೆ. ಇಬ್ಬರೂ ಕೂಡಿ ಆಸ್ಪತ್ರೆಗೆ ಹೋಗೋಣ" ಎಂದಳು. ಮೆಲುದನಿ ಬಾವಿಯಾಳದಿಂದ ಹೊರಬಂದಂತಿತ್ತು. ಮುಖಮಂಡಲ ಮ್ಲಾನವಾಗಿತ್ತು.

"ಆಗಲಿ ಬನ್ನಿರಿ" ಎಂದ ಶಿವೆ ತಂಗಮ್ಮನನ್ನು ತನ್ನ ಮನೆಯವರೆಗೆ ಕರೆದೊಯ್ದು ತೋರಿದಳು. ರಾತ್ರಿಯ ಡ್ಯೂಟಿ ಇದ್ದಾಗಲೆಲ್ಲಾ ರವಿಯನ್ನು ಜೊತೆಗೆ ಕರೆದುಕೊಂಡು ಹೋಗುತ್ತಿದ್ದ ಶಿವೆ ಇಂದು ತಂಗಮ್ಮನೊಂದಿಗೆ ಹೋಗಬಹುದೆಂದುಕೊಂಡಳು. ಅಂದೇ ಇಬ್ಬರಲ್ಲಿಯೂ ಏನೋ ಒಂದು

ಬಗೆಯ ಆತ್ಮೀಯತೆ ಬೆಳೆದುಕೊಂಡಿತು.

ಶಿವೆ ಮನೆಗೆಲಸವನ್ನು ಮುಗಿಸಿ ಹೊಲಿಗೆಯ ಕೆಲಸಕ್ಕೆ ಕುಳಿತು ಕೊಂಡಳು. ಮಕ್ಕಳು ಶಾಲೆಯಿಂದ ಬರುವ ಮುನ್ನ ಒಂದಿಷ್ಟು ಮುಗಿಸೋಣ ವೆಂದು ಮನಸ್ಸು. ಕೈಯೋಟಕ್ಕಿಂತ ಮನದೋಟ ಮುಂದೆ ಹೋಗಿತ್ತು. ಶಾಲೆ ಬಿಡುತ್ತಲೂ ಮಕ್ಕಳೆಲ್ಲರೂ ಓಡೋಡಿ ಬಂದರು. ರವಿ ಬರುವುದು ಇನ್ನೂ ಬಹಳ ಹೊತ್ತು. ಬೆಳಗಿನಿಂದ ಏನೂ ತಿನಿಸಿಲ್ಲ. ಪಾಪ, ಎಷ್ಟು ಬಳಲಿದ್ದಾನೋ ಎಂದುಕೊಂಡಳು. ರವಿ ದೇಶಕ್ಕೆ ಮೊದಲನೆಯವನಾಗಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣನಾದುದು ಮನಸ್ಸಿಗೆ ಹಿಡಿಸಲಾರದಷ್ಟು ಆನಂದವನ್ನು ತಂದಿತ್ತು. ವಿದ್ಯಾರ್ಥಿವೇತನ ಕೈಗೆ ಬರುವ ತನಕ ಕಾಲೇಜಿನಲ್ಲಿ ಓದಿಸುವುದು ಸಾಮಾನ್ಯವೇನಲ್ಲ. ಬೆಳಗಿನ ಮಕ್ಕಳ ದುಡಿಮೆ-ಹೊಲಿಗೆಯ ವರಮಾನ ಸಾಕಷ್ಟಿದ್ದರೂ ಹೇಳಹೆಸರಿಲ್ಲದೆ ಕರಗಿ ಹೋಗುತ್ತದೆ.

ಕಾಫಿ ಮುಗಿಸಿದ ಶ್ಯಾಮು ಗೋಪಿಯೊಂದಿಗೆ ತೋಟಗಾರಿಕೆಯಲ್ಲಿ ಮಗ್ನನಾದ. ಸರಸು ವಿಮಲೆಯರು ತಾಯಿಯನ್ನು ಕೂಡಿಕೊಂಡರು. ಹೊಲಿದ ಅಂಗಿಯೊಂದನ್ನು ಮಡಿಸುತ್ತ ವಿಮಲೆ ಹೇಳಿದಳು. "ಈ ಸಲ ಮಿಕ್ಕಿದ ಹಣದಲ್ಲಿ ನಮಗೆ ಬಟ್ಟೆಕೊಳ್ಳದಿದ್ದರೆ ನಾವು ಶಾಲೆಗೆಹೋಗುವಂತಿಲ್ಲ."

"ಜೀವನ ದಿನದಿನವೂ ದುಸ್ತರವಾಗುತ್ತಿದೆ."

"ಮೊದಲು ಬಟ್ಟೆ ಕೊಂಡುಕೊಳ್ಳಿರಿ. ಅನಂತರ ದವಸ ಕೊಂಡ ರಾಯ್ತು."

"ಅದು ಹೇಗಾದೀತಂ? ಊಟವಿಲ್ಲದಿರುವುದಕ್ಕಾಗುತ್ತದೆಯೇ?" ಸರಸು ನಡುವೆ ಬಾಯಿ ಹಾಕಿದಳು.

ಆದರೆ...

"ಈ ಚಿಂದಿಯಲ್ಲಿ ಇನ್ನೂ ಹೇಗಿರುವುದಮ್ಮಾ?" ಕಂಬನಿ ತುಂಬಿ ಕೇಳಿ ದಳು ವಿಮಲೆ. ಬಾಲ ಸಹಜವಾದ ಆಸೆ-ನಿರಾಸೆಗಳು ಮುಖ ಮುದ್ರೆಯಲ್ಲಿ ಮೂಡಿ ಬಂದುವು. ಕಣ್ಣುಗಳ ಲಾಲಿಮೆ ವೃದ್ಧಿಸಿತು.

"ಸ್ವಲ್ಪ ಸೈರಿಸಿಕೊ ಮಗೂ."

"ರವಿಯೂ ಎರಡಂಗಿ ಹೊಲಿದುಕೊಂಡಿದ್ದಾನೆ."

ಅದೇ ದನಿ ದುಃಖಿಗದ್ಗದವಾಗಿ ಹರಿಯಿತು.

"ಅವನು ಕಾಲೇಜು ಸೇರಿದ್ದರಿಂದ ಹೊಲಿದುಕೊಂಡಿದ್ದಾನೆ. ಕಾಲೇಜು ಓದುವವನಿಗೆ ಅಷ್ಟಾದರೂ ಬೇಡವೆ ?" ಸರಸು ಕೇಳಿದಳು. "ಅಷ್ಟೊಂದು ಅಸಹನೆ ಇದ್ದರೆ ಹೇಗೆ...?"

"ಈ ಸಲ ಹಣ ಮಿಕ್ಕಿದರೆ ನಿನಗೇನೇ ಮೊದಲು."

"ಇಷ್ಟಕ್ಕೂ ಹಣ ಮಿಕ್ಕುವುದೇ ಇಲ್ಲವಲ್ಲಾ ?" ವಿಮಲೆ ಗೋಗರೆದಳು ಮಾತೆಯ ಆಶ್ವಾಸನೆ ಸಮಾಧಾನ ನೀಡಲಿಲ್ಲ.

"ನಿನಗೆ ಅದೃಷ್ಟವಿದ್ದರೆ ಉಳಿಯುತ್ತೆ."

ವಿಮಲೆ ಮರುಮಾತಾಡದೆ ಕಂಬನಿಯನ್ನು ತೀಡಿಕೊಂಡು ಹೊಲಿಗೆಯ ಕೆಲಸದಲ್ಲಿ ನಿರತಳಾದಳು. ಶಿವೆಯ ಹೆಂಗರುಳು ನೊಂದಿತು. ಎಲ್ಲರು ದುಡಿದರೂ ಜೀವನ ಸಾಗದು. ಬದುಕು ದಿನೇ ದಿನೇ ದುಸ್ತರವಾಗುತ್ತಿರುವ ಈ ಕಾಲದಲ್ಲಿ ಜೀವನ ಸಾಗಿಸುವ ಬಗೆ ಹೇಗೆ ? ಎಂಬ ಚಿಂತೆ ಮನದಲ್ಲಿ ನರ್ತಿಸುತಿತ್ತು. ಮಕ್ಕಳು ಬೆಳೆದಂತೆಲ್ಲಾ ಖರ್ಚುವೆಚ್ಚ ಹೆಚ್ಚುತ್ತಾ ಹೋಗುವುದೇ ವಿನಾ ತಗ್ಗುವುದಿಲ್ಲ. ಏನು ಮಾ...ಯೋಚನೆ ಅರ್ಧಕ್ಕೆ ತುಂಡರಿಯಿತು. ಮಾಡುತ್ತಿದ್ದ ಕೆಲಸವನ್ನು ಅರ್ಧಕ್ಕೆ ಬಿಟ್ಟು, ಗೋಪಿ ಓಡಿ ಬಂದು ಹೇಳಿದ "ಅಮ್ಮಾ, ರಾಜಣ್ಣ ಮಾಮ ಬರುತಿದ್ದಾರೆ !" ಒಮ್ಮೆಲೆ ಶಿವೆಯ ಮುಖ ಬಿಳಿಚಿಕೊಂಡಿತು. ಇಂದು ರಾತ್ರಿಯ ಡ್ಯೂಟಿಗೆ ಹೇಗೆ ಹೋಗುವುದೆಂಬ ಯೋಚನೆ ತಟ್ಟನೆ ಮೊಳೆಯಿತು ಹೊಲಿದ ಬಟ್ಟೆಗಳನ್ನು ಎತ್ತಿಟ್ಟು ಕಸ ಉಡುಗುವಷ್ಟರಲ್ಲಿ ರಾಜಣ್ಣ ದಡದಡನೆ ಒಳ ಬಂದ. ನಡೆದು ಬಂದ ರೀತಿ ಮೈ ಜುಂ ಎನ್ನಿಸಿತು. ಶಿವೆ ಬದಿಗೆ ಸರಿದು ನಿಂತಳು.

"ಶಿವೇ ಏನು ದರ್‌ಬಾರ್ ನಡೆಸಿದ್ದಿ ?" ದನಿಯಲ್ಲಿ ಗಡುಸಿತ್ತು. ಮುಖ ಕೋಪದಿಂದ ಕೆಂಪು ಕೆಂಪಾಗಿತ್ತು. ರಟ್ಟೆಯನ್ನು ಹಿಡಿದು ದರದರನೆ ಎಳೆದು ನಿಲ್ಲಿಸಿದ.

"....."

"ಈ ಕಾಲದಲ್ಲಿ ನಿನಗೆ ವ್ಯೆಯಾರ ? ಎನ್ನುತ್ತ ನಾಲ್ಕು ಗುದ್ದಿದ. ರಾಜಣ್ಣ ಉಗ್ರನಾಗಿ ಮತ್ತೆ ಗುಡುಗಿದ "ನಿಜ ಹೇಳು ? ನಿನ್ನ ಉದ್ದೇಶ ವೇನು? ಏನಾಗಬೇಕೆಂದಿದ್ದಿ ? ?"

ಶಿವೆ ಬಿರುಗಾಳಿಗೆ ಸಿಲುಕಿದ ಅರಳಿಯೆಲೆಯಂತೆ ತರತರನೆ ನಡುಗಿದಳು. ಮಕ್ಕಳು ಜೋರಾಗಿ ಅಳಲು ಮೊದಲಿಟ್ಟರು. ಪುನಃ ಒಲೆಯಲ್ಲಿ ಅರ್ಧ ಉರಿದು ನಂದಿಹೋಗಿದ್ದ ಕಟ್ಟಿಗೆಯೊಂದನ್ನು ಎತ್ತಿಕೊಂಡು ಹಿಗ್ಗಾಮುಗ್ಗಾ ಹೊಡೆಯತೊಡಗಿದ. ಶಿವೆ "ಅಯ್ಯೋ ಎಂದು ಚೀರಿದಳು. ಮಕ್ಕಳ ಚೀತ್ಕಾರವೂ ಒಂದುಗೂಡಿ ಮಾಡು ಮುಟ್ಟುವಂತೆ ಮೊಳಗಿತು. ಶ್ಯಾಮು ಅಳುತ್ತಲೇ ಓಡಿ ಹೋಗಿ ಮಾಧವರಾಯ ಮತ್ತು ಪುಟ್ಟಮ್ಮನನ್ನು ಸಹಾಯ ಕೋರಿದ. ಹೊರಗಡೆ ಹೋಗಲು ತಯಾರಾಗುತಿದ್ದ ಮಾಧು ತಾಯಿ ಯೊಡನೆ ಓಡಿ ಬಂದಾಗ ಮಕ್ಕಳನ್ನು ಅತ್ತ ಎಳೆದು ಹಾಕಿ ಅವನು ಥಳಿಸುತಿದ್ದ ರೀತಿ ಘೋರವಾಗಿತ್ತು. ಮಾಧವರಾಯನನ್ನು ಕಾಣುತ್ತಲೂ ಕಟ್ಟಿಗೆಯನ್ನು ಅತ್ತ ಬಿಸುಟು ನಿಂತ ರಾಜಣ್ಣ. ಶಿವೆ ಪುಟ್ಟಮ್ಮನನ್ನು ಅಪ್ಪಿಕೊಂಡು ಗಳಗಳನೆ ಅಳತೊಡಗಿದಳು.

"ಇದೇನು ? ಇಂತಹ ಅಸಹ್ಯಕರವಾದ ಕೆಲಸಕ್ಕಿಳಿದಿದ್ದೀರಿ ?"

"ಇದು ನಮ್ಮ ವ್ಯವಹಾರ. ಇಲ್ಲಿ ನಿಮ್ಮ ಅಗತ್ಯವಿಲ್ಲ !"

"ಹಾಗಾದರೆ ನಿಮ್ಮ ಅಗತ್ಯವು ಬಹಳವಾಗಿತ್ತೆ ?" ಪುಟ್ಟಮ್ಮ ಹುಬ್ಬು ಗಂಟಿಕ್ಕಿ ನುಡಿದಳು. "ಇಲ್ಲಿ ಬಡಿಯುವವರಾರೂ ಇಲ್ಲವೆಂದೇ ನಿಮ್ಮ ಅಗತ್ಯವಿತ್ತು ?"

"ಈಕೆಯ ವ್ಯವಹಾರ ಮಿತಿಮೀರಿದೆ. ವಿಧವೆಗೆ ಒನಪು ವಯ್ಯಾರ ಗಳು ಬೇಕೆ ?"

"ಚಿಃ ! ಎಂತಹ ಮಾತು ? ನೀವೊಮ್ಮೆ ಹೊರ ಹೋಗುತ್ತೀರೋ ಇಲ್ಲವೋ ಪುಟ್ಟಮ್ಮ ದನಿಯೇರಿಸಿ ನುಡಿದಳು.

"ನೀವು ಕೋಪಗೊಂಡರೆ ನಾನೇನೂ ಹೇಳಲಾರೆ" ಸಿಟ್ಟಿನಿಂದ ರಾಜಣ್ಣ ಹೊರಬಿದ್ದ. ಆ ಗಳಿಗೆಯಲ್ಲಿ ಅವರಿಬ್ಬರೂ ಅಲ್ಲಿಗೆ ಹೇಗೆ ಬಂದ ರೆಂಬುದು ರಾಜಣ್ಣನಿಗೆ ಹೊಳೆಯದಾಯಿತು. ಮಕ್ಕಳಿನ್ನೂ ಅಳುತ್ತಲೇ ಇದ್ದಾರೆ. ಮಾಧವರಾಯ ಶ್ಯಾಮು ಗೋಪಿಯರೊಡನೆ ಹೊರ ಬಂದು ಸಂತೈಸತೊಡಗಿದ.

"ಊರಿನಲ್ಲಿ ಯಾರ ಬಾಯಿಯಲ್ಲಿ ನೋಡಿದರೂ ಈಕೆಯದೇ ಸುದ್ದಿ. ಕೇಳಿಕೇಳಿ ನಮಗಂತೂ ಸಾಕಾಗಿ ಹೋಗಿದೆ." ರಾಜಣ್ಣ ಅವುಡುಗಚ್ಚಿ

ಹೇಳಿದ. ಕಣ್ಣುಗಳು ಕಿಡಿಕಾರುತಿದ್ದುವು.

"ಯಾರೋ ಮಾತಾಡಿದರೆಂದು ನೀವು ಈ ಕ್ರಮ ಕೈಗೊಳ್ಳುವುದೇ?" ಮಾಧು ಅತ್ಯಂತ ಕಳಕಳಿಯಿಂದ ಬಿತ್ತರಿಸಿದ "ತುಂಬ ಅನ್ಯಾಯ."

ಒಳಗಿನಿಂದ ಆನಂದ ಹೊರ ಬಂದು ಹೇಳಿದ "ನೀವು ಹೊಡೆಯ ಹೋದುದೇಕೆ ? ನಾಲ್ಕು ಬುದ್ಧಿ ಮಾತುಗಳನ್ನು ಹೇಳಬಹುದಾಗಿತ್ತು."

"ಆ ಪಾಪಿ ಮುಖ ನೋಡಿದರೇನೇ ಮೈ ಉರಿಯುತ್ತೆ." ರಾಜಣ್ಣ ಗುಡುಗಿದ.

ಅಷ್ಟರಲ್ಲಿ ರವಿ ಕಾಲೇಜಿನಿಂದ ಹಿಂದಿರುಗಿ ಬಂದ. ಪ್ರಾಕಾರವನ್ನು ದಾಟಿದೊಡನೆ ಎಂದೆಂದೂ ಮನೆಗೆ ಬರದಿದ್ದ ರಾಯನನ್ನು ಕಾಣುತ್ತಲೂ ಅಚ್ಚರಿಯುಂಟಾಗಿ ಏನೋ ಅನಾಹುತ ನಡೆದಿದೆಯೆಂಬುದು ತಕ್ಷಣ ಮನ ದಟ್ಟಾಯಿತು. ರವಿಯನ್ನು ನೋಡಿ ಶ್ಯಾಮು ಮತ್ತೆ ಮುಸು ಮುಸು ಅಳಲು ಮೊದಲಿಟ್ಟು ಅವನು ಹತ್ತಿರ ಬರುತ್ತಲೂ ನಡೆದ ವಿಚಾರವನ್ನು ಒದರಿ "ಹೋ" ಎಂದು ಜೋರಾಗಿ ಅಳತೊಡಗಿದ. ರವಿಗೆ ಕೋಪದಿಂದ ಮೈ ಕಂಪಿಸಿತಾದರೂ ಏನು ಮಾಡುವುದೆಂಬುದು ಹೊಳೆಯದಾಯಿತು. ದಿಕ್ಕೆಟ್ಟು ಜ್ವಾಲಾಮುಖಿಯಂತಾದ ಅವನನ್ನು ಮೈದಡವಿ ಮಾಧು,

"ರವೀ. ಸೈರಿಸಿಕೊ. ನಾನು ಅವರೊಂದಿಗೆ ಮಾತಾಡುವೆ. ನೀನು ಆ ಗೊಡವೆಗೆ ಹೋಗಬೇಡ ಕಂಡೆಯಾ" ದನಿಯಲ್ಲಿ ಮಮತೆ....ಕಾರುಣ್ಯಗಳ ಕೋಡಿ ಹರಿಯಿತು.

"ಹೇಗೆ ಸಹಿಸಲಿ ?" ಎಂದ ರವಿ. ದನಿ ಅಲ್ಲಿಂದಲ್ಲೇ ಉಡುಗಿ ಹೋಗುತ್ತಿರುವಂತೆ ಭಾಸವಾಯಿತು. ಕಣ್ಣುಗಳು ಕೆಂಪು ತಳೆದುವು.

"ಮಿಂಚಿ ಹೋದುದಕ್ಕೆ ಚಿಂತಿಸಿ ಫಲವಿಲ್ಲ."

ರಾಯ ರವಿಯನ್ನು ಒಳಹೋಗೆಂದು ಕಳುಹಿಸಿ ರಾಜಣ್ಣನನ್ನು ಕುರಿತು,

"ರಾಜಣ್ಣಾ. ನೀವು ವೃಥಾ ತಪ್ಪು ತಿಳಿದಿದ್ದೀರಿ. ನಿಮ್ಮ ವರ್ತನೆ ತೀರ ಅಸಹ್ಯಕರ."

"ಸ್ವಾಮಿ ಇದ್ದಾಗ ಹೆಣ್ಣು ಹೊಸ್ತಿಲು ದಾಟುತ್ತಿರಲಿಲ್ಲ. ನಿಮಗದು ತಿಳಿಯದೇ ?"

"ಆಗ ಅವಶ್ಯಕತೆಯಿರಲಿಲ್ಲ."

ನುಡಿ ಕೇಳಿದೊಡನೆ ರವಿ ಪುಟ ನೆಗೆದ ಚೆಂಡಿನಂತೆ ಹೊರ ಬಂದು ನುಡಿದ "ನಮ್ಮ ಸಮಸ್ತ ವಿಚಾರವೂ ನನಗೆ ಸೇರಿದ್ದು. ನೀವದನ್ನು ಹೊರುವ ಅವಶ್ಯಕತೆಯಿಲ್ಲ. ಇದೇ ಕೊನೆ! ಇನ್ನು ನೀವು ಈ ತಂಟೆ ತಗಾದೆ ಮಾಡಿದರೆ ನಾನು ಸಹಿಸುವುದಿಲ್ಲ!" ರವಿ ಉಗ್ರನಾಗಿದ್ದ. ಅವನು ಈ ರೀತಿ ಅಂದಾನೆಂದು ಎಣಿಸದ ರಾಜಣ್ಣ ಸರಕ್ಕನೆ ಆನಂದನ ಮನೆಯೊಳಗೆ ಸೇರಿಕೊಂಡ. ಕ್ಷಣಕಾಲ ಯೋಚಿಸಿ ಪುನಃ ಹೊರ ಬಂದು ರಾಜಣ್ಣ ಏರಿದ ದನಿಯಲ್ಲಿ ಒದರಿದ "ಇನ್ನು ನೀನುಂಟು ನಿಮ್ಮಮ್ಮ ಉಂಟು. ಇನ್ನು ನಮಗೂ ನಿಮಗೂ ಯಾವ ಸಂಬಂಧವೂ ಇಲ್ಲ!"

ಹಿಂದೆಯೆ ರವಿಯ ಉತ್ತರವೂ ಮೊಳಗಿತು "ಒಳ್ಳೆಯದೇ ಆಯ್ತು" ರಾಜಣ್ಣ ಪುನಃ ಒಳಗಡೆ ಸೇರಿಕೊಂಡ. ರವಿ ರಾಯನೊಂದಿಗೆ ಕೊಂಚ ಹೊತ್ತು ಮಾತಾಡಿ ವಿನಯಪೂರ್ವಕವಾಗಿ ಬೀಳ್ಕೊಟ್ಟು ಒಳ ಬಂದ. ತಾಯಿಯ ಮೈಮೇಲೆ ಎದ್ದ ಬಾಸುಂಡೆಗಳನ್ನು ನೋಡಿ ರವಿಯ ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು. ಪುಟ್ಟಮ್ಮ ಎಲ್ಲರನ್ನೂ ಸಂತೈಸಿದಳು. ಆದರೂ ಮಕ್ಕಳ ಕಂಬನಿಯಾರಲಿಲ್ಲ. ಆಗಲೇ ಆರೂವರೆ ಗಂಟೆಯಾಗಿತ್ತು "ಇಂದು ರಾತ್ರಿ ಡ್ಯೂಟಿಗೆ ಹೋಗುವುದು ಹೇಗೆ? ನನ್ನ ಸೆಕ್ಷನ್ನಿನವರಿಬ್ಬರು ರಜೆಯಲ್ಲಿದ್ದಾರೆ." ಎಂದು ಶಿವೆ ಮಗುವಿನಂತೆ ಕೇಳಿದಳು. ಕೈಕಾಲುಗಳ ಮೇಲೆ ಪೆಟ್ಟಿನ ಗುರುತು ಎದ್ದು ಕಾಣುತಿತ್ತು, ಮುಖ ಮ್ಲಾನವಾಗಿತ್ತು. ಈ ಸ್ಥಿತಿಯಲ್ಲಿ ಹೋಗುವುದು ಹೇಗೆಂಬ ಯೋಚನೆ ಸಹಜವಾಗಿ ಮೂಡಿತು.

"ಹೋಗಿ ರಜೆ ತೆಗೆದುಕೊಂಡು ಬರಲೇ?" ರವಿ ಕೇಳಿದ.

"ಅದೇ ಉತ್ತಮವೆಂದು ತೋರುತ್ತದೆ" ನುಡಿದಳು ಪುಟ್ಟಮ್ಮ.

"ಈಗಾಗಲೇ ಇಬ್ಬರು ರಜೆಯಲ್ಲಿದ್ದಾರೆ. ಕೊನೆ ಗಳಿಗೆಯಲ್ಲಿ ಕಾರಣ ವಿಲ್ಲದೆ ರಜೆ ತೆಗೆದುಕೊಳ್ಳುವುದು ಹೇಗೆ? ರಾತ್ರಿಯ ಡ್ಯೂಟಿ ತಪ್ಪಿಸಿಕೊಳ್ಳು ವುದೇ?" ಎನ್ನುತ್ತ ಶಿವೆ ಗಳಗಳನೆ ಅತ್ತಳು.

ಶಿವೆಯನ್ನು ನೇಹದಿಂದ ಸಂತೈಸಿದಳು ಪುಟ್ಟಮ್ಮ "ನನ್ನ ಬಳಿ ತುಂಬು ತೋಳಿನ ರವಿಕೆಯಿದೆ. ಅದನ್ನು ತೊಟ್ಟುಕೊಂಡು ಹೋದರೆ ಪೆಟ್ಟಿನ ಗುರುತು ಕಾಣಿಸುವುದಿಲ್ಲ."

ಪುಟ್ಟಮ್ಮನ ಸಮಯೋಚಿತ ಸಲಹೆಗೆ ಶಿವೆ ಒಪ್ಪಿಕೊಂಡಳು. ಪುಟ್ಟಮ್ಮ

ತಂದುಕೊಟ್ಟ ರವಿಕೆಯುನ್ನು ತೊಟ್ಟು ಅಣಿಯಾಗುವಾಗ ಕಂಬನಿಯು ಕಾಲುವೆ ಹರಿಯುತಿತ್ತು. ರವಿ ಬಟ್ಟೆಗಳನ್ನು ಇಸ್ತ್ರಿಮಾಡುವಾಗ ಸರಸು ಊಟಕ್ಕೆ ಅಣಿ ಮಾಡಿದಳು. ಆದರೆ, ತುತ್ತು ಗಂಟಲಲ್ಲಿ ಇಳಿಯಬೇಕೇ? ಶಿವೆ ಬಹು ಕಷ್ಟದಿಂದ ನಾಲ್ಕು ತುತ್ತು ನುಂಗಿದಳು. ಅಷ್ಟರಲ್ಲಿ ತಂಗಮ್ಮನೂ ಅಲ್ಲಿಗೆ ಬಂದಳು. ರವಿ ಒಂದು ಟಾಂಗಾ ಗಾಡಿಯುನ್ನು ತಂದು ಹೇಳಿದ "ಅಮ್ಮಾ ಹತ್ತಿರಿ. ನಾನೇ ನಿಮ್ಮನ್ನು ಬಿಟ್ಟು ಬರುವೆ." ವಿಮಲೆ ತಾಯಿಯುನ್ನು ಅಪ್ಪಿಕೊಂಡು ಮುಸು ಮುಸು ಅತ್ತಳು.

ಮಕ್ಕಳು ಬಹು ಕಷ್ಟದಿಂದ ತಾಯಿಯುನ್ನು ಬೀಳ್ಕೊಟ್ಟರು. ಮನೆಯಲ್ಲಿ ಇದ್ದು ಸ್ತಬ್ಧನಾಗಿ ಎಲ್ಲವನ್ನೂ ಅವಲೋಕಿಸಿದ ರಾಜಣ್ಣನಿಗೆ ಪುನಃ ರವಿಯು ಮುಂದೆ ಸೊಲ್ಲೆತ್ತಲು ಮನಸ್ಸಾಗಲಿಲ್ಲ.

೨೦

ಬೆಳಿಗ್ಗೆ ಲವಲವಿಕೆಯಿಂದಿದ್ದ ಶಿವಮ್ಮ ಈಗ ಅಪೂರ್ವ ಬದಲಾವಣೆಯಾದುದನ್ನು ತಂಗಮ್ಮ ಗಮನಿಸದಿರಲಿಲ್ಲ. ಏನೆಂದು ವಿಚಾರಿಸಿದಾಗ ಮೈ ಚೆನ್ನಾಗಿಲ್ಲವೆಂದು ಹೇಳಿದಳು ಶಿವೆ. ಮುಖದ ಬದಲಾವಣೆ ನಿಜವಾಗಿಯೂ ಜ್ವರ ಬಂದಿತ್ತೇನೋ ಎಂಬಂತೆ ತೋರುತಿತ್ತು. ಮನೋವ್ಯಥೆಯನ್ನು ತೋರಗೊಡದಂತೆ ಹುದುಗಿಡಲು ಸರ್ವ ಪ್ರಯತ್ನ ಪಟ್ಟಳಾಮಡದಿ. ಟಾಂಗಾ ಗಾಡಿಯು ಸ್ವಲ್ಪ ಹೊತ್ತಿನೊಳಗಾಗಿ ಆಸ್ಪತ್ರೆಯ ಆವರಣಕ್ಕೆ ಬಂದಿತು. ಶಿವೆ ತಂಗಮ್ಮನೊಂದಿಗೆ ಆಸ್ಪತ್ರೆಯನ್ನು ಹೊಕ್ಕಳು. ರವಿ ತಂಗಮ್ಮನಿಗಾಗಿ ಕಾಯುತ್ತ ಹೊರಗಡೆ ನಿಂತ. ತಂಗಮ್ಮ ಚಂದ್ರಮೌಳಿಗೆ ಆಹಾರವನ್ನಿತ್ತು ಶಿವಮ್ಮನಿಗೆ ಮತ್ತೊಮ್ಮೆ ಹೇಳಿಕೊಂಡು ರವಿಯೊಂದಿಗೆ ಟಾಂಗಾದಲ್ಲಿ ಹಿಂದಿರುಗಿದಳು.

ಶಿವೆ ತನ್ನನ್ನು ತಾನೇ ಸಾವರಿಸಿಕೊಂಡು ಕೆಲಸದಲ್ಲಿ ಮಗ್ನಳಾದಳು. ಹಗಲಿನಲ್ಲಿ ಕೆಲಸ ಮಾಡಿದಾಕೆ ಶಿವೆಯನ್ನು ಕಂಡೊಡನೆ ಭುಜದ ಮೇಲೆ ಕೈಯಿಟ್ಟು ಕೇಳಿದಳು "ಏಕೆ ಹೀಗಿದ್ದೀಯೆ? ಮೈ ಚೆನ್ನಾಗಿಲ್ಲವೇ?"

"ಹೌದು ಕಮಲೂ, ಮೈ ಕೈ ನೋವು; ಏನೋ ಒಂದು ಬಗೆಯಾಗಿದೆ."

"ಔಷಧಿ ತೆಗೆದುಕೊಂಡೆಯಾ?"

"ಹ್ಞೂ: ಮನೆಯಲ್ಲಿ ತೆಗೆದುಕೊಂಡೆ."

"ಡಾಕ್ಟರ ಬಳಿಗೆ ಹೋಗೋಣವೇ?" ಎನ್ನುತ್ತ ಕಮಲು ಹಣೆಮುಟ್ಟಿ ನೋಡಿದಳು, ತಣ್ಣಗಿತ್ತು.

"ಆಗಲೇ ಔಷಧ ತೆಗೆದುಕೊಂಡಿದ್ದೇನೆ ಮತ್ತೇಕೆ ಡಾಕ್ಟರ ಬಳಿಗೆ?"

"ನೀನಿಂದು ರಜೆ ತೆಗೆದಕೊಳ್ಳಬಹುದಾಗಿತ್ತು. ಏನೋ ಒಂದು ಬಗೆಯಾಗಿದ್ದಿ."

"ನಮ್ಮವರಿಬ್ಬರೂ ರಜೆ ತೆಗೆದುಕೊಂಡುದುದರಿಂದ ಸುಮ್ಮನಾದೆ."

ಜೊತೆಗಾತಿಯು ಕೆಲಸವನ್ನು ವಹಿಸಿಕೊಡಲು ಶಿವೆಯನ್ನು ವಾರ್ಡ

ಗಳತ್ತ ಕರೆದೊಯ್ದಳು. ಅದೇ ತಾನೇ ಸೇರಿಸಿದ್ದ ತರುಣಿಯೊಬ್ಬಳು ಪ್ರಜ್ಞಾವಿಹೀನಳಾಗಿದ್ದಾಳೆ. ಮೈ ಕೈ ಅಲ್ಲಲ್ಲಿ ಪಟ್ಟಿಗಳಿಂದ ಸುತ್ತಲ್ಪಟ್ಟು ಪೆಟ್ಟಾದ ಸ್ಥಿತಿಯನ್ನು ತೋರಿಸುತಿತ್ತು. ತಲೆಯ ಮೇಲೂ ಒಂದು ಪಟ್ಟಿಯು ಸುತ್ತುವರಿಯಲ್ಪಟ್ಟಿತ್ತು. ಕೆಂಪು ಹೊದ್ದಿಕೆಯಡಿ ಬಳಲಿ ಮಲಗಿದ್ದ ರೀತಿ ಕರುಣಾಜನಕವಾಗಿತ್ತು. ಶಿವೆ ನೋಡಲಾಗದೆ ನೋಟವನ್ನು ಬೇರೆಡೆಗೆ ತಿರುಗಿಸಿದಳು. ಮಧ್ಯ ವಯಸ್ಸಿನ ಸ್ತ್ರೀಯೊಬ್ಬಳು ಬಳಿಯಲ್ಲಿ ಕಂಬನಿಗರೆಯುತ್ತಿದ್ದುದು ಕಣ್ಣಿಗೆ ಬಿತ್ತು.

"ಶಿವೇ, ಇವಳಿಗಿನ್ನೂ ಪ್ರಜ್ಞೆ ಬಂದಿಲ್ಲ. ಸ್ಥಿತಿ ತೀವ್ರವಾಗಿದೆ. ರಾತ್ರಿ ಜಾಗರೂಕತೆಯಿಂದ ನೋಡಿಕೊಳ್ಳಬೇಕೆಂದು ಡಾಕ್ಟರು ಹೇಳಿದ್ದಾರೆ. ಆಗಾಗ್ಗೆ ನೋಡಿಕೊಳ್ಳುತ್ತಿರು." ಎಂದ ಕಮಲು ನಾಡಿಯನ್ನೊಮ್ಮೆ ಪರೀಕ್ಷಿಸಿದಳು. ಬಳಿಯಲ್ಲಿದ್ದ ನತದೃಷ್ಟ ತಾಯಿಯನ್ನು ನೋಡಿ ಇಬ್ಬರೂ ಆಕೆಯ ಬಳಿ ಹೋಗಿ ಸ್ವಲ್ಪ ಸಮಾಧಾನ ಹೇಳಿದರು. ಆದರೆ ಹೆತ್ತೊಡಲ ದುಃಖ ಶಮನವಾಗುವುದಾದರೂ ಎಂತು? ಮೆಲ್ಲನೆ ಅಲ್ಲಿಂದ ಕಾಲ್ತೆಗೆದರು. ಸ್ವಲ್ಪ ದೂರ ಹೋದ ನಂತರ ಕಮಲೆಯನ್ನು ಶಿವೆ ಪರಿತಾಪದಿಂದ ಕೇಳಿದಳು,

"ಪಾಪ. ಹೇಗೆ ಪೆಟ್ಟಾಯ್ತು?"

"ನೋಡು, ಅವಳ ಗಂಡನೇ ಹೊಡೆದು ಬಡಿದು ಹಿಂಸೆಮಾಡಿದ್ದಾನೆ. ತಲೆಯ ಮೇಲಿನ ಪೆಟ್ಟೇ ಮೂರ್ಛೆಗೆ ಕಾರಣ ಆತನನ್ನು ಠಾಣೆಗೆ ತೆಗೆದುಕೊಂಡು ಹೋಗಿದ್ದಾರೆ. ಐದು ತಿಂಗಳ ಮಗುವೊಂದಿದೆಯಂತೆ. ಮದುವೆಯಾದಾಗಿನಿಂದ ಬಹಳ ಹಿಂಸೆ ಪಡಿಸಿದ್ದಾನೆಂದು ತಾಯಿ ಹೇಳುತ್ತಾರೆ. ಅವರ ದುಃಖ ಹೇಳತೀರದು ಎಷ್ಟಾದರೂ ಹೆತ್ತ ಕರುಳು."

"ಶಿವ, ಶಿವಾ!" ಎಂದಳು ಶಿವೆ. ಮನದಳಲು ಮುಖದಲ್ಲಿ ಅಚ್ಚೊತ್ತಿತು. ನಿಟ್ಟುಸಿರೊಂದು ಹೊರಹೊಮ್ಮಿತು. ಸ್ವಲ್ಪ ಹೊತ್ತು ಹಾಗೇ ಯೋಚಿಸಿದಳು. ಜ್ಞಾನವನ್ನು ಬೆಳಗಿಸಿಕೊಳ್ಳದ ಜನರ ವ್ಯವಹಾರವಿದು. ಬೇರೆ ಏನಿಲ್ಲವಾದರೂ ಮನುಷ್ಯ ತನ್ನ ಆತ್ಮೋದ್ಧಾರಕ್ಕಾದರೂ ಶ್ರಮಿಸಬೇಕು. ಆತ್ಮೋನ್ನತಿಯ ಮೂಲಕವಲ್ಲದೆ ಯಾರೊಬ್ಬನೂ ತನ್ನ ಪ್ರಗತಿಯನ್ನು ಹೊಂದಲಾರ. ಹಣದಿಂದ, ಒಡವೆ ವಸ್ತುಗಳಿಂದ, ಬಟ್ಟೆಬರೆಗಳಿಂದ ಜ್ಞಾನೋದಯವಾದೀತೇ? ಹಣದ ಶ್ರೀಮಂತಿಕೆಗಿಂತ ಜ್ಞಾನದ ಶ್ರೀಮಂತಿಕೆಯೇ ಮೇಲು,

ಅದನ್ನು ಮನುಷ್ಯರಾಗಿಯೂ ಅರಿತುಕೊಳ್ಳಕೂಡದೇ? ... ಅಂತರಾತ್ಮ ನುಡಿದೊಡನೆ ಮೈ ಜುಂ ಎಂದು ದೇಹ ಸಮಸ್ತವೂ ಥರಥರನೆ ಕುಪಿಸಿತು. ಮೆಲ್ಲನೆ ತಲೆ ತಿರುಗಿ ಬಂದಂತೆ ಭಾಸವಾಯಿತು. ಶಿವೆ ಕಮಲೆಯ ಭುಜದ ಮೇಲೆ ಕೈಯಿಟ್ಟು ಅಲ್ಲಿಂದ ಮೆಲ್ಲನೆ ಕಾಲ್ತೆಗೆದಳು.

ಎರಡನೆಯ ಹಾಸಿಗೆಯಲ್ಲಿ ವಾಹನವೊಂದಕ್ಕೆ ಸಿಕ್ಕಿ ಜರ್ಜರಿತವಾದ ದೇಹ. ಗಾಯದ ಪಟ್ಟಿಗಳಿಂದ ಸುತ್ತುವರಿಯಲ್ಪಟ್ಟು ಪ್ರಜ್ಞಾವಿಹೀನಳಾಗಿ ಮಲಗಿದ್ದ ಕುಸುಮ ಕೋಮಲ ಬಾಲಕಿ. ಅಲ್ಲಿಯೂ ಸಹ ದಾದಿಯು ಔಷಧೋಪಚಾರಗಳ ವಿಷಯವಾಗಿ ಸೂಕ್ತ ಸಲಹೆಗಳನ್ನಿತ್ತಳು. ಮಗು ಹುಚ್ಚುಚ್ಚಾಗಿ ಕನಲುತ್ತಿದ್ದ ರೀತಿ ಕರುಳು ಕಿತ್ತು ಬರುವಂತಿತ್ತು. ಕುಟುಂಬಿಗರು ಮಗುವಿನ ಸುತ್ತುವರಿದು ನೆರೆದಿದ್ದರು. ಎಲ್ಲರ ಕಣ್ಣುಗಳಲ್ಲಿ ಕಂಬನಿಯು ಹುಚ್ಚೆದ್ದು ಹರಿಯುತ್ತಿತ್ತು. ಶಿವೆ ದೇವರನ್ನು ನೆನೆದು ನೋವನ್ನಾದರೂ ಪರಿಹರಿಸು ಎಂದು ಬೇಡಿಕೊಂಡಳು. ಹೃದಯ ಹೆಗ್ಗಲ್ಲು ಹೊತ್ತಂತೆ ಭಾರವಾಗಿತ್ತು. ಎದೆ ತಿದಿಯಂತೆ ಏರಿಳಿಯುತಿತ್ತು.

ಅಲ್ಲಿಂದ ಪಕ್ಕದ ವಾರ್ಡಿಗೆ ಹೋದರು. ಮೊದಲಿನ ಹಾಸಿಗೆಯಲ್ಲಿ ತೋಳು ಮುರಿದ ಬಾಲಕಿ. ಎರಡನೆಯದರಲ್ಲಿ ಬೆ ಗ್ಗೆ ಬಂದು ಸೇರಿದ್ದ ಹಣ್ಣು ಹಣ್ಣು ಮುದುಕಿ; ಜಾರಿ ಬಿದ್ದು ಸೊಂಟದೆಲುಬು ಮುರಿದು ನರಳುವ ರೀತಿ ಹೃದಯವನ್ನು ಹಿಂಡುವಂತಿತ್ತು. ಶಿವೆಯ ಕಣ್ಣುಗಳು ಹನಿತುವು. ಅದನ್ನು ತೋರಗೊಡದಂತೆ ಅತ್ತ ತಿರುಗಿ ಒರಸಿಕೊಂಡು ಓರಗೆಯ ದಾದಿಯೊಂದಿಗೆ ಮೆಲ್ಲನೆ ಮುಂದೆ ಸಾಗಿದಳು. ಒಂದೇ, ಎರಡೇ ಸಾಲುಸಾಲಾದ ಹತ್ತಿಪ್ಪತ್ತು ಮಂಚಗಳಲ್ಲಿ ನಾನಾ ವಿಧವಾದ ಗಾಯಾಳುಗಳು ನರಳುವ ದೃಶ್ಯ ಕರುಣಾಜನಕವಾಗಿತ್ತು. ಶಿವೆ ಹಾಗೇ ಯೋಚಿಸಿದಳು_ .... ಈ ಎಲ್ಲರ ಮುಂದೆ ನನ್ನ ಪಾಡು ಅತ್ಯಲ್ಪ. ಇವರ ಕಷ್ಟಗಳನ್ನು ನೋಡಿ ನಮ್ಮ ಕಷ್ಟಗಳನ್ನು ಮರೆಯಬೇಕು. ಇವರ ಶುಶ್ರೂಷೆಯನ್ನು ಮಾಡುವುದಕ್ಕಿಂತ ಇನ್ನು ಹೆಚ್ಚಿನ ಸೇವೆಯುಂಟೇ? ಭಗವಂತನ ಸನ್ನಿಧಿಯಲ್ಲಿ ಎಲ್ಲರೂ ಮಕ್ಕಳೇ, ಎಲ್ಲರೂ ಅಣ್ಣ ತಮ್ಮಂದಿರೇ ಒಬ್ಬರನ್ನೊಬ್ಬರು ಪ್ರೀತಿಸುವುದಕ್ಕಿಂತ ಮಿಗಿಲಾದ ಗುಣವುಂಟೇ? ಈ ಜೀವನ ಎಷ್ಟು ನೋವಿನಿಂದ ಕೂಡಿದೆ. ಈ ಪ್ರಪಂಚದಲ್ಲಿ ಯಾರು ಸುಖಿ? ಎಲ್ಲರ ಬಾಳಿನಲ್ಲೂ

ಕಷ್ಟ ಪರಂಪರೆಗಳಿದ್ದೇ ಇವೆ. ಕ್ಷಣಿಕವೂ ಪಾಪಪೂರಿತವೂ ಆದ ಈ ಬಾಳಿನ ಕಲ್ಮಷವನ್ನು ತೊಡೆಯಲು ಭಗವಂತನನ್ನು ಮರೆಹೋಗುವುದೊಂದೇ ದಾರಿ. ಪಾರಮಾರ್ಥಿಕವಾಗಿ ಚಿಂತನೆ ಮಾಡದ ಹೊರತು ಈ ಜನ್ಮ ಸಾಫಲ್ಯವಾಗಲಾರದು. ಬಾಳು ಪುನೀತವಾಗಲಾರದು...ಅಂತರ್ವಾಣಿ ಸಾವಧಾನದಿಂದ ಹೊರಹೊಮ್ಮಿತು. ಭಾರವಾದ ದೇಹವನ್ನು ಹೊರಲಾರದೆ ಹೊತ್ತು ಹೆಜ್ಜೆಯನ್ನೆಳೆದುಕೊಳ್ಳುತ್ತ ಪಕ್ಕದ ವಾರ್ಡಿಗೆ ಹೋದಳು ಶಿವೆ. ಜೊತೆಗಾತಿಯು ಒಂದೊಂದಾಗಿ ವಿವರಣೆ ಕೊಡುತಿದ್ದಾಗ ಯಾಂತ್ರಿಕವಾಗಿ 'ಹ್ಞೂ' ಎನ್ನುತಿದ್ದಳು.

ಇನ್ನಷ್ಟು ಹೊತ್ತಿನೊಳಗಾಗಿ ಹಗಲಿದ್ದ ದಾದಿಯು ಹೊರಟು ಹೋದಳು. ರಾತ್ರೆಯಲ್ಲಿ ಜೊತೆಗೆ ಇರಬೇಕಾಗಿದ್ದ ದಾದಿಯು ರಜೆಯಲ್ಲಿದ್ದು ಬದುಲಿಗೆ ಬರಬೇಕಾಗಿದ್ದವಳು ಇನ್ನೂ ಬಂದಿರಲಿಲ್ಲ. ಮನಸದ ಆಂದೋಳನದಲ್ಲಿ ರಿಜಿಸ್ಟರಿನಲ್ಲಿ ಸಹಿ ಹಾಕುವುದೂ ಮರೆತು ಹೋಗಿತ್ತು. ಶಿವೆ ಹೋಗಿ ಸಹಿ ಹಾಕಿ ಬಂದಳು.

ಚಂದ್ರಮನಿಲ್ಲದ ಇರುಳ ವಾತಾವರಣ ಸೌಮ್ಯವಾಗಿತ್ತು. ತಣ್ಣನೆಯ ತಂಗಾಳಿಯು ಒಯ್ಯೊಯ್ಯನೆ ತೀಡಿ ಬರುತಿತ್ತು. ಜಗಲಿಯ ಮೇಲೆ ನಿಂತು ಆಕಾಶದೆಡೆಗೆ ದಿಟ್ಟಿಯನ್ನು ಅಟ್ಟಿ ಸ್ವಲ್ಪ ಹೊತ್ತು ನೋಡುತ್ತ ನಿಂತಳು ಶಿವೆ. ಅನಂತಾನಂತ ನೀಲಾಕಾಶ; ನಕ್ಷತ್ರ ಖಚಿತವಾದ ಮಧುರ ರಾತ್ರಿ; ಈ ಮಾಧುರ್ಯದಲ್ಲಿಯೂ ಅದೆಂತಹ ಭೀಷಣವಡಗಿದೆ! ಬೀಸಿ ಬರುವ ತಂಗಾಳಿಯೇ ಮೃತ್ಯುವನ್ನು ತಂದಿಲ್ಲವೇ ? ಈ ಮಧುರ ರಾತ್ರಿಯಲ್ಲಿ ಅಸುವನ್ನು ನೀಗಿದವರೆಷ್ಟೋ ? ಹೊಡೆತ ಬಡಿತದಿಂದಾದ ಜರ್ಜರಿತ ಶರೀರದಿಂದ ಮಲಗಿರಬಹುದಾದ ಹತಭಾಗಿಯರಿನ್ನೆಷ್ಟೋ ? ಪಾಶವೀ ಬಲದಿಂದ ಮೈಸೋತು ಮೈತೆತ್ತ ಅಬಲೆಯರಿನ್ನೆಷ್ಟೋ ? ಶಿವ, ಶಿವಾ ! ಈ ಪಾಪ ಪೂರಿತ ಪ್ರಪಂಚದಲ್ಲಿ ಪಾಪಹಸ್ತಗಳ ಸ್ಪರ್ಶವನ್ನೇ ಕಂಡರಿಯದ ಸ್ವಚ್ಛ ಶಿಶು ಸುಮಗಳ ಅವತಾರವಿನ್ನೆಷ್ಟೋ ? ಹೇಳಬಲ್ಲವರಾರು ? ಭಗವಂತನ ಕೃಪೆಯಲ್ಲಿಯೂ ಪಾಪಕೂಪವಡಗಿದೆಯೇ ? ಯೋಚನೆ ಬಂದಾಗ ಮೈ ಚಿಲ್ಲನೆ ನಡುಗಿತು. ಹಾ, ವಿಧಿ ! ಯೋಚನೆಯ ರೈಲೋಟ ಒಮ್ಮೆಲೇ ಕುಂಠಿತವಾಯಿತು. ಹಾಗೇ ಸ್ತಂಭೀಭೂತಳಾಗಿ ನಿಂತಿದ್ದಾಳೆ. ನಿಮಿಷ ನಿಮಿಷಗಳು ಮೆಲ್ಲನುರುಳಿ

ದುವು. ಚಿರಪರಿಚಿತವಾದ ದನಿಯೊಂದು "ಶಿವೇ" ಎಂದಿತಲ್ಲವೇ ? ಅದೆತ್ತಣಿಂದ ಬಂತು ? ಶಿವೆ ಕಾಳಗಪ್ಪಿನತ್ತ ದಿಟ್ಟಿಯನ್ನು ಚೆಲ್ಲಿಗೊಟ್ಟು ಆಲೈಸಿದಳಾದರೂ ಒಮ್ಮೆಲೆ ಬಗೆ ಹರಿಯದು. ಪುನಃ ಆಲೈಸಿದಳು. ಆಸ್ಪತ್ರೆಯ ಆವರಣದಲ್ಲಿ ಅದರಲ್ಲೂ ಬಿಳಿಯುಡಿಗೆಯಲ್ಲಿ ಸ್ವಾಮಿಯ ಕಣ್ಣಿಗೆ ಬಿದ್ದೆನೆ ? ಇನ್ನೇನು ಗತಿ ? ಈಗ ಆಗಿರುವ ಪ್ರಮಾದವೇ ಸಾಕು.

ಪುನಃ ಅದೇ ದನಿ !

ಶಿವೆ ಎರಡೂ ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡಳು. ಒಂದೆರಡು ಗಳಿಗೆಗಳುರುಳಿದುವು ಅದು ಸ್ವಾಮಿಯ ದನಿಯೇ ಹೌದು ! ಏನೇ ಬರಲಿ, ಅದು ಸತ್ಯವಾಗಿರಲಿ, ಎಂದು ಮನದಲ್ಲಿ ಪ್ರಾರ್ಥಿಸಿಕೊಂಡಳು. ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡ ಶಿವೆ ಸ್ವಲ್ಪ ಹೊತ್ತು ಅಲುಗದೆ ಪ್ರಾರ್ಥನಾರೂಢಳಾಗಿ ಶಿಲಾ ರಮಣಿಯಂತೆ ನಿಂತು ಬಿಟ್ಟಳು. ಭುಜದ ಮೇಲೆ ಭಾರವಾದಂತಾಗಲು ಬೆಚ್ಚಿ ಮುಖದಿಂದ ಕೈತೆಗೆದು ಆ ಕಡೆ ಸರಕ್ಕನೆ ತಿರುಗಿದಳು. ಬಳಿಯಲ್ಲಿ ನಿಂತು ಭುಜದ ಮೇಲೆ ಕೈಯಿಟ್ಟವರು ಸ್ವಾಮಿಯಲ್ಲ. ಮೆಟ್ರೇನಳಾದ ಎಲಿಜಬೆತ್. ದಯೆಯೇ ಮೂರ್ತಿಯೆತ್ತಿ ಬಂದಂತೆ ಸೌಮ್ಯರೂಪಿಣಿ. ಮಲ್ಲಿಗೆಯನ್ನಣಕಿಸುವ ಅಂಗಕಾಂತಿ ; ಶುಭ್ರಧವಳ ವಸ್ತ್ರಧಾರಿಣಿ : ಅಪ್ಸರೆಯೋಪಾದಿಯಲ್ಲಿ ಆ ಕ್ಷಣ ಮೈದೋರಿದ್ದಾಳೆ.

"ಶಿವೇ" ಎಷ್ಟೊಂದು ಸುಮಧುರವಾಗಿತ್ತು ಆ ಕರೆ.

"ಆ್ಞ" ಎಂದವಳೇ ಮಿಡುಕಿ ಬಿದ್ದು "ನಮಸ್ಕಾರ" ಎಂದಳು ಶಿವೆ.

"ಏಕೆ ಹಾಗೆ ನಿಂತಿದ್ದೀ ಮಗೂ ?"

"ಏನೋ ಯೋಚನೆ ಬಂತು."

"ಯೋಚಿಸಬಾರದು ತಂಗೀ."

ಅದು ನನ್ನ ಹತೋಟಿಯನ್ನು ಮೀರಿದ."

"ಶಿವೇ, ನಿನಗಾಗಿ ನಾನು ದೇವರಲ್ಲಿ ಬೇಡುವೆ."

"ನಾನು ನಿಮಗೆ ಎಂದೆಂದೂ ಚಿರಋಣಿ" ಮಾತು ಮುಗಿಯುವಷ್ಟರಲ್ಲಿ ದುಃಖವುಕ್ಕಿ ಬಂದು ಕಂಠವು ಗದ್ಗದವಾಗಿತ್ತು. ಎಲಿಜಬೆತ್ತಳು ಶಿವೆಯ ಮೈದಡವಿ ಪ್ರೀತಿಯಿಂದ ಹೇಳಿದಳು "ಶಿವೆ, ಕಷ್ಟಸುಖಗಳಿಲ್ಲದೆ ಬಾಳಿಲ್ಲ. ಈಗ ಕಷ್ಟಕೊಟ್ಟ ದೇವರು ಮುಂದೆ ಸುಖ ಕೊಡುತ್ತಾನೆಂಬ ನೆಚ್ಚಿರಬೇಕು."

ಆ ಮಾತಿನಲ್ಲಿ ಎಷ್ಟೊಂದು ಒಲುಮೆಯಿತ್ತು ? ಪ್ರಯತ್ನಿಸಿದರೂ ಶಿವೆಯ ಬಾಯಿಂದ ಮಾತು ಹೊರಡಲಿಲ್ಲ. ತಲೆ ತಗ್ಗಿಸಿ ನಿಂತಳು. ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು.

"ಶಿವೆ, ಚಿಂತೆಯೇ ಚಿತೆಯಾಗಿ ಪರಿಣಮಿಸುತ್ತದೆ. ಈ ಮನೋದೌರ್ಬಲ್ಯವೇ ಸರ್ವ ದುಃಖಕ್ಕೂ ಕಾರಣ. ಭಗವಂತನಾಶ್ರಯದಲ್ಲಿ ನಿನ್ನ ಬಾಳು ತುಂಬಿ ಬರುವುದೆಂಬ ನೆಚ್ಚಿರಲಿ. ಮನಶ್ಶಾಂತಿಗಾಗಿ ದೇವರನ್ನು ಪ್ರಾರ್ಥಿಸು." ಎಲಿಜಬೆತಳ ಅಸೀಮ ಪ್ರೇಮ, ಶಿವೆಯನ್ನು ಮಂತ್ರಮುಗ್ಧಳನ್ನಾಗಿ ಮಾಡಿತು.

"ನಿಮ್ಮ ದಯೆ ಅಪಾರವಾದುದು. ದೇವರು ನಿಮ್ಮನ್ನು ಚೆನ್ನಾಗಿಟ್ಟಿರಲಿ." ಏನೆನ್ನಬೇಕೋ ಹೊಳೆಯದಿದ್ದರೂ ಸಾವರಿಸಿಕೊಂಡು ಹೇಗೋ ಹಾಗೆ ಔಪಚಾರಿಕವಾಗಿ ನುಡಿದಿದ್ದಳು ಶಿವೆ. ದುಃಖದುಬ್ಬರದಿಂದ ಹೃದಯ ದಣಿದಿತ್ತು. ದೇಹದ ಭಾರವನ್ನು ಹೊರಲಾರದೆ ಹೊತ್ತ ಕಾಲುಗಳು ಬಳುಕಿದುವು.

"ತಂಗೀ, ನಿನಗೆ ಮೈ ಸ್ವಸ್ಥವಿಲ್ಲವೆಂದು ತೋರುತ್ತೆ. ಇಂದೇ ಅವರಿಬ್ಬರೂ ಇಲ್ಲವಾಗಿದ್ದಾರೆ. ಮೂರನೆಯ ವಾರ್ಡಿನಿಂದ ಇನ್ನೊಬ್ಬಾಕೆಯನ್ನು ಕಳುಹಿಸಿಕೊಡುವೆ" ಎಂದ ಎಲಿಜಬೆತ್ ಪುನಃ ಕೇಳಿದಳು "ಔಷಧಿ ತೆಗೆದುಕೊಳ್ಳುವೆಯಾ ?"

"ಆಗಲೇ ತೆಗೆದುಕೊಂಡೆ."

ಎಲಿಜಬೆತಳು ಹೊರಟು ಹೋದೊಡನೆ ಶಿವೆ ತನ್ನ ಕೆಲಸಕ್ಕೆ ಗಮನ ಕೊಟ್ಟಳು. ಅಗಾದವೇದನೆಗೊಳಪಟ್ಟ ಮನಸ್ಸು ತಳಮಳಿಸುತಿತ್ತು. ಬೇಡ ಬೇಡವೆಂದರೂ ಕಣ್ಣಂಚಿನಲ್ಲಿ ಹನಿ ಮೂಡಿತು. ಆಗ—ಆಗ—ಅಂತರಾತ್ಮ ಸಾವಧಾನದಿಂದ ನುಡಿಯಿತು "ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆಯೊಂದೆಮಗಿರಲಿ ಎಂದು ದಾಸರು ಹಾಡಿರುವುದನ್ನು ಮರೆತು ಬಿಡುವುದೇ?"

"ಹೌದು, ಹಾಗೆಂದು ಶತಶತಮಾನಗಳ ಹಿಂದೆ ದಾಸರು ಹಾಡಿದ್ದಾರೆ. ಅನುಭವೋಕ್ತಿ."

ಹೃದಯಮೇಘವರ್ಷಿತ ಶೈತ್ಯವಾರಿಯಿಂದ ದುಃಖಜ್ವಾಲೆ ನಂದಿ ಹೋಯಿತು. ಶಿವೆ ಯೋಚನೆ-ದುಃಖ-ಪರಿತಾಪಗಳನ್ನು ಬದಿಗಿಟ್ಟು ತನ್ನ ದಿನಚರಿಯನ್ನು ಮುಂದುವರಿಸಿದಳು.

ಗಗನಾಂಗಣದಲ್ಲಿ ಚುಕ್ಕಿಗಳು ಉಜ್ವಲವಾಗಿ ಬೆಳಗುತಿದ್ದುವು.

೨೮

ಇಂದು ರಾಮಣ್ಣನ ಮನೆಯಲ್ಲಿ ವಿಶೇಷ. ಸಾವಿತ್ರಿಗೆ ಪುತ್ರೋತ್ಸವವಾಗಿ ಹನ್ನೊಂದನೆಯ ದಿನ. ನಾಮಕರಣದ ಅಂಗವಾಗಿ ಬಹುಮಂದಿ ಹತ್ತಿರದವರು ನೆರೆದಿದ್ದಾರೆ. ನೀಲಮ್ಮ ಹೊತ್ತಿಗೆ ಮುಂಚೆಯೇ ಬಂದು ಕೆಲಸ ಕಾರ್ಯಗಳಲ್ಲಿ ನೆರವಾಗಿದ್ದಳು. ಕೊನೆಯ ಮಗು 'ಶಿವು' ಪುಟ್ಟ ಪುಟ್ಟ ಹೆಜ್ಜೆಗಳನ್ನಿಟ್ಟು ಮನೆ ತುಂಬಾ ಓಡಾಡಲು ಶಕ್ತನಾಗಿದ್ದು ಕೈಗೆ ಸಿಕ್ಕಿದುದನೆಲ್ಲಾ ಚೆಲ್ಲಿಕೊಟ್ಟು ತಂಟೆ ಮಾಡುವುದರಲ್ಲಿ ನಿಸ್ಸೀಮನಾಗಿದ್ದ.

"ಗಂಡು ಮಗುವನ್ನು ಬಯಸಿದ ನೀನು ಗಂಡು ಮಗುವನ್ನೆ ಹೆತ್ತಿದ್ದಿ. ಇನ್ನು ಕೆಲವೇ ದಿನಗಳಲ್ಲಿ ನಿನ್ನ ಉತ್ಸಾಹವೆಲ್ಲಾ ಇಳಿದು ಹೋಗುತ್ತದೆ. ಈ ಗಂಡು ಮಕ್ಕಳ ಪುಂಡಾಟಿಕೆ ತಡೆಯುವುದು ಬಲು ಕಷ್ಟ" ಎಂದಳು ನೀಲಮ್ಮ.

"ಹೋಗಲಿ ಬಿಡಿ ಚಿಕ್ಕಮ್ಮಾ, ಮುಂದಿನ ವರ್ಷ ನಿಮಗೊಂದು ಹೆಣ್ಣು!" ಎಂದಳು ಸಾವಿತ್ರಿ ಕಿಲಕಿಲನೆ ನಗುತ್ತ.

"ಅಯ್ಯೊ, ಶಿವ! ಇರೋ ಮಕ್ಕಳಿಗೆ ಆಯುಸ್ಸಿದ್ದರೆ ಸಾಕು."

ಚಿಕ್ಕವರ ಗೋಷ್ಠಿಯಲ್ಲಿ ವೆಂಕಟೇಶ ಮತ್ತು ಶಂಕರರು ಸೇರಿಕೊಂಡಿದ್ದರೂ ದೊಡ್ಡವರ ಮುಂದೆ ಮುಖ ತೋರಿಸಿಕೊಳ್ಳಲಾರದೆ ಮನೆಯ ಹಿಂಬದಿಯ ಅಂಗಳದಲ್ಲಿ ಕೂಟಕೂಡಿದ್ದರು. ದೊಡ್ಡವರು ಹತ್ತಾರು ಮಂದಿ ಮುಂದಿನ ಜಗಲಿಯ ಮೇಲೆ ಹಾಸಿದ್ದ ಜಮಖಾನೆಯ ಮೇಲೆ ಕುಳಿತುಕೊಂಡು ಮಾತುಕತೆಗಳಲ್ಲಿ ಮಗ್ನರಾಗಿದ್ದರು. ಹೊತ್ತು ನೆತ್ತಿಯ ಮೇಲಕ್ಕೇರುತ್ತಿತ್ತು. ದೂರದ ತಿರುವಿನಲ್ಲಿ ಆನಂದ, ರತ್ನ ಮತ್ತು ಚಂದು ಬರುತ್ತಿದ್ದುದು ಕಾಣಬಂತು. ಹತ್ತಿರ ಬರುತ್ತಲೂ ರಾಜಣ್ಣ "ಇದೇನು ಚಂದೂ, ತುಂಬ ತಡವಾಗಿ ಬಂದಿರಿ? ಬೆಳಗಿನ ಬಸ್ಸು ಸಿಕ್ಕಲಿಲ್ಲವೇ?" ಎಂದ.

"ಬೆಳಗ್ಗೆ ಸ್ವಲ್ಪ ಕೆಲಸವಿದ್ದುದರಿಂದ ಎರಡನೆಯ ಬಸ್ಸಿನಲ್ಲಿ ಹೊರಟೆವು. ಕಾವೇರಿಗೆ ಆರೋಗ್ಯವಿಲ್ಲದೆ ಅವಳನ್ನು ಮೈಸೂರಿನಲ್ಲಿ ಬಿಟ್ಟು ಬಂದಿದ್ದೇನೆ.

ಅವಳಿಗಾಗಿ ಔಷಧಿ ಕೊಳ್ಳುವುದಿತ್ತು; ಅದು ಮುಗಿಸಿ ಹೊರಡುವುದು ಹೊತ್ತಾಯಿತು. ನಾನು ಇಲ್ಲಿಗೆ ಬರುವವನಿದ್ದುದರಿಂದ ಆನಂದನೂ ನನ್ನೊಂದಿಗೆ ಉಳಿದುಕೊಂಡ." ಚಂದು ಅನುನಯದಿಂದ ಕಾರಣವನ್ನು ಮುಂದಿಟ್ಟ.

"ನಿನ್ನ ಹೆಂಡತಿಗೆ ಏನು ತೊಂದರೆ?"

ಅಲ್ಲಿದ್ದ ಅನೇಕರು ಅವನ ಉತ್ತರಕ್ಕಾಗಿ ನಿರೀಕ್ಷಿಸಿದರು.

"ಗರ್ಭಕೋಶದ ತೊಂದರೆಯಂತೆ ಒಂದು ವಾರ ಆಸ್ಪತ್ರೆಯಲ್ಲಿ ಬಿಟ್ಟಿದ್ದೆ. ನಿನ್ನೆ ಸಂಜೆ ಬಿಟ್ಟುಕೊಟ್ಟರು."

"ಈಗ ಎಲ್ಲಿದ್ದಾಳೆ?"

"ಶಿವಮ್ಮನ ಮನೆಯಲ್ಲಿ."

"ಈ ಉತ್ತರದಿಂದ ಅನೇಕರಿಗೆ ಸಮಾಧಾನವಾಗಲಿಲ್ಲ. ರಾಜಣ್ಣ ಮರು ಮಾತಾಡಲಿಲ್ಲ. ರಾಮಣ್ಣ ಅತಿಥಿಗೆ ಸ್ವಾಗತ ನೀಡಿ ಕುಳಿತುಕೊಳ್ಳ ಹೇಳಿದ. ಗದ್ದೆಯಂಚಿನಲ್ಲಿ ನಡೆದು ಕಾಲು ಮಣ್ಣಾಗಿದ್ದುದರಿಂದ ನೀರು ಮನೆಗೆ ಹೋಗಿ ಕೈಕಾಲು ತೊಳೆದುಕೊಂಡು ಬಂದು ಚಂದು "ಬಹಳ ಬಿಸಿಲು, ತಡೆಯುವುದೇ ಕಷ್ಟ" ಎನ್ನುತ್ತ ಮುಖವನ್ನು ಕರವಸ್ತ್ರದಿಂದ ಒರಿಸಿಕೊಂಡ. ಮುಂಗುರುಳು ಹಣೆಯ ಮೇಲೆ ಹರಿದಿದ್ದುವು. ಕಣ್ಣುಗಳ ಕಾಂತಿ ಉಜ್ವಲವಾಗಿತ್ತು".

"ಏನಪ್ಪಾ, ನಿನ್ನ ಹೆಂಡತಿಯನ್ನು ಸೂಲಗಿತ್ತಿಯ ಬಳಿಯಲ್ಲೇ ಬಿಟ್ಟಿರುವುದರಿಂದ ನಿನಗೇನೂ ಯೋಚನೆಯಿಲ್ಲ." ವ್ಯಂಗ್ಯವಾಗಿ ನುಡಿದ ಕೃಷ್ಣಪ್ಪ.

ಒಡನೆ ಎಲ್ಲರ ಮುಖದ ಮೇಲೂ ನಂಜಿನ ನಗೆ ನಲಿಯಿತು.

"ಪಾಪ, ಸೂಲಗಿತ್ತಿ ಏನು ಮಾಡಿಯಾರು? ಡಾಕ್ಟರು ತಾನೇ ನೋಡಬೇಕು?"

"ಸ್ವಾಮಿಯಿದ್ದಾಗ ಹೇಗಿತ್ತು ಆ ಹೆಣ್ಣು? ಈಗ ಅದರ ಚಟುವಟಿಕೆ ನೋಡಿದರೆ ಪರಮಾಶ್ಚರ್ಯವಾಗುತ್ತೆ! ಎಂಥಾವರೂ ಮೂಗಿನ ಮೇಲೆ ಬೆರಳಿಡಬೇಕು." ಬಚ್ಚಬಾಯಿ ಆಡಿಸುತ್ತ ಕಾಳಿಂಗಯ್ಯ ನುಡಿದ.

"ನೀವೆಂದು ನೋಡಿದಿರಿ?"

"ನಾನು ಅಂದೇ ನಮ್ಮ ಚಾಮಿಯ ತೋರಿಸೋಣವೆಂದು ಆಸ್ಪತ್ರೆಗೆ ಹೋಗಿದ್ದೆ. ಶಿವೆಯನ್ನೋಡಿ ನಾನೂ ಚಾಮಿಯೂ ದಂಗು ಬಡಿದು

ಹೋದೆವು. ನಮ್ಮ ಬಾಯಲ್ಲಿ ಮಾತೇ ಹೊರಡಲಿಲ್ಲ. ಹೌದೋ ಅಲ್ಲವೋ ಎನ್ನುವಂತಾಗಿತ್ತು. ಆಕೆಯೇ ಬಂದು ಮಾತನಾಡಿಸಿ ಚಾವಿಃಯನ್ನು ಡಾಕ್ಟರಿಗೆ ತೋರಿಸಿದಳು. ಎದೆ ಶೀಳಿದರೂ ಒಂದು ಅಕ್ಷರವಿಲ್ಲದವಳು ಹೇಗೆ ಹೀಗಾದಳು ಎನ್ನಿಸುತ್ತದೆ."

"ಹೌದು; ಇದೊಂದು ನಾಚಿಕೆಗೇಡು." ರಾಮಣ್ಣ ಸಿಟ್ಟಿನಿಂದ ಹೇಳಿದ.

"ನೀವೇಕೆ ಅಷ್ಟಕ್ಕೆ ಅವಕಾಶ ಕೊಟ್ಟಿರಿ ?"

"ಆ ಮನೆ ಮಾರಿ ನಾಲ್ಕೆಕರೆ ಜಮೀನು ಕೊಂಡು ಎಲ್ಲರನ್ನೂ ಹಳ್ಳಿ ಸೇರಿಸಬೇಕೆಂಬುದು ನಮ್ಮ ಇಚ್ಛೆಯಾಗಿತ್ತು. ಆದರೆ ಈ ನಡುವೆ ಸ್ವಾಮಿ ಹಣ ಕದ್ದೊಯ್ದಿದ್ದಾನೆಂದು ಬಾಬೂಜಿಯ ದೂರು. ಆ ನಷ್ಟ ಕಟ್ಟಿಕೊಡಲು ಒಪ್ಪಿ ಶಿವೆ ತಿಂಗಳಿಗೆ ನೂರು ರೂಪಾಯಿ ಕೊಡುವುದಾಗಿ ಬರೆದುಕೊಟ್ಟಿದ್ದಾಳೆ. ಮನೆ ಮಾರಿದಾಕ್ಷಣ ಆ ಮನುಷ್ಯ ಹಣಕ್ಕಂಟಿಕೊಳ್ಳುತ್ತಾನೆ: ಅದರಿಂದಾಗಿ ಹಿಂಜರಿಯಬೇಕಾಯ್ತು. ಶಿವೆಯ ಈ ಅತಿವರ್ತನೆಗೆ ಅವಳ ತಂದೆಯ ಪ್ರೋತ್ಸಾಹವೂ ಉಂಟು. ಮಕ್ಕಳ ವಿದ್ಯೆಯ ಸೋಗಿನಲ್ಲಿ ಈಕೆ ಮೆರೆಯುತ್ತಿದ್ದಾಳೆ. ಒಮ್ಮೊಮ್ಮೆ ಮೂಳೆಗಳನ್ನೆಲ್ಲಾ ಮುರಿದು ಬಿಡಲೇ ಎಂಬುವಷ್ಟು ಕೋಪ ಬರುತ್ತದೆ !"

"ಅದೇಕೆ ಅಷ್ಟೊಂದು ಕೋಪ ರಾಜಣ್ಣಾ ? ಆಕೆ ಕೆಲಸ ಮಾಡುತ್ತಿರುವುದರಿಂದ ಮಕ್ಕಳನ್ನು ಓದಿಸುವುದು ಸಾಧ್ಯವಾಯಿತು. ಈಗ ನೋಡು, ರವಿ ದೇಶಕ್ಕೆ ಮೊದಲನೆಯವನಾಗಿ ಉತ್ತೀರ್ಣನಾಗಿದ್ದಾನೆ. ಮಕ್ಕಳೆಲ್ಲರೂ ಅಷ್ಟೇ ಕಷ್ಟಪಟ್ಟು ಓದುತ್ತಾರೆ. ಎಲ್ಲರಿಗೂ ವಿದ್ಯಾರ್ಥಿವೇತನ ದೊರೆಯುತ್ತಿದೆ. ಯಾರಿಗೂ ಭಾರವಾಗದ ರೀತಿಯಲ್ಲಿ ನಿರ್ಮಲವಾಗಿ ಬಾಳುತ್ತಿರುವವರ ಬಗ್ಗೆ ನೀವು ಹೆಮ್ಮೆಪಡಬೇಕಲ್ಲದೆ ಅಸೂಯೆಪಡಬಾರದು."

"ಚಂದೂ, ನಿನಗೆಂದೆಂದೂ ಮನೆಮುರುಕ ಬುದ್ಧಿ !" ಒಮ್ಮೆಲೆ ಎಲ್ಲರೂ ಗೊಳ್ಳನೆ ನಕ್ಕರು. ರಾಮಣ್ಣ ಮುಂದುವರಿದ "ಈಗ ಸ್ವಾಮಿ ಇದ್ದಾಗಿನ ಗೌರವ ಬಂದೀತೇನು ? ಆ ಮನೆಯಲ್ಲಿ ಗುಟುಕು ನೀರು ಕುಡಿಯಲಾದೀತೇ ? ಆಕೆಯಿಂದ ನಮ್ಮ ಮಾನ ಮೂರಾಬಟ್ಟೆಯಾಯ್ತು." ಕೋಪತಾಪಾದಿಗಳಿಂದ ಮುಖ ಕಪ್ಪು ತಳೆಯಿತು.

"ಚಂದೂ ಇಲ್ಲಿ ಕೇಳು. ಮನೆಯಲ್ಲಿ ದುಡಿಯುವವರಿಲ್ಲ ಎಂಬು

ದೊಂದು ನೆವ. ಪೋಲೀಸರು ಜಪ್ತಿ ಮಾಡಿದ ವಾರದಲ್ಲೇ ಊರೆಲ್ಲಾ ಅಲೆದಿದ್ದಾಳೆ. ಮಾನ ಮರ್‍ಯಾದೆಯ ಸೋಂಕೇ ಇಲ್ಲ. ನಾನು ಅಂದೇ ಇದೆಲ್ಲಾ ಸರಿಯಲ್ಲವೆಂದು ಎಚ್ಚರಿಸಿದ್ದೆ. ನಿನ್ನ ಮಾತಿನ ಮೇಲೆ ಅಂದು ಸುಮ್ಮನಾದೆ. ಈಗ ನೋಡಿದರೆ ಇದು ವಿಪರೀತವಾಯ್ತು. ನನ್ನ ತಮ್ಮನ ವಿಧವೆ ಈ ರೀತಿಯಾದಾಳೆಂದು ನಾನು ಕನಸು ಮನಸಿನಲ್ಲಿಯೂ ಯೋಚಿಸಿ ರಲಿಲ್ಲ. ಅಂದು ಇನ್ನಿಷ್ಟು ಸಮಯ ಸಿಕ್ಕಿದ್ದರೆ ಅವಳ ಒಂದು ಕಾಲು ಮುರಿದೇ ಕೂರಿಸುತ್ತಿದ್ದೆ !" ರಾಜಣ್ಣ ಉಚ್ಚ ಸ್ವರದಲ್ಲಿ ಬಿತ್ತರಿಸಿದ.

"ರಾಜಣ್ಣಾ, ಸ್ವಲ್ಪ ಸೈರಿಸಿಕೋ. ನೀವು ಇನ್ನೂ ಸುಧಾರಿಸಿ ಕೊಳ್ಳದಿರುವುದು ಆಶ್ಚರ್ಯ. ಆರು ಮಂದಿಯ ಸಂಸಾರ. ಮನೆಯಲ್ಲಿ ನುಚ್ಚಿಲ್ಲ. ಹಿರಿಯರಾದ ನೀವು ವಿಚಾರಿಸಲಿಲ್ಲ. ಮೈದುನನಾದ ಆನಂದ ಮಗ್ಗುಲಿಗೇ ಮುಳ್ಳಾದ. ಅಂದಮೇಲೆ ಇನ್ನೇನು ಮಾಡಬೇಕು ?" ಎಂದು ಚಂದು ಸಮಾಧಾನದಿಂದಲೇ ಕೇಳಿದ.

"ಉಟ್ಟು ತೊಟ್ಟು ಮೆರೆಯುವುದಕ್ಕಿಂತ ತೌರು ಸೇರಬಹುದಿತ್ತು."

ಕಾಳಿಂಗಯ್ಯ ನಡುವೆ ಬಾಯಿ ಹಾಕಿದ.

"ಇದೆಂಥ ಮಾತು ? ಆರು ಮಂದಿಯ ಭಾರ ಹೊರುವಷ್ಟು ಲಿಂಗಣ್ಣ ಧನಿಕರೇ ? ಅಲ್ಲದೆ ಸಾಕಷ್ಟು ಸಹಾಯ ಮಾಡಿ ಅಂಗಡಿಯನ್ನೂ ಮನೆ ಯನ್ನೂ ಕಟ್ಟಿಸಿಕೊಟ್ಟಿದ್ದಾರೆ."

"ಅದೆಲ್ಲಾ ಸುಳ್ಳು. ಮನೆಯ ಪಾಲಿಗೆ ಅಣ್ಣ ತಮ್ಮಂದಿರು ಬಂದಾ ರೆಂದು ಶಿವಮ್ಮ ಹೂಡಿದ ತಂತ್ರ ! ಈ ನೆವದಲ್ಲಿ ತನ್ನ ಹೆಸರಿನಲ್ಲಿ ಅಂಗಡಿ ಯನ್ನು ಕಟ್ಟಿಸಿ ಖಾತೆ ಬದಲಾಯಿಸಿದ್ದಾರೆ !" ಮೂಲೆಯಿಂದ ಬಂದ ದನಿ ಆನಂದನದಾಗಿತ್ತು.

"ಹಾಗಿದ್ದರೆ ಇದಕ್ಕೆಲ್ಲಾ ಹಣವೆಲ್ಲಿ ಬಂತು ?"

"ಎಲ್ಲಾ ಸ್ವಾಮಿಯದೆ. ಇವರು ಹೇಳುವುದು ಒಡವೆ ವಸ್ತು ಮಾರಿದ್ದೇ ವೆಂದು. ಅಲ್ಲದೆ ಲಿಂಗಣ್ಣ ಸಾವಿರ ರೂಪಾಯಿ ಮುಟ್ಟಿಸಿದ್ದಾರೆ ಎಂದು, ಇದೆಲ್ಲಾ ಶುದ್ಧ ಡೋಂಗಿ !" ಮತ್ತೆ ಆನಂದ ಹೇಳಿದ.

"ಆನಂದಾ. ನಿನ್ನ ಬಾಯಿಂದ ಈ ಮಾತು ಬರಬಾರದು. ನೀನೇ ಆ ಮಕ್ಕಳ ತುತ್ತಿಗೊಂದು ಕಲ್ಲು ಹಾಕಿದ್ದೀ. ಇಷ್ಟಾದರೂ ನಿನ್ನ ಬಗೆಗೆ ಶಿವಮ್ಮ

ನಿಗೆ ದ್ವೇಷವಿಲ್ಲ. ಸಂಪೂರ್ಣ ತಿಳಿಯದೆಲೆ ಮಾತನಾಡುವುದು ಪ್ರಯೋಜನ ......" ಮಾತು ಮುಗಿಯಗೊಡಿಸದೆ ರಾಜಣ್ಣ ನಡುವೆ ಬಾಯಿ ಹಾಕಿದ– "ನಮ್ಮಲ್ಲಿ ಮಳ್ಳಿ ಸುಟ್ಟಿತ್ತು ಬೆಣ್ಣೆಯಂತ ರೊಟ್ಟಿ" ಎಂಬ ಗಾದೆಯಿದೆ. ಗೊತ್ತಿಲ್ಲವೇನು? ಅಣಕದ ದಾಟಿಯಲ್ಲಿ ಮಾತು ಹೊರಬೀಳುತ್ತಲೂ ಚಂದುಗೆ ಮಾತಾಡಲು ಅವಕಾಶ ನೀಡದೆ ಅನೇಕ ದನಿಗಳು ಹೊರಬಿದ್ದುವು.

"ಬಹಳ ಮಟ್ಟಿಗೆ ನಿನ್ನ ಸುಧಾರಣಾ ಯೋಜನೆಯೇ ಇಂತಹ ದುರ್ವರ್ತನೆಗೆ ಸಹಕಾರಿಯಾಗುತ್ತದೆ ಅಂದರೆ ತಪ್ಪಲ್ಲ. ಪ್ರತಿಯೊಂದು ಹೆಜ್ಜೆಯನ್ನೂ ಹದವರಿತು ಇಡಬೇಕಪ್ಪಾ! ಹೀಗಾದರೆ ಮುಂದೆ ಕಷ್ಟ...."

"ಹೌದಪ್ಪಾ. ಇದೇನೋ ಅಸಹ್ಯ, ಕುಂಕುಮವಿಟ್ಟು ಬಳೆತೊಟ್ಟು, ಬಿಳಿಯುಡುಗೆಯುಟ್ಟು ಮೆರೆಯುವುದೆಂದರೆ ಯಾರಿಗೆ ತಾನೇ ಸಹಿಸೀತು?"

"ನಿಜ, ನಿಜ! ಭಾವಂದಿರು ಒಳ್ಳೆಯವರಾದುದರಿಂದ ಇಲ್ಲಿಯವರೆವಿಗೆ ತಡೆದುಕೊಂಡಿದ್ದಾರೆ."

"ಸ್ವಾಮಿ ಕಾಣೆಯಾದುದು ಅವಳಿಗೆ ನಷ್ಟವಾಗಲಿಲ್ಲ."

"ಅಂತೂ ಇದೊಂದು ವಿಪರೀತಕ್ಕೆ ಹೋಯಿತು. ನಾವಾಗ ವಿಚಾರಿಸ ದಿದ್ದುದೂ ಒಂದು ಲೋಪವಾಯಿತು. ಲಿಂಗಣ್ಣ ಆಗಾಗ ಬಂದು ವ್ಯವಸ್ಥೆ ಮಾಡುತ್ತಿದ್ದುದರಿಂದ ನಾವು ಸುಮ್ಮನಾದೆವು." ಎಂದು ಕೋಪವಿದ್ದರೂ ಅದನ್ನು ತೋರಗೊಡದೆ ನಾಲ್ಕು ಜನರ ಮಧ್ಯೆ ತಮ್ಮ ಸಣ್ಣತನವನ್ನು ತೋರಿ ದುದು ತಪ್ಪಾಯ್ತೆಂದುಕೊಂಡು ಎರಡು ಸಮಾಧಾನದ ಮಾತನ್ನು ಸೇರಿಸಿದ ರಾಮಣ್ಣ "ಈ ಕಾಲದಲ್ಲಿ ಕುಳಿತು ತಿನ್ನುವುದು ಸಾಧ್ಯವಿಲ್ಲದ ಮಾತ್ತು ಕೆಲಸ ಮಾಡುವುದರಲ್ಲಿ ತಪ್ಪಿಲ್ಲ. ನಡವಳಿಕೆ ಶುದ್ಧವಾಗಿದ್ದರೆ ಸೈ." ಯಾವುದೋ ಕಾಣದ ಕೈಗಂಟಲನ್ನು ಅದುಮಿ ಹಿಡಿದಂತೆ ನುಡಿ ತೊದಲಿತು.

"ಹಾಗೆಂದರೆ ಅವಳಿನ್ನೂ ಏರಿ ಹೋಗುವುದೇ ಸರಿ. ಸ್ವಲ್ಪ ವಿಚಾರಿಸಿಕೊ ರಾಮಣ್ಣಾ."

"ಇನ್ನು ವಿಚಾರಿಸಿಕೊಳ್ಳುವುದಂ ಆಗದ ಮಾತು. ಅವರು ಪಟ್ಟಣದ ರುಚಿ ಕಂಡಿದ್ದಾರೆ." ಅಭಿಮಾನದಿಂದ ಆನಂದ ಸಮರ್ಥಿಸಿದ "ನನಗೆ ಇವರು ಖಾತೆ ಬದಲಾವಣೆ ಮಾಡಿರುವುದು ತಿಳಿಯುವ ಮುಂಚೆ ಬಾಡಿಗೆ ಕೊಡುವು ದೆಂದು ನಿಶ್ಚಯಿಸಿದ್ದೆ. ಈಗ ಮನಸ್ಸು ಬರುವುದಿಲ್ಲ. ಹೇಗೂ ನಮ್ಮದಂ

ಅವಿಭಕ್ತ ಕುಟುಂಬ. ಅಂದಮೇಲೆ ಬಾಡಿಗೆ ಕೊಡುವುದೇನಿದೆ?" ದನಿಯಲ್ಲಿ ಗಡಸು ಹರಿದು ಬಂತು.

"ಖಾತೆ ಬದಲಾಯಿಸಿರುವುದು ನಿಜವೇ?" ರಾಜಣ್ಣ ಕೇಳಿದ.

"ಅಂಗಡಿಗಳೆರಡನ್ನೂ ಶಿವಮ್ಮನ ಹೆಸರಿಗೆ ಕಟ್ಟಿದ್ದಾರೆ."

"ಮನೆ?"

"ಅದು ತಿಳಿಯದು."

"ಸ್ವಾಮಿ ಇಲ್ಲವಾದ ಕಾಲದಲ್ಲಿ ಶಿವಮ್ಮನ ಹೆಸರಿಗೆ ತಾನೆ ಕಟ್ಟಬೇಕು?" ಚಂದು ಪ್ರಶ್ನೆ ಹಾಕಿದ.

"ಏಕೆ ನಾವಿರಲಿಲ್ಲವೇ?" ರಾಜಣ್ಣ ದನಿಯೇರಿಸಿ ಕೇಳಿದ. ಇನ್ನು ವಾದವಿವಾದ ಬೆಳೆಯಗೊಡಿಸಬಾರದೆಂದು ರಾಮಣ್ಣ ನಡುವೆ ಬಾಯಿ ಹಾಕಿದ. "ಅದೆಲ್ಲಾ ಅಲ್ಪ ವಿಚಾರ. ಅದಕ್ಕೆಲ್ಲಾ ಏಕೆ ಈಗ ತಲೆ ಬಿಸಿ ಮಾಡಿಕೊಳ್ಳಬೇಕು? ಸದ್ಯ ಸುಮ್ಮನಿರಿ."

ನಾಮಕರಣದ ನಂತರ ಊಟ ಮುಗಿಯಿತು. ಎಲ್ಲರೂ ಜಗಲಿಯಲ್ಲಿ ಕುಳಿತು ಅಡಿಕೆಲೆಯ ಚರ್ವಣದಲ್ಲಿ ಮಗ್ನರಾದರು. ನಡುವೆ ತಟ್ಟೆಯಲ್ಲಿ ತಿಂದುಳಿದ ಹಲಕೆಲವು ಬಾಳೆಯ ಹಣ್ಣುಗಳಿದ್ದುವು. ಮಕ್ಕಳು ಅವುಗಳನ್ನು "ಕಂಡೊಡನೆಯೇ ಬಂದು ಕೈ ಹಾಕಿದರು. ರಾಜಣ್ಣ ಗಟ್ಟಿಯಾಗಿ ಗದರಿಸಿದ ಆಗಲೇ ಎಲ್ಲರೂ ತಿಂದಿದ್ದೀರಿ ಇನ್ನು ಸಾಕು." ದೊಡ್ಡವರೇನೋ ಹಿಂದೆ ಸರಿದರು. ಶಿವು ಕೇಳದೆ ಕೈ ಹಾಕಿ ದೊಡ್ಡದೊಂದು ಹಣ್ಣನ್ನು ಎತ್ತಿಕೊಂಡ. ರಾಜಣ್ಣ ಅದನ್ನು ಕಸಿಯಲೆಂದು ಉಪಾಯ ಹೂಡಿದುದು ಪ್ರಯೋಜನವಾಗದೆ ಕಿತ್ತುಕೊಂಡ. ಒಡನೆ ಮಗುವಿನ ಕ್ರಂದನ ಅಠಾಣ ರಾಗದಲ್ಲಿ ಮೊಳಗಿತು. ರಾಜಣ್ಣ ಸಮಾಧಾನಗೊಳಿಸಲು ಸರ್ವ ಪ್ರಯತ್ನಪಟ್ಟರೂ ಪ್ರಯೋಜನವಾಗಲಿಲ್ಲ. ಕ್ಷಣಾರ್ಧದಲ್ಲಿ ಆಲಾಪನೆ ತಾರಸ್ಥಾಯಿಯನ್ನು ಮುಟ್ಟಿತು.

"ರಾಜಣ್ಣಾ, ನಿನ್ನ ಮಗ ನಿನ್ನಂತೆಯೇ ಧೀರ!" ಎಂದ ಚಂದು.

"ಅದೇನೋ ಸತ್ಯವೇ!" ನಂಜುಂಡಪ್ಪ ಅನುಮೋದಿಸಿದ.

ಅತಿಥಿಗಳು ನಗತೊಡಗಿದರು. ಅವರೊಡಗೂಡಿ ತಾನೂ ನಗುತ್ತ, "ಅವನಿಗೆ ಒಮ್ಮೆ ಕೋಪ ಬಂದ ಮೇಲೆ ಹಾಗೆಯೇ. ಇನ್ನು

ಬೇಗನೆ ಸಮಾಧಾನಗೊಳ್ಳುವ ಮಾತೇಯಿಲ್ಲ."

"ತಂದೆಯಂತೆ ಮಗ !"

ಮಾತು ಮುಗಿಯುವುದರೊಳಗಾಗಿ ಚಿಕ್ಕವನೊಬ್ಬ ಧಾವಿಸಿ ಬಂದು ವರದಿಮಾಡಿದ "ಆನಂದಣ್ಣನಿಗೆ ಹಣೆಗೆ ಪೆಟ್ಟು ತಗುಲಿ ನೆತ್ತರು ಬಸಿಯುತ್ತಿದೆ." ಏನಾಯಿತೆಂದು ನೋಡಲು ಎಲ್ಲರೂ ಹೋದರು. ಆನಂದ ಮಕ್ಕಳು ಕೂಟದಲ್ಲಿ ಸೇರಿಕೊಂಡು ಚಿಣ್ಣಿಯಾಡುತ್ತಿದ್ದಾಗ ಚಿಣ್ಣಿಕೋಲು ಹಣೆಗೆ ಬಡಿದಿತ್ತು. ಸೊಪ್ಪಿನ ರಸ ಹಿಂಡಿ ಮದ್ದು ಹಾಕಿಕೊಂಡು ಆನಂದ ಒಳ ಬಂದ. ಅಲ್ಲಿ ಮಕ್ಕಳ ಕೂಟದಲ್ಲಿದ್ದ ವೆಂಕಟೇಶ ಮತ್ತು ಶಂಕರನನ್ನು ಕಂಡ ಚಂದು ಇದುವರೆವಿಗೂ ಕಣ್ಣಿಗೆ ಬೀಳಲಿಲ್ಲವಲ್ಲಾ ? ಎಂದ. ಹುಡುಗರು ನಾಚಿ ನಿಂತರು. ನೆರೆದ ಹತ್ತಾರು ಮಂದಿ ಹುಡುಗರನ್ನು ನೋಡುತ್ತ ಚಂದು ನಗುಮುಖದಿಂದ ಕೇಳಿದ "ಈ ಸಲವಾದರೂ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತೀರಾ ?"

"ಚೆನ್ನಾಗಿ ಬರೆದಿದ್ದೇವೆ" ಸಿದ್ಧರಾಮು ಹೇಳಿದ.

"ಫಲಿತಾಂಶ ಹೊರಬೀಳುವುದೆಂದು ?"

"ಇನ್ನೂ ಎರಡು ತಿಂಗಳಿದೆ."

ಬಂದ ಅತಿಥಿಗಳು ಉಂಡು ಹೊರಟರು. ಅದುವರೆವಿಗೂ ಗಲಾಟೆಯಿಂದ ಕೂಡಿದ್ದ ವಾತಾವರಣ ತಣ್ಣಗಾಯಿತು. ಉಳಿದವರು ಚಂದು ಮತ್ತು ಆನಂದ. ಚಂದು ಜಗುಲಿಯ ಮೇಲಿನ ಜಮಖಾನೆಯ ಮೇಲೆ ಹಾಗೇ ಬಿದ್ದುಕೊಂಡಿದ್ದಾಗ ವೆಂಕಟೇಶ ಶಂಕರ ಅಲ್ಲಿಗೆ ಬಂದರು.

"ಚಂದಣ್ಣಾ, ಇನ್ನೊಂದು ದಿಂಬು ಕೊಡಲೇ ?"

"ಬೇಡ; ಇದೇ ಸಾಕು." ಎಂದ ಚಂದು ಪುನಃ ಕೇಳಿದ "ಇಬ್ಬರೂ ಈಸಲವಾದರೂ ಪಾಸು ಮಾಡಿರಿ. ಸ್ವಲ್ಪ ಕಷ್ಟಪಟ್ಟು ಓದಕೂಡದೆ ?"

ರಾಮಣ್ಣ ರಾಜಣ್ಣ ಇಬ್ಬರೂ ಅಲ್ಲಿ ಇರಲಿಲ್ಲವಾದ್ದರಿಂದ ಇಬ್ಬರಿಗೂ ಸಲೀಸಾಗಿ ಮಾತಾಡಲು ಅವಕಾಶವಿತ್ತು. ಹುಡುಗರಿಬ್ಬರೂ ಎತ್ತರವಾಗಿ ಬೆಳೆದಿದ್ದು ಮೈಕಟ್ಟು ಅಂದವಾಗಿ ತುಂಬಿಕೊಂಡಿತ್ತು. ಇಬ್ಬರೂ ಹತ್ತಿರ ಕುಳಿತುಕೊಂಡರು.

"ಸೋಲು ಎಲ್ಲರಿಗೂ ಇದ್ದದ್ದೇ. ಅದಕ್ಕೆ ಅಳುಕಬಾರದು."

"ಈಸಲ ಪಾಸಾದರೆ ಸಾಕೆನಿಸಿದೆ."

"ಜೀವನಕ್ಕೆ ಒಂದಲ್ಲ ಒಂದು ದಾರಿಯಿದ್ದೇಯಿದೆ. ಅದಕ್ಕೇಕೆ ಭಯ ಶಂಕರೂ ?"

ಅಷ್ಟರಲ್ಲಿ ರಾಮಣ್ಣ ಅಲ್ಲಿಗೆ ಬಂದ. ಹುಡುಗರನ್ನು ನೋಡಿ ಸಿಡುಕಿದ "ನೋಡು ಚಂದು, ಈ ದರಿದ್ರ ಹುಡುಗರಿಗಷ್ಟು ಹಣ ವೆಚ್ಚ ಮಾಡಿದುದು ನೀರಿನಲ್ಲಿ ಹೋಮ ಮಾಡಿದಂತಾಯಿತು. ನೌಕರಿಯಾದರೂ ಮಾಡಿರಿ ಅಂದರೆ ಅದೂ ಇವರಿಂದ ಸಾಧ್ಯವಿಲ್ಲ. ಓದೂ ಇವರಿಂದ ಸಾಗಲಿಲ್ಲ. ಈ ಸಲವೂ ಉತ್ತೀರ್ಣರಾಗುತ್ತಾರೆಂಬುದು ಕನಸಿನ ಮಾತು. ತಿಂದುಂಡು ಗೂಳಿಯಂತೆ ಮೈ ಬೆಳೆಸುವುದೇ ಸೈ."

"ಹಾಗೆ ಒಮ್ಮೆಲೇ ಉರಿದು ಬೀಳಬೇಡ. ಅದೃಷ್ಟವಿದ್ದರೆ ಈ ಸಲ ಆದೀತು."

"ಶುದ್ಧ ಸೋಮಾರಿಗಳಿಗೆ ಅದೃಷ್ಟವೆಲ್ಲಿಂದ ಬಂದೀತು ?"

ರಾಮಣ್ಣನ ಕಣ್ಣಿನಲ್ಲಿ ಕೋಪದ ಕಿಡಿಗಳು ಮೂಡಿದುವು. ಹುಡುಗರ ಮಾರುದ್ದ ದೇಹ ಗೇಣುದ್ದವಾಯಿತು. ಶಂಕರ ಮೆಲ್ಲನೆ ಅಲ್ಲಿಂದ ಜಾರಿದ. ವೆಂಕಟೇಶ ತಲೆ ತಗ್ಗಿಸಿದ.

"ಸ್ವಲ್ಪ ಸುಧಾರಿಸಿಕೊ ರಾಮಣ್ಣಾ. ಜೀವನಕ್ಕೆ ನಾನಾ ಮಾರ್ಗಗಳಿವೆ, ಅವರವರ ಅಭಿರುಚಿಗನುಗುಣವಾಗಿ ದಾರಿಗೆ ಹಚ್ಚಿದರಾಯಿತು. ವಿದ್ಯೆ ಇಲ್ಲದವನು ಉದ್ಯೋಗ ಮಾಡಲಾರನೆ? ಮನವಿದ್ದಲ್ಲಿ ಮಾರ್ಗವುಂಟು."

"ನೋಡು, ಸೀಳಿದರೆ ಎರಡಾಳಾಗುತ್ತಾನೆ ! ಇನ್ನೂ ನಾವು ಪೋಷಿಸುವುದೆಂದರೆ ಹೇಗೆ ? ಮದುವೆ ಮಾಡೋಣವೆಂದರೆ ಅದಕ್ಕೂ ಒಪ್ಪುವುದಿಲ್ಲ. ಓದೂ ಸಾಗಲಿಲ್ಲ. ಮನೆಯಲ್ಲಿ ಕುಳಿತು ತಿಂಬುವುದೇ ಆಗಿದೆ !" ರಾಮಣ್ಣ ಸಿಟ್ಟಿನ ಭರದಲ್ಲಿ ಒಳಗಡೆ ಹೋದ.

ಚಂದು ವೆಂಕಟೇಶನನ್ನು ಕುಳಿತುಕೊಳ್ಳ ಹೇಳಿದ. ವೆಂಕಟೇಶ ಪದ್ಮಾಸನ ಹಾಕಿ ಪಕ್ಕದಲ್ಲಿ ಕುಳಿತುಕೊಂಡ. ಮನದಲ್ಲಿನ ನೋವು ಮುಖದಲ್ಲಿ ಅಚ್ಚೊತ್ತಿತ್ತು. "ಚಂದಣ್ಣಾ, ನನಗೇನೋ ಓದಬೇಕೆಂದು ಇಚ್ಛೆ. ಆದರೆ ನಮಗೆ ಅದೃಷ್ಟವಿಲ್ಲವೆಂದು ತೋರುತ್ತೆ. ಏನು ಮಾಡುವುದೋ ಬಗೆಹರಿಯದಾಗಿದೆ. ಹಣವಿಲ್ಲದೆ ಉದ್ಯೋಗವನ್ನೂ ಮಾಡುವಂತಿಲ್ಲ."

"ವ್ಯವಸಾಯದಲ್ಲಿ ನಿನಗಿಷ್ಟವಿಲ್ಲವೇ ?"

"ಯಾಕೋ ಅದರಲ್ಲೂ ಅಭಿರುಚಿಯಿಲ್ಲ. ನನ್ನ ಭವಿಷ್ಯವೇ ಹಾಳಾಯಿತು." ವೆಂಕಟೇಶ ಕಂಬನಿ ತುಂಬಿದ.

"ನಿಮ್ಮ ಫಲಿತಾಂಶ ಹೊರಬಿದ್ದಮೇಲೆ ಒಮ್ಮೆ ಕೂಡಿ ಮಾತಾಡೋಣ. ಈಗೇಕೆ ಚಿಂತೆ ?"

"ನೀವಿಷ್ಟು ಉಪಕಾರ ಮಾಡಿರಿ."

ಒಳಗಡೆ ಮಲಗಿದ್ದ ಸಾವಿತ್ರಿಯ ಮನಸ್ಸು ಸ್ವಲ್ಪ ಬಗ್ಗಡವಾಗಿತ್ತು. ಶಿವೆಯ ಬಗ್ಗೆ ಅತಿಥಿಗಳು ನಿಷ್ಠುರವಾಗಿ ಆಡಿದ ಮಾತುಗಳು ಮನದಲ್ಲಿ ಚುಚ್ಚುತಿದ್ದುವು ...ಈ ಜನರ ಸುಧಾರಣೆ ಇನ್ನೊಂದು ಜನ್ಮಕ್ಕೂ ಆಗದ ಮಾತು. ಸಾಕಪ್ಪಾ ಸಾಕು, ಈ ಜನ್ಮ. ಇವರ ಮಧ್ಯೆ ಹೆಣ್ಣಿನ ಬಾಳು ಸಾಗುವುದಾದರೂ ಹೇಗೆ ? ಎನ್ನಿಸಿ ಯೋಚನೆಯಲೆಗಳ ಉಬ್ಬರದಿಂದ ಮನಸ್ಸಾಗರವು ಕಲಕಿ ಬಗ್ಗಡವಾಗಿತ್ತು. ಶಿವೆಯ ವಿಚಾರ ಬಂದಾಗಲೆಲ್ಲಾ ರಾಜಮ್ಮನೂ ಸಿಡಿದು ಹಾರುತ್ತಿದ್ದು, ತಾಯಿಯ ಎದುರು ಆ ಸೊಲ್ಲನ್ನೆತ್ತುವಂತಿರಲಿಲ್ಲ. ನೀಲಮ್ಮನೇನೋ ಯಾರೂ ಇಲ್ಲದಾಗ ನಾಲ್ಕು ಪ್ರಶಂಸೆಯ ಮಾತುಗಳನ್ನಾಡಿದ್ದರೂ ಇನ್ನಾರ ಎದುರೂ ಮಾತಾಡುವಂತಿರಲಿಲ್ಲ. ಈ ಸಮಾಜದ ಸುಧಾರಣೆಯಾಗದ ಹೊರತು ದೇಶದ ಸುಧಾರಣೆಯಾಗದಲ್ಲಾ ಎನ್ನಿಸಿದಾಗ ಮನಸ್ಸಿಗೆ ಅತ್ಯಂತ ನೋವುಂಟಾಯಿತು. ಹೃದಯ ಸಮುದ್ರದ ಅಲೆಗಳು ಅಲ್ಲೋಲಕಲ್ಲೋಲವಾದುವು.

ರಾಜಮ್ಮ ತೊಟ್ಟಿಲಿನ ಪಕ್ಕದಲ್ಲಿ ಹಾಯಾಗಿ ನಿದ್ದೆ ಹೋಗಿದ್ದಳು. ಅಡುಗೆ ಮನೆಯಲ್ಲಿ ಮುಸುರೆ ಪಾತ್ರೆಗಳನ್ನು ಉಜ್ಜಿ ಬೆಳಗುತಿದ್ದ ನೀಲಮ್ಮ ಒಳಗೆ ಬಂದು ಮಗು ಎದ್ದಿರಬಹುದೇನೋ ಎಂದು ಬಗ್ಗಿ ನೋಡಿದಾಗ ಸಾವಿತ್ರಿ ನಿದ್ದೆಯಿಲ್ಲದೆ ಮಲಗಿದ್ದುದು ಕಾಣ ಬಂತು. ಬಾಣಂತಿಯು ನಿದ್ದೆ ಹೋಗದಿದ್ದುದು ಸರಿಯಲ್ಲವೆನ್ನಿಸಿದರೂ ರಾಜಮ್ಮ ನಿದ್ದೆ ಹೋಗಿದ್ದುದರಿಂದ ಮಾತಾಡಿದರೆ ಎಚ್ಚರವಾದೀತೆಂದು ನೀಲಮ್ಮ ಬಂದ ಹಾಗೇ ಹಿಂದಿರುಗಿದಳು. ನಿರ್ಮಲೆಯೊಂದಿಗೆ ಮಾತಾಡುತಿದ್ದ ರತ್ನ ಮೈಸೂರಿನ ನಾನಾ ವಿಚಾರಗಳೊಂದಿಗೆ ಶಿವಮ್ಮನ ವಿಚಾರವನ್ನಷ್ಟು ಊದಿ ನಗುತ್ತ ಬಿತ್ತರಿಸಿದಳು "ನೀನೊಮ್ಮೆ ನೋಡಿದರೆ ಖಂಡಿತ ಗುರುತು ಹಿಡಿಯಲಾರೆ."

"ಹೋಗಲಿ ಬಿಡಿ ; ನಮ್ಮವರಲ್ಲಿ ಒಬ್ಬರಾದರೂ ಮುಂದಿದ್ದಾರಲ್ಲ."

ರತ್ನ ತುಂಬ ಮಾತಾಡಿದಳು. ಆ ಮಾತುಗಳ ಅಕ್ಷರ ಅಕ್ಷರವನ್ನೂ ಸಹ ತನ್ನಂತರಂಗದಲ್ಲಿಯೇ ಪುನರ್ವಿಮರ್ಶಿಸಿಕೊಂಡಳು. ಆಧುನಿಕ ವ್ಯವಹಾರ ಮತ್ತು ಅಸಭ್ಯತೆಯನ್ನು ಕುರಿತು ಆ ಮುಗ್ಧೆಯೊಂದಿಗೆ ಚರ್ಚಿಸುವುದು ಸರಿಯಲ್ಲ ಎಂಬ ಭಾವನೆ ಎದೆಯಾಳದಲ್ಲಿ ಮೊಳೆಯುತಿತ್ತು. ಆದರೆ... ಕಳಂಕ ಚಿತ್ರದ ದುರ್ದಮನೀಯ ಅಲೆಗಳು ನರನಾಡಿಗಳಲ್ಲಿ ಹುಚ್ಚೆದ್ದು ಹರಿದಾಡಿ ವಾಚನದ ಹೊಳೆಯನ್ನು ತಾನೇ ತಾನಾಗಿ ಹರಿಸುತ್ತಿತ್ತು. ಹಾಗೇ ವಿಚಾರ ಮಗ್ನಳಾಗಿ ತನ್ನನ್ನು ಸಮರ್ಥಿಸಿಕೊಳ್ಳುವ ಉದ್ದೇಶದಿಂದ ಕೊನೆಯ ನುಡಿಯನ್ನು ಹೊರಹಾಕಿದಳು.

"ಆಧುನಿಕ ಜೀವನವನ್ನು ಕುರಿತು ಸ್ವಲ್ಪ ನಿನಗೆ ಹೇಳಿದೆ. ಬಹುಶಃ ಅದು ನಿನಗೆ ಹಿಡಿಸದಿರಬಹುದು. ಆದರೆ ನಾನು ಯಾರನ್ನು ಉದ್ದೇಶಿಸಿ ಹೇಳಿದೆನೋ ಅವರು ಉದ್ದೇಶದ ಸಾಧನೆಯಲ್ಲಿ ಸ್ತ್ರೀತ್ವದ ಎಲ್ಲಾ ಎಲ್ಲೆಗಳನ್ನು ಮೀರಲು ಸಮರ್ಥರಿದ್ದಾರೆ. ಅದೇ ವಿಶೇಷ ....ನನ್ನ ಮಾತು ಕೇಳಿ ನಿನಗೆ ಆಶ್ಚರ್ಯವಾಗಿರಬಹುದು. ಅಥವಾ ಸುಳ್ಳು ಎನಿಸಿರಲೂ ಬಹುದು."

ನಿರ್ಮಲೆ ಮಾತಾಡಲಿಲ್ಲ.

"ನನ್ನ ಮಾತು ಕೇಳಿ ನಿನಗೆ ಕೋಪವಿಲ್ಲವಷ್ಟೆ ?"

"ಇಲ್ಲ ; ಅದಕ್ಕೇಕೆ ಕೋಪ ?" ಏನೋ ಒಂದು ಬಗೆಯಲ್ಲಿ ವಿಚಾರ ಮಗ್ನಳಾಗಿ ನಗು ಮುಖದಿಂದ ಕೇಳಿದಳು ನಿರ್ಮಲೆ.

೨೨

ಮಹಾರಾಜ ಕಾಲೇಜಿನ ಮುಂದೆ ಜನಸಂದಣಿಯೋ ಜನಸಂದಣಿ. ಅಂದು ಪರೀಕ್ಷೆಗಳ ಫಲಿತಾಂಶ ಹೊರಬಿದ್ದುದು ಜನ ತಿಳಿಯುವ ಉತ್ಸುಕತೆ ಯಿಂದ ಅಲ್ಲಿ ನೆರೆದಿದ್ದರು. ಫಲಿತಾಂಶವನ್ನು ತಿಳಿಯುವುದು ಒಂದು ಪುಟ್ಟ ಸಾಹಸವೇ ಆಗಿತ್ತು. ರವಿ ಅತ್ಯಂತ ಪ್ರಯಾಸದಿಂದ ಗುಂಪಿನಿಂದ ಹೊರಬಿದ್ದ. ಉನ್ನತ ಶ್ರೇಣಿಯಲ್ಲಿ ಉತ್ತೀರ್ಣನಾದುದು ಅವರ್ಣನೀಯ ಆನಂದವನ್ನು ತಂದಿತು. ನಗುಮುಖದಿಂದ ಹೊರಬಂದಾಗ ವೆಂಕಟೇಶನ ಜೋಲು ಮುಖ ದೃಷ್ಟಿ ಗೋಚರವಾಯಿತು.

"ವೆಂಕಟೇಶ್, ನಿಂದೇನಾಯಿತು ?"

ಗೋಣು ಅಲ್ಲಾಡಿಸಿ ಅನುತ್ತೀರ್ಣನಾದುದನ್ನು ಸೂಚಿಸಿ "ನಿನ್ನದು?" ಎಂದ.

"ದೇವರು ದೊಡ್ಡವನು." ಸಮಾಧಾನ ಪೂರ್ವಕವಾಗಿ "ವೆಂಕಟೇಶ್, ಉತ್ತೀರ್ಣನಾಗಲಿಲ್ಲವೆಂದು ಬೇಸರಪಟ್ಟುಕೊಳ್ಳಬೇಡಪ್ಪಾ." ಮಾತು ಮುಗಿಯುವಷ್ಟರಲ್ಲಿ ಸಿದ್ಧರಾಮ ಮತ್ತು ಶಂಕರ ಬಂದರು. ಅವರ ಸಪ್ಪೆ ಮೋರೆಯೇ ಫಲಿತಾಂಶವನ್ನು ಸೂಚಿಸುತ್ತಿತ್ತು. ಶಂಕರ ಮಾತಿಲ್ಲದೆ ನಿಂತ. ಸಿದ್ಧರಾಮ ಕೇಳಿದ "ರವಿ, ನಿನ್ನದೇನಾಯಿತು ?"

"ನನ್ನದಾಗಿದೆ. ನಿಮ್ಮದು ?"

"ಇದು ಮೂರನೆಯ ಪ್ರಯತ್ನ, ಇನ್ನು ನಮ್ಮನ್ನು ಓದಿಸುತ್ತಾರೆಂಬುದು ಕನಸಿನ ಮಾತು. ನನಗಂತೂ ಏನು ಮಾಡುವುದೋ ಎಂಬ ಯೋಚನೆಯಾಗಿದೆ. ನಾವು ತುಂಬ ಕಷ್ಟಪಟ್ಟಿದ್ದೆವಾದರೂ ನಮಗೆ ಅದೃಷ್ಟ ವಿಲ್ಲ." ಎಂದ ಸಿದ್ಧರಾಮ. ಮುಖಮುದ್ರೆ ಖಿನ್ನವಾಗಿತ್ತು.

"ಈಗಿಲ್ಲದಿದ್ದರೂ ಮುಂದೆಯಾದರೂ ಅದೃಷ್ಟ ಬಂದೀತು. ಇನ್ನೊಮ್ಮೆ ಪ್ರಯತ್ನ ಪಡಿರಿ."

"ನನಗೆ ದೊಡ್ಡಪ್ಪಂದಿರ ಸ್ವಭಾವ ಗೊತ್ತೇ ಇದೆ. ಅವರೆಂದೂ

ಒಪ್ಪುವುದಿಲ್ಲ. ಒಟ್ಟಿನಲ್ಲಿ ನಮಗೆ ಅದೃಷ್ಟವಿಲ್ಲ. ದೇವರು ನಮ್ಮ ಜೀವನಕ್ಕೆ ಕಲ್ಲು ಹಾಕಿದ." ವೆಂಕಟೇಶನ ದನಿಯಲ್ಲಿ ದುಗುಡವಿತ್ತು.

"ಇನ್ನು ಊರು ಸೇರಿಕೊಂಡು ಗದ್ದೆ ಉಳುವುದೊಂದೇ ದಾರಿ." ಶಂಕರ ನೀರಸ ದನಿಯಲ್ಲಿ ನುಡಿದ.

"ಎಲ್ಲರೂ ಊರು ಸೇರಿಕೊಂಡು ಏನು ಮಾಡುತ್ತೀರಿ ? ಜಮೀನಿನ ಉಸ್ತುವಾರಿಗೆ ಹೇಗೂ ದೊಡ್ಡಪ್ಪಂದಿರು ಇದ್ದಾರೆ. ಮನೆ ಸೇರಿಕೊಂಡು ವೃಥಾ ಕಾಲಹರಣ ಮಾಡುವುದೇ ? ವಿದ್ಯೆಯಿಲ್ಲದ ಮೇಲೆ ಏನು ಪ್ರಯೋ-ಜನ ? ಈ ಕಾಲಕ್ಕೆ ನಮಗೆ ವಿದ್ಯೆ ಬೇಕೇಬೇಕು." ಎಂದ ರವಿ ಮೂವರನ್ನೂ ಕರೆದುಕೊಂಡು ಮನೆಯ ಮಾರ್ಗಹಿಡಿದ. ಓರಗೆಯವರು ಅನುತ್ತೀರ್ಣ ರಾದುದು ಮನಸ್ಸಿಗೆ ನೋವನ್ನುಂಟುಮಾಡಿದ್ದು ತಾನು ಉತ್ತೀರ್ಣನಾದ ಸಂತೋಷ ಹಾಗೇ ಹುಗಿದು ಹೋಗಿತ್ತು. ಯೋಚಿಸುತ್ತ ಘನಘಾಂಭೀರ್ಯ ದಿಂದ ವೆಂಕಟೇಶ ಮೌನ ಮುರಿದ "ನಮ್ಮ ಕಲ್ಪನೆಯೆಲ್ಲಾ ಕನಸಿನ ಗಂಟಾಗಿ ಪರಿಣಮಿಸಿತು. ಮುಂದೇನು ಮಾಡಬೇಕೆಂಬುದು ಬಗೆ ಹರಿಯದಾಗಿದೆ."

"ನಿರ್ಮಲವಾದ ಜೀವನ ನಡೆಸಬೇಕೆಂದು ಎಷ್ಟು ಆಸೆಯಿಂದ ಇದ್ದೆವೋ ಅಷ್ಟೇ ನಿರಾಸೆಯಾಯಿತು."

"ಕಂಬನಿ ಸುರಿಸುವುದರಿಂದೇನು ಪ್ರಯೋಜನ ?"

"ರವೀ, ನಾವೀಗ ಓದಿದ್ದೇವೆಂದರೆ ಮನೆಯಲ್ಲಿ ನಂಬುತ್ತಾರೆಯೇ ? ಹಣ ಹಾಳು ಮಾಡಿ ಪೋಲಿ ತಿರುಗಿದರು ಎನ್ನುತ್ತಾರೆ."

"ಅದು ನಿಜ."

"ಮುಖ್ಯವಾಗಿ ನಮಗೆ ಅದೃಷ್ಟವಿಲ್ಲ."

"ಎದೆಗುಂದಬಾರದು ಶಂಕರೂ."

"ತಲೆಯೆತ್ತಿ ತಿರುಗುವುದು ಹೇಗೆ? ಅಪ್ಪ ನಮ್ಮನ್ನು ಕಂಡರೆ ಮೊದಲೇ ಉರಿದು ಬೀಳುತ್ತಾರೆ. ಇನ್ನು ಮನೆಗೆ ಹೋಗುವುದು ಹೇಗೆ ? ಅದೇ ಕಷ್ಟ ವಾಗಿದೆ...ಬದುಕಿಯೂ ವ್ಯರ್ಥ."

"ವೆಂಕಟೇಶ್, ಇಷ್ಟು ಅಧೀರನಾದರೆ ಹೇಗೆ ? ಕಾಲ ಇಲ್ಲಿಗೆ ಮುಗಿಯಿತೇ ?"

ಹಾದಿ ಮೆಲ್ಲನೆ ಸಾಗುತ್ತಿತ್ತು. ಓರಗೆಯವರ ದುಃಖ ರವಿಯ ಮನ

ಸ್ಸನ್ನು ಹಿಂಡಿತು. ಮತ್ತೆ ಹೊತ್ತು ದೀರ್ಘ ಮೌನವಾಚರಿಸಿತು. ನಾಲ್ವರೂ ಮುಂದೇನು ಮಾಡುವುದೆಂಬುದನ್ನು ಕುರಿತು ಚಿಂತಿಸುತ್ತಿದ್ದರು.

"ನಮ್ಮ ವಂಶೀಕರಲ್ಲಿ ಹಿರಿಯರಾರೂ ವಿದ್ಯಾವಂತರಾಗದ ಕಾರಣವೋ ಏನೋ ನಮಗೆ ವಿದ್ಯೆ ಹತ್ತಲಿಲ್ಲ. ಚಿಕ್ಕಂದಿನಲ್ಲಿ ನಮ್ಮ ಮನೋವಿಕಾಸ ಹೊಂದಲವಕಾಶವೂ ದೊರೆಯಲಿಲ್ಲ. ಇದು ನಮ್ಮ ತಪ್ಪಲ್ಲ; ಪ್ರಕೃತಿ ಜನ್ಯವಾದುದು." ಎಂದ ಸಿದ್ಧರಾಮ.

"ಅನಿಷ್ಟಕ್ಕೆ ಶನೀಶ್ವರ ಗುರಿ ಎಂದಂತಾಯಿತು." ವೆಂಕಟೇಶ ಮುಖದಲ್ಲಿ ನೀರಸ ನಗುವನ್ನು ಸೂಸಿ ಹೇಳಿದ. ಎಲ್ಲರ ಮುಖದ ಮೇಲೂ ಪೇಲು ನಗು ಕ್ಷಣಕಾಲ ಮಿನುಗಿ ಮಾಯವಾಯಿತು.

"ವೆಂಕಟೇಶ್, ಇನ್ನು ನಮ್ಮ ಓದು ಸಾಧ್ಯವೇಯಿಲ್ಲ. ಅಪ್ಪನಿಗೆ ನಮ್ಮಲ್ಲಿ ನಂಬುಗೆಯೂ ಹುಟ್ಟುವುದಿಲ್ಲ."

"ಶಂಕರನ ಮಾತು ಕೇಳಿ ಸಿದ್ಧರಾಮ ಹೇಳಿದ. ದನಿಯಲ್ಲಿ ಗಡುಸಿತ್ತು. "ಯಾರು ಏನಾದರೂ ಅಂದುಕೊಳ್ಳಲಿ. ಮುಖ್ಯವಾಗಿ ಭಗವಂತ ಮೆಚ್ಚಿದರೆ ಸಾಕು. ನಾವು ನಮ್ಮ ಅಂತರಾತ್ಮ ಮೆಚ್ಚುವಂತೆ ನಡೆದಿದ್ದೇವೆ."

"ಸರಿಯಪ್ಪಾ ಮುಂದೇನು ?"

"ಜೋಗಿಹಳ್ಳಿ ಬಹಳ ಹಿಂದುಳಿದ ಊರು. ಎಲ್ಲರೂ ಕೂಡಿ ಅದರ ಅಭಿವೃದ್ಧಿ ಕಾರ್ಯವನ್ನಾದರೂ ಕೈಗೊಳ್ಳಿರಿ." ರವಿ ತನ್ನ ಸಲಹೆಯನ್ನು ಮುಂದಿಟ್ಟ. ದನಿ ಎದೆಯಾಳದಿಂದ ಹರಿದು ಬಂತು.

"ಅಂದರೆ ಸಾಮಾಜಿಕ ಕ್ಷೇತ್ರಕ್ಕಿಳಿಯುವುದು ?" ಪ್ರಶ್ನೆ ಆಶ್ಚರ್ಯ ಭರಿತವಾಗಿ ಹೊಮ್ಮಿತು.

"ಹೌದು."

"ರವೀ, ಸಮಾಜ ಸೇವಕರ ಸೋಗಿನಲ್ಲಿ ಸಮಾಜ ದ್ರೋಹಿಗಳಾಗುವ ಇಚ್ಛೆ ನನಗಿಲ್ಲ." ಶಂಕರ ತಲೆಯಲ್ಲಾಡಿಸುತ್ತಾ ನಿರಾಕರಿಸಿದ.

"ಶ್ ! ಆ ಹೆಸರೇ ಎತ್ತಬೇಡ." ಸಿದ್ಧರಾಮ ದನಿಗೂಡಿಸಿದ.

"ಏಕಪ್ಪಾ ?"

"ಸಮಾಜ ಸೇವಕರ ಜೀವನವನ್ನು ನಾವು ನೋಡುತ್ತಿಲ್ಲವೇ ?" ದನಿಯಲ್ಲಿ ತಿರಸ್ಕಾರ ಹೊಮ್ಮಿತು.

"ಯಾರೋ ಹಾಗಿದ್ದಾರೆಂದು ಆ ಕ್ಷೇತ್ರವನ್ನೇ ದೂರೀಕರಿಸಿದರಾಗುತ್ತದೆಯೇ?" ಎಂದ ರವಿ ನಿಮಿಷಕಾಲ ತಡೆದು ಮುಂದುವರಿದ "ನಿನ್ನೆ ಚಂದಣ್ಣ ಬಂದಿದ್ದರು. ಅವರು ಮಾತಾಡುತ್ತಾ ಇದ್ದರೆ ಕೇಳುವವರಿಗೆ ಮೈಯೆಲ್ಲಾ ಕಿವಿಗಳಾಗುತ್ತವೆ ! ಅವರೂರಿನ ಚಿತ್ರವನ್ನು ನುಡಿಯಲ್ಲಿ ತೋರಿಸುತ್ತಾರೆ. ಈಗ ಅಲ್ಲಿನ ಚಟುವಟಿಕೆ ಅದರ ಸುಧಾರಣೆ ಎಷ್ಟೊಂದು ತ್ವರಿತಗತಿಯಲ್ಲಿ ಸಾಗುತ್ತಿದೆ ಎಂಬುದನ್ನು ಹೋಗಿ ನೋಡಿದಲ್ಲದೆ ಯಾರೂ ನಂಬರು. ಕಳೆದ ರಜೆಯಲ್ಲಿ ರಾಂಪುರಕ್ಕೆ ಹೋಗಿ ಬಂದೆ. ಅವರೇ ನನ್ನನ್ನು ಕರೆದುಕೊಂಡು ಹೋದರು. ಮನೆ ಮನೆಯಲ್ಲೂ ಅಚ್ಚುಕಟ್ಟು ಸಾಧಿಸಿದ್ದಾರೆ. ಜನರ ಮನದಲ್ಲಿ ಶುದ್ಧಿಯನ್ನು ತುಂಬಿದ್ದಾರೆ. ಊರು ದಿನೇ ದಿನೇ ಬೆಳೆಯುತ್ತಿದೆ. ಯುವಕರಲ್ಲಿ ಚೈತನ್ಯ ತುಂಬಿ ತುಳುಕುತ್ತಿದೆ. ಅಲ್ಲಿ ಎಲ್ಲರ ಕಷ್ಟ ಸುಖಗಳಿಗೂ ಚಂದಣ್ಣ ಮುಂದೆ. ಅಲ್ಲಿ ಅವರಿಗಿರುವ ಗೌರವಾದರಗಳನ್ನು ನೋಡಿದರೆ ಹೃದಯ ತಣಿಯುತ್ತದೆ. ಅವರ ಬಳಿ ಮೂರು ದಿನ ಕಳೆದುದೇ ಒಂದು ಆನಂದ ಸಿದ್ದೂ. ಅಂತಹವರು ನಮ್ಮ ದೇಶಕ್ಕೆ ಬೇಕು. ನೀವು ಅವರನ್ನೊಮ್ಮೆ ಸಲಹೆ ಕೇಳಿರಿ. ನಿಮಗೆ ಅವರು ಮಾರ್ಗದರ್ಶಿಗಳಾದಾರು."

"ನೀನು ಎಷ್ಟೇ ಹೇಳಿದರೂ ಮುಖ್ಯವಾಗಿ ಸಾಮಾಜಿಕ ರಂಗ ಇಷ್ಟವಿಲ್ಲ." ಎಂದ ಸಿದ್ಧರಾಮು.

ಅಷ್ಟೇ ಅಲ್ಲ ಸಿದ್ದೂ, ಸಾಮಾಜಿಕವೆಂದರೆ ಅಲ್ಲಿ ರಾಜಕೀಯವೂ ಬೆಸೆದುಕೊಳ್ಳುತ್ತದೆ !" ವೆಂಕಟೇಶ ಗಂಭೀರವಾಗಿ ಮುಂದುವರಿದ "ಸಾಮಾಜಿಕವಿಲ್ಲದೆ ರಾಜಕೀಯವಿಲ್ಲ. ರಾಜಕೀಯವಿಲ್ಲದೆ ಸಾಮಾಜಿಕವಿಲ್ಲ."

"ಇಸ್ಸಿಸ್ಸೀ ! ಅದು ಇನ್ನೂ ಹೊಲಸು."

"ಹಾಗೆನ್ನಬೇಡ. ಸಾಮಾಜಿಕ ಶುದ್ಧತೆಯಿಂದ ರಾಜಕೀಯದ ಪರಿಷ್ಕರಣ ಸಾಧ್ಯ. ಮುಖ್ಯವಾಗಿ ನಮ್ಮಲ್ಲಿ ಸಾಮಾಜಿಕ ಶುದ್ಧತೆ ಬೇಕು. ಬರಿಯ ರಾಜಕೀಯವನ್ನು ತೆಗಳುವುದರಿಂದೇನು ಫಲ ? ರಾಜಕೀಯಕ್ಕೆ ಸಾಮಾಜಿಕವೇ ತಳಹದಿ." ಎಂದ ರವಿ. ಆ ಮುಹೂರ್ತದಲ್ಲಿ ಬೆಳಗಿದ ಮುಖಚ್ಛವಿ ದರ್ಶನೀಯವಾಗಿತ್ತು.

"ಸಾಕಪ್ಪಾ ಸಾಕು. ನಾನಿನ್ನು ಕೇಳಲಾರೆ."

"ಏಕೆ ಸಿದ್ದೂ ?" ನಗುತ್ತ ಕೇಳಿದ ರವಿ.

"ಖಾದಿಯ ಕವಚದೊಳಗೆ ಹೃದಯವಿದೆಯೇ? ಮೋಸವನ್ನು ಉತ್ಪಾದಿಸುವ ಈ ಜನರ ಕೋಟೆಯೊಳಗೆ ನಾವೂ ಸೇರುವುದೇ? ಛೀ! ಛೀ! ಇದು ಸಾಧ್ಯವೇಯಿಲ್ಲ." ಸಿದ್ಧರಾಮನ ದನಿಯಲ್ಲಿ ಗಡಸು ಮೂಡಿತು.

"ಸಿದ್ಧರಾಮೂ, ಇಲ್ಲಿ ಕೇಳು. ಒಮ್ಮೆಲೆ ಗಗನಕ್ಕೆ ಚಿಮ್ಮಿಬಿಡುತ್ತಿ. ನಮ್ಮಲ್ಲಿ ಮೋಸವನ್ನು ಉತ್ಪಾದಿಸುವ ಜನ ಖಾದಿ ಧರಿಸುವವರಲ್ಲೂ ಇದ್ದಾರೆ. ಖಾದಿ ಧರಿಸದವರಲ್ಲೂ ಇದ್ದಾರೆ. ಅದನ್ನೇ ಒಂದು ದೃಷ್ಟಾಂತವಾಗಿಟ್ಟುಕೊಂಡರಾದೀತೇ? ಯಾರೋ ಮೋಸಗಾರರೆಂದು ನಾವು ಕೆಲಸ ಮಾಡದಿದ್ದರಾದೀತೇ? ಬೇಕಾದಷ್ಟು ಕಾಲಾವಕಾಶವಿದೆ ಯೋಚಿಸಿ ವಿಚಾರ ಮಾಡು. ಸಾಮಾಜಿಕ ಪರಿಶುದ್ಧತೆಯೇ ದೇಶೋನ್ನತಿಗೆ ತಳಹದಿ." ಸಾವಧಾನದಿಂದ ಹೊರಟಿತು ರವಿಯ ದನಿ.

ಎದುರಿನಿಂದ ಬಂದ ಕಾರೊಂದು ಭರ್ರನೆ ಸಾಗಿ ಹೋಯಿತು. ಅದರ ಮುಂಬದಿಯಲ್ಲಿ ರಾಷ್ಟ್ರ ಬಾವುಟವೊಂದು ಹಾರುತಿತ್ತು. ಅದನ್ನೇ ನೆಟ್ಟ ದಿಟ್ಟಿಯಿಂದ ದಿಟ್ಟಿಸುತ್ತ ಶಂಕರ "ರವೀ, ನಮ್ಮಲ್ಲಿ ಪ್ರಜಾಪ್ರಭುತ್ವ ಇಷ್ಟು ಬೇಗ ನಿಸ್ಸಾರವಾದೀತೆಂದು ಯಾರಾದರೂ ಎಣಿಸಿದ್ದರೇನು? ಒಂದು ಕಾಲದಲ್ಲಿ ಕಾಂಗ್ರೆಸ್ಸು ಎಂತಹ ಗೌರವವನ್ನು ಹೊಂದಿತ್ತು? ಈಗ ಅದು ನಮ್ಮ ಮುಂದೆಯೇ ಕುಸಿದು ಬಿತ್ತು."

"ಸೂರ್ಯ ಹುಟ್ಟಿದ ಮೇಲೆ ಮುಳುಗಲೇ ಬೇಕು." ವೆಂಕಟೇಶನೆಂದ.

"ಹುಟ್ಟಿದ ಮೇಲೆ ಮುಳುಗುವುದು ನಿಯಮವಾದರೂ ಕಾಂಗ್ರೆಸ್ ಈಗಾಗಲೇ ಮುಳುಗಿತು ಎನ್ನಲಾಗುವುದಿಲ್ಲ" ರವಿ ನಗುತ್ತ ಹೇಳಿದ.

"ಮುಳುಗಿತು ಎನ್ನಲಾಗದಿದ್ದರೂ ಮುಳುಗುತ್ತಿದೆ; ಎನ್ನೋಣವೇ?" ಶಂಕರ ಮುಖದಲ್ಲಿ ನಗುವನ್ನು ತೇಲಿಸಿದ.

"ಇಂದು ದೇಶದಲ್ಲಿ ಪ್ರಾಮಾಣಿಕತೆ ಇದೆಯೆ? ನಮ್ಮ ಈಚಿನ ನೀತಿ ಮೋಸವನ್ನು ಉತ್ಪಾದಿಸುವ ಯಂತ್ರಾಗಾರವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು."

"ಕಾಂಗ್ರೆಸ್ಸಿನ ಪ್ರತಿಭೆಯನ್ನು ಇಂದು ಎಲ್ಲೆಲ್ಲೂ ನೋಡುತ್ತಿದ್ದೇವೆ ರವಿ ಮಹಾಶಯಾ! ಮೋಸ ಸ್ವಾರ್ಥ ಅಧರ್ಮ ಅಸತ್ಯ ಅನಾಚಾರ ಇನ್ನೂ ಏನೇನು ಬೇಕು ನಿನಗೆ?" ಸಿದ್ಧರಾಮ ಅಣಕದ ದನಿಯಲ್ಲಿ ಹೇಳಿದ.

"ಚಿಃ! ಚಿಃ! ನಿನ್ನ ವಾದ ಸರಿಯಲ್ಲ. ಆಳಕ್ಕಿಳಿಯದ ಹೊರತು ಮಂತ್ರಿ ದೊರಕ__" ಮುಂದೆ ಮಾತಾಡಗೊಡದೆ ಸಿದ್ಧು ಬಾಯಿದೆರೆದ "ಈ ಕಾಂಗ್ರೆಸ್ಸಿಗರ ವ್ಯವಹಾರ ನೋಡಿದರೆ ಅದು ಮುಳುಗುವುದೇ ಲೇಸು ರವೀ!"

"ಏಕೆ ಅಷ್ಟೊಂದು ಹಠ ? ಜಗತ್ತಿನಲ್ಲಿ ಹೊಲಸಿಲ್ಲದೆಡೆಯುಂಟೇ ? ಮಲವಿದ್ದೆಡೆ ನಿರ್ಮಲೀಕರಣ ಕೈಗೊಳ್ಳೋಣ. ಎಂದೂ ಟೀಕೆ ಟಿಪ್ಪಣಿಗಳ ಗೊಡವೆ ನಮಗೆ ಬೇಡ. ನಮ್ಮಲ್ಲಿ ಕಾಂಗ್ರೆಸ್ ಮಾತ್ರವಲ್ಲ, ಎಲ್ಲಾ ಪಕ್ಷಗಳೂ ಇವೆ ಎಂಬುದನ್ನು ಗಮನದಲ್ಲಿಟ್ಟುಕೊಂಡಿದ್ದೀಯಷ್ಟೆ ?"

"ಶ್ಶ್, ಆ ಸೊಲ್ಲೇ ಎತ್ತಬೇಡಪ್ಪಾ; ನಾನು ಲೋಕಾಚಾರಕ್ಕೆ ತಲೆಬಾಗಲಾರೆ."

"ತಾಳಿದವ ಬಾಳಿಯಾನು."

"ತಾಳುವುದು ಎಲ್ಲಿಯ ತನಕ ರವಿ ? ಈಗ ನಡೆಯುತ್ತಿರುವುದೇನು ? ಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎಂಬಂತೆ ಎಲ್ಲೆಲ್ಲೂ ದೋಚುವುದೊಂದೇ ಗುರಿ! ಇಸ್ಸಿಸ್ಸೀ!!" ಸ್ವಲ್ಪ ತಡೆದು ಮತ್ತೆ ಮುಂದುವರಿದ ಸಿದ್ಧರಾಮು "ರಾಜರ ಆಳ್ವಿಕೆಯಲ್ಲಿ ರಾಮರಾಜ್ಯವಾಗಿದ್ದ ನಮ್ಮ ನಾಡು ಆಧುನಿಕ ವ್ಯವಹಾರದಲ್ಲಿ ಧರ್ಮಭ್ರಷ್ಟವಾಗುತ್ತಿದೆ! ಭರತಖಂಡದಲ್ಲಿನ ರಾಜ್ಯಗಳಿಗೆ ಒಂದೊಂದಕ್ಕೂ ನಾಲ್ಕಾರು ಜನ ಮಂತ್ರಿಗಳಿದ್ದರೆ ಸಾಕು. ಮಂತ್ರಿಮಂಡಲ ಚಿಕ್ಕದಾಗಿದ್ದಷ್ಟೂ ಚೊಕ್ಕವಾಗಿರುತ್ತದೆ. ಈಗಿನ ವ್ಯವಹಾರದಿಂದ ನಮ್ಮ ದೇಶದ ಘನತೆಯೇ ಕುಸಿದು ಬಿತ್ತು. ಒಂದು ವೇಳೆ ಕೆಲಸ ಬಹಳವಾದರೆ ಸೆಕ್ರೆಟರಿಗಳನ್ನು ಹೆಚ್ಚಿಸಿಕೊಳ್ಳಲಾಗದೇ? ಲೋಕ ಮೆಚ್ಚುವಂತೆ ಬಾಳುವುದು ಮುಖ್ಯವೇ ವಿನಾ ಅಧಿಕಾರವಲ್ಲ!" ಸಿದ್ಧರಾಮು ದೃಢವಾಗಿ ಹೇಳಿದ. ವಾಗ್ಝರಿ ಜಳ ಜಳ ಹರಿದು ಬಂತು.

"ಅಸಹ್ಯ-ಅವಮಾನ!"

"ಕೇಳಿ, ಕೇಳಿ!"

"ಸಿದ್ಧೂ, ಮಂತ್ರಿಮಂಡಲ ಬಾಳಬೇಕಾದರೆ ಶಾಸಕರ ಬೆಂಬಲಬೇಕು. ಬೆಂಬಲವಿಲ್ಲದೆ ಹೋದರೆ ಅಲ್ಲಿ ನಿಮಿಷವೂ ಇರುವಂತಿಲ್ಲ. ಬೆಂಬಲಗಳಿಸುವುದಕ್ಕಾಗಿ ಮಂತ್ರಿಮಂಡಲಗಳು ಬೆಳೆಯುತ್ತಾ ಹೋದುವು. ಇಲ್ಲಿ ಲೀಲಾಜಾಲ

ವಾಗಿ ಮಂತ್ರಿಮಂಡಲವನ್ನು ಕಿತ್ತೊಗೆಯಬಹುದಾದ ಸಾಧ್ಯತೆಯ ಬಗ್ಗೆ ಬಿಗಿ ಇದ್ದಲ್ಲಿ, ಸ್ವಾರ್ಥ-ಜಾತೀಯತೆ-ಗುಂಪುಗಾರಿಕೆ ಮುಂತಾದ ಕ್ಷುಲ್ಲಕ ಕಾರಣಗಳಿಂದ ಕಿತ್ತೊಗೆಯಲಾಗುವುದಿಲ್ಲ-ಅಂದರೆ ಸಕಾರಣಗಳಿಲ್ಲದೆ ಕಿತ್ತೊಗೆಯುವಂತಿರಬಾರದು-ಇಷ್ಟಾದರೆ ಮಂತ್ರಿಮಂಡಲ ಚಿಕ್ಕದಾಗಿಯೂ ಚೊಕ್ಕವಾಗಿಯೂ ಇದ್ದೀತು." ರವಿ ತನ್ನ ಅಭಿಪ್ರಾಯವನ್ನು ಮುಂದಿಟ್ಟ.

"ಅದಾದರೇನೇ ನಮ್ಮ ದೇಶಕ್ಕೆ ಗೌರವ."

"ಇಲ್ಲಿ ಕೇಳು. ರಾಜ್ಯಾಂಗದ ಪಿತೃಗಳೂ ಇವರೇ, ಕಾನೂನಿನ ಪಿತೃಗಳೂ ಇವರೇ, ಆಳುವವರೂ ಇವರೇ. ಅಂದ ಮೇಲೆ ಇನ್ನು ಹೇಳಬೇಕೆ? ಕೆಳಗಿನವರಿಗೆ ಕಾರಬಾರ, ಮೇಲಿನವರಿಗೆ ಶೋಷಣೆಯೇ ಜೀವನಾಧಾರ!" ಸಿದ್ಧರಾಮನ ದನಿ ಸಿಟ್ಟು-ತಿರಸ್ಕಾರಗಳ ಸಂಗಮವಾಗಿತ್ತು. ಕಣ್ಣುಗಳಲ್ಲಿ ಬೆಳಗಿದ ದೀಪ್ತಿ ಉಜ್ವಲವಾಗಿತ್ತು.

"ಪ್ರತಿಯೊಂದು ಕಾನೂನು ಕಟ್ಟಳೆಗಳು ಅವರವರ ಮೂಗಿನ ನೇರಕ್ಕೇ ಹೊರಬೀಳುತ್ತಿರುವುದನ್ನು ಗಮನಿಸಿದ್ದೀರಾ? ಶಂಕರ ಕೇಳಿದ.

"ಹೌದಪ್ಪಾ, ನಾವೇ ಪಿತೃಗಳಾಗಿರುವಾಗ ನಮ್ಮ ಅಕೃತ್ಯಗಳಿಗೆ ನಾವು ಅಸ್ತು ಎನ್ನುವುದು ಸಹಜ."

"ಕಾಂಗ್ರೆಸ್ಸಿನ ಗುಣದೋಷಗಳೇನೇ ಇರಲಿ, ಅದರ ಸೇವೆ ಅಪಾರವಾದುದು-ಅನಂತವಾದುದು. ಒಂದು ಶತಮಾನದಿಂದ ನಾನಾ ಮುಖಗಳಲ್ಲಿ ದೇಶಕ್ಕೆ ಸೇವೆ ಸಲ್ಲಿಸುತ್ತ ಬಂದಿದೆ. ಇನ್ನೂ ಸಲ್ಲಿಸಲಿದೆ. ಈ ಅವಧಿಯಲ್ಲಿ ಇನ್ಯಾವುದೇ ಪಕ್ಷ ಆಡಳಿತ ನಡೆಸಿದ್ದರೂ ಈ ತೀವ್ರ ಸಾಧನೆ ಸಾಧ್ಯವಾಗುತ್ತಿರಲಿಲ್ಲ ಎಂದು ಧೈರ್ಯವಾಗಿ ಹೇಳುವೆ. ಇಷ್ಟಕ್ಕೂ ನಾವು ತಪ್ಪು ಮಾಡಿ ಸಂಸ್ಥೆಯನ್ನು ದೂರುವುದರಿಂದೇನು ಪ್ರಯೋಜನ? ಸತ್ಯವನ್ನೇ ಹೇಳಿದರೂ ಪ್ರಿಯವಾಗಿ ಹೇಳಿರಿ." ಭಾವಾವಿಷ್ಟನಾಗಿ ನುಡಿದ ರವಿ.

"ರವೀ, ಬರಿಯ ಮಾತಿನಿಂದೇನು ಪ್ರಯೋಜನ ?"

"ಅದಕ್ಕೆಂದೇ ಹೇಳುತ್ತಿದ್ದೇನೆ, ಸಭ್ಯರಂತೆ ಟೀಕೆ ಟಿಪ್ಪಣಿಗಳನ್ನು ಬದಿಗಿಟ್ಟು ನೀವೆಲ್ಲರೂ ಸಾಮಾಜಿಕ ರಂಗಕ್ಕಿಳಿಯಿರಿ. ಅಲ್ಲಿ ರಾಜ್ಯಾಂಗವನ್ನು ಅಲ್ಲಾಡಿಸುವ ಶಕ್ತಿ ಪಡೆಯುವಿರಿ! ನೀವೇ ಇಂತಹ ನಾನಾ ನ್ಯೂನತೆಗಳನ್ನು ಸರಿಪಡಿಸಬಹುದು."

"ಇದು ತಿರುಕನ ಕನಸು."

"ವಿಚಾರ ಮಾಡು ಶಂಕರ್, ಮನಸ್ಸಿದ್ದಲ್ಲಿ ಮಾರ್ಗವುಂಟು"

"ನಮಗಲ್ಲಿ ಮನಸ್ಸಿಲ್ಲವಲ್ಲಾ ?"

ಒಡನೆ ಎಲ್ಲರೂ ನಕ್ಕರು. ಹಾಗೇ ಯೋಚಿಸಿ ವೆಂಕಟೇಶ ನುಡಿದ

"ಓ! ಮಾತಾಡುವುದೆಷ್ಟು ಸುಲಭ? ಪರೀಕ್ಷೆಯಲ್ಲಿ ಉತ್ತೀರ್ಣರಾಗದ ನಾವು ರಾಜ್ಯಾಂಗವನ್ನು ಅಲ್ಲಾಡಿಸುವವರೆಗೂ ಮಾತಾಡಿದ್ದೇವೆ! ಮಾತಿನಲ್ಲಿ ಮನೆ ಕಟ್ಟುವ ಯೋಜನೆ."

"ಹಾಗಲ್ಲ ವೆಂಕಟೇಶ್, ವಿಚಾರ ವಿನಿಮಯ ಮಾಡಿಕೊಳ್ಳುವುದು ಸರ್ವೋತ್ತಮ ...ಇದಕ್ಕೂ ಪರೀಕ್ಷೆಗೂ ಸಂಬಂಧವಿಲ್ಲ."

"ಒಟ್ಟಿನಲ್ಲಿ ಹೇಳುವುದಾದರೆ ಹಾಳು ಭವಿಷ್ಯ ನಮ್ಮ ಕೈಯ್ಯಲಿಲ್ಲ. ನಾವು ಯೋಚಿಸುವುದೊಂದಾದರೆ ಆಗುವುದು ಇನ್ನೊಂದು."

ಎಲ್ಲರೂ ಸಾಲಾಗಿ ಹೆಜ್ಜೆ ಹಾಕಿದರು. ಸ್ವಲ್ಪ ಹೊತ್ತು ಯೋಚಿಸಿ ರವಿ ಹೇಳಿದ "ಸಾಮಾಜಿಕ ಜೀವನದಲ್ಲಿ ನನಗೆ ಆಗಿನಿಂದಲೂ ಆಸಕ್ತಿ ಉಂಟು. ಡಾ॥ ಚಂದ್ರರವರಲ್ಲಿ ಕೆಲಸ ಮಾಡಿ ಅವರನ್ನು ಅರಿತು ಕೊಂಡಿದ್ದೇನೆ. ಚಂದಣ್ಣ ಬಂದಾಗಲೆಲ್ಲಾ ಇದೇ ವಿಚಾರವಾಗಿ ಕುರಿತು ಮಾತಾಡುತ್ತೇವೆ. ಮಾಧವರಾಯರ ಉದಾರ ಹೃದಯವನ್ನೂ ನೋಡಿ ರುವೆ. ನನ್ನನ್ನೀಗ ಮನಸ್ಸು ಅತ್ತಿತ್ತಲೇ ಎಳೆಯುತ್ತಿದೆ. ಆದರೆ ಮಾಡ ಲವಕಾಶವಿಲ್ಲ. ಉತ್ತಮ ತರಗತಿಯಲ್ಲಿ ಉತ್ತೀರ್ಣನಾಗಿರುವುದರಿಂ ಮೆಡಿಕಲ್ ಕಾಲೇಜಿಗೆ ಪ್ರವೇಶ ದೊರೆಯುತ್ತದೆ. ಓದು ಮುಗಿಯುವ ತನಕ ನನಗೆ ವಿರಾಮ ದೊರೆಯುವುದಿಲ್ಲ."

"ಹಲ್ಲಿದ್ದವರಿಗೆ ಕಡಲೆಯಿಲ್ಲ. ಕಡಲೆಯಿದ್ದವರಿಗೆ ಹಲ್ಲಿಲ್ಲ ಎಂಬ ಗಾದೆ ಸುಳ್ಳಲ್ಲ."

"ನಿಜ, ನಿಜ."

"ಡಾಕ್ಟರಲ್ಲಿ ದಿನವೂ ಕೆಲಸ ಮಾಡುತ್ತೀಯಾ?"

"ಬಿಡುವಿದ್ದಾಗಲೆಲ್ಲಾ ಸಂಜೆಯ ಹೊತ್ತು ಹೋಗುವೆ. ಅವರ ಸ್ನೇಹಾದರಗಳಿಗೆ ಸೀಮೆಯೇ ಇಲ್ಲ. ಬಡವ ಬಲ್ಲಿದರೆಂಬ ಬೇಧಭಾವವಿಲ್ಲ. ಬೆಳಗಿನಿಂದ ಸಂಜೆಯವರೆಗೆ ಅವರು ದುಡಿಯುವುದನ್ನು ನೋಡಿದರೆ ಕಲ್ಲೆ

ದೆಯೂ ಕರಗೀತು ಬರಿಯ ಚಿಕಿತ್ಸೆಯೊಂದೇ ಅಲ್ಲ. ಅವರ ಸೇವೆ ನಾನಾ ರೂಪದ್ದು. ಜನಪ್ರಿಯ ವ್ಯಕ್ತಿ, ದೇಶ ಪ್ರೇಮಿ, ಸರಳ ಜೀವಿ. ಅಂತಹವರು ನೂರಕ್ಕೊಬ್ಬರಿದ್ದರೂ ನಮ್ಮ ದೇಶ ನಂದನವನವಾಗುತಿತ್ತು." ಶಾಂತಿ ಸಮಾಧಾನಗಳ ಸಮುದಾಯವನ್ನು ದಾಟಿ ಆನಂದ ಭಾವದಿಂದ ನುಡಿದ ರವಿ.

"ಸರಿಯಪ್ಪಾ, ಅಂತಹವರೇ ಎಲ್ಲೆಲ್ಲೂ ಇದ್ದಿದ್ದರೆ ನಾನೂ ಸಂತೋಷದಿಂದ ದೇಶ ಸೇವೆಗೆ ಇಳಿಯುತಿದ್ದೆ."

"ನಿನ್ನ ತರ್ಕ ಸರಿಯಲ್ಲ ಶಂಕರ್. ಎಲ್ಲಿ ಕೊಳೆಯಿದೆಯೋ ಅಲ್ಲಿ ನುಗ್ಗಿ ಆ ಕೊಳೆಯ ನಿರ್ಮೂಲನಕ್ಕಾಗಿ ಹೋರಾಡುವುದೇ ಪುರುಷಾರ್ಥ ಎಂದು ಚಂದಣ್ಣ ಸದಾ ಹೇಳುತ್ತಾರೆ. ಅದರಲ್ಲಿ ಎಷ್ಟು ಸತ್ವವಿದೆಯೆಂಬುದನ್ನು ಯೋಚಿಸಿ ನೋಡು."

"ನಿರ್ಮೂಲನಗೊಳಿಸುವುದಿರಲಿ, ಅನ್ಯರ ಪಾಪದ ಹೊರೆಯನ್ನು ನಾವು ಹೊತ್ತುಕೊಳ್ಳುವುದರಲ್ಲಿ ಅನುಮಾನವಿಲ್ಲ."

"ಈ ಪಾಪದ ಪರಿಷ್ಕರಣ ಸಾಧ್ಯವೇಯಿಲ್ಲ."

"ಸಾಧ್ಯಾಸಾಧ್ಯತೆಗಳು ನಿಮ್ಮ ಕೈಯಲ್ಲಿವೆ ವೆಂಕಟೇಶ್."

"...... ......"

"ನಿಮ್ಮಿಂದ ಒಂದೊಂದು ಹಳ್ಳಿಯ ಉದ್ಧಾರವಾದರೆ ದೇಶಕ್ಕೊಂದು ಅಳಿಲ ಮಳಲ ಸೇವೆ. ನಮ್ಮಲ್ಲಿ ಹಳೆಯ ಕಂದಾಚಾರಗಳಿಗೆ ಕಟ್ಟುಬಿದ್ದು ಹೆಣ್ಣು ಮಕ್ಕಳ ಸ್ಥಿತಿ ಶೋಚನೀಯವಾಗಿದೆ. ಅವರ ಕಂಬನಿಯನ್ನು ತೊಡೆದರೆ ನಿಮಗೆ ಪುಣ್ಯ ಬಾರದೇ ? ಯಾರು ನಿಮಗೆ ಜನ್ಮವಿತ್ತರೋ ಯಾರು ನಿಮ್ಮೊಂದಿಗೆ ಹುಟ್ಟಿ ಬೆಳೆದರೋ ಯಾರು ನಿಮ್ಮೊಂದಿಗೆ ಸಹ ಬಾಳ್ವೆ ಮಾಡುವರೋ ಅವರ ಬಗ್ಗೆ ನೀವು ಕೊಂಚ ಯೋಚಿಸ ಕೂಡದೇ ? ಅನಕ್ಷರಸ್ಥೆಯರಾಗಿ ಪ್ರಾಪಂಚಿಕ ವ್ಯವಹಾರಗಳಿಂದ ಹೊರತಾಗಿ ನಾಲ್ಕು ಗೋಡೆಯೊಳಗೆ ಬದುಕಿ ನಿಮಗಾಗಿ ದುಡಿದು ನಿಮ್ಮಿಂದಾಗಿ ಮಡಿದು ಮಣ್ಣಿನೊಂದಿಗೆ ಮಣ್ಣಾಗಿ ಬೆರೆಯುವವರ ಗೋಳನ್ನು ನೀವು ಕಾಣಿರಾ ? ಇಪ್ಪತ್ತನೆಯ ಶತಮಾನದಲ್ಲಿಯೂ ಅವರಿಗೆ ಸೀಮಿತ ಜೀವನವೇ ?" ದನಿಯಲ್ಲಿ ಆವೇಶವಿತ್ತು. ಕಣ್ಣುಗಳಲ್ಲಿ ಕಾಂತಿಯು ಮಿಂಚಿನಂತೆ ಪ್ರಜ್ವಲಿಸಿತು. ರವಿ ಪುನಃ ಮುಂದುವರಿದ ನಾನೆನ್ನುವುದಾದರೆ ಸಮಾಜ ಸೇವೆಗಿಂತ ಹಿರಿದಾದ ಸೇವೆ

ಇನ್ನೊಂದಿಲ್ಲ. ಈ ಸಾಲಿನಲ್ಲಿ ನಾವು ಒಂದು ಅನಾಥ ಕನ್ಯಾ ಸಂರಕ್ಷಣಾಲಯವನ್ನು ತೆರೆಯಬೇಕೆಂದಿದ್ದೇವೆ. ಅದು ಅಮ್ಮನ ಇಚ್ಛೆ. ಡಾಕ್ಟರು ಸಹಾಯ ಮಾಡಲು ಸಿದ್ಧರಿದ್ದಾರೆ. ಮಾಧವರಾಯರು ಮದರಾಸಿನಿಂದ ಬಂದಮೇಲೆ ಮಾತಾಡುವೆ. ಹಿರಿಯರ ಬೆಂಬಲವಿಲ್ಲದೆ ಇದು ಸಾಧ್ಯವಾಗುವಂತಿಲ್ಲ. ಇದೊಂದು ಪುಟ್ಟ ಸೇವೆ."

"ನಿಜವಾಗಿಯೂ ನಿನ್ನ ಮಾತಿನಲ್ಲಿ ಸತ್ವವಿದೆ. ಆದರೆ ಇದು ಜನಧನಗಳಿಲ್ಲದೆ ಸಾಧ್ಯವಾಗದು."

"ಚಂದಣ್ಣ ಹತ್ತು ಮಂದಿಗೆ ಬೇಕಾದವರು. ಅವರು ಹೇಳಿದ್ದೇ ವೇದವಾಕ್ಯ. ಅವರು ಹೇಗೆ ಹೇಳಿದರೆ ಹಾಗೆ ಕೆಲಸ ನಡೆಯುತ್ತದೆ. ಇಲ್ಲಿ ನಮ್ಮನ್ನು ಕೇಳುವವರ್ಯಾರು ? ನಮಗೆ ಸಹಕಾರ ಒದಗೀತೆ ?"

"ಅಂತಹ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಸಿದ್ದೂ !"

"ಚಂದಣ್ಣನನ್ನೇ ಮುಂದಾಳಾಗಿಟ್ಟುಕೊಂಡರಾದೀತು." ವೆಂಕಟೇಶ ಹೇಳಿದ "ಅವರು ಪರೀಕ್ಷೆಯ ಫಲಿತಾಂಶ ತಿಳಿದ ಮೇಲೆ ಕೂಡಿ ಮಾತಾಡೋಣ ಎಂದಿದ್ದಾರೆ. ಅವರನ್ನೊಮ್ಮೆ ಕೇಳಿ ನೋಡುವೆ."

"ಮುಖ್ಯವಾಗಿ ಮನಸ್ಸು ಮಾಡಿರಿ."

ದಾರಿ ಸಾಗಿತು. ರವಿಯ ಹೆಂಚಿನ ಮನೆ ಸ್ವಾಗತ ನೀಡಿತು.

೨೩

ಜೇಷ್ಠ ಮಾಸದ ತುತ್ತ ತುದಿ. ಗ್ರೀಷ್ಮ ಋತುವಿನ ಪ್ರಕೃತಿಯ ಸೊಬಗು ಎಲ್ಲೆಲ್ಲೂ ತುಂಬಿ ಹರಡಿತ್ತು. ಚಂದು ಮುದ್ದನೊಂದಿಗೆ ಜೋಗಿ ಹಳ್ಳಿಯ ಹಾದಿ ತುಳಿದಿದ್ದ. ಅಂದೇ ವೆಂಕಟೇಶ ಮತ್ತು ಶಂಕರ ರಾಂಪುರಕ್ಕೆ ಹೋಗಿ ಚಂದುವನ್ನು ಒಮ್ಮೆ ಬಂದು ಹೋಗಿರೆಂದು ಕೇಳಿಕೊಂಡಿದ್ದರು. ಈ ಸಲವೂ ಪರೀಕ್ಷೆಯಲ್ಲಿ ಅನುತ್ತೀರ್ಣರಾದುದು ಹುಡುಗರಿಗೆ ಯೋಚನೆ ಗಿಟ್ಟುಕೊಂಡಿತ್ತು. ರಾಮಣ್ಣ ಮಗನಿಗೆ ಮದುವೆ ಮಾಡಿ ವ್ಯವಸಾಯಕ್ಕೆ ಹಾಕಬೇಕೆಂದು ಒತ್ತಾಯ ಪಡಿಸಿದ್ದ. ಮೊದಲು ನಿರ್ಮಲೆಯದಾಗಲಿ ಎಂದು ವೆಂಕಟೇಶನ ಉತ್ತರ. ಹೆಣ್ಣು ಗಂಡು ಎರಡೂ ಒದಗಿದರೆ ಇಬ್ಬ ರಿಗೂ ಮಾಡಿಯೇ ತೀರಬೇಕೆಂಬುದು ರಾಮಣ್ಣನ ಹಠ. ವೆಂಕಟೇಶ ಈ ತಿಕ್ಕಾಟದಲ್ಲಿ ಹಣ್ಣುಗಾಯಿ ನೀರುಗಾಯಿಯಾಗಿದ್ದ.

ತಂದೆಗೆ ತಿಳಿಯದಂತೆ ವೆಂಕಟೇಶ ರಾಂಪುರಕ್ಕೆ ಹೋಗಿ ಚಂದುವಿನ ಸಹಾಯವನ್ನು ಕೋರಿದ್ದ. ಚಂದು ಜೋಗಿಹಳ್ಳಿಯನ್ನು ಸೇರುವಷ್ಟರಲ್ಲಿ ಹೊತ್ತು ನೆತ್ತಿಯ ಮೇಲಕ್ಕೇರುತಿತ್ತು. ರಾಮಣ್ಣ ತೋಟದಿಂದ ಇನ್ನೂ ಹಿಂದಿರುಗಿರಲಿಲ್ಲ. ವೆಂಕಟೇಶ ಚಂದುವನ್ನು ಆದರದಿಂದ ಬರಮಾಡಿಕೊಂಡ. ಮುಖವನ್ನು ತೊಳೆದು ತಣ್ಣನೆಯ ಪಾನೀಯವನ್ನು ಕುಡಿದು ದಣಿವಾರಿಸಿ ಕೊಂಡನಂತರ ಚಂದು ಕೇಳಿದ "ನೀನೇಕೆ ತೋಟದ ಕೆಲಸಕ್ಕೆ ಹೋಗಲಿಲ್ಲ"? ವೆಂಕಟೇಶ ಉತ್ತರಿಸುವುದರೊಳಗಾಗಿ ರಾಮಣ್ಣ ಹಿಂದಿನಿಂದ ಗುಡುಗಿದ "ಈ ಭಂಡನಿಗೆ ದುಡಿದು ತಿನ್ನುವ ಯೋಗ್ಯತೆಯಿದ್ದರೆ ತಾನೆ ?" ಇಷ್ಟರೊಳ ಗಾಗಿ ರಾಮಣ್ಣ ಉತ್ತರಿಸಿಯಾನೆಂದು ಚಂದುವೂ ಬಗೆದಿರಲಿಲ್ಲ.

"ಓ, ಅದೆಷ್ಟು ಬೇಗ ಬಂದು ಬಿಟ್ಟೆ !" ಚಂದು ನಗುತ್ತಾ ಕೇಳಿದ.

"ಇದೇ ತಾನೇ ಬಂದೆ ಕಣಪ್ಪಾ" ಎಂದ ರಾಮಣ್ಣ ಗೆಳೆಯನ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡು ಅನಂತರ "ಇಂದು ನೀನು ಬಂದುದು ಒಳ್ಳೆಯದಾಯಿತು. ಬಂದುದಕ್ಕೆ ಈ ಭಂಡನಿಗಷ್ಟು ಬುದ್ಧಿಯಾದರೂ

ಹೇಳು." ಸಿಟ್ಟು-ಆಯಾಸಗಳ ಭರದಲ್ಲಿ ಮುಖ ಕಳೆಗೆಟ್ಟಿತ್ತು. ಬೆಳಗಿನಿಂದ ಕೆಲಸ ಮಾಡಿ ಮೈ ದಣಿದಿತ್ತು. ವೆಂಕಟೇಶ ಆಗಲೇ ಒಳಗಡೆ ಜಾರಿದ್ದ. ರಾಮಣ್ಣ ಕೈ ಕಾಲು ತೊಳೆಯುತ್ತಲೂ ರಾಜಮ್ಮ ಊಟಕ್ಕೆ ಅಣಿಮಾಡಿದಳು. ವೆಂಕಟೇಶ ಮತ್ತೆ ಉಣ್ಣುವುದಾಗಿ ಹೇಳಿ ತಪ್ಪಿಸಿಕೊಂಡ. ರಾಮಣ್ಣನೊಂದಿಗೆ ಚಂದು ಮುದ್ದ ಊಟಕ್ಕೆ ಕುಳಿತರು.

"ಚಂದೂ, ನನ್ನ ಶಕ್ತಿ ಮೀರಿ ಮಕ್ಕಳ ವಿದ್ಯೆಗಾಗಿ ಹಣ ಖರ್ಚು ಮಾಡಿದೆ. ಈ ಸಲವೂ ಇವನು ಉತ್ತೀರ್ಣನಾಗಲಿಲ್ಲ. ಇವನ ಜೊತೆಗಾರರೂ ಅಷ್ಟೆ. ಹೋಗಲಿ, ಎಂದರೆ ಗದ್ದೆ ತೋಟಗಳ ವ್ಯವಸ್ಥೆಯಾದರೂ ನೋಡಿಕೊಳ್ಳಬಾರದೇ ? ಆಳೆತ್ತರದ ಮಗನನ್ನು ಬೆಳೆಸಿ ನಾನು ದುಡಿದು ಇಕ್ಕ ಬೇಕಾಗಿದೆ." ಅತ್ಯಂತ ಬೇಸರದಿಂದ ನುಡಿದ ರಾಮಣ್ಣ.

"ಸ್ವಲ್ಪ ಸುಧಾರಿಸಿಕೊ, ಬೆಳಗಿನಿಂದ ದುಡಿದು ಬಳಲಿ ಬಂದಿದ್ದೀಯೆ. ಊಟ ಮಾಡುವಾಗಲಾದರೂ ಸಂತೋಷದಿಂದಿರಕೂಡದೇ ?"

"ನಾನು ಪಡೆದುಕೊಂಡು ಬಂದಿರುವುದೇ ಅಷ್ಟು. ಚಂದೂ."

"ಒಳ್ಳೆಯ ದಿನ ಇದ್ದೇ ಇದೆ. ಈಗಲೇ ಅಷ್ಟು ನಿರಾಶನಾದರೆ ಹೇಗೆ ? ವಿದ್ಯೆ ಹತ್ತದಿದ್ದರೆ ಜೀವನಕ್ಕೆ ಬೇರೆ ದಾರಿಯಿಲ್ಲವೇನು ? ಏನಾದರೂ ಮಾಡೋಣ. ಅದಕ್ಕೇಕೆ ತಲೆ ಕೆಡಿಸಿಕೊಳ್ಳುತ್ತಿ ?" ಚಂದು ಸಾವಧಾನದಿಂದ ನುಡಿದ.

"ಅನ್ಯಾಯವಾಗಿ ಹಣ ಹಾಳು ಮಾಡಿದ್ದಾಯ್ತು ; ಕಾಲವೂ ವ್ಯರ್ಥ."

ಊಟವಾದನಂತರ ರಾಮಣ್ಣ ಹಾಸಿಗೆ ಸೇರುವ ತನಕ ವೆಂಕಟೇಶ ಅತ್ತ ಸುಳಿಯಲಿಲ್ಲ. ಚಂದುವಿಗೂ ತಲೆ ದಿಂಬನ್ನಿತ್ತು ದಣಿವಾರಿಸಿಕೊಳ್ಳಲು ಹೇಳಿ ರಾಮಣ್ಣ ಮಲಗಲು ಹೋದ. ಅದನ್ನೇ ಕಾದುಕೊಂಡಿದ್ದು ವೆಂಕಟೇಶ ಶಂಕರನೊಂದಿಗೆ ಚಂದುವಿನ ಬಳಿಗೆ ಬಂದ. ಚಂದು ನಗುಮುಖದಿಂದ ಹುಡುಗರನ್ನು ಸ್ವಾಗತಿಸಿ ಕೇಳಿದ "ಏನಾದರೂ ಯೋಚಿಸಿದ್ದೀರಾ ? ಏನುಮಾಡಬೇಕೆಂಬುದು ನಿಮ್ಮ ಇಚ್ಛೆ ?"

"ಅದೇ ಹೊಳೆಯದಾಗಿದೆ ?"

"ಓದು ಮುಂದುವರಿಸುವಿರಾ ?"

"ಅದಂತೂ ಆಗದ ಮಾತು. ಇನ್ನು ಮುಂದೆ ನಮ್ಮ ಕೈಗೆ ದುಗ್ಗಾ

ಣೆಯೂ ಸಿಕ್ಕುವುದಿಲ್ಲ. ಒಳ್ಳೆಯ ನೌಕರಿಯೂ ಸಿಕ್ಕದು" ಎಂದ ಶಂಕರ. ಮುಖಮಂಡಲ ಮ್ಲಾನವಾಗಿತ್ತು.

"ವ್ಯವಸಾಯ ಕ್ಷೇತ್ರ ಬೇಸರವಾಗಿದೆ. ಮೇಲಾಗಿ ಜಮೀನೂ ಜಾಸ್ತಿ ಇಲ್ಲ. ಒಂದಾಳಿಗೆ ಸಾಕಾಗುವಷ್ಟು ಕೆಲಸವಿದೆ. ನಾನೂ ಇಲ್ಲಿದ್ದುಕೊಂಡು ಮಾಡುವುದೇನು ?" ವೆಂಕಟೇಶ ಕಳಕಳಿಯಿಂದ ನುಡಿದ.

"ಎಲ್ಲಿಯೋ ಕಾರಕೂನನಾಗಿರುವುದಕ್ಕಿಂತ ಊರಿನಲ್ಲಿರುವುದೇ ಕ್ಷೇಮ. ತೋಟಗಾರಿಕೆಯನ್ನು ನೋಡಿಕೊಂಡು ಯಾವುದಾದರೂ ಉದ್ಯೋಗ ಮಾಡು. ಬರಿಯ ವ್ಯವಸಾಯ ನಿನಗೆ ಹಿಡಿಸದಿರಬಹುದು."

"ಹಣವಿಲ್ಲವಲ್ಲಾ ?"

"ಹೋಗಲಿ, ಸಮಾಜಸೇವಾ ಕಾರ್ಯವನ್ನೇ ಮಾಡಿರಿ. ಊರು ಮುಂದುವರಿಯುವುದರೊಂದಿಗೆ ನಿಮಗೆ ಕೀರ್ತಿಯೂ ಲಭಿಸಿ ಉತ್ಸಾಹ ಮೂಡುತ್ತದೆ. ಈಗ ವ್ಯವಸಾಯವೊಂದೇ ಆಗಿರುವುದರಿಂದ ನಿಮಗೆ ರುಚಿಸ ದಿದೆ" ಚಂದು ಸಲಹೆಯನ್ನು ಮುಂದಿಟ್ಟ.

"ರವಿಯೂ ಅದನ್ನೇ ಹೇಳುತ್ತಾನೆ. ಸಾಮಾಜಿಕ ಜೀವನಕ್ಕಿಳಿದ ಮೇಲೆ ರಾಜಕೀಯವೂ ಬೆಸೆದುಕೊಳ್ಳುತ್ತದೆ. ನನಗೆ ರಾಜಕೀಯದಲ್ಲಿನ ಹೊಲಸು ಜೀವನ ಇಷ್ಟವಾಗುವುದಿಲ್ಲ."

"ಹಾಗೆಂದವರುಂಟೆ ? ಎಲ್ಲಿ ಹೊಲಸಿದೆಯೋ ಅಲ್ಲಿ ನುಗ್ಗಿ ಅದರ ನಿರ್ಮೂಲನಗೈಯ್ಯುವ ಎದೆಗಾರಿಕೆಯಿರಬೇಕು. ಶಂಕರೂ, ಇಷ್ಟೊಂದು ಅಂಜಿಕೆಯಿದ್ದರೆ ನೀನು ಏನನ್ನೂ ಸಾಧಿಸಲಾರೆ." ಚಂದುವಿನ ಮಾತು ಎದೆಯಾಳಕ್ಕೆ ಇಳಿಯಿತು. ಯೋಚಿಸುತ್ತ ಕುಳಿತಿದ್ದ ವೆಂಕಟೇಶ ಸ್ವಲ್ಪ ಚೇತರಿಸಿಕೊಂಡು "ಏನು ಮಾಡಬೇಕೆಂಬುದನ್ನಾದರೂ ಹೇಳಿರಿ" ಎಂದ.

"ಊರಿನ ಹಿರಿಯರನ್ನು ಇಲ್ಲಿ ಕಲೆ ಹಾಕು, ಕೂಡಿ ಮಾತಾಡೋಣ."

"ನಮ್ಮಪ್ಪಂದಿರಿಬ್ಬರೂ ಇದಕ್ಕೊಪ್ಪುವುದು ಕಾಣೆ. ಅಲ್ಲಿಗೆ ಊರಿನ ಹಿರಿಯರಲ್ಲಿ ಇಬ್ಬರು ಒಪ್ಪುವುದಿಲ್ಲವೆಂದಾಯ್ತು" ಎಂದ ಶಂಕರ.

"ಅವರನ್ನು ಹೇಗಾದರೂ ಒಪ್ಪಿಸೋಣ. ಆ ವಿಚಾರ ಒತ್ತಟ್ಟಿಗಿರಲಿ. ಬಾಕಿಯವರನ್ನು ಒಟ್ಟುಗೂಡಿಸಿರಿ."

"ಹಾಗಿದ್ದರೆ ನೀವು ವಿಶ್ರಾಂತಿ ಪಡೆಯಿರಿ. ನಾವು ಎಲ್ಲರನ್ನೂ ಬರ

ಮಾಡುತ್ತೇವೆ" ಎಂದ ಶಂಕರ. ಜೊತೆಗೆ ಮುದ್ದನನ್ನೂ ಬರಲು ಹೇಳಿದ. ಮೂವರೂ ಕೂಡಿ ಹೊರಟೊಡನೆ ಚಂದು ಹೇಳಿದ "ನಾವಿಂದೇ ಊರಿಗೆ ಹೊರಡಬೇಕು. ಆದಷ್ಟು ಬೇಗ ಎಲ್ಲರನ್ನೂ ಬರಲು ಹೇಳು. ನಿಮ್ಮ ಓರಗೆಯವರೂ ಬರಲಿ."

"ಆಗಲಿ ಚಂದಣ್ಣಾ" ಎನ್ನುತ್ತ ವೆಂಕಟೇಶ ತ್ವರಿತಗತಿಯಲ್ಲಿ ಹೆಜ್ಜೆ ಹಾಕಿದ. ಮುದ್ದನಿಗೆ ಊರನ್ನು ತೋರಿಸುತ್ತಾ ಇಬ್ಬರೂ ಗದ್ದೆಯಂಚಿನಲ್ಲಿ ನಡೆದರು. ಹೊತ್ತಿಗೆ ಮುಂಚೆ ರಾಮಣ್ಣನ ಮನೆಯಲ್ಲಿ ಹತ್ತಾರು ಮಂದಿ ಹಿರಿಯರು ಕೂಡಿದರು. ರಾಮಣ್ಣ ಮತ್ತು ರಾಜಣ್ಣನಿಗೆ ಅಸಮಾಧಾನವಾಗಿದ್ದರೂ ತೋರಗೊಡದೆ ಮನದಲ್ಲೇ ಸಿಡುಕಿದರು. ಚಂದು ಬರಹೇಳಿದ್ದಾನೆಂದು ವೆಂಕಟೇಶ ಬರ ಹೇಳಿದ್ದರಿಂದ ರಾಜಣ್ಣ ಹೊರಟು ಬಂದಿದ್ದ. ಅಲ್ಲಿಗೆ ಬಂದನಂತರವೇ ವಿಷಯ ತಿಳಿದು ಬಂದುದು. ಮೊದಲೇ ಸೋಮಾರಿಯಾಗಿದ್ದ ಮಕ್ಕಳನ್ನು ಚಂದು ಸಂಪೂರ್ಣ ಹಾಳುಮಾಡುತ್ತಾನೆಂಬ ಸಿದ್ಧಾಂತಕ್ಕೆ ಬಂದ ಅವರು ಎದುರು ಬಿದ್ದು ಮಾತನಾಡಲಾರದೆ ಎಲ್ಲರೂ ಹೋದ ಮೇಲೆ ಹುಡುಗರನ್ನೇ ತರಾಟೆಗೆ ತೆಗೆದುಕೊಳ್ಳಬೇಕೆಂದುಕೊಂಡು ಸುಮ್ಮನಾದರು. ತಮ್ಮ ಕೂಟಕ್ಕೆ ಕೂಡದೆ ಅತ್ತಿತ್ತ ಓಡಾಡಿಕೊಂಡಿದ್ದುದನ್ನು ನೋಡಿ ಸಿದ್ಧಣ್ಣ ಕೇಳಿದ "ರಾಮಣ್ಣಾ! ಕೊಂಚ ಕೂಡಬಾರದೇ ?"

"ನೀವು ಕೂಡಿ ಮಾತಾಡಿರಿ; ಅನಂತರ ಬರುವೆ."

"ರಾಜಣ್ಣನೆಲ್ಲಿ ?" ಚಂದು ಕೇಳಿದ.

"ತೋಟಕ್ಕೆ ವೀಳೆಯದೆಲೆ ತರಲು ಹೋಗಿದ್ದಾನೆ."

"ಅನಂತರ ತರಬಹುದಾಗಿತ್ತು."

"ನಿಮಗಾಗಿಯೇ ತರಲು ಹೋಗಿದ್ದಾನೆ."

ರಾಮಣ್ಣ ಹಾಗೆಂದು ಹೇಳಿದ್ದರೂ ರಾಜಣ್ಣ ಮುಖ್ಯವಾಗಿ ಆ ಕೂಟದಿಂದ ತಪ್ಪಿಸಿಕೊಳ್ಳಲೆಂದೇ ಹೊರಹೋಗಿದ್ದ. ವೆಂಕಟೇಶ ಕೆಲವು ಲಿಂಬೆ ಹಣ್ಣುಗಳನ್ನು ಹುಡುಕಿ ತಂದು ಬೆಲ್ಲದ ಪಾನಕವನ್ನು ಮಾಡಿ ಅತಿಥಿ ಸತ್ಕಾರ ಮಾಡಿದ. ಒಂದು ಗಂಟೆಯ ಚರ್ಚೆಯಲ್ಲಿ ಚಂದು ಶತ ಪ್ರಯತ್ನ ಮಾಡಿ ನೆರೆದ ಸಭಾಸದರನ್ನು ಚಂದಾ ಕೊಡಲೂ ಚಂದಾ ಕೂಡಿಸಲೂ ಒಪ್ಪಿಸಿದ. ಚಂದಾ ಹಣ ಕೂಡಿದ ನಂತರ ಊರಿಗೊಂದು ಪಾಠಶಾಲೆ, ವಾಚನಾಲಯ

ಮತ್ತು ರಂಗಮಂದಿರಗಳನ್ನು ಊರಿನವರೇ ಕಟ್ಟಬೇಕೆಂದು ತೀರ್ಮಾನ ವಾಯಿತು. ಸಭಾಸದರ ಸಂಖ್ಯೆ ಗಣನೀಯವಾಗಿರದಿದ್ದರೂ ವಿಷಯ ಗಮನೀಯವಾಗಿತ್ತು. ನೆರೆದವರು ಶಕ್ತ್ಯಾನುಸಾರ ಹಣಕೊಡಲು ವಾಗ್ದಾನ ಮಾಡಿದರು. ರಾಮಣ್ಣ ಮತ್ತು ರಾಜಣ್ಣ ಎಲ್ಲಕ್ಕೂ ವಿಮುಖರಾಗಿ ನಿಂತರು. ಚಂದು ನಿರುಪಾಯನಾಗಿ ಸುಮ್ಮನಾದ. ವಿಷಯ ತೀರ್ಮಾನವಾದ ನಂತರ ಊರ ಹಿರಿಯರು ಹೊರಟು ಹೋದರು. ಕಿರಿಯರಿಗೆ ಚಂದು ಹಿತೋಪದೇಶ ಹೇಳಿದ. "ನಿಮ್ಮ ಕೆಲಸ ಕಾರ್ಯ ರೂಪುಗೊಳ್ಳುವವರೆಗೆ ನಾನು ಆಗಾಗ ಬರುವೆ. ವೆಂಕಟೇಶ ಹೊಣೆಗಾರಿಕೆಯನ್ನು ನಿರ್ವಹಿಸುತ್ತಾನೆ. ಶಂಕರ ಮುಖ್ಯ ಕಾರ್ಯದರ್ಶಿ. ಸಿದ್ಧರಾಮ ಖಜಾಂಚಿ. ಕೆಲಸ ಕಾರ್ಯಗಳನ್ನು ಚಾಚೂ ತಪ್ಪದಂತೆ ನೋಡಿಕೊಳ್ಳುವುದು ಎಲ್ಲರ ಕೆಲಸ. ಶಾಲಾ ಕಟ್ಟಡ ಗಳಿಗೆ ಬೇಕಾಗುವ ನಿವೇಶನಗಳನ್ನು ಪುಕ್ಕಟೆಯಾಗಿ ಒದಗಿಸುವುದು ನನ್ನ ಕೆಲಸ. ಊರ ಹೊರಗಿನ ವಿಶಾಲವಾದ ಬಯಲೇ ಉತ್ತಮವಾದ ಸ್ಥಳ. ಅದನ್ನು ನೀವೊಮ್ಮೆ ನೋಡಿ ನಿರ್ಧರಿಸಿರಿ. ಮುಂದಿನ ವಾರ ನಾನು ಬರುವೆ."

ಊರ ತರುಣರ ಮೈಯಲ್ಲಿ ಉತ್ಸಾಹ ನೂರ್ಮಡಿಯಲ್ಲಿ ಮಿಂಚಿನಂತೆ ಹರಿದಾಡಿತು. ಎಲ್ಲರೂ ಕುಣಿದಾಡಿ ಒಪ್ಪಿಕೊಂಡರು. ಚಂದುಗೆ ವಂದಿಸಿ ಕಿರಿಯರ ಕೂಟ ಚದುರಿದೊಡನೆ ರಾಮಣ್ಣ ಹೊರಬಂದು ರೋಷದಿಂದ ಹೇಳಿದ "ಚಂದೂ, ನಿನ್ನ ಅವಾಂತರ ನನಗಂತೂ ಸಹಿಸುವುದಕ್ಕಾಗುತ್ತಿಲ್ಲ. ಈ ಹುಡುಗರು ಪೋಲಿ ತಿರುಗಿ ಮೈ ಬೆಳೆಸಿಕೊಂಡವರು. ಇನ್ನು ಇವರ ಭಾಗಕ್ಕೆ ಸಾರ್ವಜನಿಕ ಸೊತ್ತನ್ನು ಕೊಳ್ಳೆ ಹೊಡೆಯುವುದೊಂದು ಬಾಕಿ ಉಳಿದಿತ್ತು. ಅದನ್ನೀಗ ನೀನು ಕಲಿಸುತ್ತಿರುವೆ ! ಇದೇನು ಹುಚ್ಚು ಹುಡುಗಾಟವೇ ?"

"ನಿನ್ನ ಕೋಪ ಅರ್ಥವಿಲ್ಲದ್ದು ರಾಮಣ್ಣಾ ! ಇಂದು ಈ ಹುಡುಗರು ವ್ಯವಸಾಯದಲ್ಲಿ ಆಸಕ್ತಿ ಇಲ್ಲದಿದ್ದಾರೆ. ನಾನು ಅದನ್ನೂ ಉಂಟು ಮಾಡಿ ತೋರಿಸುವೆ. ಊರಿಗೊಂದು ಶಾಲೆ ಬಂದು ನಿಮ್ಮ ಮಕ್ಕಳು ಓದಿ ಬುದ್ಧಿ ವಂತರಾದರೆ ಯಾರಿಗೆ ಬೇಡ ?"

"ಸರಿ, ಅದನ್ನೆಲ್ಲಾ ನಿಂತು ಇವರು ಮಾಡಿದರೆ ನಮ್ಮ ಕೆಲಸ ಮಾಡು ವವರಾರು ? ಊರ ಕೆಲಸಕ್ಕೆ ನಮ್ಮ ಹೊತ್ತು ಕಳೆಯುವುದೇ ? ನೀನಂತೂ

ಈ ಪಂಡರನ್ನು ಅಡ್ಡದಾರಿ ಹಿಡಿಸುತ್ತಿ." ಏರಿದ ದನಿಯಲ್ಲಿ ನುಡಿದ ರಾಮಣ್ಣ ಕಣ್ಣುಗಳು ಕಿಡಿ ಕಾರಿದುವು.

"ನೀನು ಇಂದು ಎಷ್ಟೇ ಕೋಪಗೊಂಡರೂ ಮುಂದೆ ಸಂತೋಷ ಪಡುವೆ ಎಂಬುದು ನನಗೆ ಗೊತ್ತು. ಏನಾದರಾಗಲಿ ನಿನ್ನ ಮಕ್ಕಳನ್ನು ಅಡ್ಡದಾರಿ ಹಿಡಿಯದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ. ಆ ಬಗ್ಗೆ ನೀನು ಚಿಂತಿಸಬೇಡ." ಚಂದು ಸಮಾಧಾನ ಹೇಳಿದ.

ಬಹಳ ದಿನಗಳ ಗೆಳೆತನದಿಂದಾಗಿ ರಾಮಣ್ಣ ಕೋಪತಾಪಗಳನ್ನು ಬಿಗಿ ಹಿಡಿದುಕೊಂಡ. ರಾಜಣ್ಣ ಸದ್ದಿಲ್ಲದೆ ಹೊರಟು ಹೋಗಿದ್ದ. ಚಿಕ್ಕವರ ಗುಂಪೊಂದು ಚಂದುವನ್ನು ಊರ ಹೊರಗಿನ ಬಯಲವರೆಗೂ ಹೋಗಿ ಬೀಳ್ಕೊಟ್ಟು ಬಂದರು. ವೆಂಕಟೇಶನ ಮೈಯಲ್ಲಿ ಚೇತನದ ಸಂಚಾರ ಮಿಂಚಿನಂತೆ ಹರಿದಾಡಿತು; ತಂದೆಯ ಕಣ್ಣಿಗೆ ಬೀಳದಂತೆ ಕಾಲಹರಣ ಮಾಡಿದ. ಚಂದುವಿನ ಅಣತಿಯಂತೆ ತರುಣರ ಬಳಗ ಕಾರ್ಯಕ್ರಮದಲ್ಲಿ ನಿರತವಾಯಿತು. ಊರ ಮಹಿಳೆಯರೂ ತಮ್ಮ ಕೈಲಾದಷ್ಟು ಪುಡಿಗಾಸು ಗಳನ್ನು ಕೂಡಿ ಹಾಕಿ ಚಂದಾ ಒದಗಿಸಿದರು.

ಆದರೂ...!

ರಾಮಣ್ಣ ಮತ್ತು ರಾಜಣ್ಣರ ರೋಷ ನೆತ್ತಿಗೇರುತ್ತಿತ್ತು.

೨೪

ಅಂದು ಭಾನುವಾರವಾದ್ದರಿಂದ ರಜೆಯಿತ್ತು. ರಾಯ ವೃತ್ತ ಪತ್ರಿಕೆಯನ್ನು ಓದುತ್ತ ಕುಳಿತುಕೊಂಡಿದ್ದ. ಉದಯ ರವಿ ಮೆಲ್ಲಮೆಲ್ಲನೆ ಬಾನೇರುತಿದ್ದಾನೆ. ಮಂದಮಾರುತ ಒಯ್ಯೊಯ್ಯನೆ ತೀಡಿ ಸುತ್ತ ಮುತ್ತಣ ಸುಮಸೌರಭವನ್ನು ಒಯ್ದು ತರುತಿದ್ದಾನೆ. ಪಕ್ಷಿಗಳ ಚಿಲಿಪಿಲಿರಾಗದ ಮಧ್ಯೆ ಕಲ್ಲು ಬೆಂಚಿನ ಮೇಲೆ ಕುಳಿತು ತಂಗಾಳಿಗೆ ಮೈಯೊಡ್ಡಿದ ರಾಯ ಪತ್ರಿಕಾವ ಲೋಕನದಲ್ಲಿಯೇ ತದೇಕ ಚಿತ್ತನಾಗಿದ್ದ. ಗಾಳಿಯಾಟದಿಂದಲೂ ಹೂಗೊಂಚಲ ಕೈಗಳು ನಲಿನಲಿದು ಸ್ವಾಗತಿಸುವಂತೆ ತೂಗಾಡುತಿದ್ದವು. ಬೆಳಗಿನ ಮಧುರವಾತಾವರಣ ತನುಮನಗಳಿಗೆ ತಂಪನ್ನು ನೀಡುತ್ತಿತ್ತು.

ಸ್ವಲ್ಪ ಹೊತ್ತು ಸದ್ದಿಲ್ಲದೆ ಉರುಳಿತು.

ಶಾರದೆ ಕೈಯಲ್ಲಿ ಹಾಲಿನ ಲೋಟೆಯೊಡನೆ ಅಲ್ಲಿಗೆ ಬಂದಳು. ಐದು ತಿಂಗಳ ಗರ್ಭಿಣಿ. ರಸವತ್ತಾದ ಫಲದಂತೆ ಅಂಗಾಂಗಗಳು ತುಂಬಿಕೊಂಡು ಅತ್ಯಂತ ಸುಂದರಿಯಾಗಿ ಕಣ್ಗೆಸೆಯುತಿದ್ದಳು. ಸತಿಯಾಗಮನದಿಂದ ಸಂತುಷ್ಟನಾದ ರಾಯ ನಗುಮುಖದಿಂದ ಹಾಲಿನ ಲೋಟೆಯನ್ನು ಕೈಗೆ ತೆಗೆದುಕೊಳ್ಳುತ್ತ ಕೇಳಿದ "ನೀನು ತೆಗೆದುಕೊಂಡೆಯಾ ?"

"ಹ್ಞೂ" ಮುಖದಲ್ಲಿ ಮಂದಹಾಸ ಬೀರಿ ನುಡಿದಳು ಶಾರದೆ.

"ಯಾತ್ರೆಯ ಫಲಿತಾಂಶ ಇಷ್ಟು ಬೇಗ ತಿಳಿದೀತೆಂದು ನಾನೆಣಿಸಿರಲಿಲ್ಲ. ಅಮ್ಮನ ಆಸೆಯನ್ನು ಪೂರೈಸೋಣವೆಂದು ಹೊರಟೆನೇ ಹೊರತು ನನಗದರಲ್ಲಿ ನಂಬಿಕೆಯಿರಲಿಲ್ಲ. ಆದರೂ ದೇವರು ದಯಾಮಯ." ಮಾತು ಹೊರಬಿತ್ತೋ ಇಲ್ಲವೋ ಶಾರದೆಯ ಮುಖ ಕೆಂಪಡರಿತು.

"ಹರಕೆ ಹೊತ್ತವಳಿಗೆ ಲಜ್ಜೆಯೇಕೋ ?"

ಶಾರದೆ ಮುಗುಳು ನಕ್ಕಳು, ಮಾತನಾಡಲಿಲ್ಲ. ಮಧುರವಾತಾವರಣದಲ್ಲಿನ ಆ ರಸನಿಮಿಷ ತನುಮನಗಳಿಗೆ ಆನಂದಾಮೃತವನ್ನುಣಿಸಿ...ಪತ್ರಿಕೆಯನ್ನು ನಿರುಪಯುಕ್ತಗೊಳಿಸಿತು. ಮಕರಂದವನ್ನು ಹೀರುವ ದುಂಬಿಯಂತೆ ನೆಟ್ಟನೋಟದಿಂದ ಸುಂದರ ರೂಪಿನ ರಸಸ್ವಾದನೆ ಮಾಡುತ್ತ ಅಂದ

"ಭಾವೀ ಕಾಲಗರ್ಭದಲ್ಲಿ ಏನೇನಿದೆಯೆಂಬುದನ್ನು ಅರಿಯದ ನಾವು ನಿತ್ಯ ಅಗತ್ಯಗಳಿಗಾಗಿ ಎಷ್ಟೊಂದು ಪರದಾಡುತ್ತೇವೆ ? ಇದ್ದುದರಲ್ಲಿ ತೃಪ್ತಿಪಡುವ ಸ್ವಭಾವ ಮನುಷ್ಯರಿಗಿಲ್ಲ ಶಾರದಾ, ಆ......" ಮಾತು ಮುಗಿಯುವುದರೊಳಗಾಗಿ ಪ್ರಕಾರದ ಬಾಗಿಲು ಖಣಿಲ್ ಎಂದು ಸದ್ದು ಮಾಡಿತು. ಸಹಜವಾಗಿ ಕಣ್ಣ ನೋಟ ಅತ್ತ ಹರಿದಾಗ ರವಿಯೂ ಶ್ಯಾಮುವೂ ಒಳಗಡೆ ಬರುತ್ತಿದುದು ಕಾಣಬಂತು. ಆಳನ್ನು ಕೂಗಿ ಮತ್ತೆರಡು ಕುರ್ಚಿಗಳನ್ನು ತರಿಸಿದ ರಾಯ. ಬಹಳದಿನಗಳಿಂದ ಪ್ರವಾಸದಲ್ಲಿದ್ದುದರಿಂದ ರವಿ ಉತ್ತೀರ್ಣನಾದ ಮೇಲೆ ನೋಡಿರಲಿಲ್ಲ. ಇಂದು ಅವನನ್ನು ಕಾಣುತ್ತಲೂ ಎಲ್ಲಿಲ್ಲದ ಸಂತಸ ಮೂಡಿ ಬಂತು. ಕೈ ಹಿಡಿದು ಆತ್ಮೀಯತೆಯಿಂದ ಕುಲುಕಿ "ರವೀ ಹೃತ್ಪೂರ್ವಕವಾದ ಅಭಿನಂದನೆಗಳು !" ಎಂದ. ತುಟಿಗಳಲ್ಲಿ ಮಂದಹಾಸ ಮಿನುಗಿತು.

"ನಿಮ್ಮ ಆಶೀರ್ವಾದ ರಾಯರೇ." ಎನ್ನುತ್ತ ರವಿ ಕಾಲು ಮುಟ್ಟಿದ. ಆಶೀರ್ವದಿಸಿ ರಾಯನೆಂದ "ಭಗವಂತನ ಕೃಪೆ."

"ಭಗವಂತನ ಕೃಪೆಯೊಂದಿಗೆ ಹಿರಿಯರ ಆಶೀರ್ವಾದವೂ ಬೇಕು."

"ಮೆಡಿಕಲ್ ಕಾಲೇಜಿನಲ್ಲಿ ಸುಖವಾಗಿ ಪ್ರವೇಶ ದೊರೆಯುತ್ತದೆ. ಡಾಕ್ಟರಾಗುವ ತನಕ ಓದು ಒಂದೇ ನಿನ್ನ ಗುರಿಯಾಗಿರಲಿ."

"ನಿಮ್ಮ ಆಶೀರ್ವಾದವೊಂದಿದ್ದರೆ ಸಾಕು." ರವಿಯ ನಗುಮುಖದಲ್ಲಿ ಸ್ವಲ್ಪ ಲಜ್ಜೆಯೂ ಬೆರೆತಿತ್ತು.

"ಫಲಿತಾಂಶ ತಿಳಿದೊಡನೆ ರವಿ ಅಮ್ಮನಿಗೆ ನಮಸ್ಕರಿಸಿ ನಿಮ್ಮ ಆಶೀರ್ವಾದ ಎಂದ. ಅವನ ಸುಗುಣವೇ ಅವನನ್ನು ಕಾಪಾಡುತ್ತಿದೆ." ಎಂದು ರಾಯನೊಡನೆ ಹೇಳಿದಳು ಶಾರದೆ.

ರವಿ ಸಜಲನಯನನಾಗಿ ಕುಳಿತುಕೊಂಡ ; ಮಾತಾಡಲಿಲ್ಲ.

ಶಾರದೆ ಖಾಲಿ ಲೋಟೆಯೊಡನೆ ಒಳ ಹೋದಳು.

"ನಿಮಗೆ ಇನ್ನಿಷ್ಟು ತೊಂದರೆ ಕೊಡೋಣವೆಂದು ಬಂದಿದ್ದೇವೆ. ನಿಮಗೆ ತೊಂದರೆ ಕೊಡುವ ವಿಚಾರದಲ್ಲಿ ನಮಗಂತೂ ಸಂಕೋಚವಿಲ್ಲ."

"ಸಂಕೋಚವಿರಬೇಕೆ ಶ್ಯಾಮೂ ?" ನಸುನಕ್ಕ ರಾಯ ಪುನಃ ಪ್ರಾಸಂಗಿಕವಾಗಿ "ಈ ಸಾಲಿಗೆ ನೀನೂ ಎಸ್. ಎಸ್. ಎಲ್. ಸಿ. ಕಟ್ಟು

ತ್ತೀಯಲ್ಲವೆ ? ರವಿಯಂತೆ ನೀನೂ ಪ್ರಥಮ ದರ್ಜೆಯಲ್ಲಿ ಉತ್ತೀರ್ಣನಾಗಲು ಪ್ರಯತ್ನ ಪಡು. ಮಕ್ಕಳು ಬಾಳಿಗೊಂದು ಊರು ಗೋಲಾಗಿದ್ದರೆ ಬದುಕು ಸುಗಮ."

ಶ್ಯಾಮು ಮುಖದಲ್ಲಿ ಮುಗುಳುನಗೆಯನ್ನು ತೇಲಿಸಿ ನುಡಿದ "ಮನಸ್ಸಿನಲ್ಲಿ ಈಗಿನಿಂದಲೇ ಭಯ ಮೂಡಿದೆ."

"ಭಯವೇಕೆ ಧೈರ್ಯವಾಗಿರು..... ಓಹೋ ಮುಖ್ಯವಾದ ವಿಚಾರ ಮರೆತಿದ್ದೆ. ನೀವೇನೋ ಶಾಲೆ ತೆರೆಯಬೇಕೆಂದು ಯೋಚಿಸುತ್ತಿದ್ದೀರಂತೆ?" ದನಿಯಲ್ಲಿ ಅಚ್ಚರಿ ಹೊಮ್ಮಿ ಮುಖದಲ್ಲಿ ಪ್ರಸನ್ನತೆ ಮೂಡಿತು.

"ಅದಕ್ಕಾಗಿಯೇ ಬಂದೆವು."

"ಏನು ಮಾಡಬೇಕೆಂದು ನಿಮ್ಮ ಇಚ್ಛೆ ?"

"ಈ ರಜೆಯಲ್ಲಿ 'ಬೆನಿಫಿಟ್ ಷೋ'ಗಳನ್ನು ಏರ್ಪಡಿಸಿ ಬಂದ ಹಣದಲ್ಲಿ ಅನಾಥ ಕನ್ಯಾ ವಿದ್ಯಾಲಯವನ್ನು ತೆರೆಯಬೇಕೆಂದು ಅಮ್ಮನ ಇಚ್ಛೆ. ನಮ್ಮ ಜೀವಿತದಲ್ಲಿ ಏನನ್ನಾದರೂ ಸಾಧಿಸಬೇಕೆಂಬುದು ಅವರ ಆಶಯ. ಅವರಿಗೆ ಬಿಡುವಿಲ್ಲವಾದರೂ ವಿಷಯ ತಲೆಯನ್ನು ಹೊಕ್ಕಿದೆ. ನಮ್ಮ ಮನೆಯ ಪಕ್ಕದ ನಿವೇಶನ ದೊರೆತರೆ ಪುಟ್ಟಮ್ಮನವರು ನೋಡಿಕೊಳ್ಳುವುದಾಗಿ ಹೇಳಿದ್ದಾರಂತೆ. ಆದ್ದರಿಂದ ಇದೇ ನಿವೇಶನ ದೊರಕಿಸಿಕೊಡಲು ಅಮ್ಮ ನಿಮ್ಮ ಸಹಾಯ ಕೇಳಿದ್ದಾರೆ." ರವಿ ವಿಷಯವನ್ನು ಮುಂದಿಟ್ಟ.

"ನಮ್ಮಮ್ಮನಿಗೆ ಏನು ತಿಳಿದೀತು ?"

"ಅದನ್ನೆಲ್ಲಾ ಹೇಗಾದರೂ ಮಾಡಿಕೊಳ್ಳೋಣ. ಹೆಸರು ನಿಮ್ಮದಿರಲಿ, ಕೆಲಸ ನಮ್ಮದು. ಶ್ರೀಮತಿ ಸುಬ್ಬಲಕ್ಷ್ಮಿಯವರ ಹಾಡುಗಾರಿಕೆ ಮತ್ತು ಶ್ರೀಮತಿ ಬಾಲಸರಸ್ವತಿಯವರ ಭರತ ನಾಟ್ಯ ಏರ್ಪಡಿಸೋಣ. ಅನಂತರ 'ಬೆನಿಫಿಟ್ ಷೋ'ಗಳ ಏರ್ಪಾಡು "

"ಇದನ್ನೆಲ್ಲಾ ನಿನ್ನ ಅಮ್ಮ ಹೇಳಿದರು ಇದು ಎಂದೆಂದೂ ಮುಗಿಯಲಾರದ ಹೊರೆ ಎಂಬುದನ್ನು ಯೋಚಿಸಿದ್ದೀರಾ ?"

"ನಿಮ್ಮ ನೆರವಿರುವುದರಿಂದ ನಮಗೇನು ಭಯವಿಲ್ಲ." ಎಂದ ಶ್ಯಾಮು.

"ಅಷ್ಟು ಸುಲಭವೆಂದು ಭಾವಿಸಬೇಡ. ನೀವಿನ್ನೂ ಚಿಕ್ಕವರು. ನಿಮ್ಮ ತಾಯಿಗೆ ಬಿಡುವಿಲ್ಲ. ನಮ್ಮ ತಾಯಿಗೆ ವಿದ್ಯೆಯಿಲ್ಲ. ನನಗೂ

ಬಿಡುವು ಸಿಕ್ಕುವುದಿಲ್ಲ. ಹೊರಗಿನವರನ್ನು ನೇಮಿಸಿಕೊಳ್ಳಬೇಕು. ಹಿಡಿದ ಕೆಲಸವನ್ನು ಕೆಡದಂತೆ ನಡೆಸಬೇಕು. ಇದನ್ನೆಲ್ಲಾ ಕುರಿತು ಇನ್ನೊಮ್ಮೆ ಯೋಚಿಸಿರಿ."

ಅಷ್ಟರಲ್ಲಿ ಪುಟ್ಟಮ್ಮ ಅಲ್ಲಿಗೆ ಬಂದಳು. ಹುಡುಗರನ್ನು ಆದರದಿಂದ ಒಳಗೆ ಬರಮಾಡಿಕೊಂಡು ಅತ್ತೆ ಸೊಸೆಯರು ತಿಂಡಿ ತಿನಿಸುಗಳನ್ನಿತ್ತು ಉಪಚರಿಸಿದರು. ತಿಂಡಿಯನ್ನು ಮುಗಿಸಿ ಹೊರ ಬಂದ ಹುಡುಗರು ರಾಯನ ಬಳಿಗೆ ಬಂದು ಕುಳಿತರು.

"ಶ್ರೀಮತಿ ಸುಬ್ಬಲಕ್ಷ್ಮಿಯವರಿಗೆ ನೀವೇ ಪತ್ರ ಬರೆಯಿರಿ." ಎಂದ ರವಿ.

"ಆಗಲಿ, ನಿಮ್ಮ ಉತ್ಸಾಹಕ್ಕೆ ಸಂತೋಷಪಡಬೇಕು ; ಇಂದೇ ಅವರಿಗೆ ಬರೆಯುವೆ. ಅಮ್ಮನಿಗೂ ಉತ್ಸಾಹ ಮೂಡಿದೆ. ಶಾಲೆಗಾಗಿ ಅವರ ಎರಡೆಳೆ ಚೈನು ಕೊಡುತ್ತೇನೆ ಎಂದಿದ್ದಾರೆ. ಪಾಪ, ಶಿವಮ್ಮನಿಗೆ ಅವರ ಬಾಳೇ ಒಂದು ಉದಾಹರಣೆ. ಆದ್ದರಿಂದ ಅವರ ಆಸೆ ಸಹಜವಾಗಿ ಹೆಣ್ಣು ಮಕ್ಕಳ ಕಡೆಗಿದೆ."

"ಹೇಗೂ ಪಕ್ಕದಲ್ಲಿ ಖಾಲಿ ನಿವೇಶನವಿದೆ. ನೀವು ಮನಸ್ಸು ಮಾಡಿದರೆ ಇದು ಕಷ್ಟವಾಗುವುದಿಲ್ಲ. ಈ ಉತ್ಸಾಹದುಬ್ಬರವಿಳಿಯುವುದರೊಳಗಾಗಿ ಶಾಲೆ ಆರಂಭವಾದರೆ ಉತ್ತಮ. ಅನಂತರ ಈ ಚಂಚಲ ಮನಸ್ಸು ಹೇಗಿರುತ್ತೋ ?" ಶ್ಯಾಮು ನಗುತ್ತ ಹೇಳಿದ.

"ತರಕಾರಿ ಬೇಕೇ ? ತರಕಾರೀ !"

ಬೀದಿಯಲ್ಲಿ ಹೆಂಗಸೊಬ್ಬಳು ಕೂಗಿದಳು. ನಿಜವಾಗಿಯೂ ಆ ದನಿಯಲ್ಲಿ ಮಾಧುರ್ಯವಿತ್ತು. ತಲೆಯ ಮೇಲೆ ತರಕಾರಿಯ ಬುಟ್ಟಿ, ಕೊಂಕುಳಲ್ಲೊಂದು ಮಗು. ಹಳೆ ಹಳೆಯ ಸೀರೆಯೊಂದು ಅವಳನ್ನು ಬಳಸಿ ಸುತ್ತಿತ್ತು. ಕೈಯಲ್ಲಿನ ಕಡಗಗಳು ಜಿಡ್ಡು ಕವಿದು ಕಪ್ಪು ತಳೆದಿದ್ದುವು. ಬಾಚಿ ಶುದ್ಧಿ ಮಾಡದ ಕೂದಲು ಒರಟು ಒರಟಾಗಿ ಜೋಲು ಬಿದ್ದಿತ್ತು. ತರುಬಿ ಕಟ್ಟಿದ ತುರುಬು ಅಸ್ತವ್ಯಸ್ತವಾಗಿದ್ದರೂ ಅಲ್ಲೊಂದು ಬೆಳ್ಳಿಯ ಹೂವು ಅಲಂಕರಿಸಿತ್ತು. ಹರಿದು ಮಾಸಿ ಹೋಗಿದ್ದ ರವಿಕೆಯು ಸಡಿಲಸಡಿಲವಾಗಿ ಜೋಲು ಬಿದ್ದಿತ್ತು. ಕಿವಿ ಮೂಗುಗಳಲ್ಲಿನ ನಕಲಿ ಒಡವೆಗಳು ಜೀವನದ ಜಡತ್ವವನ್ನು

ಸಾರಿ ಹೇಳುತಿದ್ದುವು. ಕೆಲವೇ ನಿಮಿಷಗಳಲ್ಲಿ ಆಕೆ ಕಣ್ಮರೆಯಾದಳು.

ಮರುಕ್ಷಣದಲ್ಲಿ ಹರೆಯದ ಹೆಣ್ಣೊಂದು ಕೈಯಲ್ಲಿ ಪೊರಕೆಯನ್ನಾಂತು ಕಣ್ಮುಂದೆ ಹಾದು ಹೋಯಿತು. ಕರ್ಣಾಭರಣದ ಭಾರದಿಂದ ಕಿವಿ ಹರಿದು ಜೋಲು ಬಿದ್ದಿತ್ತು. ಕೊರಳ ಕರಿಮಣಿ ಸರ, ಹಣೆಯಲ್ಲಿ ಬೊಟ್ಟು, ಸ್ನಾನ ಕಾಣದ ಮೈ, ಮಾಸಿದ ಉಡುಪು, ಅತೀ ದುಡಿಮೆಯಿಂದ ಒರಟಾದ ದೇಹ. ಹಿಂದೂಸ್ಥಾನದ ಪ್ರತೀಕ !

ಹಾಗೇ ನೋಡುತ್ತಾ ರವಿ ವಿಚಾರಮಗ್ನನಾಗಿ "ರಾಯರೇ ಈ ಜನರ ಮಟ್ಟ ಸುಧಾರಿಸಿದ ಹೊರತು ನಮ್ಮ ದೇಶ ಸುಧಾರಿಸದು. ಮುಖ್ಯವಾಗಿ ಈ ಹೆಂಗಳೆಯರ ಸುಧಾರಣೆಯಾಗಬೇಕು."

"ರವೀ, ನಿನ್ನ ಮಾತು ಅಕ್ಷರಶಃ ಸತ್ಯ. ವಿದ್ಯೆಯಿಲ್ಲದೆ ನಮ್ಮ ದೇಶ ಹಿಂದುಳಿಯಿತು. ವಿದ್ಯೆಯಿಲ್ಲದ ತಾಯಿ ಮಗುವನ್ನು ಹೇಗೆ ತಿದ್ದಿಯಾಳು ? ನಮ್ಮ ತಂದೆ ತೀರಿಕೊಂಡಾಗ ನನಗೆ ಹದಿನೆಂಟರ ಹರೆಯ. ಓದಬೇಕೆಂದಿದ್ದ ಉತ್ಕಟ ಆಕಾಂಕ್ಷೆ ಕುಸಿದು ಬಿತ್ತು. ಆದರೂ ಚಿಂತೆಯಿಲ್ಲ. ತಂದೆಯವರ ಕೆಲಸವನ್ನು ತಕ್ಷಣ ಕೈಗೊಂಡೆ. ಜೀವನ ಯಥಾ ರೀತಿ ಸಾಗಿತು. ಒಂದು ವೇಳೆ ನಾನಿಲ್ಲವಾಗಿದ್ದಲ್ಲಿ ಅಮ್ಮನ ಗತಿಯೇನಾಗುತ್ತಿತ್ತು ಯೋಚಿಸು. ಈಗ ನೆನೆಸಿಕೊಂಡರೆ ಮೈ 'ಜುಂ' ಎನ್ನುತ್ತೆ. ಈ ಕಷ್ಟ ನಿವಾರಣೆಯಾಗಬೇಕಾದರೆ ತಕ್ಷಣ ಜೀವನದ ಭಾರವನ್ನು ಹೊರುವಷ್ಟು ಹೆಣ್ಣು ಚತುರೆಯಾಗಿರಬೇಕು. ಅಂದರೆ ಜೀವನ ರಥ ಸುಸೂತ್ರವಾಗಿ ನಡೆದೀತು."

ಪ್ರಾಕಾರದ ಬಾಗಿಲಿನಲ್ಲಿ ಚಿಕ್ಕ ಹುಡುಗಿಯೊಂದು ಭಿಕ್ಷಾಟನೆಗಾಗಿ ಬಂದಿದ್ದಾಳೆ. ಸೊಂಟದಲ್ಲೊಂದು ಜೀವಚ್ಛವವಾದ ಮಗು. ಎಲುಬಿನ ಹಂದರದಲ್ಲಿ ಹೊಟ್ಟೆಡೊಳ್ಳಾಗಿ ಆತುಕೊಂಡಿತ್ತು. ನೀರು ಕಾಣದ ಮೈ, ಬಾಚದ ಕೂದಲು, ಚಿಂದಿ ಚಿಂದಿಯಾದ ಲಂಗ, ಹುಡುಗಿಯ ಸ್ಥಿತಿಗತಿಯನ್ನು ಸೂಚಿಸುತಿದ್ದವು. ನಿಸ್ತೇಜವಾದ ಮುಖದಲ್ಲಿ ಗುಳಿಬಿದ್ದ ಕಂಗಳು, ಮೂಗಿನಲ್ಲಿ ಸಿಂಬಳ, ಸೀರಿ ಸೀಕಲಾದ ಕೈಕಾಲುಗಳು, ನೋಡುವವರಿಗೆ 'ಅಯ್ಯೊ' ಎನ್ನಿಸುವಂಥ ದೃಶ್ಯ.

ರಾಯ ಎದ್ದು ಹೋಗಿ ಮಗುವಿನ ಕೈಗೆ ಕಾಸನ್ನಿಟ್ಟ. ಹುಡುಗಿ ಕದಲದೆ ನಿಂತಳು.

"ಮಗೂ ನಿನಗೆ ತಾಯಿತಂದೆಯರಿದ್ದಾರೆಯೆ ?"

"ಹ್ಞೂ."

"ಏನು ಮಾಡುತ್ತಾರೆ ?"

"ಮಗುವಿಗೆ ಅರ್ಥವಾಗದೆ ಸುಮ್ಮನೆ ನಿಂತಳು."

"ಅವರು ಕೆಲಸ ಮಾಡುವುದಿಲ್ಲವೇ ?"

"........"

ರಾಯ ಪುನಃ ಕೇಳಿದ.

"........"

"ಅವರು ಕೆಲಸ ಮಾಡುವುದಿಲ್ಲವೇ ? ಅದೂ ನಿನಗೆ ತಿಳಿಯದೆ ?"

ಮಗು ಮಾತನಾಡದೆ ತಲೆಯಲ್ಲಾಡಿಸಿತು.

"ಸರಿ ಹೋಗು." ಎಂದ ರಾಯ. ಹುಡುಗಿ ನಿಧಾನವಾಗಿ ಹೊರಟಳು. ದೇಹವೇ ಭಾರವಾಗಿದ್ದ ಜೀವಕ್ಕೆ ಕೂಸೊಂದು ಹೊರಲಾರದ ಹೊರೆ. ಯೋಚಿಸುತ್ತ ಭಾವಪರವಶನಾಗಿ "ಜಡತೆಯೆ ದಾರಿದ್ರ್ಯಕ್ಕೆ ತಳಹದಿ. ಈ ಜಡತೆಯನ್ನು ಬಡಿದೋಡಿಸಿ ಜನ ಜಾಗೃತರಾಗದ ಹೊರತು ನಮ್ಮ ದೇಶ ಪ್ರವರ್ಧಮಾನ ಹೊಂದುವುದಿಲ್ಲ."

"ನಿರ್ವಾಲವಾದ ಜೀವನದಲ್ಲಿ ಆಸಕ್ತಿಯಿಲ್ಲದ ಮೇಲೆ ಹೇಗೆ ?" ಪುಟ್ಟಮ್ಮ ಕರುಣಕಾತರಭಾವದಿಂದ ಕೇಳಿದಳು.

"ಹೊಟ್ಟೆಗೆ ಹಿಟ್ಟೇ ಇಲ್ಲದಿರುವಾಗ ಹೇಗೆ ಆಸಕ್ತಿ ಬಂದೀತು ?"

"ಇವರನ್ನು ತಿದ್ದುವುದು ಅಷ್ಟೊಂದು ಸುಲಭವೇ ಶ್ಯಾಮೂ ? ಹೊಟ್ಟೆ ತುಂಬಿದ ಮೇಲೆ ಹಾದಿಯಲ್ಲಿ ಬೀದಿಯಲ್ಲಿ ನಿದ್ದೆ ಹೋಗುವ ಜನ ಇವರು. ಹೊಟ್ಟೆಬಟ್ಟೆಗಳಿಗಾಗಿ ಬಾಯಿ ಬಿಟ್ಟರೆ ಸಾಕೆ ? ಶುದ್ಧ ಜೀವನದ ಚಿಂತನೆ ಬೇಡವೆ ?" ಎಂದ ರಾಯ ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಃ "ಈ ಜನರ ಮಟ್ಟ ಸುಧಾರಿಸಿದರೇನೇ ನಮ್ಮ ದೇಶ ಸುಧಾರಿಸಿದಂತೆ ಎಂಬುದು ಸತ್ಯವಾದರೂ ಇದಕ್ಕೆ ಬಹಳ ಕಾಲ ಬೇಕು."

"ಇನ್ನರ್ಧ ಶತಮಾನಕ್ಕೂ ಮೀರಿದ ವಿಷಯ ಇದು." ಪುಟ್ಟಮ್ಮ ನುಡಿದಳು-ಮನಸ್ಸು ವಿವಶವಾಗಿತ್ತು.

"ಅಳಿಲ ಮಳಲ ಸೇವೆ. ನಾಲ್ಕು ಮಕ್ಕಳು ಸುಧಾರಿಸಿಕೊಂಡರೆ

ನಮಗೆ ಅಷ್ಟೇ ಸಾಕು." ರವಿ ನಿಧಾನವಾಗಿ ಹೇಳಿದ.

"ಸರಿ, ಈಗಿನ ಮೊದಲ ಕಾರ್ಯಕ್ರಮವೇನು ?"

"ರಾಯರೇ, ನಿನ್ನೆ ಡಾಕ್ಟರಲ್ಲಿಗೆ ಹೋಗಿದ್ದೆ. ಅವರು ಪೂರ್ಣ ಮನಸಿನಿಂದ ಸಹಾಯಮಾಡಲು ಸಿದ್ಧರಿದ್ದಾರೆ. ಮುಖ್ಯವಾಗಿ ನೀವೂ ಡಾಕ್ಟರೂ ಮುಂದೆ ನಿಂತುಕೊಳ್ಳಿರಿ. ನಿಮ್ಮ ನೇತೃತ್ವದಲ್ಲಿ ನಾವು ಕೆಲಸ ಮಾಡುತ್ತೇವೆ. ನಿಮ್ಮಿಬ್ಬರಲ್ಲಿ ಒಬ್ಬರು ಪ್ರೆಸಿಡೆಂಟರು ಇನ್ನೊಬ್ಬರು ಖಜಾಂಚಿಯಾದರೆ ಸಾಕು. ಉಳಿದ ಕೆಲಸ ನಮ್ಮದು. ಪುಟ್ಟಮ್ಮ ಸಂಚಾಲಕಿಯಾಗಿರಲು ಒಪ್ಪಿದ್ದಾರೆ. ಕಲಾವಿದರನ್ನು ಬರಮಾಡಿಕೊಳ್ಳುವ ಭಾರ ನಿಮ್ಮದು. ನೀವೇ ಇದರಲ್ಲಿ ಮಾರ್ಗದರ್ಶಿಗಳಾಗಿರಿ."

ಪುಟ್ಟಮ್ಮ ರವಿಯ ಮಾತು ಕೇಳಿ ಖೊಳ್ಳನೆ ನಕ್ಕು ಹೇಳಿದಳು "ನನ್ನನ್ನಂತೂ ತೊಡಕಿಗೆ ಸಿಕ್ಕಿಸುತ್ತೀಯೆ. ನಿಮ್ಮ ತಾಯಿಯಂತೆ ಎಂದೇ ನನ್ನನ್ನು ಭಾವಿಸಿದ್ದಿ. ಶಿವೆ ಚತುರೆಯಾದ್ದರಿಂದ ವಿದ್ಯೆಕಲಿತುಕೊಂಡಳು. ಈ ಇಳಿ ವಯಸ್ಸಿನಲ್ಲಿ ನಾನು ಏನು ಮಾಡಿಯೇನು ?"

"ಒಮ್ಮೆ ಶಾಲೆ ಆರಂಭವಾಯಿತೆಂದರೆ ಉಪಾಧ್ಯಾಯನಿಯರಿರುವುದರಿಂದ ನಿಮಗಷ್ಟು ಭಾರ ಬೀಳದು. ಒಟ್ಟಿನಲ್ಲಿ ಈ ಮನೆಯ ವ್ಯವಹಾರ ನೋಡಿಕೊಂಡಂತೆ ಅಷ್ಟೆ. ಸಂಚಾಲಕಿ ಎಂದು ನೆವ ಮಾತ್ರಕ್ಕೆ ನಿಮ್ಮ ಹೆಸರಿರಲಿ, ನಿಮಗೆ ತೊಂದರೆಯಾಗದಂತೆ ವ್ಯವಸ್ಥೆ ಮಾಡೋಣ." ಎಂದ ರವಿ.

"ಹೆಣ್ಣು ಮಕ್ಕಳ ಜೀವನ ಉತ್ತಮಗೊಳಿಸಲು ಒಂದು ಸುವ್ಯವಸ್ಥೆಯಿಂದ ಕೂಡಿದ ಶಾಲೆಯಿರುವುದನುಕೂಲ. ಬಡ ಮಕ್ಕಳಿಗೆ ಈ ಕಾಲದಲ್ಲಿ ಜೀವನ ಬಲು ದುಸ್ತರ. ಒಬ್ಬನ ದುಡಿಮೆ ಸಂಸಾರಕ್ಕೆ ಸಾಲದು. ಸುಲಭ ರೀತಿಯಲ್ಲಿ ಹೆಣ್ಣು ದುಡಿಮೆಯ ಹಾದಿಯನ್ನು ಕಂಡುಕೊಳ್ಳಬೇಕು. ಈ ಶಾಲೆಯಲ್ಲಿ ಕಲಿತು ಹೊರ ಹೋದ ಹೆಣ್ಣು ಮಕ್ಕಳು ತಮ್ಮ ಅನ್ನವನ್ನು ತಾವೇ ಗಳಿಸಿಕೊಳ್ಳುವಷ್ಟು ಶಕ್ತರಾದರೆ ಸಾಕು. ಜೊತೆಗೆ ಸಾಕಷ್ಟು ವಿದ್ಯೆಯೂ ದೊರೆಯಬೇಕು."

"ಮಾಡಿರಿ ಪುಣ್ಯಕಾರ್ಯ." ರಾಯ ಸಾನಂದದಿಂದ ನುಡಿದ.

ಅಂದೇ ಒಂದು ಕಾರ್ಯಕ್ರಮವನ್ನು ರೂಪಿಸಿಕೊಂಡು ಮೊದಲನೆಯ

ದಾಗಿ ಶ್ರೀಮತಿ ಸುಬ್ಬಲಕ್ಷ್ಮಿಯವರ ಸಂಗೀತದ ಏರ್ಪಾಡು ಮಾಡುವುದೆಂದೂ ಎರಡನೆಯದಾಗಿ ಶ್ರೀಮತಿ ಬಾಲಸರಸ್ವತಿಯವರ ಭರತನಾಟ್ಯವನ್ನು ಏರ್ಪಡಿಸುವುದೆಂದೂ ತೀರ್ಮಾನವಾಯಿತು. ಅದರ ಬಗ್ಗೆ ಪತ್ರ ವ್ಯವಹಾರ ವನ್ನು ರಾಯನಿಗೆ ವಹಿಸಿ ರವಿ ಮತ್ತು ಶ್ಯಾಮು ಮನೆಗೆ ಹಿಂದಿರುಗಿದರು.

ರಾಯ ಅತ್ಯಾಸಕ್ತಿಯಿಂದ ಅಂದೇ ಕಾಗದ ಬರೆದು ಕಲಾವಿದರ ಸಹಾಯ ಕೋರಿದ.

೨೫

ಸಾವಿತ್ರಿ ಚಿಕ್ಕವಳಿದ್ದಾಗ ಮಲೇರಿಯಾದಿಂದ ನರಳಿ ಹಾಸಿಗೆ ಹಿಡಿದಿದ್ದಳು. ಸ್ವಾಮಿ ಊರಿಗೆ ಹೋಗಿ ಕರೆತಂದು ಮನೆಯಲ್ಲಿಟ್ಟುಕೊಂಡು ಚಿಕಿತ್ಸೆ ಮಾಡಿಸಿ ಪೂರ್ಣವಾಸಿಯಾದ ನಂತರ ಊರಿಗೆ ಕಳುಹಿಸಿಕೊಟ್ಟಿದ್ದ. ಆಗ ಸಾವಿತ್ರಿ ಹದಿಮೂರು ವರ್ಷಗಳ ಬಾಲೆ. ಅನಂತರ ಮೈಸೂರಿಗೆ ಬಂದುದು ಇಂದೇ. ಆಗ ನಾಲ್ಕಾರು ತಿಂಗಳು ಶಿವೆಯ ಬಳಿಯಲ್ಲಿದ್ದು ಅವಳ ಕರುಣ ಕತೆಯನ್ನು ಕಣ್ಣಾರೆ ಕಂಡಿದ್ದರಿಂದ ಅವಳ ಬಗ್ಗೆ ಅನುಕಂಪವಿತ್ತು. ರಾಮಣ್ಣ ಮನೆಯಿಂದ ಹೊರಡುವಾಗ ಆನಂದನಲ್ಲುಳಿಯಬೇಕೆಂದೂ ಶಿವೆಯ ಮನೆಗೆ ಹೋಗಬಾರದೆಂದೂ ಕಟ್ಟಪ್ಪಣೆ ಮಾಡಿದ್ದ. 'ಹ್ಞೂ' ಎಂದಿದ್ದ ಸಾವಿತ್ರಿ ನೇರವಾಗಿ ಶಿವೆಯ ಮನೆಗೆ ಬಂದಿಳಿದಳು. ಜೊತೆಗಿದ್ದ ವೆಂಕಟೇಶನೂ ಅದೇ ಸರಿಯೆಂದಿದ್ದ. ಸ್ವಾಮಿ ಕಾಣೆಯಾದಾಗಿನಿಂದ ಶಿವೆಯನ್ನೊಮ್ಮೆ ನೋಡಿ ಬರಬೇಕೆಂದು ಬಹುವಾಗಿ ಬಯಸಿದ್ದಳಾದರೂ ತನ್ನವರು ಆಸ್ಪದ ಕೊಟ್ಟಿರಲಿಲ್ಲ. ಹತಾಶಳಾದ ಸಾವಿತ್ರಿ ಸಮಯ ಸಿಕ್ಕಿದರೆ ಸಾಕೆಂದು ಕಾದಿದ್ದು ನಿರ್ಮಲೆಯ ಮದುವೆಗಾಗಿ ಬಟ್ಟೆಬರೆಗಳನ್ನು ಕೊಳ್ಳುವ ಅಗತ್ಯ ಬಿದ್ದುದರಿಂದ ಮಗುವನ್ನು ತಾಯೊಂದಿಗೆ ಬಿಟ್ಟು ತಾನೇ ಹೊರಟಿದ್ದಳು.

ಬಹಳ ದಿನಗಳಾದ ಮೇಲೆ ಸಾವಿತ್ರಿಯನ್ನು ಕಂಡು ಮನಸ್ಸಿಗಾದ ಅಪರಿಮಿತ ಆನಂದ...ಮೇಲಾಗಿ ಮನೆಯವರು ಹಾಕಿದ ಬಹಿಷ್ಕಾರಕ್ಕೆ ಆಕೆ ಬಡಿದ ತಿರಸ್ಕಾರ ಏನೋ ಒಂದು ಬಗೆಯ ಆತ್ಮಶಾಂತಿಯನ್ನು ನೀಡಿತ್ತು. ಶಿವೆ ಆನಂದದಿಂದ ಉಸಿರಾಡುತ್ತ ದಿನಚರಿಯಲ್ಲಿ ನಿಮಗ್ನಳಾದಳು. ಹೊಲಿಗೆಯ ಯಂತ್ರದ ಸದ್ದು ಹೊರಗಣ ಗದ್ದಲಗಳಿಗೆ ತಡೆಹಾಕಿತ್ತು. ಮನೆಯಲ್ಲಿ ಮತ್ಯಾವ ಅಡೆತಡೆಯೂ ಇಲ್ಲದುದರಿಂದ ಕೆಲಸ ನಿರಾತಂಕವಾಗಿ ಸಾಗಿತು. ಸಾವಿತ್ರಿ ಅಂಗಡಿ ಸಾಲಿನಿಂದ ಹಿಂದಿರುಗಿದಾಗ ಹೊತ್ತು ಎರಡರ ಅಂಚನ್ನು ದಾಟಿ ಮುಂದಡಿ ಇಟ್ಟಿತ್ತು. ಬಿಸಿಲಲ್ಲಿ ಸುತ್ತಿ ದಣಿದು ಬಂದವರಿಗೆ ತಣ್ಣನೆಯ ಪಾನೀಯವನ್ನಿತ್ತು ಊಟಕ್ಕೆ ಎಲೆ ಹಾಕಿದಳು ಶಿವೆ. ಕೊಂಡು

ತಂದಿದ್ದ ಬಟ್ಟೆ ಬರೆಗಳನ್ನು ಬದಿಯಲ್ಲಿಡುತ್ತಾ ಸಾವಿತ್ರಿ ಕೇಳಿದಳು "ಚಿಕ್ಕಮ್ಮ ನೋಡುತ್ತೀರಾ ?"

"ಆಮೇಲೆ ನೋಡಿದರಾಯ್ತು. ಈಗ ತುಂಬ ಹಸಿವು" ಎಂದ ವೆಂಕಟೇಶ್.

ಎಲೆ ಹಾಕಿ ಶಿವೆ ಊಟ ಬಡಿಸಿದಳು. ಅವರೆ ಕಾಳಿನ ಕೂಟು ರುಚಿಯಾಗಿತ್ತು. ಮೂವರೂ ಮಾತುಕತೆಯಾಡುತ್ತ ಊಟ ಮುಗಿಸಿದರು. ಕೈ ತೊಳೆಯಲು ಹೊರಹೋದಾಗ ಬಟ್ಟೆಗಳನ್ನು ಒಣಗಹಾಕಿದ್ದನ್ನು ನೋಡಿ "ನಮ್ಮ ಬಟ್ಟೆಗಳನ್ನೂ ಒಗೆದಿದ್ದೀರಿ, ಅಷ್ಟೇಕೆ ತೊಂದರೆ ತೆಗೆದುಕೊಂಡಿರಿ?" ಅತ್ಯಂತ ಆತಂಕಪೂರ್ಣವಾಣಿಯಲ್ಲಿ ನುಡಿದ ಸಾವಿತ್ರಿ ಪುನಃ ನಾನೇ ಒಗೆದು ಹಾಕುತ್ತಿದ್ದೆ. ಈಗ ನನಗೇನೂ ಕೆಲಸವಿರಲಿಲ್ಲ. ವೃಥಾ ಶ್ರಮ ತೆಗೆದು ಕೊಂಡಿರಿ." ಕಣ್ಣುಗಳಲ್ಲಿ ತುಂಬಿ ಬಂದ ಕರುಣಾರಸ ಹೊರ ಸೂಸುತ್ತಿತ್ತು.

"ಅದೇನು ಹೆಚ್ಚಲ್ಲ ಬಾ."

ಶಿವೆ ಚಾಪೆಯನ್ನು ಬಿಚ್ಚಿ ಹರವಿದಳು. ಎಲೆಯಡಿಕೆಯನ್ನು ಮೆಲ್ಲುತ್ತ ಸಾವಿತ್ರಿ ಮುಖದಲ್ಲಿ ಮಂದಹಾಸವನ್ನು ಬೀರಿ ಹೇಳಿದಳು. "ಇಲ್ಲಿಗೆ ಹೊರಡುವಾಗ ಅಪ್ಪ ಇಲ್ಲುಳಿಯಕೂಡದೆಂದು ಕಟ್ಟಪ್ಪಣೆ ಮಾಡಿದ್ದರು. ನನಗಂತೂ ಇದೆಲ್ಲಾ ಸರಿ ಹೋಗುವುದಿಲ್ಲ. ಅವರಂತೂ ಹೊಂದಿಕೊಳ್ಳುವವರಲ್ಲ. ನಾವಾದರೂ ಹೊಂದಿಕೊಳ್ಳಬಾರದೇ ?"

"ಅವರಿಗೆ ತಿಳಿದರೆ ನಿನ್ನ ಸುಮ್ಮನೆ ಬಿಟ್ಟಾರೆಯೇ ?"

"ಏನಾದರೂ ಆಗಲಿ."

ಆನಂದನಲ್ಲಿಗೆ ಹೋಗಿದ್ದ ವೆಂಕಟೇಶ ಒಳಬಂದ. "ನಿನ್ನ ಕೆಲಸ ಕಾರ್ಯ ಹೇಗೆ ನಡೆಯುತ್ತಿದೆ ವೆಂಕೂ ?" ಕೇಳಿದಳು ಶಿವೆ.

"ಎಲ್ಲಾ ಅಪ್ಪನ ವಿರುದ್ಧ ನಿಂತು ಮಾಡಬೇಕಾಗಿದೆ. ಒಮ್ಮೊಮ್ಮೆ ಮನಸ್ಸಿಗೆ ಜುಗುಪ್ಸೆಯಾಗುತ್ತದೆ. ಅಪ್ಪ, ಚಿಕ್ಕಪ್ಪ ದಿನಕ್ಕೊಂದು ರಗಳೆ ತೆಗೆಯುತ್ತಾರೆ. ಅಂತೂ ಹಾಗೂ ಹೀಗೂ ನಡೆಯುತ್ತಿದೆ."

"ಊರ ಕೆಲಸ ಮಾಡಹೋದರೆ ನಮ್ಮ ಕೆಲಸ ಮಾಡುವರ್‍ಯಾರು ಎಂದು ಅಪ್ಪನ ಗೊಣಗಾಟ. ಮಾಡೋ ಮಕ್ಕಳಿಗೆ ಕಣ್ಣೀರು ತೆಗೆಸುತ್ತಾರೆ. ಚಂದಣ್ಣನಿಗೆ ಮನಸ್ಸೇ ಅನ್ನುತ್ತಾರೆ ಚಿಕ್ಕಮ್ಮಾ" ಸಾವಿತ್ರಿ ದನಿಗೂಡಿಸಿದಳು.

"ಚಂದಣ್ಣ ಪಾರಕ್ಕೊಮ್ಮೆ ಊರಿಗೆ ಬರುತ್ತಾರಷ್ಟೆ. ಅವರ ಊಟ ಉಪಚಾರಗಳನ್ನೂ ನೋಡಿಕೊಳ್ಳುವುದಿಲ್ಲ. ಯಾರ್‍ಯಾರೋ ಕರೆದೊಯ್ದು ಊಟ ಹಾಕುತ್ತಾರೆ. ಚಂದಣ್ಣ ಅಪ್ಪನ ಪ್ರಾಣಸ್ನೇಹಿತ. ಈಗ ನೋಡಿದರೆ ಇವರು ಎಲ್ಲಕ್ಕೂ ತಿಲಾಂಜಲಿ ಬಿಡುತ್ತಿದ್ದಾರೆ. ನನಗಂತೂ ಸಾಕಾಗಿಬಿಟ್ಟಿದೆ. ಚಂದಣ್ಣನ ಹೃದಯ ದೊಡ್ಡದು. ಇದೆಲ್ಲವನ್ನೂ ಸಣ್ಣ ವಿಚಾರ ಎಂದು ತಳ್ಳಿಬಿಡುತ್ತಾರೆ. ಒಮ್ಮೊಮ್ಮೆ ಹಿತ್ತಲ ಬಾಗಿಲಿನಿಂದ ಊಟ ಒಯ್ದು ಕೊಡುತ್ತೇನೆ." ವೆಂಕಟೇಶ ಕಳಕಳಿಯಿಂದ ನುಡಿದ.

"ಹೇಗಾದರೂ ಸುಧಾರಿಸಿಕೊ. ನಾಲ್ಕು ದಿನ ಹೋದರೆ ಅವರೇ ಸರಿಹೊಂದಿಕೊಂಡಾರು."

"ರಾಮ ರಾಮಾ! ಅವರು ಇನ್ನೊಂದು ಜನ್ಮಕ್ಕೂ ಸುಧಾರಿಸಿಕೊಳ್ಳಲಾರರು," ಸಾವಿತ್ರಿ ವಿಷಾದವಾಣಿಯಲ್ಲಿ ಪುನಃ ಮುಂದುವರಿದಳು. "ಸದಾ ಮುಖ ಗಂಟಿಕ್ಕಿಕೊಂಡಿದ್ದು ಹುಡುಗರಿಗೆ ಮನಸ್ಸಿಗೇ ಅನ್ನುತ್ತಾರೆ. ಚಂದಣ್ಣ ಎಲ್ಲವನ್ನೂ ನಗುಮುಖದಿಂದ ಸಹಿಸಿಕೊಳ್ಳುವುದರಿಂದ ಎಲ್ಲರೂ ಅವರನ್ನೇ ಅನುಸರಿಸುತ್ತಾರೆ. ಕೆಲಸಕಾರ್ಯ ನಡೆಯುತ್ತಿದೆ. ಇಲ್ಲದಿದ್ದಲ್ಲಿ ಕಷ್ಟವೇ ಇತ್ತು. ಈಗ ಕೈಗಾರಿಕಾ ಪಾಠಶಾಲೆ ಪ್ರಾರಂಭವಾಗಿದೆ. ಕಟ್ಟಡವನ್ನು ಊರ ಹುಡುಗರೇ ಕಟ್ಟಿದ್ದಾರೆ. ರಂಗಮಂದಿರ ಪಾಠಶಾಲೆಗಳ ಕಟ್ಟಡ ಆಗಲೇ ಮೇಲೆದ್ದಿವೆ. ಸದ್ಯಕ್ಕೆ ಕೈಗಾರಿಕಾ ಪಾಠಶಾಲೆಯಲ್ಲಿ ಪಾಠ ಪ್ರವಚನಗಳು ಆರಂಭವಾಗಿವೆ. ಮೊದಲನೆಯ ತರಗತಿಯಲ್ಲಿ ಐವತ್ತಕ್ಕೂ ಮೇಲ್ಪಟ್ಟು ಮಕ್ಕಳಿದ್ದಾರೆ. ಈ ಕಟ್ಟಡಗಳು ಮುಗಿದ ನಂತರ ವಾಚನಾಲಯ ಕಟ್ಟುತ್ತಾರಂತೆ. ಅಪ್ಪ ಚಿಕ್ಕಪ್ಪ ಒಮ್ಮೆಯಾದರೂ ಆ ಕಡೆ ಮುಖ ಹಾಕಲಿಲ್ಲ. ಊರೊಳಗೆ ಶಾಲೆಗಳ ಹೆಸರೇ ಇರಲಿಲ್ಲ. ಇಷ್ಟಾದುದು ಮಹದುಪಕಾರವಾಯಿತು. ಆದರೂ ಇವರಿಗೆ ಸಮಾಧಾನವಿಲ್ಲ. ಅದೇ ಆಶ್ಚರ್ಯ." ಮುಖದಲ್ಲಿ ಸಂತಸದ ಅಲೆ ಲಾಸ್ಯವಾಡುತ್ತಿತ್ತು.

"ವರ್ಷೇ ವರ್ಷೇ ಪಾಠಶಾಲೆಯಲ್ಲಿ ತರಗತಿಗಳನ್ನು ಮುಂದುವರಿಸುತ್ತೇವೆ. ಈ ವರ್ಷ ಮೊದಲ ತರಗತಿ ಮಾತ್ರ ನಡೆಯುತ್ತದೆ. ನಾವು ನಿರೀಕ್ಷಿಸಿದುದಕ್ಕಿಂತಲೂ ಜನ ಧನ ಕೂಡಿ ಬಂದಿದೆ. ಅದೊಂದು ಹೇಳಲಾಗದ ಸಂತೋಷ. ನನಗಾಗ ಪರೀಕ್ಷೆಯಲ್ಲಿ ಪಾಸಾಗಲಿಲ್ಲವೆಂದು ಯೋಚನೆ

ಯಾಗಿತ್ತು. ಈಗ ಹೀಗಾದುದೇ ಒಳ್ಳೆಯದಾಯ್ತೆಂದು ಯೋಚಿಸುವೆ."

"ಈಗೀಗ ಹೆಣ್ಣುಮಕ್ಕಳೆಲ್ಲರೂ ಎಳೆ ಸೇರಿಸಿ ಹೊಸೆದಂತೆ ಒಟ್ಟುಗೂಡಿ ಕಲಿಯುತ್ತಿದ್ದಾರೆ. ಅಪ್ಪನಿಗೆ ಹೆಣ್ಣುಮಕ್ಕಳೆಲ್ಲಾ ಅಲ್ಲಿ ಹೋಗಿ ಕುಳಿತರೆ ಹಿಟ್ಟು ಬೀಸುವವರ್ಯಾರು ಎಂದು ಕೋಪ. ನಮ್ಮ ಮಕ್ಕಳು ಇಷ್ಟು ಬುದ್ಧಿವಂತರೆಂಬುದು ಅರಿವಾದುದು ಈಗಲೇ. ಪ್ರೈಮರಿ ವಿದ್ಯಾಭ್ಯಾಸ ಸಲೀಸಾಗಿ ಹತ್ತುತ್ತಿದೆ. ತೆಂಗಿನ ನಾರಿನ ಕೈಗಾರಿಕೆ ಮತ್ತು ಚಾಪೆಯ ಹೆಣಿಗೆಯನ್ನು ಆಗಲೇ ಕಲಿತುಕೊಂಡಿದ್ದಾರೆ. ಈಗ ಮನೆ ಮನೆಯಲ್ಲೂ ಹೊಸ ಚಾಪೆಗಳು ಬಂದಿವೆ. ಕಟ್ಟಡ ಮುಗಿದೊಡನೆ ಬಡಗಿಶಾಲೆ, ಕಮ್ಮಾರ ಶಾಲೆ ಆರಂಭವಾಗುತ್ತವೆ." ಸಾವಿತ್ರಿ ಆನಂದದಿಂದ ಉಲಿದಳು.

"ಮಕ್ಕಳಿಗಂತೂ ಮಿಠಾಯಿ ತೋರಿದಷ್ಟು ಉತ್ಸಾಹ ಬಂದಿದೆ. ಅದೇ ಒಂದು ಸಂತೋಷ." ವೆಂಕಟೇಶ ನಗುಮುಖದಿಂದ ಹೊಸ ಸುದ್ದಿಯನ್ನು ಮುಂದಿಟ್ಟ. "ಹೆಣ್ಣು ಮಕ್ಕಳು ಕೂಡಾ ಹುರುಪುಗೊಂಡಿದ್ದಾರೆ!"

"ಅಷ್ಟಾದರೂ ಹೆಣ್ಣುಮಕ್ಕಳಿಗೊಂದು ಅವಕಾಶ ದೊರೆತುದು ಪುಣ್ಯವೇ ಸರಿ. ನಮ್ಮ ಬಾಳೊಂದು ಬಾಳೆ? ಈ ಜೀವನ ಎಷ್ಟು ಘೋರ ಎಂಬುದನ್ನು ಬಲ್ಲವರೇ ಬಲ್ಲರು ವೆಂಕಟೇಶ್. ನಿನ್ನಿಂದ ಒಂದು ಹಳ್ಳಿಯ ಉದ್ಧಾರವಾದರೆ ಅದರಿಂದ ಬರುವ ಶ್ರೇಯಸ್ಸು–ಪ್ರೇಯಸ್ಸು ಇನ್ನಾವ ಕಾರ್ಯದಿಂದಲೂ ಬರುವುದಿಲ್ಲ." ಎಂದಳು ಶಿವೆ ಮುಖದಲ್ಲಿ ಅಪೂರ್ವ ಶಾಂತಿಯ ಶೋಭೆ ನೆಲೆಗೊಂಡಿತ್ತು.

"ಅಪ್ಪನಿಗೂ, ಅಮ್ಮನಿಗೂ ಮಗನಿಗೆ ಮದುವೆ ಮಾಡಬೇಕೆಂಬುದು ಎಲ್ಲಿಲ್ಲದ ಹುಚ್ಚು. ಹಾಗಾದರೂ ಅಡ್ಡದಾರಿ ಹಿಡಿದ ಮಗ ಮನೆಗೆ ಮರಳಿ ಯಾನೆಂದು ಅವರ ನಂಬಿಕೆ. ಅಮ್ಮನಿಗೆ ದಿನಕ್ಕೊಂದು ಹುಡುಗಿಯನ್ನು ಅವನೆದುರು ಬಣ್ಣಿಸುವುದೇ ಆಗಿದೆ." ಕುಲುಕುಲು ನಗೆಯೊಡನೆ ಹಾಸ್ಯ ಪ್ರಧಾನವಾಗಿ ನುಡಿದಳು ಸಾವಿತ್ರಿ.

ವೆಂಕಟೇಶ ನಗುತ್ತಾ ಕುಳಿತಿದ್ದ. ಸಾವಿತ್ರಿ ಪುನಃ "ವೆಂಕಟೇಶ ಶುದ್ಧ ಕಿಲಾಡಿ! ಹಸನ್ಮುಖಿಯಾಗಿ ಕುಳಿತುಕೊಂಡು ಅಮ್ಮನ ವರ್ಣನೆಯನ್ನು ಚಾಚೂ ತಪ್ಪದೆ ಕೇಳುತ್ತಾನೆ!"

ಒಡನೆ ಮೂವರ ಮುಖದಲ್ಲೂ ಮುಗುಳ್ನಗು ಮೂಡಿತು.

"ಊಟಕ್ಕೆ ಕುಳಿತೊಡನೆ ಅದೇ ಮಾತು ಶುರುವಾಗುತ್ತದೆ. ನಾನಿನ್ನೇನು ಮಾಡಲಿ ?"

"ಮೊದಲು ನಿನ್ನ ಕಾರ್ಯಕ್ಷೇತ್ರವನ್ನೊಮ್ಮೆ ಸ್ಥಿರೀಕರಿಸಿಕೊ. ಅನಂತರ ಮದುವೆ. ವಿದ್ಯೆಬುದ್ಧಿಯಿದ್ದು ಚಾಲೂಕಾಗಿದ್ದವಳನ್ನು ನೋಡಿ ಮದುವೆಯಾಗು." ಸಲಹೆ ನೀಡಿದಳು ಶಿವೆ.

ವೆಂಕಟೇಶ ಅಷ್ಟಕ್ಕೆ ಆ ವಿಚಾರವನ್ನು ನಿವಾರಿಸಿದ. ಸಂಜೆಯಲ್ಲಿ ರವಿ ಹಿಂದಿರುಗಿದಾಗ ಇಳಿ ಹೊತ್ತಾಗಿತ್ತು. ವೆಂಕಟೇಶ ಮತ್ತೊಮ್ಮೆ ವ್ಯಾಪಾರ ಮುಗಿಸಿ ಪೇಟೆಯಿಂದ ಅದೇ ತಾನೇ ಮನೆಗೆ ಬಂದಿದ್ದ. ಒಳ ಬರುತ್ತಲೂ ರವಿ–"ಇಷ್ಟು ಹೊತ್ತೂ ತರಗತಿಯಿತ್ತು. ಇಂದು ಬಿಡುವೇ ಸಿಕ್ಕಲಿಲ್ಲ."

"ಹೋಗಲಿ ನಿನಗಾದರೂ ವಿದ್ಯೆ ಹಿಡಿಯಿತಲ್ಲ ಅದೇ ಸಂತೋಷ." ವೆಂಕಟೇಶ ಸಂತಸಪೂರ್ಣ ಸ್ವರದಲ್ಲಿ ನುಡಿದ.

"ನಿನ್ನ ಬಣ್ಣನೆಯನ್ನು ಬಹು ಜನರ ಬಾಯಿಂದ ಕೇಳುತ್ತಿದ್ದೇನೆ. ನಿನಗೇನು ಕಡಿಮೆ ? ದಿನೇದಿನೇ ಕೀರ್ತಿಶಾಲಿಯಾಗುತ್ತಿದ್ದೀಯೋ ? ನನ್ನ ವಿದ್ಯೆ ಇದರ ಮುಂದೆ ಅಲ್ಪ ವೆಂಕಟೇಶ್."

"ಕೀರ್ತಿ ಹಾಳಾಗಲಿ, ನಮ್ಮ ಹುಡುಗರನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಬಲು ಕಷ್ಟ. ನಾವು ಏತಿ ಎಂದರೆ ಪ್ರೇತಿ ಅನ್ನುತ್ತಾರೆ. ಚಂದಣ್ಣ ಮುಂದಿರುವುದರಿಂದ ಈಗ ಹೇಗೂ ನಡೆಯುತ್ತಿದೆ. ಮುಂದೇನು ಮಾಡುವುದೋ ಎಂಬ ಯೋಚನೆಯಾಗುತ್ತಿದೆ."

"ಈಗ ಹೊಸದು ಹುರುಪಿದೆ. ಕ್ರಮೇಣ ಸರಿ ಹೋಗುತ್ತಾರೆ. ಉತ್ತಮ ಶಿಕ್ಷಣ ದೊರೆತು ಜನರ ಸುಧಾರಣೆಯಾದರೆ ಸಾಕು. ಕಷ್ಟವಾದರೂ ಚಿಂತಿಲ್ಲಪ್ಪಾ ; ಹೇಗಾದರೂ ಮುಂದುವರಿಸಿಕೊಂಡು ಹೋಗು. ಚಂದಣ್ಣನಂತಹವರು ಹಳ್ಳಿಗೊಬ್ಬ ವ್ಯಕ್ತಿ ಇದ್ದಿದ್ದರೆ ಅದರ ರೀತಿಯೇ ಬೇರೆಯಾಗುತಿತ್ತು."

"ಕಟ್ಟಡಗಳ ಕಟ್ಟುವಿಕೆ ಮುಗಿದು ಕೆಲಸಗಳು ಕ್ರಮಬದ್ಧವಾಗಿ ಪ್ರಾರಂಭವಾದಮೇಲೆ ಊರೊಳಗೊಂದು ರಾಜಕೀಯ ಪಕ್ಷವನ್ನು ಕಟ್ಟಬೇಕೆಂದು ಕೆಲವರ ವಾದ. ಕಾಂಗ್ರೆಸ್ಸಿಗೇನೇ ಸೇರಿ ಅದನ್ನೇ ಸುವ್ಯವಸ್ಥೆಗೊಳಿಸಬೇಕೆಂಬುದು ನನ್ನ ಮತ್ತು ಚಂದಣ್ಣನ ಇಚ್ಛೆ. ಏನೇನಾಗುತ್ತೊ

ನೋಡಬೇಕು."

"ಹೊಸ ರಾಜಕೀಯ ಪಕ್ಷವೆಂದರೆ ಅಷ್ಟು ಸುಲಭದ ಮಾತಲ್ಲ. ಅದನ್ನು ಬೆಳೆಸಿ ರಾಷ್ಟ್ರದ್ಯಾಂತ ಬೇರು ಬಿಡಿಸುವುದೆಂದಿಗೆ? ಜನ ಧನವಿಲ್ಲದೆ ಅದು ಬೆಳೆಯುವುದು ಹೇಗೆ ? ನಮಗೀಗ ಬೇಕಾಗಿರುವುದು ಹಳ್ಳಿಯ ಪುರೋಭಿವೃದ್ಧಿ. ನಾಗರಿಕ ಜೀವನ ಇಷ್ಟಾದರೆ ಸಾಕು. ಹೊಸ ಪಕ್ಷ ಕಟ್ಟಲು ಹೋಗಿ ವೇಳೆಯನ್ನು ಹಾಳುಮಾಡಿಕೊಳ್ಳುವುದಾದೀತು."

"ಹಾಗೆಂದರೆ ಹುಡುಗರು ಕೇಳಬೇಕಲ್ಲ ? ಕಾಂಗ್ರೆಸ್ಸಿನಲ್ಲಿ ಕೀಳು ಜನ ಸೇರಿಕೊಂಡು ಹೊಲಸೆಬ್ಬಿಸಿದ್ದಾರೆ. ಅದನ್ನೇ ಮುಂದಾಗಿಟ್ಟುಕೊಂಡು ಹೊಸ ಪಕ್ಷಬೇಕು ಅನ್ನುತ್ತಾರೆ ಹುಡುಗರು. ಅವರಿಗೇನು ಗೊತ್ತು ? ಪಕ್ಷ ಕಟ್ಟುವುದಾಗಲೀ ಬೆಳೆಸುವುದಾಗಲೀ ಗೊತ್ತೆ ? ಒಟ್ಟಿನಲ್ಲಿ ಹುರುಪು ಬಂದಿದೆ ಅಷ್ಟೆ."

"ಹುರುಪು ಇಳಿಯುವವರೆಗೆ ಸುಮ್ಮನಿದ್ದು ಬಿಡು."

"ಅದನ್ನೇ ಚಂದಣ್ಣ ಹೇಳುವುದು."

"ನಾವು ಒಂದು ಅನಾಥ ಕನ್ಯಾವಿದ್ಯಾಲಯ ತೆರೆಯಬೇಕೆಂದಿದ್ದೇವೆ. ಅದಕ್ಕಾಗಿ ಕೆಲವು 'ಬೆನಿಫಿಟ್ ಷೋ'ಗಳನ್ನು ಏರ್ಪಡಿಸಬೇಕಾಗಿದೆ."

"ಇಷ್ಟಕ್ಕೂ ನಿಮ್ಮಲ್ಲಿ ಯಾರಿಗೂ ಬಿಡುವಿಲ್ಲವಲ್ಲಾ ?"

"ಯಾರನ್ನಾದರೂ ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಬಡ ಮಕ್ಕಳೆಂದರೆ ಊರಿಗೆ ಊರೇ ಬಡ ಮಕ್ಕಳು. ಆದ್ದರಿಂದ ಅನಾಥ ಹೆಣ್ಣು ಮಕ್ಕಳಿಗೆ ಎಂದು ತೀರ್ಮಾನಿಸಿದ್ದೇವೆ ಒಟ್ಟಿನಲ್ಲಿ ದೇವರ ಆಶೀರ್ವಾದ ಬೇಕು."

ರವಿ ಉಡುಪನ್ನು ಕಳಚಿಟ್ಟು ಮುಖ ಮಜ್ಜನ ಮಾಡಿ ಹೊರಬಂದು ಕುಳಿತುಕೊಂಡ. ಸರಸು ಕಾಫಿಯ ಲೋಟಗಳೊಡನೆ ಬಂದು ವರದಿ ಮಾಡಿದಳು "ರವೀ, ನಾನೀಗ ನನ್ನ ಭಾಗದ ಅರ್ಧ ಟಿಕೆಟ್ಟುಗಳನ್ನು ಖರ್ಚುಮಾಡಿದ್ದೇನೆ. ಇನ್ನರ್ಧವನ್ನು ನಾಳೆ ನಾಡಿದ್ದರ ಒಳಗಾಗಿ ಖರ್ಚುಮಾಡುವೆ." ಮುಖದಲ್ಲಿ ಹೆಮ್ಮೆಯ ಗೆಲುವು ನಲಿಯುತ್ತಿತ್ತು.

ನನ್ನ ಭಾಗದ್ದು ಹಾಗೇ ಉಳಿದಿದೆ. ನನಗಿನ್ನು ಬಿಡುವೇ ಆಗಲಿಲ್ಲ." ಎಂದ ರವಿ ಪುನಃ ಕೇಳಿದ "ಗೋಪಿ ಶ್ಯಾಮು ಎಲ್ಲಿ ?"

ಮನೆ ಮನೆ ಸುತ್ತಿ ಟಿಕೆಟ್ಟು ಮಾರಲು ಹೋಗಿದ್ದಾರೆ. ಅವರೂ

ಈಗಾಗಲೇ ಬಹಳಷ್ಟು ಖರ್ಚು ಮಾಡಿದ್ದಾರೆ."

"ಬಲು ಉತ್ಸಾಹೀ ಮಕ್ಕಳು !"

"ನಾವೀಗ ರಂಗಮಂದಿರ ಕಟ್ಟುತ್ತೇವಷ್ಟೆ ? ಹೇಗೂ ನಮ್ಮ ಊರಿಗೆ ನಾಟಕ ಸಿನಿಮಾಗಳಿಲ್ಲ. ನಾವೇ ನಾಟಕ ಆಡಿ ನಾಲ್ಕಾಣೆ ಟಿಕೆಟ್ಟು ಹಾಕಿದರೂ ನಾಲ್ಕು ಕಾಸು ಹುಟ್ಟುವಳಿಯಾಗುತ್ತದೆ. ಇದರಿಂದ ನಮ್ಮ ಸಂಘ ಸಂಸ್ಥೆಗಳ ಪುರೋಭಿವೃದ್ಧಿ ಮಾಡಿಕೊಳ್ಳಲು ಅನುಕೂಲವಾಗುವುದು."

"ಓ. ಧಾರಾಳವಾಗಿ. ಮೊದಲನೆಯದಾಗಿ ಒಗ್ಗಟ್ಟು ಸಾಧಿಸಿಕೊಳ್ಳಿರಿ" ಹುಬ್ಬು ಹಾರಿಸಿ ನುಡಿದಳು ಸರಸು.

ಸರಸು ಖಾಲಿಯಾದ ಲೋಟಗಳನ್ನು ಕೈಗೆ ತೆಗೆದುಕೊಂಡು "ರವಿ ನಿನಗೆ ಬಿಡುವಾಗದಿದ್ದರೆ ನಿನ್ನ ಟಿಕೆಟ್ಟುಗಳನ್ನೂ ನಾನೇ ಮಾರುವೆ" ಎಂದಳು. ತುಟಿಗಳಲ್ಲಿ ಮಂದಸ್ಮಿತ ಮೂಡಿತು.

"ನಾಳೆ ಬಿಡುವು ದೊರೆತರೆ ಮಾರಬಹುದು."

ಮರುದಿನ ಸಾವಿತ್ರಿ ಅಷ್ಟು ಹೊತ್ತಿಗೇನೇ ಊರಿಗೆ ಹೊರಡಲು ಅಣಿಯಾದಳು. ರವಿ ಮತ್ತು ಶ್ಯಾಮು ಸಾಮಾನುಗಳನ್ನು ಕಟ್ಟಿಟ್ಟು ಒಂದು ಟಾಂಗಾ ಗಾಡಿಯನ್ನು ತಂದರು. ಶಿವೆ ಆಗಲೇ ಕಾಫಿ ತಿಂಡಿಯನ್ನು ಅಣಿ ಮಾಡಿದ್ದಳು. ತಿಂದು ಮುಗಿಸುವಷ್ಟರಲ್ಲಿ ವಿಮಲೆ ಗೋಪಿಯರೂ ಎದ್ದು ಮುಖ ಮಜ್ಜನ ಮಾಡಿಕೊಂಡರು. ಸಾವಿತ್ರಿಯು ಅಲ್ಲಿಗೆ ಬಂದು ಮಕ್ಕಳನ್ನು ಅಪ್ಪಿಕೊಂಡು ಹೊರಡುವುದಾಗಿ ಹೇಳಿದಳು.

"ಇನ್ನ್ಯಾವಾಗ ಬರುತ್ತೀರಿ ಅಕ್ಕಾ ?" ಸರಸು ವಿಮಲೆಯರು ಕೇಳಿದರು.

"ಎಂದು ಅನುಕೂಲವಾಗುವುದೋ ಅಂದು" ಎಂದುತ್ತರಿಸಿದ ಸಾವಿತ್ರಿ ಶಿವೆಯ ಕೈಹಿಡಿದುಕೊಂಡು "ಚಿಕ್ಕಮ್ಮಾ ನಿಮ್ಮ ಭಾಗ್ಯಕ್ಕೆ ಯಾರಿಲ್ಲವಾದರೂ ದೇವರಿದ್ದಾನೆ. ನೀವು ಎಂದಾದರೂ ಬಿಡುವು ಮಾಡಿಕೊಂಡು ನಮ್ಮ ಮನೆಗೆ ಬನ್ನಿರಿ. ನಾನು ಎಂದಿದ್ದರೂ ನಿಮ್ಮವಳೇ" ಎಂದು ವಿನಯ ಪೂರ್ವಕ ಆಹ್ವಾನವನ್ನು ನೀಡಿ ಗಾಡಿ ಹತ್ತಿದಾಗ ಕಣ್ಣಂಚಿನಲ್ಲಿ ಹನಿಯಾಡುತ್ತಿತ್ತು. ಅವಳ ಹನಿಗುತ್ತರವಾಗಿ ಶಿವೆಯ ಕಣ್ಣುಗಳಲ್ಲೂ ಕಂಬನಿಗಳು ಮೊಳೆತುವು.

"ಅಪ್ಪ ಅಮ್ಮ ನಿಮ್ಮನ್ನು ಮದುವೆಗೆ ಕರೆಯದಿದ್ದುದಕ್ಕೆ ಬೇಸರಿಸದಿರಿ.

ಮುಂದೆ ಎಂದಾದರೂ ಒಳ್ಳೆಯ ದಿನಗಳು ಬಂದಾಗ ನಾನೇ ನಿಮ್ಮನ್ನು ಊರಿಗೆ ಕರೆದುಕೊಂಡು ಹೋಗುವೆ" ಎಂದು ವೆಂಕಟೇಶ ಶಿವಮ್ಮನಿಗೆ ಕಳಕಳಿ ಯಿಂದ ಹೇಳಿಕೊಂಡು ಬಸ್ಸಿನ ನಿಲ್ದಾಣಕ್ಕಭಿಮುಖವಾಗಿ ಹೊರಟ. ಗಾಡಿ ಕಣ್ಮರೆಯಾಗುವವರೆಗೂ ಶಿವೆ ಮಕ್ಕಳೊಂದಿಗೆ ನಿಂತು ನೋಡಿದಳು. ಮುಖದ ಮೇಲೆ ಏನೋ ಒಂದು ಬಗೆಯ ಆನಂದಗದ್ಗದಭಾವ ಪ್ರಕಟ ವಾಗಿತ್ತು–ಮಳೆ ಬಿಸಿಲು ಒಂದುಗೂಡಿದಂತೆ.

೨೬

ಸುಮಧುರ ವಾತಾವರಣದಲ್ಲಿ ಒಂದು ಸುಂದರ ದಿನ...

ಯುಗಾದಿಯ ಸಡಗರ ಗ್ರಾಮವ್ಯಾಪ್ತಿಯಾಗಿತ್ತು. ಮನೆಯ ಮುಂದಣ ಹೂದೋಟದಲ್ಲಿ ಹೂ ಬಿಸಿಲಿಗೆ ಮೈಯೊಡ್ಡಿ ಲಿಂಗಣ್ಣ ನಿಂತಿದ್ದ. ಮನೆಯ ಮುಂದಿನ ಗದ್ದೆಯಲ್ಲಿ ದನಕರುಗಳೂ ಕುರಿ ಮಂದೆಯೂ ಒಂದುಗೂಡಿ ಗರಿಕೆಯನ್ನು ಮೆಲ್ಲುತ್ತಿದ್ದುವು. ಅತ್ತಲೇ ದೃಷ್ಟಿಯನ್ನಿಟ್ಟಿದ್ದ ಲಿಂಗಣ್ಣ ವಿಶಾಲವಾದ ವಕ್ಷಸ್ಥಳದ ಮೇಲೆ ಕೈಗಟ್ಟಿ ಮಹೀರುಹದಂತೆ ಅಲುಗದೆ ನಿಂತಿದ್ದಾನೆ. ನಸುದೂರದಲ್ಲಿ ಮಲ್ಲಿಗೆಯ ಮೊಗ್ಗುಗಳನ್ನು ಬಿಡಿಸುವುದರಲ್ಲಿ ನಿಮಗ್ನಳಾಗಿದ್ದ ಕಲ್ಯಾಣಿ ದೂರದ ರಸ್ತೆಯ ಕಡೆಗೆ ಆಗಾಗ ದೃಷ್ಟಿಯನ್ನು ಹೊರಳಿಸುತ್ತಿದ್ದಳು. ಒಳಗಿನಿಂದ ಬಂದ ಸುಂದರಿ ಸದ್ದು ಮಾಡದಂತೆ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ಬಂದು ಕಲ್ಯಾಣಿಗೆ ತಿಳಿಯದಂತೆ ಹಿಂದಿನಿಂದ ಎರಡೂ ಕಣ್ಣುಗಳನ್ನು ಮುಚ್ಚಿ ಹಿಡಿದುಕೊಂಡಳು.

"ಸುಂದರೀ ಮೊಗ್ಗು ಚೆಲ್ಲುತ್ತದೆ."

"ಭಾವ ಬಂದರು ಭಾವ !"

"ಶುದ್ಧ ಸುಳ್ಳು."

"ಇಲ್ಲಿ ನೋಡಿ !" ಎನ್ನುತ್ತಾ ಸುಂದರಿ ಫಕ್ಕನೆ ಕಣ್ಣುಗಳನ್ನು ಬಿಟ್ಟಳು. ಕಲ್ಯಾಣಿಯ ಕಣ್ಣುಗಳು ಸಹಜವಾಗಿ ಹಾದಿಯ ಕಡೆ ಹೊರಳಿದುವು. ಒಡನೆ ಸುಂದರಿ ಕಿಲಕಿಲನೆ ನಗತೊಡಗಿದಳು

"ಬರಲಿಲ್ಲವೆಂಬುದು ನನಗೆ ತಿಳಿದೇ ಇತ್ತು."

"ಮತ್ತೇಕೆ ಅತ್ತ ನೋಡಿದಿರಿ ?"

"ಸುಮ್ಮನೆ ನೋಡಿದೆ ಅಷ್ಟೆ."

ಮತ್ತೆ ಸುಂದರಿಯ ಕಿಲಕಿಲ ನಗು. ತಂದೆಯ ಎದುರಿಗೆ ನಡೆದ ಚೆಲ್ಲಾಟದಿಂದ ಮುಖದಲ್ಲಿ ಲಜ್ಜೆಗೆಂಪೊರೆಯಿತು. ಅದನ್ನು ತೋರಗೊಡದಂತೆ ಬೇರೆಡೆಗೆ ತಿರುಗಿ ಮೊಗ್ಗು ಬಿಡಿಸಗೊಡಗಿದಳು ಕಲ್ಯಾಣಿ. ಅಂತರ್ಯದ ಒಳ

ಗುದಿ ಮುಖದ ಮೇಲೆ ಅಂಕಿತವಾಗಿತ್ತು.

"ಇಷ್ಟರೊಳಗಾಗಿ ಮೂರ್ತಿ ಬರಬೇಕಿತ್ತು. ಬಸ್ಸು ಬರುವುದು ತಡವಾಯಿತೆಂದು ತೋರುತ್ತದೆ" ಎಂದ ಲಿಂಗಣ್ಣ.

"ಅಕ್ಕ ಬೆಳಗಿನಿಂದಲೂ ಕಾಯುತ್ತಿದ್ದಾರೆ" ಸುಂದರಿ ಸೇರಿಸಿದಳು.

"ಅವಳಿಗಿಂತ ನಿನಗೇನೆ ಆತುರವಾಗಿದೆ"

"ಅದೇನೋ ನಿಜ" ಕಲ್ಯಾಣಿ ದನಿಗೂಡಿಸಿದಳು.

ಮೊಗ್ಗು ಬೊಗಸೆ ತುಂಬಿ ಬಂದಿತ್ತು. ಸುಂದರಿಗೆ ತಟ್ಟೆಯೊಂದನ್ನು ತರಲು ಹೇಳಿ ಕಲ್ಯಾಣಿ ಮತ್ತೊಮ್ಮೆ ಆಶಾಭರಿತ ದೃಷ್ಟಿಯನ್ನು ಹಾದಿಯತ್ತ ಬೀರಿದಳು. ಅಲ್ಲಿ ಗೋಚರಿಸಿದುದು ಬರಿಯ ಹಾಳು ಹಾದಿ. ಮನಸ್ಸು ಮುದುಡಿತು. ಆದರೂ ಆತಂಕಪೂರ್ಣ ದೃಷ್ಟಿ ಪುನಃಪುನಃ ಅತ್ತ ಹೊರಳುತ್ತಲೇ ಇತ್ತು.

ಹೊತ್ತು ಏರತೊಡಗಿತು. ಮೂರ್ತಿಗಾಗಿ ಹಾದಿ ನೋಡಿ ನೋಡಿ ಮನೆ ಮಂದಿಯೆಲ್ಲಾ ಬೇಸತ್ತರು. ಕಳೆದೆರಡು ವರ್ಷಗಳಿಂದ ಮಾವನ ಮನೆಯ ಹಬ್ಬಹರಿದಿನಗಳಲ್ಲಿ ಭಾಗವಹಿಸಿರಲಿಲ್ಲವಾದ್ದರಿಂದ ಈ ಸಲ ಬರಲೇ ಬೇಕೆಂದು ಎಲ್ಲರೂ ಒತ್ತಾಯ ಪಡಿಸಿದ್ದರು. ಪಾರ್ವತಮ್ಮ ಬಹಳ ದಿನಗಳಿಂದ ಸಾಮಾನು ಸರಂಜಾಮುಗಳನ್ನು ಹೊಂದಿಸಿಕೊಂಡಿದ್ದು ತಿಂಡಿ ತಿನಿಸುಗಳನ್ನು ಮಾಡಿಟ್ಟು ಅಳಿಯನಿಗಾಗಿ ಎದುರು ನೋಡುತ್ತಿದ್ದಳು. ಕಲ್ಯಾಣಿಯು ಬಂದು ವಾರವಾಗಿತ್ತು. ಹಬ್ಬದ ದಿನ ಬಂದು ಕರೆದೊಯ್ಯುವುದಾಗಿ ಹೇಳಿ ಹೋಗಿದ್ದ ಮೂರ್ತಿ.

ಮಧ್ಯಾಹ್ನದವರೆಗೆ ಕಾದು ಬೇಸತ್ತು ಎಲ್ಲರೂ ಊಟ ಮಾಡಿದರು. ಕಲ್ಯಾಣಿಗೆ ಏಕೆ ಬರಲಿಲ್ಲವೆಂಬುದು ಅರ್ಥವಾಗಲಿಲ್ಲ. ಯುಗಾದಿಯ ಸಡಗರ ರಸಹೀನವಾಯಿತು. ಎಲ್ಲರ ಬಾಯಲ್ಲೂ ಅದೇ ವಿಚಾರ ಚರ್ವಿತ-ಚರ್ವಣವಾಗುತ್ತಿದ್ದಾಗ ಮೀನಾಕ್ಷಿ ಹೇಳಿದಳು. "ಬಹುಶಃ ಅವರಮ್ಮ ಮಗನಿಲ್ಲದೆ ಹಬ್ಬದೂಟ ಮಾಡಲು ಇಷ್ಟಪಡಲಿಲ್ಲವೇನೋ ಸಂಜೆಗೆ ಬಂದಾರು."

ಹಾಗಿದ್ದರೂ ಇರಬಹುದೆಂದು ಎಲ್ಲರೂ ಯೋಚಿಸಿದರು. ಸಂಜೆ ಕುಮಾರನೂ ನಾಗರಾಜನೂ ಸರಕಾರಿ ರಸ್ತೆಯವರೆಗೆ ಹೋದರು. ಸಂಜೆಯ ಬಸ್ಸು ಆರುಗಂಟೆಗೆಬರುವುದಿತ್ತು. ಅದರಲ್ಲಿ ಬರಬಹುದೇನೋ ಎಂದೂಹಿಸಿ ಇಬ್ಬರೂ

ಅಲ್ಲಿಗೆ ಹೋಗುವುದಕ್ಕೂ ಬಸ್ಸು ಬರುವುದಕ್ಕೂ ಸರಿಹೋಯಿತು. ಮೂರ್ತಿ ನಗುಮುಖದಿಂದ ಬಸ್ಸಿನಿಂದಿಳಿದ. ಸಂಜೆಗಪ್ಪು ಮುಸುಗುವಷ್ಟರಲ್ಲಿ ಮೂವರೂ ನವಿಲೂರನ್ನು ಸೇರಿದರು. ಲಿಂಗಣ್ಣ ಬಾಗಿಲಲ್ಲಿ ಎದುರಾಗುತ್ತಲೂ ಮೂರ್ತಿ,

"ಬೆಳಗಿನ ಬಸ್ಸಿನಲ್ಲಿ ಸ್ಥಳ ಸಿಕ್ಕಲಿಲ್ಲ. ಎರಡು ಬಸ್ಸುಗಳನ್ನು ನೋಡಿ ಹಿಂದಿರುಗಿದೆ." ತುಟಿಗಳಲ್ಲಿ ಸುಂದರ ಹಾಸ ಬೆಳಗಿತು.

"ಓಹೋ, ಹಾಗೇನು ? ಎಲ್ಲರೂ ನಿಮಗಾಗಿ ಬೆಳಗಿನಿಂದ ಕಾದೆವು. ಹೋಗಲಿ, ಈಗಲಾದರೂ ಬಂದಿರಲ್ಲ. ಕೈಕಾಲು ತೊಳೆಯಿರಿ" ಎಂದು ಸಮಾಧಾನ ವ್ಯಕ್ತಪಡಿಸಿದ ಲಿಂಗಣ್ಣ.

ಪಾರ್ವತಮ್ಮನಿಗೆ ಅಳಿಯ ಬೆಳಿಗ್ಗೆಯೇ ಬರಲಿಲ್ಲವಲ್ಲಾ ಎಂಬ ಕೊರಗು. ಬೆಳಗ್ಗಿನ ಹಬ್ಬದೂಟ ಮಿಕ್ಕಿದ್ದರೂ ಅದು ತಂಗಳಾಗಿತ್ತು. ಪಾರ್ವತಮ್ಮ ಹೊರಬಂದು ಅಳಿಯನ ಕ್ಷೇಮ ಸಮಾಚಾರವನ್ನು ವಿಚಾರಿಸಿ ಕೊಂಡಳು. ನಾಗರಾಜನಿತ್ತ ಟವಲನ್ನೆತ್ತಿಕೊಂಡು ನೀರ ಮನೆಗೆ ಹೋಗಿ ಮುಖ ತೊಳೆದು ಹೊರಬಂದ

"ಅಕ್ಕ ನಿಮಗಾಗಿ ಬೆಳಗಿನಿಂದ ಕಾದು ಕಾದು ಸಾಕಾಗಿ ಇಂದು ಊಟ ಮಾಡಲೇ ಇಲ್ಲ."

ಸುಂದರಿಯ ಸರಸವಾಣಿ ಹರಿದು ಬಂತು.

"ನಿಜವೇ ?" ಮೂರ್ತಿ ಕಲ್ಯಾಣಿಯನ್ನು ಕೇಳಿದ. ಮುಖದಲ್ಲಿ ಮಂದಹಾಸ ಮೂಡಿತು. ಕಲ್ಯಾಣಿಯು ಉತ್ತರಿಸುವುದರೊಳಗಾಗಿ ಸುಂದರಿಯೇ ನುಡಿದಳು. "ನಿಜವಾಗಿಯೂ ಇಂದು ಅಕ್ಕ ಊಟ ಮಾಡಲಿಲ್ಲ."

ಮೂರ್ತಿ ಪುನಃ ಕೇಳಿದ.

ಅವಳ ಮಾತು ನಂಬುತ್ತೀರೇನು ? ಸುಮ್ಮನೆ ತಮಾಷೆಗಾಗಿ ಹೇಳಿದ್ದಾಳೆ." ಎಂದಳು ಕಲ್ಯಾಣಿ. ಮುಖ ಅರಳಿ ಪ್ರಸನ್ನವಾಯಿತು.

ಪಾರ್ವತಮ್ಮ ಮೂರ್ತಿಗೆ ತಿಂಡಿ ತಿನಿಸುಗಳನ್ನಿತ್ತು ಉಪಚರಿಸಿದಳು. ವೇಳೆ ಮೀರಿದ್ದರೂ ಬಿಡಲಿಲ್ಲ. ಮೂರ್ತಿ ತಿಂದು ಕೈ ತೊಳೆದುಕೊಂಡು, ಜಗಲಿಯ ಮೇಲೆ ಹಾಸಿದ್ದ ಜಮಖಾನೆಯ ಮೇಲೆ ಕುಳಿತುಕೊಂಡ. ನಾಗರಾಜನೂ ಕುಮಾರನೂ ಅಲ್ಲಿಯೇ ಮಂಡಿಸಿದರು.

"ಈ ಸಾಲಿನಲ್ಲಿ ಬೆಳೆ ಚೆನ್ನಾಗಿ ಬರಲಿಲ್ಲ. ಖರ್ಚು ಮಾಡಿದ ಕಾಸೂ

ಹುಟ್ಟುವಂತಿಲ್ಲ. ಈಚೆಗೆ ಒಂದಲ್ಲ ಒಂದು ತೊಂದರೆ ಇದ್ದೇ ಇರುತ್ತದೆ."

ಲಿಂಗಣ್ಣ ಮೂರ್ತಿಯೊಂದಿಗೆ ಕಳಕಳಿಯಿಂದ ಹೇಳಿದ.

"ಖರ್ಚು ವೆಚ್ಚ ಕೊಂಚ ಕಡಿಮೆ ಮಾಡಿರಿ."

"ಈ ಸಲ ಕುಮಾರನನ್ನು ಶಿವೆಯೊಂದಿಗೆ ಬಿಡುವೆ. ಹಾಸ್ಟಲ್ಲಿಗಾಗುವ ಖರ್ಚು ಉಳಿತಾಯವಾಗುತ್ತದೆ. ಈ ಸಾಲಿನಲ್ಲಿ ನಾಗರಾಜನಿಗೂ ಮೀನಾಕ್ಷಿಗೂ ಮದುವೆ ಮಾಡೋಣವೆಂದು ಮನಸ್ಸಿತ್ತು. ಏನು ಮಾಡು ವುದೋ ಎಂದು ಯೋಚನೆಯಾಗಿದೆ."

ಆ ಮಾತು ತಿರುಗಿಸಲೆಂದು ನಾಗರಾಜ ಮೂರ್ತಿಯೊಂದಿಗೆ ಅಂದ. "ರವಿ ಮತ್ತು ಅಕ್ಕ ಒಂದು ಅನಾಥ ಮಕ್ಕಳ ವಿದ್ಯಾಲಯ ತೆರೆಯುವುದೆಂದು ತೀರ್ಮಾನಿಸಿದ್ದು ಅದಕ್ಕಾಗಿ ವಿವಿಧ ಕಾರ್ಯಕ್ರಮಗಳನ್ನೇರ್ಪಡಿಸಿ ಹಣ ಕೂಡಿಸಿಕೊಂಡಿದ್ದಾರೆ. ಶಾಲೆಯ ಕಟ್ಟಡಕ್ಕೆ ಅವರ ಮನೆಯ ಪಕ್ಕದ ನಿವೇಶನವೇ ದೊರೆತಿದೆ. ಈ ಎಲ್ಲಕ್ಕೂ ಮಾಧವರಾಯರೂ ಡಾಕ್ಟರೂ ತುಂಬ ಸಹಾಯ ಮಾಡಿದ್ದಾರೆ. ಶಾಲೆಯ ಸಂಚಾಲಕಿಯಾಗಿರಲು ಪುಟ್ಟಮ್ಮ ಒಪ್ಪಿಕೊಂಡಿದ್ದಾರೆ. ಆಸ್ಪತ್ರೆಯ ಕೆಲಸದ ನಂತರ ಅಕ್ಕ ನೋಡಿಕೊಳ್ಳು ತ್ತಾರಂತೆ. ಅಕ್ಕನ ವಿಚಾರಕ್ಕೆ ಇದೊಂದು ಸಾಹಸವೆಂದೇ ಹೇಳಬೇಕು. ಇನ್ನೂ ಒಂದೆರಡು ಕಾರ್ಯಕ್ರಮಗಳನ್ನು ಏರ್ಪಡಿಸಲಿದ್ದಾರೆ. ನಾಡಿದ್ದು ಶ್ರೀಮತಿ ಸುಬ್ಬಲಕ್ಷ್ಮಿಯವರ ಸಂಗೀತವಿದೆ. ಅದಾದ ನಂತರ ಶ್ರೀಮತಿ ಬಾಲಸರಸ್ವತಿಯವರ ಭರತನಾಟ್ಯವಿದೆ. ಅದಕ್ಕೆ ನಿಮ್ಮನ್ನೂ ಕಲ್ಯಾಣಿ ಯನ್ನೂ ಬರಬೇಕೆಂದು ಅಕ್ಕ ಒತ್ತಾಯಪೂರ್ವಕವಾಗಿ ಹೇಳಿದ್ದಾರೆ. ನಾನು ಮೈಸೂರಿನಲ್ಲಿ ನಾಲ್ಕು ದಿನ ಇದ್ದು ಬಂದೆ."

"ಅವರು ಆಗಿನಿಂದಲೂ ಹೇಳುತ್ತಲೇ ಇದ್ದಾರೆ. ನನಗೆ ಬಿಡುವು ದೊರೆಯಲಿಲ್ಲ. ಮೈಸೂರಿಗೆ ಹೋದಾಗಲೆಲ್ಲಾ ಕಲ್ಯಾಣಿಯನ್ನು ಕರೆದು ಕೊಂಡು ಬರಲಿಲ್ಲವೆಂದು ಆಕ್ಷೇಪಿಸುತ್ತಾರೆ" ಎಂದ ಮೂರ್ತಿ. ಅಷ್ಟರಲ್ಲಿ ಅಲ್ಲಿಗೆ ಬಂದ ಕಲ್ಯಾಣಿ ಉತ್ಸುಕತೆಯಿಂದ, "ನಾವು ಈ ಸಲ ಮೈಸೂರಿಗೆ ಹೋಗಿಯೇ ಊರಿಗೆ ಹೋಗೋಣ. ಒಮ್ಮೆ ಊರು ಸೇರಿದವೆಂದರೆ ಕೆಲಸ ಕಾರ್ಯಗಳ ಗೊಡವೆಯಲ್ಲಿ ಹೊರಡಲಾಗುವುದಿಲ್ಲ. ನನಗೂ ಸುಬ್ಬಲಕ್ಷ್ಮಿ ಯವರ ಸಂಗೀತ ಕೇಳಬೇಕೆನ್ನಿಸುತ್ತಿದೆ."

"ನಾಳೆ ನಾನೂ ಹೊರಡುವೆ. ಮೂವರೂ ಹೋಗೋಣ." ಎಂದ ಕುಮಾರ.

ಮೂರ್ತಿ ಸ್ವಲ್ಪ ಯೋಚಿಸಿ ಒಪ್ಪಿಕೊಂಡ. ಕಲ್ಯಾಣಿಗೆ ಎಲ್ಲಿಲ್ಲದ ಸಂತೋಷ. ಮೈಸೂರಿಗೆ ಹೋಗುವುದು ಇದೇ ಮೊದಲು. ಬಹುದಿನಗಳ ಆಸೆ ಕೈಗೂಡಿತೆಂದು ಮನಸ್ಸು ಮುಗಿಲೆತ್ತರಕ್ಕೆ ಚಿಮ್ಮಿತು. ಉತ್ಸಾಹದ ಭರದಲ್ಲಿ ಬಟ್ಟೆ ಬರೆಗಳನ್ನು ಜೋಡಿಸಿಕೊಂಡು ಹೊರಡಲನುವಾದಳು. ಮರುದಿನ ಮೂರ್ತಿ ಕಲ್ಯಾಣಿ ಕುಮಾರರೊಂದಿಗೆ ಮೈಸೂರು ಸೇರುವಷ್ಟರಲ್ಲಿ ರಾತ್ರಿ ಎಂಟುವರೆಯಾಗಿತ್ತು. ಶಿವೆ ತಂಗಿಯನ್ನು ನೋಡಿ ಅತ್ಯಾನಂದ ಭರಿತಳಾದಳು. ತನುಮನಗಳು ಉಲ್ಲಸಿತವಾದುವು.

ಸರಸು ಜ್ವರದಿಂದ ಹಾಸಿಗೆ ಹಿಡಿದು ನಾಲ್ಕು ದಿನಗಳಾಗಿತ್ತು. ಅವಳು ಮಲಗಿದುದನ್ನು ನೋಡಿ ಆತಂಕದಿಂದ ಕೇಳಿದಳು ಕಲ್ಯಾಣಿ "ಏಕೆ ಮಲಗಿದ್ದೀ ?"

"ನಾಲ್ಕು ದಿನಗಳಿಂದ ಒಂದೇಸಮನೆ ಜ್ವರ ಬರುತ್ತಿದೆ. ಹೀಗೆ ಅವಳಿಗೆಂದೂ ಜ್ವರ ಬಂದುದಿಲ್ಲ. ನಾಳೆ ಆಸ್ಪತ್ರೆಗೆ ಕರೆದುಕೊಂಡು ಬರಲು ಹೇಳಿದ್ದಾರೆ ಡಾಕ್ಟರು." ಉತ್ತರಿಸಿದಳು ಶಿವೆ.

"ನೀವು ಅಪರೂಪಕ್ಕೆ ಬಂದಾಗಲೇ ನನಗೆ ಜ್ವರ ಬರಬೇಕೆ ? ಮಲಗಿ ಮಲಗಿ ಬೇಜಾರು." ಕಣ್ಣುಗಳು ಕೆಂಪು ಕೆಂಪಾದುವು. ಮುಖ ಬಾಡಿ ತೊಟ್ಟು ಕಳೆದ ಹೂವಿನಂತೆ ಮ್ಲಾನವಾಯಿತು.

ಅವಳ ಹಾಸಿಗೆಯ ಬಳಿ ಕುಳಿತುಕೊಂಡು ತಲೆಯನ್ನು ನೇವರಿಸಿ ನುಡಿದಳು ಕಲ್ಯಾಣಿ "ನಾಳೆ ಜ್ವರ ಬಿಟ್ಟೀತು, ಅದಕ್ಕೇಕೆ ಬೇಜಾರು ?"

ನಾಳೆ ಸಂಗೀತಕ್ಕೆ ಹೋಗುವಂತಿಲ್ಲ. ನನಗೆ ಸಂಗೀತ ಕೇಳಬೇಕೆಂದು ಬಹಳ ಆಸೆಯಿತ್ತು ಅಕ್ಕಾ." ಮಾತು ಮುಗಿಯುವಷ್ಟರಲ್ಲಿ ಕಣ್ಣುಗಳಲ್ಲಿ ಕಂಬನಿಗಳು ಮೊಳೆತವು. ಸರಸುವಿನ ದೀನ ಸ್ಥಿತಿಯನ್ನು ನೋಡಿ ಕಲ್ಯಾಣಿಯ ಮನ ಮರುಗಿತು.

"ನೀವೇಕೆ ಅವಳ ಬಳಿ ಕುಳಿತುಕೊಳ್ಳುತ್ತೀರಿ ? ನಿಮಗೂ ಜ್ವರ ಬಂದೀತು ?" ರವಿ ಕಲ್ಯಾಣಿಗೆಂದ.

"ಅದರಿಂದೇನಾದೀತು ?"

"ಪಾಪ, ವಿಪರೀತ ಶ್ರಮದಿಂದಲೇ ಅವಳಿಗೆ ಜ್ವರ ಬಂದಿದೆಯೆಂದು ತೋರುತ್ತದೆ. ಕೊಂಚವೂ ವಿಶ್ರಾಂತಿಯಿಲ್ಲದೆ ದುಡಿದಿದ್ದಾಳೆ. ಈ ಸಮಯ ದಲ್ಲಿ ಹೀಗಾದುದು ಎಲ್ಲರಿಗೂ ಬೇಜಾರು.". ಮಧುರ ಸ್ವರ ವ್ಯಸನವನು ಪೂಸಿಕೊಂಡಿತ್ತು.

ಮೂರ್ತಿಯು ಒಳ ಬಂದು ಸರಸುವನ್ನು ನೋಡಿ ಮಾತಾಡಿ, ಮುಖ ತೊಳೆಯಲು ನೀರು ಮನೆಗೆ ಹೋದ. ಕುಮಾರ ಸರಸುವಿನ ಬಳಿಯಲ್ಲಿ ಕುಳಿತುಕೊಂಡು ಮರುಕದಿಂದ "ಈ ಸಮಯದಲ್ಲಿ ಕಾಯಿಲೆ ಬಿದ್ದೆಯಲ್ಲಾ, ಸರಸೂ ?"

"ನನ್ನ ಗ್ರಹಚಾರ...." ಎನ್ನುತ್ತಾ ಕಂಬನಿ ತೊಡೆದುಕೊಂಡಳು ಸರಸು.

"ಅದಕ್ಕೇಕೆ ಅಳು ? ಅತ್ತರೆ ಇನ್ನಷ್ಟು ಜ್ವರ ಬರುತ್ತದೆ."

"ಸಂಗೀತ ಎಂದಾದರೂ ಕೇಳಬಹುದು. ನಿನಗೆ ಬೇಕಾದಷ್ಟು ಸಮಯವಿದೆ ಇನ್ನೊಮ್ಮೆ ಕೇಳುವೆಯಂತೆ. ಮನಸ್ಸಿಗೆ ಬೇಸರ ಪಟ್ಟುಕೊಳ್ಳ ಬಾರದು ಸರಸೂ." ಕಲ್ಯಾಣಿ ಸಮಾಧಾನ ಹೇಳಿದಳು.

"ನಿನ್ನೆಯಿಂದ ಒಂದೇಸಮನೆ ಕಂಬನಿ ಮಿಡಿಯುತ್ತಿದ್ದಾಳೆ. ಎಷ್ಟು ಹೇಳಿದರೂ ಕೇಳುವುದಿಲ್ಲ. ಪಾಪ, ಟಿಕೆಟ್ಟುಗಳನ್ನು ಮಾರಲು ಬಹಳ ಶ್ರಮ ಪಟ್ಟಿದ್ದಳು. ಈ ಸಮಯದಲ್ಲಿ ಹೀಗಾಗಬಾರದಿತ್ತು." ಶಿವೆ ಅತ್ತ ತಿರುಗಿ ಕಣ್ಣುಗಳನ್ನು ಒರಿಸಿಕೊಂಡಳು.

ಶಿವೆ ಊಟಕ್ಕೆ ಅಣಿಗೊಳಿಸಿದಳು. ಸರಸು ಮಲಗಿದ್ದುದರಿಂದ ಜಗುಲಿ ಯಲ್ಲಿ ಎಲೆ ಹಾಕಲು ರವಿ ಅನುವಾದೊಡನೆ ಸರಸು ಬಳಿಯಲ್ಲಿ ಕುಳಿತಿದ್ದ ಶ್ಯಾಮು ಗೋಪಿಯರು ಎದ್ದು ಕಸವನ್ನು ಝಾಡಿಸಿ ಊಟಕ್ಕೆ ಅಣಿ ಮಾಡಿದರು. ವಿಮಲೆಯೂ ಜೊತೆಗೆ ಕುಳಿತುಕೊಂಡಳು ಕಲ್ಯಾಣಿಯು ಒಮ್ಮೆ ಮನೆಯೆಲ್ಲೆಡೆಗೂ, ದೃಷ್ಟಿಯನ್ನು ಬೀರಿ ನುಡಿದಳು "ಅಕ್ಕಾ, ವಾಸಕ್ಕೆ ಅಚ್ಚುಕಟ್ಟಾದ ಮನೆಯಿದ್ದೂ ನಿಮಗೆ ಸುಖವಾಗಿ ವಾಸಮಾಡಲು ಪುಣ್ಯವಿಲ್ಲ. ವಿಶಾಲವಾದ ಭಾಗವನ್ನು ಮೈದುನನ ಪಾಲಿಗೆ ಬಿಟ್ಟು ಬಾಡಿಗೆಯೂ ಇಲ್ಲ. ವಾಸಕ್ಕೆ ಅನುಕೂಲವೂ ಇಲ್ಲದಂತೆ ಮಾಡಿಕೊಂಡಿರಿ. ಇದು ವಿಧಿ ವಿಲಾಸ ವಲ್ಲದೆ ಮತ್ತೇನಲ್ಲ."

"ಹೌದಮ್ಮಾ ಹಾಗೇ ಆಗಿದೆ. ಮೊನ್ನೆ ಸಾವಿತ್ರಿ ಬಂದಾಗ ಆನಂದ ನನ್ನು ಈ ಭಾಗಕ್ಕೆ ಇರಲು ಹೇಳಿ ಆ ಭಾಗಕ್ಕೆ ನೀವು ಹೋದರಾಗದೇ? ನಾನು ಅವರೊಂದಿಗೆ ಮಾತಾಡುವೆ ಎಂದು ಒತ್ತಾಯ ಮಾಡಿದಳು. ಆದರೆ ನಾನೇ ಬೇಡವೆಂದೆ ಊರಿನಿಂದ ಭಾವನವರು ಬಂದರೆ ಅಲ್ಲೇ ಇಳಿದುಕೊಳ್ಳು ತ್ತಾರೆ. ಅವರಿಗೆ ಒಂದು ಕೊಠಡಿಯಿದ್ದರೆ ಉತ್ತಮ. ಆನಂದ ಇರುವ ತನಕ ಅಲ್ಲೇ ಇದ್ದುಕೊಳ್ಳಲಿ ನಮಗೆ ತೊಂದರೆಯಾದಗೂ ಚಿಂತೆಯಿಲ್ಲ." ಎಂದಳು ಶಿವೆ. ಅನಂತರ ಪ್ರಸಕ್ತ ಪರಿಸ್ಥಿತಿಯನ್ನು ಕುರಿತು "ಹಿಂದೆ ಮಕ್ಕಳು ಚಿಕ್ಕವರಾಗಿದ್ದರು. ಏನೋ ಒಂದು ಬಗೆಯಲ್ಲಿ ಸುಧಾರಿಸಿಕೊಳ್ಳುತ್ತಿದ್ದೆ. ಈಗ ಮಕ್ಕಳು ದೊಡ್ಡವರಾದರು. ಕಾಲೇಜು ವಿದ್ಯಾಭ್ಯಾಸ-ಓದಿಕೊಳ್ಳಲು ಸ್ಥಳ ಸಾಲದಾಗುತ್ತದೆ. ಹೊರಗಣ ಜಗಲಿಗೆ ಹೊಂದಿಕೊಂಡಂತೆ ಮುಂದಣ ಅಂಗಳದಲ್ಲಿ ಒಂದು ಕೊಠಡಿಯನ್ನು ಕಟ್ಟಿಕೊಂಡರೆ ಉತ್ತಮ. ಹಣದ ಕೊರತೆಯಿಂದಾಗಿ ಏನೂ ಮಾಡಲಾರದವಳಾಗಿದ್ದೇನೆ. ಆನಂದ ಆಗಲೇ ಒಂದು ಸ್ಥಳ ಕೊಂಡುಕೊಂಡಿದ್ದಾನೆ; ಸದ್ಯ ಮನೆ ಕಟ್ಟುತ್ತೇನೆ ಎನ್ನುತ್ತಾನೆ. ಅವನು ಮನೆ ಕಟ್ಟುವುದೆಂದೋ ನಮಗೆ ನಮ್ಮ ಮನೆ ಬಿಡುಗಡೆಯಾಗುವು ದೆಂದೋ ದೇವರಿಗೇ ಗೊತ್ತು."

"ಅಂತೂ ಆನಂದ ಬಲು ಉಪಾಯಗಾರ. ಮೆಲ್ಲಗೆ ಸೇರಿಕೊಂಡು ಒಳ್ಳೆಯ ಮನೆಯನ್ನು ದಕ್ಕಿಸಿಕೊಂಡ."

"ನಾವೇ ಬಿಡಿಸಿಕೊಳ್ಳಬಹುದಾಗಿತ್ತು; ಹೋಗಲಿ ಕಷ್ಟದಲ್ಲಿದ್ದಾರೆ ಒಂದು ಮನೆಯನ್ನಾದರೂ ಕಟ್ಟಿಕೊಳ್ಳಲಿ ಎಂದು ಸುಮ್ಮನಾದೆವು," ರವಿ ಅಂದ. ಮುಖ ಬಿಂಬದಲ್ಲಿ ಅಪೂರ್ವ ಶಾಂತಿ ಸಮಾಧಾನಗಳಿದ್ದುವು.

"ಸರಿ; ನಿನ್ನ ಪರೋಪಕಾರದಿಂದ ನಿನಗೇ ಉರುಳು ಬಿದ್ದಿದೆ" ಎಂದ ಎಮೂರ್ತಿ.

"ಏನು ಮಾಡುವುದು ನಮ್ಮವರು" ರವಿ ನಸುನಕ್ಕ.

"ಮೊನ್ನೆ ಏನೋ ಮಾತಿನ ಸಲುವಾಗಿ ಆನಂದ ಮಾಮ ನನ್ನಿಂದ ನಿಮಗೆಲ್ಲಾ ತೊಂದರೆಯಾಯ್ತು. ಮುಂದಿನ ಸಾಲಿಗಾದರೂ ಮನೆ ಕಟ್ಟಿ ಕೊಂಡು ನಿಮಗೆ ಈ ಮನೆ ಬಿಟ್ಟು ಕೊಡುವೆ ಎಂದರು." ಎಂದ ಶ್ಯಾಮು.

"ಅಷ್ಟಾದರೆ ಬಹಳ ಉಪಕಾರವಾದಂತಾಯ್ತು." ಮಲಗಿದ್ದ

ಲ್ಲಿಂದಲೇ ಸರಸು ಹೇಳಿದಳು.

ಮರುದಿನ ಶಿವೆ ಸರಸುವನ್ನು ಟಾಂಗಾದಲ್ಲಿ ಆಸ್ಪತ್ರೆಗೆ ಕರೆದೊಯ್ದಳು. ಡಾಕ್ಟರು ಪರೀಕ್ಷೆ ಮಾಡಿದ ನಂತರ ಅವಳನ್ನು ಆಸ್ಪತ್ರೆಗೆ ಸೇರಿಸಿಕೊಂಡರು. ವಿಷಮ ಶೀತ ಜ್ವರವಿರಬೇಕೆಂದು ಅವರು ಅನುಮಾನಿಸಿದ್ದರು. ಅಂದು ಸಂಗೀತದ ಏರ್ಪಾಡಿತ್ತಾದ ಕಾರಣ ಅದೊಂದು ಅತ್ಯಂತ ದುರ್ದಿನವಾಗಿ ಪರಿಣಮಿಸಿತು. ಕೆಂಪು ಹೊದ್ದಿಕೆಯಡಿ ಅವಿರಳವಾಗಿ ಕಂಬನಿಗರೆವ ಕರುಣಾ ಜನಕ ದೃಶ್ಯ ಎಲ್ಲರಿಗೂ ಸಂಕಟವನ್ನುಂಟುಮಾಡಿತು. ಮಗಳ ಸ್ಥಿತಿಯನ್ನು ನೋಡಿ ತಾಯಿಯ ಕಣ್ಣುಗಳಲ್ಲೂ ಕಂಬನಿಯುರಿತು. ನೈರಾಸ್ಯಪೂರ್ಣ ಮೂಕವೇದನೆಯಲ್ಲಿ ಸ್ವಲ್ಪ ಹೊತ್ತು ಉರುಳಿತು. ಅನಂತರ ಸರಸು ದುಃಖ ದಗ್ಧ ದನಿಯಲ್ಲಿ ನುಡಿದಳು.

"ನನ್ನಂತಹ ನತದೃಷ್ಟ ಹುಡುಗಿ ಇನ್ನಿಲ್ಲ... ಹೋಗಲಿ ಬಿಡಿ; ನೀವು ನನಗಾಗಿ ಇಲ್ಲಿ ಕುಳಿತರೆ ಆಗುವಂತಿಲ್ಲ. ಸಂಗೀತ ಕಛೇರಿಯ ವ್ಯವಸ್ಥೆ ಸಾಮಾನ್ಯವಲ್ಲ. ನಾ ಚೆನ್ನಾಗಿದ್ದರೆ ಎಷ್ಟೋ ಕೆಲಸ ಮಾಡಬಹುದಾಗಿತ್ತು. ದೇವರಿಗೆ ಎಳ್ಳಷ್ಟೂ ಕರುಣೆಯಿಲ್ಲ...ಯಾವ ತಪ್ಪು ಮಾಡಿದ್ದೆ ಅಂತ ಈ ಶಿಕ್ಷೆ ಕೊಟ್ಟ ನನಗೆ?"

"ಜನ್ಮ ಜನ್ಮಾಂತರಗಳ ಕರ್ಮವಿಪಾಕ... ಇನ್ನೂ ಎಷ್ಟು ಕಾಲ ನಾವು ಈ ರೀತಿ ಗೋಳಾಡಬೇಕೋ, ದೇವರಿಗೇ ಗೊತ್ತು. ನನಗಂತೂ ಸಾಕಾಗಿ ಬಿಟ್ಟಿದೆ." ಎನ್ನುತ್ತ ಕಂಬನಿ ಮಿಡಿದಳು ಶಿವೆ. ಒಡಲ ಸಂಕಟ ಹೃದಯ ವನ್ನು ಹಿಂಡುತ್ತಿತ್ತು.

ಅಳುತ್ತಳುತ್ತ ಕೇಳಿದಳು ಸರಸು "ಈ ಒಂದು ದಿನ ನಾನು ಹೋಗಿ ಸಂಗೀತ ಕೇಳಿ ಬರಬಹುದಾಗಿದ್ದರೆ...?"

"ಅದಾಗದು... ವಿಷಮಶೀತಜ್ವರವೆಂದರೆ ನಿರ್ಲಕ್ಷಿಸುವಂತಿಲ್ಲ. ಡಾಕ್ಟರು ಹೇಳಿದಂತೆ ಕೇಳಲೇಬೇಕು."

ಸರಸು ಮಾತಾಡಲಿಲ್ಲ. ಕಣ್ಣುಗಳಲ್ಲಿ ಹನಿಗಳು ಫಳಫಳ ಮಿಂಚಿ ದುವು.

ಶಿವೆ ಸಹದಾದಿಯರಿಗೆ ಮಗಳನ್ನು ನೋಡಿಕೊಳ್ಳಲು ಹೇಳಿಕೊಂಡು ಸಂತೈಸಿ ವ್ಯಥೆಯ ಭಾರದಿಂದ ಹನಿಗಣ್ಣಾಗಿ ಆಸ್ಪತ್ರೆಯನ್ನು ಬಿಟ್ಟಳು. ಸಾಲು

ಸಾಲಾಗಿ ಜೋಡಿಸಿದ್ದ ಮಂಚಗಳಲ್ಲಿ ಮಲಗಿದ್ದ ಇತರ ರೋಗಿಗಳೊಂದಿಗೆ ಮಲಗಿದ ಸರಸು ತಾಯಿ ಕಣ್ಮರೆಯಾಗುವವರೆಗೂ ನಿಟ್ಟಿಸಿದಳು. ಮನಸ್ಸು ಸಂಗೀತ ಕಾರ್ಯಕ್ರಮದಲ್ಲಿ ನೆಟ್ಟು ಹೋಗಿತ್ತು. ಮೇಲಾಗಿ ಅಪರೂಪಕ್ಕೆ ಕಲ್ಯಾಣಿ ಬಂದಿದ್ದಾಳೆ. ಅವಳೊಂದಿಗೆ ಒಂದೆರಡು ದಿನ ಹಾಯಾಗಿ ಕಳೆಯು ವಂತಿಲ್ಲವಲ್ಲಾ ಎಂಬ ಕೊರಗು. ಅನಿರೀಕ್ಷಿತ ತೊಡಕು ಮನವನ್ನು ಹಿಂಡು ತ್ತಿತ್ತು. ಜ್ವರದ ತಾಪದಿಂದ ಕಂದಿ ಕುಂದಿ, ಅತ್ತು ಸೊರಗಿ ಮುಸುಗಿಟ್ಟು ಮಲಗಿದಳು.

ಸಂಗೀತ ಕಾರ್ಯಕ್ರಮ ಆರಂಭವಾಗುವ ಮುನ್ನ ರವಿ ಬಂದು ನೋಡಿ ಕೊಂಡು ಹೋದ. ಶಿವೆ ಕಾರ್ಯಕ್ರಮದ ನಡುವೆ ಬಿಡುವು ಮಾಡಿಕೊಂಡು ಬಂದಳು. ಸರಸು ತಾಯಿಯನ್ನು ನೋಡುತ್ತಲೂ ಹನಿಗಣ್ಣಾಗಿ ನುಡಿದಳು,

"ನಾನು ಏನೋ ತಪ್ಪು ಮಾಡಿದ್ದಿರಬೇಕು.......ದೇವರು ನನಗೀ ಶಿಕ್ಷೆ ಕೊಟ್ಟ."

"ಶಿಕ್ಷೆ-ಗಿಕ್ಷೆ ಏನೂ ಇಲ್ಲಮ್ಮಾ, ಅದೃಷ್ಟಹೀನತೆ ಅಷ್ಟೆ. ಅದನ್ನೇ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಈಗ ಜ್ವರ ಬಿಟ್ಟರೆ ಸಾಕಾಗಿದೆ."

ಶಿವೆಯ ಜೊತೆಯಲ್ಲಿದ್ದ ಸಹದಾದಿ ಗೌರಮ್ಮ ಸಾಂತ್ವನಗೈಯ್ಯುವ ದನಿಯಲ್ಲಿ ನುಡಿದಳು,

"ಅಷ್ಟೇಕೆ ಕಳಕಳಿ ? ಇದೇ ಕೊನೆಯಲ್ಲ. ನೀನು ಚೆನ್ನಾಗಿದ್ದರೆ ಸಂಗೀತ ಕಾರ್ಯಕ್ರಮಗಳೆಷ್ಟುಬೇಕು ?"

"ಈ ಒಂದು ದಿನ ನಾನು ಚೆನ್ನಾಗಿದ್ದಿದ್ದರೆ ನನಗೆ ವ್ಯಥೆ ಇರಲಿಲ್ಲ. ಖಂಡಿತ...ನನ್ನಂತಹ ನಿರ್ಭಾಗ್ಯೆ ಇನ್ನಿಲ್ಲ."

"ಹೋಗಲಿ ಬಿಡು ; ಈ ಸಲ ಭಾಗ್ಯವಿಲ್ಲದಿದ್ದರೆ ಇನ್ನೊಮ್ಮೆ ಬರ ಬಾರದು ಎಂದೇನಿಲ್ಲ. ಒಳ್ಳೆಯ ಕಾಲ ಎಂದಾದರೂ ಬಂದೇ ಬರುತ್ತೆ ಯೋಚಿಸಬೇಡ. ಕತ್ತಲಾದ ಮೇಲೆ ಬೆಳಕು ಮೂಡಲೇ ಬೇಕಷ್ಟೆ ?"

"ಅದಿನ್ನಾವಾಗಲೋ...." ಎಂದ ಸರಸು ವಿಜಾತೀಯವಾದ ದನಿಯಲ್ಲಿ ತಾಯಿಯನ್ನು ಕೇಳಿದಳು "ಬಹಳ ಜನ ಬಂದಿದ್ದಾರೆಯೆ ?"

"ಓ ..! ಅದನ್ನು ಹೇಳುವುದೇನು ? ಒಂದು ಸ್ಥಳವೂ ಖಾಲಿ ಇಲ್ಲ."

ಛೆಃ ! ನನಗೆ ಪುಣ್ಯವಿಲ್ಲ ಸಂಗೀತ ತುಂಬ ಇಂಪಾಗಿರಬಹುದಲ್ಲವೆ ?"

"ಅವರು ಹಾಡುವುದೇ ಇಂಪು !"

ಅಲ್ಲಿ ಹೆಚ್ಚು ಹೊತ್ತು ಇರಲಾಗದುದರಿಂದ ಶಿವೆ ಪುನಃ ಹೊರಟಳು. ಇದುವರೆಗೆ ಏನೋ ಒಂದು ರೀತಿಯಲ್ಲಿ ತಾಳಿಕೊಂಡಿದ್ದ ಸರಸು ಮೆಲ್ಲನೆ ಮುಸು ಮುಸು ಅಳತೊಡಗಿದಳು. ಗೌರಮ್ಮ ಒಮ್ಮೆ ಬಂದು ಸಮಾಧಾನ ಹೇಳಿದಳಾದರೂ ಸರಸು ಸುಧಾರಿಸಿಕೊಳ್ಳಲಿಲ್ಲ. ಅದೇ ಸಮಯಕ್ಕೆ ಅಲ್ಲಿಗೆ ಬಂದ ಎಲಿಜಬೆತಳು ತಲೆಯನ್ನು ನೇವರಿಸಿ ಮುದ್ದುಗೈದು ನಲ್ಮೆಯಿಂದ,

"ಇಂತಹ ತೊಂದರೆಗಳು ಎಲ್ಲರ ಜೀವನದಲ್ಲೂ ಬರುತ್ತವೆ. ನೀನು ಸಂತೋಷವಾಗಿದ್ದು ನಿನ್ನ ತಾಯಿಯನ್ನು ಸಂತೋಷವಾಗಿಡು....ಕಂಡೆಯಾ!" ಎಂದಳು ದಯೆಯೇ ಮೂರ್ತಿಯೆತ್ತಿ ಬಂದಂತೆ.

ಸರಸು ಮಾತಾಡಲಿಲ್ಲ. ದುಃಖಪೂರ್ಣ ಮುಖಮುದ್ರೆ ಉತ್ತರ ನೀಡಿತು.

ಎಲಿಜಬೆತಳು ಬಳಿಯಲ್ಲಿ ಕುಳಿತು ಸುತ್ತೈಸಿದಾಗ ಸರಸು ಸಾವರಿಸಿ ಕೊಳ್ಳುತ್ತ ತನ್ನ ಒಡಲ ಸಂಕಟವನ್ನು ತೋಡಿಕೊಂಡಳು. "ಈ ಸಲ ನಾನು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕೂಡುವುದಿದೆ. ಅನಾಥ ಕನ್ಯಾವಿದ್ಯಾ ಲಯಕ್ಕಾಗಿ ಏರ್ಪಡಿಸಿದ ಕಾರ್ಯಕ್ರಮಗಳಿಂದ ಓದಿಕೊಳ್ಳಲು ಅವಕಾಶ ಸಿಗಲಿಲ್ಲ. ಹೊಲಿಯಬೇಕಾದ ಬಟ್ಟೆಗಳೂ ಬಹಳ ಶೇಖರಣೆಯಾಗಿವೆ. ಇನ್ನು ಅವನ್ನೆಲ್ಲ ಹೊಲಿಯುವುದುಂಟು. ಹೀಗಾಗಿ ಓದಿಕೊಳ್ಳುವ ಕಷ್ಟ ಹೇಳ ತೀರದು. ದಿನವೂ ಮಧ್ಯರಾತ್ರಿಯವರೆಗೆ ಹೊಲಿಯಬೇಕಾಗುತ್ತೆ. ಪುನಃ ಬೆಳಗಿನ ಝಾವ ಎದ್ದರೇನೇ ಹಿಡಿದ ಕೆಲಸ ಸಾಗಬೇಕಾದರೆ-ಅಮ್ಮನಿಗಂತೂ ಉಸಿರಾಡಲೂ ಬಿಡುವು ದೊರೆಯುವುದು ಕಷ್ಟ. ನಾನು ಚೆನ್ನಾಗಿದ್ದರೆ ಅವರಿಗೆ ಸ್ವಲ್ಪ ಸಹಾಯ ಮಾಡಬಹುದಾಗಿತ್ತು. ದೇವರಿಗೆ ಸ್ವಲ್ಪವೂ ದಯೆ ಬರಲಿಲ್ಲ."

"ಈಗ ಬರದಿದ್ದರೂ ಮುಂದೆ ಬರುತ್ತೆ, ಚಿಂತಿಸಬೇಡ ಮಗೂ. ಯಾರ ಪಾಲಿಗೂ ಕಷ್ಟ ಸುಖಗಳು ಸ್ಥಿರವಲ್ಲ. ಸುಖವನ್ನು ಅರಗಿಸಿಕೊಂಡಷ್ಟೇ ಸುಲಭವಾಗಿ ಕಷ್ಟವನ್ನೂ ಅರಗಿಸಿಕೊಳ್ಳಬೇಕೆಂಬುದು ಭಗವಂತನ ಆದೇಶ. ನೀನು ಸಂತೋಷವಾಗಿದ್ದು ಪೂರ್ಣ ಒತ್ತಾಸೆ ನೀಡಿದರೆ ನಿನ್ನಮ್ಮನಿಗೆ ಅಶ್ವಬಲ ಬರುತ್ತದೆ."

ಆ ಹಿತೋಪದೇಶ ಮನೋದಧಿಗೆ ಅಮೃತೋಪಮವಾಗಿತ್ತು.

"ಹೌದು ; ಎಲ್ಲರ ಒತ್ತಾಸೆ ದೊರಕಿದರೆ ಅಮ್ಮನಿಗೆ ಅಶ್ವಬಲ ಬರುತ್ತದೆ" ಎಂದು ಮತ್ತೆ ಮತ್ತೆ ಹೇಳಿಕೊಂಡಳು-ಸರಸು. ಎಳೆ ಜೀವ ಕಷ್ಟ-ಸುಖಗಳಲ್ಲಿ ಹೊಯ್ದಾಡುತ್ತಿತ್ತು. ಹೊತ್ತು ದೀರ್ಘವಾಗಿ–ಬಲು ದೀರ್ಘವಾಗಿ ಉರುಳುತ್ತಿರುವಂತೆ ಭಾಸವಾಯಿತು.

ನಿದ್ದೆಯ ಜೊಂಪಿನಲ್ಲಿ ಮಲಗಿದ್ದ ಸರಸು ಸಂಗೀತ ಎಷ್ಟು ಚೆನ್ನಾಗಿದೆ !" ಎಂದು ಕನವರಿಸುತ್ತಿರುವಾಗಲೇ ಕೆನ್ನೆಯ ಮೇಲೆ ಏನೋ ಭಾರವಾದಂತಾಗಲು ಮೆಲ್ಲನೆ ಕಣ್ತೆರೆದಳು. ಬಳಿಯಲ್ಲಿ ಮೂರ್ತಿಯೂ ಕಲ್ಯಾಣಿಯೂ ನಿಂತಿದ್ದುದು ದೃಷ್ಟಿಗೆ ಬಿತ್ತು. ಮೂರ್ತಿಯ ಕೈ ಕೆನ್ನೆಯಮೇಲಿತ್ತು.

೨೭

ಜೋಗಿಹಳ್ಳಿಯ ರಾಮಣ್ಣನ ಮನೆಯಲ್ಲಿ ಮದುವೆಯ ಸಮಾರಂಭ. ನಿರ್ಮಲೆ ಹಸೆಮಣೆ ಹೆಣ್ಣಾಗಿ ಕುಳಿತಿದ್ದಾಳೆ. ಹತ್ತಿರದ ಬಂಧುಬಾಂಧವರು ತುಂಬಿ ಸೆರೆದಿದ್ದು ಮನೆ ಗಿಜಿಗುಡಿಯುತ್ತಿತ್ತು. ರಾಮಣ್ಣನಿಗೆ ಚಂದುವಿನಲ್ಲಿ ಪ್ರೀತಿ ಉಳಿದಿರಲಿಲ್ಲವಾದರೂ ಅತನಿಲ್ಲದೆ ಯಾವ ಸಮಾರಂಭವೂ ಶೋಭಿಸ ದೆನ್ನುವ ಆತ್ಮೀಯಭಾವ ಉಳಿದಿತ್ತು. ಕಳೆದೆರಡು ದಿನಗಳಿಂದ ಚಂದುವನ್ನು ಹೋಗಗೊಡದೆ ತಡೆಹಿಡಿದು ಕೆಲಸ ಕಾರ್ಯಗಳ ಮೇಲ್ವಿಚಾರಣೆಗೆ ಬಿಟ್ಟಿದ್ದ. ಕಾವೇರಿಯೂ ಒಂದಿಗೇನೇ ಬಂದು ಸಮಾರಂಭದಲ್ಲಿ ಪಾಲ್ಗೊಂಡಿದ್ದಳು. ಸಿದ್ಧರಾಮು ಪುಟ್ಟಗಂಗ ಶಂಕರ ಅನಂತು ವೆಂಕಟೇಶರ ಓಡಾಟವೇ ಓಡಾಟ. ಈ ಸಲ ಶಾಲೆಗೆ ಶರಣು ಹೊಡೆದು ಪುಟ್ಟಗಂಗ ಕಿರಿಯರ ತಂಡದಲ್ಲಿ ಸೇರಿ ಕೊಂಡಿದ್ದ.

ಆದರೆ....

ಸಾವಿತ್ರಿ ಮತ್ತು ನೀಲಮ್ಮನ ಮನಸ್ಸಿನಲ್ಲಿ ಶಿವೆಯನ್ನು ಮದುವೆಯಲ್ಲಿ ಪಾಲ್ಗೊಳ್ಳಲವಕಾಶಕೊಡದಿದ್ದುದು ತಪ್ಪು ಎನ್ನಿಸುತ್ತಿತ್ತು. ಎಷ್ಟಾದರೂ ಕೊನೆಯ ಹೆಣ್ಣು ಮಗು. ಕೊನೆಯದಾಗಿ ಮನೆಯಲ್ಲಿ ಧಾರಾ ಮುಹೂರ್ತ ನಡೆಯುತ್ತಲಿದೆ. ಶಿವಮ್ಮನನ್ನು ಬರಮಾಡಿಕೊಂಡಿದ್ದರೆ ಒಳ್ಳೆಯದಿತ್ತು. ಎಂದು ಇಬ್ಬರ ಮನಸ್ಸೂ ಹೇಳುತ್ತಿತ್ತು. ಇತರರಿಗೆ ಅದರ ಪರಿವೇ ಇರಲಿಲ್ಲ.

ನಿರ್ಮಲೆಯ ಕೈಹಿಡಿಯಲಿದ್ದ ಮರಿಸ್ವಾಮಿ ನಾಲ್ಕು ಎಕರೆ ಜಮೀನನ್ನು ಹೊಂದಿದ್ದು ಹತ್ತಾರು ದನಕರುಗಳನ್ನೂ ಇಟ್ಟುಕೊಂಡಿದ್ದ. ಕೊಂಚ ಸ್ಥಿತಿ ವಂತನಾದ ಅಳಿಯ ಬಂದನೆಂದು ರಾಮಣ್ಣನಿಗೆ ಎಲ್ಲಿಲ್ಲದ ಸಂತೋಷ. ಮದುವೆ ಅದ್ಧೂರಿಯಿಂದ ನಡೆಯಿತು. ಚಂದುವಿನ ನೇತೃತ್ವದಲ್ಲಿ ಊಟ ಉಪಚಾರವೂ ಅಚ್ಚುಕಟ್ಟಾಗಿ ನಡೆದು ಮದುವೆಯ ಸಮಾರಂಭ ಮುಗಿದು ವರನ ಕಡೆ ಯವರು ವಧುವಿನೊಂದಿಗೆ ಹೊರಟು ಹೋದನಂತರ ಆನಂದ ಒಳ ಬಂದು ಹೇಳಿದ "ಈಗಲೂ ಸರಸುಗೆ ಜ್ವರ ಬರುತ್ತಿದೆಯಂತೆ ಪುಟ್ಟಪ್ಪ ಹೇಳಿದ."

"ಎರಡು ವಾರಗಳಿಂದ ಒಂದೇ ಸಮನೆ ಜ್ವರ ಬರುತ್ತಿದೆಯಂತೆ. ಸರಸು ಬಹಳ ಸುಸ್ತಾಗಿರಬಹುದು." ರಾಮಣ್ಣನೆಂದ.

"ಇಷ್ಟಾದರೂ ನೀನು ಹೋಗಿ ನೋಡಲಿಲ್ಲ. ಪಾಪ, ಶಿವಮ್ಮನ ಗೋಳು ದೇವರಿಗೇ ಗೊತ್ತು. ಇನ್ನಾದರೂ ಒಮ್ಮೆ ನೋಡಿಕೊಂಡು ಬಾ." ಎಂದ ಚಂದು ದನಿಯಲ್ಲಿ ಅನುಕಂಪವಿತ್ತು. ಸಮಯೋಚಿತವಾಗಿ ಮುಂದುವರಿದ "ನೀನು ಕೋಪಗೊಳ್ಳುತ್ತಿ; ನನಗದು ಗೊತ್ತು. ಆದರೂ ಹೇಳುತ್ತಿದ್ದೇನೆ."

"ನಾನು ಹೋಗಿ ಮಾಡುವುದೇನು? ಆಸ್ಪತ್ರೆಯಿದೆ; ನರ್ಸ್ ಇದ್ದಾಳೆ; ಡಾಕ್ಟರಿದ್ದಾರೆ."

"ಛಿಃ ಛಿಃ ಎಂಥ ಮಾತು? ಮಗು ನಿರಪರಾಧಿ, ಅವಳಿಂದ ನಿನಗೇನೂ ತೊಂದರೆಯಾಗಲಿಲ್ಲ."

ಮಾತು ಮುಗಿಯುವಷ್ಟರಲ್ಲಿ ಕಾಳಿಂಗಯ್ಯ ಅಲ್ಲಿಗೆ ಬಂದ. ಅವನನ್ನು ಕಾಣುತ್ತಲೂ ರಾಮಣ್ಣ ಅಂದ. "ನನ್ನನ್ನು ಮೈಸೂರಿಗೆ ಹೋಗಿ ಸರಸುನ ನೋಡಿಕೊಂಡು ಬಾ ಎನ್ನುತ್ತಾನೆ ಚಂದು !" ತುಟಿಗಳಲ್ಲಿ ತಿರಸ್ಕಾರದ ನಗೆ ಅರಳಿತು.

"ಅವಳೇನಪ್ಪಾ, ಘನವಾಗಿದ್ದಾಳೆ! ನಮ್ಮಂತಹವರು ನೋಡಿ ಮಾಡುವುದೇನು? ಶಿವೆಯ ಶಿಸ್ತು ಉಡಿಗೆ ತೊಡಿಗೆ ಬುದ್ಧಿ ನಿನಗೆ ಬಂದೀತೇ? ಆಕೆ ಈಗ ಸರ್ವಶಕ್ತೆ! ಸಂಪನ್ನೆ! ಶಾಲೆ ಸ್ಥಾಪನೆ ಮಾಡುತ್ತಿದ್ದಾಳೆ! ನೀನು ಇಷ್ಟೆಲ್ಲ ಅನುಕೂಲವಿದ್ದು ಏನು ಮಾಡಿದ್ದೀಯೆ? ಸಂಗೀತ ಸಮಾರಂಭವಿದ್ದಂದು ನಾನಲ್ಲಿಯೇ ಇದ್ದೆ. ಆ ಮೋಜನಿಷ್ಟು ನೋಡೋಣವೆಂದು ಎರಡು ರೂಪಾಯಿ ತೆತ್ತು ಟಿಕೆಟ್ಟು ಕೊಂಡುಕೊಂಡು ಸಂಗೀತಕ್ಕೂ ಹೋಗಿದ್ದೆ. ಮಗು ಆಸ್ಪತ್ರೆಯಲ್ಲಿ; ಈಕೆ ಸಮಾರಂಭದಲ್ಲಿ! ನೋಡಿ ನನಗೆ ಕಸಿವಿಸಿಯುಂಟಾಯಿತು. ನಮ್ಮ ಹಳ್ಳಿ ಹೆಣ್ಣು ಈ ರೀತಿ ಆದಾಳೆಂದು ನಾನೆಂದೂ ಎಣಿಸಿರಲಿಲ್ಲ. ಹಾಗೇ ಆಕೆಯ ಓಡಾಟ ಬಿಳಿಯುಡಿಗೆ ಚಿಗರಿಯಂತ ಚಟುವಟಿಕೆ ಕಂಡು ತಾಳದಾಯಿತು. ಬರುವಾಗ ಎದುರಿಗೆ ಸಿಕ್ಕಿದಳು. "ಸ್ವರ್ಗದಲ್ಲಿರೋ ಸ್ವಾಮಿ ಮೆಚ್ಚುವಂತೆ ಬಾಳಬೇಕು ಶಿವೆ!" ಎಂದೆ. ಅವಳ ಮುಖ ತಟ್ಟನೆ ಕಪ್ಪಿಟ್ಟಿತು." ಅಟ್ಟಹಾಸದಿಂದ ನಗುತ್ತಾ ಹೇಳಿದ ಕಾಳಿಂಗಯ್ಯ.

ಕಾಳಿಂಗಯ್ಯನ ಮಾತು ರಾಮಣ್ಣನಿಗೆ ಹಿತವೆನಿಸಿದರೂ ಚಂದುಗೆ ಅತ್ಯಂತ ನೋವನ್ನುಂಟುಮಾಡಿತು. ಅವನು ಏರಿದ ದನಿಯಲ್ಲಿ ಹೇಳಿದ. "ಕಾಳಿಂಗಯ್ಯಾ, ಇದು ನಿಮಗೆ ಹಿತವೆನಿಸಿದರೂ ಸ್ವರ್ಗದಲ್ಲಿರೋ ಸ್ವಾಮಿಗೆ ಹಿತವೆನಿಸಲಿಕ್ಕಿಲ್ಲ. ಶಿವಮ್ಮ ತನ್ನಂತಹವರೇ ಆದ ಬಡ ಹೆಣ್ಣು ಮಕ್ಕಳಿಗೆ ಅದರಲ್ಲೂ ಅನಾಥರಿಗಾಗಿ ಶಾಲೆ ತೆರೆಯುವ ಯೋಜನೆ ಮಾಡಿದ್ದಾರೆ. ನಿಜವಾಗಿಯೂ ಇದು ಸ್ತುತ್ಯ ಕಾರ್ಯ. ನಾಲ್ಕು ಮಂದಿ ಹೆಣ್ಣು ಮಕ್ಕಳು ನೆಮ್ಮದಿಯ ಜೀವನ ನಡೆಸುವಂತಾದರೆ ಅಷ್ಟೇ ಸಾಕು. ಅದೊಂದು ಅಳಿಲ ಮಳಲ ಸೇವೆ."

"ಎಂದು ನಾಜೂಕು ಬಂತೋ ಅಂದೇ ಸೇವೆ ಬ್ರಹ್ಮಾಂಡವಾಗಿ ಬೆಳೆಯಿತು. ಅಳಿಲ ಮಳಲ ಸೇವೆ ಅಂತ ಯಾಕೆನ್ನುತ್ತಿ?"

"ನಿಮ್ಮೊಂದಿಗೆ ಮಾತಾಡಿ ಪ್ರಯೋಜನವಿಲ್ಲ. ಇಂಥ ವಾದದಿಂದ ವೃಥಾ ಜಿದ್ದು ಬೆಳೆಯುತ್ತದೆ. ನಾಲ್ಕು ದಿನ ಹೋದ ಮೇಲೆ ನೀವೇ ಮೆಚ್ಚಿಕೊಳ್ಳುತ್ತೀರಿ. ಕಾಲೋಚಿತವಾಗಿ ವರ್ತಿಸುವುದನ್ನು ಪ್ರತಿಯೊಬ್ಬರೂ ಮನಗಾಣಬೇಕು."

"ಚಂದೂ, ಇಲ್ಲಿ ನಿನ್ನ ಭಾಷಣ ಶುರು ಮಾಡಬೇಡ. ಎಲ್ಲಾ ಹೆಂಗಸರೂ ಮುಂದೆ ಉದ್ಯೋಗಕ್ಕೆ ಹೊರಟಾರು!" ಕಾಳಿಂಗಯ್ಯ ವ್ಯಂಗ್ಯಪೂರ್ಣ ದನಿಯಲ್ಲಿ "ನಮ್ಮ ಹಿಟ್ಟಿಗೆ ಸೊನ್ನೆ ಬಿದ್ದರೂ ಚಿಂತೆಯಿಲ್ಲ. ಈ ಹೆಂಗಸರೆಲ್ಲಾ ನಿಮ್ಮ ಶಾಲೆಯಲ್ಲಿ ಕಲಿಯಲಿ; ನಮ್ಮದೇನು ಅಡ್ಡಿಯಿಲ್ಲ ಆದರೆ......"

"ಆದರೆ ಏನು ?"

"ಎಲ್ಲರೂ ನಾಜೂಕು ಕಲಿತು ಬಿಳೀ ಪತ್ತಲ ಉಟ್ಟು ಮೆರೆಯಲನುವಾದರೆ ನಮ್ಮ ಹಳ್ಳಿ ಉದ್ಧಾರವಾದಂತೆಯೆ!"

"ಸಾಕಪ್ಪ ಸಾಕು" ಎನ್ನುತ್ತ ಚಂದು ಹೊರ ಹೋದ. ಮನಸ್ಸಿಗೆ ಅತ್ಯಂತ ಜುಗುಪ್ಸೆಯುಂಟಾಯಿತು.

ಊರಾಚೆಯ ಬಯಲಿನಲ್ಲಿ ರಂಗಮಂದಿರ ತಲೆಯೆತ್ತಿ ನಿಂತಿತ್ತು. ಎರಡು ದಿನಗಳಿಂದ ಬಿಡುವಿಲ್ಲದೆ ಅತ್ತ ಸುಳಿದಿರಲಿಲ್ಲ. ಅರ್ಧ ಹೊಚ್ಚಿದ್ದ ಚಾವಣಿ ಹಾಗೇ ಉಳಿದಿತ್ತು. ಇಂದು ಅದರ ಪೂರೈಕೆಗಾಗಿ ಚಂದು ಕಿರಿಯರ ಬಳಗ

ವನ್ನು ಮುಂದಿಟ್ಟುಕೊಂಡು ಹೊರಟ. ದಾರಿಯಲ್ಲಿ ವೆಂಕಟೇಶ ಹೇಳಿದ ಚಂದಣ್ಣಾ, ನಮ್ಮವರಿಗೆ ನವಜೀವನದಲ್ಲಿ ಆಸಕ್ತಿಯಿಲ್ಲ. ಈಗಿನ ಹೊಸ ರೀತಿಯ ವ್ಯವಸಾಯದಲ್ಲಿ ತಿಳಿವಳಿಕೆಯಿಲ್ಲ. ಇದ್ದ ಕೊಂಚ ಜಮೀನಿನಲ್ಲಿ ಹೆಚ್ಚು ಗಳಿಕೆ ಮಾಡಬಹುದೆಂಬುದು ಇವರ ತಲೆಗೂ ಹೋಗುವುದಿಲ್ಲ. ಈ ಬರಡು ಜೀವನಕ್ಕೆ ಅಂಟಿಕೊಂಡೇ ಬಾಳು ಮುಗಿಸುತ್ತಾರೆ. ತಾವಂತೂ ಪ್ರಗತಿ ಹೊಂದುವುದಿಲ್ಲ. ಬೇರೆಯವರೂ ಮುಂದುವರಿಯಬಾರದು ಇದಕ್ಕೆ ಮದ್ದೇನು?"

"ಕಾಲಕ್ರಮೇಣ ಸರಿಹೋದೀತು." ಎಂದ ಚಂದು, ಗಂಭೀರಭಾವ ದಿಂದ ಪುನಃ "ನೋಡು ವೆಂಕಟೇಶ್, ಈ ಪ್ರಪಂಚದಲ್ಲಿ ನಾನಾ ಬಗೆಯ ಜನರಿದ್ದಾರೆ. ನಮಗೆ ಹಿತವಾದುದು ಇನ್ನೊಬ್ಬರಿಗೆ ಅಹಿತವಾಗುತ್ತದೆ. ಅವರನ್ನು 'ಹಿತವೆನ್ನಿ' ಎನ್ನುವುದಕ್ಕಾಗುವುದಿಲ್ಲ. ಇದೇ ಜನ ಮುಂದೆ ಮೆಚ್ಚಿ ಕೊಳ್ಳಬಹುದು. ಆ ಸುದಿನಗಳ ನಿರೀಕ್ಷಣೆಯಲ್ಲಿ ಇಂದಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿರಿ. ಪಯಣದ ಹಾದಿಯಲ್ಲಿ ಕಷ್ಟನಿಷ್ಠೂರಗಳು ಬರುವುದು ಸಹಜ. ಅವನ್ನು ತಾಳ್ಮೆಯಿಂದ ಪರಿಹರಿಸಿಕೊಳ್ಳುವುದು ಲೇಸು."

"ಅದಿರಲಿ ಚಂದಣ್ಣಾ, ಆಗದವರು ಕೂಗಿಕೊಳ್ಳುತ್ತಾರೆ. ಇಚ್ಛೆಪಟ್ಟ ವರು ಹೊಂದಿಕೊಳ್ಳುತ್ತಾರೆ. ಈಗ ನಮ್ಮ ಮುಂದಿರುವ ಪ್ರಶ್ನೆಯೆಂದರೆ ಇಲ್ಲಿ ಕಾಂಗ್ರೆಸ್ಸನ್ನು ಬೆಳೆಸಬೇಕೆ ಅಥವಾ ಬೇರೆ ರಾಜಕೀಯ ಪಕ್ಷ ಬೆಳೆಸಬೇಕೆ ಎಂಬುದು. ನೀವೀಗ ಏನು ಹೇಳುತ್ತೀರಿ ? ಸಿದ್ಧರಾಮ ಸಮಸ್ಯೆಯನ್ನು ಮುಂದಿಟ್ಟ.

"ಸಿದ್ದೂ, ಈಗ ರಾಜಕೀಯದ ಗೊಡವೆ ಬೇಡ. ಮೊದಲು ಪುರೋಭಿ ವೃದ್ಧಿಯಾಗಿ ಸಾಮಾಜಿಕ ಸುಧಾರಣೆಯಾಗಲಿ. ಅನಂತರ ರಾಜಕೀಯ ಪಕ್ಷಗಳ ಬೆಳವಣಿಗೆ ತಾನಾಗಿಯೇ ಆಗುತ್ತದೆ."

"ಅದ್ಹೇಗಾಗುತ್ತೆ ಚಂದಣ್ಣಾ ? ಇನ್ನೆರಡು ವರ್ಷಗಳಿಗೆ ಸಾರ್ವತ್ರಿಕ ಚುನಾವಣೆಗಳಾಗುತ್ತವೆ. ನಾವು ಇದೇ ರೀತಿ ಆಗಲೂ ಇದ್ದರೆ ನಮ್ಮ ಬದುಕೇ ವ್ಯರ್ಥವಾಗುತ್ತದೆ. ಅದರೊಳಗಾಗಿ ಯಾವುದಾದರೂ ಒಂದು ಪಕ್ಷವನ್ನು ಬೆಳೆಸಿಕೊಂಡಿದ್ದರೆ ನಮ್ಮ ವ್ಯಕ್ತಿತ್ವ ಉಳಿಯುತ್ತದೆ. ಅಷ್ಟಲ್ಲದ ಮೇಲೆ ಏನು ಪ್ರಯೋಜನ ?" ಎಂದ ಶಂಕರ.

"ಶಂಕರೂ ಸ್ವಲ್ಪ ನಿಧಾನಿಸು. ಮೊದಲು ಎಲ್ಲರೂ ತ್ವರಿತದಿಂದ ಈ ಕೆಲಸಕಾರ್ಯಗಳನ್ನು ಮುಗಿಸಿಬಿಡಿರಿ. ಅನಂತರ ಎಲ್ಲರೊಮ್ಮೆ ಕೂಡಿ ಮಾತಾಡಿ ಒಂದು ನಿರ್ಧಾರಕ್ಕೆ ಬರೋಣ. ನನ್ನ ಸ್ವಂತ ಅಭಿಪ್ರಾಯವನ್ನು ಕೇಳುವುದಾದರೆ ಕಾಂಗ್ರೆಸ್ಸೇ ನಮಗೆ ಮಾತೃ ಸಂಸ್ಥೆ. ಅದರ ಆಶ್ರಯದಲ್ಲೇ ನಮ್ಮ ದೇಶದ ವಿಜಯ ಪತಾಕೆ ಹಾರಾಡಿದೆ. ಅದನ್ನೇ ಬೆಳೆಸಬೇಕೆಂಬುದು ನನ್ನ ಇಚ್ಛೆ."

"ನನಗೂ ಅದೇ ಸರಿಯೆನಿಸುತ್ತೆ." ವೆಂಕಟೇಶ ಸಮಯೋಚಿತವಾಗಿ ತನ್ನ ದನಿಗೂಡಿಸಿದ.

ಇನ್ನಷ್ಟು ಹೊತ್ತಿನೊಳಗಾಗಿ ಎಲ್ಲರೂ ಊರ ಬಯಲಿಗೆ ಮುಟ್ಟಿದ್ದರು. ಸಿದ್ಧರಾಮ ರಂಗಮಂದಿರದತ್ತ ದಿಟ್ಟಿಯನ್ನು ಹೆಮ್ಮೆಯಿಂದ ಹೊರಳಿಸಿ ಹೇಳಿದ. "ಚಂದಣ್ಣಾ, ಎಲ್ಲರೂ ನಿಮ್ಮ ಅಭಿಪ್ರಾಯಕ್ಕೆ ಮನ್ನಣೆಯಿಯುತ್ತಾರೆ. ಆದರೆ ಕಾಂಗ್ರೆಸ್ಸಿನ ಬಗ್ಗೆ ಈಗಿರುವ ಅಭಿಪ್ರಾಯವನ್ನು ನೋಡಿದರೆ ಕಾಂಗ್ರೆಸ್ಸಿನ ಸೊಲ್ಲೇ ಇಲ್ಲಿ ಬೇಡ ಎನ್ನಿಸುತ್ತದೆ."

"ಸಿದ್ಧೂ, ಕಾಂಗ್ರೆಸ್ಸಿನ ಒಳಗೂ ಹೊರಗೂ ಇರುವವರೆಲ್ಲರೂ ನಮ್ಮವರೇ. ನಾವು ಶುದ್ಧಿಯಾಗದ ಹೊರತು ಯಾವ ಪಕ್ಷವೂ ಶುದ್ಧಿಯಾಗದು. ಕಾಂಗ್ರೆಸ್ಸು ಆಳುವ ಪಕ್ಷವಾಗಿದ್ದು ಅಧಿಕಾದಲ್ಲಿರುವವರ ಕೈವಾಡ ಎಲ್ಲರ ಕಣ್ಣಿಗೆ ಬೀಳುವುದರಿಂದ ಅಲ್ಲಿನ ಗುಣದೋಷಗಳು ಹೊರಬೀಳುತ್ತವೆ. ಕಾರಣ ಎಲ್ಲರ ದೃಷ್ಟಿಯೂ ಅತ್ತಲೇ ಕೇಂದ್ರೀಕೃತವಾಗಿರುತ್ತದೆಯೇ ವಿನಾ ಇತರ ಪಕ್ಷಗಳ ಕಡೆಗಿರುವುದಿಲ್ಲ. ಇತರ ಪಕ್ಷಗಳಲ್ಲಿರುವವರು ನರೋತ್ತಮರೆಂದು ತಿಳಿದಿದ್ದೀಯೇನು ?" ಗಂಭೀರ ಮುಖಮುದ್ರೆಯಲ್ಲಿ ಭಾವಪೂರ್ಣ ನೋಟ ಬೀರಿ ಪುನಃ ಮುಂದುವರಿದ. "ಆದ್ದರಿಂದ ನಾನು ಹೇಳುವುದು ಇಷ್ಟೆ. ಎಲ್ಲಿ ಹೊಲಸಿದೆಯೋ ಅಲ್ಲಿಯೇ ನುಗ್ಗಿರಿ. ಅದರ ನಿರ್ಮಲೀಕರಣ ನಿಮ್ಮಿಂದಲೇ ಆಗಲಿ. ಅದರ ಕೀರ್ತಿಯೂ ನಿಮಗೇ ಲಭಿಸಲಿ."

"ಅಸಭ್ಯರ ಕೋಟೆಯಲ್ಲಿ ಸಿಕ್ಕಿದರೆ ಕೀರ್ತಿ ಲಭಿಸಿದಂತೆಯೇ."

"ಅಷ್ಟೊಂದು ಉದ್ವೇಗವೇಕೆ ? ಅಸಭ್ಯರಿಲ್ಲದ ಸ್ಥಳವುಂಟೇ ? ನಿಮ್ಮ ಊರಿನಲ್ಲಿ ಅಸಭ್ಯರಿಲ್ಲವೇನು? ಇಲ್ಲಿ ಕೇಳು. ಅಸಭ್ಯತೆಯನ್ನು ಬಡಿದೋಡಿಸುವುದೇ ಸಭ್ಯತೆಗೆ ದಾರಿ. ಗಾಂಧೀಜಿಯವರ ನೇತೃತ್ವದಲ್ಲಿ ಉದಯವಾದ

ಕಾಂಗ್ರೆಸ್ಸಿನ ಅಂಗರಚನೆಯಲ್ಲಿ ಶಾಂತಿ-ಶಿಸ್ತು-ಸತ್ಯ-ಧರ್ಮ ಇವುಗಳಿಗೆ ಪ್ರಾಧಾನ್ಯ ಕೊಟ್ಟಿದ್ದರು. ಅದರಂತೆ ಸ್ವಯಂಸೇವಕರ ತರಬೇತಿಯೂ ನಡೆಯುತ್ತಿತ್ತು. ಇಂದೇ ನಾಗಿದೆ? ಕಾಂಗ್ರೆಸ್ಸು ಅದ್ಭುತವಾಗಿ ಬೆಳೆದು ಸ್ವಯಂಸೇವಕರ ತರಬೇತಿ ನಿಂತಿದೆ. ನಾಲ್ಕಾಣೆ ತೆತ್ತವರೆಲ್ಲಾ ಅದರ ಸದಸ್ಯರಾಗುತ್ತಾರೆ. ಇವರಲ್ಲಿ ತರಬೇತಿ ಹೊಂದಿದವರೆಷ್ಟು? ಸಭ್ಯರೆಷ್ಟು? ಅಸಭ್ಯರೆಷ್ಟು? ಎಂಬುದನ್ನು ಕುರಿತು ಯೋಚಿಸು. ಬರಿಯ ಕಾಂಗ್ರೆಸ್ಸಿನ ದೂಷಣೆಯಿಂದೇನು ಪ್ರಯೋಜನ? ಹೇಗೆ ಇದರ ಶುದ್ಧೀಕರಣ ಎಂದಷ್ಟು ಮಾತ್ರ ಚಿಂತಿಸಿರಿ."

"ಇಲಿ ಹೆಗ್ಗಣಗಳು ಕಣಜವನ್ನು ಹೊಕ್ಕಂತಾಗಿದೆ ಇಂದು ಕಾಂಗ್ರೆಸ್ಸಿನ ಸ್ಥಿತಿ. ಚಂದಣ್ಣಾ ಇದರ ಶುದ್ಧೀಕರಣ ಸಾಧ್ಯವೇ?"

"ಸರಿ ಶಂಕರ್, ಇದಕ್ಕೆ ಮದ್ದೇನು ಎಂಬುದನ್ನು ಚಿಂತಿಸು. ನಮ್ಮಲ್ಲಿ ಯಾವ ಪಕ್ಷ ಆಳ್ವಿಕೆಗೆ ಬಂದರೂ ಇದೇ ಗತಿಯೆಂಬುದನ್ನು ಮತ್ತೆ ಹೇಳ ಬೇಕೇ? ಮೊದಲನೆಯದಾಗಿ ಜನ ಶುದ್ಧಿಯಾಗಲಿ; ಎರಡನೆಯದಾಗಿ ಸಾಮಾಜಿಕ ಸುಧಾರಣೆಯಾಗಲಿ; ಅನಂತರ ರಾಜಕೀಯ ಸುಧಾರಣೆ ತಾನಾಗಿ ಆಗುತ್ತದೆ."

"ಅದು ಆದೀತೆಂಬ ಯೋಚನೆ ಬಿಟ್ಟುಬಿಡುವುದೇ ಲೇಸು."

"ಹಾಗೆಂದವರುಂಟೇ? ಸರಿ ಹೊಂದಿಸುತ್ತೇನೆಂಬ ಎದೆಗಾರಿಕೆ ಬೇಕು." ಎಂದ ಚಂದು ಸರಸರನೆ ಅಟ್ಟಣೆಯನ್ನು ಹತ್ತಿರಂಗಮಂದಿರದಿಂದ ಮೇಲ್ಛಾವಣಿ ಯನ್ನು ಏರಿದ. ಹುಡುಗರ ತಂಡವು ಹಿಂಬಾಲಿಸಿತು. ಕೆಲವರು ಹೆಂಚು ಗಳನ್ನು ಹೊತ್ತು ತಂದರು ಕೆಲವರು ಜೋಡಿಸಲಾರಂಭಿಸಿದರು. ಕೆಲಸ ಅಚ್ಚುಕಟ್ಟಾಗಿ ಸಾಗಿತು. ಊರ ಕಿರಿಯ ಮಕ್ಕಳನ್ನು ಕರೆತರಲು ಹೋಗಿದ್ದ ಚಂದ್ರು ಅಲ್ಲಿಗೆ ಸ್ವಲ್ಪ ಹೊತ್ತಿನೊಳಗಾಗಿ ಬಂದ. ರಂಗ ರಮೇಶ ಚಂದ್ರು ಕಿಟ್ಟು ಮಂಜು ರಾಮು ತಿಮ್ಮು ಪುಟ್ಟು ಕೃಷ್ಣ ನಂಜ ಹೀಗೆ ಕಿರಿಯರ ತಂಡ ಎಳೆ ಸೇರಿಸಿ ಹೊಸೆದಂತೆ ಒಂದುಗೂಡಿ ನೆರೆದರು. ಸುತ್ತಮುತ್ತಲೂ ಹರಡಿ ಬಿದ್ದಿದ್ದ ಕಲ್ಲು ಮಣ್ಣು ಕಸಕಡ್ಡಿಗಳನ್ನೆತ್ತಿ ಅಂಗಳವನ್ನು ಚೊಕ್ಕಗೊಳಿಸುವ ಕೆಲಸವನ್ನು ಚಂದು ಚಿಕ್ಕವರಿಗೆ ವಹಿಸಿದ. ಕೂಡಲೇ ಹತ್ತಾರು ಕೈಗಳು ಗುದ್ದಲಿಯನ್ನೆತ್ತಿಕೊಂಡು ಕೆಲಸ ಮಾಡಲು ಮುಂದಾದವು. ಕೆಲಸದೊಂದಿಗೆ

ಹರಟೆ ಮತ್ತು ಕಿಲಕಿಲ ನಗುವೂ ಸೇರಿಕೊಂಡು ಕಿರಿಯರ ಚಟುವಟಿಕೆ ಮನಸ್ಸಿಗಾನಂದವನ್ನು ತರುವಂತ್ತಿತ್ತು. ಪಾಠಶಾಲೆ ಮತ್ತು ಕೈಗಾರಿಕಾ ಪಾಠಶಾಲೆಗಳು ಹಾಳೂರಿಗೊಂದು ಶೋಭೆಯೆಂಬಂತೆ ತಲೆಯೆತ್ತಿ ನಿಂತಿದ್ದುವು.

ಚಂದು ಚಾವಣಿಯ ಮೇಲೆ ನಿಂತು ವಿಶಾಲವಾದ ವಕ್ಷಸ್ಥಳದ ಮೇಲೆ ಕೈಕಟ್ಟಿ ದೃಷ್ಟಿಯನ್ನು ಎಲ್ಲೆಡೆಯೂ ಚೆಲ್ಲಿಕೊಟ್ಟ. ಗದ್ದೆ ತೋಟ ಝರಿ ಬಯಲು ಗಿರಿ ಕಾನನಗಳ ನಾನಾ ವರ್ಣಮಾಲೆ ತನುಮನಗಳಿಗೆ ಅಮೃತವನ್ನೂಡಿಸಿತು. ಮಕರಂದವನ್ನು ಹೀರುವ ದುಂಬಿಯಂತೆ ಪ್ರಕೃತಿಯ ಸೊಬಗನ್ನು ಮನದಣಿಯೆ ಹೀರುತ್ತಾ ನಿಂತ. ಅಲ್ಲಿಂದ ನೋಟ ಹುಡುಗರತ್ತ ಹರಿಯಿತು. ಸಾಧಿಸಲೇಬೇಕಾದ ಸಾಧನೆಯಲ್ಲಿ ಸಾವಿರದಲ್ಲೊಂದಂಶವೂ ಸಾಗಲಿಲ್ಲವಲ್ಲಾ ಎನ್ನಿಸಿದಾಗ ನರನಾಡಿಗಳಲ್ಲಿ ಹರಿದಾಡುತ್ತಿದ್ದ ನವಚೇತನದ ಝರಿ ಮಿಂಚಿನಂತೆ ಹರಿದಾಡಿ ಮೈಯನ್ನು ಪುಳಕಿತಗೊಳಿಸಿತು. ಅಂದು ಮುದ್ದು ರಾಗವಾಗಿ ಓದುತ್ತಿದ್ದ ರಾಬರ್ಟ್ ಫ್ರಾಸ್ಟ್‌ನ ಕವನದ ತುಣುಕು ಮನಸ್ಸಾಗರದಲ್ಲಿ ಚಿರ ನೂತನ ತರಂಗವಾಗಿ ಮೂಡಿ ಬಂದಿತು.

The woods are dark, lovely and deep
But I have promises to keep,
And I have miles to go before I sleep
And I have miles to go before I sleep.

೨೮

ಸಾಧನೆಯೇ ಜೀವನದ ಜೀವಾಳ...

ರಾಂಪುರಕ್ಕೆ ಕಾವೇರಿ ಹೊರಟು ಹೋದಳಾದರೂ ಚಂದು ಮತ್ತೆ ಮೂರು ದಿನಗಳ ಪರ್ಯಂತ ಜೋಗಿಹಳ್ಳಿಯಲ್ಲಿಯೆ ನಿಂತ. ವಾಚನಾಲಯದ ತಳಪಾಯವನ್ನು ಹಾಕಿಸುವುದರೊಂದಿಗೆ ರಂಗಮಂದಿರದ ಸಾರಣೆಯೂ ಲಗುಬಗೆಯಿಂದ ನಡೆಯಲಾರಂಭಿಸಿತು. ಖಾದಿಯುಡುಪನ್ನು ಕಳಚಿಟ್ಟು ಚಂದು ಕೆಲಸಕಾರ್ಯಗಳಲ್ಲಿ ತಾನೇ ಮುಂದಾದ.

ಮಕ್ಕಳು ಗದ್ದೆ ತೋಟಗಳ ಉಸ್ತುವಾರಿಗೆಗೆ ಬರಲೊಲ್ಲರೆಂಬುದು ಕೆಲ ಹಿರಿಯರಿಗೆ ಕೋಪವುಂಟುಮಾಡಿತ್ತಾದರೂ ಚಂದುವಿಗಾಗಿ—ಮಕ್ಕಳ ಉತ್ಸಾಹಕ್ಕಾಗಿ ಮಣಿದು ಸುಮ್ಮನಾದರು. ಚಂದು ದಿನಕ್ಕೊಂದು ಮನೆಯಲ್ಲಿ ಉಂಡು ವಿಶ್ರಾಂತಿ ಪಡೆದು ಮತ್ತೆ ಮೂರು ದಿನಗಳ ಸತತ ಪ್ರಯತ್ನದಿಂದ ತಳಪಾಯವನ್ನು ಹಾಕಿ ಮುಗಿಸಿದ. ಪಕ್ಕದಲ್ಲಿ ಒಂದು ಬಾವಿಯ ಅಗತ್ಯವೂ ಇತ್ತು. ಹೊಂಚಿಕೊಂಡ ಹಣ ಮಿಕ್ಕಿದರೆ ಬಾವಿ ಕಟ್ಟೋಣ ಎಂದು ವೆಂಕಟೇಶ ಯೋಚಿಸಿದ್ದ. ಅಲ್ಲಿಯವರೆವಿಗೆ ಕಾಯದೆ ಈಗಲೇ ಆರಂಭ ಮಾಡಬೇಕೆಂದೂ ಹಣ ಕಡಿಮೆ ಬಿದ್ದರೆ ಅದನ್ನು ಸರಿತೂಗಿಸುವ ಭಾರ ತನ್ನದೆಂದೂ ಚಂದು ಭರವಸೆ ನೀಡಿದ. ಒಡನೆ ಅದರ ಕೆಲಸಕ್ಕೆ ಕೈ ಹಚ್ಚಿದುದೂ ಆಯಿತು. ದಿನಕ್ಕೊಂದು ಮನೆಯ ಗಾಡಿಯಂತೆ ಊರಿನ ಗಾಡಿಗಳು ಕೆಲಸ ಮಾಡಿದುವು. ಕಲ್ಲುಗಳು ತಡೆಬಡೆಯಿಲ್ಲದೆ ಬಂದು ಬಿದ್ದುವು. ಚಂದು ಕೆಲವು ದಿನಗಳ ಮಟ್ಟಿಗೆ ಊರಿಗೆ ಹೋಗಿ ಬಂದು ಬಾವಿ ಕಟ್ಟಡದ ನಿರ್ಮಾಣಕ್ಕೆ ತಾನೇ ನಿಂತುಕೊಂಡು ಕೆಲಸ ಆರಂಭಿಸಿದ. ತರುಣರ ಉತ್ಸಾಹ ನೂರ್ಮಡಿಯಾಯಿತು. ಕೆಲಸ ಅಡ್ಡಿ ಆಂಕೆಗಳಿಲ್ಲದೆ ಸಾಗಿತು.

ಊರಿನ ಪಟೇಲ್ ನಾಗಪ್ಪಯ್ಯನಿಗೆ ಚಂದುವಿನ ನೇತೃತ್ವದಲ್ಲಿ ನಡೆಯುತ್ತಲಿದ್ದ ಕೆಲಸಕಾರ್ಯಗಳ ವಿಚಾರ ತಿಳಿದು ಬಂದಾಗ ಒಮ್ಮೆ ಹೋಗಿ ನೋಡಿಯೇ ತೀರಬೇಕೆಂಬ ಕುತೂಹಲ ಮೂಡಿತು. ಹಾಗೇ ಅಡ್ಡಾಡುವ

ರೀತಿಯಲ್ಲಿ ಬಯಲಕಡೆ ಬಂದ. ಹೊತ್ತು ಮುಳುಗಿದುದರಿಂ ಎಲ್ಲರೂದ ಕೆಲಸವನ್ನು ಮುಗಿಸಿ ರಂಗಮಂದಿರದೊಳಗೆ ಕುಳಿತು ವಿಶ್ರಾಂತಿ ತೆಗೆದು ಕೊಳ್ಳುತ್ತಾ ಮಾತುಕತೆಯಲ್ಲಿ ತೊಡಗಿದ್ದರು. ನಾಗಪ್ಪಯ್ಯ ಆಸಕ್ತಿಯಿಂದ ಈಕಡೆ ನೋಡುತ್ತಿರುವುದನ್ನು ಅಲ್ಲಿಂದಲೇ ಗಮನಿಸಿದ ವೆಂಕಟೇಶ ಚಂದುವಿನ ಬಳಿಗೆ ಹೋಗಿ ವಿಚಾರವನ್ನು ತಿಳಿಸಿದ. ಚಂದು ಮುಖದಲ್ಲಿ ಜುಗುಪ್ಸೆ ಯನ್ನು ಸೂಸಿದ "ಅಂದು ಈ ಜಾಗದ ಸರ್ವೆ ನಂಬರನ್ನು ಕೊಡಲು ಎಷ್ಟು ಪಟ್ಟು ಸತಾಯಿಸಿದ ಎಂಬುದು ದೇವರಿಗೇ ಗೊತ್ತು. ಎಷ್ಟೆಷ್ಟು ಈತನಿಂದ ತೊಂದರೆ ಪಟ್ಟೆವೋ ಅಷ್ಟೇ ದೈವ ಸಹಾಯ ದೊರಕೀತೆಂಬುದು ಈತನಿಗಾಗ ಹೊಳೆಯಲಿಲ್ಲ. ನಮ್ಮ ಚಟುವಟಿಕೆಗಳು ಆಶ್ಚರ್ಯವನ್ನುಂಟುಮಾಡಿರಬೇಕು. ಆದ್ದರಿಂದಲೇ ಬಂದಿದ್ದಾನೆ. ಅವನೇನೇ ಮಾಡಿರಲಿ ನಾವು ತಪ್ಪು ಮಾಡ ಬಾರದಷ್ಟೆ ?"

ಮರುಗಳಿಗೆಯಲ್ಲಿ ಆ ವಿಚಾರವನ್ನು ಬದಿಗಿಟ್ಟು ಪಟೇಲರನ್ನು ಬರ ಮಾಡಿಕೊಳ್ಳಲು ಮುಂದುವರಿದ. ವೆಂಕಟೇಶನೊಬ್ಬ ಹಿಂದೆ ಬಂದನಾದರೂ ಕಿರಿಯರಾರೂ ಮುಂಬರಲಿಲ್ಲ. ನಾಗಪ್ಪಯ್ಯನ ಕುತಂತ್ರತೆಯ ಅರಿವಿದ್ದ ಬಾಲಕರ ಮುಖ ಕೋಪದಿಂದ ಕೆಂಪು ಕೆಂಪಾಯಿತು.

"ಪಟೇಲರು ಕ್ಷೇಮವಷ್ಟೆ ?" ಎನ್ನುತ್ತ ಚಂದು ಎದುರಾದಾಗ ಪಟೇಲರು ಅವನನ್ನು ಅಡಿಯಿಂದ ಮುಡಿಯವರೆಗೊಮ್ಮೆ ನೋಡಿ ಮುಗುಳು ನಗೆ ಸೂಸಿ "ಇದೇನು ವೇಷಭೂಷಣವೇ ಬದಲಾಗಿದೆ ?" ಎಂದರು. ಮುಖದಲ್ಲಿ ಅಚ್ಚರಿಯ ಭಾವ ಮುದ್ರೆಯೊತ್ತಿತ್ತು.

"ಕೆಲಸದ ವೇಳೆ ಹೀಗೆಯೆ."

ಚಂದು ಮುಖದಲ್ಲಿ ಪ್ರತಿನಗು ಮೂಡಿತು. ನಿಕ್ಕರು ಬನಿಯನ್ ಗಳಿಂದ ಅಲಂಕೃತವಾದ ಶರೀರ ದಷ್ಟಪುಷ್ಟವಾಗಿ ವ್ಯೆದೋರುತ್ತಿತ್ತು. ಅಂದವಾದ ಆ ಮೈಕಟ್ಟನ್ನೇ ಹೀರಿಬಿಡುವಂತೆ ನೋಡುತ್ತಿದ್ದ ನಾಗಪ್ಪಯ್ಯ ಕ್ಷಣಕಾಲ ಅವಾಕ್ಕಾದ.

"ನನ್ನನ್ನು ಷೋಕಿಲಾಲನೆಂದು ತಿಳಿದಿದ್ದೀರೇನು ?"

"ಹಾಗೇನಿಲ್ಲ. ಆದರೂ ನಿಮ್ಮನ್ನು ಈವೇಷದಲ್ಲಿ ನೋಡಿದುದು ಇಂದೇ."

"ವೇಷದಿಂದೇನು ಆದೀತು ? ಮನಸ್ಸು ಚೆನ್ನಾಗಿದ್ದರೆ ಸಾಕು."

ವೆಂಕಟೇಶನೆಂದ.

ಹಾ....... !

ನಾಗಪ್ಪಯ್ಯನ ಸಣ್ಣ ಮನಸ್ಸಿಗೆ ವೆಂಕಟೇಶನ ಮಾತು ಈಟಿಯಂತೆ ಹೊಕ್ಕಿತು. ಅನಿರೀಕ್ಷಿತ ಘಾಸಿಯಿಂದ ಸಾವರಿಸಿಕೊಳ್ಳುತ್ತ ಬೇರೆ ಕಡೆಗೆ ಮಾತು ತಿರುಗಿಸಲು ಕೇಳಿದ "ಇಷ್ಟೆಲ್ಲಕ್ಕೂ ಹೇಗೆ ಹಣ ಹೊಂದಿಸಿಕೊಂಡಿರಿ?"

"ಚಂದಾ ಮೂಲಕ ಕೂಡಿಸಿಕೊಂಡೆವು. ಕೆಲಸಕಾರ್ಯಗಳನ್ನು ನಾವೇ ಮಾಡಿಕೊಂಡದ್ದರಿಂದ ಹೆಚ್ಚು ಖರ್ಚಾಗಲಿಲ್ಲ. ಬನ್ನಿ ನೋಡುವಿರಂತೆ."

ಚಂದು ನಾಗಪ್ಪಯ್ಯನನ್ನು ಮುಂದೆ ಮಾಡಿಕೊಂಡು ರಂಗಮಂದಿರದೊಳಕ್ಕೆ ಕರೆದೊಯ್ದು. ಕಣ್ಣನೋಟ ಒಮ್ಮೆ ಸುತ್ತಲೂ ಹರಿಯಿತು. ರಂಗಮಂದಿರ ವಿಶಾಲವಾಗಿದ್ದು ಗಟ್ಟಿಮುಟ್ಟಾಗಿತ್ತು. ಈಚಲ ಮರಗಳ ಗಳುಗಳನ್ನು ಹಾಕಲಾಗಿದ್ದು ಮೇಲೆ ಹೆಂಚಿನ ಮಾಡು ಇತ್ತು. ಅನಂತರ ಅಲ್ಲಿಂದ ಕೈಗಾರಿಕಾ ಪಾಠಶಾಲೆಗೆ ಕರೆದೊಯ್ದು ಚಂದು. ಸಾಲಾಗಿನ ಎಂಟು ಕೊಠಡಿಗಳ ಕಟ್ಟಡದ ಪ್ರತಿಯೊಂದು ವಿಭಾಗವನ್ನೂ ತೋರಿ ಚಂದು ಹೇಳಿದ "ಪಟೇಲರೆ, ನಾವು ಇಲ್ಲಿ ಮಕ್ಕಳಿಗಾಗಿ ನಾನಾ ಬಗೆಯ ಕೈಗಾರಿಕೆಗಳನ್ನು ಕಲಿಸಲು ಉದ್ದೇಶಿಸಿದ್ದೇವೆ. ಜೀವನಕ್ಕೆ ಉಪಯುಕ್ತವಾದ ಕೈಗಾರಿಕೆಗಳನ್ನು ಕಲಿಸಿ ಪ್ರತಿಯೊಂದು ಮಗುವನ್ನೂ ಜೀವನರಂಗದ ಯೋಧನನ್ನಾಗಿಸುವುದು ನಮ್ಮ ಉದ್ದೇಶ."

"ಬಹಳ ಸಂತೋಷ." ಎಂದು ಸಂತಸವನ್ನು ವ್ಯಕ್ತಪಡಿಸುವಾಗ ಹೊಮ್ಮಿದ ನಗೆಯಲ್ಲಿ ನಂಜಿನ ಮಿಶ್ರಣವಿಲ್ಲದಿರಲಿಲ್ಲ.

"ಸರಕಾರದಿಂದ ಉಪಾಧ್ಯಾಯರನ್ನು ಕೊಡಿರೆಂದು ಕೇಳಿಕೊಂಡಿದ್ದೇವೆ. ಕಳೆದ ವಾರ ಜಿಲ್ಲಾ ವಿದ್ಯಾಧಿಕಾರಿಗಳು ಬಂದಿದ್ದಾಗ್ಗೆ ಇಲ್ಲಿಯವರೆಗೆ ಬಿಜಯಂಗೈದು ಕೆಲಸ ಕಾರ್ಯಗಳನ್ನು ಪರಾಮರ್ಶಿಸುವಷ್ಟು ಉದಾರಭಾವ ತೋರಿದ್ದಾರೆ. ಅಲ್ಲದೆ ಎಲ್ಲಾ ಬಗೆಯಲ್ಲೂ ಸಹಾಯ ಮಾಡುವುದಾಗಿ ಆಶ್ವಾಸನೆ ನೀಡಿದ್ದಾರೆ. ಅಂದು ಇದರ ಸರ್ವೆ ನಂಬರನ್ನು ದೊರಕಿಸಿ ಕೊಡಲು ನೀವೂ ಸಹ ಶ್ರಮವಹಿಸಿದ್ದೀರಿ. ಒಟ್ಟಿನಲ್ಲಿ ಹನಿಗೂಡಿ ಹಳ್ಳವಾಗಿ ಹರಿಯಿತು."

"ಅದೇನು ಆ ಕಡೆಯೂ ಗೋಡೆಗಳೇಳುತ್ತಿವೆ ?" ನೋಟವು ತವಕ ಭರಿತವಾಗಿದ್ದರೂ ನುಡಿ ಸಾವಧಾನದಿಂದ ಹೊರಬಿತ್ತು.

"ಅದರಲ್ಲಿ ಒಂದು ವಾಚನಾಲಯ ಮತ್ತು ಪುಸ್ತಕ ಭಂಡಾರ. ಇನ್ನೊಂದು ಪಾಠಶಾಲೆ. ಕಲೆ ಕೈಗೂಡಿದರೆ ಸೈ. ಪರೀಕ್ಷೆಯ ಕಟ್ಟುಪಾಡು ಸದ್ಯಕ್ಕಿಲ್ಲ. ಮುಖ್ಯವಾಗಿ ಎಲ್ಲರಿಗೂ ಓದು ವಿದ್ಯೆ ಬಂದು ಉಪಕಸುಬಿಗಾಗಿ ಕೈಗಾರಿಕೆ ಕಲಿತುಕೊಂಡರೆ ಸಾಕು."

ನಾಗಪ್ಪಯ್ಯ ವಿಷಯ ಕೇಳಿ ತಲೆದೂಗಿದ. ಎಳೆಯುರನ್ನೆಲ್ಲಾ ಒಮ್ಮೆ ನಿಟ್ಟಿಸಿ ಚಂದುವಿನ ಕಾರ್ಯ ಚತುರತೆಯನ್ನು ಪ್ರಾಸಂಗಿಕವಾಗಿ ಪ್ರಶಂಸಿಸಿ ಅಲ್ಲಿಂದ ಹೊರಟುಹೋದ. ನಾಗಪ್ಪಯ್ಯನ ಮುಖಭಾವದಲ್ಲಿನ ಕಹಿಯನ್ನು ಚಂದು ಗಮನಿಸದಿರಲಿಲ್ಲ. ನಾಗಪ್ಪಯ್ಯ ಕಣ್ಮರೆಯಾಗುತ್ತಲೂ ಸಿದ್ಧರಾಮ "ಈ ಮುದಿಗೊಡ್ಡು ಇಲ್ಲಿಯುವರೆಗೆ ಸುಮ್ಮನೆ ಬಂದಿಲ್ಲ. ನಾಳೆ ಏನಾದರೂ ಕಿತಾಪತಿ ಮಾಡಲೆಂದೇ ಇಲ್ಲಿಗೆ ಬಂದಿದೆ."

"ಚಂದಣ್ಣಾ, ನೀವು ಇದನ್ನೆಲ್ಲಾ ವರ್ಣಿಸಿ ಆತನ ಕಿಚ್ಚಿಗಷ್ಟು ತುಪ್ಪ ಸುರಿದಿದ್ದೀರಿ." ಎಂದ ಪುಟ್ಟಗಂಗ.

"ನೋಡೋಣ ಏನಾದೀತು."

"ಚಂದಣ್ಣಾ, ನಿಮ್ಮಿಂದಾಗಿ ನಾನು ಸುಮ್ಮನಾದೆ. ನೀವಿಂದು ಇಲ್ಲಿರ ದಿದ್ದರೆ ಅವನನ್ನು ಇತ್ತ ಸುಳಿಯಗೊಡುತ್ತಿರಲಿಲ್ಲ." ಎಂದ ಕಿಟ್ಟು.

"ಅವನ ಮುಖ ನೋಡಿದರೆ ಮೈ ಉರಿಯುತ್ತೆ."

ಚಂದು ಸಮಾಧಾನದಿಂದ ಹೇಳಿದ "ನಿಮಗೆಲ್ಲಾ ನಾನು ಹೇಳುವು ದಿಷ್ಟೆ. ನಾವು ಯಾರೊಂದಿಗೂ ದ್ವೇಷ ಸಾಧನೆ ಮಾಡಬಾರದು. ನಿಮ್ಮ ನಿಮ್ಮ ಕರ್ತವ್ಯದಲ್ಲಿ ಚ್ಯುತಿ ಬಾರದ ರೀತಿಯಲ್ಲಿ ನಡೆದುಕೊಂಡರೆ ಸಾಕು."

ನಾಗಪ್ಪಯ್ಯ ನೋಡಿ ಹೋದವನು ಸುಮ್ಮನೆ ಕೂಡಲಿಲ್ಲ. ತನ್ನ ಹಿತಚಿಂತಕರೆನಿಸಿದ ನಾಲ್ಕಾರು ಮಂದಿಯನ್ನು ಸೇರಿಸಿ ಸಹಿಯನ್ನು ಸಂಗ್ರಹಿಸಿ ಚಂದು ಕಡೆಯುವರು ಸರಕಾರಿ ಜಾಗದಲ್ಲಿನ ಈಚಲು ಮರಗಳನ್ನು ಕಡಿದು ಗಳುಗಳನ್ನಾಗಿ ಉಪಯೋಗಿಸಿದ್ದಾರೆಂದು ಆರೋಪಿಸಿ ಅರ್ಜಿ ಹಾಕಿದ. ಅದರ ತನಿಖೆಗಾಗಿ ಅಮಲ್ದಾರರು ಬಂದಾಗ ಚಂದು ಇರಲಿಲ್ಲ. ವೆಂಕಟೇಶ ಜ್ವರ ಪೀಡಿತನಾಗಿ ಹಾಸಿಗೆ ಹಿಡಿದಿದ್ದ. ಊರ ಹಿರಿಯರು ರಾಮಣ್ಣ ಮತ್ತು

ರಾಜಣ್ಣನನ್ನು ಮುಂದಿಟ್ಟುಕೊಂಡು ಈಚಲ ಮರಗಳು ಸರಕಾರಿ ಜಾಗದ್ದಲ್ಲ ವೆಂದೂ ಶಾಲೆಗಾಗಿ ಮಂಜೂರಾದ ಸ್ಥಳದಲ್ಲಿದ್ದುವೆಂದೂ ಸಮಜಾಯಿಸಿ ಕೊಡಬೇಕಾಗಿ ಬಂತು. ರಾಮಣ್ಣನಿಗೆ ಅಂದು ಎಂದಿಲ್ಲದ ಕೋಪ ಮೂಡಿ ಎಲ್ಲರ ಮೇಲೂ ಕಿಚ್ಚಿನ ಜ್ವಾಲೆಯನ್ನು ಹರಿಸಿದ. ಹಾಸಿಗೆ ಹಿಡಿದಿದ್ದ ವೆಂಕಟೇಶ ತುಟಿ ಪಿಟಕ್ಕೆನ್ನಲಿಲ್ಲ.

ಅಮಲ್ದಾರರು ಒಳ್ಳೆಯ ಮನಸ್ಸಿನವರಾದ್ದರಿಂದ ವಿಚಾರವನ್ನು ಮುಂದುವರಿಸದೆ ಅಲ್ಲಿಗೆ ಬಿಟ್ಟರು. ಮರುದಿನವೇ ಚಂದುಗೆ ವಿಷಯ ಮುಟ್ಟಿ ವಿಶಾದಪಟ್ಟ. ಉಳಿದ ಕಟ್ಟಡಗಳ ಪೂರೈಕೆಗೆ ಇನ್ನೂ ಸ್ವಲ್ಪ ಕಾಲ ಬೇಕಿತ್ತು. ಸಿದ್ಧರಾಮನ ತಮ್ಮ ಗಂಗಾರಾಮ ರಜೆಗಾಗಿ ಊರಿಗೆ ಒಂದಾಗ ಕೆಲಸ ಕಾರ್ಯಗಳಲ್ಲಿ ಪಾಲ್ಗೊಂಡ. ಬಲು ಚುರುಕಿನ ಸ್ವಭಾವದ ಗಂಗಾರಾಮ ಚಿಗರಿಯಂತೆ ಓಡಾಡಿ ನೆರವಾಗುತಿದ್ದುದನ್ನು ನೋಡಿ ಚಂದು,

"ಸಿದ್ಧರಾಮನಿಗೆ ಕೈಗಿಂತ ಬಾಯೇ ಮೇಲಾದರೆ ಗಂಗಾರಾಮನಿಗೆ ಬಾಯಿಗಿಂತ ಕೈಯೇ ಮೇಲೆ."

"ಚಂದಣ್ಣಾ ನಿಮ್ಮ ಚಟುವಟಿಕೆ ನೋಡಿದರೆ ನನಗೆ ಓದಲು ಮನಸ್ಸೇ ಬರುವುದಿಲ್ಲ." ಎಂದ ಗಂಗಾರಾಮ.

"ಹಾಗೆಲ್ಲಾದರೂ ಮಾಡಿಯೇ. ಪಾಲಿಟೆಕ್ನಿಕ್ ಸೇರಿ ಕೈಗಾರಿಕೆ ಕಲಿತುಕೊ. ಅನಂತರ ನೀನೇ ಮಕ್ಕಳಿಗೆ ಉಪಾಧ್ಯಾಯ ಜೊತೆಗೆ ನಿನ್ನ ವ್ಯವ ಸಾಯವನ್ನೂ ನೋಡಿಕೊಳ್ಳಬಹುದು. ಊರಾಚೆಯಲ್ಲಿರುವ ದಕ್ಷಿಣದ ಕಡೆಯ ಇನ್ನೂರೆಂಟು ಎಕರೆ ತೋಪನ್ನು ನಮ್ಮವರಿಗೆ ಕೊಡಬೇಕೆಂದು ಸರಕಾರಕ್ಕೆ ಅರ್ಜಿ ಕೊಟ್ಟಿರುವೆ. ಜಮೀನು ತಲಾ ಆರು ಎಕರೆ ಸಿಕ್ಕೀತು. ಅದು ಸಿಕ್ಕಿದರೆ ನಮ್ಮವರ ಜೀವನ ಸಾಕಷ್ಟು ಕುದುರುತ್ತದೆ. ಆದರೆ ಅದು ಹೇಗೊ ಪಟೇಲ್ ನಾಗಪ್ಪಯ್ಯನಿಗೆ ತಿಳಿದು ಸುಂಟಿಕೆರೆ ನಂಜಪ್ಪನನ್ನು ಕೂಡಿಕೊಂಡು ಅದು ನಮ್ಮವರಿಗೆ ದೊರಕದಂತೆ ಸರ್ವ ಸಾಹಸಗಳನ್ನೂ ಮಾಡುತ್ತಿದ್ದಾನಂತೆ. ನೋಡೋಣ ಏನೇನಾಗುತ್ತೊ." ಎಂದ ಚಂದು

"ಚಂದಣ್ಣಾ ನೀವು ಮುಂದೆ ನಿಂತುಕೊಳ್ಳದ ಹೊರತು ಈ ಜಮೀನು ನಮಗೆ ದೊರಕೀತೆಂಬುದು ಕನಸಿನ ಮಾತು. ಅದೂ ಅಲ್ಲದೆ ನಮ್ಮ ಹುಡುಗರೂ ತಾಳ್ಮೆಗೆಟ್ಟು ಪರಿಸ್ಥಿತಿ ಅತಿರೇಕಕ್ಕೆ ಹೋಗಿಬಿಡುವುದರಲ್ಲಿ ಸಂಶಯ

ವಿಲ್ಲ." ಎಂದು ವೆಂಕಟೇಶ ಕಳಕಳಿಯಿಂದ ಹೇಳಿದ.

"ದಿನವೂ ಒಂದಲ್ಲ ಒಂದು ಕೆಲಸಕ್ಕಾಗಿ ಸುತ್ತುವುದೇ ಆಗಿದೆ. ನನ್ನ ಮನೆಯ ವ್ಯವಹಾರವನ್ನು ನೋಡಿಕೊಳ್ಳುವುದು ದಿನದಿನಕ್ಕೂ ದುಸ್ತರ... ಕೈ ಹಚ್ಚಿದ ಕೆಲಸ ಅರ್ಧಕ್ಕೆ ನಿಂತುಹೋಗಬಾರದೆಂದು ಓಡಾಡುತ್ತಿದ್ದೇನೆ."

"ಭಾವೀ ಅಳಿಯ ಇರುವಾಗ ನಿಮಗೇಕೆ ಯೋಚನೆ ?" ಹಿಂದಿನಿಂದ ದನಿಯೊಂದು ಮೊಳಗಿತು. ಅದಾರು ನುಡಿದವರೆಂದು ಚಂದು ಅತ್ತ ತಿರುಗಿ ನೋಡಿದ. ಎಲ್ಲರೂ ಕಿಲಕಿಲನೆ ನಗತೊಡಗಿದರು. ಯಾರೆಂಬುದನ್ನು ಚಂದು ಕಂಡುಕೊಳ್ಳದಾದರೂ ಮುಖದಲ್ಲಿ ಪ್ರತಿ ನಗು ಮಿನುಗಿತು. ಆನಂದದಿಂದ ಚಂದು ಅಂದ "ರಾಂಪುರದಲ್ಲೆಲ್ಲಾ ಮುದ್ದು ನನ್ನ ಅಳಿಯ ಎಂದೇ ತಿಳಿದಿದ್ದಾರೆ. ನಾನೇನೋ ಆ ದೃಷ್ಟಿಯಿಂದ ಅವನನ್ನು ಓದಿಸಲಿಲ್ಲ. ದೈವೇಚ್ಛೆ ಹೇಗಿದೆಯೋ ಹಾಗಾಗಲಿ. ಹುಡುಗನ ವಿಚಾರ ಹೇಳುವುದಾದರೆ ಚೊಕ್ಕ ಬಂಗಾರವಿದ್ದಂತೆ. ಅವನು ಈ ಸಲ ಉತ್ತಮ ತರಗತಿಯಲ್ಲಿ ಉತ್ತೀರ್ಣನಾಗುವುದರಲ್ಲಿ ಅನುಮಾನವಿಲ್ಲ. ಅವನಿಗೆ ಹೊರದೇಶಗಳಿಗೆ ಹೋಗಲು ರಹದಾರಿಯೂ ಸುಲಭವಾಗಿ ಸಿಕ್ಕುತ್ತದೆ. ಇದ್ದರೆ ಹಾಗಿರಬೇಕು !" ನುಡಿಯಲ್ಲಿ ಸಂತಸದೊಂದಿಗೆ ಹೆಮ್ಮೆಯೂ ಮಿಶ್ರವಾಗಿತ್ತು.

ಸ್ವಲ್ಪ ಹೊತ್ತು ಉರುಳಿತು. ಕೆಲಸಕಾರ್ಯಗಳನ್ನು ಮುಗಿಸಿ ಹೊರಡಲು ಅಣಿಯಾಗುತ್ತ ಚಂದು-"ನಾನಿನ್ನು ಹೊರಡುವೆ. ಶಾಲೆಯ ಮಾಡ ಹೊಚ್ಚುವಾಗ ಭದ್ರವಾದ ಗಳುಗಳನ್ನೇ ಹಾಕಿರಿ. ಮುಂದಿನ ವಾರ ಒಮ್ಮೆ ಬಂದು ಹೋಗುವೆ."

ಕಳಚಿಟ್ಟಿದ್ದ ಉಡುಪು ನಿಮಿಷಾರ್ಧದಲ್ಲಿ ಮೈಯನ್ನು ಅಲಂಕರಿಸಿತು. ಗಂಗಾರಾಮ ಚಂದುವಿನೊಂದಿಗೆ ಹೊರಡಲು ಅಣಿಯಾದ. ಹುಡುಗರ ತಂಡ ಚಂದುವನ್ನು ಬೀಳ್ಕೊಡಲು ಊರಾಚೆಯ ದಕ್ಷಿಣದ ತೋಪಿನವರೆಗೂ ಹಿಂಬಾಲಿಸಿತು. ದೂರ ದಿಗಂತದಲ್ಲಿ ಕೆಮ್ಮುಗಿಲಿನ ಮಾಲೆ ಒಯ್ಯೊಯ್ಯನೆ ತೇಲುತ್ತಿತ್ತು. ಬೀಸಿ ಬರುವ ತಂಗಾಳಿ ವನಸುಮಗಳ ಸೌರಭವನ್ನು ತರುಬಿ ತರುತ್ತಿತ್ತು.

ಚಂದು ಎಲ್ಲರಿಂದ ಬೀಳ್ಕೊಂಡು ಗಂಗಾರಾಮನೊಂದಿಗೆ ಅವಸರವಸರವಾಗಿ ಮಾರುಗಾಲು ಹಾಕ ತೊಡಗಿದ. ಚಂದುವಿನ ಆಕೃತಿ ಕಿರಿಕಿರಿದಾಗುತ್ತ

ದೂರಗುಡ್ಡದಾಚೆ ಮರೆಯಾಗುವವರೆಗೂ ನೋಡುತ್ತಲೇ ನಿಂತ ತರುಣರ ತಂಡ ಕಸದಲ್ಲಿ ರಸವನ್ನು ಸೂಸಿ ಜೀವನದಲ್ಲಿ ಹುರುಪನ್ನು ಹುಟ್ಟಿಸಿದ ಗುರುವನ್ನು ಹೃತ್ಪೂರ್ವಕವಾಗಿ ವಂದಿಸಿದರು. ವೆಂಕಟೇಶನ ಕಣ್ಣುಗಳಲ್ಲಿ ಕಂಬನಿಗಳು ಫಳಫಳನೆ ಹೊಳೆದುವು.

೨೯

ಶಿವೆ ಆಸ್ಪತ್ರೆಗೆ ಹೋಗುವ ಮುನ್ನ ಕೆಲಸಗಳ ಹಣಾಹಣಿಯಲ್ಲಿರುವಾಗ ಒಮ್ಮೆ ಮಲಗಿದ್ದ ಸರಸು ಬಳಿಗೆ ಬಂದು ಅತ್ಯಂತ ದೈನ್ಯತೆಯಿಂದ ಕೇಳಿದಳು "ಮಗೂ ನಿನ್ನನ್ನೊಂದು ಮಾತು ಕೇಳಲೇ ?"

"ಏನಮ್ಮಾ ಅಂತಾದ್ದು ?" ನೋಟದ ಹಿಂದೆ ತವಕವಿದ್ದರೂ ಮುಖದಲ್ಲಿ ಸಮಾಧಾನದ ಮುದ್ರೆಯೊತ್ತಿತ್ತು. ಆಸಕ್ತಿಯಿಂದ ನಿರೀಕ್ಷಿಸಿದಳು ಸರಸು.

"ನೀನಿರುವ ಸ್ಥಿತಿಯಲ್ಲಿ ಕೇಳಲು ಮನಸ್ಸಿಲ್ಲವಾದರೂ ಕೇಳದೆ ವಿಧಿಯಿಲ್ಲ." ಎಂದಳು ಶಿವೆ. ದನಿಯಲ್ಲಿ ಕರುಣಾರಸ ಹರಿದು ಬಂತು.

"ಇರಲಿ......ಹೇಳಿ"

"ಕೇಳುವುದೇ ಸಂಕೋಚ."

"ಅಂತಾದ್ದೇನು ? ನನಗೆ ಅರ್ಥವೇ ಆಗಲಿಲ್ಲ."

"......"

"ಅದೇನೆಂದು ಹೇಳಬಾರದೇ ?" ಕ್ಷೀಣವಾದ ದೇಹದಿಂದ ಹೊರಬಿದ್ದ ದನಿಯೂ ಕ್ಷೀಣವಾಗಿತ್ತು. ಒತ್ತಿದ ತುಟಿಗಳಲ್ಲಿ ಮೆಲು ನಗು ಅರಳಿ ಮಾಯವಾಯಿತು.

ಶಿವೆ ಹೇಳಲಾರದೆ ಸುಮ್ಮನಾದಳು. ಮನದಳಲು ಮುಖದಲ್ಲಿ ಹೊರಹೊಮ್ಮಿತು.

ಕಲ್ಯಾಣಿ ಅದೇ ತಾನೆ ಸ್ನಾನಕ್ಕೆ ಹೋಗಿದ್ದಳು. ಬಳಿಯಲ್ಲಿ ಮತ್ತಾರೂ ಇರಲಿಲ್ಲ. ಸರಸು ಜ್ವರ ಪೀಡಿತಳಾಗಿ ಆಸ್ಪತ್ರೆ ಸೇರಿದುದರಿಂದ ಕಲ್ಯಾಣಿ ಊರಿಗೆ ಹೋಗದೆ ಮೈಸೂರಿನಲ್ಲೇ ಉಳಿದಿದ್ದಳು. ಸರಸುಗೆ ಜ್ವರ ಬಿಟ್ಟು ಒಂದು ವಾರವಾಗಿದ್ದು...ಅದೇ ಹಿಂದಿನ ದಿನ ಮನೆಗೆ ಹಿಂದಿರುಗಿದ್ದಳು. ಮರುದಿನ ಭಾನುವಾರವಾದ್ದರಿಂದ ಕಲ್ಯಾಣಿ ಶ್ಯಾಮುವಿನೊಂದಿಗೆ ಊರಿಗೆ ಹೊರಡಲು ತಯಾರಿ ನಡೆಸಿದ್ದಳು. ತಾಯಿಯ ಪ್ರಶ್ನೆ ಒಗಟಾಗಿಯೆ

ಉಳಿದುದರಿಂದ ಸರಸು ಪುನಃ ಕೇಳಿದಳು "ಏನೋ ಕೇಳಿದಿರಿ. ಪುನಃ ಏನೆಂದು ಹೇಳಲಿಲ್ಲವಲ್ಲಾ ?"

"ನೀನು ಬೇಸರ ಪಟ್ಟುಕೊಳ್ಳದಿದ್ದರೆ ಹೇಳುವೆ" ನೆಟ್ಟ ನೋಟ ಅವಳನ್ನೇ ಈಕ್ಷಿಸಿತು.

"ಅಂಥಾ ವಿಷಯವಾದರೂ ಏನು ?"

"ಮೊದಲೇ ನಿರ್ಧರಿಸಿ ಹೇಳು ಮಗೂ."

ದೈನ್ಯ ನೋಟದಿಂದ ನಿಟ್ಟಿಸಿದಳು ಸರಸು.

"ನಿನ್ನ ಮನಸ್ಸಿಗೆ ನೋವುಂಟಾಗುವುದಾದಲ್ಲಿ ನಾನು ಹೇಳುವುದೇ ಇಲ್ಲ."

"ಇಂದಿನ ನಿಮ್ಮ ರೀತಿಯೇ ಬೇರೆಯಾಗಿದೆ."

ಅಷ್ಟರಲ್ಲಿ ಅಲ್ಲಿಗೆ ಬಂದ ಶ್ಯಾಮು ಕೇಳಿದ "ಅದೇನಮ್ಮಾ ?"

"ಏನೋ ಹೇಳಬೇಕೆಂದು ಅಮ್ಮನಿಗೆ ಇಚ್ಛೆ ಶ್ಯಾಮೂ. ಆದರೆ ಅದೇಕೋ ಹೇಳಲಾರರು." ಎಂದು ನಸುನಗುತ್ತ ನುಡಿದಳು ಸರಸು.

"ಸರಸೂ, ಹೊಸ ಪುಸ್ತಕ ತಂದಿದ್ದೇನೆ. ಓದಿ ಹೇಳಲೇ ?" ಎಂದ ಶ್ಯಾಮು ಅತ್ತಿತ್ತ ಸರಿದಿದ್ದ ಕಂಬಳಿಯನ್ನು ಸರಿಪಡಿಸಿ ಓರಣವಾಗಿ ಹೊದಿಸಿ ಶಿವೆಯತ್ತ ತಿರುಗಿ, "ಅದೇನು ವಿಷಯ ?"

"ಏನೋ ಕೇಳಬೇಕಾಗಿತ್ತು."

"ಮುಚ್ಚಿಟ್ಟೇನು ಪ್ರಯೋಜನ ?"

"ನನಗೀಗ ಹಣದ ಅಗತ್ಯವಿದೆ. ಈ ಸಲ ಒಂದು ಕಾಸೂ ಮಿಕ್ಕಲಿಲ್ಲ." ಎಂದ ಶಿವೆ ಸರಸು ಕಡೆಗೆ ತಿರುಗಿ "ನಿನ್ನ ಬಳಿ ಇರುವ ಹದಿನೈದು ರೂಪಾಯಿಗಳನ್ನು ಕೊಟ್ಟಿದ್ದರೆ ಮುಂದಿನ ತಿಂಗಳು ಹಿಂದಿರುಗಿ ಕೊಡುವೆ."

"ಏಕೆ, ಅಮ್ಮಾ ?" ಕಣ್ಣುಗಳಲ್ಲಿ ಆಸೆ ಮಿನುಗಿತು.

"ಒಂದು ತಿಂಗಳಿನಿಂದ ಕಲ್ಯಾಣಿ ನಿನ್ನ ಶುಶ್ರೂಷೆ ಮಾಡಿದ್ದಾಳೆ. ಅವಳಿಗೊಂದು ಕುಪ್ಪುಸದ ಕಣ ತರುವೆ." ಶಿವೆ ಅಂಗಲಾಚಿದಳು.

"ನನಗೆ ಬಟ್ಟೆ ಇಲ್ಲವಲ್ಲಾ ? ಎಲ್ಲರಿಗೂ ಹೊಲಿಸಿದ್ದೀರಿ." ಸರಸು ಗೋಗರೆದಳು. ಕಣ್ಣುಗಳಲ್ಲಿ ಹನಿಗಳು ಮಿಂಚಿದುವು.

"ಎಲ್ಲರಿಗೂ ಹೊಲಿಸಿದ್ದಾಗಿದೆ. ಈ ಬಾರಿ ನಿನಗೇ ಹೊರತು ಇನ್ನ್ಯಾ

ರಿಗೂ ಇಲ್ಲ. ನೀನು ಚೇತರಿಸಿ ಕೊಂಡ ನಂತರ ಬಟ್ಟೆ ಕೊಂಡು ಕೊಳ್ಳೋಣ. ಬೇಸರಿಸಬಾರದು ಮಗೂ." ಎಂದು ಸಮಾಧಾನ ಹೇಳಿದ ಶಿವೆ ವೈದ್ಯೆದಡವುತ್ತ ಪುನಃ–"ಕಲ್ಯಾಣಿಗೆ ತಿಳಿದಲ್ಲಿ ನನ್ನನ್ನು ಕೊಂಡುಕೊಳ್ಳಲು ಬಿಡುವುದಿಲ್ಲ. ಸಮಾಧಾನ ತಂದುಕೋ ಮಗೂ, ಅವಳೀಗ ಸ್ನಾನ ಮುಗಿಸಿ ಹೊರಬರ ಬಹುದು."

ಕಂಬಳಿಯ ಮರೆಯಲ್ಲಿ ಕಂಬನಿಯನ್ನು ಹೀಡಿಕೊಂಡ ಸರಸು ಮಾತಾ ಡದೆ ಸುಮ್ಮನಾದಳು.

"ಸರಸೂ, ಈ ಸಲ ಹೊಲಿಗೆಯಲ್ಲಿ ಬಂದ ಹಣವೆಲ್ಲ ನಿನ್ನದು; ಕಳೆ ದೆರಡು ತಿಂಗಳು ಆಸ್ಪತ್ರೆಯಲ್ಲಿ ಓಡಾಡುವುದರಲ್ಲಿಯೇ ಕಳೆಯಿತು. ಇನ್ನು ತೊಂದರೆ ಇಲ್ಲ. ನನ್ನ ಸಂಪಾದನೆಯೆಲ್ಲಾ ನಿನಗೆ" ಎಂದ ಶ್ಯಾಮು.

ಯೋಚಿಸಿ ಅನುಮತಿ ನೀಡಿದ ಸರಸು–"ನನಗೆ ಹೊಸ ಬಟ್ಟೆ ತೊಡಲು ಅದೃಷ್ಟವಿಲ್ಲ; ಹೋಗಲಿ ಬಿಡು" ಎಂದಳು. ಕಣ್ಣಂಚಿನಲ್ಲಿ ನೀರು ಫಳಫಳನೆ ಮಿನುಗಿತು.

"ಅದೇಕೆ ಅಷ್ಟೊಂದು ಜುಗುಪ್ಸೆ ? ನಾಲ್ಕು ದಿನ ಹೋದರೆ ಎಲ್ಲವೂ ಸರಿಹೋಗುತ್ತದೆ. ಅಮ್ಮ ನೋಡಿ ಸೋದುಕೊಳ್ಳುತ್ತಾರೆ. ನೀನು ಸಂತೋಷದಿಂದಿದ್ದರೆ ಅವರಿಗೂ ಸಂತೋಷ."

ಶ್ಯಾಮು ಪೆಟ್ಟಿಗೆಯಿಂದ ಹಣವನ್ನು ತೆಗೆದು ಶಿವೆಯ ಕೈಯಲ್ಲಿಟ್ಟ. ಶಿವೆ ಮೌನವಾಗಿ ತೆಗೆದುಕೊಂಡಳು. ಶಾಲೆಗೆ ಹೋಗುವವರೆಗೆ ಸರಸುಗಾಗಿ ಪುಸ್ತಕ ಓದಿದ ಶ್ಯಾಮು ಮಧ್ಯೆ ಮಧ್ಯೆ ಒಂದೆರಡು ಧೈರ್ಯದ ಮಾತು ಗಳನ್ನೂ ಹೇಳುತ್ತಿದ್ದ. ವಿಮಲೆ ಗೋಪಿಯರು ಕೈಯಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಶಾಲೆಗೆ ಹೋಗುವ ಮೊದಲು ಸರಸು ಬಳಿ ಮಂಡಿಯೂರಿ ಕುಳಿತು ಸ್ವಲ್ಪಹೊತ್ತು ಮಾತಾಡಿ ಅವಳಿಗೆ ಯಾವ ಪುಸ್ತಕ ಬೇಕೆಂಬುದನ್ನು ತಿಳಿದುಕೊಂಡು ಹೊರಡಲಣಿಯಾದರು. ಶ್ಯಾಮುವೂ ಒಂದುಗೂಡಿ ಹೊರಟ. ಮ್ಲಾನಮುಖಿಯಾಗಿ ಎಲ್ಲರನ್ನೂ ನಿಡಿಗಣ್ಣ ನೋಟದಿಂದ ನಿಟ್ಟಿಸಿದಳು ಸರಸು.

"ನಾವು ಹೋದಮೇಲೆ ನೀನು ಬೇಸರಪಟ್ಟುಕೊಳ್ಳಬಾರದು." ಎಂದಳು ವಿಮಲೆ.

"ನೀನು ಬೇಸರಪಟ್ಟುಕೊಂಡರೆ ಮತ್ತೆ ಜ್ವರ ಬಂದೀತು !" ಗೋಪಿ ಎಚ್ಚರಿಸಿದ.

ಸರಸು ಮುಗುಳ್ನಗು ನಕ್ಕಳು. ಮಕ್ಕಳು ಶಾಲೆಗಭಿಮುಖವಾಗಿ ಹೊರಟ ನಂತರ ಕಲ್ಯಾಣಿ ಅಲ್ಲಿಯೆ ಕುಳಿತು ಹೆರಳನ್ನು ಹಾಕಿಕೊಳ್ಳತೊಡಗಿದಳು. ಮನೆಗೆಲಸಗಳನ್ನು ಮುಗಿಸಿ ಕಲ್ಯಾಣಿಯೊಂದಿಗೆ ಊಟ ಮಾಡಿ ಮಗಳಿಗೂ ಗಂಜಿಯನ್ನು ಕೊಟ್ಟು ಶಿವೆ ಆಸ್ಪತ್ರೆಗಭಿಮುಖವಾಗಿ ಹೆಜ್ಜೆ ಹಾಕಿದಳು. ಸರಸುವಿನಿಂದ ಪಡೆದ ಹಣ ಕೈಯಲ್ಲಿತ್ತು. ಮಕ್ಕಳ ಕಣ್ಣುಗಳಲ್ಲಿ ಮಿನುಗುತ್ತಿದ್ದ ಆಸೆ ಪುನಃ ಪುನಃ ಮನಃಪಟಲದಲ್ಲಿ ಸುಳಿಯತೊಡಗಿತು.

ಸಂಜೆಯಲ್ಲಿ ಸಹದಾದಿಗೆ ಹೇಳಿಕೊಂಡು ತುಸು ಮುಂಚಿತವಾಗಿ ಆಸ್ಪತ್ರೆಯನ್ನು ಬಿಟ್ಟಳು. ಸರಸುವಿನಿಂದ ಹಣ ತೆಗೆದುಕೊಳ್ಳಬೇಕಾಗಿ ಬಂದ ಬಗೆ ಮನಸ್ಸಿಗೆ ಸ್ವಲ್ಪ ವ್ಯಥೆಯನ್ನುಂಟುಮಾಡಿತ್ತು. ಎಲ್ಲರ ಸರದಿ ಮುಗಿಯುವವರೆಗೂ ಕಾದಿದ್ದು ಕೊನೆಯದಾಗಿ ತಾನು ಕೊಂಡುಕೊಳ್ಳಲು ಹಣ ಕೂಡಿಸಿಕೊಂಡಿದ್ದಳು. ಅಷ್ಟರಲ್ಲಿ ಕಾಹಿಲೆ ಬಿದ್ದುದರಿಂದ ಇನ್ನಷ್ಟು ಹಣ ಕೂಡಿಸಲಾಗದೆ ಉಳಿಯಿತು. ಉಟ್ಟ ಬಟ್ಟೆ ಚಿಂದಿಯಾದರೂ ಕೊಳ್ಳುವ ಯೋಚನೆ ಮಾಡಿರಲಿಲ್ಲ. "ಹಣವೂ ಅಲ್ಪ, ಒಳ್ಳೆಯ ಮಾಲೂ ಬರುವುದಿಲ್ಲ. ಸದ್ಯಕ್ಕೆ ಕೊಳ್ಳುವುದೇ ಬೇಡ." ಎಂದು ಅಂದೇ ಹೇಳಿದ್ದಳು ಸರಸು. ಯೋಚನೆ ಮೂಡಿದೊಡನೆಯೆ ಕಣ್ಣುಗಳು ಹನಿತುವು. ಪಾಪ, ಕಾಹಿಲೆಯ ಖಡ್ಗಕ್ಕೆ ಸಿಕ್ಕಿದ ಮಗುವಿಗೆ ನಿರಾಸೆಯ ಪೆಟ್ಟು ಬೇರೆ ಬೀಳುತ್ತಿದೆ. ಬೇಡಬೇಡವೆಂದರೂ ಅವಳ ಅಶಕ್ತ ಶರೀರ–ಹಾಸಿಗೆಯಲ್ಲಿ ಮುದುರಿ ಮಲಗಿರುವ ಚಿತ್ರ ಪುನಃ ಪುನಃ ಚಿತ್ತಭಿತ್ತಿಯಲ್ಲಿ ತೇಲಿ ಹೋಯಿತು. ಭಾರವಾದ ಹೃದಯವನ್ನು ಹೊರಲಾರದೆ ಹೊತ್ತು ಮುಂದುವರಿದ ಶಿವೆ ಉಕ್ಕಿಬಂದ ಕಂಬನಿಯನ್ನು ಕರವಸ್ತ್ರದಿಂದ ತೀಡಿಕೊಂಡು ನಡಿಗೆಯನ್ನು ತೀವ್ರಗೊಳಿಸಿದಳು. ಮನದೋಟ ರವಿಯತ್ತ ಹರಿಯಿತು. ಅವನು ಮೆಡಿಕಲ್ ಕಾಲೇಜು ಸೇರಿದಾಗಿನ ದೃಶ್ಯ....ಅಲ್ಲಿ ನವೀನತೆಯಿದೆ, ಶುಭ್ರವಾದ ಉಡುಪಿಲ್ಲದೆ ಪ್ರವೇಶವಿಲ್ಲ. ಅಂದು ಎರಡು ಜೋಡಿ ಉಡುಪನ್ನು ತೆಗೆದುಕೊಳ್ಳಬೇಕಾಗಿತ್ತು. ಮೆಡಿಕಲ್ ಕಾಲೇಜು ಸೇರುತ್ತಾನೆಂಬುವ ಸಂತಸದಿಂದ ಚಿಕ್ಕವರೆಲ್ಲ ಪ್ರೋತ್ಸಾಹಿಸುತ್ತಿದ್ದರೂ ರವಿ ಹನಿಗಣ್ಣಾಗಿದ್ದ.

ಹಾದಿ ಸಾಗುತ್ತಿದ್ದಂತೆ ಮನದಲೆಗಳು ಅಲ್ಲೋಲಕಲ್ಲೋಲವಾಗ ತೊಡಗಿದುವು. ಸ್ವಲ್ಪ ಹೊತ್ತಿನೊಳಗಾಗಿ ಅಂಗಡಿಯ ಸಾಲುಗಳು ಕಣ್ಗೋಚರಿಸಿದುವು. ಶಿವೆ ಕರವಸ್ತ್ರದಿಂದ ಕಂಬನಿಯನ್ನು ನಿವಾರಿಸಿಕೊಂಡು ಅಂಗಡಿಯೊಂದನ್ನು ಹೊಕ್ಕಳು. ಬಹುಮಂದಿ ಗಿರಾಕಿಗಳಿಂದ ತುಂಬಿದ್ದ ಅಂಗಡಿಯಲ್ಲಿ ನಿಂತುಕೊಳ್ಳಲು ತಾವಿಲ್ಲದಂತಾಗಿತ್ತು. ಬೆಲೆಯುಳ್ಳ ಬಟ್ಟೆಗಳನ್ನು ತಿರುವಿ ಹಾಕುತ್ತಿದ್ದ ಜನ ಇತರರ ಪರಿವೆಯಿಲ್ಲದೆ ಆರಿಸುವುದರಲ್ಲಿ ನಿಮಗ್ನರಾಗಿದ್ದರು. ಶಿವೆಯನ್ನು ಕಾಣುತ್ತಲೂ ಅಂಗಡಿಕಾರ ಮಿರಿಮಿರಿ ಹೊಳೆಯುತ್ತಿದ್ದ ಜರತಾರಿಯ ಬಟ್ಟೆಗಳನ್ನು ಮುಂದಿಟ್ಟ. ಶಿವೆ ರೇಷ್ಮೆಯ ಬಟ್ಟೆಗಳನ್ನು ತೋರಿರೆಂದಳು. ಅವಳನ್ನು ಇನ್ನೊಂದು ಕಡೆ ಕರೆದೊಯ್ದು ಕೆಲವು ಬಟ್ಟೆಗಳನ್ನು ಹರವಿದ ಅಂಗಡಿಕಾರ. ಅದರಲ್ಲಿ ಮನವೊಪ್ಪಿದ ಬಟ್ಟೆಯೊಂದನ್ನು ಆರಿಸಿಕೊಂಡಳು. ಅಂಗಡಿಯಾತ ಕತ್ತರಿಸುವುದರಲ್ಲಿದ್ದಾಗ ಶ್ಯಾಮಲವರ್ಣದ ಸ್ಥೂಲಕಾಯದ ವ್ಯಕ್ತಿಯೊಂದು ಎದುರಾಯಿತು. ಶಿವೆಯನ್ನು ನೋಡಿದಾಕ್ಷಣ ಮುಖ ಕಪ್ಪಿಟ್ಟಿತಾದರೂ ಅದನ್ನು ತೋರಗೊಡದೆ ನಗುವನ್ನು ಸೂಸಿ ಕೇಳಿತು "ನನ್ನ ಗುರುತು ಹತ್ತಿತೇ?" ಶಿವೆ ಅಚ್ಚರಿಯಿಂದ ಅವಾಕ್ಕಾದಳು. ಮನದಲ್ಲಿ ಹಳೆಯ ನೆನಪೊಂದು ಕ್ಷಣಕಾಲ ಮಿನುಗಿ ಮಾಯವಾಯಿತು. ಆದರೂ ಯಾರೆನ್ನುವುದು ಪೂರ್ಣ ಹೊಳೆಯಲಿಲ್ಲ.

"ನಿಜವಾಗಿಯೂ ಗುರುತು ಹತ್ತಲಿಲ್ಲವೇ ?" ವ್ಯಕ್ತಿ ಮತ್ತೆ ಕೇಳಿತು.

ಶಿವೆ ನಿರುತ್ತರಳಾದಳು. ಯೋಚಿಸಿದಷ್ಟೂ ವಿಷಯ ಗಹನವಾಗ ತೊಡಗಿತು.

"ಆಗಲೇ ಮರೆತು ಬಿಟ್ಟಿದ್ದೀರಿ !" ಮಹಾ ಶರೀರಿ ಅಟ್ಟಹಾಸದಿಂದ ನಕ್ಕಿತು.

"............"

"ನಾನು ಗಿರೀಶ."

"ಅಬ್ಬಾ !......" ಶಿವೆ ಮಿಡುಕಿ ನಿಂತಳು. ಮರುಕ್ಷಣದಲ್ಲಿ ಆತ ಗಿರೀಶನೇ ಹೌದೆಂದು ಗುರುತಿಸಿದರೂ ತನ್ನ ಮರೆವಿಗೆ ತಾನೇ ನಾಚಿಕೊಳ್ಳುವಂತಾಯಿತು. ಸ್ವಲ್ಪ ಸಾವರಿಸಿಕೊಂಡು ಹೇಳಿದಳು. "ಕಡ್ಡಿಯಂತಿದ್ದವರು ಕುಂಬಳಕಾಯಾಗಿದ್ದೀರಿ. ಗುರುತು ಹತ್ತಲಿಲ್ಲ"

"ಈಚೆಗೆ ಹೀಗೆ ಬೊಜ್ಜು ಬೆಳೆಯಿತು. ಕಡಿಮೆ ಮಾಡುವುದು ಸಾಧ್ಯವಿಲ್ಲವಾಗಿದೆ." ನುಡಿ ಉದಾಸೀನದಿಂದ ಹೊರಬಿತ್ತು.

"ಇರಲಿ ಸುಖವಾಗಿರಿ. ಮಾತಾಡಲು ಇಷ್ಟವಿರಲಿಲ್ಲವಾದರೂ ಎದುರಿಗೆ ನಿಂತುದುದರಿಂದ ಸುಮ್ಮನಿರಲಾಗದೆ ಸಮಯೋಚಿತವಾಗಿ ನುಡಿದಳು ಶಿವೆ.

"ಗೌರಿಯನ್ನು ಕಳೆದುಕೊಂಡಾಗಲೇ ಸುಖವನ್ನೂ ಕಳೆದುಕೊಂಡಿದ್ದಾಯ್ತು. ಇನ್ನೆಲ್ಲಿಯ ಸುಖ ?" ಎಂದ ಗಿರೀಶ; ನುಡಿಯಲ್ಲಿ ನೋವಿಗಿಂತ ನಗುವೇ ಪ್ರಾಧಾನ್ಯವಾಗಿತ್ತು. ಅಷ್ಟರಲ್ಲಿ ಹಿಂದಿನಿಂದ ಕೈಯಲ್ಲಿ ಜರತಾರಿಯ ಸೀರೆಗಳನ್ನು ಹಿಡಿದುಕೊಂಡ ಸ್ಥೂಲ ಶರೀರಿಣಿಯೊಬ್ಬಳು ಅಲ್ಲಿಗೆ ಬಂದಳು. ಅವಳ ಬೆನ್ನಮೇಲೆ ಕೈಯಿಟ್ಟು ಗಿರೀಶ ಹೇಳಿದ. "ಇವಳು ನನ್ನ ಧರ್ಮಪತ್ನಿ. ಹೆಸರು ಕಾಮಾಕ್ಷಿ. ಈ ನಾಲ್ವರೂ ನನ್ನ ಮಕ್ಕಳು. ಇನ್ನಿಬ್ಬರು ಮನೆಯಲ್ಲಿದ್ದಾರೆ." ಗಿರೀಶ ಮಕ್ಕಳನ್ನು ಬಳಿಗೆ ಕರೆದು ತೋರಿದ. ಎಲ್ಲರೂ ಚೆಂಡಿನಂತೆ ಗುಂಡಗುಂಡಗೆ ಇದ್ದಾರೆ! ಶಿವೆ ಆಶ್ಚರ್ಯಚಕಿತಳಾಗಿ ಗಿರೀಶನ ಸಂಸಾರ ಸಮೂಹವನ್ನು ನೋಡಿದಳು! ಅಡಿಯಿಂದ ಮುಡಿಯವರೆಗೆ ವಜ್ರಖಚಿತ ನಗನಾಣ್ಯಗಳಿಂದ ಅಲಂಕೃತಳಾದ ಕಾಮಾಕ್ಷಿ! ಬೆಂಡಿನ ಬೊಂಬೆಗಳಂತಿದ್ದ ದುಂಡುದುಂಡನೆಯ ಬಾಳ ಮಂಡಲ!

ಮನಸ್ಸು ಮುರಿಯಿತು. ಮೈಯೆಲ್ಲಾ ಕಚಗುಳಿಯಿಟ್ಟಂತೆ ಏನೋ ಕಿನಿಸಿಗೆ ಮೂಡಿ ಮೈ ಜುಂಮೆಂದಿತು.

"ಈಗ ಎಲ್ಲಿದ್ದೀರಿ ?" ಶಿವೆ ಸಾವರಿಸಿಕೊಂಡು ಕೇಳಿದಳು.

"ಬಳ್ಳಾರಿಯಲ್ಲಿ. ಇವರಿಗೆ ಮೈಸೂರು ತೋರಿಸೋಣವೆಂದು ಬಂದೆ. ಬಂದು ಒಂದು ವಾರವಾಯ್ತು. ನಾಳೆ ಊರಿಗೆ ಹೊರಡುತ್ತೇವೆ."

ಶಿವಮ್ಮನ ಮನದಲ್ಲಿ ಏನೋ ಒಂದು ಬಗೆಯ ಕಸಿವಿಸಿಯುಂಟಾಯಿತು. ಅಲ್ಲಿ ಕ್ಷಣವೂ ನಿಲ್ಲಲು ಮನಸ್ಸಾಗಲಿಲ್ಲ. ಆದರೆ ಅಂಗಡಿಕಾರ ಚಿಲ್ಲರೆಯನ್ನು ಕೊಟ್ಟಿರಲಿಲ್ಲ.

"ಸ್ವಾಮಿ ಕಾಣೆಯಾದ ವಿಚಾರವು ತಿಳಿಯಿತು. ನೀವು ನರ್ಸ್ ಆದ ವಿಚಾರವೂ ತಿಳಿಯಿತು." ಗಿರೀಶ ಮತ್ತೆ ಮಾತು ಆರಂಭಿಸಿದ. "ಸ್ವಾಮಿಯ ವಿಚಾರವೇನಾಯಿತೆಂಬುದು ತಿಳಿಯಲಿಲ್ಲವೆ ?"

"ಇಲ್ಲ" ಶಿವೆ ಬಹು ಕಷ್ಟದಿಂದ ನುಡಿದಳು. ಒಣಗಿದ ತುಟಿಗಳನ್ನು

ನಾಲಿಗೆ ಸವರಿತು.

"ಯಾರೋ ಆಗದವರು ತೀರಿಸಿಬಿಟ್ಟಿದ್ದಾರೆ ಬಿಡಿರಿ." ಎಂದೆನ್ನುತ್ತ ಗಿರೀಶ ನಿರ್ಲಕ್ಷ್ಯದಿಂದ ಹಲ್ಕಿರಿದಾಗ ಶಿವೆ ತತ್ತರಿಸಿದಳು. ಅಂಗಡಿಯಾತ ಚಿಲ್ಲರೆಯನ್ನು ಕೈಗಿತ್ತು ಬಟ್ಟೆಯನ್ನು ಕಟ್ಟಿಕೊಟ್ಟ. ಶಿವೆ ಕಟ್ಟಿದ ಕುದುರೆ ಯನ್ನು ಬಿಚ್ಚಿದಂತಾಗಿ ಜಾರಿಕೊಂಡಳು "ಅಬ್ಬಾ! ಎಂಥ ದೃಶ್ಯ!" ಎನ್ನಿಸಿ ಮೈನವಿರೆದ್ದಿತು. ಕುಪ್ಪುಸದ ಕಣವನ್ನು ಎದೆಗೊತ್ತಿ ಹಿಡಿದುಕೊಂಡು ಉಸಿರಿಡಿದು ಹೊರಬಿದ್ದಳು. ಹಾಗೇ ಯೋಚನೆ ಬಂತು_ ಗೌರಿಯ ತಿಥಿ ಶ್ರಾದ್ಧಾದಿಗಳನ್ನು ಮುಗಿಸಿ ಹೊರಬಿದ್ದ ಗಿರೀಶ ಎಲ್ಲಿದ್ದಾನೆಂಬುದು ಪತ್ತೆ ಯಿರಲಿಲ್ಲ. ಈಚೆಗೆ ಬಳ್ಳಾರಿಯಲ್ಲಿದ್ದಾನೇದು ದೂರದ ವರ್ತಮಾನ ಬಂದಿತ್ತು. ಎದುರಿಗೆ ಸಿಕ್ಕಿಯೂ ಮಕ್ಕಳನ್ನು ವಿಚಾರಿಸಲಿಲ್ಲ. ಪ್ರಾಯಶಃ ಮಕ್ಕಳ ವಿಚಾರ ಮರೆತೇ ಹೋಗಿರಬಹುದು! ಶಿವ ಶಿವಾ! ಇಂತಹ ಮನುಷ್ಯರೂ ಇದ್ದಾ ರೆಯೇ.........ಎಂದೆನಿಸಿದಾಗ ಶಿವೆ ದೇಹದಾದ್ಯಂತ ನಡುಗಿದಳು.........ಗೌರಿ ಚಿನ್ನದಂತ ಹುಡುಗಿ ಅದೊಂದು ರಮಣೀ ರತ್ನ! ಅವಳಿಗೆ ಇಂಥ ಧೂರ್ತ ಗಂಡ! ವಜ್ರಾಭರಣಗಳ ತೋರುಗಾಣಿಕೆಗಾಗಿಯೆ ಈ ಸತಿ ಮೈವೆತ್ತಿದ್ದಾ ಳೆಂದು ತೋರುತ್ತದೆ! ಇವರು ಮನುಷ್ಯರೇ? ಅಲ್ಲ....ಅಲ್ಲ ಮಾಂಸದ ಮುದ್ದೆಗಳು! ಐದಾರು ವರ್ಷಗಳ ಹಿಂದೆ ಮಾಧವರಾಯರೊಮ್ಮೆ ಗಿರೀಶ ನನ್ನು ಕಂಡಿದ್ದುದಾಗಿಯೂ ಕೊಂಚ ಮೈ ಬೆಳೆಸಿದ್ದಾನೆಂದೂ ಹೇಳಿದ್ದರು ರಾಯರ ಮಾತಿಗೂ ಇದಕ್ಕೂ ಅದೆಷ್ಟು ಅಂತರ? ಐದಾರು ವರ್ಷಗಳಲ್ಲಿ ಇದೊಂದು ಅದ್ಭುತ ಮಾರ್ಪಾಡು! ಒಂದು ವೇಳೆ ಗೋಪಿ ಶ್ಯಾಮುರವರು ನೋಡಿದ್ದಿದ್ದರೆ ಎಷ್ಟು ನೊಂದುಕೊಳ್ಳುತ್ತಿದ್ದರೋ ಏನೋ?............ಸ್ಥಿತಿವಂತರಾದ ಮಾವಂದಿರಿದ್ದೂ ನಿರ್ಲಕ್ಷಿಸಿದರಲ್ಲವೇ? ಇದು ಬಾಂಧವ್ಯ! ಇದು ಸಮಾಜ! ಗೌರಿ ಪ್ರಾಣ ಬಿಡುವಾಗ...."ಅತ್ತಿಗೆ ಈ ಮಕ್ಕಳಿಗೆ ನೀನೇ ತಾಯಿ." ಎಂದ ಕೊನೆಯ ಮಾತು ಪುನಃ ಕಿವಿಯಲ್ಲಿ ಮಾರ್ನುಡಿಯಿತು....

ಮನೆ ಹತ್ತಿರವಾಗುತ್ತಲೂ ಯೋಚನೆ ತುಂಡುಗಡಿಯಿತು. ಶಿವೆ ಮುಖವನ್ನು ಕರವಸ್ತ್ರದಿಂದ ತೀಡಿಕೊಂಡು ಮನೆಯನ್ನು ಹೊಕ್ಕಳು. ಇತ್ತಲೇ ನಿರುಕಿಸುತ್ತಿದ್ದ ಸರಸುವಿನ ಕಂಗಳು ಮಿನುಗಿದುವು. ಶಿವೆ ಬಳಿಯಲ್ಲಿ ಕುಳಿತು ಕೊಂಡು 'ಮಗೂ' ಎಂದಳು. ಹಸ್ತವು ಮೃದುವಾಗಿ ಮುಂಗುರುಳನ್ನು

ತೀಡಿತು.

"ಮಲಗೀ ಮಲಗೀ ಬೇಜಾರು. ನಾನಿನ್ನು ಮಲಗಲಾರೆ. "ನಾಳೆ ಯಿಂದ ಕಲ್ಯಾಣಕ್ಕನೂ ಇರುವುದಿಲ್ಲ. ಒಬ್ಬಳೇ ಹೇಗಮ್ಮಾ ಇರಲಿ ?" ದನಿಯಲ್ಲಿ ಒಡಲ ಸಂಕಟ ಹರಿದು ಬಂತು.

"ಒಂದು ವಾರ ರಜೆ ತೆಗೆದುಕೊಂಡಿದ್ದೇನೆ. ನೀನೇನೂ ಯೋಚಿಸ ಬೇಡ." ಎಂದು ಸಂತೈಸಿದಳು ಶಿವೆ.

ನೀರುಮನೆಯಲ್ಲಿದ್ದ ಕಲ್ಯಾಣಿ ಹೊರಬಂದವಳೇ ಹೇಳಿದಳು "ಅಕ್ಕಾ, ನಾಳೆಯಿಂದ ಒಬ್ಬಳೇ ಹೇಗಿರುವುದೆಂದು ಸರಸು ಅಳುತ್ತಾಳೆ."

"ಅವಳಿಗಾಗಿ ಒಂದು ವಾರ ರಜೆ ತೆಗೆದುಕೊಂಡಿದ್ದೇನೆ. ರಾಯರು ವಿದ್ಯಾಲಯದ ತಳಪಾಯ ಹಾಕಿಸಲು ಆಳುಗಳನ್ನು ಗೊತ್ತು ಮಾಡಿದ್ದಾ ರಂತೆ. ನಾಳೆಯಿಂದ ಕೆಲಸ ಆರಂಭವಾಗುತ್ತದೆ. ಅದನ್ನೂ ನೋಡಿಕೊಳ್ಳ ಬಹುದು."

ಸರಸು ಎದ್ದು ಕುಳಿತುಕೊಂಡಳು. ಮುಖದಲ್ಲಿ ಅಮಿತಾನಂದ ಮಿನುಗತೊಡಗಿತು. ಬೇನೆ ಬಿದ್ದ ಶರೀರ ಎಲುಬಿನ ಹಂದರವಾಗಿತ್ತು.

೩೦

ಸದ್ದಿಲ್ಲದ ಶಾಂತಿ ಎಲ್ಲೆಲ್ಲೂ ತುಂಬಿ ಹರಡಿತ್ತು.

ರವಿ ಡಾ॥ ಚಂದ್ರರವರ ಚಿಕಿತ್ಸಾಲಯದಿಂದ ಕೆಲಸ ಮುಗಿಸಿ ಹೊರ ಬಿದ್ದಾಗ ಸಂಜೆಗಪ್ಪು ಕವಿದು ಬರತೊಡಗಿತ್ತು. ಬೆಳಿಗ್ಗೆ ಅಷ್ಟು ಹೊತ್ತಿಗೇನೇ ಎದ್ದಿದ್ದ ರವಿಗೆ ನಿಮಿಷವೂ ಬಿಡುವು ದೊರೆಯದಿದ್ದುದರಿಂದ ಶರೀರ ಬಳ ಲಿತ್ತು. ನಸು ತೆಳ್ಳನೆಯ ನೀಳವಾದ ಆಕೃತಿ ಸಂಜೆಗಪ್ಪಿನಲ್ಲಿ ಸರಸರನೆ ಮುಂದು ವರಿಯುತ್ತಿತ್ತು. ಮನೆದಲೆಯಲ್ಲಿ ಮುತ್ತಿದ್ದ ನಾನಾ ಯೋಚನೆಗಳಲ್ಲಿ ತನ್ನನ್ನೇ ತಾನು ಮರೆತು ಹೆಜ್ಜೆ ಹಾಕುತ್ತಿದ್ದ. ದೃಷ್ಟಿ ಹಾದಿಯ ನೇರಕ್ಕೆ ಹರಿದಿತ್ತು. ದಿನವೂ ನಡೆದು ಪಳಗಿದ್ದ ಹಾದಿಯಲ್ಲಿ ಹೆಜ್ಜೆಗಳು ನಿರಾಯಾಸ ವಾಗಿ ಮುಂದುವರಿಯುತ್ತಿದ್ದುವು. ಕೌಮಾರ್ಯವನ್ನು ಕಳೆದು ಆಗ ತಾನೆ ತಾರುಣ್ಯಕ್ಕೆ ಕಾಲಿಟ್ಟಿದ್ದ ಕಿಶೋರ ಶರೀರ ಸುರಸುಂದರವಾಗಿ ನಳನಳಿಸು ತ್ತಿತ್ತು. ಅಂದವಾದ ಮುಖಕ್ಕೆ ಸೌಮ್ಯ ಸ್ವಭಾವ ಮೇಲೊಂದು ಶೋಭೆ

ಹತ್ತು ಮಾರು ಹೋಗುವುದರೊಳಗಾಗಿ ಕುಮಾರ ಎದುರಾದ. ರವಿ ಮುಗುಳ್ನಗು ನಕ್ಕು ಕೇಳಿದ "ಏಕೆ ಬಂದೆ ಕುಮಾರ್ ?"

"ನಿನಗಾಗಿಯೇ ಬಂದೆ. ಇದೇಕೆ ಇಷ್ಟು ಹೊತ್ತು ?"

"ಡಾಕ್ಟರಲ್ಲಿ ಬಹಳ ಮಂದಿ ಬಂದಿದ್ದರು. ಕೆಲಸ ತುಂಬ ಇತ್ತು. ಮುಗಿಸಿಕೊಂಡು ಬಂದೆ. ಡಾಕ್ಟರು ನನ್ನನ್ನು ಅವರಲ್ಲಿಯೇ ಇದ್ದು ಕೆಲಸ ಮಾಡಲು ಕೇಳಿಕೊಂಡಿದ್ದಾರೆ. ತಮ್ಮ ಆರು ಮಂದಿ ಮಕ್ಕಳಲ್ಲಿ ಒಬ್ಬ ರಾದರೂ ಡಾಕ್ಟರಾಗಲಿಲ್ಲ ಎಂಬುದೊಂದು ಅವರ ಕೊರತೆ. ಅವರಿಗೆ ಒಳ್ಳೆಯ ಹೆಸರು-ಸಂಪಾದನೆ ಎರಡೂ ಇವೆ. ಚಿಕಿತ್ಸಾಲಯಕ್ಕಾಗಿ ತುಂಬ ಖರ್ಚು ಮಾಡಿದ್ದಾರೆ. ಮುಂದೆ ನೋಡಿಕೊಳ್ಳುವವರಿಲ್ಲವಾಗಿದೆ.

"ಡಾಕ್ಟರುಗಳಿಗೇನು ಕಡಿಮೆ ? ಯಾರನ್ನಾದರೂ ನೇಮಿಸಿಕೊಂಡ ರಾಯ್ತು."

ಇಬ್ಬರೂ ಜತೆಗೂಡಿ ಮುಂದುವರಿದರು. ಹಾದಿ ಸವೆಯತೊಡ

ಗಿದಾಗ ದೂರದಲ್ಲಿ ಯಾರೋ ಜಗಳವಾಡುತ್ತಿದ್ದ ಗದ್ದಲ ಕೇಳಿಬರುತ್ತಿದ್ದರೂ ಗಮನ ಕೊಡದೆ ಮುಂದುವರಿದರು.

"ಕುಮಾರ್, ನಾವು ರಾಯರನ್ನು ಮುಂದಿಟ್ಟುಕೊಂಡು ಕೆಲಸ ಮಾಡಿದುದು ಬಹಳ ಕ್ಷೇಮವಾಯ್ತು. ಇಲ್ಲದಿದ್ದರೆ ವಿದ್ಯಾಲಯಕ್ಕಾಗಿ ನಾವೆಷ್ಟು ದುಡಿದಿದ್ದರೂ ಕೆಟ್ಟ ಹೆಸರು ತಪ್ಪುತ್ತಿರಲಿಲ್ಲ."

ಖಂಡಿತವಾಗಿಯೂ ...

"ನಿಜ ರವಿ. ಎಷ್ಟಾದರೂ ನಾವು ಚಿಕ್ಕವರು, ಜನ ನಂಬುವುದೂ ಕಷ್ಟವಾಗುತ್ತಿತ್ತು. ರಾಯರು ಖಜಾಂಚಿಯಾಗಿರುವುದರಿಂದ ನಮಗೆ ಹಣದ ಜವಾಬ್ದಾರಿ ತಪ್ಪಿತು. ಇಂದು ಎರಡು ಲಾರಿ ಇಟ್ಟಿಗೆ ಬಂದಿದೆ. ನಾಳೆಯಿಂದ ಮರಗೆಲಸ ಪ್ರಾರಂಭಿಸುತ್ತಾರೆ. ರಾಯರು ಮಧ್ಯಾಹ್ನ ಕೆಲಸವನ್ನು ನೋಡಿಕೊಂಡು ಹೋದರು ಅವರಿಗೆ ಇಂದು ಮೂರು ಮಕ್ಕಳ ಬಗ್ಗೆ ಕಾಗದ ಬಂದಿದೆಯಂತೆ. ಇಲ್ಲಿಯವರೆಗೆ ಹದಿನೆಂಟು ಮಕ್ಕಳ ಜೋಡಣೆಯಾದಂತಾಯಿತು. ಇವರು ಎಂಟು ವರ್ಷದ ಕೆಳಗಿನವರಂತೆ."

"ಓ......ಸರಿ."

"ಕಟ್ಟಡ ಕಟ್ಟಿ ಮುಗಿಯುವುದರೊಳಗಾಗಿ ಇನ್ನಷ್ಟು ಮಕ್ಕಳು ದೊರೆಯುತ್ತಾರೆ."

"ಬಹಳ ಹೆಚ್ಚಾದರೂ ಕಷ್ಟವೇ."

ಅಷ್ಟರಲ್ಲಿ ಗಲಾಟೆಯಾಗುತ್ತಿದ್ದ ಸ್ಥಳಕ್ಕೆ ಇಬ್ಬರೂ ಸಮೀಪಿಸಿದ್ದರು. ಸುತ್ತ ಮುತ್ತ ಅನೇಕ ಮಂದಿ ನೆರೆದಿದ್ದಾರೆ. ಕಣ್ಣುಗಳಲ್ಲಿ ಕಿಡಿಗಳನ್ನು ಕಾರುತ್ತ ಎದುರಾಳಿಯನ್ನು ತುಚ್ಛೀಕರಿಸಿ ಮಾತಾಡುತ್ತಿದ್ದವನು ರಂಗಣ್ಣ. ಸ್ವರ ಅಸ್ಥಿರವಾಗಿದ್ದರೂ ಉಚ್ಚವಾಗಿತ್ತು.

ಅನೇಕ ಅವಾಚ್ಯ ಶಬ್ದಗಳು ಹೊರಬಿದ್ದ ನಂತರ ರಂಗಣ್ಣ ಗುಡುಗಿದ,

"ನೋಡು ! ನೀನೇನಾದಃ ಈ ವಿಚಾರಕ್ಕೆ ಕೈ ಹಾಕಿದರೆ ನಿನ್ನ ಸುಮ್ಮನೆ ಬಿಡುವುದಿಲ್ಲ....!"

"ಏನು ಮಾಡುತ್ತಿ ? ನನ್ನ ಸಹಾಯವಿಲ್ಲದಿದ್ದರೆ ನಿನಗೆಲ್ಲಿ ಹಣ ದಕ್ಕುತ್ತಿತ್ತು. ಆದರೂ ಹಿಂದೆ ಕೈಕೊಟ್ಟೆ ! ಅದೇನೇ ಇರಲಿ, ಈ ಸಲ ಬಂದ ಹಣವೆಲ್ಲ ನನ್ನದೇ ! ಏನೇ ಬಂದರೂ ಬಿಡುವುದಿಲ್ಲ ! ಸ್ವಾಮಿಯ ಮೇಲೆ

ಹಾಕಿದ್ದ ಹಣದಲ್ಲೂ ನನಗೆ ಪಾಲು ಬರಲಿಲ್ಲ. ಹೋಗಲಿ ಎಂದರೆ ಈ ಸಲವೂ ನುಂಗುವ ಯೋಚನೆ....! ಬಾಬೂಜಿಯಲ್ಲಿಗೆ ನಿನ್ನ ಇಂದೇ ಎಳೆದೊಯ್ದೇನು!"

ಮಧಿರೆಯ ಅಮಲಿನಲ್ಲಿದ್ದ ಎದುರಾಳಿ ಜೋರಿನಿಂದ ನುಡಿದು ರಂಗಣ್ಣನ ಅಂಗಿಯನ್ನು ಎದೆಯ ಮೇಲೆ ಬಲವಾಗಿ ಹಿಡಿದುಕೊಂಡ. ರಂಗಣ್ಣ ಬಿಡಿಸಿಕೊಳ್ಳಲು ಕೊಸರಾಡುತ್ತಿದ್ದನಾದರೂ ಮಧಿರೆಯ ಅಮಲಿನಿಂದ ದುರ್ಬಲನಾಗಿದ್ದುದರಿಂದ ಬಿಡಿಸಿಕೊಳ್ಳಲಾರದಾಗಿದ್ದ. ವಿಷಯ ಕಿವಿಗೆ ಬಿದ್ದೊಡನೆಯೆ ರವಿಯ ಮೈ ಬೇಕಿ ಬೆಂಕಿಯಾಯಿತು. ಅಲ್ಲಿ ನಿಲ್ಲದೆ ಕುಮಾರನನ್ನು ಎಳೆದುಕೊಂಡು ಮನೆಯ ಕಡೆ ಬಿರಬಿರನೆ ಹೆಜ್ಜೆ ಹಾಕಿದ.

"ರವಿ, ಭಗವಂತನಿದ್ದಾನೆ ಎಂಬುದಕ್ಕೆ ಇದೊಂದು ನಿದರ್ಶನ. ಈ ವಿಚಾರ ಹೇಗೆ ಅವನ ಬಾಯಿಂದಲೇ ಹೊರಬಿತ್ತು! ಅದೇನೇ ಇರಲಿ, ಇಂದೇ ಚಿಕ್ಕ ಬಾಬೂಜಿಗೆ ಹೇಳೋಣ. ಇದರ ಪತ್ತೆ ಹಚ್ಚಿಯೇ ತೀರಬೇಕು." ಎಂದ ಕುಮಾರನ ಮೈಯಲ್ಲಿ ವಿದ್ಯುತ್ ಸಂಚಾರವಾಗತೊಡಗಿತ್ತು. ಪುನಃ ಕೇಳಿದ "ಇನ್ನೊಬ್ಬ ಯಾರು ?" ಅವನು ಹೇಗೆ ಇದರಲ್ಲಿ ಪಾಲ್ಗೊಂಡ ?"

"ಅವನು ಸತ್ಯವ್ರತ. ಅವನೂ ಬಹು ಕಾಲದಿಂದ ಚಿಕ್ಕ ಬಾಬೂಜಿಯಲ್ಲಿ ಕೆಲಸ ಮಾಡುತ್ತಾನೆ. ಇಬ್ಬರೂ ಕೂಡಿಯೇ ಈ ಕೆಲಸ ಮಾಡಿದ್ದಾರೆ. ನಮ್ಮನ್ನು ಅನ್ಯಥಾ ತೊಂದರೆಗೀಡುಮಾಡಿದರು. ಮಿತ್ರದ್ರೋಹ, ಧನಹಾನಿ, ಮಾನಹಾನಿ ಈ ಪಾಪಕ್ಕೆ ಕೊನೆ ಮೊದಲೇ ಇಲ್ಲ." ರವಿಯ ಎದೆಯಲ್ಲಿ ಸಂತಾಪದ ಬಿಸಿಯುಸಿರು ಆಡತೊಡಗಿತ್ತು.

ರವಿಯ ಬಳಲಿಕೆ ಮಿಂಚಿನಂತೆ ಮಾಯವಾಯಿತು. ಇಬ್ಬರೂ ಡೌಡಾಯಿಸುತ್ತಲೇ ಮನೆ ಸೇರಿದರು. ಧಾವಿಸಿ ಬಂದ ರೀತಿಯನ್ನು ನೋಡಿ ಶಿವೆ ಥರಥರನೆ ನಡುಗಿದಳು. ಯಾವುದೋ ದುರ್ವಾರ್ತೆ ನುಗ್ಗಿ ಬರುತ್ತಿದೆಯೆಂದು ಖಚಿತ ಮಾಡಿಕೊಂಡಿದ್ದ ಅವಳು ತವಕದಿಂದ ಕೇಳಿದಳು "ಏನಾಯ್ತು ? ಏನಾಯ್ತು ?"

"ಇಂದು ಎಂಥ ವಿಚಾರ ಹೊರಬಿತ್ತು ! ದೇವರು ದೊಡ್ಡವನು !" ಏದುತ್ತೇದುತ್ತಾ ಹೇಳಿದ.

"ಬಾಬೂಜಿಯ ಅಂಗಡಿಯಲ್ಲಿ ಹಣ ಕಳುವಾದುದು ರಂಗಣ್ಣನಿಂದ ಅದನ್ನು ಅನ್ಯಥಾ ಭಾವನ ಮೇಲೆ ಹೊರಿಸಿ ನಿಮ್ಮನ್ನು ಕಷ್ಟಕ್ಕೀಡುಮಾಡಿ

ದರು" ಎಂದು ಅರ್ಧಂಬರ್ಧವಾಗಿದ್ದ ವಾಕ್ಯವನ್ನು ಪರಿಪೂರ್ಣಗೊಳಿಸಿದ ಕುಮಾರ.

"ಅದ್ಹೇಗೆ ಗೊತ್ತಾಯ್ತು ?"

"ಏನುತ್ತರ ಬಂದೀತೊ ಎಂದು ಎಲ್ಲರೂ ಕಾದರು. ಹಾಸಿಗೆಯ ಮೇಲೆ ಎದ್ದು ಕುಳಿತುಕೊಂಡ ಸರಸುವಿನ ಕಿವಿಯೂ ನಿಮಿರಿತು. ವಿಮಲೆಯೂ ಉತ್ತರಕ್ಕಾಗಿ ಅತಿ ಉತ್ಸುಕತೆಯಿಂದ ಬಳಿಗೆ ಬಂದಳು. ಕಲ್ಯಾಣಿ ಮೈಯೆಲ್ಲಾ ಕಿವಿಯಾಗಿ ನಿಂತಳು. "ಹೇಗೆ ಗೊತ್ತಾಯ್ತು ?" ಎನ್ನುತ್ತ ಚಿಕ್ಕವರು ಸುತ್ತಲೂ ಮುತ್ತಿದರು. ಶಿವೆಯ ಮೈಯಲ್ಲಿ ವಿದ್ಯುತ್ ಸಂಚಾರ ವಾದಂತಾಯಿತು.

"ಅಪ್ಪ ಕಾಣೆಯಾದ ಸಂದರ್ಭದಲ್ಲಿ ಇವರಿಬ್ಬರೂ ಕೂಡಿ ಕಳವು ಮಾಡಿ ಅಪ್ಪನ ಮೇಲೆ ಹಾಕಿದ್ದಾರೆಂದು ತೋರುತ್ತದೆ. ಆ ಸಂದರ್ಭವನ್ನು ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ಅಪ್ಪನ ಬಗ್ಗೆ ಎಷ್ಟೊಂದು ಒಳ್ಳೆಯ ಮಾತು ಗಳನ್ನಾಡುತ್ತಿದ್ದ. ಸ್ನೇಹಿತನಾಗಿದ್ದುಕೊಂಡು ಎಂತಹ ದ್ರೋಹ ಬಗೆ ದಿದ್ದಾನೆ. ನೀಚ !" ಕ್ರೋಧದಿಂದ ರವಿ ಹಲ್ಲು ಕಚ್ಚಿದ.

"ಇಬ್ಬರೂ ಕುಡಿದು ಅಮಲೇರಿ ಬೀದಿಯಲ್ಲಿ ಜಗಳವಾಡುತ್ತಿದ್ದಾರೆ. ಅಕ್ಕಾ! ಇದನ್ನು ಅವರ ಬಾಯಿಯಿಂದ ದೇವರೇ ನಮ್ಮೆದುರಿಗೆ ಹೊರಡಿಸಿದ."

"ಇನ್ನೊಬ್ಬರಾರು ?"

"ಸತ್ಯವ್ರತ. ಇಂತಹ ಸತ್ಯಸಂದರಿಂದ ನಮ್ಮ ದೇಶಕ್ಕೆ ದುರ್ಗತಿ ಬಂತು."

"ಈಗ ಪುನಃ ಕಳವು ಮಾಡಿದ್ದಾರೆ. ಅದರ ಪಾಲಿಗಾಗಿಯೇ ಅವರಲ್ಲಿ ಜಗಳ ಹುಟ್ಟಿದೆ. ಇಬ್ಬರೂ ಕುಡಿದ ಅಮಲಿನಲ್ಲಿದ್ದುದರಿಂದ ಬಹಿರಂಗವಾಗಿ ಜಗಳವಾಡಿದ್ದಾರೆ. ಇಂದೇ ಮಾಧವರಾಯರೊಡನೆ ಮಾತಾಡಿ ಅವರು ಏನು ಹೇಳುತ್ತಾರೋ ಕೇಳಿ ನೋಡುವೆ. ಇದನ್ನಂತೂ ಪತ್ತೆ ಹಚ್ಚಲೇ ಬೇಕು." ರವಿ ನಿಮಿಷವೂ ನಿಲ್ಲದೆ ಹೊರಬಿದ್ದ. ಜೊತೆಗೆ ಕುಮಾರನೂ ಹೋದ. ಶಿವೆ ಊರ್ಧ್ವವದನೆಯಾಗಿ ದೇವರನ್ನು ಧ್ಯಾನಿಸಿಕೊಂಡಳು. ಸರಸು ವಿಮಲೆಯರು ಉಕ್ಕಿ ಬಂದ ಸಂತೋಷದಿಂದ ತಾಯಿಯನ್ನು ಅಪ್ಪಿ ಕೊಂಡರು. ಕ್ಷಣಾರ್ಧದಲ್ಲಿ ವಾತಾವರಣ ಬದಲಾಯಿತು. ಎಂದೂ

ಕಂಡರಿಯದ ಆನಂದ-ಉತ್ಸಾಹ-ಕುತೂಹಲ ತನುಮನಗಳನ್ನಾವರಿಸಿ ಹೃದಯ ಬಿರಿಯುವಂತಾಯಿತು.

"ನಾವು ಇದುವರೆವಿಗೆ ಬಾಬೂಜಿಗೆ ಕೊಟ್ಟ ಹಣ ಹಿಂದಿರುಗದಿದ್ದರೂ ಚಿಂತೆ ಇಲ್ಲ. ಇದರ ವಿಷಯ ಹೊರಬಿದ್ದು ಮಾನ ಉಳಿದರೆ ಸಾಕು."

ಅದೇ ತಾನೆ ಆಸ್ಪತ್ರೆಯಿಂದ ಹಿಂದಿರುಗಿದ್ದ ಶಿವೆ ಇನ್ನೂ ಬಿಳಿ ಉಡುಪನ್ನು ಬದಲಾಯಿಸಿರಲಿಲ್ಲ. ಸರಸು ಏನನ್ನೋ ಜ್ಞಾಪಿಸಿಕೊಂಡವಳಂತೆ ತಟ್ಟನೆ ಹೇಳಿದಳು "ಅಮ್ಮಾ ತಾತನಿಂದ ಕಾಗದ ಬಂದಿದೆ. ಮೀನಕ್ಕನಿಗೂ ನಾಗರಾಜಣ್ಣನಿಗೂ ಈ ಸಲ ಮದುವೆಯಂತೆ ಬಹು ಭಾಗ ಜನವರಿ ತಿಂಗಳಲ್ಲೇ ಆಗಬಹುದು ಎಂದು ಬರೆದಿದ್ದಾರೆ. ಮೀನಕ್ಕನಿಗೆ ಮೂರ್ತಿ ಚಿಕ್ಕಪ್ಪ ಹೇಳಿದ್ದ ಗಂಡೇ ದೊರಕಿದೆ."

"ನನಗೀಗ ಪುನಃ ನವಿಲೂರಿಗೆ ಹೋಗುವಂತಾಯ್ತು." ಕಲ್ಯಾಣಿ ಆನಂದದಿಂದ ನುಡಿದಳು.

"ಸದ್ಯ ಲಗ್ನಫಲ ಕೂಡಿ ಬಂತಲ್ಲಾ ಅದೇ ಸಂತೋಷ." ಎಂದಳು ಶಿವೆ. ಹೃದಯ ಆನಂದದೊಡ್ಡೋಲಗವಾಗಿತ್ತು.

"ನಾಗರಾಜಣ್ಣನಿಗೆ ಎಲ್ಲಿಯ ಹೆಣ್ಣು ?" ವಿಮಲೆಯ ಪ್ರಶ್ನೆ.

"ಅಮ್ಮನ ಅಣ್ಣನ ಮಗಳು ನಾಗು ಕಣೆ."

"ಅದು ಅಂದೇ ತಿಳಿದಿತ್ತು. ಅಂದೇ ಕಲ್ಯಾಣಕ್ಕ ನಿನಗೆ ಹಾಗೆಂದು ಹೇಳಿರಲಿಲ್ಲವೇ ? ನೀನಾಗಲೇ ಮರೆತು ಬಿಟ್ಟಿದ್ದಿ." ಸರಸು ಜ್ಞಾಪಿಸಿದಳು. ತುಟಿಗಳಲ್ಲಿ ಮಂದಹಾಸ ಮಿನುಗಿತು.

"ಇಂದು ಎರಡು ಕಡೆಯಿಂದ ಸಂತಸದ ಸುದ್ದಿ ಬಂದಿದೆ. ಬಹುಶಃ ಸದ್ಯದಲ್ಲೇ ಇನ್ನೊಂದು ಒಳ್ಳೆಯ ಸುದ್ದಿಯನ್ನು ನಾವು ಕೇಳಬಹುದೆಂದೆನಿಸುತ್ತೆ."

"ಬರಲಪ್ಪಾ ಬರಲಿ. ಒಳ್ಳೆಯ ಸುದ್ದಿ ಬಂದರೆ ಯಾರಿಗೆಬೇಡ ? ವಿಮಲೆ ಉಕ್ಕಿಬಂದ ಸಂತೋಷದಿಂದ ಹೇಳಿದಳು. ಸಂತಸದ ಬೀಡಾದ ಚಿಕ್ಕವರ ಮನಸ್ಸು ಉಲ್ಲಾಸಗೊಂಡಿತು. ಮುಖ ಮಂಡಲಗಳು ಪ್ರಸನ್ನ ವಾದುವು.

ಓಡೋಡಿ ಬಂದ ಗೋಪಿಯು ನಗುಮುಖದಿಂದ ಹೇಳಿದ "ಅಮ್ಮಾ

ಮಾಧವರಾಯರು ಸಿಕ್ಕಿದ್ದರು. ಇಂದೇ ಮಾತಾಡೋಣವೆಂದು ರವಿಯೊಂದಿಗೆ ಬಾಬೂಜಿಯನ್ನು ನೋಡಲು ಹೊರಟು ಹೋದರು. ಜೊತೆಗೆ ಕುಮಾರಣ್ಣ ಮತ್ತು ಶ್ಯಾಮು ಹೋಗಿದ್ದಾರೆ. ರಂಗಣ್ಣ ಇಂಥ ದ್ರೋಹಿಯೆಂದು ತಿಳಿದುದು ಇಂದೇ. ಅವನನ್ನು ಜೈಲಿಗೆ ಹಾಕಬೇಕು!"

"ಗೋಪೀ, ದೇವರು ದೊಡ್ಡವನು. ಸತ್ಯಕ್ಕೆ ಎಂದೆಂದೂ ಜಯವಿದೆ ಎಂಬುದು ಸುಳ್ಳಲ್ಲ." ಎಂದಳು ಕಲ್ಯಾಣಿ.

"ನನಗಿಂದು ಹಿಡಿಸಲಾರದಷ್ಟು ಸಂತೋಷವಾಗಿದೆ. ಹೇಗಿದ್ದರೂ ಕಳ್ಳ ಸಿಕ್ಕಿಯೇ ಸಿಕ್ಕುತ್ತಾನೆ?"

"ನಂಬುವುದು ಹೇಗೆ?"

"ನಂಬುವುದು ಹೇಗೆ?" ಕಣ್ಣರಳಿಸಿ ಹೇಳಿದ ಗೋಪಿ "ರಂಗಣ್ಣನಿಗೆ ಎರಡೇಟು ಬಿದ್ದರೆ ಸಾಕು. ಎಲ್ಲ ವಿಚಾರವನ್ನೂ ಒದರಿ ಬಿಡುತ್ತಾನೆ. ವಿಷಯ ಹೊರಬಿದ್ದ ಮೇಲೆ ಹಿಡಿಯುವುದು ಕಷ್ಟವಲ್ಲ."

"ಗೋಪೀ, ಇಂದು ಎಂತಹ ಸುದಿನ!"

"ಮೂರನೆಯ ಸುದ್ದಿ ಸದ್ಯದಲ್ಲೇ ಬಂದರೂ ಬರಬಹುದು."

"ಬರಲಪ್ಪಾ ಬರಲಿ." ದನಿ ರಾಗವಾಗಿ ಹೊರಬಿತ್ತು.

ಮಕ್ಕಳ ಮಾತುಕತೆಗಳನ್ನವಲೋಕಿಸುತ್ತಿದ್ದ ಶಿವೆ ಉಕ್ಕಿ ಬಂದ ಸಂತೋಷವನ್ನು ದೇವರಿಗೆ ಅರ್ಪಿಸಿಕೊಂಡಳು. ಮುಖದಲ್ಲಿ ಅಪೂರ್ವ ಶಾಂತಿಯು ನೆಲೆಸಿತ್ತು.

೩೧

ಲಿಂಗಣ್ಣ ಮಕ್ಕಳಿಬ್ಬರಿಗೂ ಮದುವೆಯ ಏರ್ಪಾಡು ಮಾಡಿದ್ದಾನೆಂಬುದು ರಾಜಮ್ಮನ ಕಿವಿಗೆ ಬಿದ್ದಾಗ ಸಂತೋಷವೆನಿಸುವ ಬದಲಾಗಿ ಉರಿಯುವ ಕಿಚ್ಚಿಗೆ ತುಪ್ಪ ಬಿದ್ದಂತಾಯಿತು. ಈ ಸಾಲಿನಲ್ಲಾದರೂ ವೆಂಕಟೇಶನಿಗೆ ಮದುವೆ ಮಾಡಬೇಕೆಂಬ ಹಂಬಲದಿಂದ ರಾಜಮ್ಮನಿಗೆ ಅತ್ಯಂತ ನಿರಾಸೆಯುಂಟಾಯಿತು. ನಾನಾ ಬಗೆಯಲ್ಲಿ ಹೇಳಿಕೊಂಡರೂ ವೆಂಕಟೇಶ ಕಿವಿಗೊಡಲಿಲ್ಲ. ಮನಮೆಚ್ಚಿದ ಹೆಣ್ಣುಗಳನ್ನು ದಿನವೂ ಬಣ್ಣನೆ ಮಾಡಿದುದು ವ್ಯರ್ಥವಾಯಿತು.

ನಾಗರಾಜ ವೆಂಕಟೇಶನಿಗಿಂತ ಎರಡು ವರ್ಷ ಚಿಕ್ಕವನಿದ್ದೂ ಮದುವೆಯಾಗುತ್ತಿದ್ದಾನೆಂದಮೇಲೆ ಇದೊಂದು ದುರದೃಷ್ಟಕರವಾದ ಪ್ರಸಂಗವೆನಿಸಿ ರಾಜಮ್ಮ ಕಿಡಿ ಕಿಡಿಯಾದಳು. ಮಾತು ಮಾತಿಗೂ ಸಿಡಿದೇಳತೊಡಗಿದ ತಾಯಿಯ ಮುಂದೆ ವೆಂಕಟೇಶ ನಿರುತ್ತರನಾಗುತ್ತಿದ್ದ. ಇದ್ದ ಅಲ್ಪ ಸ್ವಲ್ಪ ತಾಯಿಯ ಸಹಕಾರವೂ ದಿನೇ ದಿನೇ ಕುಸಿಯತೊಡಗಿತು. ವೆಂಕಟೇಶ ಚಿಂತಾಕ್ರಾಂತನಾದ ...ಬುದ್ಧಿಗೆ ಮಂಕು ಕವಿಯಿತು....

ತಂದೆ ತಾಯಿಯರ ಮತ್ತು ತನ್ನ ನಡುವೆ ಬರಬಹುದಾದ ಕಹಿ ಪ್ರಸಂಗಗಳನ್ನು ನಗುಮುಖದಿಂದ ಬದಿಗೊತ್ತಿಬಿಡುತ್ತಿದ್ದನಾದರೂ ರಾಮಣ್ಣ ಮತ್ತು ರಾಜಮ್ಮ ಅದಕ್ಕೆ ತೀರ ವ್ಯತಿರಿಕ್ತ. ಒಂದೊಂದು ಸಣ್ಣ ಪುಟ್ಟ ಪ್ರಸಂಗಗಳೂ ಗರಿಗೆದರಿ ಮೈ ತಳೆದು ಅಬ್ಬರ್ಧವಾಗತೊಡಗಿದುವು. ನಿರ್ಮಲೆಯ ಮದುವೆಯಾದಾಗಿನಿಂದ ಮನೆಯಲ್ಲಿ ಸಹಾಯಕರಿಲ್ಲದೆ ತಾಯಿಗೆ ಕಷ್ಟವಾಗಿದೆಯೆಂಬುದು ಮನವರಿಕೆಯಾಗಿದ್ದರೂ ಸಂಸಾರ ಬಂಧನಕ್ಕೆ ಸಿಲುಕಲು ಮನಸ್ಸು ಒಲ್ಲದಿತ್ತು. ಹಿಟ್ಟು ಬೀಸುವಾಗಲೂ ನೀರು ತರುವಾಗಲೂ ತಾನೇ ಮುಂದಾಗಿ ನಿಲ್ಲುತ್ತಿದ್ದನಾದರೂ ತಾಯಿಯ ಮನಸ್ಸು ಪ್ರಸನ್ನವಾಗಲಿಲ್ಲ. ಒಮ್ಮೆ ಚಂದು ಬಂದಾಗ "ಚಂದಣ್ಣಾ, ನಿಮ್ಮಿಂದಲೇ ನನ್ನ ಮಗ ಹಾಳಾಗಿ ಹೋದ. ಅವನಿಂದ ದೇಶೋದ್ಧಾರ ಮಾಡಿಸುತ್ತೀರಾದರೆ

ನಮ್ಮ ಉದ್ಧಾರ ಮಾಡುವವರಾರು ?" ಎಂದು ಆಕ್ಷೇಪಿಸಿದಳು ರಾಜಮ್ಮ. ಅದಕ್ಕೆ ಉತ್ತರವಾಗಿ ಚಂದು ನಗುನಗುತ್ತಲೇ "ಇನ್ನು ಕೆಲವು ದಿನ ಸುಧಾರಿಸಿ ಕೊಳ್ಳಿರಿ. ಅನಂತರ ವೆಂಕಟೇಶ ನಿಮ್ಮವನೇ" ಎಂದಿದ್ದ. ಆದರೂ ರಾಜಮ್ಮನಿಗೆ ಸಮಾಧಾನವಿಲ್ಲ.

ಕೆಲಸ ಕಾರ್ಯಗಳು ನಿರಾತಂಕವಾಗಿ ನಡೆದು ಊರ ಮಕ್ಕಳು ನೆಮ್ಮದಿಯಿಂದ ವಿದ್ಯೆ ಕಲಿಯಲನುವಾದರು. ವೆಂಕಟೇಶ ಪಾಠಶಾಲೆಯಲ್ಲಿ ಉಪಾಧ್ಯಾಯನಾದ. ಕೈಗಾರಿಕಾ ಪಾಠಶಾಲೆಯೂ ಆರಂಭವಾಗಿ ಶಂಕರು, ಅನಂತು, ಸಿದ್ಧರಾಮು ಕಿಟ್ಟು ಮತ್ತು ನಂಜ ಕೈಗಾರಿಕೆಯನ್ನು ತ್ವರಿತವಾಗಿ ಕಲಿಯತೊಡಗಿದರು. ವಿದ್ಯೆ ಕರಗತವಾದೊಡನೆಯೆ ತಾವೇ ಉಪಾಧ್ಯಾಯ ರಾಗುವ ಯೋಚನೆಯಿತ್ತು. ಐದಾರು ತಿಂಗಳ ಅವಧಿಗಾಗಿ ಕೈಗಾರಿಕೆಯನ್ನು ಕಲಿಸಲು ಖಾಸಗೀ ಉಪಾಧ್ಯಾಯರನ್ನು ಚಂದು ಒದಗಿಸಿದ್ದ. ಅವರ ಸಂಬಳ ಸಾರಿಗೆಗಳನ್ನು ಊರವರೇ ನೋಡಿಕೊಳ್ಳಬೇಕಾಗಿತ್ತು. ಪುಟ್ಟಗಂಗ ನಂಜನ ಗೂಡಿನಲ್ಲಿ ನಿಂತು ದರ್ಜಿಯಂಗಡಿಯಲ್ಲಿ ಹೊಲಿಗೆ ಕಲಿಯತೊಡಗಿದ್ದ.

ಮುಂದಿನ ಸಾಲಿಗೆ ನಮ್ಮವರೇ ಉಪಾಧ್ಯಾಯರು ಅಪ್ಪರೊಳಗಾಗಿ ನೀವು ತರಬೇತಾಗಬೇಕು ಎಂದಿದ್ದ ಚಂದು. ಸ್ಥಳೀಕರೆ ಉಪಾಧ್ಯಾಯರಾದರೆ ವಸತಿ ಸೌಕರ್ಯವೊದಗಿಸಬೇಕಾಗಿಲ್ಲವಾದ್ದರಿಂದ ಅದೇ ಅನುಕೂಲವೆಂದು ವಿದ್ಯಾಧಿಕಾರಿಗಳೂ ತಿಳಿಸಿದ್ದರು. ನಮ್ಮ ಮಕ್ಕಳು ಉಪಾಧ್ಯಾಯರಾಗುವುದು ಒಂದು ಬಗೆಯಿಂದ ಅನುಕೂಲವಾಗುವುದೆಂದು ಹಳ್ಳಿಗರಿಗೆ ಆನಂದವನ್ನುಂಟು ಮಾಡಿತು. ಅದರಲ್ಲೂ ಕಟ್ಟಡಗಳನ್ನು ತಮ್ಮ ಮಕ್ಕಳೇ ಕಟ್ಟಿದ್ದಾರೆಂಬು ದೊಂದು ಹೆಮ್ಮೆ. ಅನೇಕ ಮಂದಿ ಹಿರಿಯರೂ ವಿದ್ಯೆ ಕಲಿಯಲು ಮುಂದಾ ದರು. ಕೈಗಾರಿಕೆಯಲ್ಲಿಯೂ ಕಸೂತಿಯಂತಹ ನಯವಾದ ಕೆಲಸದಲ್ಲಿಯೂ ಹೆಣ್ಣು ಮಕ್ಕಳು ಅತ್ಯಂತ ಆಸಕ್ತಿ ತೋರಿದರು. ಎಂದೆಂದೂ ನಯ ನಾಜೋಕುಗಳನ್ನು ಕಾಣದ ಮಕ್ಕಳನ್ನು ತಿದ್ದುವುದು ಕಷ್ಟವಾದರೂ ತಿದ್ದಲೇ ಬೇಕೆಂಬ ಹುರುಪು ನೂರ್ಮಡಿಯ ಉತ್ಸಾಹ ಹೆಡೆ ಎತ್ತಿದುವು.

ವಾಚನಾಲಯಕ್ಕೆ ಪುಸ್ತಕಗಳನ್ನು ಅಂಗಡಿಗಳವರೂ-ದೊಡ್ಡ ಮನುಷ್ಯರು ಗಳೂ ಉದಾರವಾಗಿ ದಾನ ಮಾಡಿದರು. ಚಂದುವಿನ ನೇತೃತ್ವದಲ್ಲಿ ಪುಸ್ತಕ ಗಳ ಸಂಗ್ರಹಣೆ ತೀವ್ರವಾಗಿ ಸಾಗಿತು. ಸಂಗ್ರಹಿಸಿದ ಹಣದಲ್ಲಿ ಚಿಕ್ಕಾಸೂ

ಮಿಕ್ಕದುದರಿಂದ ವಾರಕ್ಕೊಮ್ಮೆ ನಾಟಕವಾಡಿ ಹಣ ಸಂಗ್ರಹಿಸಬೇಕೆಂಬ ಸಲಹೆಯನ್ನು ಚಂದು ಮಂಡಿಸಿದ. ಆದರೆ ಅಭ್ಯಾಸ ಪರಿಶ್ರಮಗಳಿಲ್ಲದೆ ನಾಟಕವಾಡುವುದು ಸಾಧ್ಯವೇ? ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಚಂದು ಹುರಿದುಂಬಿಸಿದ. ನಾಟಕರಂಗದಲ್ಲೂ ತರಬೇತಾಗಲು ಹುಡುಗರು ಮುಂದಾದರು-ನರನಾಡಿಗಳಲ್ಲಿ ಚೇತನದ ಝುರಿ ಮಿಂಚಿನಂತೆ ಹರಿದಾಡಿತು.

ಊರ ನಿರ್ಮಲೀಕರಣವನ್ನು ವಾರಕ್ಕೊಮ್ಮೆ ಕೈಗೊಂಡು ಅದರ ಬಗ್ಗೆ ಉಪನ್ಯಾಸಗಳನ್ನು ಕೊಟ್ಟು ಅದರಿಂದಾಗುವ ಪ್ರಯೋಜನವನ್ನು ಮನದಟ್ಟಾಗುವಂತೆ ವೆಂಕಟೇಶ ವಿವರಿಸತೊಡಗಿದ. ವಾಚನಾಲಯದಲ್ಲಿ ಉಪನಿಷತ್ ಕಥೆಗಳೂ ಭಕ್ತಿವಿಜಯ ರಾಮಾಯಣ ಭಾಗವತ ಮಹಾಭಾರತ ಭಗವದ್ ಗೀತೆ ಇತ್ಯಾದಿ ಧರ್ಮಗ್ರಂಥಗಳ ಪಠಣೆಯನ್ನೂ ವೆಂಕಟೇಶ ಆಗಾಗ್ಗೆ ನಡೆಸುತ್ತಿದ್ದ. ಜನ ಎಳೆಸೇರಿಸಿ ಹೊಸೆದಂತೆ ಅತ್ತ ಆಕರ್ಷಿತರಾಗತೊಡಗಿದರು. ನೆರೆಯೂರುಗಳಿಂದಲೂ ಪಕ್ಕದ ಹಳ್ಳಿಗಳಿಂದಲೂ ಕಾವ್ಯವಾಚನ ಕೇಳಲು ಬರತೊಡಗಿದರು. ಚಂದು ಬಿತ್ತಿದ ಬೀಜ ಗಿಡವಾಗಿ ಬೆಳೆದು ಕವಲೊಡೆಯಿತು. ಚಿಗುರು ನಳನಳಿಸಿ ಬೆಳೆದುವು....

ಅಂದು ರಾಷ್ಟ್ರಪಿತನ ಪುಣ್ಯಾರಾಧನೆಯ ಸಲುವಾಗಿ ಸಾಮೂಹಿಕ ಭಜನೆಯ ಏರ್ಪಾಡಾಗಿತ್ತು. ಸಂಜೆಯ ಹೊತ್ತಿಗೆ ಅಲ್ಲಿ ಬಹು ಮಂದಿ ನೆರೆದರು. ಗೆಳೆಯರ ಬಳಗದ ಹಿರಿಯ ಹುಡುಗರು 'ರಘುಪತಿ ರಾಘವ ರಾಜಾರಾಂ' ಹಾಡಿದರು. ಅಖಂಡ ಭಜನೆಯು ದೇವರ ನಾಮಗಳಿಂದ ಕೂಡಿ ಭಕ್ತಿಯುತವಾಗಿ ನಡೆಯಿತು. ಅನಂತರ ವೆಂಕಟೇಶ ಹೆಂಗಳೆಯರನ್ನು ಹಾಡಲು ಕೇಳಿಕೊಂಡ. ಎಲ್ಲರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಹಿರಿಯಾಕೆಯೊಬ್ಬಳು "ನಮಗೇನು ತಿಳಿದೀತೆಂದು ಹಾಡಲು ಹೇಳುತ್ತೀ ?" ಎಂದೆನ್ನುತ್ತ ಕಿಸಕ್ಕನೆ ನಕ್ಕಳು.

"ನಮ್ಮ ಶಾಲೆಯಲ್ಲಿ ಕಲಿತದ್ದನ್ನೇ ಹಾಡಿರಿ" ಶಂಕರ ನುಡಿದ.

ಹೆಂಗಸರ ಗುಂಪಿನಲ್ಲಿ 'ನೀ ಹೇಳು' 'ನೀ ಹೇಳು' ಎಂದು ಒಬ್ಬರಿಗೊಬ್ಬರು ಹೇಳಿಕೊಂಡರಾದರೂ ಒಬ್ಬರೂ ಹೇಳಲು ಮುಂದಾಗಲಿಲ್ಲ. ನಿಮಿಷವೈದು ಶಾಂತವಾಗಿ ಉರುಳಿದವು. ಹೆಂಗಳೆಯರ ಮಧ್ಯದಿಂದ ಬಾಲೆಯೊಬ್ಬಳು 'ವೈಷ್ಣವ ಜನತೋ' ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದಳು.

ತಮ್ಮ ಶಾಲೆಯಲ್ಲಿ ತರಬೇತಾದ ಹೆಣ್ಣೊಂದು ಧೈರ್ಯದಿಂದ ಹಾಡಿದುದು ವೆಂಕಟೇಶನಿಗೆ ಅಮಿತಾನಂದವನ್ನುಂಟುಮಾಡಿತು. ಹೆಚ್ಚು ಬಿಳುಪಲ್ಲದ ಮುಖಬಿಂಬ ಸುಂದರವಾಗಿತ್ತು. ಉಟ್ಟಿದು ಅಗ್ಗದ ಸೀರೆಯಾದರೂ ಉಡಿಗೆ ಯಲ್ಲಿ ನಯವಿತ್ತು. ಅತ್ತ ತಿರುಗಿದ್ದುದರಿಂದ ಹಾಡಿದವರಾರೆಂಧು ತಿಳಿಯ ಲಾಗಲಿಲ್ಲ. ಆದರೂ ವೆಂಕಟೇಶನಿಗೆ ಕುತೂಹಲ ಮೂಡಿತು. ಬಹು ಮಂದಿ ನೆರೆದಿರುವ ತಾವಿನಲ್ಲಿ ತನ್ನ ನೋಟ ಅಪಾರ್ಥಕ್ಕೆಡೆಗೊಟ್ಟೀತೆಂದು ಭಯದಿಂದ ದೃಷ್ಟಿಯನ್ನು ಬೇರೆಡೆಗೆ ತಿರುಗಿಸಿದ.

ಹಾಡಿದವಳು ಹೊನ್ನಮ್ಮ. ಸಿದ್ಧರಾಮನ ಚಿಕ್ಕಪ್ಪನ ಮಗಳು. ಬಾಲ್ಯದಲ್ಲಿ ತಂದೆ ತಾಯಿಯರನ್ನು ಕಳೆದುಕೊಂಡ ಹತಭಾಗಿನಿ. ಸ್ವಲ್ಪ ಕಾಲ ಅಕ್ಕನ ಮನೆಯಲ್ಲೂ ಸ್ವಲ್ಪ ಕಾಲ ಸಿದ್ಧರಾಮನ ಮನೆಯಲ್ಲೂ ಕಾಲಯಾಪನೆ ಮಾಡುತಿದ್ದ ಹೊನ್ನ ಪಾರ್ವತಮ್ಮನ ಹತ್ತಿರದ ಸಂಬಂಧಿಯೂ ಹೌದು. ಆಗಾಗ ಲಿಂಗಣ್ಣ ಬಂದು ವಿಚಾರಿಸಿಕೊಳ್ಳುತ್ತಿದ್ದುದೂ ಉಂಟು. ಸಿದ್ಧರಾಮು ಶಾಲೆಯಲ್ಲಿ ಕಲಿತ ಹಾಡುಗಳನ್ನು ಹೊನ್ನಮ್ಮ ಹೇಳಿಸಿಕೊಂಡಿದ್ದಳು. ಇಷ್ಟು ಹಾಡಿಯಾಳೆಂದು ಸಿದ್ಧರಾಮನ ಹೊರತು ಮತ್ತಾರೂ ಅರಿಯರು. ನೆರೆದ ಮಂದಿ ಕೇಳಿ ಸಂತೋಷಗೊಂಡರು. ಹುಡುಗಿ ಉತ್ತೇಜಿತೆಯಾದರೂ ತಲೆ ಬಾಗಿದಳು.

ಸಿದ್ಧರಾಮು "ಹೊನ್ನಾ, ಅದನ್ನೇ ಇನ್ನೊಮ್ಮೆ ಹೇಳು" ಎಂದಾಗ ಹೊನ್ನಮ್ಮ ಲಜ್ಜಾಭರಿತಳಾದಳು. ಕೆನ್ನೆಗಳು ರಂಗೋಲಿನಂತೆ ಕೆಂಪು ತಳೆ ದುವು. ತುಟಿಗಳಲ್ಲಿ ಎಳೆನಗು ಅರಳಿ ಮುಖ ಪ್ರಸನ್ನವಾಯಿತು. ಲಜ್ಜೆಯ ಭಾರದಿಂದ ಇನ್ನಷ್ಟು ತಲೆ ಬಾಗಿದಳು. ಒಡನೆ ಅನೇಕ ದನಿಗಳು 'ಇನ್ನೊಮ್ಮೆ ಹೇಳು' ಎಂದು ಒತ್ತಾಯ ಪೂರ್ವಕವಾಗಿ ನುಡಿದುವು. ಹೊನ್ನಮ್ಮ ಅದೇ ಗೀತೆಯನ್ನು ಪುನಃ ಹಾಡಿದಳು. ಶಾಲೆ ಶುರುವಾದಾಗಿನಿಂದ ಹೊನ್ನಮ್ಮ ನನ್ನು ನೋಡಿದ್ದ ವೆಂಕಟೇಶನಿಗೆ ವನಸುಮದ ಕಂಪು ತಟ್ಟಿರಲಿಲ್ಲ. ಇಂದು ಒಮ್ಮೆಲೇ ಆಶ್ಚರ್ಯವಾಗಿ ಮನಮಲ್ಲಿಗೆ ವಿಚಿತ್ರ ಪರಿಮಳವನ್ನು ಸೂಸಿತು...

ಸಂಜೆಯ ಪ್ರಾರ್ಥನೆ ಮುಗಿದು ಎಲ್ಲರೂ ಮನೆಯ ಹಾದಿ ಹಿಡಿದರು. ವೆಂಕಟೇಶ ಶಂಕರ ಅನಂತ ಸಿದ್ಧರಾಮ ರಮೇಶ ಪುಟ್ಟರಂಗ ಮಾತ್ರ ಉಳಿ ದರು. ಶಾಲೆಯ ಆವರಣದಲ್ಲಿ ಹುಟ್ಟಿದ್ದ ಹುಲ್ಲು ಕಳೆಗಳ ನಿರ್ಮೂಲನ

ಕಾರ್ಯರಂಗಕ್ಕೆ ಇಳಿದ ವೆಂಕಟೇಶ,

"ಶಂಕರೂ, ಈ ದಿನ ಹೊನ್ನ ಹಾಡಿದ್ದು ಸೊಗಸಾಗಿಯೇ ಇತ್ತು. ಅಭ್ಯಾಸಬಲದಿಂದ ಎಲ್ಲವೂ ಸಾಧ್ಯ. ಚಂದಣ್ಣ ಹೇಳಿದಂತೆ ನಾವು ನಾಟಕ ಕಲೆಯಲ್ಲಿ ಪರಿಶ್ರಮ ಹೊಂದಲೇಬೇಕು. ಇದರಿಂದ ಬಂದ ಗಳಿಕೆಯನ್ನು ನಮ್ಮ ಸಂಘದ ಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳಬಹುದು."

"ಹೌದು..........ನಾವು ಅಭ್ಯಾಸ ಮಾಡುವುದು ಸಾಲದು. ನಾಟಕ ಕಲೆಯನ್ನು ಅಭಿವೃದ್ಧಿಗೊಳಿಸಿಕೊಂಡಲ್ಲಿ ಪ್ರಯೋಜನವುಂಟು."

"ಹೇಗೂ ಈ ಊರಿನಲ್ಲಿ ನಾಟಕ ಸಿನಿಮಾಗಳಿಲ್ಲ. ಜನ ನೋಡಲು ಬಂದೇ ಬರುತ್ತಾರೆ."

"ಅಷ್ಟು ಮಾತ್ರವೇನು ?"

"ಅಂದರೆ......?"

"ಯೋಚಿಸಿ ನೋಡು."

"ತಿಳಿಯಲಿಲ್ಲ."

"ನಾವು ತಪ್ಪು ಮಾಡಿದರೂ ಇವರಿಗೆ ತಿಳಿಯುವುದಿಲ್ಲ !"

ಸಿದ್ಧರಾಮನ ನುಡಿ ಹೊಮ್ಮಿದಾಗ ಎಲ್ಲರ ಮುಖದಲ್ಲೂ ಮುಗುಳು ನಗೆ ಮೂಡಿತು.

೩೨

ಮಂಗಳಂ.......ಶುಭಮಂಗಳಂ........

ಲಿಂಗಣ್ಣನ ಮನೆಯಲ್ಲಿ ಮದುವೆಯ ಸಮಾರಂಭ. ತಳಿರುತೋರಣ ನಳನಳಿಸುವ ಹಸುರು ಚಪ್ಪರದಲ್ಲಿ ಬಣ್ಣ ಬಣ್ಣದುಡಿಗೆಗಳಿಂದ ಶೋಭಿಸುವ ಊರಮಂದಿ–ನಕ್ಕು ನಲಿವ ಮಕ್ಕಳ ದಂಡು. ಶ್ಯಾಮು ಗೋಪಿ ಕುಮಾರ ವಿಮಲೆಯರು ಹಿಂದಿನ ದಿನವೇ ಬಂದಿದ್ದಾರೆ. ಜೋಗಿಹಳ್ಳಿಯಿಂದ ವೆಂಕಟೇಶ ತನ್ನ ಗೆಳೆಯರ ಬಳಗದೊಂದಿಗೆ ಆಗಮಿಸಿದ್ದ. ಪಾರ್ವತಮ್ಮನ ಅಣ್ಣ ರಾಂಪುರಕ್ಕೆ ಹತ್ತಿರವಾದ ಹಿರೇಹಳ್ಳಿಯವನು. ಬರುವಾಗ ಚಂದು ಕಾವೇರಿ ಯನ್ನು ತನ್ನೊಂದಿಗೆ ಕರೆತಂದಿದ್ದ. ಎರಡು ಮದುವೆಗಳು ಒಂದೇ ಚಪ್ಪರದಲ್ಲಿ ನೆರವೇರಲಿದ್ದುವು. ಸರಳ ಸಮಾರಂಭಕ್ಕೆ ಶಾಂತ ಮನೋಹರ ವಾತಾವರಣ ದಿವ್ಯ ಶೋಭೆಯನ್ನಿಟ್ಟಿತ್ತು. ಲಿಂಗಣ್ಣ ಮತ್ತು ಪಾರ್ವತಮ್ಮನಿಗೆ ಸೊಸೆಯಾಗಿ ಬರುವ ನಾಗು ಅಳಿಯನಾಗಿ ಬರುವ ರಾಮಚಂದ್ರ ಸತ್ಪಾತ್ರರೆಂದು ಅನುಪಮ ಆನಂದ. ಬಂಧು ಬಳಗದವರನ್ನು ಅತ್ಯಂತ ಸಂಭ್ರಮದಿಂದ ದಂಪತಿಗಳು ಬರಮಾಡಿಕೊಂಡರು. ಅದೇ ನೇರಕ್ಕೆ ರವಿ ಸರಸು ಮತ್ತು ಶಿವೆ ಮದುವೆಗೆ ಬರಲಾಗಲಿಲ್ಲವಲ್ಲಾ ಎಂಬ ಕೊರಗು. ಸರಸು ಮತ್ತೆ ಜ್ವರಪೀಡಿತಳಾಗಿ ಆಸ್ಪತ್ರೆಗೆ ಸೇರಿದ್ದುದರಿಂದ ಎಲ್ಲರ ಮನಸ್ಸಿಗೂ ತಳಮಳ...ಅವಳ ಸಲುವಾಗಿ ಕುಮಾರ ಅಲ್ಲೇ ಉಳಿದಿದ್ದು ರವಿ ಮತ್ತು ಶಿವೆಯರ ಒತ್ತಾಯದ ಮೇಲೆ ಹೊರಟಿದ್ದ. ಆದರೂ ಮನಸ್ಸೆಲ್ಲಾ ಹಿಂದೆಯೇ ಉಳಿದಂತೆ ಹೊತ್ತು ನೀರಸ ವಾಗಿ ಉರುಳುತ್ತಿತ್ತು.. ಹೃದಯದಾಳದಲ್ಲಿನ ಸುಪ್ತ ಆಶಾಭಾವನೆಯೊಂದು ಮೆಲ್ಲಮೆಲ್ಲನೆ ಹೆಡೆಯೆತ್ತಲಾರಂಭಿಸಿ ದಿನೇ ದಿನೇ ಹೃದಯವ್ಯಾಪ್ತಿಯಾಗ ತೊಡಗಿತ್ತು–ಎಂದೆಂದಿಗೂ ನಿಲುಗಡೆಯಾಗಲೀ ನಿಷ್ಕೃತಿಯಾಗಲೀ ಇಲ್ಲದಂತೆ.

ಇರಲಿ,

ಇಂಜಿನಿಯರಿಂಗ್ ಕಾಲೇಜಿಗೆ ಶ್ಯಾಮು ಕುಮಾರರು ಒಂದೇ ಬಾರಿಗೆ ಕಾಲಿಟ್ಟವರು, ಬಹುಶಃ ಅದೊಂದು ಸುಮುಹೂರ್ತವೇ ಇರಬೇಕು. ಮುನ್ನಡೆ ಯಲ್ಲಿ ಇಬ್ಬರೂ ಹಿಂದು ಮುಂದಾಗಲಿಲ್ಲ. ಒಮ್ಮೆ ಪ್ರಾಸಂಗಿಕವಾಗಿ ಹಾಸ್ಯ

ವಾಣಿಯಲ್ಲಿ ಸರಸು-"ಇಬ್ಬರೂ ಒಂದೇ ಬಾರಿಗೆ ಕಾಲೇಜಿಗೆ ಕಾಲಿಟ್ಟಿದ್ದೀರಿ ಯಾರು ಮುಂದೆ ಯಾರು ಹಿಂದೆ ನೋಡೋಣ."

"ಹಿಂದು ಮುಂದೆಯ ಪ್ರಶ್ನೆಯೇ ಇಲ್ಲ. ಇಬ್ಬರೂ ಸಮಜೋಡಿ !" ಎಂದು ಹುಬ್ಬು ಹಾರಿಸಿದ್ದ ಕುಮಾರ. ಅದಕ್ಕನುಗುಣವಾಗಿ ಮಂತ್ರ ಮುಗ್ಧ ಪಣಿಗಳಂತೆ ಇಬ್ಬರೂ ಸಮಜೋಡಿಯಾಗಿ ಮುಂದುವರಿದಿದ್ದರು.

ಸರಸು ಪುನಃ ಆಸ್ಪತ್ರೆಗೆ ಸೇರಿ ಒಂದು ವಾರ ಕಳೆಯಿತು. ಮೇಲಿಂದ ಮೇಲೆ ಜ್ವರ ಬಂದ ಪ್ರಯುಕ್ತ ತುಂಬ ಅಶಕ್ತಳಾಗಿದ್ದಾಳೆ. ಅವಳು ಅಗತ್ಯ ವಾದ ವಿಶ್ರಾಂತಿ ಪಡೆಯದಿದ್ದುದರಿಂದ ಪುನಃ ಜ್ವರ ಆವರಿಸಿತೆಂದು ಶಕ್ತ ಳಾಗುವವರೆಗೆ ಆಸ್ಪತ್ರೆಯಲ್ಲಿರಲು ಹೇಳಿದ್ದರು ವೈದ್ಯರು. ರೂಪಮಾಧುರಿಯು ಮುಖ ಬೆಳ್ಳನೆ ಬಿಳಿಚಿಕೊಂಡು ಬೆಂಡಿನ ಬೊಂಬೆಯಂತಾಯಿತು. ಒಮ್ಮೆ ಮೂರ್ಛಿತಳಂತೆ ಮಲಗಿದರೆ ಇನ್ನೊಮ್ಮೆ ಕಂಬಳಿಯ ಮರೆಯಲ್ಲಿ ಅವಿರಲ ವಾಗಿ ಕಂಬನಿಗರೆಯುವಳು. ಆ ಕರುಣಾಜನಕ ದೃಶ್ಯ ಎಲ್ಲರ ಮನವನ್ನೂ ಮುಮ್ಮಳ ಮರುಗಿಸುವುದು. ಕುಮಾರ ತನ್ನ ಬಿಡುವಿನ ವೇಳೆಯನ್ನೆಲ್ಲ ಅವಳನ್ನು ಸಂತೋಷವಾಗಿಡುವುದರಲ್ಲಿ ವಿನಿಯೋಗಿಸುತ್ತಿದ್ದುದನ್ನು ನೋಡಿ "ನಿನ್ನ ವೇಳೆಯನ್ನೆಲ್ಲ ನನಗಾಗಿ ಕಳೆದರೆ ಓದಿನಲ್ಲಿ ಹಿಂದ ಬೀಳುವೆ." ಎಂದಳು ಸರಸು. ಮ್ಲಾನ ಮುಖದಲ್ಲಿ ಆಸೆಯ ಬೆಳಕು ಮಿನುಗಿತು.

ಕುಮಾರ ಸಮೀಪಕ್ಕೈದು ಹಣೆಯ ಮೇಲೆ ಸ್ನೇಹಪೂರ್ಣ ಹಸ್ತ ವನ್ನಿಟ್ಟು ಕೇಳಿದ,

"ಏಕೆ ನಿನಗಷ್ಟೊಂದು ಶಂಕೆ ?"

"ಶಂಕೆ ಏನಿಲ್ಲ ; ಸುಮ್ಮನೆ ಹೇಳಿದೆ ಅಷ್ಟೆ. ನೀನು ನನಗೋಸ್ಕರ ವೇಳೆಯನ್ನು ಕಳೆಯುತ್ತಿರುವುದರಿಂದ ಹೇಳುವುದು ನನ್ನ ಕರ್ತವ್ಯವಾಗಿತ್ತು."

"ನೀನೊಮ್ಮೆ ಚೆನ್ನಾದೆಯೆಂದರೆ ನಾನು ಹಿಂದೆ ಬೀಳುವ ಪ್ರಶ್ನೆಯೇ ಇಲ್ಲ." ಹುಬ್ಬೇರಿಸಿದ ಕುಮಾರ.

ಸರಸು ಮಾತಾಡದೆ ಮುಗುಳು ನಕ್ಕಳು.

ದಿನೇ ದಿನೇ ಕುಮಾರ ತನ್ನೆಡೆಗೆ ಆಕರ್ಷಿತನಾಗುತ್ತಿದ್ದುದನ್ನು ಗಮನಿಸು ತ್ತಿದ್ದರೂ ಗಣನೆಗೆ ತೆಗೆದುಕೊಂಡಿರಲಿಲ್ಲ. ಆಗತಾನೇ ಬಾಲ್ಯದಂಚನ್ನು ದಾಟಿ ತಾರುಣ್ಯ ದಿಶೆಯಲ್ಲಿ ನಳನಳಿಸುತ್ತಿದ್ದ ಸರಸು ಮನದಲ್ಲೇ ನಕ್ಕು ಆ ವಿಚಾರ

ವನ್ನು ಬದಿಗೆ ತಳ್ಳಿಬಿಡುತ್ತಿದ್ದಳು. ಆಸ್ಪತ್ರೆಯಲ್ಲಿ ಸಹ ರೋಗಿಗಳ ಪರಿಚಯ ವಿದ್ದರೂ ಒರಗೆಯ ಹೆಣ್ಣು ಮಗುವೊಂದು ಮಗ್ಗುಲಿನಲ್ಲಿದ್ದರೂ ಮಲಗಿ ಕಾಲಹರಣ ಮಾಡುವುದು ಸುಲಭಸಾಧ್ಯವಲ್ಲ. ಹಗಲೆಲ್ಲಾ ಹಾಸಿಗೆಯಲ್ಲಿ ಹೊರಳುತ್ತಿದ್ದ ಸರಸು ನವಿಲೂರಿನಲ್ಲಿ ನಡೆದ ಮದುವೆಯನ್ನು ಕುರಿತು ಯೋಚಿಸುತ್ತಾ, ನನ್ನ ದುರಾದೃಷ್ಟದಿಂದ ಅಲ್ಲಿಗೂ ಹೋಗಲಾಗಲಿಲ್ಲವಲ್ಲಾ ಎಂದು ಚಿಂತಿಸಿದಳು. ಶಿವೆ ಕೆಲಸಗಳ ನಡುವೆ ಬಂದು ಹೋಗುತ್ತಿದ್ದರೂ ಸರಸು ಮನಸ್ಸಮಾಧಾನವಿಲ್ಲದೆ ಪರಿತಪಿಸುತ್ತಿದ್ದಳು.

ಔಷಧಿಯನ್ನು ತಂದ ದಾದಿ ಗೌರಮ್ಮ ಖಿನ್ನಳಾಗಿದ್ದ ಸರಸುವಿನ ಕೆನ್ನೆಯನ್ನು ನೇವರಿಸಿ ಪ್ರೀತಿಯಿಂದ ಕೇಳಿದಳು. "ಸರಸೂ ಏಕೆ ಹೀಗಿದ್ದಿ ? ಮನಸ್ಸಿಗೆ ಬಹಳ ಬೇಸರವೆ ? ಇನ್ನೆರಡು ದಿನಗಳೊಳಗಾಗಿ ಜ್ವರ ಬಿಟ್ಟೀತು ಬೇಸರಿಸಬಾರದು ಮಗೂ."

"ಇದು ಮೂರನೆಯ ಬಾರಿ. ನನಗಂತೂ ಬೇಸರವಾಗಿಬಿಟ್ಟಿದೆ."

"ಇಷ್ಟಕ್ಕೇಕೆ ಕೊರಗು ? ಕೆಲವು ದಿನ ವಿಶ್ರಾಂತಿ ತೆಗೆದುಕೊಂಡರೆ ಸರಿ ಹೋಗುತ್ತದೆ. ನೀನು ಈ ಮೊದಲೇ ಡಾಕ್ಟರು ಹೇಳಿದಂತೆ ಕೇಳಿದ್ದರೆ ತೊಂದರೆಯೇ ಇರಲಿಲ್ಲ." ತಲೆಯನ್ನು ನೇವರಿಸಿ ಸಸ್ನೇಹದಿಂದ ಔಪಚಾರಿಕ ವಾಗಿ "ಚಿಃ ! ಅಳುವುದೇತಕೆ ? ಅತ್ತರೆ ಸರಿ ಹೋಗುತ್ತದೆಯೇ ?"

ಸರಸು ಮಾತನಾಡಲಿಲ್ಲ. ಮೌನವಾಗಿ ಕಂಬನಿಗರೆದಳು. ಗೌರಮ್ಮ ಸ್ವಲ್ಪ ಹೊತ್ತು ಬಳಿಯಲ್ಲಿದ್ದು ನಾನಾ ವಿಧದಿಂದ ಸಮಾಧಾನಗೊಳಿಸಿ ಔಷಧಿ ಯನ್ನು ಕೊಟ್ಟು ಹೋದಳು. ಕಣ್ಣಿಗೆ ಜೊಂಪು ಹತ್ತತೊಡಗಿ ಹಾಗೇ ಮಲಗಿದಳು. ಸ್ವಲ್ಪ ಹೊತ್ತಿನ ನಂತರ ಪಾದ ಸಪ್ಪಳವನ್ನು ಕೇಳಿ ತಟ್ಟನೆ ಕಣ್ತೆರೆದು ನೋಡಿದರೆ ಕುಮಾರ ನಸುನಗುತ್ತ ನಿಂತಿದ್ದ. ನೋಡಿದೊಡನೆ ಅಚ್ಚರಿಯಿಂದ ಕೇಳಿದಳು ಸರಸು "ಒಂದಿನವೂ ನಿಲ್ಲದೇ ಬಂದು ಬಿಡುವುದೇ?"

"ಮದುವೆಯಾದ ಮೇಲೆ ಅಲ್ಲಿದ್ದು ಮಾಡುವುದೇನು ? ಇಲ್ಲಿದ್ದರೆ ಅಕ್ಕನಿಗೆ ಒಂದಿಷ್ಟು ಸಹಾಯವನ್ನಾದರೂ ಮಾಡಬಹುದು."

"ಅದಿರಲಿ, ಮದುವೆ ಹೇಗಿತ್ತು ? ಶ್ಯಾಮು ಗೋಪಿ ವಿಮಲೆಯರೆಲ್ಲಿ? ಎಲ್ಲರೂ ಬಂದರೆ ?"

ಅಲ್ಲಿನ ವಿಷಯವನ್ನು ತಿಳಿಯುವ ಆತುರ ಮುಖದಲ್ಲಿ ಹೊರಹೊಮ್ಮು

ತ್ರಿತ್ತು. ಕುತೂಹಲಭರಿತ ಚಿತ್ತ ಪ್ರಸನ್ನವಾಯಿತು.

"ಜೋಡಿ ಮದುವೆ ತುಂಬ ಚೆನ್ನಾಗಿತ್ತು. ನೀನು ಆರೋಗ್ಯವಾಗಿದ್ದಿದ್ದರೆ ಎಲ್ಲರೂ ನಾಲ್ಕು ದಿನ ನಿಂತೇ ಬರಬಹುದಾಗಿತ್ತು. ವಿಮಲೆಗಂತೂ ಎರಡು ದಿನ ಇರೋಣವೆಂದು ಬಹಳ ಮನಸ್ಸಿತ್ತು. ಬಿಟ್ಟು ಬಂದರೆ ಮತ್ತೆ ಅವಳಿಗಾಗಿ ಯಾರಾದರೂ ಬರಬೇಕು; ಅದಕ್ಕಾಗಿ ನಾನೇ ಬಲವಂತವಾಗಿ ಕರೆತಂದೆ. ನೀವೆಲ್ಲಾ ಮದುವೆಗೆ ಬರಲಾಗದಿದ್ದುದು ಎಲ್ಲರಿಗೂ ಬೇಜಾರು."

ತಕ್ಷಣ ಅವಳ ಕಣ್ಣುಗಳು ಹನಿತುವು. ಅದನ್ನು ಕುಮಾರನಿಗೆ ತೋರಗೊಡಲಿಚ್ಛಿಸದೆ ಸೆರಗಿನ ಮರೆಯಲ್ಲಿ ಒರೆಸಿಕೊಂಡಳು. ಇನ್ನಷ್ಟು ಹೊತ್ತಿನೊಳಗಾಗಿ ವಿಮಲೆ ಗೋಪಿಯರು ಬಂದರು. ಅವರನ್ನು ನೋಡಿ "ಶ್ಯಾಮು ಎಲ್ಲಿ ?" ಕೇಳಿದಳು ಸರಸು.

"ಮನೆಯಲ್ಲಿ ಕೆಲಸವಿತ್ತು. ಅನಂತರ ಬರುತ್ತಾನಂತೆ."

"ನನ್ನಿಂದಾಗಿ ಎಲ್ಲರಿಗೂ ತೊಂದರೆಯಾಯ್ತು." ದುಗುಡದಿಂದ ಹೇಳಿದಳು ಸರಸು. ದನಿ ವಿಜಾತೀಯವಾಗಿತ್ತು.

"ಆದರೂ ಚಿಂತೆಯಿಲ್ಲ. ನೀನೊಮ್ಮೆ ಸರಿಹೋದರೆ ಸಾಕು." ಎಂದೆನ್ನುತ್ತ ಗೋಪಿ ಹಣೆ ಮುಟ್ಟಿ ನೋಡಿದ.

"ನೀವೆಲ್ಲ ಮದುವೆಗೆ ಹೋಗಿ ಬಂದಿರಿ. ನನಗೆ ಅದೃಷ್ಟವಿಲ್ಲ."

ಕಳೆಗುಂದಿದ ಕಣ್ಣುಗಳಲ್ಲಿ ದೀನಭಾವ ತಲೆದೋರಿತು."

"ಸುಂದರಿಯ ಮದುವೆಗೆ ಹೋದರಾಯ್ತು. ಆದಕ್ಕೇಕೆ ಯೋಚನೆ." ಎಂದ ಕುಮಾರ.

"ಏಕೆ ? ಕುಮಾರನದೇ ಇದೆಯಲ್ಲಾ ?" ಎಂದು ಗೋಪಿ ನಗೆ ಚಟಾಕಿ ಹಾರಿಸಿದ. ತುಟಿಗಳಲ್ಲಿ ಎಳೆ ಮಿನುಗಿತು.

"ಅದೂ ನಿಜವೆ."

"ನಿನ್ನನ್ನು ಬಿಟ್ಟು ನನ್ನ ಮದುವೆಯಾದೀತೆ ಸರಸೂ ?"

"ನಿನ್ನ ಮದುವೆಯಲ್ಲಿ ನಮಗೆ ಒಳ್ಳೆಯ ಉಡುಗೊರೆ ದೊರೆತರೇನೆ ಬರೋದು."

"ಓಹೋ ! ಅಗತ್ಯವಾಗಿ. ನೀನೂ ಮದುಮಗಳಾಗಿಯೇ ಬಾ. ಸೊಗಸಾಗಿ ಉಡುಗೊರೆ ಕೊಡುವೆ." ಎಂದು ತಮಾಷೆಗಾಗಿ ನುಡಿದರೂ

ಅರ್ಥಗರ್ಭಿತವಾಗಿತ್ತು ನುಡಿ. ದನಿ ಸರಾಗವಾಗಿ ಹೊರಬಿದ್ದಿದ್ದರೂ ಅನಂತರ ತನ್ನೊಳಗೆ ತಾನು ಅಡುಗುವಷ್ಟು ಲಜ್ಜಿತನಾದ ಕುಮಾರ.

"ಅದೆಲ್ಲಾ ಹಾಳಾಗಲಿ. ಆ ಕಾಲಕ್ಕೆ ಇನ್ನೇನಾಗಲಿದೆಯೋ?" ಜುಗುಪ್ಸೆಯಿಂದ ನುಡಿದಳು ಸರಸು. ಮಾತಿನ ಗೂಢಾರ್ಥವೂ ಹೊಳೆದಿರಲಿಲ್ಲವೇನೋ.. ಮುಖದಲ್ಲಿ ನೀರಸಭಾವ ತಲೆದೋರಿತು.

"ಅದೇಕೆ! ಅಷ್ಟು ಬೇಗ ಉತ್ಸಾಹವಿಳಿದು ಹೋಯಿತು?"

"ಅಲ್ಲದಿನ್ನೇನು? ನಾವೊಂದು ನೆನೆದರೆ ದೈವವೊಂದು ನೆನೆಯಿತು ಎಂಬಂತಾಗುತ್ತಿದೆ." ಎಂದವಳೇ ವಿಮಲೆಯನ್ನು ಕುರಿತು "ಸುಮಾ ಬಹಳ ಹೊತ್ತು ಇಲ್ಲಿ ಇದ್ದಳು. ನಾಳೆ ಬೆಳಿಗ್ಗೆ ಪುಸ್ತಕ ತಂದುಕೊಡುವುದಾಗಿ ಹೇಳಿದ್ದಾಳೆ. ಮತ್ತೇಕೆ ಅವಳಿಗೆ ತೊಂದರೆ? ನೀನೇ ತರಬಹುದು. ಇಂದೇ ಅವಳನ್ನು ಕೇಳು."

"ನೀನು ಪುಸ್ತಕದ ಗೊಡವೆಗೆ ಹೋಗಬೇಡ. ನಿನಗೀಗ ಪೂರ್ಣ ವಿಶ್ರಾಂತಿ ಬೇಕು." ಎಂದ ಕುಮಾರ.

"ಬೆಳಿಗ್ಗೆ ಸುಮಾ ಓದಿದ್ದಳು."

"ಪುಸ್ತಕ ಬಳಿಯಲ್ಲಿದ್ದರೆ ನಿನಗೆ ಓದುವ ಮನಸ್ಸಾಗುತ್ತದೆ."

"ನಾನಿಲ್ಲಿ ಕಾಲಹರಣ ಮಾಡುವುದು ಹೇಗೆ?" ಗೋಗರೆದಳು ಸರಸು ಮುಖಭಾವ ಸಪ್ಪೆಯಾಯಿತು.

"ಅಷ್ಟಕ್ಕೆಲ್ಲಾ ಬೇಸರಪಟ್ಟುಕೊಂಡರಾದೀತೆ? ನಾಲ್ಕು ದಿನ ಸೈರಿಸಿಕೊಳ್ಳಬೇಕು." ಕುಮಾರ ಹಣೆಯ ಮೇಲೆ ಕೈಯಿಟ್ಟು ಹೇಳಿದ. ಕರವಸ್ತ್ರದಿಂದ ಕಣ್ಣುಗಳನ್ನು ಒರಿಸಿಕೊಂಡು ಮಾತಿಲ್ಲದೆ ಮಲಗಿದಳು ಸರಸು. ಅತ್ತಿತ್ತ ಸರಿದು ಹೋಗಿದ್ದ ಕಂಬಳಿಯನ್ನು ಸರಿಪಡಿಸಿ ಗೋಪಿ ಹೇಳಿದ "ಸುಂದರಿ ನಿನ್ನನ್ನು ಬಹಳವಾಗಿ ಕೇಳಿದ್ದಾಳೆ. 'ಸರಸುಗೆ ಹೇಳು' ಎಂದು ಅನೇಕ ಬಾರಿ ಹೇಳಿಕೊಂಡಳು."

"ನನಗೆ ಹೋಗಲಿಕ್ಕಾಗಲಿಲ್ಲವಲ್ಲಾ?"

"ಬೇಸಿಗೆ ರಜೆಗೆ ಹೋದರಾಯ್ತು."

"ಆಗ ಹೋದರೇನು ಪ್ರಯೋಜನ? ಮದುವೆ ಮುಗಿದುಹೋಯ್ತು."

"ಪುನಃ ಅದೇ ಮಾತೇ?"

"ಈ ಸಲ ಹೋಗಲೇಬೇಕೆಂದು ತುಂಬ ಆಸೆ ಇತ್ತು."

"ಹಾಗೆ ಆಸೆಪಟ್ಟುಕೊಳ್ಳುವುದೇ ತಪ್ಪು" ಎಂದಳು ವಿಮಲೆ.

"ಹೋಗಲಿ ಬಿಡು, ನಿನಗೆ ಹೊಸ ಬಟ್ಟೆ ಇತ್ತು. ಹಾಯಾಗಿ ಹೋಗಿ ಬಂದೆ. ನನಗೆ ಅದೂ ಇರಲಿಲ್ಲ."

"ಈ ಸಲ ಹೊಲಿಗೆಯಲ್ಲಿ ಬಂದ ಹಣವನ್ನೆಲ್ಲಾ ನಿನಗಾಗಿ ಎತ್ತಿಟ್ಟಿದ್ದಾರೆ." ಎಂದ ಕುಮಾರ ಅತ್ಯಂತ ಆಸಕ್ತಿಯಿಂದ ಪುನಃ ಹೇಳಿದ "ಮೊದಲೊಮ್ಮೆ ಸುಧಾರಿಸಿಕೊ, ಅನಂತರ ನೀನು ಕೇಳಿದ್ದೆಲ್ಲಾ ಉಂಟು."

"ಸುಮ್ಮನೆ ಹೇಳಿದೆ ಅಷ್ಟೆ. ನನಗೇನೂ ಬೇಕಾಗಿಲ್ಲ. ನನಗಾಗಿ ಹಣ ನೀರಿನಂತೆ ಖರ್ಚಾಗುತ್ತಿದೆ."

ಮುಖದ ಮೇಲೆ ನೋವಿನ ಛಾಯೆ ಮುದ್ರೆಯೊತ್ತಿತು. ದೈನ್ಯದ ಮೂರ್ತಿಯಾಗಿ ಮಲಗಿದಳು.

"ಅದೆಷ್ಟೇ ಖರ್ಚಾಗಲಿ ಪರವಾಯಿಲ್ಲ." ಮಾತು ಮುಗಿಯುವುದರೊಳಗಾಗಿ ರವಿ ಆಗಮಿಸಿದ. ಬೆಳಗಿನಿಂದ ಕಾಲೇಜಿನಲ್ಲಿದ್ದು ದಣಿದಿದ್ದರೂ ಉಲ್ಲಸಿತನಾಗಿದ್ದ. ಬಂದವನೇ ಎಲ್ಲರನ್ನೂ ನೋಡಿ "ಓಹೋ, ಆಗಲೇ ಬಂದುಬಿಟ್ಟಿದ್ದೀರಿ ! ನಾಳೆ ಬರುತ್ತೀರೆಂದುಕೊಂಡಿದ್ದೆ." ಎಂದೆನ್ನುತ್ತ ಸರಸು ಹಣೆಯ ಮೇಲೆ ಕೈಯಿಟ್ಟು ಕೇಳಿದ "ಹೇಗಿದ್ದೀ, ಸರಸೂ ?"

"ಸ್ವಲ್ಪ ಆಯಾಸ."

ಹೇಳಲಾರದೆ ಹೇಳಿದಳು ಸರಸು. ರವಿಯನ್ನು ನೋಡುತ್ತಲೂ ಮುಖ ಅರಳಿತು. ಕಣ್ಣುಗಳು ಕಳೆಗೂಡಿಕೊಂಡುವು. ಅದೇ ನೇರಕ್ಕೆ ಆನಂದವೇ ಮೂರ್ತೀಭವಿಸಿ ಬಂದಂತೆ ರವಿ ಆನಂದ ಪ್ರಮತ್ತನಾಗಿ ನುಡಿದ "ಇಂದು ಒಂದು ಒಳ್ಳೆಯಸುದ್ದಿ ತಂದಿರುವೆ; ಏನಿರಬಹುದು ಊಹಿಸು ಸರಸೂ!"

ಒಡನೆ ಎಲ್ಲರ ಕಿವಿಗಳೂ ನಿಮಿರಿದುವು. ಮುಖಮಂಡಲಗಳಲ್ಲಿ ಆಶ್ಚರ್ಯ-ಕುತೂಹಲಗಳ ಮುದ್ರೆ ಅಚ್ಚೊತ್ತಿತು. ರವಿ ಎಲ್ಲರೆಡೆಗೂ ಮಿಂಚಿನ ನೋಟ ಚೆಲ್ಲಿ ಹುಬ್ಬು ಹಾರಿಸಿದ. ತುಟಿಗಳಲ್ಲಿ ಸುಹಾಸ ನಲಿದಾಡಿತು.

ಸರಸು ಅವನ ಕೈಯನ್ನು ತನ್ನ ಕ್ಷೀಣಿತ ಹಸ್ತದಿಂದ ಅದುಮಿ ಹಿಡಿದುಕೊಂಡು ಉತ್ಸುಕತೆಯಿಂದ ಕೇಳಿದಳು "ಏನು ರವಿ ?"

"ಊಹಿಸು....ನೋಡೋಣ."

"ಊಹೂ, ತಿಳಿಯಲಿಲ್ಲ."

ರವಿ ಇನ್ನೊಮ್ಮೆ ಸಂತಸಪೂರ್ಣ ದೃಷ್ಟಿಯನ್ನು ಬೀರಿ-"ಏನಿರಬಹುದು ಹೇಳಿ ?"

ಕಣ್ಣುಗಳ ಕಾಂತಿ ಸವಾಲಿನಂತೆ ಮಿಂಚುತ್ತಿತ್ತು.

ಎಲ್ಲರೂ ಪರಸ್ಪರ ಮುಖ ನೋಡಿಕೊಂಡರು. ಯಾರಿಗೂ ಅರ್ಥ ವಾಗಲಿಲ್ಲ. ಕುತೂಹಲ ಕ್ಷಣಕ್ಷಣಕ್ಕೂ ಹೆಚ್ಚುತ್ತಿತ್ತು. ಅತ್ಯಂತ ಕಾತರತೆ ಯಿಂದ ಎಲ್ಲರೂ ಒಂದೇ ಬಾರಿಗೆ ಕೇಳಿದರು "ಏನದು ಹೇಳು ರವಿ ?"

ರವಿ ನಗುಮುಖದಿಂದ ನಿಂತ.

ಆ ಮುಹೂರ್ತ ಅತ್ಯಂತ ಕೌತುಕಮಯವಾಗಿ ಸುತ್ತಮುತ್ತ ಎಲ್ಲರ ದನಿಗಳೂ ಮೇಲಿಂದ ಮೇಲೆ ಹೊರಬಿದ್ದುವು "ಹೇಳು ರವಿ ?"

ರವಿಯ ನೋಟ ಕುಮಾರನೆಡೆಗೆ ಸಿಡಿಯಿತು.

"ಗೊತ್ತಾಗಲಿಲ್ಲ. ನೀನೇ ಹೇಳಿಬಿಡು."

ಚಿಕ್ಕವರು ಉತ್ಸುಕತೆಯಿಂದ ಉತ್ತರವನ್ನು ನಿರೀಕ್ಷಿಸಿದರು.

"ಬಾಬೂಜಿ ನನ್ನನ್ನು ಬರಮಾಡಿಕೊಂಡಿದ್ದರು. ಅಪ್ಪನ ಮೇಲಿನ ಆಪಾದನೆ ಬಿಡುಗಡೆ ಹೊಂದಿತು. ನಾವು ಇದುವರೆಗೆ ಕಟ್ಟಿರುವ ಹಣ ಹಿಂದಿರುಗಿ ಬರುತ್ತೆ !"

"ಓ ... ಇಷ್ಟು ಬೇಗನೆ ಇತ್ಯರ್ಥವಾಯಿತೇ ? .. ಆಶ್ಚರ್ಯ !"

"ದೊಡ್ಡ ಬಾಬೂಜಿ ಈಗ ಇಲ್ಲಿಯೇ ಇದ್ದಾರೆ. ಅವರು ಕೈಹಾಕಿದರೆ ಇತ್ಯರ್ಥವಾಗಲೇ ಬೇಕಲ್ಲ ? ರಂಗಣ್ಣ ಸತ್ಯವ್ರತರನ್ನು ತನಿಖೆಗೆಳಪಡಿಸಿದ್ದಾರೆ. ಈ ಸಲ ಅವರ ಅಂಗಡಿಯಲ್ಲಿ ಎಂಟು ಸಾವಿರಕ್ಕೂ ಮಿಕ್ಕಿ ಹಣ ಕಳುವಾಗಿದೆ ಯಂತೆ. ಇಬ್ಬರೂ ತಪ್ಪು ಒಪ್ಪಿಕೊಂಡಿದ್ದಾರೆ. ರಂಗಣ್ಣನ ನೇತೃತ್ವದಲ್ಲೇ ಹಣ ಕಳುವಾದುದು...ಅವನು ಅಪ್ಪನ ಅತ್ಯಂತ ಆಪ್ತ ಸ್ನೇಹಿತನಾಗಿದ್ದ. ಇಬ್ಬರೂ ಬಹಳ ಹೊಂದಾಣಿಕೆಯನ್ನು ಪಡೆದುಕೊಂಡಿದ್ದರು. ನೋಡು ! ಅಂತಹವನೇ ಈ ಕೆಲಸ ಮಾಡಿದ್ದಾನಂದರೆ ಯಾರಾದರೂ ನಂಬಿಯಾರೇ ? ಬಾಬೂಜಿಯವರಿಗೇ ಅದು ಎಲ್ಲಿಲ್ಲದ ಆಶ್ಚರ್ಯ ! ಹಣ ಎಲ್ಲಕ್ಕೂ ತಿಲಾರ್ಪಣ ಕೊಡುತ್ತದೆ...ನನ್ನ ಬಗ್ಗೆ ಬಾಬೂಜಿ ಬಹಳ ಆದರ ತೋರಿ "ಆಗಿ ಹೋದುದನ್ನು ಮನಸದಲ್ಲಿಟ್ಟುಕೊಳ್ಳಬೇಡಪ್ಪಾ !" ಎಂದರು. ನಮ್ಮ

ಹಣಕ್ಕೆ ಇಲ್ಲಿವರೆಗಿನ ಬಡ್ಡಿಯನ್ನು ಕೂಡಿಸಿಕೊಡುತ್ತಾರೆ. ಹೆಚ್ಚು ಕಡಿಮೆ ಎಂಟು ಸಾವಿರ ರೂಪಾಯಿ ಬರುತ್ತದೆ. ಈಗ ಹೇಳು, ಸರಸೂ! ನಿನಗೆಷ್ಟು ಬಟ್ಟೆ ಬೇಕು ?" ದನಿ ಹೆಜ್ಜೇನಿನಂತೆ ಹರಿದು ಬಂತು.

"ಈಗ ಅದನ್ನೇ ಹೇಳುತ್ತಿದ್ದಳು." ಎಂದ ಕುಮಾರ ಪುನಃ ಉದ್ವೇಗ ದಿಂದ ಹೇಳಿದ "ರವೀ, ದೇವರು ದೊಡ್ಡವನು ! ರಂಗಣ್ಣ ಎಂತಹ ಕೀಳು ಮನುಷ್ಯ ? ಅನಾಥ ಮಕ್ಕಳ ಮೇಲೆ ಇಂತಹ ಸಂಚು ಹೂಡಲು ಹೇಗೆ ಮನಸ್ಸು ಬಂದಿತು ? ಎಂತಹ ಅತ್ಯಾಚಾರ ? ಈ ಮೋಸ ತನಗೇ ಉರು ಳಾದೀತೆಂದು ಅವನು ಯೋಚಿಸಿರಲಿಲ್ಲ." ಕೋಪ ಸಂತೋಷಗಳೆರಡೂ ಏಕಕಾಲದಲ್ಲಿ ಹೊರಹೊಮ್ಮಿದುವು. ಗೋಪಿ ವಿಮಲೆಯರ ಮುಖ ಹೂವಿ ನಂತೆ ಅರಳಿತು. ಎವೆಯಿಕ್ಕದೆ ರವಿಯನ್ನು ನೋಡತೊಡಗಿದರು.

"ಇದಾದುದು ಒಳ್ಳೆಯದೇ ಆಯಿತು ಎನ್ನಿಸುತ್ತದೆ. ಬಾಡಿಗೆಯ ಹಣ ಹಾಯಾಗಿ ಬರುತ್ತಿದ್ದಿದ್ದರೆ ನಾವು ದುಡಿದು ಓದುವ ಯೋಚನೆ ಮಾಡುತ್ತಿರಲಿಲ್ಲವೇನೋ." ಗೋಪಿ ನಗುನಗುತ್ತಾ ಹೇಳಿದ.

"ಅದೇನೋ ಯಥಾರ್ಥವಾದ ಮಾತು." ವಿಮಲೆ ಕಣ್ಣರಳಿಸಿದಳು.

"ಟಾನಿಕ್ಕು ಮತ್ತು ಹಣ್ಣುಗಳನ್ನು ತಂದರೆ ಬಟ್ಟೆಗಾಗಿ ಕೂಡಿಟ್ಟ ಹಣವೆಲ್ಲಾ ಆಗಿ ಹೋಯಿತು ಎಂದು ಸರಸೂಗೆ ಅಸಮಾಧಾನ. ನನಗೇನೂ ಆಗಿಲ್ಲ. ವೃಥಾ ಇದೆಲ್ಲಾ ಏಕೆ ಎನ್ನುತ್ತಾಳೆ." ಎಂದು ಕುಮಾರನೊಂದಿಗೆ ರವಿ ಹೇಳಿದ.

"ಸರಿ, ಸರಿ. ಮುಖ್ಯವಾಗಿ ಆರೋಗ್ಯಬೇಕು. ಆರೋಗ್ಯವಿಲ್ಲದೆ ಬಟ್ಟೆಗಳಿದ್ದೇನು ಪ್ರಯೋಜನ ?" ಎಂದ ಕುಮಾರ ಪುನಃ ಕೇಳಿದ "ದೊಡ್ಡ ಬಾಬೂಜಿ ಎಂದು ಸಿಕ್ಕಿದ್ದರು?"

"ಇಂದೇ, ಅವರಿಗೆ ನನ್ನ ಗುರುತು ಹತ್ತಲಿಲ್ಲ. ನಾನೇ ಹೇಳಿಕೊಂಡ ಮೇಲೆ ಬಳಿಯಲ್ಲಿ ಕೂರಿಸಿಕೊಂಡು ಮಾತಾಡಿದರು. ಇಂದು ಬೆಳಿಗ್ಗೆ ಕಾಲೇಜಿಗೆ ಹೋಗುವಾಗ ಅವರ ಮನೆಗೆ ಹೋಗಿದ್ದೆ. ಇನ್ನೂ ಅಮ್ಮನಿಗೆ ಸುದ್ದಿ ಮುಟ್ಟಿಸಲಾಗಲಿಲ್ಲ. ನಾನು ಮೆಡಿಕಲ್ ಕಾಲೇಜಿನನಲ್ಲಿ ಓದುತ್ತಿರುವು ದನ್ನು ಕೇಳಿ ತುಂಬ ಸಂತೋಷಪಟ್ಟರು. ನಮ್ಮ ತಂದೆ ಕಾಣೆಯಾದಾಗಿನಿಂದ ಇದುವರೆಗಿನ ಆಗು-ಹೋಗುಗಳನ್ನು ಕೇಳಿ ನೊಂದುಕೊಂಡರು. ಚಿಕ್ಕ

ಬಾಬೂಜಿಯು ಬಗ್ಗೆ ಮಾತಾಡಿ ದುಡುಕು ಸ್ವಭಾವದವನು ಅವಸರದಲ್ಲಿ ಏನಾದರೂ ತಪ್ಪು ಮಾಡುತ್ತಾನೆ. ಯೋಚಿಸಿ ಮಾಡಿದ್ದರೆ ಇಂಥ ಅಕೃತ್ಯಗಳು ನಡೆಯುತ್ತಿರಲಿಲ್ಲ. ನಿನ್ನ ಹಣವನ್ನು ಎಂದು ಬೇಕಾದರೂ ತೆಗೆದುಕೊಂಡು ಹೋಗು. ಆಗಿಹೋದುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಡ ಎಂದರು. ಆಗಲಿ ಇನ್ನೊಮ್ಮೆ ಬರುವೆ ಈಗ ಕಾಲೇಜಿಗೆ ಹೋಗುತ್ತಿದ್ದೇನೆ ಎಂದು ಹೇಳಿ ಬಂದೆ."

"ಚಿಕ್ಕ ಬಾಬೂಜಿ ಶುದ್ಧ ಒರಟ; ದೊಡ್ಡ ಬಾಬೂಜಿಯು ರೀತಿಯೇ ಬೇರೆ."

"ನಿಜ ಕುಮಾರ್, ಬಲು ಆದರದಿಂದ ಮಾತಾಡಿದರು. ಈಗ ಅವರ ಆರೋಗ್ಯ ಬಹಳ ಸುಧಾರಿಸಿದೆ" ಎಂದ ರವಿ ಅಮಿತಾನಂದದಿಂದ ಪುನಃ ಮುಂದುವರಿದ "ಈ ಸಲ ಮದುವೆಗೆ ತಾತ ಸಾಲ ಮಾಡಿದ್ದಾರೆ. ಅವರು ಅಂಗಡಿಗಾಗಿ ಖರ್ಚು ಮಾಡಿದ ಸಾವಿರ ರೂಪಾಯಿಗಳನ್ನು ಈಗಲೇ ಹಿಂದಿರುಗಿಸಿಬಿಡುವೆ. ಅವರು ಸಾಲದಿಂದ ಮುಕ್ತಿ ಪಡೆಯಲಿ. ಉಳಿದ ಹಣದಲ್ಲಿ ನಮ್ಮ ಮನೆಯ ಮುಂದಿನ ಜಗುಲಿಗೆ ಹೊಂದಿಕೊಂಡಂತೆ ಎರಡು ಕೊಠಡಿಗಳನ್ನು ಕಟ್ಟಿಸಿಕೊಂಡರೆ ನಮಗೆ ಓದಲು ಅನುಕೂಲವಾಗುತ್ತದೆ. ಆನಂದಣ್ಣ ಎಷ್ಟು ಕಾಲವಾದರೂ ಈ ಮನೆಯಲ್ಲಿರಲಿ. ಅವನ್ನು ಕದಲಿಸಬೇಕಾಗಿಲ್ಲ." ಎಂದ ರವಿಯ ದನಿಯಲ್ಲಿ ಸಂತಸದ ಹೊನಲು ಹರಿಯುತ್ತಿತ್ತು. ಮಾತು ಕೇಳಿ ಎಲ್ಲರ ಮುಖದ ಮೇಲೂ ವಿಜಯದ ತೆರೆ ಲಾಸ್ಯವಾಡಿತು.

"ದೇವರೇ ಸಹಾಯ ಮಾಡಿದ. ಅಮ್ಮ ನಿನ್ನೆಯೆಲ್ಲಾ ತಾತನಿಗೆ ಹಣ ಹಿಂದಿರುಗಿಸಲಾಗಲಿಲ್ಲವೆಂದು ಮರುಗಿದರು." ಕಳಾಹೀನವಾದ ಮುಖದಲ್ಲಿ ಎಳೆ ನಗುವನ್ನು ಪಸರಿಸಿ ನುಡಿದಳು ಸರಸು.

"ನಿನಗೆಷ್ಟು ಸೀರೆ ಬೇಕು ?" ರವಿ ಒಲುಮೆಯಿಂದ ಕೇಳಿದ.

"ಒಮ್ಮೆ ಪಾಸಿಯಾಗಲಿ, ನಂತರ ಅದೆಲ್ಲ." ಉದಾಶೀನದಿಂದ ನುಡಿದಳು ಸರಸು.

"ಹೋಗಲಿ, ನಿನಗೆಷ್ಟು ಹಣಬೇಕೆಂಬುದನ್ನಾದರೂ ಹೇಳು."

"ನನಗೆ ಏನೂ ಬೇಕಿಲ್ಲ ರವೀ, ಸುಮ್ಮನೆ ಹಾಗೆಂದೆ. ನೀನು ಬೆಳಿಗ್ಗೆ ಮನೆ ಬಿಟ್ಟಿದ್ದೀ. ಊಟವಿಲ್ಲ, ತಿಂಡಿಯಿಲ್ಲ. ಮುಖವೆಲ್ಲ ಬಾಡಿದೆ. ಮನೆಗೆ

ಹೋಗಿ ದಣಿವಾರಿಸಿಕೊ. ಅಮ್ಮನಿಗೂ ಬೇಗನೆ ಸುದ್ದಿ ಮುಟ್ಟಿಸಿ ದಂತಾಗುತ್ತದೆ."

"ನಿಜ ಸರಸೂ, ಬೆಳಿಗ್ಗೆ ಸುದ್ದಿ ತಿಳಿದಾಗ ಒಮ್ಮೆ ಮನೆಗೆ ಹೋಗಿ ತಿಳಿಸಿ ಬರಲೆ ಎಂದೆನಿಸಿತು. ಆದರೆ ಇಂದು ಡಾ॥ ಜೀವರಾಜರ ಲೆಕ್ಚರ್ ಇತ್ತು. ಸರಿ, ಆ ಯೋಚನೆಯನ್ನೇ ಬಿಟ್ಟುಬಿಟ್ಟೆ. ನಿನ್ನ ಅಳುಮೋರೆ ಯನ್ನು ನೋಡಿದರೆ ಈಗಲೂ ಬೇಗನೆ ಹೋಗಲು ಮನಸ್ಸು ಬರುವುದಿಲ್ಲ."

"ನನಗೇನೂ ಬೇಸರವಿಲ್ಲ." ಮಾತು ಮುಗಿಯುವುದರೊಳಗಾಗಿ ಕಣ್ಣಂಚಿನಲ್ಲಿ ಹನಿಗೂಡಿ ಮುಖ ಕೆಂಪು ತಳೆಯಿತು.

"ಇಷ್ಟೊಂದು ಅಧೀರಳಾದರೆ ಹೇಗೆ ಹೇಳು?" ಮುಖವನ್ನು ನೇವರಿ ಸುತ್ತಾ ರವಿ ಹೇಳಿದ. "ಇಂತಹ ತೊಂದರೆಗಳು ಎಲ್ಲರಿಗೂ ಬರುತ್ತವೆ. ನಿನಗೆ ಮಾತ್ರವಲ್ಲ. ಏನೇ ಬಂದರೂ ಸಹಿಸಿಕೊಳ್ಳುವ ತಾಳ್ಮೆ ಬೇಕು."

"ನನಗೇನೂ ಭಯವಿಲ್ಲ. ನನ್ನಿಂದ ಎಲ್ಲರಿಗೂ ತೊಂದರೆಯಾದುದೇ ಬೇಜಾರು ದೇವರಿಗೆ ನಾನು ಚೆನ್ನಾಗಿರುವುದು ಇಷ್ಟವಿಲ್ಲ."

ಹಾಗೆಂದವರುಂಟೇ? ಏನೋ ತೊಂದರೆಗಳು ಬರುತ್ತವೆ. ಸುಖದ ಹಿಂದೆ ಕಷ್ಟವಿದ್ದೇ ಇದೆ. ಇದುವರೆವಿಗೆ ನೀನು ಆರೋಗ್ಯವಾಗಿರಲಿಲ್ಲವೇ? ಅದನ್ನಾಗ ಬೇಡವೆಂದೆಯಾ ? ಸುಖ ದುಃಖಗಳನ್ನು ಸಮತೂಕದಿಂದ ನೋಡಬೇಕು ಸರಸೂ." ಎಂದ ರವಿಯ ದನಿಯಲ್ಲಿ ಒಲುಮೆಯ ಚಿಲುಮೆ ಹರಿಯುತ್ತಿತ್ತು. ಅತ್ಯಂತ ಸ್ನೇಹಪೂರ್ವಕವಾಗಿ ನುಡಿದ.

"ನನ್ನ ಮೊರೆ ದೇವರಿಗೆ ಮುಟ್ಟಲಿಲ್ಲ ರವಿ."

"ಮುಟ್ಟಿಯೇ ಮುಟ್ಟುತ್ತೆ."

"ಎಂದಿಗೋ ?"

"ಆತುರ ಪಡಬೇಡ. ಕೆಲವೇ ದಿನಗಳಲ್ಲಿ ಸರಿಹೋಗುತ್ತಿ."

"ಆತುರ ಪಟ್ಟುದುದರಿಂದಲೇ ಪುನಃ ಮರುಕಳಿಸಿದ್ದು." ಎಂದ ಕುಮಾರ.

"ನಾನು ಮಲಗಿರಲಾರೆ."

"ಹಾಗೆಂದರೆ ಹೇಗೆ ? ಸ್ವಲ್ಪ ದಿನ ತಾನೇ ?"

ಅವಳನ್ನು ಸಂತೈಸಿ, ಕಂಬನಿಯನ್ನು ಕರವಸ್ತ್ರದಿಂದ ಒರಿಸಿ ಮನೆಗೆ

ಹೋಗಿ ಬರುವುದಾಗಿ ಹೇಳಿ, ಎಲ್ಲರನ್ನೂ ಅಲ್ಲಿಯೇ ಬಿಟ್ಟು ರವಿ ಮನೆಯ ಕಡೆ ಹೊರಟ. ಪ್ರಶಸ್ತ ಹೆಜ್ಜೆಗಳ ಗತಿ ತೀವ್ರವಾಗಿದ್ದರೂ ಆ ಹಾದಿಯನ್ನು ಕಳೆದು ಮನೆ ಮುಟ್ಟುವಷ್ಟರಲ್ಲಿ ಇಳಿ ಹೊತ್ತಾಗಿತ್ತು. ನೋಡಿದರೆ ಮನೆಯಲ್ಲಿ ಯಾರೂ ಇರಲಿಲ್ಲ. ಬಾಗಿಲಲ್ಲಿ ಬೀಗ ಜೋಲಾಡುತ್ತಿತ್ತು. ರವಿ ಆನಂದನಲ್ಲಿಗೆ ಹೋಗಿ ತಾಯಿ ಎಲ್ಲೆಂದು ಕೇಳಿದ. ರತ್ನ ಬೀಗದ ಕೈ ಸಮೇತ ಹೊರಬಂದು ಹೇಳಿದಳು,

"ಪುಟ್ಟಮ್ಮ ಬಂದು ಸೊಸೆಗೆ ಹೆರಿಗೆ ನೋವು ಶುರುವಾಗಿದೆಯೆಂದು ಕರೆದುಕೊಂಡು ಹೋದರು. ಅವರಾಗಲೇ ಆಸ್ಪತ್ರೆಗೆ ಹೋಗಿರುತ್ತಾರೆ. ಜೊತೆಗೆ ಶ್ಯಾಮು ಹೋಗಿದ್ದಾನೆ."

"ಓ... ಸರಿ."

ರವಿ ಬೀಗದ ಕೈಯೊಡನೆ ಹಿಂದಿರುಗಿದ. ಅದೇ ವೇಳೆಗೆ ಗೋಪಾಲಕ ಹಸು ಮತ್ತು ಕರುಗಳನ್ನು ಹೊಡೆದುಕೊಂಡು ಬಂದ. ಹಸುರು ಹುಲ್ಲು ಮತ್ತು ತಿಂಡಿಯ ಆಸೆಗೆ ಅವು ಓಡಿ ಬರುವುದನ್ನು ನೋಡುತ್ತಲೂ ಸಂತಸ ಉದಿಸಿತು. ಹಿಂದೆಯೇ ಹೋಗಿ ಅವುಗಳ ಹುಲ್ಲು-ನೀರಿನ ವ್ಯವಸ್ಥೆಯನ್ನು ನೋಡಿಕೊಂಡು ತಿಂಡಿ ಕೊಡಿಸಿ ಒಳ ಬಂದ. ಇನ್ನಷ್ಟು ಹೊತ್ತಿನಲ್ಲಿ ಗೋಪಾಲಕ ಹಾಲನ್ನು ಕರೆದು ಒಳಗಡೆ ತಂದುಕೊಟ್ಟು ಮಿಕ್ಕಿದುದನ್ನು ತೆಗೆದುಕೊಂಡು ಹೋದ. ಶಿವೆ ಒಲೆಯ ಬಳಿ ಕಾಫಿ ಉಪ್ಪಿಟ್ಟು ತಯಾರಿಸಿಟ್ಟಿದ್ದಳು. ಮುಖ ಮಜ್ಜನ ಮಾಡಿ ತಿಂಡಿ ತಿಂದು ದಣಿವಾರಿಸಿಕೊಂಡ ರವಿ. ತಾಯಿಗೆ ರಾತ್ರಿಯ ಡ್ಯೂಟಿ ಇದ್ದುದರಿಂದ ಬಟ್ಟೆ ಬದಲಿಸಲಾದರೂ ಬರಬಹುದೆಂದೂಹಿಸಿ ಸ್ವಲ್ಪ ಹೊತ್ತು ಓದಿನಲ್ಲಿ ನಿಮಗ್ನನಾದ. ಆದರೆ ಎಷ್ಟೇ ಪ್ರಯತ್ನಿಸಿದರೂ ಮನವನ್ನು ಪುಸ್ತಕದಲ್ಲಿ ಕೇಂದ್ರೀಕರಿಸಲಾಗಲಿಲ್ಲ. ಒಂದೆಡೆ ಆಪಾದನೆಯಿಂದ ಅನಿರೀಕ್ಷಿತ ವಿಮುಕ್ತಿ...ಇನ್ನೊಂದೆಡೆ ಜ್ವರ ಪೀಡಿತಳಾದ ಸುಮ ಸದೃಶ ಸರಸು...ಮನದಲೆಗಳನ್ನು ಮುತ್ತಿದ್ದು ಅಂತರ್ನಿಹಿತ ವಿಚಾರ ತರಂಗಗಳು ಏರುಪೇರಾಗಿದ್ದುವು. ಎದ್ದು ಹೊರಗಡೆ ಹೋದ. ಪಕ್ಕದ ನಿವೇಶನದಲ್ಲಿ ಕಟ್ಟುತ್ತಿದ್ದ ಅನಾಥ ವಿದ್ಯಾಲಯ ಅರೆಬರೆಯಾಗಿ ನಿಂತಿತ್ತು. ಅತ್ತಲೇ ಹೆಜ್ಜೆ ತೆಗೆದ. ತಣ್ಣನೆಯ ತಂಗಾಳಿ ಮುಖ ಮೈಗಳನ್ನು ಮುದ್ದಿಟ್ಟು ಹೋಯಿತು. ತಲೆದೂಗುವ ಗಿಡಮರಗಳ.

ಮರ್ಮರ ಸದ್ದು-ಸಂಧ್ಯಾರಾಗವನ್ನು ಅನುನಯದಿಂದುಲಿಯುವ ಪಕ್ಷಿಗಳ ಮಧುರ ಕಂಠ ಕರ್ಣಪಟಲಗಳನ್ನು ಮುತ್ತುತ್ತಿತ್ತು. ಹಾಗೇ ಶಾಲೆಯ ಕಟ್ಟಡವನ್ನು ಒಂದು ಸುತ್ತು ಹಾಕಿದ. ಕೆಲಸಗಾರರು ಮನೆಗೆ ಹೋಗಿದ್ದರು. ಕಾವಲುಗಾರ ಸಲಕರಣೆಗಳನ್ನು ಜೋಡಿಸುವುದರಲ್ಲಿದ್ದ. ಕಟ್ಟಡ ಶಕ್ತಿಗೆ ಮೀರಿ ಎದ್ದಿತ್ತು. ಗಾಳಿ ಬೆಳಕು ಸಮೃದ್ಧಿಯಾಗಿ ಬರುವಂತಹ ಕಿಟಕಿಗಳು, ವಿಶಾಲವಾದ ಕೊಠಡಿಗಳು, ಮಧ್ಯೆ ಸಭಾಂಗಣವಿದ್ದ ಕಟ್ಟಡ ಸಾಕಷ್ಟು ವಿಶಾಲವಾಗಿತ್ತು. ಸುತ್ತುಮುತ್ತಲೂ ಆಡಲು ಅನುಕೂಲವಾದ ಅಂಗಳ.... ಕೊನೆಯ ಪಕ್ಷ ಐವತ್ತು ಅರವತ್ತು ಮಂದಿ ಮಕ್ಕಳಿಗೆ ಆಶ್ರಯ ನೀಡುವಷ್ಟು ಸ್ಥಳಾವಕಾಶ....ಒಮ್ಮೆಲೇ ತನುಮನಗಳು ತುಂಬಿ ಬಂದುವು.

ಈ ಎಲ್ಲಕ್ಕೂ ಮುಕ್ತ ಹಸ್ತದಿಂದ ಸಹಾಯ ಮಾಡಿದ ಹಿರಿಯ ವ್ಯಕ್ತಿಗಳಿಬ್ಬರನ್ನು ಮನದಲ್ಲಿಯೇ ವಂದಿಸಿದ ರವಿ. ಹೆಗಲನ್ನೇರಿದ ಹಿರಿಯ ಹೊರೆ ಚಿದಾಕಾಶದಲ್ಲಿ ಯೋಚನೆಯ ತೆರೆಗಳನ್ನು ಹರಡುತ್ತಿತ್ತು. ಅದರ ಸಾಧಕ-ಬಾಧಕಗಳನ್ನು ಕುರಿತು ಮನದಲ್ಲೇ ತರ್ಕಿಸುತ್ತ ಅಲ್ಲಲ್ಲೇ ಸ್ವಲ್ಪ ಹೊತ್ತು ಶತಪಥ ತುಳಿದ. ವಿಚಾರ ತರಂಗಗಳ ಅವಲೋಕನದಲ್ಲಿ ಹೊತ್ತು ಉರುಳಿದುದರ ಪರಿವೆಯೂ ಸಹ ಗಮನಕ್ಕೆ ಬರಲಿಲ್ಲ. ಹಾಗೆ ಅದೆಷ್ಟು ಹೊತ್ತು ಉರುಳಿತೋ....ಕಣ್ಣುಗಳನ್ನು ಕತ್ತಲೆ ತಿವಿದಾಗಲೇ ಇತ್ತ ಗಮನ. ಕತ್ತೆತ್ತಿ ದೂರದೂರ ಗಗನವನ್ನು ನಿಟ್ಟಿಸಿದ. ಧ್ರುವತಾರೆ ಉಜ್ವಲವಾಗಿ ಬೆಳಗುತ್ತಿತ್ತು.

೩೩

ಜೋಗಿ ಹಳ್ಳಿಯ ಹಸುರುಕ್ಕುವ ಬನಶ್ರೀಯಲ್ಲಿ ದಕ್ಷಿಣದ ಕಡೆಯ ತೋಪು ಬಲು ಹುಲುಸಾದ ಜಮೀನು. ಅದರ ಮೇಲೆ ಕಣ್ಣು ಹಾಯಿಸಿದ ಪಟೇಲನಿಗೆ ಬಾಯಿಯಲ್ಲಿ ನೀರೂರಿತು. ಅದು ಮನವಿದಾರರ ಕೈ ಸೇರದಂತೆ ಸರ್ವ ಪ್ರಯತ್ನಗಳನ್ನೂ ಮಾಡತೊಡಗಿದ. ಸುಂಕಿಕೆರೆಯ ನಂಜಪ್ಪನನ್ನು ಮುಂದಿಟ್ಟುಕೊಂಡು ಈ ಜಮೀನು ಊರಿನ ಗೋಮಾಳವೆಂದು ವಾದ ಹೂಡಿ ತನ್ನ ಪರವಾಗಿ ಒಂದು ದಂಡನ್ನೇ ನಿರ್ಮಾಣ ಮಾಡಿದ.

ಊರೊಳಗೆ ವಾದ ವಿವಾದಗಳ ಮೊಳಕೆ ತಲೆಯೆತ್ತಿತು. ಅಸಂಬದ್ಧ ಹಗರಣದಿಂದ ಚಂದುವಿನ ಕಾಲವೆಲ್ಲಾ ಅನ್ಯಥಾ ವ್ಯಯವಾಗಹತ್ತಿತು. ಡೆಪ್ಯುಟಿ ಕಮಿಷನ್ನರು ಸ್ಥಳ ಪರಿಶೀಲನೆಗಾಗಿ ಬರಲಿದ್ದಾಗ ನಾಗಪ್ಪಯ್ಯ ತನ್ನ ವರ ದನಕರುಗಳನ್ನು ಅಲ್ಲಿಯೆ ಮೇಯಲು ಏರ್ಪಾಡು ಮಾಡಿದ್ದ. ಡೆಪ್ಯುಟಿ ಕಮಿಷನ್ನರು ಬರುವ ಸುದ್ದಿಯನ್ನು ಗೆಳೆಯರ ಬಳಗಕ್ಕೆ ಮುಟ್ಟದಂತೆ ಸಂಚು ಹೂಡಿದ್ದುದರಿಂದ ಸುದ್ದಿ ತಡವಾಗಿ ಮುಟ್ಟಿತು. ಅಂದಿನ ಕೆಲವು ಅನಾನುಕೂಲತೆಗಳಿಂದಾಗಿ ಡೆಪ್ಯುಟಿ ಕಮಿಷನ್ನರು ಬರಲಿಲ್ಲ. ಸರ್ವ ಸನ್ನಾಹ ದಲ್ಲಿದ್ದ ಪಟೇಲ್ ನಾಗಪ್ಪಯ್ಯನಿಗೆ ನಿರಾಸೆಯುಂಟಾಯಿತು.

ಕಿರಿಯರ ಬಳಗದ ಬಾಲಕರು ಅಡ್ಡಾಡುತ್ತಾ ಆ ಕಡೆ ಹೋದಾಗ ಅನಿರೀಕ್ಷಿತವಾಗಿ ನಾಗಪ್ಪಯ್ಯನನ್ನು ಕಂಡು ಅಚ್ಚರಿಗೊಂಡರು. ದನಕರುಗಳೂ ಅಲ್ಲಿಯೆ ಮೇಯುತ್ತಿದ್ದುವು. ಜೊತೆಗೆ ನಾಗಪ್ಪಯ್ಯನ ಹಿಂಬಾಲಕರೂ ಅಲ್ಲಿ ಬಹುಮಂದಿ ನೆರೆದಿದ್ದರು. ಹುಡುಗರಿಗೆ ಇದರ ಸಂಚು ತಕ್ಷಣ ಹೊಳೆಯಿತು. ಪುಟ್ಟಗಂಗ ಕಿಡಿಕಿಡಿಯಾದ. ಆದರೆ ಅವರಿರುವುದು ಬಹುಮಂದಿ. ಬಳಗದ ಹಿರಿಯ ತರುಣರಾರೂ ಇರದಿದ್ದುದರಿಂದ ಏನು ಮಾಡುವುದೆಂದು ಪುಟ್ಟಗಂಗ ಕ್ಷಣಕಾಲ ಯೋಚಿಸಿದ. ಕಟ್ಟಿಗೆಗಾಗಿ ಹೋಗಿದ್ದ ನಾಲ್ಕಾರು ಮಂದಿ ಬಾಲಕರು ಕಟ್ಟಿಗೆಯ ಹೊರೆಯೊಡನೆ ಅದೇ ದಾರಿಯಲ್ಲಿ ಬರುತ್ತಿದ್ದು ದನ್ನು ಕಿಟ್ಟು ದೂರದಿಂದ ನೋಡಿ ಹೇಳಿದ. "ಅಲ್ಲಿ ನೋಡಿ, ನಮ್ಮವರು

ಇನ್ನೂ ನಾಲ್ಕಾರು ಮಂದಿ ಬರುತ್ತಿದ್ದಾರೆ!"

ಸಂತಸದಿಂದ ಮುಖ ಅರಳಿತು. ತಕ್ಷಣ ಅವರನ್ನು ಇತ್ತಲೇ ಬರುವಂತೆ ಪುಟ್ಟಗಂಗ ಕೂಗಿ ಕರೆದ. ಊರೊಳಗಿನ ದಾರಿಯನ್ನು ಬಿಟ್ಟು ಹುಡುಗರು ಹೊರೆಯ ಸಹಿತ ಇತ್ತಲೇ ಬಂದರು. ಎಲ್ಲರೂ ಒಟ್ಟುಗೂಡಿ ಕಟ್ಟಿಗೆಯ ತುಂಡುಗಳೊಡನೆ ಬಂಡೆದ್ದು ಬಂದುದನ್ನು ನೋಡಿ ನಾಗಪ್ಪಯ್ಯ ಸ್ವಲ್ಪ ಹೆದರಿದರೂ ಸಾವರಿಸಿಕೊಂಡ. ಪುಟ್ಟಗಂಗ ಏರಿದ ದನಿಯಲ್ಲಿ ಹೇಳಿದ. "ನೀವು ಈ ಸ್ಥಳ ಬಿಟ್ಟು ಹೊರಡುತ್ತೀರೋ ಇಲ್ಲವೊ ?" ಕೋಪದಿಂದ ದನಿ ಕಂಪಿಸಿತು. ಕಣ್ಣುಗಳು ಕ್ರೂರವಾದುವು. ಕೆನ್ನೆಗಳು ರಂಗೇರಿದುವು.

ಸುಂಟಿಕೆರೆ ನಂಜಪ್ಪ ಎರಡು ಹೆಜ್ಜೆ ಮುಂದೆ ಬಂದು ಕೆಂಗಣ್ಣಿನಿಂದ ನೋಡುತ್ತಾ ರೋಷದಿಂದ ಗುಡುಗಿದ. "ನಮ್ಮನ್ನು ಹೆದರಿಸುವಷ್ಟು ಶಕ್ತಿ ಬಂತೋ ನಿನಗೆ ?"

ಮಾತು ಹೊರಬಿತ್ತೋ ಇಲ್ಲವೋ ಹತ್ತಾರು ಕಟ್ಟಿಗೆಗಳು ಭರ್ರನೆ ಬಳಿಗೆ ಬಂದು ಬಿದ್ದುವು. ಇನ್ನು ಮಾತಾಡಿದರೆ ಏಟು ಬೀಳುವುದು ಖಚಿತ ವೆಂದು ತಿಳಿದೊಡನೆಯೇ ಒಬ್ಬೊಬ್ಬರಾಗಿ ಓಟ ಕಿತ್ತರು. ಹುಡುಗರು ದನಕರುಗಳನ್ನೂ ಅಲ್ಲಿಂದ ಹೊಡೆದು ಅಟ್ಟಿದರು.

ಪುಟ್ಟಗಂಗನ ನೇತೃತ್ವದಲ್ಲಿ ನಡೆದ ಪುಂಡು ಊರೆಲ್ಲಾ ಕಿಚ್ಚಿನಂತೆ ಹಬ್ಬಿ ಬಳಗದ ಹಿರಿಯ ತರುಣರಿಗೆ ನೋವನ್ನುಂಟುಮಾಡಿತು. ಮರುದಿನ ಚಂದು ಬಂದ ಮೇಲೆ ವಿಷಯ ತಿಳಿದು ಹುಡುಗರನ್ನು ಆಕ್ಷೇಪಿಸಿದ.

"ಚಂದಣ್ಣಾ, ನಿಮ್ಮ ಗಾಂಧೀವಾದದಿಂದ ನಮಗೆ ಜಮೀನು ದಕ್ಕುತ್ತ ದೆಂಬುದು ಕನಸಿನ ಮಾತು" ಎಂದ ಪುಟ್ಟಗಂಗ. ತನುಮನಗಳ ಉದ್ವೇಗ ರೋಮರೋಮಗಳಲ್ಲೂ ಹೊಮ್ಮುತ್ತಿತ್ತು.

"ದೊಣ್ಣೆಯ ಬೆದರಿಕೆಯಿಂದ ದಕ್ಕಿಸಿಕೊಳ್ಳುತ್ತೇನೆಂಬುದೂ ಕನಸಿನ ಮಾತು." ಅಷ್ಟೇ ಸಮಾಧಾನದಿಂದ ಹೇಳಿದ ಚಂದು.

"ಅದೇನೇ ಇರಲಿ, ಈ ಜನರಿಗೆ ಕೊಂಚ ಬಿಸಿ ತಗುಲಿಸಿಯೇ ತೀರ ಬೇಕು."

"ಇವರ ಕುಟಿಲತೆಯನ್ನು ನೋಡಿದರೆ ನಮಗೆ ಜಮೀನೇ ಬೇಡ ಎನ್ನಿಸುತ್ತದೆ. ಈ ವ್ಯವಹಾರ ಊರ ನೆಮ್ಮದಿಯನ್ನು ಹಾಳು ಮಾಡುವುದರಲ್ಲಿ

ಅನುಮಾನವಿಲ್ಲ. ಜಗಳವಾಡುವುದಕ್ಕಿಂತ ಅದರ ಆಸೆಯನ್ನು ಬಿಟ್ಟುಬಿಡುವುದೇ ಲೇಸು" ಎಂದ ವೆಂಕಟೇಶ.

"ಸರಿ, ಸರಿ; ಏನೇ ಬರಲಿ ನಾವಿದನ್ನು ಬಿಡಲೇಕೂಡದು. ಈ ಜಮೀನು ಬಿಟ್ಟರೆ ನಮ್ಮೂರಿನಲ್ಲಿ ಬೇರೆ ಇಲ್ಲವೇಯಿಲ್ಲ. ನಾವಿದನ್ನು ಪಡೆಯಲೇಬೇಕು." ಸಿದ್ಧರಾಮು ಒತ್ತಿ ಹೇಳಿದ.

"ಜಮೀನನ್ನು ದಕ್ಕಿಸಿಕೊಳ್ಳಲಿಲ್ಲವಾದರೆ ನಮ್ಮ ಚಟುವಟಿಕೆಯೆಲ್ಲಾ ವ್ಯರ್ಥ. ಇಷ್ಟೆಲ್ಲಾ ಮಾಡಿದ ಮೇಲೆ ಅದಿಲ್ಲದೆ ಹೋದರೆ ಏನು ಸಾಧಿಸಿದ ಹಾಗಾಯಿತು ? ಮುಂದೆಯೂ ನಮ್ಮ ಜೀವನ ಕುದುರುವುದು ಸಾಧ್ಯವೇಯಿಲ್ಲ."

"ಅದೇನೇ ಬರಲಿ, ನಾವು ಹೋರಾಡಲೇಬೇಕು."

"ಚಂದಣ್ಣಾ, ನೀವೀಗ ಸುಮ್ಮನಿರಬಾರದು. ಈ ಸಲ ಪಟೇಲನಿಗೊಂದು ಪಾಠ ಕಲಿಸಿಯೇ ತೀರಬೇಕು."

ನಮ್ಮ ಕೈಯ್ಯಲ್ಲಾದಷ್ಟು ಪ್ರಯತ್ನ ಪಡೋಣ. ಗಲಾಟೆಗೆ ಮಾತ್ರ ಅವಕಾಶ ಕೊಡಬೇಡಿರಿ." ಚಂದು ಸಮಾಧಾನ ಹೇಳಿದ.

"ಚಂದಣ್ಣಾ, ಅಂದು ವೆಂಕಟೇಶ ಜ್ವರಬಂದು ಮಲಗಿದ್ದುದು ಒಳ್ಳೆಯದಾಯಿತೆಂದು ನನಗೀಗ ಅನ್ನಿಸುತ್ತದೆ. ನಾವು ಪಟೇಲರ ಕಂತಂತ್ರವನ್ನು ವಿವರಿಸಿ ಹೇಳಲು ಅವಕಾಶವಾಯಿತು. ವೆಂಕಟೇಶನಿದ್ದಿದ್ದಲ್ಲಿ ಅದಕ್ಕೆ ಅವಕಾಶ ಕೊಡುತ್ತಿರಲಿಲ್ಲ." ಶಂಕರ ನಗುತ್ತ ಹೇಳಿದ.

"ಊರ ನೆಮ್ಮದಿ ಕೆಡಬಾರದೆಂದು ನನ್ನ ಆಸೆ. ಜಮೀನು ಸಿಕ್ಕಿದರೆ ನಮ್ಮವರು ಪುಣ್ಯವಂತರು ಎನ್ನಬಹುದು; ಆದರೆ ಊರೊಳಗೆ ವಿಷಬೀಜವನ್ನು ನಮ್ಮ ಕೈಯಿಂದಲೇ ಬಿತ್ತುವುದಕ್ಕೆ ಮನಸ್ಸಾಗುವುದಿಲ್ಲ."

"ವೆಂಕಟೇಶ್, ಹಾಗೆಂದು ಜಮೀನು ಬಿಟ್ಟುಬಿಡುವುದೇ ?"

"ಹಾಗಂತಲ್ಲ, ಆದರೂ........" ಮಾತು ಪೂರ್ಣವಾಗಗೊಡದೆ ಚಂದು ಹೇಳಿದ "ಮೈಸೂರಿಗೆ ಹೋಗಿ ಒಮ್ಮೆ ಡಿ. ಸಿ. ಯವರನ್ನು ನೋಡೋಣ ನಮ್ಮವರ ಸ್ಥಿತಿಗತಿ ಅವರಿಗೆ ಗೊತ್ತೇಯಿದೆ. ಅವರು ನಮಗೆ ಸಹಾಯ ಮಾಡಬಹುದು........ವೆಂಕಟೇಶ್, ನೀನೇಕೆ ಹಿಂಜರಿಯುತ್ತಿ ? ದೊಂಬಿ ಮಾಡಬಾರದೆಂಬುದು ಸರಿಯಾದರೂ ಕೈ ಕಟ್ಟಿ ಕುಳಿತುಕೊಳ್ಳು

ವುದಕ್ಕಾಗುವುದಿಲ್ಲ. ಈ ಪಟೇಲ ಶುದ್ಧ ಕಿತಾಪತಿಯ ಮನುಷ್ಯ. ಈತನಿಗೊಂದು ಪಾಠ ಕಲಿಸಿಯೇ ತೀರಬೇಕು. ನನ್ನ ಕಾಲವೆಲ್ಲ ಇಲ್ಲಿ ವ್ಯಯವಾದರೂ ಚಿಂತೆಯಿಲ್ಲ ಇದಕ್ಕಾಗಿ ಹೋರಾಡುವೆ."

"ಶಹಭಾಸ್ !" ಸಿದ್ಧರಾಮ ಪರಮಾನಂದದಿಂದ ನಕ್ಕು ಹೇಳಿದ "ಚಂದಣ್ಣಾ, ನಿಮ್ಮೊಂದಿಗೆ ನಾಕ-ನರಕಗಳಿಗೆ ಬರಲೂ ನಾನು ಸಿದ್ಧ. ಪಟೇಲ್ ಹೇಗೆ ಇದನ್ನು ದಕ್ಕಿಸಿಕೊಳ್ಳುತ್ತಾನೋ ನೋಡಿಯೇ ಬಿಡೋಣ."

"ಚಂದಣ್ಣಾ, ಸ್ವಲ್ಪ ಕಾಲ ನಿಮ್ಮ ಕೆಲಸ ಕಾರ್ಯಗಳನ್ನು ಬದಿಗಿಡಿರಿ ಇದಕ್ಕಾಗಿ ನೀವು ಸ್ವಲ್ಪ ಕಾಲ ಮುಂದೆ ನಿಂತುಕೊಳ್ಳದಿದ್ದರೆ ಆಗುವಂತಿಲ್ಲ."

"ನೀವು ಮನೆಯ ಯೋಚನೆ ಸದ್ಯಕ್ಕೆ ಬಿಡಿರಿ. ಅನಂತರ ನಾವೆಲ್ಲರೂ ಕೂಡಿ ನಿಮ್ಮ ಕೆಲಸವನ್ನು ಒಂದೇ ದಿನದಲ್ಲಿ ಮಾಡುತ್ತೇವೆ."

ಚಂದು ಮಾತಾಡಲಿಲ್ಲ ; ಮುಖದಲ್ಲಿ ಎಳೆನಗು ಮೂಡಿತು.

"ಚಂದಣ್ಣನಿಲ್ಲದ ಯಾವ ಕೆಲಸವೂ ಪೂರ್ಣವಾಗುವುದಿಲ್ಲ."

"ಅದೇನೋ ನಿಜವಾದರೂ ನಮ್ಮಿಂದಾಗಿ ಅವರಿಗೆ ತುಂಬ ತೊಂದರೆಯಾಗುತ್ತಿದೆ ಎಂಬುದನ್ನು ನಾವಿನ್ನೂ ಮನಗಾಣಲಿಲ್ಲ."

"ಹಾಗೆಂದು ಯೋಚಿಸಿದ ದಿನವೇ ನಾವು ತಬ್ಬಲಿಗಳಾಗುತ್ತೇವೆ ಶಂಕರೂ."

ಹುಡುಗರ ಮಾತುಗಳನ್ನು ಗಮನಿಸುತಿದ್ದ ಚಂದು ನಗುತ್ತ ಕುಳಿತುಕೊಂಡ.

"ಚಂದಣ್ಣಾ, ಎಲ್ಲರೂ ಕೂಡಿ ಡಿ. ಸಿ. ಯವರಲ್ಲಿ ನಿಯೋಗ ಹೋಗೋಣವೇ ?"

"ಓಹೋ, ಮರೆತೇ ಬಿಟ್ಟಿದ್ದೆ. ನಾಡಿದ್ದು ನಂಜನಗೂಡಿನಲ್ಲಿ ಶಾಲೆಯ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಲು ಡಿ. ಸಿ. ಯವರು ಬರುತ್ತಾರೆ. ಅಲ್ಲಿಗೇನೇ ಹೋಗಿ ನೋಡಿದರೆ ಅನುಕೂಲ. ನಾನು ರಾಂಪುರದಿಂದ ಬರುವೆ. ನೀವೆಲ್ಲರೂ ಕೂಡಿ ಅಲ್ಲಿಗೆ ಬನ್ನಿರಿ. ಅರ್ಜಿ ಬರೆದು ಕೊಡುವೆ. ಅದಕ್ಕೆ ಸಹಿ ಸಂಗ್ರಹಿಸಿಕೊಳ್ಳಿರಿ."

ಎಲ್ಲರೂ ಒಪ್ಪಿಕೊಂಡರು. ಚಂದು ಹೇಳಿದ ರೀತಿಯಲ್ಲಿ ವೆಂಕಟೇಶ ಅರ್ಜಿ ಬರೆದು ಸಿದ್ಧಗೊಳಿಸಿದ. ಚಂದು ಹೊರಡಲು ಎದ್ದು ನಿಂತುದನ್ನು

ನೋಡಿ ಸಿದ್ಧರಾಮು ಕೇಳಿದ "ಏಕಿಷ್ಟು ಅವಸರ ಚಂದಣ್ಣಾ ?"

"ಎಲ್ಲವೂ ಮುಗಿಯಿತಲ್ಲಾ ಮತ್ತೇಕೆ ತಡ ? ನಾನೀಗಲೇ ಹೊರಡುವೆ."

"ಬಿಸಿಲು ನೆತ್ತಿಗೇರಿತು. ವಿಶ್ರಮಿಸಿ ಹೋಗಿರಿ." ಎಂದವನೇ ಸಿದ್ಧರಾಮು ಪುನಃ ಹೇಳಿದ "ಇಂದು ನಮ್ಮ ಮನೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳಿರಿ."

"ಊರು ಮುಟ್ಟುವುದು ಸಂಜೆಗೆಂದಾಯಿತು."

"ಹಾಗೆಂದೇ ಹೇಳುತ್ತಿದ್ದೇನೆ."

"ಅಯ್ಯೋ, ನನಗೆ ತುಂಬ ಕೆಲಸವಿದೆ."

"ಆಗಲೇ ಹೇಳಿದ್ದೇವಲ್ಲಾ. ನಿಮ್ಮ ಕೆಲಸವನ್ನು ಒಂದೇ ದಿನದಲ್ಲಿ ಮಾಡುತ್ತೇವೆ."

ಒಕ್ಕೊರಲಿಂದ ಅನೇಕರು ನುಡಿದರು.

"ಚಂದಣ್ಣಾ, ಮುಖ್ಯವಾಗಿ ನಿಮ್ಮಂತಹವರು ನಮ್ಮ ದೇಶಕ್ಕೆ ಬೇಕು. ಅತೀ ದುಡಿಮೆಯಿಂದ ನಿಮ್ಮ ದೇಹ ಕುಗ್ಗಬಾರದು." ವೆಂಕಟೇಶನ ಬಾಯಿಂದ ಮಾತು ಹೊರಬಿತ್ತೋ ಇಲ್ಲವೋ ಒಡನೆ ಎಲ್ಲರೂ ಏಕಕಂಠದಿಂದ ಕೂಗಿದರು "ಚಂದಣ್ಣಾ ಚಿರಾಯುವಾಗಲಿ !" ದನಿ ಶ್ರೀಕಂಠಗಳಿಂದ ಹೊರಬಿದ್ದೊಡನೆ ದೂರದ ಬೆಟ್ಟ ಮರುನುಡಿಯಿತು "ಚಂದಣ್ಣ ಚಿರಾಯುವಾಗಲಿ!"

ಹುಡುಗರು ಹರ್ಷೋದ್ಗಾರ ಮಾಡಿದರು.

"ಕೈ ಕಾಲು ಗಟ್ಟಿಯಾಗಿರುವಾಗಲೇ ಈ ದೇಹ ಬಿದ್ದು ಹೋಗಬೇಕು." ಚಂದು ಮಂದಹಾಸ ಬೀರಿದ.

"ನಿಮಗೇನು ಅಂತಹ ಕಷ್ಟ ? ಇದ್ದಲ್ಲೇ ಹತ್ತು ಮಂದಿಗೆ ಆಧಾರವಾಗುವ ವ್ಯಕ್ತಿ. ಎಲ್ಲರೂ ನಿಮ್ಮ ಆಶ್ರಯ ಬಯಸಿಯಾರೇ ವಿನಾ ನೀವು ಯಾರ ಆಶ್ರಯವನ್ನೂ ಬೇಡಬೇಕಾಗಿಲ್ಲವಲ್ಲಾ ?"

"ಕಾಲಗರ್ಭದಲ್ಲಿ ಏನೇನು ಅಡಗಿದೆಯೋ ಯಾರಿಗೆ ಗೊತ್ತು ?"

"ಏನಿದ್ದರೂ ಯೋಚಿಸಬೇಕಾಗಿಲ್ಲ ಚಂದಣ್ಣಾ."

ಮಾತು ಮುಗಿಯುವಷ್ಟರಲ್ಲಿ ಅನಂತು ಕೈಯಲ್ಲಿ ಹತ್ತಾರು ಎಳನೀರಿನ ಗುದಿಯನ್ನು ಹಿಡಿದುಕೊಂಡು ಬಂದ. ಎಲ್ಲರೂ ಕುಡಿದು ದಣಿವಾರಿಸಿ

ಕೊಂಡರು. ಒಳಗಿನ ತಿರುಳನ್ನು ಮೆಲ್ಲುತ್ತ ವೆಂಕಟೇಶ ಹೇಳಿದ "ಚಂದಣ್ಣಾ, ಮುಂದಿನ ವಾರ ಕೆರೆಯ ಹೂಳೆತ್ತಿ ಶುದ್ಧಿಗೊಳಿಸಬೇಕಾಗಿದೆ ಅದರ ನಂತರ ರಸ್ತೆಯ ರಿಪೇರಿ ಮಾಡುತ್ತೇವೆ. ಸದ್ಯಕ್ಕೆ ಶುದ್ಧವಾದ ನೀರಿಲ್ಲದೆ ತೊಂದರೆಯಾಗಿದೆ. ಕೊನೆಯದಾಗಿ ಮಾರುಕಟ್ಟೆಯ ವಿಚಾರ."

"ಹಾಗೇ ಮಾಡಿರಿ." ಎಂದ ಚಂದು ಹಾದಿಯ ಕಡೆ ನೋಡುತ್ತಾ ಕೇಳಿದ "ಇದೇನು? ರಾಮಣ್ಣ ರಾಜಣ್ಣ ಇಬ್ಬರೂ ಈ ಕಡೆ ಬರುತ್ತಿದ್ದಾರೆ? ಮುಖದಲ್ಲಿ ನಗು ಹೊರಹೊಮ್ಮಿತು. ತಕ್ಷಣ ಎಲ್ಲರ ದೃಷ್ಟಿಯೂ ಅತ್ತ ಹರಿಯಿತು. ಅಣ್ಣ ತಮ್ಮಂದಿರಿಬ್ಬರೂ ಹತ್ತಿರಹತ್ತಿರವಾಗುತ್ತಿದ್ದಂತೆ ಎಲ್ಲರಿಗೂ ಎಂದೂ ಬಾರದವರು ಇಂದೇಕೆ ಬಂದರೆಂಬುದು ಸಹಜವಾಗಿ ಅಚ್ಚರಿಯನ್ನುಂಟುಮಾಡಿತು. ಒಬ್ಬರ ಮುಖ ಒಬ್ಬರು ನೋಡಿಕೊಂಡರು. ವಿಷಯ ಒಗಟಾಗಿಯೇ ಉಳಿಯಿತು. ಇನ್ನಷ್ಟು ಹೊತ್ತಿನೊಳಗಾಗಿ ಇಬ್ಬರೂ ಅಲ್ಲಿಗೆ ನೇರವಾಗಿ ಬಂದರು. ಬರ ಬರುತ್ತಲೇ ರಾಮಣ್ಣ ಹೇಳಿದ "ಚಂದೂ. ಈಚೀಚೆಗಂತೂ ನೀನು ದೊಡ್ಡ ಮನುಷ್ಯನಾಗಿಬಿಟ್ಟೆ ! ನಮ್ಮನ್ನು ಸಂಪೂರ್ಣ ಮರೆತು ಬಿಡುತ್ತೀಯೇನು ? ನಿನ್ನ ನೋಡಬೇಕೆಂದರೆ ನಾವೇ ಹುಡುಕಿಕೊಂಡು ಬರಬೇಕು ?" ತುಟಿಗಳು ಬಿರಿದು ಹಸನಾದ ನಗು ಮೂಡಿತು.

"ಊರಿಗೆ ಬಂದರೂ ಮನೆಗೆ ಬರುವಷ್ಟು ಉದಾರತೆಯಿಲ್ಲ. ಇಂದು ನಿನ್ನ ಮುಖ ನೋಡಿಯೇ ಹೋಗೋಣವೆಂದು ಬಂದೆವು." ರಾಜಣ್ಣ ನುಡಿದ.

"ಅದೇನು ಅಷ್ಟೊಂದು ಉದಾರ ಮನಸ್ಸು ಬಂತು ? ಹಸನ್ಮುಖಿಯಾದ ಚಂದು ಸ್ವಾಗತಿಸುತ್ತಾ ನುಡಿದ "ಎಲ್ಲಿ ಕೆಲಸವಿದೆಯೋ ಅಲ್ಲಿರುವೆ. ವೃಥಾ ಕಾಲಹರಣ ಮಾಡುವುದರಿಂದೇನು ಪ್ರಯೋಜನ ? ಈಗ ಎಷ್ಟೇ ಶ್ರದ್ಧೆ ವಹಿಸಿದರೂ ಸಾಲದು. ಹೆಜ್ಜೆ ಹೆಜ್ಜೆಗೂ ಕಾಲ ಸನ್ನಿಹಿತವಾಗುತ್ತಿದೆ."

"ಅಲ್ಲಯ್ಯಾ, ಯೋಗಕ್ಷೇಮವನ್ನಾದರೂ ವಿಚಾರಿಸಕೂಡದೇ ? ನಮ್ಮ ಸ್ನೇಹಕ್ಕೂ ತಿಲಾರ್ಪಣ ಕೊಟ್ಟು ಬಿಡುತ್ತೀಯೇನು ?" ಔಪಚಾರಿಕವಾಗಿ ನುಡಿದ ರಾಮಣ್ಣ. ತುಟಿಗಳಲ್ಲಿ ನಸುನಗು ಸುಳಿಯಿತು.

"ರಾಮಣ್ಣಾ ನೀನೀಗ ಕ್ಷೇಮಸಮಾಚಾರ ವಿಚಾರಿಸಲು ಬಂದಿದ್ದೀಯೇನು ?" ಚಂದುವಿನ ಮಾತು ಮುಗಿಯುವುದರೊಳಗಾಗಿ ಎಲ್ಲರೂ

ಕುಲುಕುಲು ನಗತೊಡಗಿದರು. ರಾಮಣ್ಣನೂ ನಗುನಗುತ್ತಾ ಹೇಳಿದ.

"ದೇವರಲ್ಲಿ ವರಬೇಡಬೇಕಾದರೆ ದೇವಾಲಯಕ್ಕೆ ಹೋಗಬೇಕಲ್ಲದೆ ದೇವರೇ ಬಂದು ವರ ನೀಡಲೆಂದು ಬಯಸಬಾರದಷ್ಟೆ ?"

"ಅಷ್ಟೊಂದು ದೊಡ್ಡ ಮಾತಾದರೂ ಏಕೆ ?"

ರಂಗಮಂದಿರದೊಳಗಡೆ ಎಲ್ಲರೂ ಕುಳಿತುಕೊಂಡರು. ಸಿದ್ಧರಾಮ ಮತ್ತೆರಡು ಎಳೆನೀರನ್ನು ಕಿತ್ತು ತಂದ. ತೋಟದಿಂದ ನೇರವಾಗಿ ಇತ್ತಲೇ ಬಂದಿದ್ದ ಇಬ್ಬರೂ ಬಳಲಿದ್ದರು. ಎಳೆನೀರನ್ನು ನೋಡಿ ರಾಮಣ್ಣ ಅಂದ "ಬಹಳ ಬಾಯಾರಿಕೆಯಾಗಿತ್ತು. ಮನೆಗೆ ಹೋಗಿ ಬರುವುದೆಂದರೆ ನೀನು ಊರಿಗೆ ಹೊರಟುಬಿಡಬಹುದೆಂದೂಹಿಸಿ ಹೀಗೆ ಬಂದೆವು."

ಇಬ್ಬರೂ ಕುಡಿದು ದಣಿವಾರಿಸಿಕೊಂಡರು. ರಾಜಣ್ಣ ಹೆಗಲಿನ ಮೇಲಿದ್ದ ಟವಲ್ಲಿನಿಂದ ಮುಖವನ್ನು ಒರೆಸಿಕೊಳ್ಳುತ್ತಾ ರಂಗಮಂದಿರ ದೆಲ್ಲೆಡೆಯೂ ದೃಷ್ಟಿಯನ್ನು ಹಾಯಿಸಿದ. ಮಂದಿರ ಭದ್ರವಾಗಿಯೂ ವಿಶಾಲ ವಾಗಿಯೂ ಇತ್ತು. ಅಂದಿನಿಂದ ಇಂದಿನವರೆಗೆ ಹುಡುಗರ ಬಗ್ಗೆ ವಿಷಕಾರುತ್ತಾ ಬಂದ ಘೋರ ಚಿತ್ರ ಕಣ್ಮುಂದೆ ನಲಿಯಿತು ಚಂದು ಬಗ್ಗೆ ತೋರಿದ ಅನಾದರ ಮನದಲೆಯಲ್ಲಿ ಮೂಡಿ ಬಂತು. ಇದಕ್ಕೆ ಪರಿಹಾರವುಂಟೇ ? ಎಂದು ಮನಸ್ಸು ಚಿಂತಿಸಿತು. ಅದೇ ವೇಳೆಗೆ ಹೊರಬಿದ್ದ ರಾಮಣ್ಣನ ಮಾತಿನಿಂದ ಮನಸ್ಸು ಯೋಚನೆಯಿಂದ ವಿಮುಖವಾಯಿತು.

"ಚಂದೂ, ಈ ಜಮೀನು ನಮಗೆ ಸಿಕ್ಕದಂತೆ ಪಟೇಲ ಸರ್ವ ಸಾಹಸ ಮಾಡುತ್ತಿದ್ದಾನಂತೆ. ಅದನ್ನಿಷ್ಟು ನಿನ್ನ ಗಮನಕ್ಕೆ ತರೋಣವೆಂದು ಬಂದೆವು. ಇದು ಸಿಕ್ಕಿದರೆ ಬಂಗಾರ ಬೆಳೆಯಬಹುದು ಏನೇ ಬಂದರೂ ಜಮೀನನ್ನು ಬಿಡಬಾರದು. ಅದಕ್ಕಾಗಿ ನೀನು ತೊಂದರೆ ತೆಗೆದುಕೊಳ್ಳಲೇ ಬೇಕು."

ಚಂದು ಘಕಘಕನೆ ನಕ್ಕು ನುಡಿದ "ಜಮೀನು ಲಾಭದಾಯಕ ವಾದ್ದರಿಂದ ನೀವಿಬ್ಬರೂ ಇಷ್ಟು ದೂರ ಬರುವಷ್ಟು ಶ್ರಮ ತೆಗೆದುಕೊಂಡಿರಿ!"

ಚಂದುವಿನ ಮಾತಿನಿಂದ ಎಲ್ಲರೂ ನಗತೊಡಗಿದರು. ಅಣ್ಣತಮ್ಮಂದಿರೂ ನಗೆಯಲ್ಲಿ ಪಾಲ್ಗೊಂಡರು. ರಂಗಮಂದಿರ ಮರುದನಿಯನ್ನು ಕೊಟ್ಟಿತು. ರಾಮಣ್ಣ ಮಾತಾಡಲಿಲ್ಲ. ದೃಷ್ಟಿ ಮಂದಿರದ ಮಾಡಿನತ್ತ ಹರಿದಿತ್ತು.

ರಾಜಣ್ಣ ಹೇಳಿದ "ಈಗ ಗೋಪಾಳವೆಂದು ಕರೆದು ಅನಂತರ ನಮಗರಿಯದಂತೆಯೆ ಲಪಟಾಯಿಸಿ ಬಿಡುತ್ತಾನೆ."

"ಅದು ಅಕ್ಷರಶಃ ಸತ್ಯ."

ಚಂದು ಇಬ್ಬರಿಗೂ ಇದುವರೆವಿಗೆ ಮಾತಾಡಿದ ವಿಚಾರವನ್ನು ತಿಳಿಯ ಹೇಳಿ ಎಲ್ಲರೊಡಗೂಡಿ ನಂಜನಗೂಡಿಗೆ ಹೊರಡಲು ಹೇಳಿದ. ರಾಮಣ್ಣನಿಗೆ ಅತ್ಯಂತ ಸಂತಸವುಂಟಾಯಿತು. ನಗುಮುಖದಿಂದ ಆಹ್ವಾನ ನೀಡಿದ "ಚಂದೂ ಇಂದು ನಮ್ಮ ಮನೆಯಲ್ಲಿ ಊಟಮಾಡು."

ಆಹ್ವಾನ ಅಪರೂಪದ್ದಾದರೂ ಚಂದು ಗೋಣು ಅಲ್ಲಾಡಿಸುತ್ತ "ದಯವಿಟ್ಟು ಕ್ಷಮಿಸು" ಎಂದ.

"ನಮ್ಮ ಮನೆಗಾದರೂ ಬಾ ಚಂದೂ."

"ಇಬ್ಬರಿಗೂ ಒಂದೇ ಉತ್ತರ. ನಾನಾಗಲೇ ಸಿದ್ಧರಾಮನ ಕರೆಗೆ ಒಪ್ಪಿಕೊಂಡಿದ್ದೇನೆ. ದಯವಿಟ್ಟು ಬೇರೆ ಏನೂ ತಿಳಿದುಕೊಳ್ಳಬಾರದು."

"ಸರಿ ಮತ್ತೆ." ಎನ್ನುತ್ತಾ ರಾಮಣ್ಣ ಎದ್ದು ನಿಂತು ನಾಡಿದ್ದು ಅಷ್ಟು ಹೊತ್ತಿಗೇನೇ ಎಲ್ಲರೊಡಗೂಡಿ ಹೊರಡುತ್ತೇವೆ ಏನೇ ಬಂದರೂ ನೀನು ತಪ್ಪಬಾರದು."

ಅಣ್ಣ ತಮ್ಮಂದಿರಿಬ್ಬರೂ ಹೊರಟುಹೋದರು. ಬಿಸಿಲಿನ ತಾಪ ಬಹಳವಾಗಿತ್ತು.

ಚಂದುವಿನ ಸತತ ಪ್ರಯತ್ನದಿಂದ ನಾಗಪ್ಪಯ್ಯನ ಸುಳ್ಳು ಸಾಕ್ಷ್ಯಗಳು ಊರ್ಜಿತವಾಗಲಿಲ್ಲ. ಕಾಲ ವಿಳಂಬವಾದರೂ ಅಲ್ಲಿನ ಬಡ ಕುಟುಂಬಗಳಿಗಾಗಿಯೆ ಜಮೀನು ಮೀಸಲಾಯಿತು. ಸಾಗುವಳಿ ಚೀಟಿಯನ್ನು ದೊರಕಿಸಿಕೊಂಡು ಚಂದು ಜೋಗಿಹಳ್ಳಿಗೆ ಬರುವಷ್ಟರಲ್ಲಿ ಅಂದು ಇಳಿಹೊತ್ತು ಆಗಿತ್ತು. ಚಂದು ಅವಸರಿಸುತ್ತಾ ಎದ್ದು ನಿಂತು,

"ಇಂದೇ ಬರುತ್ತೇನೆಂದು ಕಾವೇರಿಗೆ ಹೇಳಿ ಬಂದಿದ್ದೇನೆ."

"ಅದಾಗದು ಇಳಿಹೊತ್ತಾದ ಮೇಲೆ ನಿನ್ನನ್ನು ಹೋಗಗೊಟ್ಟೆವೆಂದು ಕಾವೇರಿ ಕೋಪಿಸಿಕೊಂಡಾಳು. ನೀನಿಂದು ಹೋಗಲೇ ಕೂಡದು." ರಾಮಣ್ಣ ಒತ್ತಾಯ ಪೂರ್ವಕವಾಗಿ ನುಡಿದ. ಎದೆಯಲ್ಲಿ ಎಲ್ಲಿಲ್ಲದ ಪ್ರೇಮ ಮೂಡಿ ಬಂದಿತ್ತು. ಪರಮಾನಂದದಿಂದ ಉಬ್ಬಿ ಮುಂದುವರಿದ "ದಾರಿಯಲ್ಲಿ

ದುಷ್ಟಮೃಗಗಳ ಭಯವೂ ಉಂಟು. ಅಷ್ಟೇಕೆ ಆತುರ ? ನಾಳೆ ನಿನ್ನೊಂದಿಗೆ ನಮ್ಮ ಹುಡುಗರನ್ನೂ ಕರೆದುಕೊಂಡು ಹೋದರೆ ನಿನ್ನ ಕೆಲಸಗಳನ್ನಿಷ್ಟು ಮಾಡಿಯಾರು. ನಿನ್ನ ಬಹುಕಾಲವನ್ನೆಲ್ಲಾ ನಮಗಾಗಿ ವ್ಯಯ ಮಾಡಿದ ನಿನಗೆ ನಾವೇನೂ ಪ್ರತ್ಯುಪಕಾರ ಮಾಡಲಾರೆವಾದರೂ ಬರಿಯ ಸ್ನೇಹಕ್ಕಾಗಿ ಹೇಳುತ್ತಿದ್ದೇನೆ ಅಷ್ಟೆ.

"ನಮಗಾಗಿ ನೀವು ಪಟ್ಟ ಶ್ರಮ ಚಿರಸ್ಮರಣೀಯವಾದುದು. ನಿಮ್ಮಿಂದ ನಮ್ಮ ಊರು ಬೆಳಗಿತು." ಎಂದೆನ್ನುವಾಗ ನಂಜಯ್ಯನ ಸುಕ್ಕುಗಟ್ಟಿದ ಮುಖದಲ್ಲೂ ಸಂತಸದ ನಗೆ ಮೂಡಿತು. ಪುನಃ "ಚಂದೂ ನಮ್ಮವರೆಲ್ಲಾ ನಿಮ್ಮ ಬಗ್ಗೆ ಎಷ್ಟೋ ಅಪಚಾರವೆಸಗಿದ್ದರೂ ನೀವು ಅದನ್ನು ಗಣನೆಗೆ ತೆಗೆದು ಕೊಳ್ಳದೆ ನಮ್ಮವರಿಗೆ ಸಹಾಯ ಮಾಡಿದ್ದೀರಿ. ದೇವರು ನಿಮ್ಮ ಹೊಟ್ಟೆ ತಣ್ಣಗಿಟ್ಟಿರಲಿ."

ತಕ್ಷಣ ರಾಮಣ್ಣನ ಮುಖ ಖಿನ್ನವಾಯಿತು. "ದಯವಿಟ್ಟು ಮನ್ನಿಸು ಚಂದೂ" ಎಂದ ಮುಂದೆ ಮಾತು ಹೊರಡಲಿಲ್ಲ. ಯಾವುದೋ ಕಾಣದ ಶಕ್ತಿ ಕೊರಳನ್ನು ಅದುಮಿ ಹಿಡಿಯಿತು.

"ಅಂತಾದ್ದೇನೂ ನಡೆಯಲಿಲ್ಲ. ಅದಕ್ಕೇಕೆ ಯೋಚನೆ ?"

"ಚಂದೂ, ನಿನ್ನ ಬಗ್ಗೆ ಅಪಚಾರವೆಸಗಿದ್ದೇವೆಂಬುದು ನಿಜ. ಆ ಬಗ್ಗೆ ನಿನ್ನ ಕ್ಷಮಾಪಣೆಯಿದೆಯೆಂಬುದೂ ಗೊತ್ತು. ನೀನು ಪ್ರಾರಂಭಿಸಿದ ಕೆಲಸ ನಮಗನುಕೂಲವಾದೀತೆಂದು ನಾವು ಕನಸಿನಲ್ಲಿಯೂ ಎಣಿಸಲಿಲ್ಲ. ಈಗ ನೀನಿಲ್ಲದ ಯಾವ ಕೆಲಸವೂ ಕೈಗೂಡದೆಂಬುದನ್ನು ಮನಗಂಡಿದ್ದೇವೆ." ಅನುತಾಪವನ್ನು ಪ್ರಯತ್ನಪೂರ್ವಕವಾಗಿ ಹತ್ತಿಕ್ಕಿ ನೀರಸ ನಗುವನ್ನು ಸೂಸಿ ರಾಮಣ್ಣ ಹೇಳಿದ. ಲಜ್ಜೆ ಅನುತಾಪಗಳಿಂದ ತನ್ನಲ್ಲಿ ತಾನು ಹುಗಿದು ಹೋಗುವಂತೆ ತೋರಿತು.

"ಕಾಲಾನುಸಾರವಾಗಿ ವರ್ತಿಸುವುದನ್ನು ಪ್ರತಿಯೊಬ್ಬರೂ ಮನ ಗಾಣಬೇಕು."

"ಈಗೀಗ ನಾವದನ್ನು ಕಲಿಯುತ್ತಿದ್ದೇವೆ."

ರಾಮಣ್ಣನ ನುಡಿ ಕೇಳಿ ಚಂದು ನಗತೊಡಗಿದ; ಒಡನೆ ಎಲ್ಲೆಲ್ಲೂ ನಗುವಿನಲೆಯೆದ್ದಿತು. ರಾಮಣ್ಣ ಚಂದುವನ್ನು ಹೋಗಗೊಡದೆ ತಡೆಹಿಡಿದ.

ಅಂದು ತುಂಬ ಹೊತ್ತಾಗಿದ್ದರೂ ರಾಜಮ್ಮ ಪ್ರಯತ್ನಪೂರ್ವಕವಾಗಿ ನೀಲಮ್ಮನೊಡನೆ ಔತಣದೂಟವನ್ನು ನೀಡಿದಳು. ಎಲ್ಲರೂ ಮನೆಗೊಂದು ಬಗೆಯಂತೆ ಭಕ್ಷ್ಯವನ್ನು ಮಾಡಿಸಿ ತಂದರು. ಬೆಳದಿಂಗಳೂಟದಲ್ಲಿ ಎಲ್ಲರೂ ಕೂಡಿ ನಕ್ಕುನಲಿದು ಹೊತ್ತು ಕಳೆದರು. ಮರುದಿನ ಅನೇಕ ತರುಣರು ರಾಂಪುರಕ್ಕೆ ಚಂದುವಿನೊಂದಿಗೆ ಹೊರಟರು. ಊರ ಗಡಿಯುವರೆಗೆ ಹೋಗಿ ಬೀಳ್ಕೊಟ್ಟ ರಾಮಣ್ಣನ ಹೃದಯ ಸಂತಸದಿಂದ ಬಿರಿಯುವಂತಿದ್ದರೂ ಸಂತಾಪದಿಂದ ಭಾರವಾಗಿತ್ತು. ಓರಗೆಯವರೊಡನೆ ಚಂದುವಿನ ಬಗ್ಗೆ ಒಳ್ಳೆಯ ಮಾತನ್ನಾಡುವಾಗ "ನಾವೆಷ್ಟು ಅಪಚಾರವೆಸಗಿದರೂ ಮನಸ್ಸಿನಲ್ಲಿಟ್ಟುಕೊಳ್ಳದೆ ನಮಗಾಗಿ ದುಡಿದ ವ್ಯಕ್ತಿ. ದೇವರು ಎಂದೆಂದೂ ಅವನನ್ನು ಚೆನ್ನಾಗಿಟ್ಟಿರಲಿ" ಎಂದ. ರಾಂಪುರದಿಂದ ಇಷ್ಟು ದೂರ ಬಂದು ಪುರೋಭಿವೃದ್ಧಿಗಾಗಿ ದುಡಿದ ವ್ಯಕ್ತಿಯ ಊಟ ಉಪಚಾರವನ್ನೂ ನೋಡಿಕೊಳ್ಳದೆ ನಿರ್ಲಕ್ಷಿಸಿದ ವಿಚಾರ ಮನದಲೆಯಲ್ಲಿ ಸುಳಿದಾಗ ಮುಖ ಖಿನ್ನವಾಯಿತು. ಎದೆಯಾಳದಿಂದ ದೀರ್ಘವಾದ ನಿಟ್ಟುಸಿರೊಂದು ತಪ್ಪಿಸಿಕೊಂಡಿತು. ಬೀಸಿ ಬರುವ ತಂಗಾಳಿ ಅದನ್ನು ಅಲ್ಲಿಂದಲೇ ಕಬಳಿಸಿತೋ ಏನೋ....

ಆದರೆ

೩೪

ರಾಯನ ಮನೆಯಲ್ಲಿ ಇಂದು ವಿಶೇಷ ಸಮಾರಂಭ. ಶಾರದೆಯ ಗರ್ಭಾಂಬುಧಿಯಲ್ಲಿ ಜನಿಸಿದುದು ಕನ್ಯಾರತ್ನ. ಪುಟ್ಟಮ್ಮನಿಗೆ ಮೊಮ್ಮಗ ಜನಿಸಬೇಕೆಂದು ಅಂದಿನಿಂದ ಬಯಕೆಯಾಗಿದ್ದರೂ ಸದ್ಯ ಹೆಣ್ಣು ಮಗುವಾದರೂ ಜನಿಸಿತಲ್ಲ ಎಂಬ ಮನೋಭಾವಕ್ಕೆ ಹೊಂದಿಕೊಂಡಿದ್ದು ಸಂತಸದುಬ್ಬರದಲ್ಲಿ ಉಬ್ಬಿ ಹೋಗಿದ್ದಳು. ಸೀತೆ ಮಾಲಿನಿಯರು ಅಂದೇ ಬಂದು ಸಂತಸದಲ್ಲಿ ಪಾಲ್ಗೊಂಡಿದ್ದರು. ಚಂದಿರೆಗೆ ಮಗುವನ್ನು ನೋಡಿ ಸ್ವರ್ಗ ಸೌಖ್ಯವೆಂದರೂ ತಪ್ಪಲ್ಲ. ಮಗುವಿನ ತೊಟ್ಟಿಲ ಬಳಿಯಲ್ಲಿ ಸಡಗರದಿಂದ ಅಡಗೂಲಜ್ಜಿಯಂತೆ ಕಾದು ಕುಳಿತುಕೊಳ್ಳತೊಡಗಿದಳು.

ಪುಟ್ಟಮ್ಮ ಮಗುವನ್ನು ಕೈಗೆತ್ತಿಕೊಂಡೊಡನೆ “ಅಮ್ಮಾ ನಾನು ಎತ್ತಿಕೊಳ್ಳುವೆ.” ಎಂದು ಅಂಗಲಾಚಿದಳು ಚಂದಿರೆ. ಕಣ್ಣುಗಳಲ್ಲಿ ಆಸೆಯು ಬೆಳಕು ಮಿನುಗುತ್ತಿತ್ತು. ಮುಖಬಿಂಬ ಪ್ರಫುಲ್ಲವಾಗಿತ್ತು.

“ಅಯ್ಯೋ, ನಿನ್ನಿಂದಾದೀತೆ ?” ಎಂದಳು ಪುಟ್ಟಮ್ಮ.

“ಜೋಪಾನವಾಗಿ ಎತ್ತಿಕೊಳ್ಳುವೆ.” ಮನದಾಸೆಯನ್ನು ಹತ್ತಿಕ್ಕಲಾರದೆ ಮತ್ತೆ ಕೇಳಿದಳು. ದನಿಯಲ್ಲಿ ಬೇಡಿಕೆಯಿತ್ತು.

“ಬೇಡ ಮಗೂ.”

ಆದರೆ ಚಂದಿರೆ ಕೇಳಬೇಕಲ್ಲ ?

ಅಜ್ಜಿಯನ್ನು ಮುಂದುವರಿಯಗೊಡದಂತೆ ಅಡ್ಡನಿಂತು ಅಂಗಲಾಚಿದಳು. ಮುಖ ಕಣ್ಣುಗಳಲ್ಲಿ ಅತ್ಯಂತ ಆಸೆಯ ಮುದ್ರೆ ಅಂಕಿತವಾಗಿತ್ತು. ಪುಟ್ಟಮ್ಮನಿಗೆ ಕರುಣೆ ಮೂಡಿ ಅವಳ ಆಸೆಯನ್ನು ಈಡೇರಲೆಂದು ಸ್ವಲ್ಪ ಹೊತ್ತು ಅವಳ ತೊಡೆಯ ಮೇಲಿಟ್ಟಳು. ಆಗ ಚಂದಿರೆಗಾದ ಆನಂದಕ್ಕೆ ಪಾರವೇ ಇಲ್ಲ. ಪ್ರೀತ್ಯಾದರದಿಂದ ಮುದ್ದಿಟ್ಟುಕೊಂಡಳು. ಹೃದಯ ಆನಂದಸಾಗರವಾಗಿ ಪ್ರಸನ್ನಮುಖಿಯಾದಳು.

ಮಗು ಬೊಂಬೆಯಂತೆ ಮಲಗಿತ್ತು.

ಪುಟ್ಟಮ್ಮ ಸ್ವಲ್ಪ ಹೊತ್ತಿನ ನಂತರ ಎತ್ತಿಕೊಳ್ಳಹೋಗುತ್ತಲೂ ಪುನಃ ದೀನೆಯಂತೆ ಅಂಗಲಾಚಿದಳು,

"ಇನ್ನಷ್ಟು ಹೊತ್ತು ಎತ್ತಿಕೊಳ್ಳುವೆ."

"ಇಂದು ನಾಮಕರಣ ಮಗೂ ! ಹೊತ್ತಾಗುತ್ತೆ...."

"ಅಜ್ಜೀ........"

ಅಷ್ಟರಲ್ಲಿ ಅಲ್ಲಿಗೆ ಬಂದ ಮಾಲಿನಿ ಚಂದಿರೆಯ ತೊಡೆಯ ಮೇಲೆ ಮಗುವನ್ನು ನೋಡಿ "ಅದೇನು ಬೊಂಬೆಯೆಂದು ತಿಳಿದಿದ್ದೀಯೇನೆ ?" ಎನ್ನುತ್ತ ಅವಳಿಂದ ಮಗುವನ್ನು ಎತ್ತಿಕೊಳ್ಳಹೋದಳು.

"ಅಕ್ಕಾ, ಇನ್ನಷ್ಟು ಹೊತ್ತು........ " ಮಾತನ್ನು ಪೂರ್ಣಗೊಳಿಸದೆ ಮಗುವನ್ನು ಎರಡೂ ಕೈಗಳಿಂದ ತಬ್ಬಿಕೊಂಡಳು.

"ಹೂವಿನಂತ ಮಗು. ಹೀಗೆಲ್ಲಾ ಆಡಿದರಾದೀತೆ ?"

"ಅಕ್ಕಾ, ನಿಮ್ಮ ದಮ್ಮಯ್ಯ ಅನ್ನುವೆ; ಮಗು ಇಲ್ಲೇ ಇರಲಿ." ಚಂದಿರೆಯ ದನಿಯಲ್ಲಿ ದೈನ್ಯತೆಯು ತುಂಬಿ ತುಳುಕುತ್ತಿತ್ತು. ಮಂಚದ ಮೇಲೆ ಮಲಗಿದ್ದ ಶಾರದೆ–"ಮಾಲಿನಿ, ಅವಳೂ ಸ್ವಲ್ಪ ಹೊತ್ತು ಎತ್ತಿಕೊಳ್ಳಲಿ. ಅವಳಿಗೇಕೆ ನಿರಾಶೆಯುಂಟು ಮಾಡುತ್ತಿ ?"

"ನೀವಿಬ್ಬರೂ ಕೊಸರಾಡುವುದರಲ್ಲಿ ಮಗುವಿಗೆ ತೊಂದರೆಯಾಗುತ್ತೆ." ಪುಟ್ಟಮ್ಮ ಎಚ್ಚರಿಸುತ್ತ ಮಗುವನ್ನು ಚಂದಿರೆಯ ತೊಡೆಯ ಮೇಲೆ ಸರಿಪಡಿಸಿ ಮಲಗಿಸಿದಳು. ಮಾಲಿನಿ ಅಲ್ಲಿಂದಲೇ ಮಗುವನ್ನು ಮುದ್ದಿಟ್ಟುಕೊಂಡು "ನಿನಗೆ ಎತ್ತಿಕೊಳ್ಳುವುದು ಹೇಗೆಂಬುದು ತಿಳಿಯದು. ವೃಥಾ ಮಗುವಿಗೆ ತೊಂದರೆ ಕೊಡುತ್ತಿ."

"ನಿಮಗಿಂತ ನಾನೇ ಚೆನ್ನಾಗಿ ಎತ್ತಿಕೊಳ್ಳುವೆ !"

ಮಗುವಿಗೆ ನೀರೆರೆಯಲೆಂದು ಸೀತೆ ಎತ್ತಿಕೊಳ್ಳ ಬಂದಾಗ ಚಂದಿರೆ ಉತ್ಸುಕತೆಯಿಂದ "ಅಮ್ಮಾ ನಾನೇ ನೀರೆರೆಯುವೆ !" ಎಂದಳು.

"ಅಯ್ಯೋ, ಇದೇನು ರಾದ್ಧಾಂತ ? ನಿನ್ನಿಂದ ನೀರೆರೆಯಲಾದೀತೆ ?"

ಮಾಲಿನಿ ಅಲ್ಲಿಂದ ಚಂದಿರೆಯನ್ನು ಹೂದೋಟಕ್ಕೆ ಎಳೆದೊಯ್ದಳು. ಅಲ್ಲಿ ಮಾಧು ವರ್ತಮಾನ ಪತ್ರಿಕೆಯನ್ನೋದುತ್ತ ಕುಳಿತಿದ್ದ. ಚಂದಿರೆಯನ್ನು ಕಾಣುತ್ತಲೂ ಪತ್ರಿಕೆಯನ್ನು ಬದಿಗಿಟ್ಟು ಅವಳನ್ನು ಬಳಿಯಲ್ಲಿ

ಕುಳ್ಳಿರಿಸಿಕೊಂಡು ಕೇಳಿದ "ಮಾಲಿನಿ ನಿನಗೆ ತೊಂದರೆ ಕೊಡುತ್ತಾಳೆಯೇ ?" ಮಾತು ಹೊರಬಿದ್ದೊಡನೆಯೆ ಚಂದಿರೆ ಕಣ್ಣರಳಿಸಿ ಹೇಳಿದಳು. "ಮಾಲಿನಕ್ಕ ನನ್ನನ್ನು ಮಗು ಮುಟ್ಟಗೊಡಿಸುವುದಿಲ್ಲ!"

"ನೀನು ಮುಟ್ಟಬಾರದು."

"ಅದೇಕೆ ?" ಕಣ್ಣರಳಿಸಿದಳು ಚಂದಿರೆ.

"ಆಟವಾಡಿದ ನಿನ್ನ ಕೈಗಳು ಕೊಳೆಯಾಗಿರುತ್ತವೆ."

"ನೋಡಿದೆಯೋ, ಹೇಗಿದೆ ? ಮಾವ ಇನ್ನು ನಿನ್ನನ್ನು ಪ್ರೀತಿಸುವುದಿಲ್ಲ !" ಹುಬ್ಬು ಹಾರಿಸಿ ನಕ್ಕಳು ಮಾಲಿನಿ, ಮಾಧು ಮುಖದಲ್ಲೂ ಪ್ರತಿ ನಗು ಮಿನುಗಿತು.

"ಮಾವ, ನೀವು ಪ್ರೀತಿಸುವುದಿಲ್ಲವೇ ?"

"ಇನ್ನೇಕೆ ಮಾವ ಪ್ರೀತಿಸುತ್ತಾರೆ ?"

"ಮಾಲಿನಿ ಹೇಳುವುದೆಲ್ಲಾ ಸುಳ್ಳು. ನೀನೇ ನನ್ನ ಮುದ್ದು ಮಗು."

ರಾಯ ಮಗುವನ್ನು ಅಪ್ಪಿಕೊಂಡು ಮುದ್ದಿಟ್ಟ.

"ಈ ಪ್ರೀತಿಯೆಲ್ಲಾ ಮೇಲು ಮೇಲಕ್ಕೆ !" ಕೆಣಕಿದಳು ಮಾಲಿನಿ.

"ಅದೆಲ್ಲಾ ಸುಳ್ಳು ! ಮಾವ ನನಗೆ ಜರತಾರಿ ಲಂಗ ಕೊಟ್ಟಿದ್ದಾರೆ !" ಕಣ್ಣರಳಿಸಿ ಹೇಳಿದಳು ಚಂದಿರೆ.

"ನಿನಗಷ್ಟೇ ಅಲ್ಲ, ಜರತಾರಿ ಸೀರೆ ನಮಗೂ ಕೊಟ್ಟಿದ್ದಾರೆ. ಪ್ರೀತಿ ಮಾತ್ರ ಮಗಳ ಕಡೆಗೆ."

"ಮಾಲಿನಿ ಬಲು ತಂಟೆ ಹುಡುಗಿ; ಅವಳ ಮಾತು ಕೇಳಬೇಡ."

"ಮಾವ ಹೇಳಿದ್ದು ಕೇಳಿದಿರೇನು ?" ಚಂದಿರೆ ಕಿಲಕಿಲನೆ ನಕ್ಕಳು.

"ಅದಿರಲಿ, ಬಾ. ನಿನಗೆ ಹೆರಳು ಹಾಕುವೆ."

ಮಾಲಿನಿ ಉತ್ತರಕ್ಕೂ ಕಾಯದೆ ಚಂದಿರೆಯನ್ನು ಒಳಗಡೆ ಎಳೆದೊಯ್ದು ಹೆರಳು ಹಾಕಿ ಪುಟ್ಟ ಪುಟ್ಟ ಒಡವೆಗಳನ್ನಿಟ್ಟು ಶೃಂಗರಿಸಿದಳು. ಹೊಸಲಂಗವನ್ನುಟ್ಟು ಸರ್ವಾಲಂಕಾರ ಭೂಷಿತಳಾದ ಚಂದಿರೆ ಪುಟ್ಟ ಹೆಣ್ಣೇ

ಆದಳು. ನಾಮಕರಣದ ಅಂಗವಾಗಿ ಭಕ್ಷ್ಯ ಭೋಜ್ಯದಡಿಗೆಯೂ ಸಕ್ಕರೆ ಪಟ್ಟಣಗಳ ತಯಾರಿಯೂ ನಡೆದಿತ್ತು. ಮನೆಯು ಅಂದವಾದ ರಂಗವಲ್ಲಿ ಯಿಂದಲಂಕೃತವಾಗಿದ್ದು ಅತಿಥಿಗಳಿಗೆ ಸ್ವಾಗತ ಬಯಸಿತು.

ಚಂದಿರೆಯೊಂದಿಗೆ ವಿಮಲೆಯೂ ಓಡಾಡಿ ಕೆಲಸಕಾರ್ಯಗಳನ್ನು ಮಾಡಲು ಮುಂದಾದಳು. ಸರಸು ನಿಶ್ಯಕ್ತಳಾಗಿದ್ದುದರಿಂದ ಓಡಾಟದಲ್ಲಿ ಪಾಲ್ಗೊಳ್ಳದಾದಳು. ಬಹುಮಂದಿ ಆಹ್ವಾನಿತರು ಆಗಮಿಸಿದರು. ಮಾಧು ಎಲ್ಲರನ್ನೂ ಆದರದಿಂದ ಬರಮಾಡಿಕೊಂಡ. ಸಂತಸದ ವಾತಾವರಣದಲ್ಲಿ ಮಗುವಿಗೆ 'ನಳಿನಿ'ಯೆಂದು ಹೆಸರಿಸಿ ನಾಮಕರಣ ಸಮಾರಂಭ ಜರುಗಿತು. ಶಿವಮ್ಮ ಮಕ್ಕಳೊಂದಿಗೆ ಸಂತೋಷದಲ್ಲಿ ಪೂರ್ಣ ಭಾಗಿಯಾದಳು. ಬಹು ಮಂದಿಯ ದೃಷ್ಟಿಗೆ ಬಿದ್ದುದರಿಂದ ಮಗುವಿಗೆ ಕಣ್ಣೆಸರಾದೀತೆಂದು ಪುಟ್ಟಮ್ಮ ಉಪ್ಪು ಮೆಣಸಿನಕಾಯಿಗಳನ್ನು ಸುಳಿದು ದೃಷ್ಟಿ ಬಳಿದಳು. ಶಾರದೆಯ ಬಳಿ ಕುಳಿತಿದ್ದ ಸೀತೆ "ಮಾಲಿನಿಯನಂತರ ಈ ಮನೆ ಬರಿದೋ ಎಂಬಂತಾಗಿತ್ತು. ಈಗ ನಳಿನಿ ಬಂದು ಮನೆ ತುಂಬಿತು." ಎನ್ನುತ್ತಾ ಸಂತಸಪೂರ್ಣ ಮಂದಹಾಸ ಬೀರಿದಳು.

"ಮಾಲಿನಿಯಂತಹ ಮಗಳೇ ಬೇಕೆಂಬ ಬಯಕೆಯೂ ಇತ್ತು." ಶಾರದೆ ಮನಸ್ತೃಪ್ತಿಯನ್ನು ವ್ಯಕ್ತಪಡಿಸಿದಳು.

ಮುಖ ಅರಳಿ ಹೂವಾಗಿತ್ತು.

"ಮಗು ಮಾಲಿನಕ್ಕನ ಹಾಗಿಲ್ಲವಲ್ಲಾ ? ಅವಳಿರುವುದೆಲ್ಲಾ ಚಂದಿ ರೆಯ ಹಾಗೆ." ಬೇಕೆಂತಲೇ ನುಡಿದಳು ವಿಮಲೆ.

"ವಿಮಲೆಯ ಮಾತು ಸತ್ಯ. ಚಂದಿರೆ ಹೆಮ್ಮೆಯಿಂದ ಹೇಳಿಕೊಂಡಳು. ಕಣ್ಣುಗಳಲ್ಲಿ ಕಾಂತಿಯುಕ್ಕುತ್ತಿತ್ತು.

"ನಿನ್ನ ಹಾಗಿದ್ದರೆ ಮಗು ಚೆನ್ನಾಗಿಲ್ಲವೆಂದಾಯ್ತು !" ತಕ್ಷಣ ಒತ್ತಿ ಹೇಳಿದಳು ಮಾಲಿನಿ. ತುಟಿಗಳಲ್ಲಿ ತುಂಟನಗೆ ನಲಿಯುತ್ತಿತ್ತು.

"ಓಹೋ, ಅದೆಲ್ಲಾ ಬಿಟ್ಟು ಬಿಡಿರಿ. ನಿಮಗಿಂತ ನಾನೇ ಚೆನ್ನಾ ಗಿರೋದು !" ಸವಾಲು ಹಾಕಿದಳು ಚಂದಿರೆ.

"ನೀನು ಚೆನ್ನ ಅಂತ ನೀನೇ ಹೇಳಿಕೊಳ್ಳಬೇಕು!"

"ಅಜ್ಜಿ ಹೇಳಿಬಿಡಲಿ. ಯಾರು ಚೆನ್ನ ?" ವಿಮಲೆಯ ಸಲಹೆ.

ಅಷ್ಟರಲ್ಲಿ ಮಾಧು ಅಲ್ಲಿಗೆ ಬಂದ. ಚಂದಿರೆ ಓಡಿಹೋಗಿ ಅಪ್ಪಿಕೊಂಡು ಕೇಳಿದಳು "ಮಾಮಾ, ನಾನು ಚೆನ್ನೋ, ಮಾಲಿನಕ್ಕ ಚೆನ್ನೋ ? ನೀವೇ ಹೇಳಿರಿ." ಮುಖದಲ್ಲಿ ಉತ್ಸುಕತೆ ತುಂಬಿ ಹರಿಯಿತು.

"ನಿನ್ನ ಮುಂದೆ ಮಾಲಿನಿಯೆ ? ನೀನು ರನ್ನದ ಪುತ್ಥಳಿ !"

"ಮಾಲಿನಕ್ಕ ?" ಕಣ್ಣುಗಳನ್ನರಳಿಸಿ ಕೇಳಿದಳು ಚಂದಿರೆ.

"ಅವಳು ಕಂಚಿನ ಬೊಂಬೆ."

"ಕೇಳಿದಿರಾ ?" ಕೇಕೆ ಹಾಕಿ ನಗುತ್ತ ಚಂದಿರೆ ಸಂತೋಷದಿಂದ ಕುಣಿ ಕುಣಿದಾಡಿದಳು. ಎಲ್ಲರ ಮುಖದ ಮೇಲೂ ನಗೆಯು ಮಿನುಗಿತು. ಮಾಧು ಚಂದಿರೆಯನ್ನು ಬಿಗಿದಪ್ಪಿದ. ನಗುವಿನಲೆಯು ಆಕರ್ಷಿಸಲಾಗಿ ರಾಮ ಕೃಷ್ಣನೂ ಪಶುಪತಿಯೂ ಅಲ್ಲಿಗೆ ಬಂದರು. ತಾಂಬೂಲವನ್ನು ಮೆಲ್ಲುತ್ತಿದ್ದ ಪಶುಪತಿ ವಿಷಯ ತಿಳಿದೊಡನೆ "ನೀವೆಲ್ಲರೂ ಏನಾದರೂ ಹೇಳಿರಿ. ಚಂದಿರೆ ಗಿಂತ ಮಾಲಿನಿ ಚೆನ್ನ!" ಕಣ್ಣು ಮಿಟುಕಿಸಿ ನಗುತ್ತಾ ನುಡಿದ. ನಿಂತ ನಿಲುವಿನಲ್ಲಿ ಆಸಕ್ತಿ ಹೊಮ್ಮುತ್ತಿತ್ತು.

"ನಾನೇ ಚೆನ್ನ !" ಚಂದಿರೆ ದಿಟ್ಟತನದಿಂದ ಎದುರಿಸಿದಳು.

"ಹಾಗಾದರೆ ನಿನ್ನ ಅಜ್ಜಿಯನ್ನು ಕೇಳೋಣ." ಎಂದ ಪಶುಪತಿ.

"ಹ್ಞೂ, ಅಜ್ಜಿ ಹೇಳಿಬಿಡಲಿ." ಎಂದ ಚಂದಿರೆ ಪುಟ್ಟಮ್ಮನನ್ನು ಬಿಗಿದಪ್ಪಿಕೊಂಡು-"ಅಜ್ಜೀ, ನೀವೇ ಹೇಳಿರಿ. ಯಾರು ಚೆನ್ನ ?" ಕಣ್ಣು ಗಳಲ್ಲಿ ಕುತೂಹಲ ಮೊಳೆಯಿತು.

"ಅಜ್ಜಿ ಮೊಮ್ಮಗಳನ್ನು ಬಿಟ್ಟು ಕೊಟ್ಟಾರೆಯೇ ? ನೀನು ಚೆನ್ನಾಗಿಲ್ಲ ದಿದ್ದರೂ ನೀನೇ ಚೆನ್ನಾಗಿದ್ದಿ ಎಂದೆನ್ನುತ್ತಾರೆ." ಮಾಲಿನಿಯೆಂದಳು.

"ಪಕ್ಷಪಾತ ಬೇಡ. ನಿಜವಾಗಿ ಹೇಳಲಿ." ಸಾನಂದದಿಂದ ನುಡಿ ದಳು ವಿಮಲೆ.

"ಚಂದಿರೆ ಚೆನ್ನ." ಎಂದ ಪುಟ್ಟಮ್ಮ ಚಂದಿರೆಯನ್ನು ಮುದ್ದಿಟ್ಟು ಕೊಂಡಳು. ಒಡನೆ ಚಂದಿರೆಯೂ ವಿಮಲೆಯೂ ನಲಿದಾಡಿದರು. ಎಲ್ಲರ

ಮುಖಮಂಡಲದಲ್ಲೂ ನಗು ಮಿನುಗಿತು.

"ಹೋಗಲಿ, ಈಗ ಇನ್ನೊಂದು ಸವಾಲು ನೀನು ಚೆನ್ನೋ ? ನಳಿನಿ ಚೆನ್ನೋ ? ನಿನ್ನ ಅಜ್ಜಿಯೇ ಹೇಳಲಿ." ಮಾಲಿನಿಯ ಮರುಪ್ರಶ್ನೆ.

"ಎಷ್ಟಾದರೂ ಅವಳೇ ಚೆನ್ನ." ಎಂದಳು ಶಾರದೆ. ಮಾತು ಹೊರ ಬಿತ್ತೋ ಇಲ್ಲವೋ ಚಂದಿರೆಯು "ನಾನಲ್ಲಪ್ಪ ಮುದ್ದು ನಳಿನಿ ಚೆನ್ನ." ಎಂದೆನ್ನುತ್ತ ಮಗುವನ್ನು ಮುದ್ದಿಟ್ಟಳು. ನಿದ್ದೆಗೈಯುತ್ತಿದ್ದ ಮಗು ಮಿಡುಕಿ ಬಿತ್ತು.

೩೫

ಪ್ರಾತಃಸಮಯ..........ಶುಭ್ರವಾತಾವರಣ........

ಅಂದು ಭಾನುವಾರ. ಹೊತ್ತು ಮೇಲೇರುವ ಮುನ್ನ ಚಂದು ರಾಂಪುರದಿಂದ ನಡೆದು ಬಂದಿದ್ದಾನೆ. ಜೋಗಿಹಳ್ಳಿಯಲ್ಲಿನ ರಾಮಣ್ಣನ ಮನೆಗೆ ನೇರವಾಗಿ ಬರಬೇಕಾದರೆ ರಾಜಣ್ಣನ ಮನೆಯ ಮುಗ್ಗುಲಿಂದೇ ಬರಬೇಕು. ಚಂದು ರಾಜಣ್ಣನ ಮನೆಗೆ ಹೋಗಿ ಮುಂದೆ ಹೋಗುವು ದೊಳ್ಳಿತೆಂದು ಯೋಚಿಸಿ ರಾಜಣ್ಣನ ಮನೆಗೆ ಹೋದ. ಮನೆಯಲ್ಲಿದ್ದ ರಾಜಣ್ಣ ಅಪರೂಪವಾಗಿ ಬಂದ ಸ್ನೇಹಿತನನ್ನು ಆದರದಿಂದ ಬರಮಾಡಿ ಕೊಂಡ. ಜಮುಖಾನೆಯ ಮೇಲೆ ಕುಳಿತುಕೊಳ್ಳುತ್ತ "ಬಲು ಬಿಸಿಲು ರಾಜಣ್ಣಾ." ಎಂದು ಕರವಸ್ತ್ರದಿಂದ ಮುಖದ ಮೇಲಿನ ಬೆವರಿನ ಹನಿಗಳನ್ನು ಒರೆಸಿಕೊಂಡ ಚಂದು.

"ಇತ್ತೀಚೆಗೆ ನೀನು ಬಹಳ ಅಪರೂಪ." ಗುಳಿಬಿದ್ದ ಕಣ್ಣುಗಳಲ್ಲಿ ಚೇತನ ಇಣಿಕಿ ಹಾಕಿತು. ಉಕ್ಕಿಬಂದ ಆನಂದದಿಂದ ನಗೆಮಲ್ಲಿಗೆಯರಳಿತು. ರಾಜಣ್ಣ ಸ್ವಲ್ಪ ಉತ್ಸಾಹಿತನಾದ.

"ನನಗೀಗ ಬಿಡುವೇ ಸಿಕ್ಕುವುದಿಲ್ಲ. ಮಾಡಬೇಕಾದ ಕೆಲಸ ಬಹಳ ಇದೆ. ವೆಂಕಟೇಶ ಬಂದು ಹೋಗಿಯೇ ತೀರಬೇಕೆಂದು ಬರೆದಿದ್ದಾನೆ. ಅದು ಅವರಮ್ಮನ ಕೋರಿಕೆಯಂತೆ; ಏನು ಸಮಾಚಾರವೋ ತಿಳಿಯದು. ವಿಚಾರಿಸಿಕೊಂಡು ಹೋಗೋಣವೆಂದು ಬಂದೆ". ಪಯಣದ ಬಳಲಿಕೆಯಿಂದ ಮುಖ ಬಾಡಿತ್ತು. ತಾನು ಬಂದ ಕಾರಣವನ್ನು ಮುಂದಿಟ್ಟ ಚಂದು.

"ಮಗನ ಮದುವೆ ವಿಚಾರ....ಅವರಿಗೆ ಮಾಡಬೇಕೆಂದು ಇಚ್ಛೆ. ಇವನೊಪ್ಪುವುದಿಲ್ಲ. ಅವನಿಗೆ ವಿಚಾರ ತಿಳಿಸದೇನೇ ನಿನ್ನನ್ನು ಬರಲು ಬರೆಸಿದ್ದಾರೆ. ಇವನು ಬರೆದಿದ್ದಾನೆ."

"ಹಾಗೇನು ?" ಚಂದು ಮುಗುಳ್ನಗು ಬೀರಿದ.

"ನಿಮ್ಮಲ್ಲಿ ಯುವದಳ ಬಲು ಹುರುಪಿನಿಂದ ಕೆಲಸ ಮಾಡುತ್ತಿದೆಯಂತೆ?"

"ಮಾಡುತ್ತಿದೆ. ಉತ್ಸುಕತೆಯೂ ಜೋರಾಗಿದೆ. ಈಗೀಗ ವಯಸ್ಕರೂ ಅಕ್ಷರಸ್ಥರಾಗುತ್ತಿದ್ದಾರೆ. ಹೆಣ್ಣುಮಕ್ಕಳನ್ನು ಹುರಿದುಂಬಿಸಲ ಕಾವೇರಿ ಟೊಂಕ ಕಟ್ಟಿ ಮುಂದೆ ನಿಂತಿದ್ದಾಳೆ. ಆದರೂ ಕಾಲ ಪರಿಪಕ್ವವಾಗಲಿಲ್ಲ. ವಾರಕ್ಕೊಮ್ಮೆ ನಾಟಕ ಆಡುತ್ತಾರೆ. ಬಂದ ಹಣದಿಂದ ಸಂಘ ಸಂಸ್ಥೆಗಳ ಅಭಿವೃದ್ಧಿಯಾಗುತ್ತದೆ. ಕಾಲಕ್ರಮೇಣ ಜನ ಬುದ್ಧಿವಂತರಾದರೆ ನಮ್ಮ ಶ್ರಮ ಸಾರ್ಥಕವಾದಂತೆ."

"ನಮ್ಮಲ್ಲಿ ಈಗ ಎಲ್ಲರೂ ಕಲಿಕೆಯ ಕಡೆ ಗಮನ ಕೊಡುವುದರಿಂದ ದನಕರುಗಳಿಗೆ ಹುಲ್ಲೂಡಿಸುವವರೇ ಇಲ್ಲವಾಗಿದೆ."

"ಬೆಳಗಿನ ತರಗತಿ ಮುಗಿದ ನಂತರ ನೋಡಿಕೊಂಡರಾಯ್ತು"

"ಹುಡುಗರು ಈಗಿನ ಕಾರ್ಯಕ್ರಮಗಳಲ್ಲಿ ಕೊಂಚ ಬದಲಾವಣೆ ಮಾಡಿಕೊಳ್ಳಬೇಕು ಎನ್ನುತ್ತಿದ್ದರು."

"ಹೇಗೆ ಅನುಕೂಲವೋ ಹಾಗೆ ಮಾಡಿಕೊಂಡರೆ ಸರಿ." ಎಂದ ಚಂದು ಪುನಃ "ನಿನ್ನ ಕರುಳಿನ ಬಾಧೆ ವಾಸಿಯಾದಂತೆ ತೋರಲಿಲ್ಲ. ಮತ್ತಷ್ಟು ಸೊರಗಿದ್ದೀಯೆ."

"ಅದು ವಾಸಿಯಾಗುವಂತೆ ತೋರಲಿಲ್ಲ. ಹಳ್ಳಿಯ ನಾನಾ ವೈದ್ಯೋಪಚಾರ ಮಾಡಿದ್ದಾಯ್ತು. ಈಗ ನಂಜನಗೂಡಿನ ಲಿಂಗಾಭಟ್ಟರಲ್ಲಿ ಔಷಧ ತೆಗೆದುಕೊಳ್ಳುತ್ತಿದ್ದೇನೆ. ಸುಮ್ಮನೆ ಔಷಧಿಗೆ ದುಡ್ಡು ಸುರಿಯುವುದೇ ಹೊರತು ರೋಗ ಗುಣವಾಗಲಿಲ್ಲ. ಇತ್ತ ಅಣ್ಣನಿಗೂ ಹುಷಾರಿಲ್ಲ. ಎಂಟು ಹತ್ತು ದಿನಗಳಿಂದ ಹಾಸಿಗೆ ಹಿಡಿದಿದ್ದಾರೆ. ಬೆನ್ನು ನೋವು ಎನ್ನುತ್ತಾರೆ. ತೈಲ ದಿನವೂ ಉಜ್ಜುತ್ತಿದ್ದಾರೆ. ಆದರೂ ಗುಣವೇನೂ ತೋರಲಿಲ್ಲ."

"ಓ ! ಹಾಗೇನೂ ? ನನಗದು ತಿಳಿಯದು. ಆಸ್ಪತ್ರೆಗೆ ಹೋಗಬೇಕಿತ್ತು."

"ಅಣ್ಣ ಹೊಸ್ತಿಲು ದಾಟಲಿಲ್ಲ. ಯಾಕೋ ಈಚೆಗೆ ಗ್ರಹಚಾರ ಚೆನ್ನಾಗಿಲ್ಲ."

"ಕಾಲಕಾಲಕ್ಕೆ ಅನುಗುಣವಾಗಿ ನಡೆಯದೆ ಗ್ರಹಚಾರ ಚೆನ್ನಾಗಿಲ್ಲ ವೆಂದರೆ ಆದೀತೆ ?"

"ನಾನೂ ಈಗ ಬಹಳ ಅಶಕ್ತ. ಕೆಲಸ ಮಾಡಲಾರೆ. ಗದ್ದೆ ತೋಟದ ಉಸ್ತುವಾರಿ ತುಂಬ ಕಠಿಣವಾಗುತ್ತಿದೆ."

"ಏಕೆ ಶಂಕರ ಅನಂತು ನೋಡಿಕೊಳ್ಳುವುದಿಲ್ಲವೇ ?"

"ಈಗ ಅವರ ಮೇಲೆಯೇ ಭಾರ ಹಾಕಿ ವಿಶ್ರಾಂತಿ ಪಡೆದಿದ್ದೇನೆ."

ನೀಲಮ್ಮ ಕಾಫಿಯನ್ನೂ ಬಾಳೆಯ ಹಣ್ಣುಗಳನ್ನೂ ತಂದು ಮುಂದಿಟ್ಟು ಕ್ಷೇಮಸಮಾಚಾರವನ್ನು ವಿಚಾರಿಸಿಕೊಂಡಳು. ಸ್ವಲ್ಪ ಹೊತ್ತಿನೊಳಗಾಗಿ ಶಿವು ಶಾಲೆಯಿಂದ ಓಡೋಡಿ ಬಂದ. ಅವನನ್ನು ಕರೆದು ಹತ್ತಿರ ಕೂರಿಸಿಕೊಂಡು ಚಂದು ಕೇಳಿದ. "ಶಿವೂ, ಶಾಲೆ ಹೇಗಿದೆ ?"

"ಚೆನ್ನಾಗಿದೆ."

"ನೀನೀಗ ಏನೇನು ಕಲಿತೆ ?"

"ಓದು ಬರೆಹ."

"ಎಷ್ಟನೆಯ ಪುಸ್ತಕ ಓದುತ್ತಿ ?"

"ಐದನೆಯ ಪುಸ್ತಕ."

"ನಿಮ್ಮ ತರಗತಿಯಲ್ಲಿ ಜಾಣರಾರು ?"

"ನಾನೇ ಜಾಣ !"

ಚಂದು ರಾಜಣ್ಣರಿಬ್ಬರೂ ಗೊಳ್ಳನೆ ನಕ್ಕುಬಿಟ್ಟರು. ಆದರೂ ಶಿವು ಅಪ್ರತಿಭನಾಗಲಿಲ್ಲ. ಚಂದು ಎದ್ದುನಿಂತ "ನಾನಿನ್ನು ಹೊರಡುವೆ. ರಾಮಣ್ಣನ ಮನೆ ಬಿಡುವಷ್ಟರಲ್ಲಿ ಮಧ್ಯಾಹ್ನವೇ ಆಗಿಬಿಡಬಹುದು."

"ನಡಿ, ನಾನೂ ಬರುವೆ. ಮೂರು ದಿನಗಳಿಂದ ಆ ಕಡೆ ಹೋಗ ಲಾಗಲಿಲ್ಲ."

ರಾಜಣ್ಣ ಚಂದು ಜೊತೆಗೆ ಹೊರಟ. ಗದ್ದೆಯ ಅಂಚಿನಲ್ಲಿ ಇಬ್ಬರೂ ನಡೆದರು. ಪೈರು ಹುಲುಸಾಗಿ ಬೆಳೆದು ಕಣ್ಣ ನೋಟ ಹರಿಯುವವರೆಗೂ ಹಚ್ಚಗೆ ಹಬ್ಬಿತ್ತು.

"ಚಂದೂ, ಇದುವರೆವಿಗೆ ಕಷ್ಟಪಟ್ಟು ದುಡಿಯುತ್ತಿದ್ದೆವು. ಈಗ ದೇಹ

ಕುಗ್ಗುತ್ತಿದೆ. ಇನ್ನು ಸಾಧ್ಯವಿಲ್ಲ."

"ನಿನಗೇನು ಈಗಲೇ ಮುಪ್ಪು ಬಂತೇ? ಸರಿಯಾದ ಡಾಕ್ಟರಲ್ಲಿ ತೋರಿಸಿಕೊಂಡು ಆರೋಗ್ಯ ಸರಿಪಡಿಸಿಕೊಳ್ಳಬಾರದೇ? ರವಿಯೊಂದಿಗೆ ಆಸ್ಪತ್ರೆಗೆ ಹೋದರೆ ನಿನಗೆ ಎಲ್ಲ ಅನುಕೂಲಗಳನ್ನೂ ಒದಗಿಸುತ್ತಾನೆ. ಉದಾಸೀನ ಮಾಡಬೇಡ."

ರಾಜಣ್ಣ ಮಾತಾಡದೆ ಮೌನವಾಗಿ ಹೆಜ್ಜೆ ಹಾಕಿದ. ಕೆಲವು ನಿಮಿಷಗಳೊಳಗಾಗಿ ಇಬ್ಬರೂ ರಾಮಣ್ಣನ ಮನೆಗೆ ಬಂದಿದ್ದರು. ಜಗಲಿಯ ಮೇಲೆ ನರಳುತ್ತಾ ಮಲಗಿದ್ದ ರಾಮಣ್ಣ ಚಂದುವನ್ನು ಕಾಣುತ್ತಲೂ "ಬಾರಯ್ಯಾ, ಚಂದೂ." ಎಂದ. ಮುಖದಲ್ಲಿ ಹಸನಾದ ನಗೆಯರಳಿತು.

"ಹಾಸಿಗೆ ಹಿಡಿದು ಬಿಟ್ಟಿದ್ದೀಯೆ."

"ಅಗಳು ಹಾರುವಾಗ ಸ್ವಲ್ಪ ಉಳುಕಿದಂತಾಯಿತು. ನೋವು ತಡೆಯಲಾರೆ. ಅಂದಿನಿಂದಲೂ ತೈಲ ಉಜ್ಜಿಸುತ್ತಿದ್ದೇನೆ. ಕೊಂಚವೂ ಕಡಿಮೆಯಾಗಲಿಲ್ಲ."

"ಆಸ್ಪತ್ರೆಗೆ ಹೋಗಿ ಎಕ್ಸ್‌ರೇ ನೋಡಿಸು. ಬರಿಯ ತೈಲವುಜ್ಜಿಸುವುದರಿದ ಪ್ರಯೋಜನವಿಲ್ಲ."

ಚಂದು ಜಮುಖಾನೆಯ ಮೇಲೆ ಕುಳಿತುಕೊಂಡ. ರಾಜಣ್ಣ ಒಳಗಡೆ ಹೋಗಿ ರಾಜಮ್ಮನಿಗೆ ಚಂದು ಬಂದಿರುವ ಸುದ್ದಿಯನ್ನು ಮುಟ್ಟಿಸಿ ಬಂದು ಕುಳಿತುಕೊಂಡ.

"ರಾಮಣ್ಣಾ, ಉದಾಸೀನ ಮಾಡದೆ ಡಾಕ್ಟರಲ್ಲಿ ತೋರಿಸಿಕೊ."

"ವೆಂಕಟೇಶನೂ ಹಾಗೆಂದೇ ಹೇಳುತ್ತಿದ್ದಾನೆ. ನಾನೇ ನಿಧಾನಿಸುತ್ತಿದ್ದೇನೆ." ಎಂದ ರಾಮಣ್ಣ ಪುನಃ ಕೇಳಿದ "ನಾನು ಬರೆಸಿದ ಕಾಗದ ತಲುಪಿತೇ?"

"ಹೌದು, ಅದನ್ನು ನೋಡಿಯೇ ಹೊರಟು ಬಂದೆ. ಊರಿನಲ್ಲಿ ಮಾಡಿ ಮುಗಿಸಲಾರದಷ್ಟು ಕೆಲಸ...ಆದರೂ ಹೊರಟು ಬಂದೆ."

"ನೀನು ಇನ್ನು ಹೆಚ್ಚು ದಣಿಯಬಾರದು. ಹುಡುಗರಿಂದ ಮಾಡಿಸಿಕೊ. ವೆಂಕಟೇಶನ ಮದುವೆಯ ಬಗ್ಗೆಯೆ ನಿನಗೆ ಬರೆಸಿದುದು. ನೀನು ತಲೆಹಾಕದೆ ಇದು ಆಗುವಂತಿಲ್ಲ."

"ಅವನೇನೆನ್ನುತ್ತಾನೆ."

"ಅವನೊಪ್ಪುವುದಿಲ್ಲವೆಂತಲೇ ನಿನಗೆ ಬರ ಹೇಳಿದುದು."

"ಕೆಲಸ ಕಾರ್ಯಗಳೆಲ್ಲಾ ಒಂದು ಹದಕ್ಕೆ ಬಂದಿವೆ. ಗದ್ದೆ ತೋಟಗಳ ಕೆಲಸವನ್ನೂ ನೋಡಿಕೊಳ್ಳುತ್ತಾನೆ. ಮಾಸ್ತರಿಕೆಯ ಸಂಬಳವೂ ಕೈಗೆ ಬರುತ್ತಿದೆ. ಯಾವ ತೊಂದರೆಯಿಲ್ಲದಿದ್ದರೂ ಹಠ ಮಾಡುತ್ತಿದ್ದಾನೆ."

ಅಷ್ಟರಲ್ಲಿ ರಾಜಮ್ಮ ಅಲ್ಲಿಗೆ ಬಂದಳು. ಕೈಯಲ್ಲಿ ಕಾಫಿಯ ಲೋಟೆಗಳಿದ್ದುವು. ನೋಡುತ್ತಲೇ ಚಂದು–"ಇದೇತಾನೆ ರಾಜಣ್ಣನ ಮನೆಯಲ್ಲಿ ಮುಗಿಸಿದೆ. ಮತ್ತೇಕೆ ಈಗ ?"

"ಆದರೇನಂತೆ ?" ಒತ್ತಾಯಪೂರ್ವಕವಾಗಿ ಮುಂದಿಟ್ಟಳು ರಾಜಮ್ಮ. ಕುಡಿಯದಿದ್ದರೆ ಬಿಡುವಂತಿಲ್ಲ. ಒಲ್ಲದ ಮನಸ್ಸಿನಿಂದ ಕಾಫಿಯನ್ನು ಕೈಗೆ ತೆಗೆದುಕೊಂಡ ಚಂದು.

"ಚಂದಣ್ಣಾ, ನಿಮ್ಮಿಂದೊಂದು ಉಪಕಾರವಾಗಬೇಕಾಗಿದೆಯೆಂದು ನಿನ್ನನ್ನು ಬರಮಾಡಿಕೊಂಡುದುದು. ಈ ಊರಿಗೆ ನಿಮ್ಮಿಂದ ಎಷ್ಟೋ ಉಪಕಾರವಾಗಿದೆ. ಇದೂ ಒಂದನ್ನು ಮಾಡಿರಿ." ಎಂದ ರಾಜಮ್ಮ ಪುನಃ ಮುಂದುವರಿದು ತನ್ನಂತರಂಗವನ್ನು ತೋಡಿಕೊಂಡಳು. "ಇಂದು ವೆಂಕಟೇಶ ನೀವು ಎಳೆದ ಗೆರೆ ದಾಟುವುದಿಲ್ಲ. ನೀವೊಂದು ಮಾತು ಹೇಳಿದರೆ ಮದುವೆಗೆ ಒಪ್ಪುತ್ತಾನೆ. ಕಳೆದೈದು ವರ್ಷಗಳಿಂದ ಒಬ್ಬಳೇ ಹೆಣಗಿ ನನಗೆ ಸಾಕಾಗಿದೆ."

"ಒಂದಿನ ಮೈ ಚೆನ್ನಾಗಿಲ್ಲದಿದ್ದರೆ ಒಲೆ ಹಚ್ಚುವವರಿಲ್ಲ. ಬೆಳೆದ ಮಗನಿಗೆ ಮದುವೆಯಾಗದೇನು ದಾಡಿ ?" ಎಂದ ರಾಜಣ್ಣ.

"ನಮಗೆ ಇನ್ನೂ ಎಷ್ಟು ಭಾರ ಹೊರಲಾದೀತು." ಬೆನ್ನು ನೋವಿನಿಂದ ನರಳುತ್ತಲೇ ನುಡಿದ ರಾಮಣ್ಣ."

"ಅವನಿಗೆ ಕಲಿತ ಹೆಣ್ಣು ಬೇಕೆಂದಿರಬಹುದು."

"ಈಗ ಕಲಿತ ಹೆಣ್ಣುಗಳಿಗೇನು ಕಡಿಮೆ ಚಂದಣ್ಣಾ ? ನಮ್ಮಲ್ಲೇ ಎಲ್ಲರೂ ಕಲಿಯುತ್ತಿದ್ದಾರೆ. ಅವನು ಮೆಚ್ಚಿದ ಹೆಣ್ಣನ್ನೇ ತಂದರೆ ಸೈ." ರಾಜಮ್ಮನ ದನಿಯಲ್ಲಿ ಸಮಾಧಾನವಿತ್ತು.

"ನಿಮ್ಮ ಕಾಲಕ್ಕೆ ಹೆಣ್ಣು ಕಲಿಯಬಾರದೆಂದಿರಿ. ಈಗ ನೋಡಿ,

ಕಾಲ ಹೇಗೆ ಬದಲಾಗುತ್ತಿದೆ. ನೀವೇ ಸ್ವತಃ ಕಲಿತ ಹೆಣ್ಣನ್ನು ಬಯಸು ತಿದ್ದೀರಿ!"

"ಪಾಪ, ಆಗ ಎಲ್ಲರೂ ನಿಮ್ಮ ಮೇಲೆ ಕೋಪಗೊಂಡರು. ಈಗ ಉತ್ಸಾಹದಿಂದ ಕಲಿಯುತ್ತಿದ್ದಾರೆ. ಕೈಗಾರಿಕೆಯಲ್ಲಿ ಎಲ್ಲರೂ ನಿಸ್ಸೀಮರಾಗಿ ನಾಲ್ಕು ಕಾಸನ್ನೂ ಸಂಪಾದಿಸಿಕೊಂಡಿದ್ದಾರೆ." ಎಂದಳು ರಾಜಮ್ಮ.

"ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶಾಲೆಯಿಲ್ಲ. ಎಲ್ಲರೂ ಒಂದೆಡೆ ಕಲಿಯಬೇಕು. ಹುಡುಗರೇ ಪಾಠ ಹೇಳುವುದು ಎಷ್ಟಾದರೂ ಸರಿಯಲ್ಲ. ಎಷ್ಟು ಕಲಿತರೂ ಹೆಣ್ಣು ಹೆಣ್ಣೇ!" ರಾಜಣ್ಣ ಅಸಮಾಧಾನ ಸೂಚಿಸಿದ. ಕಣ್ಣುಗಳಲ್ಲಿ ಕಿಡಿಗಳು ಕ್ಷಣಕಾಲ ಮಿಂಚಿ ಮಾಯವಾದುವು.

"ಕಾಲ ಕ್ರಮೇಣ ದುಡಿಮೆ ಹೆಚ್ಚಿದರೆ ನಿಮ್ಮ ಸೌಕರ್ಯಗಳನ್ನೂ ಹೆಚ್ಚಿಸಿ ಕೊಳ್ಳಿರಿ." ಎಂದವನೇ ಮುಂದುವರಿದ ಚಂದು "ಈಗಿನ್ನೂ ಹೊಸದು ಕಲಿಯುವವರು ಕಡಿಮೆ. ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶಾಲೆ ಈಗಲೇ ಏಕೆ? ಕೊಂಚ ಸುಧಾರಿಸಿಕೊಳ್ಳಿರಿ. ಅನಂತರ ಒಂದೊಂದಾಗಿ ಅಭಿವೃದ್ಧಿ ಪಡಿಸಿಕೊಳ್ಳಬಹುದು."

"ಚಂದಣ್ಣಾ, ನಿಮ್ಮ ಪರಿಶ್ರಮದಿಂದ ನಮ್ಮ ಊರು ನಳನಳಿಸುತ್ತಿದೆ. ವೆಂಕಟೇಶ ಶಂಕರ ಅನಂತು ಮೂವರಿಗೂ ದಿನಕ್ಕೆ ನಾಲ್ಕು ಗಂಟೆ ಕೆಲಸ ಮಾಸ್ತರಿಕೆಯ ಸಂಬಳವೂ ಬರುತ್ತದೆ. ವ್ಯವಸಾಯದ ಉಸ್ತುವಾರಿಯನ್ನೂ ನೋಡಿಕೊಳ್ಳುತ್ತಾರೆ. ಇಂತಹ ಸೌಕರ್ಯ ನೀವಿಲ್ಲದಿದ್ದರೆ ನಮ್ಮ ಮನೆಯ ಬಾಗಿಲಿಗೆ ಬರುತ್ತಿತ್ತೇ? ಆಗ ಇವರೆಲ್ಲಾ ನಿಮ್ಮ ಮೇಲೆ ರೇಗಾಡಿದ್ದನ್ನು ನೆನೆಸಿಕೊಂಡರೆ ಈಗ 'ಅಯ್ಯೋ' ಎನ್ನಿಸುತ್ತದೆ" ಎಂದಳು ರಾಜಮ್ಮ.

ಮೂವರ ಮುಖದಲ್ಲೂ ಮುಗುಳ್ನಗು ಮೂಡಿತು. ತುಸು ತಡೆದು ರಾಜಣ್ಣ-"ಇಲ್ಲಿ ನಾಲ್ಕೈದು ಮಂದಿಗಾಗುವಷ್ಟು ಭೂಮಿಕಾಣೆಯಿಲ್ಲ. ಒಬ್ಬೊಬ್ಬರನ್ನೂ ಒಂದೊಂದು ಉದ್ಯೋಗಕ್ಕೆ ಹಚ್ಚಬೇಕೆಂದು ಶಂಕರ ಹೇಳುತ್ತಾನೆ. ನನ್ನಿಂದಂತೂ ಈಗ ಏನೂ ಸಾಧ್ಯವಿಲ್ಲ. ಏನಾದರೂ ಮಾಡಿಕೊಳ್ಳಲಿ ಎಂದು ಸುಮ್ಮನಿದ್ದು ಬಿಟ್ಟಿದ್ದೇನೆ."

"ಒಬ್ಬೊಬ್ಬರು ಒಂದೊಂದು ಉದ್ಯಮ ಹಿಡಿಯುವುದು ಅನುಕೂಲ."

ರಾಜಮ್ಮ ಚಂದುವಿಗಾಗಿ ಅಡಿಗೆ ಮಾಡಲು ಒಳ ಹೊಕ್ಕಳು ಅರ್ಧ

ಗಂಟೆಯೊಳಗಾಗಿ ವೆಂಕಟೇಶ ರಮೇಶ ಶಂಕರ ಅನಂತು ಸಿದ್ಧರಾಮು ಪುಟ್ಟಗಂಗ ಅಲ್ಲಿಗೆ ಬಂದರು. ಬರುಬರುತ್ತಲೇ ಸಿದ್ಧರಾಮು,

"ನೀವು ಗದ್ದೆಯ ಕೋಗಿನಲ್ಲಿ ಬರುತ್ತಿರುವಾಗಲೇ ನೋಡಿದೆವು."

"ಓಹೋ ! ಆಗಲೇ ನಿಮಗೆ ತಿಳಿದಿತ್ತು ?" ಚಂದಂ ನಸು ನಕ್ಕ.

ಎಲ್ಲರೂ ಜಗುಲಿಯಂಚಿನ ಮೇಲೆ ಕುಳಿತುಕೊಂಡರು.

"ಚಂದಣ್ಣಾ, ಈ ಸಲ ಊರ ನಿರ್ಮಲೀಕರಣ ನಡೆದಷ್ಟು ಹಿಂದೆಂದೂ ನಡೆದಿರಲಿಲ್ಲ. ಊರವರು ಈಚೀಚೆಗೆ ಬಹಳ ಸಹಕಾರ ತೋರುತ್ತಾರೆ. ನಾವು ಹೇಗೆ ಹೇಳಿದರೆ ಹಾಗೆ ಕೆಲಸ ನಡೆಯುತ್ತದೆ. ಆರು ಸಂಸಾರವನ್ನು ಈ ಸಲ ಕೇರಿ ಬಿಡಿಸಿದ್ದಾಯ್ತು. ಎಲ್ಲರೂ ಅವರವರ ತೋಟದ ಬಳಿ ಅಚ್ಚುಕಟ್ಟಾಗಿ ಮನೆ ಕಟ್ಟಿಕೊಂಡಿದ್ದಾರೆ." ಎಂದ ಶಂಕರ.

"ಈ ಸಲ ಬಡಗಿ ಶಾಲೆ ಆರಂಭಿಸಿದ್ದೇವೆ. ಮುಂದಿನ ಸಾಲಿಗೆ ಕಮ್ಮಾರಶಾಲೆ."

"ಕೈಮಗ್ಗದ ಬಟ್ಟೆಗಳಿಗೂ ಅಪೇಕ್ಷೆಯಿದೆ. ಕೆಲಸ ಕಾರ್ಯ ನಾವು ನಿರೀಕ್ಷಿಸುವುದಕ್ಕಿಂತಲೂ ಉತ್ತಮವಾಗಿ ನಡೆಯುತ್ತಿದೆ. ಮಕ್ಕಳು ಕಲಿಯಲು ಬಹಳ ಉತ್ಸಾಹ ತೋರುತ್ತಿದ್ದಾರೆ. ಮೊದಮೊದಲು ಹೇಗಪ್ಪಾ ಎನಿಸುತ್ತಿತ್ತು. ಈಗ ಮನೆಮನೆಯಲ್ಲೂ ಹೊಸಹೊಸ ಚಾಪೆಗಳು ಜಮಖಾನೆಗಳೂ ಹಚ್ಚಡಗಳೂ ತುಂಬಿವೆ. ಎಲ್ಲರಿಗೂ ಅಷ್ಟರಲ್ಲೇ ಸಂತೃಪ್ತಿ."

"ವಿದ್ಯೆಕಲಿಯುವುದರಲ್ಲೂ ಮಕ್ಕಳು ತುಂಬಾ ಆಸಕ್ತಿ ತೋರುತ್ತಿದ್ದಾರೆ. ಪಠ್ಯ ಪುಸ್ತಕಗಳನ್ನೇ ಓದಬೇಕೆಂಬ ನಿಯಮವಿಲ್ಲ. ಪರೀಕ್ಷೆಗಳ ಕೋಟಲೆಯಿಲ್ಲ. ಓದು ವಿದ್ಯೆ ಬಂದರೆ ಸಾಕೆಂಬ ನಿಮ್ಮ ನಿಯಮ ನಮ್ಮವರಿಗೆ ತುಂಬ ಹಿಡಿಸಿದೆ."

ದಿನ ನಿತ್ಯದ ವರದಿಯನ್ನು ಎಂದಿನಂತೆ ಶಿಷ್ಯರು ಗುರುವಿಗೊಪ್ಪಿಸಿದರು. ಅನಂತರ ಶಂಕರ ಹೇಳಿದ "ಚಂದಣ್ಣಾ, ಹೊತ್ತು ಮೀರಿತು. ನೀವು ಉಂಡು ವಿಶ್ರಾಂತಿ ಪಡೆಯಿರಿ. ನಾವು ಅನಂತರ ಬರುತ್ತೇವೆ. ಕೊಂಚ ಕೂಡಿ ಮಾತಾಡೋಣ."

"ಎಲ್ಲರೂ ಬೇಗನೆ ಬಂದು ಬಿಡಿರಿ. ನಾನಿಂದು ಹೊರಡಲೇಬೇಕು."

ಎಲ್ಲರೂ ಅವರವರ ಮನೆಗಳಿಗಭಿಮುಖವಾಗಿ ತೆರಳಿದರು. ಜೊತೆಗೆ

ರಾಜಣ್ಣನೂ ಹೊರಟು ಹೋದ. ರಮೇಶನನ್ನು ನೋಡುತ್ತಾ ಚಂದು- "ನೀನು ಓದುವುದನ್ನು ನಿಲ್ಲಿಸಬೇಡ. ಈ ಸಲ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುತ್ತೀ ತಾನೆ ?"

"ಬಹಳ ಕಷ್ಟಪಟ್ಟಿದ್ದೇನೆ; ಏನಾಗುತ್ತೋ ಗೊತ್ತಿಲ್ಲ."

"ಅವನಿಗೆ ಓದಲೇ ಬೇಕೆಂಬ ಆಸೆ ಬಹಳವಿದೆ. ಮುಖ್ಯವಾಗಿ ಅದೃಷ್ಟವಿರಬೇಕು." ರಾಮಣ್ಣನ ದನಿಯಲ್ಲಿ ಅನಿರೀಕ್ಷಿತವಾಗಿ ಅನುಕಂಪ ಮೂಡಿತು.

"ಹೇಗೂ ವೆಂಕಟೇಶ ಮನೆಯಕಡೆ ಇದ್ದಾನೆ. ನೀನಾದರೂ ಓದಿ ಉದ್ಯೋಗ ಮಾಡು. ಕಷ್ಟಪಟ್ಟಲ್ಲದೆ ವಿದ್ಯೆ ಹತ್ತುವುದಿಲ್ಲ."

ಮಾತು ಮುಗಿಯುವುದರೊಳಗಾಗಿ ಆನಂದ ಬಂದ. ಮುಖದಲ್ಲಿ ಬೆವರು ತುಂತುರು ತುಂತುರಾಗಿ ಹೊಮ್ಮಿತ್ತು.

"ಇದೇನು, ಅನಿರೀಕ್ಷಿತ ?" ಚಂದು ಕೇಳಿದ.

"ವೆಂಕಟೇಶ ರವಿಗೆ ಕಾಗದ ಬರೆದಿದ್ದುದರಿಂದ ರವಿ ರಾಮಣ್ಣನನ್ನು ಕರೆತರಲು ಕಳುಹಿಸಿದ. ರಾಮಣ್ಣ ಹಾಸಿಗೆ ಹಿಡಿದ ವಿಚಾರ ನಿನ್ನೆ ತಿಳಿಯಿತು." ಆನಂದ ತಾನು ಬಂದ ಕಾರಣವನ್ನು ಮುಂದಿಟ್ಟು ಪುನಃ "ಚಂದಣ್ಣಾ, ನೀವು ವಿರಾಮವಾಗಿದ್ದಂತಿದೆ ? ಇದೊಂದು ಸೋಜಿಗವೇ ಸರಿ."

"ಕಾಲ ಓಡುತ್ತಿರುವಾಗ ವಿರಾಮವನ್ನು ಎಲ್ಲಿಂದ ತರಲಿ ? ನಿಮಿಷವೂ ಬಿಡುವಿಲ್ಲ. ಅಗತ್ಯ ಬಿದ್ದುದರಿಂದ ಬಂದೆ."

"ಇನ್ನಾದರೂ ನೀವು ಸುತ್ತುವುದನ್ನು ಕಡಿಮೆ ಮಾಡಿರಿ ನಿಮಗೆ ಅಗತ್ಯವಾಗಿ ವಿಶ್ರಾಂತಿಬೇಕು."

"ಪರವಾಯಿಲ್ಲ ; ಹೇಗೋ ನಡೆಯುತ್ತೆ ಬಿಡು."

"ರತ್ನ ಹೇಗಿದ್ದಾಳೆ ?" ರಾಮಣ್ಣ ಕೇಳಿದ.

"ಚೆನ್ನಾಗಿದ್ದಾಳೆ. ಅವಳ ಪೂರ್ಣ ಜವಾಬ್ದಾರಿಯನ್ನು ಶಿವಮ್ಮನಿಗೆ ವಹಿಸಿದ್ದೇನೆ."

"ಈಗ ಎಷ್ಟು ತಿಂಗಳು ?" ಚಂದು ಕೇಳಿದ.

"ಐದು ತುಂಬಿತು. ಇಷ್ಟಾದೀತೆಂದು ನಾನೆಣಿಸಿರಲಿಲ್ಲ. ಶಿವಮ್ಮ ಒತ್ತಾಯ ಮಾಡಿದುದರಿಂದ ಕಳುಹಿಸಿಕೊಟ್ಟೆ. ಆಪರೇಷನ್ ಮಾಡಿಸಿದುದು

ಬಹಳ ಅನುಕೂಲವಾಯಿತು." ಆನಂದಾತಿಶಯದಿಂದ ನುಡಿ ಹೊರ ಬಿದ್ದಿತು. ತುಟಿಗಳಲ್ಲಿ ಎಳೆನಗು ಹರಿದಾಡಿತು.

"ಮದುವೆಯಾಗಿ ಹನ್ನೆರಡು ವರುಷಗಳಾದುವಲ್ಲವೇ ?"

"ಹೌದು, ನಮಗಿನ್ನು ಮಕ್ಕಳ ಭಾಗ್ಯವಿದೆಯೆಂದು ಕನಸಿನಲ್ಲೂ ಭಾವಿಸಿರಲಿಲ್ಲ" ಆನಂದ ಪುಲಕಿತನಾಗಿ ಮುಂದುವರಿದ "ಓ, ಮುಖ್ಯವಾದ ವಿಚಾರವನ್ನೇ ಮರೆತು ಬಿಟ್ಟಿದ್ದೆ! ರವಿ ದೇಶಕ್ಕೆ ಮೊದಲನೆಯವನಾಗಿ ಉತ್ತೀರ್ಣನಾಗಿದ್ದಾನೆ! ನಮ್ಮ ವಂಶದ ಮೊದಲನೆಯ ಡಾಕ್ಟರು!" ದನಿಯಲ್ಲಿ ನೂರ್ಮಡಿಯ ಉತ್ಸಾಹ ಹರಿದು ಬಂತು.

"ನನಗಿದು ಮೊದಲೇ ತಿಳಿದಿತ್ತು. ಅವನು ಎಂದೆಂದೂ ಪ್ರಥಮ ಶ್ರೇಣಿಯ ವಿದ್ಯಾರ್ಥಿ. ಕಷ್ಟಪಟ್ಟರೆ ಫಲವುಂಟು. ಅವನಂತೆ ಕಷ್ಟಪಡುವವರು ನಮ್ಮಲ್ಲಿ ಯಾರಿದ್ದಾರೆ ?"

"ಇನ್ನೊಂದು ವಿಷಯ! ಬಾಬೂಜಿಯ ಅಂಗಡಿಯಲ್ಲಿ ಹಣ ಕಳುವಾದುದು ರಂಗಣ್ಣನಿಂದ! ರವಿ ಇದುವರೆವಿಗೆ ಅವರಂಗಡಿಗೆ ಕೊಟ್ಟ ಹಣ ಬಡ್ಡಿ ಸಹಿತ ಹಿಂದಿರುಗಿ ಬಂದಿದೆ! ಅದರಲ್ಲಿ ಲಿಂಗಣ್ಣ ಕೊಟ್ಟಿದ್ದ ಸಾವಿರ ರೂಪಾಯಿಗಳನ್ನು ಹಿಂದಿರುಗಿಸಿ. ಮನೆಗೆರಡು ಕೊಠಡಿಗಳನ್ನು ಕಟ್ಟಿಸುತ್ತಿದ್ದಾನೆ ರವಿ. ಬಲು ದಿನದ ಸಮಸ್ಯೆಯೊಂದು ಈಗ ಬಗೆ ಹರಿಯಿತು."

"ಹಾ! ನಿಜವೇ ?"

"ಅದ್ಹೇಗೆ ಪತ್ತೆಯಾಯಿತು ?"

ಆನಂದ ನಡೆದುದೆಲ್ಲವನ್ನೂ ಸವಿಸ್ತಾರವಾಗಿ ಹೇಳಿದ. ಎಲ್ಲರ ಮುಖದ ಮೇಲೂ ಸಂತಸದ ನಗೆ ನಲಿಯಿತು. ಚಂದು ಅದೇ ವಿಚಾರವನ್ನು ಮೆಲಕು ಹಾಕುತ್ತ ಹತಸಂಜ್ಞನಾಗಿ ನಿಶ್ಚೇಷ್ಟನಾಗಿ ಯೋಚನೆಯ ಆಳಕ್ಕೆ ಮುಳುಗಿದ. ಅಂದಿನಿಂದ ಇಂದಿನವರೆಗೆ ರವಿಯ ಜೀವನ ಚಿತ್ರ ಕಣ್ಮುಂದೆ ಸುಳಿಸುಳಿದಳಿಯಿತು. ಇವರೆಲ್ಲಾ ಅವನ ಬಗ್ಗೆ ತೋರುತ್ತಿದ್ದ ಅನಾದರ ಮನದಲೆಯಲ್ಲಿ ತೇಲಿ ಹೋಯಿತು. ಚಂದು ಪುಳಕಿತನಾದ. ಅವನ ಪ್ರಗತಿಯ ಹೆಜ್ಜೆಯನ್ನು ಹಿಮ್ಮೆಟ್ಟಿಸಲಾರದ ಇವರು ಈಗ ಹತ್ತಿರವಾಗಿದ್ದಾರೆ. ಇದು ಪ್ರಪಂಚ! ಇದು ಜೀವನ! ಮನಸ್ಸು ಮಿಡುಕಿತು. ಪುನಃ ಯೋಚಿಸಿದ. ಒಂದು ವೇಳೆ ರವಿ-ಅಲ್ಲ-ರವಿಯೆಂಬ ಗಂಡು ಆ ಮನೆಯಲ್ಲಿ ಇಲ್ಲವಾಗಿದ್ದಿದ್ದರೆ

ಶಿವಮ್ಮನ ಗತಿ ಮುಗಿದು ಹೋಗುತ್ತಿತ್ತು...ಯೋಚನೆ ತುಂಡುಗಡಿದು ನೀಳವಾದ ನಿಟ್ಟುಸಿರೊಂದು ಹೊರ ಹೊಮ್ಮಿತು.

"ರವಿಯ ನಿರ್ಮಲ ಹೃದಯ ಇವರೆಲ್ಲರ ಮನದ ಕೊಳಕನ್ನೂ ನಿರ್ಮೂಲಗೊಳಿಸಿತು. ಬೆಳಕು ಬಂದ ಮೇಲೆ ಕತ್ತಲುಳಿದೀತೇ?" ನುಡಿಯಿತು ಅಂತರ್ವಾಣಿ.

ಯೋಚನೆಯ ಭರದಲ್ಲಿ ಚಂದು ಮಾತಾಡದೆ ಕುಳಿತುಕೊಂಡ. ಅಂತರ್ನಿಹಿತ ಯೋಚನಾತರಂಗಗಳು ಅಲೆಅಲೆಯಾಗಿ ಏರಿ ಇಳಿಯ ಹತ್ತಿದುವು.

"ಅಂತೂ ಆಗ ಕಟ್ಟಿದ ಹಣ ಈಗ ಪ್ರಯೋಜನಕ್ಕೆ ಬಂತು." ರಾಮಣ್ಣನೆಂದ. ದನಿ ಒಡಕು ಘಟದ ಶ್ರುತಿಯಂತೆ ಹೊಮ್ಮಿತು. ಸ್ವಲ್ಪ ಹೊತ್ತಿನನಂತರ ...ಏನೋ ಒಂದು ರೀತಿಯಲ್ಲಿ-"ಅವನು ಸ್ವಾಮಿಯ ಸ್ನೇಹಿತನಾಗಿದ್ದುಕೊಂಡು ಎಂತಹ ದ್ರೋಹ ಮಾಡಿದ್ದಾನೆ? ಶಿವ ಶಿವಾ, ನಂಬುವುದಕ್ಕೇ ಆಗುವುದಿಲ್ಲ!" ಎಂದ.

"ರಾಮಣ್ಣಾ, ಕಾಲವೇ ಹಾಗಿದೆ. ಆದರೂ ಸತ್ಯಕ್ಕೆ ಜಯವಿದೆ ಎಂಬುದು ಸುಳ್ಳಲ್ಲ.... ಈ ದೃಷ್ಟಾಂತವೇ ಸಾಕ್ಷಿ."

"ರವಿ ಪುಣ್ಯವಂತ" ಎಂದ ಆನಂದ. ಹೊರಗಡೆ ಹೋಗಿದ್ದ ವೆಂಕಟೇಶ ಮತ್ತು ರಮೇಶರಿಗೆ ಸುದ್ದಿ ತಿಳಿಯುತ್ತಲೂ ಹೌಹಾರಿದರು. ತುಂಬಿ ಬಂದ ಸಂತಸದಿಂದ ಜಿಗಿದಾಡುತ್ತ ಒಳ್ಳೆಯ ಸುದ್ದಿ ತಂದ ಆನಂದನನ್ನು ಮನಸಾ ಅಭಿನಂದಿಸಿದರು.

ರಾಮಣ್ಣನನ್ನು ಕುರಿತು ಒತ್ತಾಯಪೂರ್ವಕವಾಗಿ ಆನಂದ ಹೇಳಿದ.

"ರವಿ ನಿಮ್ಮನ್ನು ಕರೆದುಕೊಂಡು ಬರಲು ಹೇಳಿದ್ದಾನೆ. ನಾನಿಂದೇ ಹಿಂದಿರುಗಬೇಕು. ಮಧ್ಯಾಹ್ನದ ಬಸ್ಸಿಗೆ ಹೊರಡೋಣ."

"ನಾಲ್ಕುದಿನ ನೋಡಿಯೇ ಹೋಗುವೆ."

"ಇದುವರೆವಿಗೆ ನೋಡಿದುದು ಸಾಕು. ಇನ್ನು ಹೊರಡಿರಿ. ಅಲಕ್ಷ್ಯ ಎಂದೆಂದೂ ಅಪಾಯ."

"ಅದಕ್ಕೇಕೆ ಅಷ್ಟೊಂದು ಯೋಚನೆ? ರೋಗ ಬಲಿತ ಮೇಲೆ ಹೋಗುವುದಕ್ಕಿಂತ ಈಗ ಹೋಗುವುದೇ ಲೇಸು." ಚಂದು ಒತ್ತಾಯ ಪಡಿಸಿದ. ರಾಮಣ್ಣ ಯೋಚಿಸಿ ಆಗಲೆಂದು ಒಪ್ಪಿಕೊಂಡ. ಬಸ್ಸಿನ

ತನಕ ಹೋಗಲು ಎತ್ತಿನಗಾಡಿಯನ್ನು ಸರಿಪಡಿಸಲು ವೆಂಕಟೇಶ ಮುಂದಾದ. ಗಾಡಿಯಲ್ಲಿನ ಧೂಳನ್ನು ಝಾಡಿಸಿ ಹುಲ್ಲನ್ನು ಹಾಸಿ ಮೆತ್ತೆಯನ್ನು ಮಾಡಿ ಮೇಲೆ ಕಂಬಳಿಯನ್ನು ಹಾಸಿದ. ಗಾಡಿಯ ಕೀಲಗಳಿಗೆ ಎಣ್ಣೆಯನ್ನು ಹಾಕಿ ಅಣಿ ಮಾಡಿದ.

ಊಟಕ್ಕೆ ಅಣಿಯಾಯಿತು. ಎಲ್ಲರೂ ಎದ್ದರು.

೩೬

ಮಧ್ಯಾಹ್ನ ಮೂರು ಗಂಟೆಯ ಬಸ್ಸಿಗೆ ಹೊರಡಲು ಅಣಿಯಾದ ಚಂದುವನ್ನು ಒತ್ತಟ್ಟಿಗೆ ಕರೆದು ವೆಂಕಟೇಶನನ್ನು ಒಪ್ಪಿಸಲು ಹೇಳಿ ಗಾಡಿ ಹತ್ತಿದ. ರಾಜಮ್ಮ ಗಾಡಿಯ ಹಿಂಭಾಗದಲ್ಲಿ ನಿಂತುಕೊಂಡು "ಗಾಡಿ ಅಲುಗಿ ಬೆನ್ನು ನೋವು ಮತ್ತಷ್ಟು ಹೆಚ್ಚೀತು, ದಿಂಬನ್ನು ಸರಿಯಾಗಿಟ್ಟು ಕೊಳ್ಳಿ." ಎಂದು ಎಚ್ಚರಿಕೆ ಹೇಳುತ್ತಿದ್ದಂತೆ ಕಣ್ಣುಗಳು ಹನಿತುವು. ಸೆರಗಿನ ತುದಿಯಿಂದ ಕಣ್ಣುಗಳನ್ನು ಒರಿಸಿಕೊಂಡು ಪುನಃ ನುಡಿದಳು "ಪಥ್ಯಪಾನಾದಿ ಗಳನ್ನು ವೈದ್ಯರು ಹೇಳಿದಂತೆ ಮಾಡಿರಿ- ನಾಲ್ಕುದಿನ ನಿಂತರೂ ಚಿಂತೆಯಿಲ್ಲ. ಮನೆಯ ಕಡೆ ಯೋಚನೆ ಬೇಡ. ಮೊದಲೊಮ್ಮೆ ಸುಧಾರಿಸಿಕೊಂಡರೆ ಸಾಕು; ಆಗಾಗ ಕಾಗದ ಬರೆಯಿರಿ." ಆನಂದನೆಡೆಗೆ ತಿರುಗಿ ಹುಷಾರಿನಿಂದ ಕರೆದು ಕೊಂಡು ಹೋಗು. ಮೈಸೂರು ತಲ್ಪಿದೊಡನೆ ಕಾಗದ ಬರೆ." ಎಂದಳು.

ಗಾಡಿ ಎತ್ತುಗಳು ಬಿರಬಿರನೆ ಹೆಜ್ಜೆ ಹಾಕತೊಡಗುತ್ತಲೂ ಗಂಟಾರವ ಹುಚ್ಚೆದ್ದು ಮೊಳಗಿತು. ಅಂಕುಡೊಂಕಿನ ಹಾದಿಯಲ್ಲಿ ಅಂಕುಡೊಂಕಾಗಿ ಗಾಡಿ ಹರಿಯಿತು. ದೂರದ ತಿರುವಿನವರೆಗೆ ಗಾಡಿಯ ಹಿಂದೆ ವೆಂಕಟೇಶ ರಮೇಶ ಚಂದು ಆನಂದ ಹಿಂಬಾಲಿಸಿದರು. ಆನಂದನನ್ನು ಕುರಿತು ರಮೇಶ ಹೇಳಿದ "ನಿಮ್ಮ ಕಾಗದ ನೋಡಿದನಂತರ ನಾನು ಮೈಸೂರಿಗೆ ಬರುವೆ."

"ನಿನ್ನ ಮನೆ ಕಟ್ಟಿ ಮುಗಿಯಿನೇನು ?" ಚಂದು ಕೇಳಿದ.

"ಇನ್ನು ಕೆಲವೇ ದಿನಗಳಲ್ಲಿ ಮುಗಿದೀತು."

"ಅನಂತರ ಬಾಡಿಗೆ ಕೊಡುತ್ತೀಯೇನು ?

"ರತ್ನಳಿಗೆ ಹೆರಿಗೆಯಾಗುವವರೆಗೆ ಇಲ್ಲೇ ಇರುವುದೆಂದು ಯೋಚಿಸಿ ದ್ದೇನೆ. ಅನಂತರ ಹೋಗುವೆ. ಇದುವರೆವಿಗೆ ನಮ್ಮಿಂದ ಶಿವಮ್ಮನಿಗಾದ ತೊಂದರೆಯೇ ಸಾಕಾಗಿದೆ. ಈಗಲೇ ಹೋಗಬಹುದಿತ್ತು. ರತ್ನಳಿಗಾಗಿ ಹೋಗಲು ಮನಸ್ಸು ಬರುವುದಿಲ್ಲ. ಹೆರಿಗೆಯಾಗುವವರೆಗೆ ಇದ್ದು ಹೋಗಲು ಶಿವಮ್ಮ ಹೇಳಿದ್ದಾರೆ. ಅದೇ ಸರಿಯೆಂದು ನನಗೂ ಅನ್ನಿಸಿದೆ." ಎನ್ನುತ್ತ

ಆನಂದ ಗಾಡಿ ಹತ್ತಿದ.

ಗಾಡಿ ಮುಂದುವರಿಯಿತು. ರಾಮಣ್ಣ ಚಂದುವಿನತ್ತ ದೃಷ್ಟಿಬೀರಿ "ಹೋಗಿ ಬರುತ್ತೇನಯ್ಯ." ಎಂದ. "ಹ್ಞೂ" ಎಂದ ಚಂದು ಆನಂದ ನೊಂದಿಗೆ–"ಎಷ್ಟೇ ದಿನಗಳಾದರೂ ಚಿಂತೆಯಿಲ್ಲ. ಪೂರ್ಣವಾಸಿಯಾಗುವ ವರೆಗೂ ಕಳುಹಿಸಬೇಡ. ರವಿಗೂ ಹಾಗೆಂದು ಹೇಳು."

ಅದನ್ನು ಕೇಳಿ ರಾಮಣ್ಣ–"ನಾನಲ್ಲಿ ಹೆಚ್ಚು ದಿನ ನಿಲ್ಲಲಾರೆ ಚಂದೂ, ಮನೆಯ ಕಡೆ ಬಹಳ ಕೆಲಸವಿದೆ."

"ಆ ಯೋಚನೆ ಬಿಟ್ಟು ಬಿಡು ಪೂರ್ಣವಾಸಿಯಾಗುವವರೆಗೆ ಇದ್ದೇ ಬಾ."

ರಾಮಣ್ಣ ಮಾತಾಡಲಿಲ್ಲ. ಆನಂದ ಇತ್ತಲೇ ನೋಡುತ್ತಿದ್ದಂತೆ ಗಾಡಿ ತಿರುವಿನಲ್ಲಿ ತಿರುಗಿ ಮರೆಯಾಗತೊಡಗಿತು. ಚಂದು ವೆಂಕಟೇಶ ರಮೇಶ ರೊಂದಿಗೆ ಹಿಂದಿರುಗಿದ. ಬಾಗಿಲಲ್ಲಿ ಹಸಿಗಣ್ಣಾಗಿ ನೋಡುತ್ತಿದ್ದ ರಾಜಮ್ಮ ನನ್ನು ನೋಡಿ ಚಂದು–"ನಿಮಗೇಕಿಷ್ಟು ಭಯ ? ಕೆಲವೇ ದಿನಗಳಲ್ಲಿ ವಾಸಿ ಯಾದೀತು."

"ಆನಂದಚಿಕ್ಕಪ್ಪ ಬಂದುದು ಒಳ್ಳೆಯದೇ ಆಯಿತು. ಇಲ್ಲದಿದ್ದಲ್ಲಿ ಅಪ್ಪ ಇಲ್ಲಿಂದ ಕದಲುತ್ತಿರಲಿಲ್ಲ" ಎಂದ ರಮೇಶ.

ಹೊತ್ತು ಮೂರೂವರೆಯಾಗಿತ್ತು. ಗೆಳೆಯರ ಬಳಗವು ಒಮ್ಮಿಂದೊ ಮ್ಮೆಲೆ ಅಲ್ಲಿ ನೆರೆಯಿತು. ವೆಂಕಟೇಶ ಜಮಖಾನವನ್ನು ಬಿಚ್ಚಿ ಹರವಿದ. ಎಲ್ಲರೂ ಕುಳಿತುಕೊಂಡರು. ಚಂದು ಎಲ್ಲರನ್ನೂ ಮುಗುಳ್ನಗೆಯಿಂದ ಸ್ವಾಗತಿ ಸಿದ. "ಚಂದಣ್ಣಾ. ನೀವಿಲ್ಲದೆ ನಮ್ಮ ಸಂಘ ದುರ್ಬಲವಾಗಿದೆ." ಎಂದ ಶಂಕರ.

"ನೀವು ಸಬಲರಾಗಿದ್ದರೆ ಸಂಘವು ದುರ್ಬಲವಾಗುವುದು ಹೇಗೆ? "

"ನೀವು ಸದಾ ಇಲ್ಲಿಗೆ ಬರುತ್ತಿದ್ದಾಗಿನ ರೀತಿಯೇ ಬೇರೆ ಚಂದಣ್ಣಾ. ಈಗ ಸಾಮಾಜಿಕ ಸಮಸ್ಯೆಗಳೆದ್ದಾಗ ಚಂದಣ್ಣ ನಮ್ಮೂರಿನವರೇ ಆಗಿದ್ದಿ ದ್ದರೆ ? ಎಂಬ ಯೋಚನೆ ಬರುತ್ತೆ. ನಿಜವಾಗಿಯೂ ಹಾಗಾಗಿದ್ದರೆ ನಾವು ಭಾಗ್ಯವಂತರಾಗುತ್ತಿದ್ದೆವು." ನುಡಿ ಎದೆಯಾಳದಿಂದ ಹೊರಬಿದ್ದಿತು.

"ಕಿಟ್ಟೂ, ಇಲ್ಲಿ ಕೇಳು; ನಿನ್ನ ಚಂದಣ್ಣ ಸ್ವರ್ಗದಿಂದ ಇಲ್ಲಿಗೆ ಇಳಿದು

ಬಂದಿದ್ದಾನೇನು ? ನೀನೇ ಮುಂದೆ ನಿಂತು ಕೆಲಸ ಮಾಡಿದರೆ ಚಂದಣ್ಣ ನಾಗುತ್ತಿ. ಅದರಲ್ಲಿ ಸಂಶಯವೇಕೆ ?"

"ಎಷ್ಟಾದರೂ ಆ ವ್ಯಕ್ತಿತ್ವ ಎಲ್ಲರಿಗೂ ಬರುವುದಿಲ್ಲ."

"ಆ ಮಾತನ್ನು ಇನ್ನೊಮ್ಮೆ ಹೇಳಬೇಡ ವೆಂಕಟೇಶ್. ಸಾಧ್ಯಾ ಸಾಧ್ಯತೆಗಳು ನಿಮ್ಮಲ್ಲಿವೆ. ಮುಖ್ಯವಾಗಿ ಮಾಡುತ್ತೇನೆನ್ನುವ ಕೆಚ್ಚು, ಮಾನ ವತೆಯನ್ನು ಬೆಳೆಸಿಕೊಳ್ಳುವ ನಿರ್ಮಲ ಹೃದಯ, ದೇವತ್ವಕ್ಕೇರಿಸುವ ಧೀಶಕ್ತಿ, ಹೃನ್ಮನಗಳನ್ನು ಶುದ್ಧವಾಗಿಡಲು ಆರೋಗ್ಯಭಾಗ್ಯ, ಆರೋಗ್ಯಭಾಗ್ಯವನ್ನುಳಿಸಿ ಕೊಳ್ಳಲು ಕಾಯಾ ವಾಚಾ ಮನಸಾ ಶುದ್ಧವಾಗಿರುವುದು. ಈ ಎಲ್ಲಕ್ಕೂ ಅಡಿಗ ಲ್ಲಿಂಬಂತೆ ಪ್ರಾರ್ಥನೆ ಮತ್ತು ಯೋಗಾಸನಗಳ ಅಭ್ಯಾಸ ಇಷ್ಟನ್ನು ಮಾಡಿದರೆ ಸಾಕು. ಇಷ್ಟಾದರೆ ನೂರು ಚಂದಣ್ಣ ನಿಮ್ಮೊಬ್ಬನಿಗೆ ಸಮ !"

ಯಾರೊಬ್ಬರೂ ತುಟಿ ಪಿಟಕ್ಕೆನ್ನದೆ ಚಂದುವಿನ ಹಿತೋಪದೇಶವನ್ನು ಕೇಳಿದರು. ಒಲವಿನ ನುಡಿಗಳು ಎದೆಯಾಳಕ್ಕಿಳಿದುವು. ನುಡಿಯಲ್ಲಿನ ಸತ್ವ ವನ್ನು ಮನನ ಮಾಡುತ್ತ ಮುಯ್ಯಣದ ಬೊಂಬೆಗಳಂತೆ ಕುಳಿತುಕೊಂಡರು. ಚಂದು ಪುನಃ ಮುಂದುವರಿದ "ಸೋದರರೇ ಭಾವೀ ಭಾರತದ ನಿರ್ಮಾತೃ ಗಳು ನೀವು. ತರುಣ ವೃಂದದಿಂದ ಭಾರತ ಮಾತೆ ಅಪಾರವಾದ ಸೇವೆ ಯನ್ನು ನಿರೀಕ್ಷಿಸುತ್ತಾಳೆ. ಸ್ವಾತಂತ್ರ್ಯಾನಂತರವೂ ಮಕ್ಕಳು ಸೋಮಾರಿಗಳಾ ಗಿದ್ದರೆ ಸಹಿಸುವುದೆಂತು ? ಒಂದೆಡೆ ನೆರೆ ದೇಶಗಳ ಧಾಳಿ. ಇನ್ನೊಂದೆಡೆ ಕ್ಷಾಮಡಾಮರಗಳ ಕಿರುಕುಳ, ಮಕ್ಕಳಲ್ಲಿ ದಾಯಾದಿ ಮತ್ಸರ. ಜಾತೀವಾರು ಭಾಷಾವಾರು ಪ್ರಾಂತೀಯವಾರುಗಳ ಭಿನ್ನವಾದ ಪ್ರಗತಿಪಥದಲ್ಲಿ ಅಡ್ಡಬರುವ ನಾನಾ ಕ್ಷುಲ್ಲಕ ಕಾರಣಗಳು. ವೇದಭೂಮಿಯಲ್ಲಿ ವೇದಾಂತದ ಪಥನ... ಹೇಳುತ್ತಾ ಹೋದರೆ ಅದಕ್ಕೆ ಕೊನೆ ಮೊದಲುಂಟೆ ? ಈಗ ಯೋಚಿಸಿರಿ : ನಿಮ್ಮಿಂದ ಭಾರತಾಂಬೆ ಏನನ್ನು ನಿರೀಕ್ಷಿಸುತ್ತಾಳೆ. ?"

ಯಾರೊಬ್ಬರೂ ಮಾತಾಡಲಿಲ್ಲ. ಮುಖಮಂಡಲಗಳಲ್ಲಿ ಮಂದಹಾಸ ಮೂಡಿತು. ಬಿಸಿ ನೆತ್ತರು ನರನಾಡಿಗಳಲ್ಲಿ ಹುಚ್ಚೆದ್ದು ಹರಿದಾಡಿ ರೋಮ ರೋಮಗಳು ಕದಂಬ ಕೇಸರವಾದುವು.

"ತಿಳಿದಿರಿ ! ಒಬ್ಬೊಬ್ಬನಲ್ಲೂ ನೂರು ಚಂದಣ್ಣನಾಗುವ ಚೇತನ ಬೇಕು ! ಭಾರತಾಂಬೆ ನಿಮ್ಮಿಂದ ನಿರೀಕ್ಷಿಸುವುದು ಅದನ್ನೇ ! ಆಕೆಯ ಕಂಬನಿ

ಯನ್ನು ತೊಡೆಯುವ ವೀರ ಪುತ್ರರು ನೀವು ! ಎಂಬುದು ಸದಾ ನೆನಪಿರಲಿ. 'ನಿಮ್ಮನ್ನು' ನೀವು ಅರಿತುಕೊಂಡರೆ-ನಿಮ್ಮ ಪವಿತ್ರಾತ್ಮಗಳ ಬೆಲೆಯನ್ನು ನೀವು ತಿಳಿದುಕೊಂಡರೆ ಅದುವೇ ಸಗ್ಗದೇಣಿಯ ಮೊದಲ ಮೆಟ್ಟಲು."

ಚಂದುವಿನ ವಾಕ್ಸರಣಿಯು ತರುಣರನ್ನು ಹುರುಪುಗೊಳಿಸಿತು. ವದನಗಳಲ್ಲಿ ಪ್ರಫುಲ್ಲತೆ ಮೂಡಿತು. ಮೈಯಲ್ಲಿ ಚೇತನದ ಚಿಲುಮೆ ಹರಿದಾಡಿತು. ಮೈ ಕೊಡವಿ ಕುಳಿತುಕೊಂಡರು.

"ಚಂದಣ್ಣಾ, ಯಾವ ಪಕ್ಷವನ್ನು ಬೆಳೆಸಬೇಕೆಂಬುದರಲ್ಲಿ ನಮ್ಮೊಳಗೆ ಇನ್ನೂ ಒಮ್ಮತ ಮೂಡಲಿಲ್ಲ." ಕಿಟ್ಟು ಸಮಸ್ಯೆಯನ್ನು ಖಿನ್ನ ಮನದಿಂದ ಮುಂದಿಟ್ಟ.

"ಒಮ್ಮತವಿಲ್ಲದೆ ಹೋದರೆ ಸಂಘಟನೆ ಎಲ್ಲಿರುತ್ತೆ ? ಏನೇ ಇದ್ದರೂ ಒಮ್ಮತದಿಂದ ಮಾಡಬೇಕು."

"ಕಾಂಗ್ರೆಸ್ಸನ್ನೇ ಬೆಳೆಸಬೇಕೆಂಬುದು ಕೆಲವರ ವಾದ. ಇನ್ನು ಕೆಲವರದು ಕಾಂಗ್ರೆಸ್ ಹೊಲಸೆದ್ದು ಹೋಗಿದೆ. ಬೇರೆ ಪಕ್ಷವನ್ನು ಶುದ್ಧವಾಗಿ ಬೆಳೆಸೋಣ ಎಂಬುದು. ಇದಕ್ಕೆ ನಿಮ್ಮ ಸಲಹೆಯೇನು ಚಂದಣ್ಣಾ ?" ಪುಟ್ಟಗಂಗ ಕೇಳಿದ.

"ಇದುವರೆವಿಗೆ ಪುರೋಭಿವೃದ್ಧಿಯೇ ಗುರಿಯಾಗಿತ್ತು. ಇನ್ನು ರಾಜಕೀಯ ಪಕ್ಷವೊಂದನ್ನು ಬೆಳೆಸಿಕೊಂಡರೆ ನಮ್ಮ ಚಟುವಟಿಕೆ ಇಮ್ಮಡಿಯಾಗುತ್ತದೆ." ಎಂದ ಸಿದ್ಧರಾಮನ ದನಿಯಲ್ಲಿ ಉತ್ಸುಕತೆಯಿತ್ತು.

"ಹೊಸ ಪಕ್ಷ ಕಟ್ಟುವುದೆಂದರೆ ಅಷ್ಟು ಸುಲಭದ ಮಾತಲ್ಲ. ಯಾವುದೇ ಪಕ್ಷ ಗ್ರಾಮವ್ಯಾಪಿಯಾಗಿ ಬೆಳೆದರೆ ಸಾಲದು, ರಾಷ್ಟ್ರವ್ಯಾಪಿಯಾಗಿ ಬೆಳೆಯಬೇಕು. ನಿಮ್ಮಲ್ಲಿ ಅಂಥ ನಾಯಕತ್ವ ಯಾರಿಗಿದೆ ? ಅಷ್ಟೊಂದು ವೇಳೆಯನ್ನಾದರೂ ಎಲ್ಲಿಂದ ತರುತ್ತೀರಿ ? ಮುಖ್ಯವಾಗಿ ನಿಮಗೆ ಬೇಕಾಗಿರುವುದು ಪುರೋಭಿವೃದ್ಧಿ, ಸಾಮಾಜಿಕ ಸುಧಾರಣೆ, ಆರ್ಥಿಕ ಅಭಿವೃದ್ಧಿ ಇವುಗಳ ಆಶ್ರಯಕ್ಕೆ ಶುದ್ಧವಾದ ರಾಜಕೀಯ ಇಷ್ಟಾದರೆ ಸಾಕು."

"ನಮಗೆ ಬೇಕಾಗಿರುವುದೇ ಅದು ಚಂದಣ್ಣಾ !" ಒಡನೆ ನಾಲ್ಕಾರು ದನಿಗಳು ಒತ್ತಿ ಹೇಳಿದುವು.

"ಕಾಂಗ್ರೆಸ್ಸಿನ ಅಂಗವಾಗಿದ್ದು ನಮ್ಮದೇ ಆದ ಒಂದು ಸ್ವತಂತ್ರ ಸಂಸ್ಥೆ

ಯನ್ನು ಬೆಳೆಸಬೇಕೆಂಬುದು ನನ್ನ ಮನಸ್ಸು." ಶಂಕರ ತನ್ನ ಅಭಿಪ್ರಾಯ ವನ್ನು ಮುಂದಿಟ್ಟ.

"ಅದಕ್ಕಿಂತ ಕಮ್ಯುನಿಜಂ ಉತ್ತಮ." ತಕ್ಷಣ ಮರು ನುಡಿದ ಕಿಟ್ಟು.

"ನಮ್ಮ ಬಡತನ ನೀಗಿ ನಾವು ನಾಲ್ಕು ಜನರ ಸರಿಸಮಾನರಾಗ ಬೇಕಾದರೆ ಕಮ್ಯುನಿಜಂ ಬರಲೇಬೇಕು." ಅನುಮೋದಿಸಿದ ರಮೇಶ.

"ಖಂಡಿತವಾಗಿಯೂ ಕಮ್ಯುನಿಜಂ ಉತ್ತಮ." ಗಂಗಾರಾಮ ಒತ್ತಿ ಹೇಳಿದ. ಎಲ್ಲರ ಅಭಿಪ್ರಾಯಗಳೂ ಹೊರಬೀಳುವವರೆಗೆ ಸುಮ್ಮನಿದ್ದು ಅನಂತರ ಚಂದು ಹೇಳಿದ "ಕಮ್ಯುನಿಜಂ ಪಕ್ಷದಲ್ಲಿನ ಅನೇಕ ವಿಧಿಗಳು ನಮ್ಮ ಸಮಾಜೋನ್ನತಿಗೆ ಅನುಗುಣವಾಗಿಲ್ಲ. ಅದರ ಆಧಾರದ ಮೇಲೆ ದೇಶವನ್ನು ಉಚ್ಚ ಮಾರ್ಗದಲ್ಲಿ ನಡೆಸುವುದು ಸಾಧ್ಯವಾಗದ ಮಾತು. ಕಮ್ಯುನಿಜಂ ಆಧಾರದ ಮೇಲೆ ರಾಜಕೀಯ ನಡೆಸುವುದೆಂದರೆ ದೇಶದಲ್ಲಿ ಕ್ರಾಂತಿಯಾಗಬೇಕು. ನೆತ್ತರಿನ ಹೊಳೆ ಹರಿಯಲೇ ಬೇಕು. ಅದೆಲ್ಲಾ ಏಕೆ ? ಮಾನವ ಜೀವನದಲ್ಲಿ ರಾಕ್ಷಸೀಕೃತ್ಯ ಬೇಡವೇ ಬೇಡ." ದನಿಯಲ್ಲಿ ಸಮಾಧಾನವಿತ್ತು. ಸುತ್ತಿಟ್ಟಿದ್ದ ಹಾಸಿಗೆಗೆ ಒರಗಿ ಕುಳಿತುಕೊಂಡಿದ್ದ ಚಂದು ಎದ್ದು ನೇರವಾಗಿ ಕುಳಿತುಕೊಂಡ.

"ಚಂದಣ್ಣಾ, ಇನ್ಯಾವ ಪಕ್ಷವನ್ನು ಬೆಳೆಸ ಹೋದರೂ ನಮ್ಮ ಜೀವಿತ ದಲ್ಲಿ ಪ್ರಗತಿಯನ್ನು ಹೊಂದುತ್ತೇವೆಂಬುದು ಕನಸಿನ ಮಾತು."

"ತಾಳಿದವ ಬಾಳಿಯಾನು ಎಂಬ ನಾಣ್ಣುಡಿಯನ್ನು ಮರೆಯಬಾರದು ರಮೇಶ್. ಒಂದು ವೇಳೆ ಕಮ್ಯುನಿಜಂ ಬಂತು ಎಂದೇ ಇಟ್ಟುಕೊ, ಅದರಿಂದ ನೀನು ಸುಖಿಯಾಗುವೆಯಾ ?"

"ಮತ್ತೇನು ಮಾಡೋಣ ಹೇಳಿರಿ ?" ಶಂಕರನ ಪ್ರಶ್ನೆ.

"ಕಾಂಗ್ರೆಸ್ಸನ್ನೇ ಬೆಳೆಸಬೇಕೆಂಬುದು ನನ್ನ ಇಚ್ಛೆ." ತನ್ನ ಅಭಿಪ್ರಾಯ ವನ್ನು ಮುಂದಿಟ್ಟು ವೆಂಕಟೇಶ ಹೇಳಿದ "ಕಾಂಗ್ರೆಸ್ ಮಾಡಿರುವಷ್ಟು ದೇಶೋದ್ಧಾರ ಕಾರ್ಯ ಇನ್ನಾವ ಪಕ್ಷವೂ ಮಾಡಲಿಲ್ಲ ಮತ್ತು ಮಾಡುವುದೂ ಸಾಧ್ಯವಿಲ್ಲ."

"ಇರಲಿ, ಇಂದು ಕಾಂಗ್ರೆಸ್ಸಿನ ಹೆಸರು ಕುಲಗೆಟ್ಟು ಹೋಗಿದೆ. ಎಲ್ಲಿ ನೋಡಿದರೂ ಕಾಂಗ್ರೆಸ್ಸನ್ನು ದೂಷಿಸುವವರೇ ! ಅದರೊಳಗೆ ನಾವೂ ಕಲ

ಬೆರಕುವುದೇ ?" ಎಂದ ರಮೇಶ. ದನಿಯಲ್ಲಿ ಆವೇಶ ಹೊಮ್ಮಿತು.

"ಯಾವುದೇ ಸಂಸ್ಥೆ ಬರಲಿ. ಅದರಲ್ಲಿನ ಗುಣದೋಷಗಳೆಲ್ಲಾ ನಮ್ಮಿಂದಲೇ ವಿನಾ ಸಂಸ್ಥೆಯಿಂದಲ್ಲ. ಎಲ್ಲಾ ಸಂಸ್ಥೆಗಳಲ್ಲೂ ಇರುವುದು ನಮ್ಮವರೇ. ಕಾಂಗ್ರೆಸ್ ಅಧಿಕಾರದಲ್ಲಿದ್ದು ಎಲ್ಲರ ದೃಷ್ಟಿಕೋನ ಅತ್ತಲೇ ಕೇಂದ್ರೀಕೃತವಾಗಿರುವುದರಿಂದ ಅಲ್ಲಿನ ಗುಣದೋಷಗಳು ತಕ್ಷಣ ಹೊರಬೀಳುತ್ತವೆ. ಇತರ ಸಂಸ್ಥೆಗಳಲ್ಲಿ ಯಾವುದು ಅಧಿಕಾರಕ್ಕೆ ಬಂದರೂ ಆಗುವುದಿಷ್ಟೆಯೆ ಎಂಬುದನ್ನು ಮರೆಯದಿರಿ. ಮುಖ್ಯವಾಗಿ ಎಲ್ಲಿ ಹೊಲಸಿದೆಯೋ ಅಲ್ಲಿ ನುಗ್ಗಿ ನಿರ್ಮಲೀಕರಣ ಕೈಕೊಳ್ಳುವ ಎದೆಗಾರಿಕೆಯಿರಬೇಕು."

"ಕಾಂಗ್ರೆಸ್ಸಿನಲ್ಲಿ ಎಲ್ಲಿ ನೋಡಿದರೂ ಸ್ವಾರ್ಥ ! ಸ್ವಾರ್ಥವಿಲ್ಲದ ಸಾಧನೆಯಿಲ್ಲವೇನೋ ಎಂಬಷ್ಟು ಸ್ವಾರ್ಥ ತುಂಬಿ ತುಳುಕುತ್ತಿದೆ ! ಒಬ್ಬರನ್ನು ತುಳಿದೇ ಇನ್ನೊಬ್ಬರು ಮುಂದೆ ಬರುತ್ತಾರೆ. ಸತ್ಯಸಂದರನ್ನು ಹತ್ತಿಕ್ಕಿ ಸ್ವಾರ್ಥ ಸಾಧಕರು ಮುನ್ನಡೆಯುತ್ತಾರೆ. ಸಾರ್ವತ್ರಿಕ ಚುನಾವಣೆಯಲ್ಲಿ ನೋಡಿದಿರೇನು ? ಯಾರು ಪಕ್ಷದ ನಾಯಕತ್ವಕ್ಕೆ ಬೆಂಬಲ ನೀಡುವುದಾಗಿ ಆಶ್ವಾಸನೆ ನೀಡಿದರೋ ಅವರೇ ಉಮೇದುವಾರರು ! ಬಹು ಮಂದಿ ಈ ಮಾರ್ಗದಲ್ಲಿ ಸ್ಥಳಾವಕಾಶ ಕಲ್ಪಿಸಿಕೊಂಡು ಶಾಸಕರಾದರು. ಅವರು ದುರ್ಮಾರ್ಗಿಗಳೆಂಬುದು ಜನಜನಿತವಾಗಿದ್ದರೂ ಅವರಿಗೆ ಸುಲಭವಾಗಿ ಸ್ಥಾನಮಾನ ದೊರಕಿತು." ಸಿದ್ಧರಾಮು ಜೋರಿನಿಂದ ಸವಾಲು ಹಾಕಿದ "ಇದಕ್ಕೇನು ಹೇಳುತ್ತೀರಿ ?"

"ಇದರ ಶುದ್ಧೀಕರಣ ಸಾಧ್ಯವಾದರೆ ನಮ್ಮಲ್ಲಿ ಕಾಂಗ್ರೆಸ್ಸೇ ಇರಲಿ !" ಎಂದ ರಮೇಶ್.

"ಎಲ್ಲಿ ನೋಡಿದರೂ ಸ್ವಾರ್ಥದ ಮಹಾಕೋಟೆ ಅಭೇದ್ಯವಾಗಿ ನಿಂತಿದೆ. ಇದರ ಶುದ್ಧೀಕರಣ ಸಾಧ್ಯವೇ ಚಂದಣ್ಣಾ ?" ಅನಂತು ಪ್ರಶ್ನೆ ಹಾಕಿದ.

"ಕಾಂಗ್ರೆಸ್ಸಿನ ನಿಯಮಾವಳಿಯಲ್ಲಿ ಕೆಲವು ಕಡ್ಡಾಯದ ವಿಧಿಗಳನ್ನು ಸೇರಿಸಿದರೆ ಕಾಂಗ್ರೆಸ್ಸಿನ ಶುದ್ಧೀಕರಣ ಸಾಧ್ಯವಿದೆ. ನಮ್ಮೂರ ಕ್ಷೇತ್ರಕ್ಕೆ ಗಿರಿಯಪ್ಪನೇ ಸರಿಯಾದ ವ್ಯಕ್ತಿ. ಆತನಿಗೇನೇ ಶಾಸನ ಸಭೆಯ ಉಮೇದುವಾರಿಕೆ ಸಲ್ಲಬೇಕಿತ್ತು ನಿಜ. ಆತ ಹಳೆಯ ಕಾಂಗ್ರೆಸ್ಸಿಗ ಮತ್ತು ನಿಷ್ಠಾವಂತ ವ್ಯಕ್ತಿ. ಆದರೆ ಆದುದು ತೀರ ವ್ಯತಿರಿಕ್ತ. ಯಾರೋ ಗೊತ್ತು ಗುರಿಯಿಲ್ಲದ

ಅಯೋಗ್ಯನಾದ ರಂಗಯ್ಯನಿಗೆ ಉಮೇದುವಾರಿಕೆಯನ್ನು ಕೊಟ್ಟುದುದಲ್ಲದೆ ಅವನು ಗೆದ್ದು ಬರಲು ಸರ್ವಸಾಹಸಗಳನ್ನು ಮಾಡಿದರು. ಚುನಾವಣೆಯಲ್ಲಿ ನಡೆದ ಅನಾಚಾರಕ್ಕೆ ಮಿತಿಯೇ ಇರಲಿಲ್ಲ. ಇದರ ನಿಲುಗಡೆ ಹೇಗೆ? ಎಂಬುದು ಎಲ್ಲರ ಮುಂದಿನ ಪ್ರಶ್ನೆ. ಇದೊಂದು ಬಹುದೊಡ್ಡ ಸಮಸ್ಯೆಯಾಗುಳಿದಿದೆ. ಆದರೂ ಸಮಸ್ಯೆಗೊಂದು ಪರಿಹಾರವುಂಟು. ಕೇಳಿರಿ, ಪ್ರಜಾಪ್ರತಿನಿಧಿ ಸಭೆಯ ಉಮೇದುವಾರಿಕೆಯ ಸೀಟುಗಳನ್ನು ಹಂಚುವಾಗ ಅನುಸರಿಸಬಹುದಾದ ಕ್ರಮ ಏನೆಂದರೆ :-ಪಕ್ಷದ ನಾಯಕತ್ವಕ್ಕೆ ಸ್ಪರ್ಧಿಸ ಬಯಸುವವರು ಸೀಟುಗಳನ್ನು ಹಂಚುವ ಸಮಿತಿಯಲ್ಲಿರಕೂಡದು. ಸೀಟುಗಳನ್ನು ವಿತರಣೆ ಮಾಡಲಿರುವ ಸಮಿತಿಯಲ್ಲಿನ ಸದಸ್ಯರಾರಿಗೂ ಶಾಸಕರಾಗಲು ಅವಕಾಶವಿರಲೇ ಬಾರದು. ಹಾಗೆ ಅವಕಾಶವಿದ್ದರೆ ತಾನೇ ತಮಗೆ ಬೇಕಾದವರಿಗೆ ಸ್ಥಳಾವಕಾಶ ಕಲ್ಪಿಸುವ ಸ್ವಾರ್ಥತೆ ? ಹೃದಯ ವೈಶಾಲ್ಯತೆಯುಳ್ಳ ನಿಸ್ವಾರ್ಥ ವ್ಯಕ್ತಿಯೊಬ್ಬರನ್ನು ಸಂಸ್ಥೆಯ ಸಾರ್ವಜನಿಕ ಕ್ಷೇತ್ರದಿಂದ ಆರಿಸಿ (ಅಧಿಕಾರ ರಹಿತ) ಈ ಸಮಿತಿಯ ಅಧ್ಯಕ್ಷರನ್ನು ಮಾಡಿ ಹಂಚುವ ಅಧಿಕಾರ ಕೊಡಬೇಕು. ಅಂದರೆ, ಸಮಿತಿಯೊಂದಿಗೆ ಕಾಂಗ್ರೆಸ್ ಅಧ್ಯಕ್ಷರಿಗಾಗಲೀ ಪಕ್ಷದ ನಾಯಕರಿಗಾಗಲೀ ಯಾವ ಸಂಪರ್ಕವೂ ಇರಕೂಡದು. ಹೀಗೆ ನಾನಾ ಪರಿಯಲ್ಲಿ ಸಂಸ್ಥೆಯ ಅಂಗರಚನೆಯನ್ನು ಬದಲಾವಣೆ ಮಾಡಿಕೊಳ್ಳಬಹುದು. ಇದಕ್ಕೆ ಮುಖ್ಯವಾಗಿ ದೃಢ ಮನಸ್ಸು ಬೇಕು." ಎಂದ ಚಂದು ತುಸು ತಡೆದು ಪುನಃ ಹೇಳಿದ "ಇಷ್ಟಾದರೆ ಯಾರು ಜನಪ್ರಿಯರೋ ಅವರೇ ಪಕ್ಷದ ನಾಯಕರಾಗುತ್ತಾರೆ. ಯಾರು ಯೋಗ್ಯರೋ ಅವರೇ ಸದಸ್ಯರಾಗುತ್ತಾರೆ."

"ಕೇಳಿ, ಕೇಳಿ !"

"ಈ ಬದಲಾವಣೆಗಳು ಹೈಕಮಾಂಡ್ ಮಟ್ಟದಲ್ಲಿ ಆಗಬೇಕು. ನಾವು ಮಾತಾಡಿ ಏನು ಪ್ರಯೋಜನ ?"

"ಇಲ್ಲಿಂದ ಠರಾವು ಮಾಡಿ ಕಳುಹಿಸಿದರೆ ಅಲ್ಲಿ ಪರಿಶೀಲಿಸುತ್ತಾರೆ."

"ಚಂದಣ್ಣಾ, ಈಗ ನೀವು ಸೂಚಿಸಿದ ನಿಯಮಾವಳಿಯನ್ನೇ ತೆಗೆದುಕೊಳ್ಳೋಣ. ಉಮೇದುವಾರಿಕೆ ಇಲ್ಲದವರೇ ಅಸೆಂಬ್ಲಿಯ ಸೀಟುಗಳನ್ನು ಹಂಚುತ್ತಾರೆನ್ನಿ. ಅವರಿಗೆ ನಮ್ಮ ಕ್ಷೇತ್ರಕ್ಕೆ ಗಿರಿಯಪ್ಪನೇ ಶ್ರೇಷ್ಠನಾದ ವ್ಯಕ್ತಿ ಎಂಬುದು ಮನದಟ್ಟಾಗುವುದಾದರೂ ಹೇಗೆ ? ಅಲ್ಲಿಯೂ ರಂಗಯ್ಯ

ನಂತಹವರು ಕಾಡಿ ಬೇಡಿ ಹತ್ತೂ ಜನರಿಂದ ಹೇಳಿಸಿ ಸೀಟು ಗಳಿಸಲು ಅವಕಾಶವಿದೆ." ಎಂದ ಶಂಕರ.

ಕಳೆದ ಬಾರಿ ಗಿರಿಯಪ್ಪನಿಗೆ ಒಮ್ಮೆಯಾದರೂ ಅಧ್ಯಕ್ಷರನ್ನು ನೋಡಿರಿ ಎಂದು ನಾವೆಷ್ಟು ಹೇಳಿದರೂ ಅವರು ಒಪ್ಪಲಿಲ್ಲ. ನಾನವರಬಳಿ ಬೇಡಲಾರೆ. ಅವರಿಗಿಷ್ಟವಿದ್ದರೆ ಕೊಡಲಿ ಎಂದುಬಿಟ್ಟರು. ಅದು ರಂಗಯ್ಯನಿಗೆ ಅನುಕೂಲವೇ ಆಯಿತು. ಇದಕ್ಕೇನು ಹೇಳುತ್ತೀರಿ ?" ಎಂದ ರಮೇಶ.

"ಮಾನಿಷ್ಠರಾದವರು ಎಂದೂ ಬೇಡುವುದಿಲ್ಲ."

"ಈ ಕಾಲದಲ್ಲಿ ಯೋಗ್ಯತೆಗೆ ಮಾನ್ಯತೆಯಿದೆಯೆ ?"

"ಹೀಗಾಗಿಯೇ ಯೋಗ್ಯರಾದವರು ಹೊರಗಡೆ ಉಳಿದು ಅಯೋಗ್ಯರಾದವರು ಒಳಗಡೆ ಹೋಗುತ್ತಾರೆ."

"ಅದನ್ನು ಆಯಾ ಕ್ಷೇತ್ರದವರೇ ಮೇಲಿನವರಿಗೆ ಮನದಟ್ಟು ಮಾಡಬಹುದಲ್ಲಾ."

"ನಿಮ್ಮಗಳ ಉತ್ಸಾಹಕ್ಕೆ ತಿಲಾಂಜಲಿಯನ್ನೀಯಲು ನನಗಿನಿತೂ ಇಷ್ಟವಿಲ್ಲ. ನೀವು ನಿಮ್ಮದೇ ಆದ ಸ್ವತಂತ್ರ ಸಂಸ್ಥೆಯನ್ನು ರಾಷ್ಟ್ರವ್ಯಾಪಿಯಾಗಿ ಬೆಳೆಸಿಕೊಳ್ಳುವುದಾದರೆ ಬಹಳ ಸಂತೋಷ. ಯಾರಿಗೆ ಯಾವ ಪಕ್ಷ ಇಷ್ಟವೋ ಯಾರು ಅದರ ಪೂರ್ಣ ಭಾರವನ್ನು ಹೊರಲು ಶಕ್ತರೋ ಅವರು ಎದ್ದೇಳಿ!"

ಯಾರೂ ಮಾತಾಡಲಿಲ್ಲ. ಪ್ರಶಾಂತವದನದಲ್ಲಿ ಮುಗುಳ್ನಗುವನ್ನು ಬೀರಿ ಮತ್ತೆ ಕೇಳಿದ ಚಂದು "ಯಾರಿದ್ದೀರಿ ? ಹೇಳಿ !"

ಸ್ವಲ್ಪ ಹೊತ್ತು ಉರುಳಿತು. ಯಾರೊಬ್ಬರೂ ಮಾತಾಡಲಿಲ್ಲ. ಎದೆಗಳಲ್ಲಿ ಅಳುಕು ಮೂಡಿತು. ಒಬ್ಬರ ಮುಖ ಒಬ್ಬರು ನೋಡಿಕೊಂಡರು. ದೇಹದಾದ್ಯಂತ ನಸು ಕಂಪನದ ಅಲೆ ಹರಿದಾಡಿ ಹೋದಂತಾಯಿತು.

"ಕಾಂಗ್ರೆಸ್ಸೇ ನಮಗೆ ಮಾತೃಸಂಸ್ಥೆ. ಹಿಂದೂಸ್ಥಾನದಲ್ಲಿ ಅದಕ್ಕೆ ಸರಿತೂಗುವ ಸಂಸ್ಥೆ ಇನ್ನೊಂದಿಲ್ಲ. ಗಾಂಧೀಜಿಯ ನೇತೃತ್ವದಲ್ಲಿ ನಡೆದು ಬಂದು ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟ ಮಹಾ ಸಂಸ್ಥೆ ಅದು. ಅದರ ಮುಂದೆ ಕಮ್ಯುನಿಜಂ ಆಗಲಿ ಸೋಷಿಯಲಿಜಂ ಆಗಲಿ ಸರಿತೂಗುವುದಿಲ್ಲ. ಅಂದಮೇಲೆ ಕಾಂಗ್ರೆಸ್ಸನ್ನು ಬೆಳೆಸುವುದೊಂದೇ ನಮಗೆ ದಾರಿ." ವೆಂಕಟೇಶ ಸಮಯ ಸಾಧಿಸಿ ಪುನಃ ತನ್ನ ಅಭಿಪ್ರಾಯ ಮುಂದಿಟ್ಟ.

"ಸೋದರರೇ ಏನು ಹೇಳುತ್ತೀರಿ ?" ಚಂದು ಪ್ರಶ್ನೆ ಹಾಕಿದ. ವ್ಯತಿರಿಕ್ತವಾಗಿ ಯಾರೂ ನುಡಿಯಲಿಲ್ಲ. ಪುನಃಪುನಃ ಒಬ್ಬರ ಮುಖ ಒಬ್ಬರು ನೋಡಿಕೊಳ್ಳುತ್ತ ಯೋಚಿಸಿಯೋಚಿಸಿ ಕಾಂಗ್ರೆಸ್ಸೇ ಇರಲೆಂದು ಎಲ್ಲರೂ ಒಪ್ಪಿಕೊಂಡರು. ಬಹುದಿನದ ಬಯಕೆಯೊಂದು ಕೈಗೂಡಿಬಂದು ವೆಂಕಟೇಶ ಪರಮಾನಂದಭರಿತನಾದ. ಚಂದಣ್ಣ ಇಲ್ಲದಿದ್ದರೆ ಇದು ಅಷ್ಟು ಸುಲಭದಲ್ಲಿ ಆಗುತ್ತಿರಲಿಲ್ಲವೆಂಬುದು ಎಲ್ಲರಿಗೂ ಮನವರಿಕೆಯಾಗಿತ್ತು. ಕಿರಿಯರ ಸಭೆ ಮುಗಿದು ಎಲ್ಲರೂ ಹೊರಟರು. ರಮೇಶ ಬೀಗದ ಗೊಂಚಲನ್ನು ಕಿಣಿಕಿಣಿ ಸದ್ದು ಮಾಡುತ್ತಾ ಗೆಳೆಯರೊಂದಿಗೆ ರಂಗಮಂದಿರದೆಡೆಗೆ ಹೊರಟ. ಜೀವನ ಪಟುಗಳ ಹೆಜ್ಜೆ ದೃತಗತಿಯಲ್ಲಿ ಸಾಗುತ್ತಿತ್ತು.

ಟಪ್. ಟಪ್. ಟಪ್. ಟಪ್......

ಹೊರಗಣ ಅಂಗಳದಲ್ಲಿ ತಿಳಿಗಾಳಿಗೆ ಮೈಯೊಡ್ಡಿ ನಿಂತಿದ್ದ ಚಂದು ವಿಶಾಲವಾದ ವಕ್ಷಸ್ಥಳದ ಮೇಲೆ ಕೈಕಟ್ಟಿಕೊಂಡಿದ್ದ. ಬಳಿಯಲ್ಲಿದ್ದ ವೆಂಕಟೇಶ ಗದ್ದೆಯಂಚಿನ ಮೇಲೆ ಸಾಲುಗಟ್ಟಿ ಹೋಗುತಿದ್ದ ಕಿರಿಯರ ಬಳಗದ ಮೇಲೆ ದೃಷ್ಟಿ ಹಾಯಿಸಿದ್ದ. ವಾತಾವರಣ ಶಾಂತಮನೋಹರವಾಗಿತ್ತು. ಶೀಕರ ಸಿಕ್ತವಾಯು ಏನೋ ಒಂದು ಬಗೆಯ ವಿಚಿತ್ರತಮವಾದ ಜಡಿಮೆಯನ್ನು ತನುಮನಗಳಿಗೆ ತುಂಬುತ್ತಿತ್ತು.

"ವೆಂಕಟೇಶ್ ನಿನ್ನಮ್ಮ ನನ್ನನ್ನೇಕೆ ಬರಮಾಡಿಕೊಂಡಿದ್ದಾರೆಂಬುದು ನಿನಗೆ ತಿಳಿಯಿತೇ ?"

"ಇಲ್ಲ." ತಲೆಯಲ್ಲಾಡಿಸುತ್ತ ಹೇಳಿದ, ಮುಖದಲ್ಲಿ ಮುಗುಳ್ನಗು ಮೂಡಿತು. ಕಣ್ಣುಗಳ ಕಾಂತಿ ಉಜ್ವಲವಾಗಿ ಬೆಳಗಿತು.

ಈ ವರ್ಷವೇ ನಿನಗೆ ಮದುವೆಯಾಗಬೇಕೆಂಬುದು ನಿನ್ನ ತಂದೆ ತಾಯಿಯರ ಇಚ್ಛೆ."

ಒಳಗಡೆಯಿಂದ ರಾಜಮ್ಮ ಇವರ ಮಾತುಕತೆಗಳನ್ನು ಕುತೂಹಲದಿಂದ ಕೇಳುತ್ತಿದ್ದಳು. ವೆಂಕಟೇಶ ಮಾತಿಲ್ಲದಾದ. ಹೃದಯವ್ಯಾಪ್ತಿಗೆ ಮೀರಿ ಮಿಡಿಯಿತು. ಹೊತ್ತು ಆಣಕಿಸಿ ಮುಂದುವರಿಯುತ್ತಿತ್ತು. ಯೋಚಿಸುತ್ತ ಹಾಗೇ ಸ್ತಂಭೀಭೂತನಾಗಿ ನಿಂತು ಬಿಟ್ಟ. ತಾಯಿ ಈ ಸಂಚು ಹೂಡಿಯಾರೆಂದು ಕನಸಿನಲ್ಲೂ ಎಣಿಸದ ವೆಂಕಟೇಶ ಈಗೇನು ಹೇಳುವುದೆಂದು ಅಪ್ರತಿಭನಾದ...

ಹೃದಯುದಲ್ಲಿ ತಳಮಳವೆದ್ದಿತು... ಬುದ್ಧಿ ಮಂದವಾಯಿತು .

"ಏಕೆ ಮೌನ ವೆಂಕಟೇಶ್ ?"

"ಈಗಲೇ ಏಕೆ ? ಇನ್ನೂ ಎರಡು ವರ್ಷ ಹೋಗಲಿ ಚಂದಣ್ಣಾ."

"ಇನ್ನೇಕೆ ವಿಳಂಬ ? ನಿಮ್ಮ ಮನೆಯುಲ್ಲಿ ಸಹಾಯಕರಿಲ್ಲದೆ ರಾಜಮ್ಮನಿಗೆ ತೊಂದರೆಯಾಗಿದೆ. ಅಲ್ಲದೆ ನಿನಗೂ ಪ್ರಾಪ್ತ ವಯುಸ್ಸಾಗಿರುವುದರಿಂದ ಮಾಡಿಕೊಳ್ಳಬಾರದೇಕೆ ? ನೀನು ಇಷ್ಟಪಟ್ಟಕಡೆಯೇ ಅವರು ಮಾಡುತ್ತಾರೆಂದಮೇಲೆ ತೊಂದರೆ ಏನು ?"

"ನಿಮ್ಮ ಸಲಹೆಯೇನು ಚಂದಣ್ಣಾ ?" ಉದ್ವಿಗ್ನನಾಗಿ ಕೇಳಿದ ವೆಂಕಟೇಶ. ಒಡನೆ ಕಣ್ಣಂಚಿನಲ್ಲಿ ಹನಿ ಮೂಡಿತು. ಎಂದೆಂದೂ ಚಂದಣ್ಣನ ಮಾತಿಗೆ ಎದುರು ಹೇಳದ ವೆಂಕಟೇಶನಿಗೆ ಏನುತ್ತರ ಹೇಳಬೇಕೋ ಹೊಳೆಯುದಾಯಿತು. ಇನ್ನೆರಡು ವರ್ಷಗಳಾದರೂ ಹಾಯಾಗಿದ್ದುಬಿಡಬೇಕೆಂದು ಬಯುಸಿದ ಮನಸ್ಸು ದೃಢವಾಗಿತ್ತು. ಆದರೆ ಚಂದಣ್ಣನ ಮುಂದೆ ತಾನೆಷ್ಟರವನು ? ಈ ಜಡದೇಹದಲ್ಲಿ ಚೇತನವನ್ನು ತುಂಬಿ ಬರಡು ಬಾಳಿಗೆ ದೀವಿಗೆಯುನ್ನಿತ್ತ ಗುರುವಿಗೆ ತಿರುಮಂತ್ರ ಹೇಳುವುದೇ ? ಎಂದೆನಿಸಿದಾಗ ದೇಹದಾದ್ಯಂತ ಕಂಪನವುಂಟಾಯಿತು. ಮೈನವಿರೆದ್ದಿತು. ನತಶಿರಸ್ಕನಾಗಿ ನಿಂತ ವೆಂಕಟೇಶ್ ದೀರ್ಘ ಮೌನ ತಾಳಿದ.

"ವೆಂಕಟೇಶ್"

"ಚಂದಣ್ಣಾ !"

"ನೀನು ಮದುವೆಯಾಗು ಎಂಬುದೇ ನನ್ನ ಸಲಹೆ."

"ಈಗಲೇ ಸಂಸಾರ ಬಂಧನಕ್ಕೊಳಗಾದರೆ ನನ್ನ ಸಾಮಾಜಿಕ ಜೀವನವು ತುಂಡರಿದು ಜೀವನ ನಿಸ್ಸಾರವಾಗದೆ ? ದನಿ ಗದ್ಗದವಾಯಿತು.

"ಇಲ್ಲ ಮಗೂ, ನಿನ್ನ ತಿಳಿವಳಿಕೆ ತಪ್ಪು. ಇಬ್ಬರೂ ಒಂದುಗೂಡಿ ಮುಂದುವರಿಸಿರಿ. ಇದರಲ್ಲಿ ನನ್ನ ಆಶೀರ್ವಾದವಿದೆ."

ನಿಮಿಷವ್ವದು ಉರುಳಿದುವು. ಮುಖದಲ್ಲಿ ಬೆವರಿನ ಹನಿಗಳು ಮೊಳೆತುವು. ವೆಂಕಟೇಶ ಮಾತಾಡದಾದ. ಕರವಸ್ತ್ರದಿಂದ ಮುಖ ಒರಿಸಿಕೊಳ್ಳುವ ನವದಲ್ಲಿ ಮತ್ತೆ ಮೌನ ತಾಳಿದ.

"ಮತ್ತೇಕೆ ಯೋಚನೆ ?" ದನಿಯುಲ್ಲಿ ಒತ್ತಾಸೆ ಇತ್ತು. ಮುಖದಲ್ಲಿ

ಮಂದಹಾಸ ಲಾಸ್ಯಮಾಡಿತು.

"ಎಂದೆಂದೂ ನಿಮ್ಮ ಆಶೀರ್ವಾದವಿರಲಿ."

ವೆಂಕಟೇಶ ಭಾವೋದ್ವೇಗದಿಂದ ಚಂದುವಿನ ಕಾಲು ಮುಟ್ಟಿ ನಮಸ್ಕರಿಸಿದ. ಒಡನೆ ಅವನನ್ನು ಹಿಡಿದೆತ್ತಿ ಎದೆಗಪ್ಪಿಕೊಂಡು ನಲ್ಮೆಯಿಂದ ಹೇಳಿದ "ವೆಂಕೂ, ನಿನಗೆ ಉತ್ತಮ ಭವಿಷ್ಯವಿದೆ. ನೀನು ಎಂದೆಂದೂ ಹಾಳಾಗಲಾರೆ. ಧೈರ್ಯದಿಂದಿರು. ದೇವರು ನಿನಗೆ ಒಳ್ಳೆಯದನ್ನು ಮಾಡುತ್ತಾನೆ." ವೆಂಕಟೇಶ ಮಾತಾಡಲಿಲ್ಲ. ಹುಡುಗಿಯಂತೆ ಮುಖ ಕೆಂಪು ಕೆಂಪಾಗಿ ಕಣ್ಣುಗಳಲ್ಲಿ ನೀರಾಡಿತು. ಅತ್ತ ತಿರುಗಿ ತೋರಗೊಡದೆ ಒರಿಸಿಕೊಂಡ.

ಚಂದು ರಾಜಮ್ಮನಿಗೆ ಹೇಳಿಕೊಂಡು ಊರಿಗಭಿಮುಖವಾಗಿ ಹೊರಟು ನಿಂತಾಗ ಸಂಜೆಯಾಗಿತ್ತು. ವೆಂಕಟೇಶ ಊರ ಕೊನೆಯವರೆಗೂ ಕೂಡಿ ನಡೆದ. ಪಚ್ಚ ತೆನೆಯನ್ನು ಹೊತ್ತ ಪೈರು ಹುಲುಸಾಗಿ ಬೆಳೆದಿತ್ತು. ಸಂಜೆಯ ತಿಳಿಗಾಳಿ ವನಸುಮಗಳ ಸೌರಭವನ್ನು ತರುಬಿ ತರುತ್ತಿತ್ತು. ಬಹು ದೂರದಲ್ಲಿ ಹಸುರನ್ನು ಹೊತ್ತು ನಿಂತ ಬೆಟ್ಟದ ಆಚೆ ಸಂಜೆಯ ಸೌಮ್ಯ ರವಿ ಮೆಲ್ಲ ಮೆಲ್ಲನಿಳಿಯುತ್ತಿದ್ದ. ಕಣ್ಣನೋಟವನ್ನು ಅತ್ತಲೇ ಚೆಲ್ಲಿಕೊಟ್ಟು ವೆಂಕಟೇಶ ಚಂದುವಿನೊಂದಿಗೆ ಮೌನವಾಗಿ ಹೆಜ್ಜೆ ಹಾಕಿದ. ಮನದಲೆಯಲ್ಲಿ ಹೊನ್ನಮ್ಮನ ಚಿತ್ರ ತೇಲಿ ಹೋಯಿತು.

ಹಸುರು. ಎಲ್ಲೆಲ್ಲೂ ಹೊಚ್ಚ ಹೊಸ ಹಸುರನ್ನು ಹೊತ್ತ ಸುಧೆ ಬಾನಮಂಟಪದಡಿ ವಸಂತ ವೈಖರಿಯಲ್ಲಿ ಹರ್ಷಚಿತ್ತಳಾಗಿದ್ದಾಳೆ. ಪಚ್ಚ ಗರಿಕೆಯ ಮೆತ್ತೆಯ ಮೇಲೆ ಮೆಲ್ಲನಡಿಯಿಡುತ್ತಿದ್ದ ಇಬ್ಬರ ದಿಟ್ಟಿಯೂ ಪ್ರಕೃತಿಯ ಐಸಿರಿಯನ್ನು ಹೀರಿ ಹೀರಿ ನಲಿಯುತ್ತಿತ್ತು. ವನಶ್ರೀಯ ಹಸಿರ ಶೋಭೆಗೆ ಕೆಂದಳಿರ ಕಳಶವನ್ನಿಟ್ಟು ಆಶೀರ್ವದಿಸಿದ ವಸಂತ ಋತುವಿನ ವೈಖರಿ ಕಣ್ಮನಗಳಿಗೆ ಹಬ್ಬವನ್ನುಂಟುಮಾಡಿತು. ಹೂವಿಂದ ಹೂವಿಗೆ ಹಾರಿ ಮಕರಂದವನ್ನು ಹೀರಿ ಜಿಹ್ವೆಗೆ ತಣಿವನ್ನೀವ ದುಂಬಿಯಂತೆ ಪ್ರಕೃತಿಯ ಸೌಂದರ್ಯಾವಲೋಕನದಿಂದ ತುಂಬಿ ಬಂದ ತನುಮನಗಳು ಪುಳಕಿತವಾದುವು. ಚಂದು ನಲ್ಮೆಯಿಂದ ಹೇಳಿದ. "ವೆಂಕಟೇಶ್, ಮುಂದಿನ ಭಾನುವಾರ ನಮ್ಮಲ್ಲಿಗೆ ಬಾ. ನಾನೆಲ್ಲಿಗೂ ಹೋಗುವುದಿಲ್ಲ. ಹಾಯಾಗಿ ಒಂದು ದಿನ ಕಳೆದು ಬರುವೆಯಂತೆ."

"ಆಗಲಿ"

ಚಂದು ವೆಂಕಟೇಶನ ಬೆನ್ನುತಟ್ಟಿ ಹೇಳಿದ "ಹೀಗೆ.......ಇಷ್ಟೊಂದು ಅಪ್ರತಿಭನಾಗಬಾರದು." ದನಿಯಲ್ಲಿ ಉತ್ತೇಜನ ತುಂಬಿತ್ತು. ವೆಂಕಟೇಶ ಸಮ್ಮತಿ ಮತ್ತು ಸಂತಸ ಸೂಚಕವಾಗಿ ಮುಗುಳ್ನಗು ಬೀರಲು ಪ್ರಯತ್ನಿಸಿದ. ಆದರದು ಅತ್ಯಂತ ನೀರಸವಾಗಿ ಹೊಮ್ಮಿತು. ಇನ್ನಷ್ಟು ಹೊತ್ತಿನೊಳಗಾಗಿ ಇಬ್ಬರೂ ಕೂಡುದಾರಿಗೆ ಬಂದಿದ್ದರು. ಪುಟ್ಟಗಂಗ ಅಲ್ಲಿ ಕಾಯುತ್ತಾ ನಿಂತಿದ್ದ. ಚಂದುವಿನೊಂದಿಗೆ ಜೊತೆಗೂಡಿ ಹೋಗಲು ಮೊದಲೇ ಯೋಚಿಸಿದ್ದುದರಿಂದ ಅಲ್ಲಿಗೆ ಬಂದಿದ್ದ.

"ಬಂದು ತುಂಬ ಹೊತ್ತಾಯಿತೇನು ?"

"ಇಲ್ಲ, ಇದೇ ತಾನೇ ಬಂದೆ."

"ಬೇಡ ಬೇಡವೆಂದರೂ ಹೊರಟಿದ್ದೀಯೆ. ನೀನು ನಾಳೆ ಅಲ್ಲಿದ್ದೇ ಹೊರಡಬೇಕು."

"ನೀವು ಹೇಗೆ ಹೇಳಿದರೆ ಹಾಗೆ."

ಪುಟ್ಟಗಂಗ ಚಂದುವಿನೊಂದಿಗೆ ಕೂಡಿ ಬಿರಬಿರನೆ ಹೆಜ್ಜೆಹಾಕಿದ. ವೆಂಕಟೇಶ ಅಲ್ಲಿಯೇ ನಿಂತ. ಚಂದು ಹಿಂತಿರುಗಿ ಮುಗುಳ್ನಗೆ ಬೀರಿ ಮುಂದೆ ಹೆಜ್ಜೆಹಾಕಿದ. ವೆಂಕಟೇಶ ಪುಟ್ಟಗಂಗನಿಗೆ ತಿಳಿಹಾಸ್ಯವಾಣಿಯಲ್ಲಿ "ನಾಳೆ ಯೆಲ್ಲಾ ಮುದ್ದನೊಂದಿಗೆ ಕೂಡಿ ಕಾಲ ಕಳೆಯಲು ಅನುಕೂಲವಾಯಿತಲ್ಲವೇ ?"

"ಅದೇನೋ ನಿಜ. ಅವನನ್ನು ನೋಡದೆ ಬಹಳ ದಿನವಾಗಿತ್ತು."

"ಹಾಗಿದ್ದರೆ ನಾಳೆ ಮುದ್ದನಿಗೂ ರಜ."

ಪುಟ್ಟಗಂಗನೊಂದಿಗೆ ಚಂದು ದೂರದ ತಿರುವಿನಲ್ಲಿ ಮರೆಯಾಗುವವರೆಗೂ ನೋಡುತ್ತಾ ನಿಂತಿದ್ದ ವೆಂಕಟೇಶನ ಕಣ್ಣುಗಳಲ್ಲಿ ಕಂಬನಿಗಳುಕ್ಕಿದುವು.

ಉಪಕರ್ತುಂ ಯಥಾ ಸ್ವಲ್ಪಃ ಸಮರ್ಥೋನ ತಥಾ ಮಹಾನ್ ।
ಪ್ರಾಯಃ ಕೂಪಃ ತೃಷಾಂ ಹನ್ತಿ ಸತತಂ ನ ತು ವಾರಿಧಿಃ ॥

ಎಂಬ ಸೂಕ್ತಿ ಮನೋಮಂದಿರದಲ್ಲಿ ವೀಣೆಯಂತೆ ಮಿಡಿಯಿತು.

ನಿಜ, ನಿಜ. ಇಷ್ಟು ಉಪಕಾರವನ್ನು ದೊಡ್ಡವರೆಂದೂ ಮಾಡಲಾರರು;

ಎಂದುಕೊಂಡ ವೆಂಕಟೇಶ. ಮನೋದಧಿಯಲ್ಲಿ ಉಕ್ಕಿ ಹರಿದ ಆನಂದಲಹರಿ ದೇಹದಾದ್ಯಂತ ಸಂಚರಿಸಿತು. ಒಂದು ಗಳಿಗೆ ಮನೋವೇಗದಿಂದ ಮೈ ಮರವಟ್ಟು ನಿಂತ. ಹೃದಯ ವ್ಯಾಪ್ತಿಗೆ ಕಿಂಚಿತ್ ವಿಸ್ತಾರಿ ಮಿಡಿಯಿತು, ಆನಂದವನ್ನು ಸೂಸಿ...

ದೂರ ದೂರ ನಾಡಿನಿಂದ ತೀಡಿ ಬರುವ ತಂಗಾಳಿ ಸುಮನೋಹರ ಸುಗಂಧವನ್ನು ಸಿಂಪಡಿಸಿ ದೂರ ದಿಗ್ ವಲಯಕ್ಕೆ ಸಾಗಿ ಹೋಯಿತು; ನಲವಿಂದ ಅಲ್ಲ, ನೇಮದಿಂದ.

೩೭

ರಾಮಣ್ಣ ಮೈಸೂರಿಗೆ ಬಂದಿಳಿದಾಗ ರವಿ ಆಸ್ಪತ್ರೆಗೆ ಹೊರಡಲು ಅಣಿಯಾಗುತ್ತಿದ್ದ. ಟಾಂಗಾಗಾಡಿಯಿಂದ ತೂರಾಡಿ ಇಳಿಯುತ್ತಿದ್ದುದನ್ನು ಕಂಡೊಡನೆ ರವಿ ಕೈಗೊಟ್ಟು ಆಸರೆ ನೀಡಿದ. ಬಸ್ಸಿನ ಪಯಣದಿಂದ ಬಳಲಿದ್ದ ರಾಮಣ್ಣ ಸೊಂಟ ಮತ್ತು ಬೆನ್ನು ನೋವಿನಿಂದ ಹೆಜ್ಜೆ ಇಡಲಾರದಾಗಿದ್ದ. ಆನಂದನೊಂದಿಗೆ ಒಳ ಹೊಕ್ಕಿದ ರಾಮಣ್ಣನಿಗೆ ಹಾಸಿಗೆಯನ್ನು ಅಣಿಮಾಡಿ ಕೊಟ್ಟು ಔಷಧಿಯನ್ನು ನೀಡಿ ಉಪಚರಿಸಿದ ರವಿ.

ಅಂದಿನಿಂದಲೂ ಶಿವೆಯ ಸಂಸಾರವನ್ನು ತಾತ್ಸಾರದಿಂದ ಕಂಡಿದ್ದ ರಾಮಣ್ಣನಿಗೆ ಇಂದು ಏನೋ ಒಂದು ಬಗೆಯ ಕಿನಿಸಿಗೆ–ಸಂಕೋಚ .. ರವಿಯೊಂದಿಗೆ ತನ್ನ ಮನಬಿಚ್ಚಿ ಸ್ಥಿತಿಗತಿಯನ್ನು ಹೇಳಿಕೊಳ್ಳಲು ಹಿಂಜರಿಯಿತು ಮನಸ್ಸು. ಔಷಧವನ್ನು ನೀಡಿದಾಗ ಬೇಡವೆನ್ನಲಿಲ್ಲವಾದರೂ ಹೃತ್ಪೂರ್ವಕವಾಗಿ ಮಾತಾಡಲು ಲಜ್ಜಿತನಾದ . "ರವಿ, ನನಗೆ ನಿದ್ದೆ ಬರುಂತಿದೆ." ಎಂದೆನ್ನುತ್ತಾ ಉತ್ತರಕ್ಕೂ ನಿರೀಕ್ಷಿಸದೆ ಮಗ್ಗುಲಾಗಿ ಮಲಗಿ ಮುಖ ಮರೆಸಿದ. ರವಿ ಅಲ್ಲಿಂದ ಹೊರ ಬಂದೊಡನೆ ಆನಂದ ಅಂದ "ಇಂದು ಚಂದು ಅಲ್ಲಿರದಿದ್ದರೆ ರಾಮಣ್ಣ ಹೊರಡುತ್ತಿರಲಿಲ್ಲ. ಅವರ ಒತ್ತಾಯದಿಂದ ಹೊರಟಿದ್ದಾರೆ."

ಪರಸ್ಪರ...ಇಬ್ಬರೂ ಮುಗುಳು ನಕ್ಕರು.

"ನಾನೀಗ ಆಸ್ಪತ್ರೆಗೆ ಹೋಗಿ ಬರುವೆ. ಬೆಳಿಗ್ಗೆ ಅವರನ್ನು ಕರೆದು ಕೊಂಡು ಹೋಗೋಣ. ಅದುವರೆಗೆ ವಿಶ್ರಾಂತಿ ಪಡೆಯಲಿ."

ರವಿ ಆಸ್ಪತ್ರೆಗಭಿಮುಖವಾಗಿ ಹೆಜ್ಜೆ ಹಾಕಿದ. ಸಂಜೆಗೆಂಪು ಮೈ ತುಂಬಿಕೊಳ್ಳುತ್ತಿತ್ತು. ತಣ್ಣನೆಯ ಸುಳಿಗಾಳಿ ಸುಯ್ ಸುಯ್ಯನೆ ಸುಯ್ದು ಬಂದು ಮೈಗೆ ಮುದ್ರೆಯೊತ್ತುತ್ತಿತ್ತು. ಸಂಜೆಯ ಸೊಂಪನ್ನು ತದೇಕ ಚಿತ್ತ ದಿಂದ ಅವಲೋಕಿಸುತ್ತಾ ರವಿ ಮುಂದುವರಿದ. ಪೂರ್ವ ದಿಗಂತದಲ್ಲಿ ವೃಷಭಾಕಾರದ ಬೆಳ್ಮುಗಿಲೊಂದು ಒಯ್ಯೊಯ್ಯನೆ ತೇಲಿ ಮುಂದುವರಿಯು

ತ್ತಿತ್ತು. ಮಂದಗತಿಯಲ್ಲಿ ಮುಂದುವರಿಯುತ್ತಿದ್ದ ವೃಷಭಾಕಾರ ಸ್ವಲ್ಪ ಹೊತ್ತಿನಲ್ಲಿ ತೇಲು ತೇಲುತ್ತಾ ಆಕಾರವನ್ನು ಕಳೆದುಕೊಂಡು ಪಯಣದ ಹಾದಿಯಲ್ಲಿ ಎದುರಾಗಿ ಬಂದ ಹೆಮ್ಮುಗಿಲನ್ನಪ್ಪಿಕೊಂಡಿತು. ರವಿ ನೋಡುತ್ತಾ ಮುಂದುವರಿದ. ಬಾಳು ಕ್ಷಣಿಕವೆಂಬುದು ಕರತಲಾಮಲಕವಾದರೂ ಬಾಳಿಲ್ಲದೆ ಬದುಕಿಲ್ಲ. ಒಳ್ಳೆ ರೀತಿಯಿಂದ ಆರಂಭಿಸುವ ಜೀವನ ಕಷ್ಟಕಾರ್ಪಣ್ಯಗಳ ಬೀಡಿನಲ್ಲಿ ಸಪ್ಪೆಯಾಗಿ ಸಾವನ್ನಪ್ಪುತ್ತದೆ ಎಂದೆನಿಸಿತು.

ಏದಿನಂತೆ ರಾಮಣ್ಣ ಆನಂದನ ಮನೆಯಲ್ಲಿ ತಂಗಿದ್ದ. ತಣ್ಣನೆಯ ಪಾನಕ ಕುಡಿದು ದಣಿವಾರಿಸಿಕೊಂಡು ಮಲಗಿದ ರಾಮಣ್ಣ ನಿದ್ದೆಯ ನೆಪದಲ್ಲಿ ರವಿಯನ್ನು ದೂರ ಮಾಡಿದ್ದರೂ ಮನಸ್ಸಿನಿಂದ ದೂರ ಮಾಡಲಾಗಲಿಲ್ಲ. ಸ್ವಾಮಿಯಿದ್ದಾಗಿನ ಅನೇಕಾನೇಕ ಸಮಯ–ಸಂದರ್ಭಗಳು ಚಿತ್ರಭಿತ್ತಿಯಲ್ಲಿ ಸುಳಿದು ಹೋದುವು. ಸಾವಿತ್ರಿ ಕಾಹಿಲೆ ಬಿದ್ದಾಗ ಸ್ವಾಮಿಯಿಲ್ಲವಾಗಿದ್ದಿದ್ದರೆ ಇಂದು ಸಾವಿತ್ರಿಯ ಹೆಸರೇ ಇರುತ್ತಿರಲಿಲ್ಲ. ತಾಯಿಯ ಕೊನೆಗಾಲದಲ್ಲಿಯೂ ಸ್ವಾಮಿ ಸಂಪೂರ್ಣ ಭಾರವನ್ನು ಹೊತ್ತಿದ್ದ. ತಂಗಿಯ ವಿಚಾರದಲ್ಲಿಯೂ ನಾನು ಅಪಚಾರವೆಸಗಲಿಲ್ಲವೇ ? ಎಂಬ ನಾನಾ ವಿಚಾರ ತರಂಗಗಳು ಮನದಲೆಯಲ್ಲಿ ಒಂದೊಂದಾಗಿ ತೇಲಿ ಬಂದಾಗ ರಾಮಣ್ಣ ವ್ಯಥಿತನಾದ. ಹೃದಯ ಕಲ್ಲು ಹೊತ್ತಂತೆ ಭಾರವಾಯಿತು.

ಹೊರಗಡೆ ಹೋಗಿದ್ದ ಕುಮಾರ ಶ್ಯಾಮು ಗೋಪಿಯರು ಮನೆಗೆ ಬಂದೊಡನೆ ರಾಮಣ್ಣ ಚಿಕಿತ್ಸೆಗಾಗಿ ಬಂದ ವಿಚಾರ ತಿಳಿಯಿತು. ನೋಡಿ ಹೋಗೋಣವೆಂದು ಮೂವರೂ ಇತ್ತ ಬಂದರು. ಹುಡುಗರು ಬಂದುದನ್ನು ಕಂಡರೂ ಕಾಣದಂತೆ ಅಲುಗದೆ ಮಲಗಿಕೊಂಡ ರಾಮಣ್ಣ. ಒಂದೆರಡು ಗಳಿಗೆ ನಿಂತು ನೋಡಿ ನಿದ್ದೆ ಬಂದಿರಬಹುದೆಂದು ಭಾವಿಸಿ ಸದ್ದು ಮಾಡದೆ ಹೊರ ಬಂದರು. ಎಲ್ಲರೂ ಮರು ನಿಮಿಷವೇ ಹೊರ ಬಂದುದನ್ನು ಗಮನಿಸಿದ ಸರಸು ಮುಖದಲ್ಲಿ ಮುಗುಳ್ನಗುವನ್ನು ಸೂಸಿ ಹೇಳಿದಳು "ದೊಡ್ಡಪ್ಪನಿಗೆ ನಿದ್ದೆ ಬಂದಿಲ್ಲ. ನಿದ್ದೆಯ ಸೋಗು ಅಷ್ಟೆ. ಮುಖ್ಯವಾಗಿ ಅವರಿಗೆ ಸಮಾಧಾನವಿದ್ದಂತಿಲ್ಲ."

"ನಿದ್ದೆ ಬಂದಂತಿದೆ" ಗೋಪಿಯ ದನಿ ಸಹಜವಾಗಿತ್ತು.

"ನಾನಿದೇ ತಾನೇ ನೋಡಿ ಬಂದೆ. ನಿದ್ದೆ ಬಂದಿಲ್ಲ." ಗೋಣು

ಅಲ್ಲಾಡಿಸಿ ಪುನಃ ನುಡಿದಳು ಸರಸು "ಅವರು ನನ್ನೊಡನೆಯೂ ಮಾತಾಡಲು ಇಷ್ಟಪಡಲಿಲ್ಲ."

"ಹೋಗಲಿ, ನಾಳೆ ನೋಡಿದರಾಯ್ತು. ಪ್ರಯಾಣದಿಂದ ಆಯಾಸಗೊಂಡಿರಬಹುದು. ಮತ್ತೇಕೆ ಅವರಿಗೆ ತೊಂದರೆ ?" ಎಂದ ಕುಮಾರ.

ಮರುದಿನ ಬೆಳಿಗ್ಗೆ ರವಿ ಆಸ್ಪತ್ರೆಗೆ ಹೊರಡುವ ಮುಂಚೆ ರಾಮಣ್ಣನನ್ನು ತನ್ನೊಂದಿಗೆ ಬರಲು ಕೇಳಿಕೊಂಡಾಗ "ನಿನಗೇಕೆ ತೊಂದರೆ? ಅನಂತರ ಆನಂದನೊಡನೆ ಬರುವೆ" ಎಂದ ರಾಮಣ್ಣ, ಮೈಯೆಲ್ಲಾ ಸಂಕೋಚದ ಮುದ್ದೆಯಾಗಿ.

"ಆಗಲಿ, ಹಾಗೇ ಮಾಡಿರಿ."

ರವಿ ಆನಂದನೊಡನೆ ಮಾತಾಡಿ ಹೊರಡಲನುವಾದಾಗ ರಾಮಣ್ಣ ಅಂದ,

"ನೀನು ನನಗಾಗಿ ಕಾಯುವುದು ಬೇಡ; ನಾನು ಬರುವುದು ತಡವಾದೀತು. ಬಿಸಿ ಬಿಸಿ ನೀರು ಹಾಕಿಕೊಂಡು ಬರುವೆ." ಮಾತಿಗೆ ಸಹಜಭಾವ ನೀಡಿದರೂ ತರಂಗತರಂಗವಾಗೆದ್ದ ವಿಚಾರಗಳ ಅಲೆ ಏರಿಳಿದು ಮನಸ್ಸಾಗರವನ್ನು ಬಗ್ಗಡವಾಗುವಂತೆ ಕಲಕಿ ಬಿಟ್ಟಿತು.

ಒಂಭತ್ತು ಗಂಟೆಯ ನಂತರ ರಾಮಣ್ಣ ಆನಂದನೊಡನೆ ಆಸ್ಪತ್ರೆಗೆ ಹೊರಡಲನುವಾದಾಗ ಒಮ್ಮೆ ಶಿವೆಯನ್ನು ನೋಡಿ ಹೋಗುವುದು ಒಳ್ಳೆಯದೆಂಬ ಯೋಚನೆ ಬಂದಿತಾದರೂ ಮರುಕ್ಷಣದಲ್ಲಿ ಬಿಂಕವು ನಿಮಿರಿ ನಿಂತಿತೇನೋ... ಸ್ವಲ್ಪ ಯೋಚಿಸಿದ ರಾಮಣ್ಣ ಅವಳನ್ನು ನೋಡುವ ವಿಚಾರವನ್ನು ಅಷ್ಟಕ್ಕೆ ಬಿಟ್ಟು ಆಸ್ಪತ್ರೆಗಭಿಮುಖವಾಗಿ ಹೊರಟ. ಹೊರಬಂದಾಗ ಪಕ್ಕದಲ್ಲಿ ಕಟ್ಟುತ್ತಿದ್ದ ಅನಾಥ ಕನ್ಯಾವಿದ್ಯಾಲಯದತ್ತ ದೃಷ್ಟಿ ಹೊರಳಿತು ಹಿಂಭಾಗದ ಕಟ್ಟಡ ಇನ್ನೂ ಅಪೂರ್ಣವಾಗಿದ್ದು ಕೆಲಸ ನಡೆಯುತ್ತಿದ್ದುದೂ ಕಣ್ಣಿಗೆ ಬಿತ್ತು. ಅಂಗಳವನ್ನು ದಾಟಿ ಬೀದಿಗೆ ಬಂದೊಡನೆ ಆನಂದ ಹೇಳಿದ "ಕಟ್ಟಡವನ್ನು ನೋಡಿದಿರಾ ? ಐವತ್ತು ಮಂದಿ ಮಕ್ಕಳಿಗಾಗುವಷ್ಟು ತಾವಿದೆ. ಈಗಾಗಲೇ ಇಪ್ಪತ್ತಕ್ಕೂ ಮಿಕ್ಕಿ ಅನಾಥ ಹೆಣ್ಣು ಮಕ್ಕಳು ದೊರಕಿದ್ದಾರೆ. ಇನ್ನು ಕೆಲವೇ ದಿನಗಳಲ್ಲಿ ಶಾಲೆ ಆರಂಭವಾಗುತ್ತದೆ."

"ಇದೊಂದು ಸಾಹಸವೆಂದೇ ಹೇಳಬೇಕು. ನಮ್ಮಲ್ಲಿ ಮಕ್ಕಳಿಗೆ ಉಣಿಸಿಕ್ಕುವ ತೊಂದರೆಯಿಲ್ಲ. ಶಾಲೆಯಿಂದ ನಮಗೆ ಅನುಕೂಲವೇ ಆಗಿದೆ. ಚಿಕ್ಕವರಿಗೆ ಕಲಿಕೆಯಾದರೆ ದೊಡ್ಡವರಿಗೆ ಗಳಿಕೆಯೂಗುತ್ತದೆ. ಇದರಿಂದ

ಊರೊಳಗೆ ಅಗ್ಗದ ಮಾಲೂ ದೊರಕುತ್ತಿದೆ. ಮೊಟ್ಟಮೊದಲಿಗೆ ಇದನ್ನರಿಯದ ನಾವು ಚಂದು ಮೇಲೆ ಕಿಡಿ ಕಾರಿದೆವು. ಅವನು ಬಿತ್ತಿದ ಬೀಜ ಹೆಮ್ಮರವಾಗಿ ಬೆಳೆದು ನಮಗೆ ನೆರಳು ನೀಡುವುದೆಂದು ನಾವಾಗ ತಿಳಿದುಕೊಳ್ಳಲಿಲ್ಲ. ಚಂದು ನಿಜವಾಗಿಯೂ ದೈವಾಂಶಸಂಭೂತ ಕಣಯ್ಯಾ."

"ವಿದ್ಯೆಯಿಲ್ಲದ ಜನಕ್ಕೆ ವಿದ್ಯೆಗಾಗಿ ಛೀಳಿಡುವ ಮನಸ್ಸು ಹುಟ್ಟುವುದಾದರೂ ಹೇಗೆ? ಈಗೀಗ ಕಾಲ ಪಕ್ವವಾಗುತ್ತಿದೆ. ಚಂದು ಎಂತಹ ಮನುಷ್ಯ ಎಂಬುದನ್ನು ಅರಿತುಕೊಳ್ಳುತ್ತಿದ್ದೀರಿ."

"ನಿಜ" ಎಂದ ರಾಮಣ್ಣ ಸ್ವಲ್ಪ ಯೋಚಿಸಿ ಕೇಳಿದ "ಶಿವೆ ಮುಂದೆ ಮಕ್ಕಳಿಗೆ ಕೂಳಿಡುವುದು ಹೇಗೆ? ಶಾಲೆಯ ಕಟ್ಟಡಕ್ಕಾಗಿ ಹಣ ಉಳಿದಿದೆಯೋ?"

"ಉಳಿದಿದೆ, ಮಾಧವರಾಯರನ್ನು ಖಜಾಂಚಿಯನ್ನಾಗಿ ಮಾಡಿದ್ದಾರೆ. ಕಡಿಮೆ ಬಿದ್ದಲ್ಲಿ ಮತ್ತೆ ಯಾವುದಾದರೂ ಪ್ರದರ್ಶನಗಳನ್ನು ಏರ್ಪಡಿಸಿಕೊಳ್ಳುತ್ತಾರೆ. ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸಬೇಕೆಂಬುದು ಶಿವಮ್ಮನ ಬಹುದಿನಗಳ ಹಂಬಲವಾಗಿತ್ತು."

"ಸರಿ ...ಕೈಗೂಡಿದಂತಾಯಿತು."

"ಇದುವರೆವಿಗೂ ನಾನವರ ಬಾಡಿಗೆ ಕೊಡಲಿಲ್ಲ. ಇನ್ನು ಕೊಡಹೋದರೆ ಅವರು ತೆಗೆದುಕೊಳ್ಳುವುದಿಲ್ಲ. ಈ ಶಾಲೆಗಾಗಿ ಏನಾದರೂ ಕೊಡೋಣ ಎಂದು ಯೋಚಿಸಿದ್ದೇನೆ."

"ಶಾಲೆ ಹೇಗೆ ನಡೆಯುತ್ತದೆಂಬುದನ್ನು ಕಾದು ನೋಡಿ ಕೊಡು."

"ಏನೇ ಇರಲಿ, ನಾನವರಿಗೆ ಹೇಗೂ ಕೊಡಬೇಕಷ್ಟೆ?" ಎಂದ ಆನಂದ ಗೃಹಗತಿಗೆ ಸರಿದ "ಸರಸೂನ ಓದಿಸಬೇಕೆಂಬುದು ಶಿವಮ್ಮನ ಇಚ್ಛೆ.

ಕುಮಾರನಿಗೆ ತಂದುಕೊಳ್ಳಬೇಕೆಂಬುದು ಲಿಂಗಣ್ಣನ ಇಚ್ಛೆ. ಶಿವಮ್ಮ ಈಗ ಯೋಚನೆಗೀಡಾಗಿದ್ದಾರೆ."

"ಕುಮಾರನ ಓದು ಇನ್ನೂ ಮುಗಿಯಲಿಲ್ಲವಲ್ಲಾ?"

"ಮುಂದಿನ ವರ್ಷಕ್ಕೆ ಮುಗಿಯುತ್ತದೆ."

"ಅವಳನ್ನು ಓದಿಸುವ ವಿಚಾರದಲ್ಲಿ ಕುಮಾರನ ಅಭಿಪ್ರಾಯವೇನು?"

"ಅವನಿಗೆ ಎಂ. ಇ. ಓದಬೇಕೆಂಬ ಇಚ್ಛೆಯಿದೆ. ಹಾಗಾಗಂವು

ದಾದರೆ ಸರಸುಗೆ ಓದಲು ಸಾಕಷ್ಟು ಕಾಲಾವಕಾಶ ದೊರೆಯುತ್ತೆ "ಓದಲಿ" ಎನ್ನುತ್ತಾನೆ. ಒಟ್ಟಿನಲ್ಲಿ ಸರಸು ಕುಮಾರರದು ಒಳ್ಳೆಯ ಜೋಡಿಯಾಗುತ್ತದೆ."

"ಅಂತೂ ಸ್ವಾಮಿ ಕಾಣೆಯಾದುದು ಅದೃಷ್ಟಕೂಡಿ ಬಂದಂತಾಯಿತು. ಒಮ್ಮೆಲೆ ಎಲ್ಲರೂ ಚೇತರಿಸಿಕೊಂಡರು."

"ಹಾಗೆಂದೇ ತೋರುತ್ತದೆ."

ದಾರಿಯಲ್ಲಿ ಹೋಗುತ್ತಿದ್ದ ಟಾಂಗಾ ಗಾಡಿಯೊಂದನ್ನು ಗೊತ್ತು ಮಾಡಿದ ಆನಂದ. ಇಬ್ಬರೂ ಸ್ವಲ್ಪ ಹೊತ್ತಿನೊಳಗಾಗಿ ಆಸ್ಪತ್ರೆ ಸೇರಿದರು. ಇವರು ಬಂದುದನ್ನು ರವಿ ಗಮನಿಸಲಿಲ್ಲವಾದುದರಿಂದ ಬಹಳ ಹೊತ್ತು ಕಾಯುವಂತಾಗಿ ರಾಮಣ್ಣ ಬಳಲಿದ.

ಇತ್ತ ಶಿವೆ ರಾಮಣ್ಣನನ್ನು ನೋಡಲಿಲ್ಲವಲ್ಲಾ ಎಂದು ಮನದಲ್ಲೇ ನೊಂದುಕೊಂಡಳು. ಹಿಂದಣ ಬಾಗಿಲಿನಲ್ಲಿ ಅವನ ಕ್ಷೇಮವನ್ನು ರತ್ನಳಿಂದ ತಿಳಿದುಕೊಂಡರೂ ಸ್ವತಃ ಹೋಗಿ ವಿಚಾರಿಸದಿದ್ದುದು ತಪ್ಪೆನಿಸಿ ಚಿಂತಾಕ್ರಾಂತಳಾಗಿದ್ದಳು. ಭಾವಂದಿರಿಬ್ಬರೂ ಎಂದೋ ಕೈಬಿಟ್ಟಿದ್ದು ತನ್ನ ನೆರಳನ್ನು ಕಂಡರೂ ಆಗದವರಂತೆ ಕ್ರೂರವಾಗಿ ವರ್ತಿಸುತ್ತಿದ್ದುದರಿಂದ ಎದುರಿಗೆ ಹೋಗಲು ಎದೆ ಅಳುಕಿತು. ರಾಮಣ್ಣ ಹೊರಟು ಹೋದುದನ್ನು ಅಲ್ಲಿಂದಲೇ ಗಮನಿಸಿದ ಶಿವೆ ನಿಟ್ಟುಸಿರು ಬಿಟ್ಟಳು.

ಕೈಗಳು ಕೆಲಸ ಮಾಡುತ್ತಿದ್ದುವಾದರೂ ಮನಸ್ಸು ಯೋಚನಾಂಬುಧಿಯಲ್ಲಿ ಮುಳುಗಿತ್ತು. ಮಾತಾಡಿಸಲೆಂದು ಹೋಗಿ ಅದೇ ಒಂದು ಅಪರಾಧವಾಗಿ ಪರಿಣಮಿಸಿದ್ದರೇನು ಗತಿ ? ಎಂದೂ ಯೋಚನೆ ಬಂತು. ಆದರೂ ಹೋಗಿ ನೋಡದಿದ್ದುದು ತಪ್ಪು ಎಂದು ಹೃದಯಾಂತರಾಳದಲ್ಲಿನ ಸುಪ್ತವಾಣಿ ನುಡಿಯುತ್ತಿತ್ತು.

ಎದುರು ಮನೆಗೆ ಹೋಗಿದ್ದ ವಿಮಲೆ ನಳಿನಿಯನ್ನು ಎತ್ತಿಕೊಂಡು ಬಂದಳು. ಮಗುವನ್ನು ಕಾಣುತ್ತಲೂ ಶಿವೆಯ ಯೋಚನೆ ಗಾವುದ ದೂರ ಸರಿಯಿತು. ನಳಿನಿಯನ್ನೆತ್ತಿ ಮುದ್ದಾಡಿದಳು. ಕಣ್ಣುಗಳನ್ನು ಅರಳಿಸಿ ಕೇಳಿತು ಮಗು "ರವಿ ಮಾಮ ಎಲ್ಲಿ ?" ಮುದ್ದು ಮುದ್ದು ಮಾತುಗಳಲ್ಲಿ

ಹಾಲ್ಜೇನು ಬೆರೆತುಕೊಂಡಿತ್ತು.

"ಆಸ್ಪತ್ರೆಗೆ ಹೋಗಿದ್ದಾನೆ. ಅವನೀಗ ಡಾಕ್ಟರು !" ಉತ್ತರಿಸಿದಳು ವಿಮಲೆ.

"ಹೌದಾ ?" ಶಿಶು ಸಹಜವಾದ ಪ್ರಶ್ನೆಯಲ್ಲಿ ಮುಗ್ಧತೆಯಿತ್ತು. ಎಳೆಯ ಮನದಲ್ಲಿ ಎಲ್ಲಿಲ್ಲದ ಅಚ್ಚರಿ ಮೂಡಿ ಪುನಃ ಕೇಳಿದಳು "ಹೌದಾ ?"

ರವಿ ಮಾಮ ಎಷ್ಟು ಒಳ್ಳೆಯವನು ? ಅವನೆಂದಾದರೂ ಡಾಕ್ಟರಾಗುವುದುಂಟೇ ? ಸೂಜಿ ಚುಚ್ಚಿ ಕಹಿ ಮದ್ದು ಕೊಟ್ಟು ತೊಂದರೆ ಕೊಡುವಷ್ಟು ಕೆಟ್ಟವನಲ್ಲ ರವಿಮಾಮ...... ಉಹೂ ಅವನೆಂದೂ ಕೆಟ್ಟವನಲ್ಲ. ನನಗೊತ್ತು ಅವನೊಳ್ಳೆಯವನು ! ! ಅಂತಲೇ ಮಗು ಪುನಃ ಕೇಳಿತು "ಆಸ್ಪತ್ರೆಗೇಕೆ ಹೋಗಿದ್ದಾರೆ ?"

ಸುಮಸದೃಶ ಮುಖಮಂಡಲದಲ್ಲಿ ಅಚ್ಚರಿಯ ತೆರೆ ವಿನೂತನವಾಗಿ ಲಾಸ್ಯವಾಡಿತು.

"ಕೆಲಸ ಮಾಡಲಿಕ್ಕೆ." ಅವಳ ರೇಶ್ಮೆಯಂತಹ ತಲೆಗೂದಲನ್ನು ಹಿಂದಕ್ಕೆ ತೀಡುತ್ತಾ ಹೇಳಿದಳು ಶಿವೆ.

"ರವಿ ಮಾಮ ಈಗ ಸೂಜಿ ಚುಚ್ಚುತ್ತಾನೆ !" ವಿಮಲೆ ಬೇಕೆಂತಲೇ ಹೇಳಿದಳು. ಕಣ್ಣುಗಳಲ್ಲಿ ತುಂಟತನ ನಲಿಯುತ್ತಿತ್ತು.

ಶಿವೆ ವಿಮಲೆಯನ್ನು ತಡೆದು, "ಅವಳಿಗೇಕೆ ಭಯ ಹುಟ್ಟಿಸುತ್ತಿ ?

"ಅವಳು ನಂಬಿಯಾಳೀ ?"

"ಹೌದಾ ?" ಅದೇ ಪ್ರಶ್ನೆ ಪುನಃ ಎಳೆದನಿಯಲ್ಲಿ ಹೊರಹೊಮ್ಮಿತು. ಶಿವೆಯ ಕೊರಳನ್ನು ನಳಿದೋಳಿಂದ ತಬ್ಬಿಕೊಂಡ ನಳಿನಿ ಪುನಃ ಕೇಳಿದಳು,

"ಹೌದಾ ? ಮಾಮ ಏಕೆ ಡಾಕ್ಟರಾಗಿದ್ದಾರೆ ?"

"ಇಲ್ಲ ಮಗೂ, ವಿಮಲೆ ಬಹಳ ತುಂಟಿ. ಅವಳು ಹೇಳುವುದು ಸುಳ್ಳು."

"ರವಿಮಾಮ ಒಳ್ಳೆಯವರು !" ನಳಿನಿ ಮುಗುಳ್ನಗೆ ನಕ್ಕು ನುಡಿದಳು. ಮುಖದಲ್ಲಿ ಸ್ವರ್ಗತುಲ್ಯ ಹರ್ಷ ಮನೆ ಮಾಡಿತು.

"ಇಲ್ಲ ಕಣೆ, ಅವನೀಗ ಡಾಕ್ಟರು !"

"ಅದೆಲ್ಲ ಸುಳ್ಳು !" ನಳಿನಿ ದಿಟ್ಟತನದಿಂದ ಎದುರಿಸಿದಳು. ಬೊಗಸೆ

ಕಂಗಳು ಅರಳಿದುವು. ಅಲೆಗೂದಲು ಮುಗ್ಧಮುಖದ ಸುತ್ತೂ ಹರಡಿತ್ತು.

ಮಕ್ಕಳೆಂದರೆ ಪ್ರೀತಿಯ ಸ್ವಭಾವದವನಾದ ರವಿ ಒಮ್ಮೊಮ್ಮೆ ಮಗುವಿನೊಂದಿಗೆ ಲಲ್ಲೆಯಾಡಿ ಬರುತ್ತಿದ್ದ, ನಳಿನಿಗೂ ರವಿಯೆಂದರೆ ಪಂಚಪ್ರಾಣ. ಅವನ ಮುಂದೆ ತನ್ನ ಮುಂದಿನ ನಾನಾ ಸಮಸ್ಯೆಗಳನ್ನಿಟ್ಟು ಪರಿಹಾರವನ್ನು ಸುಲಭವಾಗಿ ಪಡೆಯುತ್ತಿದ್ದಳು. ಬಣ್ಣದ ಬೊಂಬೆಯ ಪುಸ್ತಕಗಳನ್ನಿಟ್ಟುಕೊಂಡು ಕತೆ ಹೇಳುತಿದ್ದ. ಯಾವುದೇ ವಿಚಾರವನ್ನು ಮನದಟ್ಟಾಗುವ ರೀತಿಯಲ್ಲಿ ವರ್ಣಿಸುತ್ತಿದ್ದ. ಮುದ್ದಿಟ್ಟು ಭುಜದ ಮೇಲೆ ಕೂರಿಸಿಕೊಂಡು ಕುದುರೆಯಾಟ ಆಡಿಸುತ್ತಿದ್ದ. ಅಂತಹ ರವಿಮಾಮ ಡಾಕ್ಟರಾಗುವುದುಂಟೇ? ಅಂತಲೇ ಸುತ್ತಲೂ ದಿಟ್ಟಿಯನ್ನು ಬೀರಿ ಪುನಃ "ಮಾಮ ?" ಎಂದಳು.

ವಿಮಲೆ ನಳಿನಿಯನ್ನು ಕೊಟ್ಟಿಗೆಗೆ ಕರೆದುಕೊಂಡು ಹೋದಳು. ಕರುವನ್ನು ಕಾಣುತ್ತಲೂ ರವಿಯ ಸುದ್ದಿ ಪುನಃಪಟಲದಿಂದ ಸಂಪೂರ್ಣ ಅಳಿಸಿ ಹೋಯಿತಲ್ಲದೆ ಮುಖವು ಅರಳಿ ಶತದಳ ಪದ್ಮದಂತೆ ಪ್ರಫುಲ್ಲವಾಯಿತು. ಕರುವಿನತ್ತ ಧಾವಿಸಿ ಪುಟ್ಟ ಪುಟ್ಟ ಕೈಗಳಿಂದ ಮುಟ್ಟಿ ಮುಟ್ಟಿ ಆನಂದಿಸಿದಳು. ಅವಳ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು.

ಅದೇ ತಾನೇ ಸ್ನಾನವನ್ನು ಮುಗಿಸಿ ಹೊರ ಬಂದ ಸರಸು ನಳಿನಿಯನ್ನು ಎತ್ತಿಕೊಂಡು ಮುದ್ದಿಟ್ಟು–"ನಳಿನೀ, ನನಗೊಂದು ಹೂ ಮುತ್ತು !"

ಮಗು ಮುತ್ತಿಟ್ಟು ಹೇಳಿತು. "ಅಣ್ಣ ನನಗೆ ಹೊಸ ಬೊಂಬೆ ತರುತ್ತಾರೆ !" ತಟ್ಟನೆ ಜ್ಞಾಪಿಸಿಕೊಂಡವಳಂತೆ ಹೇಳುವಾಗ ಮುಖದಲ್ಲಿ ಮೋಹನಕಾರೀ ಆನಂದ ಮುದ್ರೆಯೊತ್ತಿತ್ತು.

"ನಿನ್ನ ಬೊಂಬೆ ಏನಾಯಿತು ?"

"ಅದರ ಕೈ ಕಾಲು ಕಿತ್ತುಹೋಗಿದೆ !"

"ಹಾಗಿದ್ದರೆ ಅದೇಕೆ ನಿನಗೆ ?" ವಿಮಲೆ ಕೇಳಿದಳು.

"ನನಗೆ ಎರಡೂ ಬೇಕು ! ರವಿಮಾಮ ಸರಿಮಾಡಿಕೊಡುತ್ತಾರೆ !"

"ರವಿಮಾಮ ಹಾಗೆಂದು ಹೇಳಿದ್ದಾನೆಯೇ ?" ಸರಸು ಕೇಳಿದಳು.

"ಹ್ಞೂ !"

"ಅದಕ್ಕೆಂದೇ ನೀನಾಗ ಕೇಳಿದ್ದು ?" ಎಂದ ವಿಮಲೆ ಪುನಃ ಸರಸವಾಣಿಯಲ್ಲಿ-ರವಿಮಾಮ ನಿನ್ನ ಬೊಂಬೆಗೆ ಸೂಜಿ ಚುಚ್ಚುತ್ತಾನೆ !"

"ಅದೆಲ್ಲಾ ಸುಳ್ಳು !" ಮಗು ತಲೆಯಾಡಿಸುತ್ತ ಹೇಳಿತು.

ಕಾಲೇಜಿಗೆ ಹೊರಡುವ ಸಮಯವಾದ್ದರಿಂದ ಮಗುವನ್ನು ಅವರ ಮನೆಗೆ ಕಳುಹಿಸಿ ಬಂದಳು ವಿಮಲೆ. ಊಟವಾದನಂತರ ಹುಡುಗಿಯು ರಿಬ್ಬರೂ ಕಾಲೇಜಿಗೆ ಹೊರಟರು. ಅಂದು ಮಧ್ಯಾಹ್ನ ಆಸ್ಪತ್ರೆಗೆ ಹೋಗ ಲಿದ್ದ ಶಿವೆ ಕೆಲಸವನ್ನು ಸಾವಕಾಶದಿಂದ ಮಾಡಿಕೊಂಡಳು.

ಅರ್ಧ ದಾರಿ ಸವೆದಿತ್ತು.

ಉರಿ ಬಿಸಿಲಲ್ಲಿ ಆಸ್ಪತ್ರೆಗಭಿಮುಖವಾಗಿ ಟಾರು ಬಳಿದ ದಾರಿಯಲ್ಲಿ ಹೆಜ್ಜೆ ಹಾಕುತ್ತಿದ್ದ ಶಿವೆ ಹೆಗಲಮೇಲೆ ಭಾರವಾದಂತಾಗಲು ತಟ್ಟನೆ ತಿರುಗಿ ನೋಡಿದಳು. ಕಣ್ಗೆಸೆದುದು ಎಲಿಜಬೆತಳ ದಯಾಮಯ ಸುಂದರ ಮೂರ್ತಿ. ಭುಜದ ಮೇಲಿದ್ದ ಹಸ್ತವನ್ನು ಹಾಗೆ ಅದುಮಿ ಹಿಡಿದುಕೊಂಡು "ಯಾರೋ ಎಂದು ಭಯಪಟ್ಟೆ." ಎಂದ ಶಿವೆ ಮುಖದಲ್ಲಿ ಮುಗುಳ್ನಗುವನ್ನು ಸೂಸಿ,

"ಅಂದ ಹಾಗೆ ಈ ಕಡೆಯೇಕೆ ಒಂದಿರಿ ?"

"ನನ್ನ ತಂಗಿಗೆ ಮೈ ಚೆನ್ನಾಗಿಲ್ಲ. ನೋಡಿ ಹೋಗೋಣವೆಂದು ಬಂದಿದ್ದೆ. ಇಂದು ಜ್ವರ ಬಿಟ್ಟಿದೆ." ಎಂದ ಎಲಿಜಬೆತ್ ಅನಂತರ ಕೇಳಿದಳು "ನಿಮ್ಮ ಶಾಲೆಯ ಕಟ್ಟಡ ಮುಗಿಯಿತೇ ?" ಪ್ರಶ್ನೆಯಲ್ಲಿ ಕುತೂಹಲ ತುಂಬಿತ್ತು. ತುಟಿಗಳಲ್ಲಿ ಎಳೆನಗು ಬೆಳಗಿತು.

"ಇನ್ನೇನು ಮುಗಿಯಲಿದೆ. ರಾಯರೂ ಡಾಕ್ಟರೂ ತುಂಬ ಸಹಾಯ ಮಾಡಿದ್ದಾರೆ. ಅವರ ಸಹಾಯ ಚಿರಸ್ಮರಣೀಯವಾದುದು."

"ದೇವರು ಒಳ್ಳೆಯದನ್ನು ಮಾಡಲಿ."

"ಇಷ್ಟೊಂದು ಕೆಲಸಗಳ ಮಧ್ಯೆ ನಿನಗೆ ಶಾಲೆ ನೋಡಿಕೊಳ್ಳಲು ಬಿಡುವು ಸಿಕ್ಕುವುದು ಹೇಗೆ ?"

"ಪುಟ್ಟಮ್ಮ ನೋಡಿಕೊಳ್ಳುತ್ತಾರೆ. ನನಗಷ್ಟು ಭಾರ ಬೀಳಲಾರದು."

"ಹಾಗಿದ್ದರೆ ತೊಂದರೆಯಿಲ್ಲ; ಚೆನ್ನಾಗಿ ನಡೆದು ಬರಲಿ."

"ವಂದನೆಗಳು."

"ಶಿವೆ, ನಿನ್ನಂಥ ಹೆಂಗಳೆಯರು ಅಪರೂಪ. ಮಗುವಿನಂತ ಮನಸ್ಸು ನಿನ್ನದು"

"ಮಾತೃ ಹೃದಯವನ್ನು ಹೊಂದಿದವರಿಗೆ ಮಗುವಿನ ಮನಸ್ಸನ್ನು

ಕಾಣುವುದರಲ್ಲಿ ಆಶ್ಚರ್ಯವೇನಿಲ್ಲ. "ಎಲ್ಲಿ ಮಾತ್ರ ಹೃದಯುವಿದೆಯೋ ಅಲ್ಲಿ ಮಗುವಿನ ಹೃದಯುವನ್ನು ಕಾಣಲೇ ಬೇಕಷ್ಟೆ ?"

ಮಾತನ್ನು ಮುಂದುವರಿಯುಗೊಡಿಸದೆ "ಶಿವೇ, ನಮ್ಮ ದೇಶದಲ್ಲಿ ಜನ ಬಲು ಹುದುಳಿದಿದ್ದಾರೆ. ವಿದ್ಯೆಯಿಲ್ಲ ಸಂಸ್ಕಾರವಿಲ್ಲ. ಮನಸ್ಸು ವಿಕಾಸ ಹೊಂದುವುದಾದರೂ ಹೇಗೆ? ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯವಿಲ್ಲ. ನಾಲ್ಕು ಗೋಡೆಯೊಳಗೆ ಬಾಳಿ ಪ್ರಾಪಂಚಿಕ ವ್ಯವಹಾರಗಳನ್ನರಿಯದೆ ಪಶು ಜೀವನ ನಡೆಸುತ್ತಿದ್ದಾರೆ. ಮಕ್ಕಳಿಗೆ ತಾಯಿಯೇ ಪ್ರಥಮ ಗುರು. ಆಕೆಯಲ್ಲಿ ಸತ್ವವಿಲ್ಲದಿದ್ದರೆ ಹೇಗೆ ? ಅದೃಷ್ಟವಶಾತ್ ನಿನ್ನಲ್ಲಿ ಪೂರ್ವಜನ್ಮದ ಸಂಸ್ಕಾರ ವಿತ್ತು. ಬೇಗನೆ ಚೇತರಿಸಿಕೊಂಡೆ. ಏನೂ ಇಲ್ಲದವರ ಬಗ್ಗೆ ಎಷ್ಟು ಯೋಚಿಸಿದರೂ ಸಾಲದು." ಎಂದಳು ಎಲಿಜಬೆತ್.

ದಾರಿ ಸಾಗಿ ಆಸ್ಪತ್ರೆ ಹತ್ತಿರವಾಗತೊಡಗಿತು. ಎಲಿಜಬೆತಳು ಕೈ ಯಲ್ಲಿನ ಗಡಿಯಾರವನ್ನು ನೋಡಿ ಹೇಳಿದಳು. "ಇನ್ನೂ ಹದಿನೈದು ನಿಮಿಷಗಳಿವೆ. ಮುಂಚಿತವಾಗಿಯೇ ಬಂದಿದ್ದೇವೆ."

"ಹಾಗೇನು ?" ಎಂದ ಶಿವೆ ಯೋಚನಾಭಂಗಿಯಲ್ಲಿ "ನನ್ನ ಬಾಳೇ ಒಂದು ದೃಷ್ಟಾಂತವಾದೀತು. ಜೀವನದಲ್ಲಿ ದಾಸಿಯಾಗಿ ಬಾಳಿದ ನನಗೆ ಬಂದ ಭಾಗ್ಯವೇನು ? ಬಾಳಿನ ಕುರುಹಾಗಿ ಸ್ವಾಮಿಯ ಚಿತ್ರಪಟವೂ ನನ್ನ ಭಾಗಕ್ಕೆ ಇಲ್ಲವಾಯಿತು."

"ಶಿವೇ, ಸ್ವಾಮಿಯ ಚಿತ್ರಪಟ ಎದುರಿಗಿಲ್ಲವಾದರೂ ನಿನ್ನ ಹೃದಯ ದಲ್ಲಿ ಅಚ್ಚಳಿಯದಿದೆ. ಈ ಪ್ರಪಂಚದಲ್ಲಿ ಬೇಕಾದಷ್ಟು ಸೌಲಭ್ಯಗಳಿದ್ದರೂ ನಮಗೆಷ್ಟು ಲಭ್ಯವೋ ಅಷ್ಟನ್ನು ಮಾತ್ರ ನಾವು ಹೊಂದುತ್ತೇವೆ. ಅದಕ್ಕಾಗಿ ಯೋಚಿಸಬಾರದು ತಂಗೀ."

ಶಿವೆ ಮೌನವಾಗಿ ಹೆಜ್ಜೆ ಹಾಕಿದಳು. ರಸ್ತೆಯ ಪಕ್ಕದಲ್ಲಿನ ಮನೆ ಯಿಂದ ಬಾನುಲಿಯ ಸುಮಧುರ ಗಾನ ಕಿವಿಗಿಂಪಾಗಿ ಕೇಳಿ ಬರುತ್ತಿತ್ತು. ಪ್ರಾಚೀನವಾಗಿದ್ದರೂ ಚಿರನೂತನವಾದ ದಾಸರ ಅನುಭವೋಕ್ತಿ.

"ನಾ ಮಾಡಿದ ಕರ್ಮ ಬಲವಂತವಾದರೆ ನೀ ಮಾಡುವುದೇನೋ ರಂಗಯ್ಯಾ."

"ನಿಜ ನಿಜ." ತನುಮನಗಳು ಮಿಡಿದುವು. ಉಕ್ತಿಯ ಸತ್ವವನ್ನು

ಮನನ ಮಾಡುತ್ತಾ ಶಿವೆ ಹೆಜ್ಜೆ ಹಾಕಿದಳು. ಇನ್ನಷ್ಟು ಹೊತ್ತಿನೊಳಗಾಗಿ ಇಬ್ಬರೂ ಆಸ್ಪತ್ರೆಯ ಆವರಣಕ್ಕೆ ಬಂದಿದ್ದರು. ಇದುವರೆವಿಗೂ ಹೆಮ್ಮುಗಿಲಿನ ಮರೆಯಲ್ಲಿ ಅಡಗಿದ್ದ ಸೂರ್ಯಲೋಕದ ಕ್ಷೀಣರಶ್ಮಿಗಳು ಮೈ ಮುಖಗಳನ್ನು ಮುತ್ತಿದುವು. ಇಬ್ಬರೂ ಪ್ರಾಂಗಣವನ್ನು ದಾಟಿ ಸಾಲು ಮೆಟ್ಟಿಲುಗಳನ್ನು ಹತ್ತಿ ಒಳಾಂತರಕ್ಕೆ ಹೆಜ್ಜೆ ಇಟ್ಟಾಗ ಊದಾವರ್ಣದ ಅಜಗರದಂತೆ ಕಣ್ಗೆಸೆಯಿತು – ಸಾಲುಕಂಬಗಳನ್ನು ಹೊತ್ತ ಉದ್ದನೆಯ ಮಧ್ಯಮಾರ್ಗ.

ಅಲ್ಲಿಂದ ಇಬ್ಬರ ಹಾದಿಯೂ ಕವಲೊಡೆಯಿತು.

೩೮

"ಸರ್ವೇ ಜನಾಂ ಸುಖಿನೋ ಭವಂತು"

ಏಪ್ರಿಲ್ ತಿಂಗಳ ಇಪ್ಪತ್ತೆಂಟನೆಯ ತೇದಿ.

ಗೋಧೂಳಿ ಸಮಯ. ಶುಭ್ರಸುಮಧುರ ವಾತಾವರಣದಲ್ಲಿ........ ಅನೇಕಾನೇಕ ಬಂಧು ಭಗಿನಿಯರ ಸಮ್ಮುಖದಲ್ಲಿ...ಒದಗಿ ಬಂದ ಒಂದು ಸುಮುಹೂರ್ತದಲ್ಲಿ ಅನಾಥ ಕನ್ಯಾ ವಿದ್ಯಾಲಯವು ಜನ್ಮವೆತ್ತಿ ಬಹುಮಂದಿ ಹಿರಿಯರ ಆಶೀರ್ವಾದವನ್ನು ಹೊತ್ತು ಇಪ್ಪತ್ತೊಂಬತ್ತು ಅನಾಥ ಮಕ್ಕಳಿಗೆ ಆಶ್ರಯ ನೀಡಿತು. ಐದು ತಿಂಗಳ ಹಸುಗೂಸೊಂದು ಅನಾಥಾಶ್ರಮವನ್ನು ಸೇರಿದ್ದು ಅದರ ನಾಮಕರಣ ಮಹೋತ್ಸವವೂ ನಡೆಯಲಿತ್ತು.

ಶಾಲೆಯ ಕಟ್ಟಡಗಳ ಖರ್ಚು ಕಳೆದು ಒಂದು ವರ್ಷದ ವೆಚ್ಚಕ್ಕಾಗಂ ವಷ್ಟು ಹಣ ಉಳಿದಿದ್ದುದರಿಂದ ಹಾಯಾಗಿ ಉಸಿರು ಬಿಟ್ಟಳಂ ಶಿವೆ. ಶಾಲೆಯ ಖಜಾಂಚಿಯಾಗಿ ರಾಯ ಮುಂದುವರಿದ. ಪುಟ್ಟಮ್ಮ ಸಂಚಾಲಕಿ ಯಾಗಿ ಕೆಲಸ ಮಾಡಲೊಪ್ಪಿಕೊಂಡಳು. ಡಾ॥ ಚಂದ್ರ ಪ್ರಸಿಡೆಂಟರಾಗಿರಲು ಸಮ್ಮತಿ ನೀಡಿದುದರಿಂದ ಹೆಚ್ಚು ಭಾರ ಶಿವೆಯ ಮೇಲೆ ಬೀಳಲಿಲ್ಲ.

ಹೊಟ್ಟೆಗಿಲ್ಲದೆ ಎಲುಬಿನ ಹಂದರವಾಗಿದ್ದ ಮಕ್ಕಳ ಸ್ಥಿತಿ ಕರುಣಾಜನಕ ವಾಗಿತ್ತು. ಎಲ್ಲ ಮಕ್ಕಳಿಗೂ ಸಮವಸ್ತ್ರವನ್ನು ನೀಡಿ ಶುಭ್ರವಾಗಿಡುವುದಂ ಅತ್ಯಂತ ಕಷ್ಟಕರವಾದ ಕೆಲಸ. ಅನಾಗರಿಕ ಜೀವನಕ್ಕೆ ಹೊಂದಿಕೊಂಡ ಮಕ್ಕಳಿಗೆ ಒಮ್ಮೆಲೆ ನಾಗರಿಕ ಜೀವನ ಹಿಡಿಸದು. ಸ್ನಾನಕ್ಕೆಡೆಕೊಡದೆ ಅತ್ತು ಗಲಾಟೆ ಮಾಡತೊಡಗಿದರು. ಅಂದು ಮಕ್ಕಳನ್ನು ಸುಧಾರಿಸಿಕೊಳ್ಳ ಬೇಕಾದರೆ ಸಾಕು ಸಾಕಾಯಿತು.

ಮೊದಲ ನಾಲ್ಕಾರು ತಿಂಗಳು ಮಕ್ಕಳ ಬೆಳವಣಿಗೆಗೂ ಅನಂತರ ಮಾನಸಿಕ ಬೆಳವಣಿಗೆಗೂ ಆದ್ಯಗಮನ ಕೊಡುವ ಅಗತ್ಯವಿತ್ತು. ಮಾನಸಿಕ ಬೆಳವಣಿಗೆಗೆ ಅನುಗುಣವಾದ ಆಟಪಾಟಗಳನ್ನು ಕಲಿಸಿ ನಡೆನುಡಿಗಳನ್ನು

ತಿದ್ದಿ ವಿದ್ಯೆ ಬುದ್ಧಿಗಳ ಕಡೆಗೆ ಗಮನವನ್ನು ಆಕರ್ಷಿಸುವ ಏರ್ಪಾಡು ನಡೆಯಿತು. ಬಹು ಮಂದಿ ಮಕ್ಕಳಿದ್ದುದರಿಂದ ಕೂಡಿ ಆಡಿ ನಕ್ಕು ನಲಿದು ಬೇಗನೆ ಹರ್ಷಚಿತ್ತರಾದರು. ಮಾಧವರಾಯ ಬಡ ಮಕ್ಕಳಿಗೆ ಕೊಡುಗೆಯಾಗಿ ಕೊಟ್ಟ ತೊಡಿಗೆಗಳನ್ನು ನಳಿನಿ ಸ್ವಹಸ್ತದಿಂದ ಹಂಚಿದಳು. ಇನ್ನು ಕೆಲವು ಧನಿಕರು ಕಂಬಳಿಗಳನ್ನೂ ಆಹಾರ ಪದಾರ್ಥಗಳನ್ನೂ ಕೊಡುಗೆಯಾಗಿ ಕೊಟ್ಟರು. ಮೊದಲ ಹಂತವಾಗಿ ಇಬ್ಬರು ಉಪಾಧ್ಯಾಯಿನಿಯರೂ ಒಬ್ಬ ಅಡುಗೆಯವಳೂ ಓರ್ವ ದಾದಿಯೂ ನಿಯಮಿಸಲ್ಪಟ್ಟರು. ಸುವ್ಯವಸ್ಥೆಯಿಂದ ಕೂಡಿದ ಕಾರ್ಯರಂಗ ಪ್ರಾರಂಭವಾಯಿತು....ಜೀವನದ ಉದಾತ್ತ ಧ್ಯೇಯದೊಡನೆ....ಅನುಪಮ ಆಸಕ್ತಿಯೊಡನೆ ...

ಬಹುಮಂದಿ ಆಹ್ವಾನಿತರ ಮುಂದೆ ಎಲುಬಿನ ಹಂದರವಾಗಿದ್ದ ಎಳೆಯ ಕಂದನಿಗೆ ಶಾಂತಾ ಎಂದು ಡಾ॥ ಚಂದ್ರ ನಾಮಕರಣ ಮಾಡಿದರು. ಎಲ್ಲರಿಗೂ ಹಂಚಲಿಟ್ಟಿದ್ದ ಸಿಹಿಯನ್ನು ಮೊದಲೇ ತಿನ್ನಲು ಆತುರವಾಗಿದ್ದ ಬಡ ಮಕ್ಕಳ ಮನಸ್ಸು ಸ್ಥಿಮಿತದಲ್ಲಿರಲಿಲ್ಲ. ಸರಳ ಸಮಾರಂಭವು ಮುಗಿದು ಸಿಹಿಯನ್ನು ಹಂಚಿದ ಪುಟ್ಟಮ್ಮ ಶಿವೆಯನ್ನು ಎದೆಗಪ್ಪಿಕೊಂಡು ಅಮಿತಾನಂದದಿಂದ ನುಡಿದಳು "ಶಿವೇ, ನಿನ್ನ ಜನ್ಮ ಸಾಫಲ್ಯವಾಯಿತು. ಇನ್ನು ನಿನ್ನ ಜೀವನ ಗಂಗೆಯುಂ ತುಂಬಿ ಹರಿಯಲಿ." ಪುಟ್ಟಮ್ಮನ ಬಾಹುಬಂಧನಗಳಲ್ಲಿ ಕಿಂಚಿತ್ ಸುಖಿಯಾದ ಶಿವೆ ಮುಖದಲ್ಲಿ ಮಂದಹಾಸವನ್ನು ಬೀರಿ "ನಿಮ್ಮ ಆಶೀರ್ವಾದ ಇಂದು ಫಲಿಸಿತು" ಎಂದೆನ್ನುತ್ತಾ ಕೃತಜ್ಞತಾಪೂರ್ವಕವಾಗಿ ಕಾಲುಮುಟ್ಟಿ ನಮಸ್ಕರಿಸಿದಳು. ಪುಟ್ಟಮ್ಮ ಶಿವೆಯನ್ನು ಹಿಡಿದೆತ್ತಿ ನಲ್ಮೆಯಿಂದ ನುಡಿದಳು "ನಿನಗೆ ಭಗವಂತನ ಆಶೀರ್ವಾದವಿದೆ."

"ನೀನಿಂದು ಬಹು ಮಕ್ಕಳ ತಾಯಿ. ನಿನ್ನ ಹೊಟ್ಟೆ ತಣ್ಣಗಿರಲಿ."

ನುಡಿದವರಾರೆಂದು ಶಿವೆ ತಿರುಗಿನೋಡಿದಳು. ಅನಾಥಮಗುವೊಂದನ್ನು ಕರೆತಂದಿದ್ದ ವೃದ್ಧೆಯ ನುಡಿ ಅದಾಗಿತ್ತು....ನಿಜ ನಿಜ; ಅವಳಿಂದಂತೆ ಬಹು ಮಕ್ಕಳ ತಾಯಿ ಆದರೂ ತಂದೆಯಿಲ್ಲದ ಮಕ್ಕಳು ಅನಾಥರೂ ಹೌದು ಎಂದಿನಿಸದೇ ? ಮರು ನುಡಿಯಿತು ಮನಸ್ಸು. ಮುಖದಮೇಲೆ ವಿಚಿತ್ರತಮ ಕಪ್ಪುಛಾಯೆ ಕ್ಷಣಕಾಲ ಮೂಡಿ ಮಾಯವಾಯಿತು. ಶಿವೆ ಪ್ರಯತ್ನಪೂರ್ವಕವಾಗಿ ನಸು ನಕ್ಕಳು. ಕಣ್ಣುಗಳ ದೀಪ್ತಿ ಉಜ್ವಲವಾಗಿತ್ತು.

ವಿಮಲೆ ಓಡೋಡಿ ಬಂದು ಹೇಳಿದಳು "ಎಲಿಜಬೆತ್ ಮತ್ತು ಗೌರಮ್ಮ ಬರುತ್ತಿದ್ದಾರೆ."

ಕೈಯಲ್ಲಿ ಸಿಹಿಯ ಪೊಟ್ಟಣಗಳ ಸಹಿತ ಆಗಮಿಸಿದ ಅತಿಥಿಗಳನ್ನು ಆತ್ಮಾದರದಿಂದ ಬರಮಾಡಿಕೊಂಡಳು ಶಿವೆ. ಪರಸ್ಪರ ದರ್ಶನಲಾಭ ತುಟಿಗಳಲ್ಲಿ ಹಸನಾದ ಎಳೆನಗುವನ್ನು ಮೂಡಿಸಿತು. ಸಂತಸದಿಂದ ಹೃದಯ ಸಮುದ್ರಗಳು ಉಕ್ಕೇರಿ ಬಂದುವು.

ಬನ್ನಿ....ಬನ್ನಿ, ಆಗಿನಿಂದಲೂ ನಿಮ್ಮ ನಿರೀಕ್ಷೆಯಲ್ಲಿದ್ದೆವು.

ಅವಳು ನೀಡಿದ ಎರಡೂ ಕೈಗಳನ್ನು ಅದುಮಿ ಹಿಡಿದುಕೊಂಡಳು ಎಲಿಜಬೆತ್. ಅರಳಿದಮುಖಚ್ಛವಿ ಚಿತ್ರಶೋಭೆಗೆ ಉಪಮಾನವಾಗುವಂತಿತ್ತು. ಎದೆಯಾಳದಿಂದ ನುಡಿ ಹರಿದು ಬಂತು,

"ಹೃತ್ಪೂರ್ವಕವಾದ ಅಭಿನಂದನೆಗಳು!"

"ತುಂಬ ವಂದನೆಗಳು !" ಅಂಜಲೀಬದ್ಧಳಾಗಿ ಕರಜೋಡಿಸಿದಳು ಶಿವೆ.

ಎಲಿಜಬೆತ್ ಅತ್ಯಂತ ಪ್ರೇಮಾದರದಿಂದ ಗಾಢಾಲಿಂಗನೆ ಮಾಡಿಕೊಂಡಳು. ಅಂದಿಂದಿಗೂ ಸ್ನೇಹ ಪ್ರೇಮಗಳ ಸಂಜೀವಿನಿಯಾಗಿದ್ದ ಹೃದಯಗಳೆರಡೂ ಆನಂದ ಪ್ರಮತ್ತವಾದುವು.

"ಆಗಲೇ ಬರಬೇಕೆಂದಿದ್ದೆ. ಇದೇ ತಾನೇ ಹೆತ್ತಾಕೆಯೊಬ್ಬಳು ತುಂಬ ಬಳಲಿದ್ದುದರಿಂದ ಸಮಯಕ್ಕೆ ಸರಿಯಾಗಿ ಹೊರಡಲಾಗಲಿಲ್ಲ."

ಪರವಾಯಿಲ್ಲ; ಈಗಲಾದರೂ ಬಂದಿರಲ್ಲ. ಮುಖ್ಯವಾಗಿ ನಿಮ್ಮ ಆಶೀರ್ವಾದ ಬೇಕು."

"ಬರದೆ ಇದ್ದೇನೆಯೇ ? ನನ್ನ ಮನಸ್ಸೆಲ್ಲಾ ಇಲ್ಲೇ ಇತ್ತು ತಂಗೀ!"

"ನನಗೊತ್ತು !" ಮಂದಹಾಸ ಬೀರಿದಳು ಶಿವೆ.

ಅದೇವೇಳೆಗೆ ಅಲ್ಲಿಗೆ ಬಂದ ಪುಟ್ಟಮ್ಮನನ್ನು ಪರಿಚಯಿಸಿದಳು ಶಿವೆ

"ಇವರು ನನ್ನ ಜನನಿ" ಅದೇನೇರಕ್ಕೆ ಎಲಿಜಬೆತಳನ್ನು ಪುಟ್ಟಮ್ಮನಿಗೆ ಪರಿಚಯ ಮಾಡಿಕೊಟ್ಟಳು. "ಇವರು ನನ್ನ ಎರಡನೆಯ ಜನನಿ. ನಿಮ್ಮಿಬ್ಬರಿಂದ ನನ್ನ ಬಾಳು ರೂಪುಗೊಳ್ಳುತ್ತಿದೆ."

ಆ ಮುಹೂರ್ತ ಅತ್ಯಂತ ಸುಖದಾಯಕವಾಗಿತ್ತು. ಹರ್ಷಸೂಚಕವಾಗಿ ಮಂದಹಾಸ ಎಲ್ಲರ ತುಟಿಗಳ ಮೇಲೂ ಹರಿದಾಡಿತು.

ಗೌರಮ್ಮನೂ ಎಲಿಜಬೆತಳೂ ಎಲ್ಲೆಡೆಯೂ ಓಡಾಡಿ ಬಡಮಕ್ಕಳನ್ನು ನೋಡಿ ಮಾತಾಡಿಸಿ ಸಿಹಿಯನ್ನು ಉತ್ಸುಕತೆಯಿಂದ ಹಂಚಿದರು. ಬಿಳಿಯುಡಿಗೆ ಯನ್ನು ನೋಡಿ ಭಯ ಪಟ್ಟರೂ ಸಿಹಿಯನ್ನು ಕಂಡು ಕದಲದೆ ನಿಂತರು ಮಕ್ಕಳು. ಸರಸು ಒಬ್ಬೊಬ್ಬರನ್ನಾಗಿ ಕರೆದು ಹೇಳಿಸಿದಳು.

"ಎಲ್ಲರೂ ಅನಾಥ ಮಕ್ಕಳು, ತಾಯಿ ತಂದೆಯರನ್ನು ಕಳೆದುಕೊಂಡು ಅವರಿವರ ಬಳಿಯಲ್ಲಿದ್ದು ಬಳಲಿದ್ದಾರೆ. ಮೇಲಾಗಿ ಆರೋಗ್ಯವಿಲ್ಲ. ಡಾ॥ ಚಂದ್ರು ಪ್ರಸಿಡೆಂಟರಾಗಿರುವುದರಿಂದ ನಮಗೆ ನಿಶ್ಚಿಂತೆ. ಮಕ್ಕಳ ಆರೋಗ್ಯದ ಭಾರ ಅವರಿಗೆ ವಹಿಸಿ ಬಿಡುವೆ."

"ಶಿವೇ, ನೀನು ಕಷ್ಟಕ್ಕೆ ಸಿಕ್ಕಿದುದರಿಂದಲೇ ಹೆಣ್ಣು ಮಕ್ಕಳ ಬವಣೆ ಯೇನೆಂಬುದನ್ನು ಅರಿತುಕೊಂಡೆ. ನೀನು ಕೈಕೊಂಡ ಕಾರ್ಯಕ್ರಮ ಸಾರೋದ್ಧಾರವಾಗಿ ನಡೆದು ಬರಲಿ."

"ಈ ಮಕ್ಕಳಿಗೆ ಶಿಕ್ಷಣ ಕೊಡುವುದು ಸಾಮಾನ್ಯವಲ್ಲ. ನಿಜವಾಗಿಯೂ ಶಿವೆ ಕೈಕೊಂಡ ಕಾರ್ಯಕ್ರಮ ಮಹತ್ತರವಾದುದೆಂದು ಮಕ್ಕಳನ್ನು ನೋಡಿದ ನಂತರ ಮನವರಿಕೆಯಾಯಿತು. ಭಗವಂತನ ಕೃಪೆಯಿಂದ ನಿಮ್ಮ ಶ್ರಮ ಸಾರ್ಥಕವಾಗಲಿ." ಎಂದಳು ಗೌರಮ್ಮ. ಸಮಾಧಾನದಿಂದ ಹೃದಯ ಹಾಲ್ಗಡಲಾಯಿತು.

"ಇದು ಅತ್ಯಂತ ಶ್ಲಾಘನೀಯವಾದ ಕಾರ್ಯ." ಪುಟ್ಟಮ್ಮ ದನಿ ಗೂಡಿಸಿದಳು.

ಹರಸಿದ ಎಲ್ಲರಿಗೂ ಹೃತ್ಪೂರ್ವಕ ವಂದನೆಗಳನ್ನರ್ಪಿಸಿದಳು ಶಿವೆ.

"ಹುಟ್ಟಿಸಿದವನು ಹುಲ್ಲು ಮೇಯಿಸುತ್ತಾನೆ." ಮಕ್ಕಳನ್ನು ಕರೆತಂದ ಹಿರಿಯರೊಬ್ಬರು ನುಡಿದರು.

ರವಿಯ ಒಡನಾಡಿಗಳೂ ಮತ್ತು ಸಹೋದ್ಯೋಗಿಗಳೂ ಕುಮಾರ ಶ್ಯಾಮು ಗೋಪಿಯರ ಸ್ನೇಹಿತರುಗಳೂ ಸರಸು ವಿಮಲೆಯರ ಗೆಳತಿಯರೂ ಶಿವೆಯ ಸಹೋದ್ಯೋಗಿಗಳೂ ಡಾ॥ ಚಂದ್ರ ರಾಯರು ಮತ್ತು ಪುಟ್ಟಮ್ಮ ಇವರ ಅನುರಾಗಿಗಳೂ ಬಹು ಮಂದಿ ನೆರೆದಿದ್ದು ಪ್ರೀತಿಯಿಂದ ಶಾಲೆಯನ್ನು ಹರಸಿ ಹೊರಡಲನುವಾದರು. ಶಿವೆ ಮತ್ತು ಪುಟ್ಟಮ್ಮ ಅತಿಥಿಗಳನ್ನು ಬೀಳ್ಕೊಟ್ಟರು.

ಶಾಂತಾ ನಾಮಾಂಕಿತೆಯಾದ ಮಗು ನಿಶ್ಶಕ್ತಿಯಾಗಿದ್ದುದರಿಂದ ಅವಳನ್ನು ಸ್ವಲ್ಪ ಕಾಲ ಆಸ್ಪತ್ರೆಯಲ್ಲಿಡಲು ಡಾಕ್ಟರು ಸಲಹೆ ಮಾಡಿದರು. ಶಿವೆ ಮಗವನ್ನು ಎಲಿಜಬೆತಳಿಗೊಪ್ಪಿಸಿ ಹೇಳಿದಳು "ದಯಮಾಡಿ ಮಗುವಿನ ಭಾರವನ್ನು ಹೊತ್ತುಕೊಳ್ಳಿರಿ. ನಾನು ಸ್ವಲ್ಪ ನಿಧಾನಿಸಿ ಬರವೆ. ಮಕ್ಕಳಿಗೆ ರಾತ್ರಿಯೂಟದ ವ್ಯವಸ್ಥೆಯಾಗಬೇಕು."

"ಇದೊಂದು ಭಾರವೇ ?" ಎಂದ ಎಲಿಜಬೆತಳು ಗೌರಮ್ಮನೊಂದಿಗೆ ಮಗುವನ್ನೆತ್ತಿಕೊಂಡು ಹೊರಟಾಗ ಶಿವೆಯ ಕಣ್ಣುಗಳಲ್ಲಿ ಅಶ್ರುಬಿಂದುಗಳು ಮೂಡಿದುವು. ಅವರು ಹೋಗುವುದನ್ನೇ ಎವೆಯಿಕ್ಕದೆ ನೋಡುತ್ತಾ ನಿಂತಳು ಶಿವೆ.

"ಕಣ್ಣಿನಲ್ಲಿ ನಿರೇಕೆ?" ಸರಸು ಕೇಳಿದಳು.

"ಸಹಕಾರವೆಂಬುದೇನೆಂದು ಅರ್ಥ ಮಾಡಿಕೊಳ್ಳಬೇಕಾದರೆ ಎಲಿಜಬೆತ ರೊಂದಿಗೆ ಕೂಡಿ ಕೆಲಸಮಾಡಿದವರಿಗೆ ತಿಳಿದೀತು. ನಮ್ಮಲ್ಲಿ ಇಂಥ ವ್ಯಕ್ತಿ ಗಳು ಅಪರೂಪ. ಅಪಾರವಾದ ಕೆಲಸಗಳ ನಡುವೆ ಸ್ವಲ್ಪ ಬಿಡುವು ಮಾಡಿ ಕೊಂಡು ಬಂದವರು ತಕ್ಷಣ ಮಗುವಿನ ಭಾರವನ್ನು ಹೊರಲು ಸಹ ಸಿದ್ಧ ರಾದರು. ನನ್ನನ್ನಂತೂ ಮಗುವಿನಂತೆ ಕಂಡಿದ್ದಾರೆ."

"ಸರಿ ಅದಕ್ಕೇಕೆ ಕಂಬನಿ ?"

"ಇದುವರೆವಿಗೂ ಅಪ್ಪ ಚಿಕ್ಕಮ್ಮ ಬರುತ್ತಾರೆಂದುಕೊಂಡಿದ್ದೆ. ಏಕೆ ಬರಲಿಲ್ಲವೋ ತಿಳಿಯದು. ಹೋಗಲಿ, ಈ ತಾಯಿಯಾದರೂ ಬಂದರಲ್ಲಾ ಅದೇ ಸಮಾಧಾನ.

"ಸಮಾಧಾನವಾದರೆ ಕಂಬನಿ ಮಿಡಿಯುವುದೇ ?"

"ಮಗೂ, ನಿನಗೇನು ತಿಳಿದೀತು ? ತಾಯಿಯನ್ನು ಬೀಳ್ಕೊಡುವಾಗ ಎಂತಹವರಿಗೂ ದುಃಖವಾಗದಿರದು."

"ನೀನು ಆಸ್ಪತ್ರೆಯಲ್ಲಿರುವಾಗ ದಿನವೂ ಅಳುತ್ತಿರಲಿಲ್ಲವೇನು ?" ವಿಮಲೆ ಕೇಳುತ್ತಲೂ ಸರಸು ನಸುನಕ್ಕು ಸುಮ್ಮನಾದಳು.

ಡಾಕ್ಟರ ಗೆಳೆಯರೊಬ್ಬರು ಸ್ವಲ್ಪ ತಡವಾಗಿ ಬಂದರು. ಡಾಕ್ಟರು ಗೆಳೆಯನನ್ನು ಆದರದಿಂದ ಬರಮಾಡಿಕೊಂಡು ಎಲ್ಲರಿಗೂ ಪರಿಚಯ ಮಾಡಿ

ಕೊಟ್ಟು ಶಾಲೆಯನ್ನು ತೋರಿಸುತ್ತಾ ಹೇಳಿದರು "ಇಲ್ಲಿ ವಿದ್ಯೆಯನ್ನು ಎಸ್. ಎಸ್. ಎಲ್. ಸಿ. ವರೆಗೆ ಕಲಿಸುತ್ತೇವೆ. ಜೊತೆಗೆ ನಾನಾ ಬಗೆಯ ಕೈಗಾರಿಕೆಯನ್ನೂ 'ಟೈಪ್‌ರೈಟಿಂಗ್' ಅನ್ನೂ ಅವರವರ ಅಭಿರುಚಿಗನುಗುಣ ವಾಗಿ ಕಲಿಸಿ ತಮ್ಮ ಅನ್ನವನ್ನು ತಾವೇ ಗಳಿಸಿಕೊಳ್ಳಲು ಶಕ್ತರಾಗುವವರೆಗೆ ಇಟ್ಟುಕೊಂಡು ಆನಂತರ ಯಾರಾದರೊಬ್ಬ ಸೂಕ್ತ ವರನಿಗೆ ರಿಜಿಸ್ಟರ್ ಮೂಲಕ ಮದುವೆ ಮಾಡಿ ಉತ್ತಮ ಗೃಹಣಿಯನ್ನಾಗಿಸುವುದು ನಮ್ಮ ಇಚ್ಛೆ." ವಿವರಣೆ ನೀಡುತ್ತ ಡಾಕ್ಟರು ಅವರನ್ನು ಶಾಲೆಯ ಒಳ ಭಾಗಕ್ಕೆ ಕರೆದುಕೊಂಡು ಹೋದರು. "ಅಡುಗೆಗಾಗಿ ಮತ್ತು ಪರಿಚಾರಿಕೆಗಾಗಿ ದೊರೆ ತವರೂ ನಿರ್ಗತಿಕರು-ಮಕ್ಕಳಿಲ್ಲದ ವಿಧವೆಯರು. ಒಬ್ಬ ಉಪಾಧ್ಯಾಯಿನಿಗೆ ತಂದೆಯಿಲ್ಲ. ತಾನೇ ಸಂಸಾರದ ಭಾರ ಹೊರಬೇಕು. ಎರಡನೆಯ ಉಪಾಧ್ಯಾಯಿನಿಯು ದೊಡ್ಡ ಕುಟುಂಬಕ್ಕೆ ಸೇರಿದ್ದು ಅತ್ಯಂತ ಕಡಿಮೆ ವರಮಾನವಿದ್ದು ಕಷ್ಟ ಪರಂಪರೆಗಳ ಬೀಡಿನಿಂದ ಬಂದವಳು. ಹೀಗೆ ನಾನಾ ರೀತಿಯಲ್ಲಿ ಭಗಿನಿಯರ ಕಂಬನಿಯನ್ನು ತೊಡೆಯಲಿರುವ ಶಾಲೆ ಇದು. ಇಂತಹ ನೂರಾರು ಶಾಲೆಗಳು ನಮ್ಮಲ್ಲಿ ಹುಟ್ಟಿಕೊಳ್ಳಬೇಕು." ಎಂದ ಡಾಕ್ಟರು ಪುನಃ ನಗುಮುಖದಿಂದ ಹೇಳಿದರು "ಇಲ್ಲಿಯ ವಿದ್ಯೆಯನ್ನು ಸುಲಭ ವಾಗಿ ಜೀರ್ಣಿಸಿಕೊಳ್ಳುವ ಬುದ್ಧಿವಂತ ಮಕ್ಕಳನ್ನು ವಿದ್ಯಾರ್ಥಿವೇತನದ ಸಹಾಯದಿಂದ ಕಾಲೇಜು ವಿದ್ಯಾಭ್ಯಾಸಕ್ಕೂ ಅಥವಾ ಇನ್ನಾವುದೇ ಬಗೆಯ ತರಬೇತಿ ಹೊಂದಲು ನಾವು ಸಹಾಯ ಮಾಡುತ್ತೇವೆ."

ಕಸೂತಿ ಮತ್ತು ಟೈಲರಿಂಗ್ ಹೊಲಿಗೆಯನ್ನು ಮಕ್ಕಳಿಗೆ ಕಲಿಸಲು ಮುಂದೆ ಬಂದ ತಂಗಮ್ಮನನ್ನು ಪರಿಚಯ ಮಾಡಿಸಿ "ಇವರು ಸರಕಾರದಿಂದ ಸಹಾಯ ಬರುವವರೆಗೆ ಮಕ್ಕಳಿಗೆ ಪುಕ್ಕಟೆಯಾಗಿ ಕಸೂತಿ ಮತ್ತು ಕೈಗಾರಿಕೆ ಯನ್ನು ಕಲಿಸುತ್ತಾರೆ."

"ಸಂಚಾಲಕಿಯಾಗಿ ಕೆಲಸ ಮಾಡುವ ಇವರು ಆಜನ್ಮಪರ್ಯಂತ ಪುಕ್ಕಟೆಯಾಗಿ ಕೆಲಸಮಾಡುತ್ತಾರೆ." ಎಂದು ಪುಟ್ಟಮ್ಮನನ್ನು ಪರಿಚಯ ಮಾಡುತ್ತ ರವಿ ಆನಂದೋತ್ಸಾಹದ ಗಣಿಯಾದ.

"ನಾನೇನು ಮಾಡಬಲ್ಲೆ ? ರವಿ ತಮಾಷೆಗೆ ಹೇಳುತ್ತಿದ್ದಾನೆ." ನಕ್ಕು

ನುಡಿದಳು ಪುಟ್ಟಮ್ಮ.

"ಇವರು ಶಿವಮ್ಮ. ಇವರೇ ಶಾಲೆಯ ಸೃಷ್ಟಿಕರ್ತರು. ಇಲ್ಲಿ ನಾವು ನಿಮಿತ್ತ ಮಾತ್ರ. ಪತಿ ಕಾಣೆಯಾದಾಗ ಮಕ್ಕಳೆಲ್ಲ ಚಿಕ್ಕವರು. ನಾನಾ ಕಷ್ಟಪರಂಪರೆಗಳನ್ನೆದುರಿಸಿ ಮಕ್ಕಳನ್ನು ದಾರಿಗೆ ಹಚ್ಚಿ ಅವರಿಗೆ ತಂದೆ ಇಲ್ಲದ ಕೊರತೆಯನ್ನು ನಿವಾರಿಸಿದ್ದಾರೆ. ವಿದ್ಯಾವಿಹೀನೆಯಾದ ಹಳ್ಳಿಯ ಹೆಣ್ಣು ಇಷ್ಟರ ಮಟ್ಟಿಗೆ ನಡೆಸಿಕೊಂಡು ಹೋಗುವುದು ಸಾಮಾನ್ಯವಲ್ಲ." ಡಾಕ್ಟರು ಮೆಚ್ಚಿಗೆಯ ಮಾತುಗಳನ್ನಾಡಿದಾಗ ಶಿವಮ್ಮ ನವ ವಧುವಿನಂತೆ ನಾಚಿ ನೀರಾದಳು.

"ನಿಜ, ನಿಜ. ಮಕ್ಕಳಿಗೆ ತಂದೆಯೂ ಅವರೇ ತಾಯಿಯೂ ಅವರೇ." ಪುಟ್ಟಮ್ಮ ದನಿಗೂಡಿಸಿದಳು.

"ಅಪ್ಪ ಹೇಗಿದ್ದರೆಂಬುದೇ ನನಗೆ ನೆನಪಿಲ್ಲ." ವಿಮಲೆಯೆಂದಳು.

"ನನಗೆ ಸಾಕಷ್ಟು ನೆನಪಿದೆ." ರವಿಯೆಂದ.

ಶಿವೆ ಎಲ್ಲವನ್ನೂ ಮುಗಿಸಿ ಮನೆಗೆ ಬಂದಾಗ ಇಳಿಹೊತ್ತಾಗಿತ್ತು. ಪಡುವಣ ದಿಕ್ಕಿನಲ್ಲಿ ರವಿ ಬಂಗಾರದ ತಟ್ಟೆಯಂತೆ ನಯನ ಮನೋಹರವಾಗಿ ಕಣ್ಗೆಸೆಯುತ್ತಿದ್ದ. ರವಿಯಾಗಮನದಿಂದ ರಕ್ತರಾಗರಂಜನಿ ಪಶ್ಚಿಮಾಂಗನೆ ಹರ್ಷಚಿತ್ತಳಾಗಿದ್ದಾಳೆ. ಹೊಂಬಣ್ಣದ ಹಿನ್ನೆಲೆಯಲ್ಲಿ ಬೆಳ್ಮುಗಿಲಿನ ತಂಡಗಳು ಸೂರ್ಯದೇವನಿಗೆ ಸುತ್ತೂ ಮುತ್ತೂ ಸುಂದರ ಪ್ರಭಾಳೆಯನ್ನು ಹೊಂದಿಸಿದ್ದುವು. ಶಿವೆ ಸ್ವಲ್ಪ ಹೊತ್ತು ನಿಂತು ನೋಡಿದಳು. ನಭೋಮಂಡಲದಲ್ಲಿ ನೆರೆದಿದ್ದ ಕೆಮ್ಮುಗಿಲು ಹೆಮ್ಮುಗಿಲು ಬೆಳ್ಮುಗಿಲುಗಳ ಸಹ ಕೂಟ ಕಣ್ಮನಗಳನ್ನು ಅತ್ತತ್ತಲೇ ಸೆಳೆಯತೊಡಗಿತು. ನೋಡುತ್ತಿದ್ದಂತೆ ಸ್ವಲ್ಪ ಹೊತ್ತಿನೊಳಗಾಗಿ ರವಿ ಕಣ್ಮರೆಯಾದ. ಬೆಳ್ಮುಗಿಲೊಂದು ತೇಲುತ್ತಾ ಮನುಷ್ಯಾಕಾರವನ್ನು ತಳೆಯಿತು. ಆ ಧೀರ ಗಂಭೀರ ಆಕಾರ ಹರಸಲು ಬಂದ ವಯೋವೃದ್ಧನಂತೆ ತೋರಿ ಬಂತು. ಶಿವೆ ಅಲುಗದೆ ಅತ್ತಲೇ ನೋಡುತ್ತಾ ನಿಂತಳು. ಶತಶತಮಾನಗಳನ್ನು ಮೆಟ್ಟಿ ನಿಂತ ಆ ಪ್ರಾಚೀನ ವ್ಯಕ್ತಿ ಯಾರಿರಬಹುದು ? ಎಂಬ ಪ್ರಶ್ನೆ ಮನದಲ್ಲಿ ಮೂಡಿ ಅನೇಕಾನೇಕ ಯುಗಪುರುಷರನ್ನು ನೆನಪಿಗೆ ತಂದಿತು. ಒಮ್ಮೆ ಆ ಚಿತ್ರ ಭಗವಾನ್ ಬುದ್ಧದೇವನನ್ನು ನೆನಪಿಗೆ ತಂದಾಗ ಬಹುಶಃ ಅವರೇ ಹರಸಲು ಬಂದರೇನೋ

ಎಂಬಂತಿದೆ ಎಂದುಕೊಂಡಳು. ಮರುಕ್ಷಣದಲ್ಲಿ ತನಗೆ ತಾನೇ ನಕ್ಕು ಅದನ್ನು ನಿವಾರಿಸಿದಳಾದರೂ ಭಗವಂತನ ಅಭಯ ಹಸ್ತವಿದೆ ಎಂಬ ಭಾವನೆ ಮನದಲ್ಲಿ ಅಚ್ಚಳಿಯದುಳಿಯಿತು. ಸ್ವಲ್ಪ ಹೊತ್ತು ಭಾವಪರವಶಳಾಗಿ ನಿಂತು ಬಿಟ್ಟಳು. ಭಗವಾನ್ ಶ್ರೀಕೃಷ್ಣನ ಸಂದೇಶ ಮನದಲೆಯಲ್ಲಿ ತೇಲಿ ಬಂದಿತು. ತನುಮನಗಳಲ್ಲಿ ಆನಂದಲಹರಿಯು ಉಕ್ಕಿ ಹರಿಯಿತು.

"ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ।"
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ॥"

೩೯

ದಿನಗಳು ವಾರಗಳು ಗತಿಸಿದುವು . ಚಾಂದ್ರಮಾನಗಳು ಆರುಗಾದುವು. ಆಸ್ಪತ್ರೆಯಲ್ಲಿದ್ದ ರಾಮಣ್ಣ ಸಂಪೂರ್ಣ ಚೇತರಿಸಿಕೊಂಡ. ಮುರಿದ ಬೆನ್ನೆಲುಬು ಕೂಡಿ ನೋವು ಪಲಾಯನ ಬೆಳೆಸಿತು. ಹಿರಿಯ ವೈದ್ಯರು ರವಿಯ ಮನೆಯವನೆಂಬ ಒಲುಮೆಯಿಂದಲೋ ಏನೋ ಶ್ರಮವಹಿಸಿ ನೋಡಿಕೊಂಡರು. ಅವರ ಅಪ್ಪಣೆಯ ಪ್ರಕಾರ ರವಿ ಚಿಕಿತ್ಸೆ ನಡೆಸುತ್ತಿದ್ದ. ಮೇಲಾಗಿ ದೊಡ್ಡಪ್ಪನ ಅವಶ್ಯಕತೆಗಳನ್ನು ತಕ್ಷಣ ಪೂರೈಸುತ್ತಿದ್ದು....ಆತನ ಕಠಿಣ ಹೃದಯದಲ್ಲಿ ಪ್ರೇಮಾಂಕುರಗೊಳಿಸಿದ್ದ.

ಅಂದಿಂದಿಗೂ ರವಿಯ ಚಟುವಟಿಕೆಗಳನ್ನು ಸ್ವಂತ ಕಣ್ಣುಗಳಿಂದ ಈಕ್ಷಿಸಿದ ರಾಮಣ್ಣನಿಗೆ ಮನದಲ್ಲಿ ಏನೋ ಒಂದು ಬಗೆಯ ಶಾಂತಿ....ಇನ್ನೇನೋ ಒಂದು ಬಗೆಯ ಕೊರಗು....ಮತ್ತೇನೋ ಒಂದು ಬಗೆಯ ಸಂಕೋಚ........ ಅನುಭವಿಸಲಾಗದ ತಳಮಳ. ಅಂತರ್ನಿಹಿತ ಅಗ್ನಿಜ್ವಾಲೆ ತನುಮನಗಳನ್ನು ತನಗರಿಯದಂತೆಯೇ ಸುಡುತ್ತಿತ್ತು. ಉರುಳುವ ಒಂದೊಂದು ಗಳಿಗೆಯೂ ದುಃಖದ ಪಾಲು...

ರವಿ ಉನ್ನತ ವೈದ್ಯರುಗಳೊಂದಿಗೆ ಓಡಾಡಿಕೊಂಡಿದ್ದು ಉತ್ತಮ ಶ್ರೇಣಿಯಲ್ಲಿ ನಕ್ಷತ್ರದಂತೆ ಮಿನುಗುತ್ತಿರುವಾಗ ವೆಂಕಟೇಶ ಊರ ಮಂದಿಯೊಡನೆ ಓಡಾಡಿಕೊಂಡಿದ್ದು ಸರ್ವೇ ಸಾಮಾನ್ಯವಾಗಿ ಉಳಿದನೇ ಎಂಬ ಯೋಚನೆ....ಅದಕ್ಕೂ ಮುಂಚೆ ಉಂಡಾಡಿಯಾಗಿಯೇ ಉಳಿದಿದ್ದ, ಈಗ ಊರ ಮಂದಿಗಾದರೂ ಆಧಾರವಾಗಿದ್ದಾನೆ ಎಂಬ ಸಮಾಧಾನ...ಆದರೆ ರವಿಯೊಂದಿಗೆ ಹೋಲಿಸಿದರೆ ಮಿಣುಕು ಹುಳು! ಎಂಬ ಯೋಚನೆಯಲ್ಲಿ ಸಣ್ಣ ಮನುಸ್ಸು ಮಿಲಿಮಿಲಿ ಗೊಂಡಿತು.

ಹಾ....!

ಹೇಳಿಕೊಳ್ಳಲಾರ....ಅನುಭವಿಸಲಾರ....

ಸಪ್ಪೆ ಮೋರೆ ತಳೆದು ಕುಳಿತ. ಹೃತ್ ತಂತುಗಳು ಅಲ್ಲಿಂದಲ್ಲೇ

ಕಟ್‌ಕಟ್ಟನೆ ತುಂಡುಗಡಿಯುತ್ತಿರುವಂತೆ ಭಾಸವಾಗುತ್ತಿತ್ತು. ಎಷ್ಟೇ ಪ್ರಯತ್ನಿಸಿದರೂ ನೆಲೆ ಇಲ್ಲದ ಮಾನಸ ಪಕ್ಷಿ ಗತಕಾಲದ ಸಂಸಾರವಲಯದಲ್ಲಿ ವಿಹರಿಸ ತೊಡಗಿತು. ಸ್ವಾಮಿ ಅದೃಶ್ಯನಾದಾಗ ಉದಾಸೀನ ತಳದ ಬಗೆ, ಆತನ ಸಂಸಾರದ ಭಾರವನ್ನು ಹೊರಬೇಕಾದೀತೆಂದು ದೂರ ಉಳಿದ ಬಗೆ, ಅನಾಥ ಮಕ್ಕಳ ಬಗ್ಗೆ ತಾತ್ಸಾರ ತೋರಿ ತನ್ನ ಮಕ್ಕಳನ್ನು ಓದಿಸಲು ಆಸಕ್ತಿ ತೋರಿದ ಬಗೆ ಹೇಗೆ ಬುಡಮೇಲಾಯಿತೆಂಬುದನ್ನು ಮೆಲುಕು ಹಾಕಿ ಕಸಿವಿಸಿಯುಂಡ. ಮುಖಬಿಂಬ ದುಃಖದ ಪರಿಧಿಯಲ್ಲಿ ಮ್ಲಾನವಾಯಿತು. ಮಗ್ಗುಲಿನ ಕಿಟಕಿಯಲ್ಲಿ ತೂರಿದ ದಿಟ್ಟಿ ಅನಂತಾಕಾಶದ ಸೀಮಾರೇಖೆಯವರೆಗೂ ಹರಿಯಿತು. ಅರುಣರಾಗ ರಂಜಿತ ಬಾಲರವಿ ಬಾನೇರುತ್ತಿದ್ದ. ಸೂರ್ಯ ರಶ್ಮಿಯ ದಿವ್ಯ ಪ್ರಭೆ ತನುಮನಗಳನ್ನು ಮುತ್ತುತ್ತಿತ್ತು—ಅಂತರ್ಗತ ಗುಣದೋಷಗಳನ್ನು ಹೊರಡಿಸುವಂತೆ. ಹಾಗೆ ಅದೆಷ್ಟು ಹೊತ್ತು ಉರುಳಿತೋ....

ಎಳೆ ಬಿಸಿಲಲ್ಲಿ ಮೈಕಾಸಿ ಜಿಗಿದು ಹಾರುವ ಸಾಸಿರ ಸಾಸಿರ ಪಕ್ಷಿಗಳ ಕೊರಳುಲಿಯು ಕರ್ಣಾನಂದಕರವಾಗಿ ಕೇಳಿ ಬರುತ್ತಿದ್ದರೂ ಬೆಳಗಿನ ಪರಿಶುಭ್ರ ವಾತಾವರಣ ಮನಸ್ಸಿಗೆ ಹಿತವನ್ನೀಯುತ್ತಿದ್ದರೂ ನಾನಾ ವಿಚಾರಗಳ ವರ್ಣಮಾಲೆ ಮನಸ್ಸರೋವರವನ್ನು ಕಲಕಿ ಬಗ್ಗಡಗೊಳಿಸಿತ್ತು.

ಆಸ್ಪತ್ರೆಯ ದಿನಚರಿ ಎಂದಿನಂತೆಯೇ ಮುಂಬೆಳಕು ಮೂಡಿದಾಗಲೇ ಆರಂಭವಾಗಿತ್ತು.

ಅಲ್ಲಿನ ದಾದಿಯರು ತಮ್ಮ ಕರ್ತವ್ಯವನ್ನು ಚಟುವಟಿಕೆಯಿಂದ ನಿರ್ವಹಿಸುವುದನ್ನು ಸೂಕ್ಷ್ಮವಾಗಿ ಗಮನಿಸಿತು ಚಿತ್ತ. ಕ್ಲಪ್ತಕಾಲದಲ್ಲಿ ಗಮಿಸಿ ಕ್ಲಪ್ತಕಾಲದಲ್ಲೇ ನಿರ್ಗಮಿಸುವ ಅವರಲ್ಲಿ ಮಾನವೀಯತೆ ಎದ್ದು ಕಾಣಿಸುತ್ತದೆ.. ಶಿವೆ ದಾದಿಯಾದಾಗ ತಾವು ತಳೆದ ಧೋರಣೆ, ಕೊಟ್ಟ ಶಿಕ್ಷೆ, ನೀಡಿದ ಬಹಿಷ್ಕಾರ ಒಂದೊಂದು ಬೃಹತ್ತಾಗಿ ಮೈತಳೆದು ಅಕ್ಷಿಪಟಲದ ಮೇಲೆ ಲಾಸ್ಯವಾಡಿದುವು, ಶಿವೆ ಅಲ್ಲಿಗೆ ಬರುವಾಗಲೆಲ್ಲಾ ವೈದ್ಯರೊಂದಿಗೆ ಬರುತ್ತಿದ್ದುದನ್ನು ನೆನೆಸಿಕೊಂಡಾಗ ಮನದಲ್ಲಿ ಮರಕ ಮೂಡಿತು. ತಾನೊಬ್ಬಳೇ ಎಂದೂ... ಬಂದು ವಿಚಾರಿಸದಿದುದರಿಂದ ಏಕಾ ಏಕಿ ತನ್ನ ಬಳಿಗೆ ಬರಲು ಭಯಪಟ್ಟಿದ್ದಾಳೆಂಬುದು ಖಚಿತವಾಯಿತು....ಅಂದ ಮೇಲೆ ?

ಎದೆಯಾಳದಿಂದ ನಿಟ್ಟುಸಿರೊಂದು ಸದ್ದಿಲ್ಲದೆ ತಪ್ಪಿಸಿಕೊಂಡಿತು.

"ವಿಶಿಷ್ಟ ಜೀವನಕ್ಕಾಗಿಯೇ ಸೃಷ್ಟಿಸಲ್ಪಟ್ಟ ಶಾಸ್ತ್ರ-ಸೂತ್ರಗಳನ್ನು ಜೀವನದ ಸಹಜತೆಯ ನಡುವೆ ಆದರ್ಶದ ನೇಮದಲ್ಲಿ ಕೊಂಡೊಯ್ದರೆ ದುರುದ್ದೇಶವೂ ದುರ್ಮಾರ್ಗವೂ ಉನ್ಮಾದವೂ ಉಂಟಾಗುತ್ತದೆ. ಇದಕ್ಕೆ ಚರಿತ್ರೆಯಲ್ಲಿ ಸಾಕಷ್ಟು ನಿದರ್ಶನಗಳಿವೆ...ಆದರೆ ಇವನ್ನು ಸಂಪೂರ್ಣ ನಂಬಿ 'ಆದರ್ಶ' ಎಂದು ಆಚರಿಸಲೇಬೇಕೆಂದುಕೊಂಡಾಗ ಸಮಾಜದಲ್ಲಿ ಒಂದು ವಿಶಾದ ಕ್ರಾಂತಿಯನ್ನೆದುರಿಸಬೇಕಾಗುತ್ತದೆ. ಆಗ ದುಃಖ-ಸಂಕಟ ಅನಿವಾರ್ಯ." ಎಂದು ಯಾರೋ ಕರ್ಣಪಟಲಗಳ ಸನಿಹದಲ್ಲಿಯೇ ಕೂಗಿ ಹೇಳಿದಂತಾಯಿತು.

ರಾಮಣ್ಣ ಚಿಂತಿತನಾದ....ಕಣ್ಣುಗಳು ನಿಸ್ತೇಜವಾದುವು.

ಪಿತೃಹೀನ ಸರಸು ಕಾಯಿಲೆ ಬಿದ್ದು ಆಸ್ಪತ್ರೆ ಸೇರಿದಾಗ ಒಂದಿನವಾದರೂ ಹೋಗಿ ನೋಡುವಷ್ಟು ದಯೆ ತಾನು ತೋರದಿದ್ದರೂ ಅವಳು ಅನೇಕಾವರ್ತಿ ಕಾಫಿ ತಿಂಡಿಗಳ ಸಹಿತ ಬಂದು ನೋಡಿದ್ದಾಳೆ. ಪ್ರೀತ್ಯಾದರದಿಂದ ಕಂಡಿದ್ದಾಳೆ. ರವಿ ಕರುಣೆ-ಗೌರವ-ನಿಷ್ಠೆಗಳ ಮಳೆಯನ್ನೇ ಕರೆದಿದ್ದಾನೆ. ತಂಗಿ ಗೌರಿಯು ನನ್ನ ಅಪರಾಧವನ್ನು ಸ್ವರ್ಗದಲ್ಲಿಯೂ ಕ್ಷಮಿಸಲಾರಳು. ಅದೇ ಅವಳ ಮಕ್ಕಳು ದಿನನಿತ್ಯವೂ ತಾವಾಗಿ ಬಂದು ವಿಚಾರಿಸಿಕೊಳ್ಳುತ್ತಿದ್ದಾರೆ. ಹೇಗೆ ಇವರ ಋಣಬಾಧೆಯಿಂದ ಮುಕ್ತನಾದೇನು ? ಹೇಗೆ ಮನಸ್ಸಿಗೆ ಶಾಂತಿಯನ್ನು ಪಡೆದುಕೊಳ್ಳಲಿ ? ನಾನೇಕೆ ಇಷ್ಟೊಂದು ನಿರ್ದಯನಾದೆ ? ಹೇಗೆ ಇದರ ಪರಿಹಾರ ? ಎಂದು ಮುಂತಾಗಿ ಯೋಚನೆ ಬಂತು...ದುಃಖಾಬ್ಧಿಯಲ್ಲಿ ಮುಳುಗಿ ಮನಸ್ಸು ನರಳಿತು. ಕಿಂಚಿತ್ ಆತ್ಮ ಶಾಂತಿಯನ್ನು ಪಡೆದುಕೊಳ್ಳುವ ಸಲುವಾಗಿ ಮನಮುಟ್ಟಿ ಪ್ರಾರ್ಥಿಸಿಕೊಂಡ,

"ಸ್ವರ್ಗದಲ್ಲಿರುವ ಓ ! ತಮ್ಮ ತಂಗಿಯರೇ, ನನ್ನ ಸರ್ವ ಅಪರಾಧವನ್ನೂ ಕ್ಷಮಿಸಿರಿ."

ಮನದಲ್ಲಿ ವಿಚಾರಗಳ ಮಂಥನ ನಡೆಯುತ್ತಲೇ ಇತ್ತು. ಕುಳಿತಿರಲಾಗದೆ ಹಾಸಿಗೆಯ ಮೇಲೆ ಅಡ್ಡಾದ. ಎಷ್ಟೇ ಪ್ರಯತ್ನಿಸಿದರೂ .. ಇನ್ನೆಷ್ಟೇ ಯೋಚಿಸಿದರೂ ಆಚಾರ-ನಿಯಮಗಳನ್ನು ಪಾಲಿಸುವ ಕುಲೀನ ಕುಟುಂಬದ ಉದ್ದಾಮ ಅಭಿಮಾನ ಮುಂಡಿಯೂರಿ ನಿಲ್ಲುತ್ತಿತ್ತು-ಅಲ್ಲ-ಮಂತ್ರದ್ರಷ್ಟ ಫಣಿಯಂತೆ ಹೆಡೆಯೆತ್ತಿ ನಿಲ್ಲುತ್ತಿತ್ತು. ದ್ವೈದೀಭಾವಗಳ ಕತ್ತಿಯಲುಗಿನ ಮೇಲೆ

ಹರಿದಾಡುತ್ತಿತ್ತು ಮನಸ್ಸು. ಯೋಚನೆಗಳ ಹುಚ್ಚು ಹೊಳೆಯಲ್ಲಿ ಮುಳುಗಿ ಕೊಚ್ಚಿಹೋದ ರಾಮಣ್ಣ.

ಹೊತ್ತು ಎಂಟರ ಅಂಚನ್ನು ದಾಟಿತು.

ಚಿಲಿಪಿಲಿ ಹಕ್ಕಿಗಳು ಕಾಳು ಕಡ್ಡಿಗಳನ್ನು ಅರಸಲು ಅತ್ತಿತ್ತ ಚದುರಿ ಹೋಗಿದ್ದುವು. ಆಸ್ಪತ್ರೆಯವಲಯ ಶಾಂತಸಮುದಾಯದಲ್ಲಿ ಮುಳುಗಿತ್ತು ಹೊದ್ದಿಕೆಯನ್ನು ಕಾಲದೆಶೆಗೆ ತಳ್ಳಿ ಎರಡೂ ಕೈಗಳಿಂದ ಮೊಣಕಾಲುಗಳನ್ನು ಕಟ್ಟಿಕೊಂಡು ಅಚಂಚಲನಾಗಿ ಕುಳಿತ. ಸಾಲಾಗಿನ ಮಂಚಗಳಲ್ಲಿ ನಾನಾ ಬಗೆಯ ರೋಗಿಗಳು ಕೆಂಪು ಹೊದ್ದಿಕೆಯಡಿ ಮೈ ಮುದುಡಿ ಮಲಗಿದ್ದರು. ನೋಟ ಒಮ್ಮೆ ಸುತ್ತಲೂ ಹೊರಳಿತು. ಅವರಲ್ಲಿ ಅನೇಕರಿಗಿಂತ ತಾನು ಹಿಂದಾಗಿ ಬಂದಿದ್ದರೂ ಮುಂದಾಗಿ ಹೊರಡುತ್ತಿದ್ದೇನೆ ಎಂದೆನಿಸಿದಾಗ ಹರ್ಷಿತನಾದರೂ ಅಪರಾಧಗಳ ತಿಮಿರರೂಪ ಮೈತಳೆದು ಗರಿಗೂಡಿ ತಲೆಯಲ್ಲಿ ನರ್ತಿಸ ಹತ್ತಿದುವು.

ಎದೆಯಾಳದಿಂದ ಭಾರವಾದ ನಿಟ್ಟುಸಿರೊಂದು ಹೊಮ್ಮಿತು.

ಅಂತರ್ನಿಹಿತ ಶಕ್ತಿ ಮಾತ್ರವಲ್ಲ ನರನರಗಳೂ....ಸದಾಕಾಲ ತನ್ನನ್ನು ತಪ್ಪಿತಸ್ಥ ಎಂದು ಘೋಷಿಸುತ್ತಲೇ ಇವೆ-ದುಃಖಾಭಿಮಾನಗಳ ಕತೆ ಒತ್ತಟ್ಟಿಗಿರಲಿ. ತರ್ಕವಿತರ್ಕಗಳ ಪ್ರಾಕಾರದಲ್ಲಿ ಪಾಪ ಪುಣ್ಯಗಳ ಸಮುದಾಯದಲ್ಲಿ ಹೆಡೆ ಮುರಿಗಟ್ಟಿದಂತೆ ಸುಮ್ಮನೆ ಕುಳಿತ ರಾಮಣ್ಣ.

ರವಿ ಕೈಯಲ್ಲಿ ಕಾಫಿ ತಿಂಡಿಯೊಡನೆ ಬಂದು ಹೇಳಿದ "ನನ್ನ ಕೆಲಸ ಮುಗಿಸಿದನಂತರ ನಿಮ್ಮನ್ನು ಬಿಡುಗಡೆ ಮಾಡಿಸುವೆ. ಇನ್ನರ್ಧ ಗಂಟೆ ತಡವಾದೀತು. ಆಗಬಹುದೇ ?"

"ಆಗಲಿ ರವಿ, ಹಾಗೇ ಮಾಡು." ಎನ್ನುತ್ತ ರಾಮಣ್ಣ ಕಾಫಿ ತಿಂಡಿಯನ್ನು ತೆಗೆದುಕೊಂಡ.

ರವಿ ತನ್ನ ಕೆಲಸಕಾರ್ಯಗಳನ್ನು ಮುಗಿಸಿ ಬಂದು, ಆಸ್ಪತ್ರೆಯಿಂದ ಬಿಡುಗಡೆ ಮಾಡಿಸಿ ಔಷಧಿ ಬಟ್ಟೆಬರೆಗಳನ್ನು ಕೈಚೀಲಕ್ಕೆ ತುಂಬಿ ಟಾಂಗಾದಲ್ಲಿಟ್ಟು ಗಾಡಿಯವನಿಗೆ ದುಡ್ಡುಕೊಟ್ಟು ಮನೆಯಲ್ಲಿಳಿಸುವಂತೆ ಹೇಳಿ ರಾಮಣ್ಣನನ್ನು ಟಾಂಗ ಹತ್ತಿಸಿದ. ಮನತುಂಬಿ ಸಂತೋಷದಿಂದ ಬೀಳ್ಕೊಟ್ಟ ರೀತಿ ಇನ್ನಷ್ಟು ಬಗೆಗೆಡಿಸಿತು.

ಅರ್ಧ ಗಂಟೆಯ ಪಯಣ ಮುಗಿಸಿ ಟಾಂಗ ಮನೆಯ ಬಳಿ ಬಂದಿತು.

ರಾಮಣ್ಣ ಅಲ್ಲಿಂದಲೇ ಅನಾಥಕನ್ಯಾ ವಿದ್ಯಾಲಯದತ್ತ ನೋಡಿದ. ಬೆಳಗಿನ ತರಗತಿಗಳು ಮುಗಿದ ಮಕ್ಕಳು ಅಂಗಳದಲ್ಲಿ ಆಟವಾಡುತ್ತಿದ್ದರು. ಗಾಡಿಯಿಂದ ಕತ್ತು ಹೊರಹಾಕಿ ಮತ್ತೊಮ್ಮೆ ಅತ್ತ ನಿಟ್ಟಿಸಿದ. ಎಷ್ಟೊಂದು ಬಡ ಮಕ್ಕಳಿಗೆ ಶಿವೆ ಆಧಾರವಾದಳು ಎಂಬುದು ಮನವರಿಕೆಯಾದಾಗ ಲಜ್ಜೆಯ ತೆರೆ ತನುಮನಗಳನ್ನಾವರಿಸಿತು...ದುಃಖದ ತೆರೆಗಿಂತ ಮಿಗಿಲಾಗಿ.

ಗಾಡಿ ಒಳ ಅಂಗಳಕ್ಕೆ ಬಂದಿತು. ಶಿವಮ್ಮನ ಮನೆಯ ಮುಂಬಾಗಿಲು ತೆರೆದಿದ್ದರೂ ಅಲ್ಲಿಗೆ ಹೋಗಲು ಸಂಕೋಚ ತಡೆ ಹಿಡಿಯಿತು. ರತ್ನ ಮುಂದಿನ ಕದವನ್ನಿಕ್ಕಿಕೊಂಡು ಒಳಗೆಡೆ ಸ್ನಾನ ಮಾಡುತ್ತಿದ್ದುದರಿಂದ ಗಾಡಿ ಬಂದ ಸದ್ದು ಕೇಳಲಿಲ್ಲವೇನೋ. ರಾಮಣ್ಣ ಬಾಗಿಲ ಬಳಿ ನಿಂತು ಕೂಗಿದ. ಅದನ್ನು ನೋಡಿದ ಗೋಪಿ ಹಿಂದಿನಿಂದ ಒಳಗಡೆ ಹೋಗಿ ಬಾಗಿಲು ತೆಗೆದು ಗಾಡಿಯಲ್ಲಿದ್ದ ಕೈಚೀಲವನ್ನು ತೆಗೆದುಕೊಂಡು ಮಲಗಲು ಹಾಸಿಗೆ ಅಣಿಮಾಡಿ,

"ರತ್ನಕ್ಕ ಸ್ನಾನ ಮಾಡುತ್ತಿದ್ದಾರೆ" ಎಂದ.

"ಮಾಡಲಿ...ಚಿಂತೆಯಿಲ್ಲ."

"ಏನಾದರೂ ಕುಡಿಯುತ್ತೀರಾ ?"

"ಈಗೇನೂ ಬೇಡ."

ಬಾಯಾರಿದ್ದರೂ ಬಾಯಿಬಿಡಲು ಸಂಕೋಚ ಮೂಡಿತು. ಏನೋ ಒಂದು ರೀತಿಯ ವಿಜಾತೀಯವಾದ ಧ್ವನಿಯಲ್ಲಿ ಮತ್ತೆ ಅಂದ "ಏನೂ ಬೇಡಪ್ಪಾ, ಮತ್ತೇಕೆ ಈ ಅವೇಳೆಯಲ್ಲಿ ತೊಂದರೆ ?"

ಗೋಪಿ ಆ ಸಂಕೋಚ ಪ್ರವೃತ್ತಿಯನ್ನು ಗಮನಿಸಿ ಹಿತ್ತಿಲ ಬಾಗಿಲಿನಿಂದ ಒಳಹೋಗಿ ಶಿವೆಯಿಂದ ಒಂದು ಬಿಸಿ ಹಾಲು ಪಡೆದುಕೊಂಡು ಬಂದು ಮುಂದೆ ಹಿಡಿದ.

"ಮತ್ತೇಕೆ ತೊಂದರೆ ತೆಗೆದುಕೊಂಡೆ?"

ಪರವಾಯಿಲ್ಲ; ತೆಗೆದುಕೊಳ್ಳಿ."

"ನೀರು ಸಾಕಾಗಿತ್ತು. ವೃಥಾ..."

"ಸ್ವಲ್ಪ ತಂದಿರುವೆ."

"ನಿನಗಿಂದು ಕಾಲೇಜಿಲ್ಲವೇ?"

"ಮಧ್ಯಾಹ್ನದ ನಂತರ ಇದೆ."

"ನಾನು ಇಂದೇ ಊರಿಗೆ ಹೋಗಬೇಕೆಂದಿರುವೆ. ಹೇಗೂ ಈಗ ಆರೋಗ್ಯ ಸುಧಾರಿಸಿದೆ. ನಾನು ಮನೆಯಲ್ಲಿ ಮಲಗಿದ್ದರೂ ಕೆಲಸ ನಡೆದೀತು. ಅಲ್ಲಿ ಏನೇನು ಅವ್ಯವಸ್ಥೆಯಾಗಿದೆಯೋ ಎಂದು ಯೋಚನೆಯಾಗಿದೆ."

"ಅಷ್ಟೇಕೆ ಅವಸರ? ಅಲ್ಲಿ ವೆಂಕಟೇಶಣ್ಣ ನೋಡಿಕೊಳ್ಳುತ್ತಾರೆ."

"ರವಿ ಹೇಳುವುದೂ ಹಾಗೆಯೇ. ಬಹಳ ದಿನಗಳಿಂದ ಈ ಕಡೆ ಇದ್ದುಬಿಟ್ಟಿದ್ದೇನೆ. ಹೋಗಲೇಬೇಕು ಎನ್ನಿಸುತ್ತಿದೆ."

"ಒಂದು ವಾರವಿದ್ದು ಸುಧಾರಿಸಿಕೊಂಡು ಹೋಗಿರಿ."

ಏನೋ ಹೇಳಲು ಪ್ರಯತ್ನಿಸಿದ, ತುಟಿಗಳು ಬಿರಿಯಲಿಲ್ಲ.

ಗೋಪಿ ಲೋಟಕ್ಕಾಗಿ ಕಾದು ಅಲ್ಲಿಯೇ ನಿಂತ.

ಹಾಲನ್ನು ಕುಡಿದು ಖಾಲಿಮಾಡಿ ಲೋಟವನ್ನು ಅವನ ಕೈಗಿಟ್ಟಾಗ ತುಟಿಗಳಲ್ಲಿ ನೀರಸ ನಗು ಹೊಮ್ಮಿತು. ಗೋಪಿ ಲೋಟವನ್ನು ತೆಗೆದುಕೊಂಡು ಹಿಂದಿನ ಬಾಗಿಲ ಮೂಲಕ ನಿರ್ಗಮಿಸಿದ. ಶುಭ್ರವಾದ ಪಾಯಿಜಾಮ-ಶರಟು ತೊಟ್ಟಿದ್ದ ಎಳೆಮೈ ಕಣ್ಮನಗಳನ್ನು ಸೆಳೆಯುವಂತೆ ನಳನಳಿಸುತಿತ್ತು. ಅಳೆತ್ತರಕ್ಕೆ ಬೆಳೆದ ದೇಹ, ಮುಖದಲ್ಲಿ ಕುಡಿಮೀಸೆ, ತಿದ್ದಿದ ಕೂದಲು, ಸೌಮ್ಯಸ್ವಭಾವ, ವಿದ್ಯೆ ಬುದ್ಧಿಗಳ ಶೋಭೆ ಆಕರ್ಷಣೀಯವಾಗಿದ್ದುವು. ದುಂಡನೆಯ ಮುಖ-ದನಿಯಿಂಪು ಅಳಿದ ತಂಗಿಯನ್ನು ಬಹಳ ಮಟ್ಟಿಗೆ ನೆನಪಿಗೆ ತಂದಿತು. ಶ್ರದ್ಧಾಪೂರ್ಣವಾಗಿ ಬೆನ್ನಟ್ಟಿದ ನೋಟ ಹಿಮ್ಮರಳಿದಾಗ ಸದ್ದಿಲ್ಲದೆ ನಿಟ್ಟುಸಿರೊಂದು ತಪ್ಪಿಸಿಕೊಂಡುದುದು ಗಮನಕ್ಕೆ ಬರಲಿಲ್ಲವೇನೋ....ಹೊತ್ತು ಕಳೆಯುವ ಸಾಧನವಾಗಿ ಪತ್ರಿಕೆಯೊಂದನ್ನು ಕೈಗೆ ತೆಗೆದುಕೊಂಡು ತಲೆಬರೆಹಗಳ ಮೇಲೆ ಕಣ್ಣಾಡಿಸಿದ. ಅನಂತರ ಪತ್ರಿಕಾವಲೋಕನದಲ್ಲಿ ಸ್ವಲ್ಪ ಹೊತ್ತು ಕಳೆಯಿತು.

ಊಟಕ್ಕೆ ಅಣಿಮಾಡಿ ರತ್ನ ಬಂದು ಕರೆದಳು. ರಾಮಣ್ಣ ಪತ್ರಿಕೆಯನ್ನು ಬದಿಗಿಟ್ಟು ಒಳ ಹೋಗಿ ಲಘು ಆಹಾರ ಮುಗಿಸಿ ಬಂದ. ಹೊತ್ತು ನೆತ್ತಿಯ ಮೇಲೆ ಉರಿಯುತ್ತಿತ್ತು. ಸೆಕೆಯ ತಾಪವಂತೂ ಹೇಳತೀರದು. ಮೇಲಾಗಿ ಕದಡಿ ಬಗ್ಗಡವಾಗಿದ್ದ ಚಿತ್ತ ಶಾಂತಿಯನ್ನು ಬಯಸುತ್ತಿತ್ತು.... ದಣಿದು ಬಳಲಿದ ಶರೀರ ವಿಶ್ರಾಂತಿಗಾಗಿ ಹಾತೊರೆಯುತ್ತಿತ್ತು....

ಹಾಗೇ ಹಾಸಿಗೆಯ ಮೇಲೆ ಅಡ್ಡಾದ.

ಪರಿತ್ಯಕ್ತ ಹೊದ್ದಿಕೆ ಕಾಲದೆಶೆಯಲ್ಲಿ ಮುದುಡಿ ಬಿದ್ದಿತು. ನಿದ್ದೆಯ ಮಂಪರದಲ್ಲಿ-ಜನ ಭರಿತವಾದ ಭವ್ಯ ಭವನ. ಅಪರಿಚಿತವಾದ ಸ್ಥಳದಲ್ಲಿ ದಾರಿ ಗಾಣದೆ ರಾಮಣ್ಣ ಅತ್ತಿಂದಿತ್ತ ಅಲೆದಲೆದು ಬಳಲಿ ಯಾರಾದರೂ ದಾರಿ ತೋರಿಯಾರೇ ಎಂದು ಎಲ್ಲರ ಮುಖದತ್ತ ಮಿಕಿಮಿಕಿ ನೋಡಿದ. ಆದರೂ ಕೇಳುವ ಧೈರ್ಯವಾಗಲಿಲ್ಲ. ಎಲ್ಲರೂ ಅವರವರ ಕೆಲಸಕಾರ್ಯಗಳಲ್ಲಿ ತೀವ್ರ ಮಗ್ನರಾಗಿದ್ದುದರಿಂದ ಯಾರೂ ಅವನನ್ನು ಗಮನಿಸಲಿಲ್ಲ. ರಾಮಣ್ಣ ಹಾಗೇ ಮುಂದುವರಿದ. ಬಲಭಾಗಕ್ಕೊಂದು ಕೊಠಡಿ. ಅಲ್ಲಿ ಸಾಲಾಗಿನ ಮಂಚಗಳಲ್ಲಿ ಹಲವಾರು ಮಂದಿ ಮಲಗಿದ್ದರು. ಕತ್ತು ಒಳಹಾಕಿ ಹಣಿಕಿದ. ಬಾಗಿಲ ಪಕ್ಕದಲ್ಲಿ ಮಲಗಿದ್ದ ವ್ಯಕ್ತಿಯೊಂದು ಎದ್ದು ಬಂದಿತು. ಎಲುಬಿನ ಹಂದರವಾಗಿದ್ದ ವ್ಯಕ್ತಿ ರಾಮಣ್ಣನನ್ನು ನಿಟ್ಟಿಸಿ ನೋಡಿ ತನ್ನೊಂದಿಗೆ ಕರೆದೊಯ್ಯಿತು. ರಾಮಣ್ಣ ಮರುಮಾತಾಡದೆ ವ್ಯಕ್ತಿಯನ್ನು ಹಿಂಬಾಲಿಸಿದ. ಭವನದ ಹಿಂಭಾಗ ಕೊಠಡಿಯೊಂದರಲ್ಲಿ ಅನೇಕಾನೇಕ ಮಂದಿ ಅಸ್ತವ್ಯಸ್ತವಾದ ಉಡುಪುಟ್ಟು ಎಲುಬಿನ ಹಂದರಗಳಲ್ಲಿನ ಜೀವಚ್ಛವಗಳಂತೆ ತೊಳಲುತಿದ್ದ ದೃಶ್ಯ ಮೈ ನಡುಗಿಸಿತು.

ವ್ಯಕ್ತಿ ಅಲ್ಲಿಂದ ಮುಂದುವರಿಯಿತು. ರಾಮಣ್ಣ ಹಿಂಬಾಲಿಸಿದ. ಮಧ್ಯೆ ದೊಡ್ಡ ಹಜಾರ. ಮೇಲಿನ ತೆರದ ಚಾವಣಿಯಿಂದ ಒಳಗೆ ಬಿಸಿಲು ಬಿದ್ದಿತ್ತು. ಅದನ್ನು ದಾಟಿ ಬಲ ಪಕ್ಕಕ್ಕೆ ತಿರುಗಿ ಇನ್ನೊಂದು ವಿಭಾಗಕ್ಕೆ ಹೋದಾಗ ನಿಕ್ಕರು ಬನಿಯನ್ನುಗಳನ್ನು ತೊಟ್ಟ ಜನರನೇಕರು ಸಲಾಕಿಯ ಬೇಲಿಯಿಂದ ಸುತ್ತುವರಿಯಲ್ಪಟ್ಟ ಬಂದೀಖಾನೆಯೊಂದರಲ್ಲಿಬಂಧನದಲ್ಲಿದ್ದರು. ಕೆದರಿ ಹರಡಿದ್ದ ಒರಟಾದ ಕೂದಲು ಅರ್ಧಮುಖವನ್ನು ಮರೆಮಾಚಿತ್ತು. ಎಲುಬಿನ ಹಂದರಗಳಲ್ಲಿ ತೊಳಲುತ್ತಾ ವಿಲಿವಿಲಿ ಒದ್ದಾಡುವ ಜೀವಿಗಳ ದಾರುಣ ಸ್ಥಿತಿಯನ್ನು ರಾಮಣ್ಣ ದಿಟ್ಟಿಸಿ ನೋಡಿದ. ಕರೆದೊಯ್ದ ವ್ಯಕ್ತಿ ಕೈಯೆತ್ತಿ ಬಂದಿಗಳಿಗೆ ಏನೋ ಅಪ್ಪಣೆ ಮಾಡಿತು. ಅಪ್ಪಣೆಯ ಪ್ರಕಾರ ಒಬ್ಬೊಬ್ಬರಾಗಿ ಎದುರಿಗೆ ಬಂದು ನಿಂತರು. ಮೊದಲ ಬಂದಿಗೆ ಪಕ್ಕೆಲುಬು ಉಬ್ಬಿಕೊಂಡಿದ್ದು ಕೆಂಪಗೆ ತೋರುತ್ತಿದ್ದ ಸ್ಥಿತಿ ಭಯಂಕರವಾಗಿತ್ತು. ಇನ್ನೊಬ್ಬ ನಿಗೆಮೈಯೆಲ್ಲಾ ವ್ರಣಗಳಿಂದ ತುಂಬಿದ್ದು ನರಳುತ್ತಿದ್ದ ರೀತಿ ವರ್ಣನಾತೀ

ತವಾಗಿತ್ತು. ಅವನನ್ನು ತಳ್ಳಿ ಮತ್ತೊಂದು ವ್ಯಕ್ತಿ ಮುಂದೆ ಬಂದು ಕಬ್ಬಿಣದ ಸಲಾಕಿಗಳನ್ನು ಹಿಡಿದುಕೊಂಡು ನೋವಾಗುವುದಿಲ್ಲವೇನೋ ಎಂಬಂತೆ ಸುಲಭವಾಗಿ ಹಣೆಯನ್ನು ಸಲಾಕಿಗಳಿಗೆ ಚಚ್ಚಿಕೊಂಡಿತು. ರಾಮಣ್ಣ ನೋಡಲಾರದೆ ಕ್ಷಣಕಾಲ ಕಣ್ಣುಮುಚ್ಚಿಕೊಂಡ. ಸುತ್ತಿಬಂದ ತಲೆಯನ್ನು ಕೈಗಳೆರಡೂ ಭದ್ರವಾಗಿ ಹಿಡಿದುಕೊಂಡವು. ಒಡನೆ ಕರೆತಂದ ವ್ಯಕ್ತಿ ರಾಮಣ್ಣನನ್ನು ಹಿಡಿದು ಅಲುಗಿಸಿ "ನೋಡು !" ಎಂದು ಆವೇಶದಿಂದ ಅಪ್ಪಣೆಮಾಡಿತು. ರಾಮಣ್ಣ ಭಯಭೀತಿಯಿಂದ ಕಣ್ತೆರೆದ. ನಾಲ್ಕನೆ ಬಂದಿಯು ಎದುರಿಗೆ ಬಂದಿತು. ತಲೆಯ ಕೂದಲು ಹೆರೆಯಲ್ಪಟ್ಟಿದ್ದು ಅಲ್ಲಲ್ಲಿ ವ್ರಣವುವಾಸಿಯಾಗಿದ್ದ ಗುರುತುಗಳಿದ್ದುವು. ರಾಮಣ್ಣನನ್ನು ನೋಡುತ್ತಾ ಹಲ್ಕಿರಿದು ಅವುಡುಗಚ್ಚಿ ನಿಂತಿತು; ನೋಡು ನೋಡುತ್ತಿದ್ದಂತೆ ಗುಳಿ ಬಿದ್ದು ನಿಸ್ತೇಜವಾದ ಕಣ್ಣುಗಳಿಗೆ ಎಲ್ಲಿಂದಲೋ ಒದಗಿ ಬಂದ ಚೇತನದ ಮಿಂಚು ಕ್ಷಣಕಾಲ ಮಿನುಗಿ ಮಾಯವಾಯಿತು. ಒಣಗಿದ ಕಾಷ್ಟಗಳನ್ನಣಕಿಸುವ ಕೈಗಳಿಂದ ಸಲಾಕಿಗಳನ್ನು ಬಲಾಢ್ಯರಂತೆ ಅಲುಗಿಸಿತು ! ಆ ಅಚ್ಚರಿಯನ್ನು ಕಣ್ಣು ಮಿಟಿಕಿಸದೆ ನೋಡಿದ ರಾಮಣ್ಣ. ವ್ಯಕ್ತಿ ಕೈಯನ್ನು ಸಲಾಕಿಗಳ ಮಧ್ಯೆ ತೂರಿಸಿ ಹಿಡಿದುಕೊಳ್ಳಲು ಪ್ರಯತ್ನಿಸುತ್ತಾ ಕಠೋರವಾಗಿ ಚೀತ್ಕರಿಸಿತು. ರಾಮಣ್ಣ ಬೆಚ್ಚಿ ಹಿಂದೆ ಸರಿದ. ಆ ವ್ಯಕ್ತಿ ಏನನ್ನೋ ಹೇಳಲು ಪ್ರಯತ್ನಪಟ್ಟಿತಾದರೂ ಹೇಳಲಾರದೆ ಪುನಃ ಚೀತ್ಕರಿಸತೊಡಗಿತು. ಮುಖದ ಮೇಲೆ ಬೆವರಿನ ಹನಿಗಳು ಮೂಡಿದುವು. ಪೊದೆಯಂತೆ ಬೆಳೆದಿದ್ದ ಗಡ್ಡ ಮೀಸೆಗಳಿಂದ ಮುಖ ಅಸ್ಪಷ್ಟವಾದರೂ ಎಲ್ಲಿಯೋ ನೋಡಿದಂತಿತ್ತು. ರಾಮಣ್ಣ ಅದುರುವ ಹೃದಯವನ್ನು ಎರಡು ಕೈಗಳಿಂದಲೂ ಅದುಮಿ ಹಿಡಿದುಕೊಂಡು ಮೂಕ ವಿಸ್ಮಿತನಾಗಿ ನೋಡುತ್ತಾ ನಿಂತು ಬಿಟ್ಟ.

ಬಂದಿಯು ಪುನಃ ಪುನಃ ಚೀತ್ಕರಿಸುತ್ತಾ ಹಣೆಯನ್ನು ಸಲಾಕಿಗಳಿಗೆ ಚಚ್ಚಿತು. ಹಣೆಯಿಂದ ನೆತ್ತರು ಬಸಿಯ ತೊಡಗಿದರೂ ಬಂದಿ ಅತ್ತ ಗಮನ ಕೊಡದೆ ಕಂಬಿಯೊಳಗೆ ಕೈ ಚಾಚಿ ರಾಮಣ್ಣನನ್ನು ಹತ್ತಿರ ಬರುವಂತೆ ಕೈ ಬೀಸಿ ಕರೆಯ ತೊಡಗಿತು. ರಾಮಣ್ಣ ಬೆಕ್ಕಸ ಬೆರಗಾಗಿ ಅತ್ತಲೇ ನೋಡ ತೊಡಗಿದ. ಹಾ ! ಅದಾರು ? ಸ್ವಾಮಿಯೆ ? ಹೌದು ! ಸ್ವಾಮಿ, ಸ್ವಾಮಿ ರಾಮಣ್ಣ ಕೂಗಿ ಕುಸಿದು ಬಿದ್ದ.

"ಅಣ್ಣಾ, ಅಣ್ಣಾ!" ಎನ್ನುತ್ತ ಆನಂದ ಮೈಮುಟ್ಟಿ ಅಲುಗಿಸಿ ನಾಲ್ಕಾರು ಬಾರಿ ಕರೆದಾಗ ಬಿಗಿಯಾಗಿ ಮುಚ್ಚಿಕೊಂಡಿದ್ದ ಕಣ್ಣುಗಳನ್ನು ತೆರೆದ ರಾಮಣ್ಣ. ಆನಂದನನ್ನೇ ನೋಡುತ್ತಾ ದೀರ್ಘ ನಿಶ್ವಾಸವನ್ನು ಬಿಟ್ಟು "ಹಾಳು ಕನಸು ನನ್ನ ಧೃತಿಗೆಡಿಸಿತು" ಎಂದ.

ಆನಂದ ಮಾತಾಡಲಿಲ್ಲ. ಎದೆಯಾಳದಿಂದ ನಿಟ್ಟುಸಿರೊಂದು ಹೊರ ಹೊಮ್ಮಿತು.

೪೦

ಮನೆಯ ಹಜಾರದಲ್ಲಿ ನಾಲ್ಕಾರು ಮಂದಿ ಹೆಂಗೆಳೆಯರು ಕುಳಿತು ಹಪ್ಪಳ ಮಾಡುವುದರಲ್ಲಿ ನಿಮಗ್ನರಾಗಿದ್ದರು. ಆಗಲೇ ಎಲ್ಲರಿಗೂ ಕಾಫಿ ತಿಂಡಿಯನ್ನು ಮಾಡಿಟ್ಟು ಕೂಟಕ್ಕೆ ಕೂಡುವುದರಲ್ಲಿದ್ದ ಲಕ್ಕಮ್ಮ ನಗುಮುಖ ದಿಂದ ಚಾಪೆಯನ್ನು ಬಿಚ್ಚಿ ಹರವಿದಳು. ಆರು ಮಂದಿ ಗೆಳತಿಯರಿಗೆ ಹಿಂದಿನ ದಿನ ಆಹ್ವಾನ ನೀಡಿದ್ದಳು. ಎಲ್ಲರೂ ಬರಲೊಪ್ಪಿದುದರಿಂದ ಮನೆಗೆಲಸವನ್ನು ಹೊತ್ತಿಗೆ ಮುಂಚೆ ಮುಗಿಸಿ ಹಪ್ಪಳದ ಹಿಟ್ಟನ್ನು ಕಲಸಿ ಹದಗೊಳಿಸಿಟ್ಟಿದ್ದಳು, ತಮಾಷೆಯ ಮಾತುಗಳನ್ನಾಡಿ ನಗುವಿನ ಹೊನಲನ್ನು ಹರಿಸುತ್ತ ಎಲ್ಲರೂ ಹಪ್ಪಳ ಲಟ್ಟಿಸತೊಡಗಿದರು. ಲಕ್ಕಮ್ಮ ಗೆಳತಿಯರಿಗೆ ತಣ್ಣನೆಯ ಪಾನೀಯ ವನ್ನಿತ್ತು ನಗುತ್ತ ಹೇಳಿದಳು "ಮೊದಲ ಸ್ವಸ್ತಿಪಾನ ಮಾಡಿರಿ." ನುಡಿ ಹೊರಬಿತ್ತೋ ಇಲ್ಲವೋ ಕಿಲಕಿಲ ನಗುವಿನಲೆಯೆದ್ದಿತು.

ಮೊದಲಿದ್ದ ಸೋಗೆಯ ಗುಡಿಸಲ ತಾವಿನಲ್ಲಿ ಹೊಸ ಹಂಚಿನ ಮನೆ ತಲೆ ಯೆತ್ತಿ ನಿಂತಿತ್ತು. ಎರಡು ಪಕ್ಕಗಳಲ್ಲೂ ಎರಡೆರಡು ಕೊಠಡಿಗಳನ್ನು ಹೊಂದಿದ್ದು ಮಧ್ಯೆ ಹಜಾರವಿತ್ತು. ಹಿಂದುಗಡೆಯ ಜಗುಲಿಗೆ ಹೊಂದಿ ಕೊಂಡಂತೆ ಅಡುಗೆಯ ಮನೆ ಬಚ್ಚಲು ಇತ್ತು. ಸುತ್ತ ಮುತ್ತ ಚೊಕ್ಕವಾದ ಅಂಗಳ. ಮುಂಭಾಗದಲ್ಲಿ ಹೂದೋಟ. ಎಡಬಲಗಳಲ್ಲಿ ಹಣ್ಣಿನ ತೋಟ. ಹಿಂಭಾಗದಲ್ಲಿ ಕೋಳಿ ಸಾಕಾಣಿಕೆಗಾಗಿ ತಂತಿ ಬಲೆಯ ಆವರಣವನ್ನು ಹೊಂದಿದ್ದ ಗೂಡು. ಪಕ್ಕದಲ್ಲಿ ರೇಷ್ಮೆಹುಳುಗಳ ಸಾಕಾಣಿಕೆಯ ಕೇಂದ್ರ. ಅದ ರಲ್ಲಿ ಕೆಲವಾರು ಜೇನು ಗೂಡುಗಳು. ಅಂಗಳದಿಂದಾಚೆ ಮನೆಯ ಎಡಭಾಗ ದಲ್ಲಿ ನಳನಳಿಸುವ ಬಾಳೆಯ ತೋಟ. ಬಲಭಾಗದಲ್ಲಿ ಹುಲುಸಾಗಿ ಬೆಳೆದ ತೆಂಗಿನ ತೋಟ. ಪಕ್ಕದಲ್ಲಿ ಹಸರು ಸೂಸುವ ಕಬ್ಬಿನ ಗದ್ದೆ. ಹತ್ತು ಮಾರು ದೂರ ದಲ್ಲಿ ಗೋಶಾಲೆ. ಅಂಗದಲ್ಲಿ ಕೊರಳ ಗೆಜ್ಜೆಗಳ ಟಿಂಟಿಣಿ ನಾದ ಗೈವ ಪುಟ್ಟ ಪುಟ್ಟ ಕರುಗಳು. ಒಟ್ಟಿನಲ್ಲಿ ಕಣ್ಮನಗಳನ್ನು ತಣಿಸುವ ಹಳ್ಳಿಯ ಸುಂದರ ಚಿತ್ರ.

"ನಾಳೆ ಚಂದಣ್ಣನ ಮನೆಗೆ ಹೋಗುವಾಗ ನಾನು ಹೀಗಿಂದೇ ಬರುವೆ.

ಇಬ್ಬರೂ ಕೂಡಿ ಹೋಗೋಣವೆ ?" ಕೆಂಪಿ ಕೇಳಿದಳು.

"ಹಾಗೇ ಮಾಡು."

"ಚಂದಣ್ಣನ ಮನೆಯಲ್ಲಿ ಹಪ್ಪಳ ಲಟ್ಟಿಸುವುದು ಎಷ್ಟು ದಿನವಾದೀತು ?"

"ನಾಲ್ಕು ದಿನ ಎಂದಳು ಕೆಂಪಮ್ಮ. ಅನಂತರ ಶಾಂತಮ್ಮನ ಮನೆಯಲ್ಲಿ ಎರಡು ದಿನ."

"ಈ ಸಲ ನಮ್ಮಲ್ಲಿ ಮೂರು ದಿನ. ಎರಡು ದಿನ ಹಪ್ಪಳ; ಒಂದಿನ ಸಂಡಿಗೆ. ಎಲ್ಲರದೂ ಆದನಂತರ ನನ್ನದು." ಎಂದಳು ಚಂದ್ರಮ್ಮ.

"ಲಕ್ಕಮ್ಮಾ, ನಿನ್ನದು ಅಚ್ಚುಕಟ್ಟಿನ ಸಂಸಾರ. ಮೂರು ಮಂದಿಗೆ ಇಷ್ಟು ಹಪ್ಪಳ ಹೆಚ್ಚಾದೀತು."

"ಹೆಸರಿಗೆ ಮೂರು ಮಂದಿ. ಮುದ್ದು ಇರುವುದು ಮೈಸೂರಿನಲ್ಲಿ."

"ಅಲ್ಲಿದ್ದರೂ ಅವನು ಹಪ್ಪಳ ಬಿಟ್ಟಾನೆಯೇ ? ಹಪ್ಪಳ ಉಪ್ಪಿನ ಕಾಯಿ ಇದ್ದರೆ ಅಡುಗೆ ಮಾಡುವ ಗೋಜೇ ಇಲ್ಲ ಎನ್ನುತ್ತಾನೆ ಮುದ್ದ." ಎಂದ ಲಕ್ಕಮ್ಮ ಲಟ್ಟಿಸಿದ ಹಪ್ಪಳಗಳನ್ನು ಬಿಸಿಲಿಗೆ ಹಾಕಿ ಪುನಃ ಹೇಳಿದಳು "ಮುದ್ದನಿಗೆ ಹಪ್ಪಳ ಎಂದರೆ ಬಲು ಇಷ್ಟ."

ಮುದ್ದನ ಓದು ಮುಗಿದ ಮೇಲೆ ನೀನು ಮೈಸೂರು ಸೇರಿ ಬಿಡುತ್ತೀಯೆಂದು ತೋರುತ್ತದೆ. ಇಷ್ಟೆಲ್ಲಾ ಕಷ್ಟಪಟ್ಟು ಮನೆ ಮಠ ಮಾಡಿದುದು ವ್ಯರ್ಥ.

"ತಾಯಮ್ಮಾ ನಿನಗೆ ಗೊತ್ತಿಲ್ಲವೇ ? ಮುದ್ದ ಪರೀಕ್ಷೆ ಮುಗಿದನಂತರ ಪರದೇಶಕ್ಕೆ ಹೋಗುತ್ತಾನಂತೆ. ಬರುವುದು ಮೂರು ನಾಲ್ಕು ವರ್ಷವಾದರೂ ಆದಿತು."

"ನಿಜವೇ ?"

"ಉತ್ತಮ ಶ್ರೇಣಿಯ ವಿದ್ಯಾರ್ಥಿಗೆ ಹೊರದೇಶಗಳ ಸಹಾಯ ಸುಲಭವಾಗಿ ದೊರೆಯುತ್ತದೆ. ಮಕ್ಕಳಿದ್ದರೆ ಹೀಗಿರಬೇಕು. ವಿದ್ಯೆ ಎಂದರೆ ನೀರು ಕುಡಿದ ಹಾಗೆ ಮುಗಿಸಿ ಬಿಟ್ಟ."

"ಲಕ್ಕಮ್ಮ ಪುಣ್ಯವಂತೆ."

"ಅಯ್ಯೋ ನನ್ನ ಪುಣ್ಯದ ಕಷ್ಟ ದೇವರಿಗೇ ಗೊತ್ತು ಅವನನ್ನು

ಮೈಸೂರಿಗೆ ಕಳುಹಿಸುವುದೆಂದರೆ ಜೀವ ತುಡಿದುಕೊಳ್ಳುತ್ತೆ. ಇನ್ನು ಪರ ದೇಶಕ್ಕೆ ಕಳುಹಿಸುವುದೆಂದರೆ ಹೇಗೆ" ? ಮಾತು ಮುಗಿಯುವುದರೊಳಗಾಗಿ ಕಣ್ಣುಗಳು ಕೆಂಪು ಕೆಂಪಾದುವು. ಮುಖ ಖಿನ್ನವಾಯಿತು. ಭಾರವಾದ ದನಿಯಲ್ಲಿ ನುಡಿದಳು ಲಕ್ಕಮ್ಮ "ಯಾರಿಗೂ ಒಂದೇ ಮಗುವಿರಬಾರದು. ಕೊನೆಯ ಪಕ್ಷ ಎರಡು ಮೂರು ಮಕ್ಕಳಾದರೂ ಇದ್ದರೆ ಕ್ಷೇಮ."

"ಈಗಲೇ ಮದುವೆ ಮಾಡಿರಿ. ಎಲ್ಲಿದ್ದರೂ ಹೆಂಡತಿಗಾಗಿ ಓಡೋಡಿ ಬರುತ್ತಾನೆ. ಅಲ್ಲದೆ ಅಷ್ಟರೊಳಗಾಗಿ ಒಂದು ಮಗುವಾದರೂ ಆದೀತು ಲಕ್ಕಮ್ಮಾ,"

"ಹಾಗಂದ್ರೆ ಇವನು ಒಪ್ಪಬೇಕಲ್ಲ ?"

"ಚಂದಣ್ಣನಿಂದ ಹೇಳಿಸು," ಸಲಹೆ ಕೊಟ್ಟಳು ರಾಧ.

"ಅವನ ಮಗಳನ್ನೇ ಕೊಡುವಾಗ ಹೇಗೆ ಒತ್ತಾಯಮಾಡುತ್ತಾನೆ ?"

"ಅದಕ್ಕೇನು ರಂಗಮ್ಮಾ ? ಚಂದಣ್ಣ ಒಂದು ಮಾತು ಹೇಳಿದರೆ ಇಂದೇ ಆದೀತು. ಅವನು ಹೇಳುವುದಿಲ್ಲ ಇವನು ಆಗುವುದಿಲ್ಲ."

"ಬೇರೆ ಹೆಣ್ಣಾಗಿದ್ದಿದ್ದರೆ ಚಂದಣ್ಣನಿಂದ ಸುಖವಾಗಿ ಹೇಳಿಸಬಹು ದಾಗಿತ್ತು, ಈಗ ಚಂದಣ್ಣನ ಮಗಳೇ ಆಗಿರುವುದರಿಂದ ಕಷ್ಟಕ್ಕೆ ಬಂದಿದೆ" ಎಂದಳು ತಾಯಮ್ಮ,

"ಎಲ್ಲಾ ವಿಧದಲ್ಲೂ ತುಂಗಾ ಮುದ್ದನಿಗೆ ಅನುರೂಪಳಾದ ಹುಡುಗಿ,"

"ಚಂದಣ್ಣ ಮುದ್ದನನ್ನು ಓದಿಸಿದುದು ಸಾರ್ಥಕವಾಯಿತು. ಚಂದ್ರಮ್ಮಾ"

"ಚಂದಣ್ಣ ಆ ದೃಷ್ಟಿಯಿಂದ ಓದಿಸಲಿಲ್ಲ. ಅವನ ಚಟುವಟಿಕೆ ನೋಡಿ ಓದಿಸಿದ, ಈಗ ಹುಡುಗ ಹುಡುಗಿ ಮೆಚ್ಚಿಕೊಂಡಿದ್ದಾರೆ ಅಷ್ಟೆ. ಲಕ್ಕಮ್ಮ ಪುಣ್ಯವಂತೆ. ಒಳ್ಳೆಯ ಸೊಸೆಯನ್ನೂ ಪಡೆದುಕೊಂಡಳು. ಮೊದಲಾಗಿ ಚಂದಣ್ಣನ ಸಂಬಂಧವನ್ನೂ ಬೆಳೆಸುತಿದ್ದಾಳೆ."

"ಚಂದಣ್ಣನ ಸಂಬಂಧ ಪುಣ್ಯವಿಲ್ಲದೆ ಬಂದೀತೆ ರಾಧಾ ?"

"ನಿಜ ಕಣಮ್ಮಾ, ಹೂವಿಂದ ನಾರು ಸ್ವರ್ಗಕ್ಕೆ...ಭಗವಂತನ ಆಶೀರ್ವಾದ." ಮುಖ ಖಿನ್ನವಾಗಿದ್ದರೂ ಸಮಾಧಾನದ ಉಸಿರು ಬಿಟ್ಟಳು ಲಕ್ಕಮ್ಮ.

"ಒಳ್ಳೆಯ ಹುಡುಗ. ದೇವರು ಚೆನ್ನಾಗಿಟ್ಟಿರಲಿ." ಕೆಂಪಮ್ಮ ಹೃತ್ಪೂರ್ವಕವಾಗಿ ಹರಸಿದಳು.

"ನಿಜ; ನಿಜ, ಒಳ್ಳೆಯ ಮಕ್ಕಳಿಗೆ ದೇವರು ಆಯುಸ್ಸು ನೀಡಬೇಕು."

"ಚಂದಣ್ಣ ಬರುವತನಕ ಈ ಊರು ಹೇಗಿತ್ತು ? ಜನ ಹೇಗಿದ್ದರು ? ಈಗ ನೋಡಿ. ಮನೆ ಮನೆಗೂ ಅಚ್ಚುಕಟ್ಟು ಬಂತು. ಅವನು ತಿದ್ದಿದಂತೆ ತಿದ್ದುವುದು ಇನ್ಯಾರಿಂದ ಸಾಧ್ಯ ? ಹೇಗೆ ಊರೊಳಗೆ ಒಗ್ಗಟ್ಟು ಸಾಧಿಸಿದ ? ಊರು ಎಷ್ಟು ತ್ವರಿತವಾಗಿ ಎಚ್ಚೆತ್ತಿತು ? ದೇವರು ಅವನಿಗೆ ನೂರು ವರ್ಷ ಆಯುಸ್ಸು ನೀಡಲಿ. ಅಂತಹವರು ಈ ಕಾಲಕ್ಕೆಬೇಕು."

"ಮೊದಮೊದಲು ಚಂದಣ್ಣ ಬತ್ತ ಕುಟ್ಟುವುದು ಅಕ್ಕಿ ಕೇರುವುದು ಹಪ್ಪಳ ಮಾಡುವುದು ಇತ್ಯಾದಿ ಕೆಲಸಗಳಿಗೆ ಹತ್ತು ಮಂದಿ ಕೂಡಿ ಮಾಡಿರಿ. ಒಬ್ಬರಿಗೊಬ್ಬರು ಸಹಾಯ ಮಾಡಿರಿ. ಪರಸ್ಪರ ಸಹಕಾರ ನೀಡಿರಿ. ಎಂದೆನ್ನುತ್ತಿದ್ದಾಗ ನಮಗೆ ಹಾಸ್ಯಾಸ್ಪದವಾಗಿ ತೋರುತ್ತಿತ್ತು. ಈಗ ಅದರ ಪ್ರಯೋಜನವೇನೆಂಬುದನ್ನು ತಿಳಿದುಕೊಳ್ಳುತ್ತಿದ್ದೇವೆ."

"ಅವನು ಅಚ್ಚುಕಟ್ಟು ಹೇಳಬಂದಾಗಲೂ ಇವನಿಗೇಕೆ ಪಾರುಪತ್ಯ ? ಎನ್ನಿಸುತ್ತಿತ್ತು. ಚಂದಣ್ಣ ಕಾವೇರಿಯೊಂದಿಗೆ ಮನೆಮನೆಗೆ ಪ್ರಚಾರಕ್ಕೆ ಹೊರಟಾಗ ಅವರ ಬಗ್ಗೆ ಕಟುವಾಗಿ ವ್ಯಂಗ್ಯವಾಗಿ ಎಲ್ಲರೂ ಮಾತಾಡಿದವರೇ !"

"ಆದರೂ ನಮ್ಮ ಜನ ಬೇಗನೆ ಸುಧಾರಿಸಿಕೊಂಡರು. ಈಗ ಎಲ್ಲರೂ ಚಂದಣ್ಣನ ಹೆಸರು ಹೇಳಿ ದೀಪ ಹಚ್ಚುತ್ತಾರೆ."

"ಆಗ ಚಂದಣ್ಣ ನಮ್ಮನ್ನು ನೋಡಿ ಎಷ್ಟು ನಕ್ಕಿರಲಿಕ್ಕಿಲ್ಲ ?" ಕಿಲಕಿಲನೆ ನಕ್ಕಳು ರಾಧ.

"ದಿನವೆಲ್ಲಾ ಹೆಣಗಿ ಒಬ್ಬರೇ ಹಪ್ಪಳ ಮಾಡುವುದೆಂದರೆ ಸಾಕಾಗಿ ಬಿಡುತ್ತಿತ್ತು. ಆಗ ವಾರಗಟ್ಟಲೆ ಮಾಡಿದರೂ ಮುಗಿಯುತ್ತಿರಲಿಲ್ಲ. ಈಗ ನಾಲ್ಕು ಮಂದಿ ಕೂಡಿದರೆ ಒಂದು ಗಂಟೆಯ ಒಳಗಾಗಿ ಮುಗಿದು ಹೋಗುತ್ತೆ."

"ಅಷ್ಟೇ ಅಲ್ಲ. ಈ ಕೂಟಗಳಿಂದ ಮನಸ್ಸಿಗಷ್ಟು ನೆಮ್ಮದಿಯೂ ಬರುತ್ತೆ. ಪರಸ್ಪರ ವಿಚಾರ ವಿನಿಮಯವೂ ಆಗಿ ಜೀವ ಪುಟಿಪುಟಿಯುತ್ತೆ

ಹೀಗೆ ದಿನಕ್ಕೆರಡು ಗಂಟೆ ನಕ್ಕು ನಲಿದರೆ ನಮ್ಮ ಆಯುರ್ವೃದ್ಧಿಯಂತೂ ಖಂಡಿತ ಆಗುತ್ತೆ."

"ನಿಜವಾಗಿಯೂ ನಾವು ಆಗಾಗ ಹೀಗೆ ಕೂಡಿಯೇ ತೀರಬೇಕು. ಇದರಿಂದ ಮನದೋಟ ರೈಲೋಟಕ್ಕಿಂತ ಮಿಗಿಲಾಗಿ ನಿಮಗಿಂತ ನಾವು ಹೆಚ್ಚಾಗಬೇಕೆಂಬ ಪೈಪೋಟಿಯಿಂದ ಆಸೆ ಪ್ರತ್ಯಾಸೆಗಳು ಮೂಡಿ ನಾವು ಬೇಗನೆ ಜಾಗ್ರತರಾಗುತ್ತೇವೆ."

"ಅದೇನೋ ನಿಜ ಚಂದ್ರಮ್ಮಾ. ನಾವು ಚಿಕ್ಕವರಂತೆ ಶಾಲೆ ಸಮಾಜ ಗಳಿಗೆ ಹೋಗುವವರಲ್ಲ. ಮನೆಯಲ್ಲಿ ಒಂದೆರಡು ಪುಸ್ತಕ ಪತ್ರಿಕೆ ಓದಿ ಕೊಂಡರೆ ಹೆಚ್ಚು. ನಮ್ಮಂತಹವರಿಗೆ ಈ ಕೂಟಗಳಿಂದ ಪ್ರಯೋಜನವುಂಟು."

"ಹೌದಮ್ಮಾ. ಸುಮ್ಮನೆ ಮನೆಯಲ್ಲಿರುವುದೆಂದರೆ ಹಾಳು ಚಿಂತೆಗಳು ಹಿರಿದು ತಿನ್ನುತ್ತವೆ."

"ಕೆಂಪಮ್ಮನ ಮನೆಯದಾದ ಮೇಲೆ ನಮ್ಮ ಮನೆಯಲ್ಲಿ ಎರಡು ದಿನ ಹಪ್ಪಳ ಮಾಡುವುದುಂಟು." ಎಂದ ತಾಯಮ್ಮ ಗಳಿಗೆ ತಡೆದು ಪುನಃ ಹೇಳಿದಳು "ಒಂದು ವಾರ ತಡೆದು ಮಾಡಿಕೊಂಡರೂ ಪರವಾಗಿಲ್ಲ."

"ನಮ್ಮ ಮನೆಯಲ್ಲಿ ನಾಲ್ಕು ದಿನಗಳಾದೀತು." ರಂಗಮ್ಮ ಹುಬ್ಬು ಹಾರಿಸಿ ನುಡಿದಳು.

"ರಂಗಮ್ಮ ತಿಂಡಿ ತಿನಿಸು ಮಾಡುವುದರಲ್ಲಿ ಜಾಣೆ. ಒಳ್ಳೆ ತಿಂಡಿ ನೀಡಿ ಹತ್ತು ದಿನ ಕೆಲಸ ಕೊಟ್ಟರೂ ಮಾಡಬಹುದು."

"ಓ, ನೀನೇನು ಕಡಿಮೆ ಲಕ್ಕಮ್ಮಾ?"

"ಎಷ್ಟೆಂದರೂ ನಿನ್ನಷ್ಟು ಜಾಣ್ಮೆ ಬರುವುದಿಲ್ಲ."

"ನೀನು ಮಾಡಿಟ್ಟಿರುವ ತಿಂಡಿಯನ್ನಿಷ್ಟು ನೀಡು. ಅನಂತರ ನೀನು ಜಾಣೆಯೋ ಅಲ್ಲವೋ ಹೇಳಬಹುದು."

"ನಾನಾಗಲೇ ನೋಡಿ ಬಂದೆ. ಕೇಸರಿಬಾತ್ ಚಕ್ಕುಲಿ ರುಚಿರುಚಿ ಯಾಗಿದೆ!"

"ಓ, ನೀನಾಗಲೇ ಮುಗಿಸಿ ಬಿಟ್ಟೆಯೇನು?"

"ಮುಗಿಸಬಹುದಾಗಿತ್ತು. ಆದರೆ ಎದುರಿಗೇ ಇದ್ದಳು ಲಕ್ಕಮ್ಮ!" ಒಡನೆ ನಗುವಿನ ಚಿಲುಮೆ ಚಿಮ್ಮಿ ಹರಿಯಿತು. ಹಪ್ಪಳಗಳನ್ನು ಒಣ

ಹಾಕಲು ತೆಗೆದುಕೊಳ್ಳುತ್ತಾ ರಾಧ ಪುನಃ ಹೇಳಿದಳು "ಹೊರದೇಶಗಳಲ್ಲಿನ ಯಂತ್ರಗಳು ನಾವಿಷ್ಟು ಮಂದಿ ಮಾಡುವ ಹಪ್ಪಳಗಳನ್ನು ಒಂದು ಕ್ಷಣದಲ್ಲಿ ಮಾಡಿ ಮುಗಿಸುತ್ತವೆ. ನಾವಿನ್ನೂ ಹಿಟ್ಟು ಬೀಸುವುದರಲ್ಲಿ ಹಪ್ಪಳ ಲಟ್ಟಿಸು ವುದರಲ್ಲಿ ಆನಂದದಿಂದ ಕಾಲ ಕಳೆಯುತ್ತೇವೆ. ನಮಗಿನ್ನೂ ಕಾಲದ ಬೆಲೆ ತಿಳಿಯಲಿಲ್ಲ.

"ತಿಳಿದರೂ ಮಾಡುವುದೇನು ? ಹೊರದೇಶದ ತೀವ್ರಪ್ರಗತಿ ನಮ್ಮಲ್ಲಿ ಬರಬೇಕಾದರೆ ಶತಮಾನಗಳು ಉರುಳಬೇಕು."

"ಹಾಗೆಂದು ಕೈಕಟ್ಟಿ ಕುಳಿತುಕೊಂಡರೆ ನೂರೆಂಟು ಶತಮಾನಗಳು ಉರುಳಿದರೂ ನಮ್ಮ ಜನ ಹೀಗೇ ಉಳಿದಾರು."

"ಈ ಸಲ ಚಂದ್ರಲೋಕಕ್ಕೆ ನಿನ್ನನ್ನೇ ಕಳುಹಿಸೋಣ!"

"ಓ ಅವಳು ಧಾರಾಳವಾಗಿ ಒಪ್ಪಿಕೊಂಡಾಳು.!

"ಎಷ್ಟಾದರೂ ಜೀವಭಯ ಬಿಟ್ಟೀತೆ ?"

"ಈ ಬದುಕಿಗಿಂತ ಆ ಸಾವು ಲೇಸು."

"ಭಲೆ! ರಾಧಾ "!

೪೧

ಅದೊಂದು ಅಪೂರ್ವ ಸಮಯ

ಹೊತ್ತು ಏರಿದ್ದರೂ ಪ್ರಶಾಂತವಾಗಿತ್ತು.

ಪಾರ್ವತಿ ಮತ್ತು ಸುಂದರಿಯೊಡನೆ ಲಿಂಗಣ್ಣ ಮನೆಗೆ ಬಂದಾಗ ಶಿವೆ ಮನೆಯಲ್ಲಿರಲಿಲ್ಲ. ಅನಿರೀಕ್ಷಿತವಾಗಿ ಹೊರಟ್ಟಿದ ಅವನು ಬೀಗದ ಕೈಯನ್ನು ಕೇಳಲೆಂದು ಆನಂದನ ಮನೆಗೆ ಹೋದಾಗ ರಾಮಣ್ಣನಿದ್ದುದನ್ನು ನೋಡಿ ಕ್ಷೇಮವನ್ನು ವಿಚಾರಿಸಿದ. ಲಿಂಗಣ್ಣನನ್ನು ಕಂಡೊಡನೆಯೆ ದಿಗ್ಗನೆದ್ದು ಅತ್ಯಾದರದಿಂದ ಮಾತಾಡಿದ ರಾಮಣ್ಣನ ಹೊಸರೀತಿಯನ್ನು ಕಂಡು ಲಿಂಗಣ್ಣನಿಗೆ ತುಸು ಅಚ್ಚರಿಯಾದರೂ ತೋರಗೊಡದೆ "ಈಗ ಹೇಗಿದ್ದೀರಿ ?" ಎಂದು ಕೇಳಿದ. ಮುಖದಲ್ಲಿ ಮಂದಹಾಸ ಮೂಡಿತು.

"ಈಗ ವಾಸಿ; ಸದ್ಯ ಊರಿಗೆ ಹೋಗುವೆ. ಎರಡು ತಿಂಗಳು ಆಸ್ಪತ್ರೆಯಲ್ಲಿದ್ದು ಮನೆಗೆ ಬಂದರೆ ಅಂದೇ ದುರಾದೃಷ್ಟವಶಾತ್ ಕೆಟ್ಟ ಕನಸು ಕಂಡು ಹೆದರಿ ಕೂಗಿಕೊಂಡೆ. ಕೂಡಲೆ ಜ್ವರ ಶುರುವಾಯಿತು. ಅದರಿಂದ ಎರಡು ವಾರ ತೊಂದರೆ ಪಟ್ಟೆ. ಈಗ ಬಿಟ್ಟಿದೆಯಾದರೂ ಏನಾದರೂ ಸಣ್ಣಪುಟ್ಟ ಕಿರುಕುಳ ಇದ್ದೇ ಇರುತ್ತದೆ. ಪೂರ್ಣ ಗುಣವಾಗುವವರೆಗೆ ಹೋಗಕೂಡದು ಎನ್ನುತ್ತಾನೆ ರವಿ."

"ಆರೋಗ್ಯ ಭಾಗ್ಯವೇ ಭಾಗ್ಯ. ಚೆನ್ನಾಗಿ ವಾಸಿ ಮಾಡಿಕೊಂಡು ಹೋಗಿರಿ. ಅವಸರಿಸಿದರೆ ನೋವು ಮತ್ತೆ ಮರುಕಳಿಸೀತು.

"ಈಗ ಗುಣವಾಗಿದೆ. ನಾಡಿದ್ದು ಊರಿಗೆ ಹೋಗುವುದೆಂದು ನಿಶ್ಚಯಿಸಿದ್ದೇನೆ."

"ಆದರೂ ಸಾಲದು; ಇನ್ನೂ ಸ್ವಲ್ಪ ಕಾಲ ಸುಧಾರಿಸಿಕೊಂಡು ಹೋಗಿರಿ. ಅಷ್ಟೊಂದು ಅವಸರವೇಕೆ ?"

"ಮನೆಯಲ್ಲಿ ವಿಶ್ರಾಂತಿ ತೆಗೆದುಕೊಳ್ಳುವೆ. ಅದೇನು ಹೆಚ್ಚಲ್ಲ —— ನೀವು ಬರುವ ವಿಚಾರ ಬಹುಶಃ ಶಿವಮ್ಮನಿಗೆ ಗೊತ್ತಿರಲಾರದು. ರತ್ನ

ಅಡುಗೆ ಮಾಡಿದ್ದಾಳೆ. ಇಲ್ಲಿಯೆ ಊಟ ಮಾಡಿರಿ. ಈಗಷ್ಟೆ ಬಂದಿದ್ದೀರಿ. ಅಡುಗೆ ಮಾಡಿಕೊಳ್ಳುವ ತೊಂದರೆ ತೆಗೆದುಕೊಳ್ಳಬೇಡಿರಿ."

"ಅದೆಷ್ಟೊತ್ತಾದೀತು ? ನಾವೇ ಮಾಡಿಕೊಳ್ಳುತ್ತೇವೆ."

"ಮತ್ತೇಕೆ ತೊಂದರೆ ?"

ಲಿಂಗಣ್ಣ ವಿನಯಪೂರ್ವಕವಾಗಿ ಒಲ್ಲೆನೆಂದು ಹೇಳಿ ರತ್ನಳಿಂದ ಬೀಗದ ಕೈಯನ್ನು ತೆಗೆದುಕೊಂಡು ಅಲ್ಲಿಂದ ಹೊರಬಿದ್ದ. ರತ್ನಳು ಹಿಂದೆಯೆ ಬಂದು ಪಾರ್ವತಮ್ಮನನ್ನೂ ಸುಂದರಿಯನ್ನೂ ಮಾತಾಡಿಸಿಕೊಂಡು ಊಟಕ್ಕೆ ಅಲ್ಲಿ ಗೇನೇ ಬರಲು ಆಹ್ವಾನಿಸಿದಳು.

"ನಿನಗೇಕೆ ತೊಂದರೆ ? ಸಾರು ಪಲ್ಯ ಇದೆ ಅನ್ನ ಮಾಡಿಕೊಂಡರಾ ಯಿತು. ತುಂಬು ಗರ್ಭಿಣಿಯಾದ ನೀನು ಅವೇಳೆಯಲ್ಲಿ ಅಡುಗೆ ಮಾಡು ವುದೆ ?"

"ಕೆಲವೇ ನಿಮಿಷಗಳಲ್ಲಿ ಮಾಡುವೆ. ಪಯಣದಿಂದ ದಣಿದಿದ್ದೀರಿ ಸ್ವಲ್ಪ ವಿಶ್ರಮಿಸಿಕೊಳ್ಳಿರಿ."

"ಪರವಾಯಿಲ್ಲ." ಎನ್ನುತ್ತ ಪಾರ್ವತಿಯು ರತ್ನಳಿಗೆ ಕುಳಿತುಕೊಳ್ಳ ಹೇಳಿದಳು. ಮೂಲೆಯಲ್ಲಿದ್ದ ಚಾಪೆಯನ್ನು ಸುಂದರಿಯು ಬಿಚ್ಚಿ ಹರವಿದಳು

"ನೀವೇ ನನ್ನ ಉಪಚಾರ ಮಾಡುತ್ತಿದ್ದೀರಿ. ನಾನೀಗ ಅತಿಥಿಯಾ ಗಿದ್ದೇನೆ." ಎಂದವಳೇ ಮನೆಗೆ ಹೋಗಿ ಸ್ವಲ್ಪ ಹುಳಿಯನ್ನು ತಂದುಕೊ ಟ್ಟಳು. ಪಾರ್ವತಮ್ಮ ಅನ್ನಕ್ಕೆ ಎಸರಿಟ್ಟು ಅಕ್ಕಿ ಹಾಕಿದಳು. ಹೊಸದಾಗಿ ಕಟ್ಟಿ ಸಿದ್ದ ಮುಂಭಾಗದ ಕೊಠಡಿಗಳನ್ನು ನೋಡಿ ಈಗ ಸಾಕಷ್ಟು ಸ್ಥಳವಾಯಿತು. ಇನ್ನಿಷ್ಟು ಹಾಯಾಗಿ ಉಸಿರಾಡಬಹುದು ಎಂದುಕೊಂಡರು.

ಶಿವೆ ಮತ್ತು ರವಿಯು ಹೊರತು ಮತ್ತೆಲ್ಲರೂ ಉಂಡು ಕಾಲೇಜಿಗೆ ಹೋಗಿದ್ದರು. ಅಂದು ಬೆಳಗಿನ ಕೆಲಸವಾದುದರಿಂದ ಶಿವೆ ರವಿಯೊಂದಿಗೆ ಹೋಗಿದ್ದಳು.

ಗಂಟೆ ಹನ್ನೆರಡಾಗಿತ್ತು. ನೆತ್ತಿಯಮೇಲೆ ಸೂರ್ಯ ಜ್ವಲಿಸುತ್ತಿದ್ದ. ರವಿ ಮತ್ತು ಶಿವೆಯರಿಗಾಗಿ ಎದುರು ನೋಡುತ್ತಿದ್ದ ಲಿಂಗಣ್ಣನಿಗೆ ಶಾಲೆಯ ಕಡೆಯಾದರೂ ಹೋಗಿ ಬರೋಣವೆನ್ನಿಸಿತು. ಹೊರ ಹೊರಟೊಡನೆಯೆ ರಾಮಣ್ಣ ಹೊರ ಬಂದು ಕೇಳಿದ "ಯಾವ ಕಡೆ ಹೊರಟಿರಿ ?"

"ಶಾಲೆಯು ಕಡೆಯಾದರೂ ಹೋಗಿ ಬರುವೆ"

"ಹಾಗಿದ್ದರೆ ನಡೆಯಿರಿ. ನಾನೂ ಬರುವೆ."

ಇಬ್ಬರೂ ಶಾಲೆಯ ಕಡೆ ಹೊರಟರು. ಪಾಠಪ್ರವಚನಗಳನ್ನು ಮುಗಿಸಿದ ಮಕ್ಕಳು ಊಟಕ್ಕೆ ಕುಳಿತಿದ್ದರು. ಉಪಾಧ್ಯಾಯಿನಿಯು ಮೇಲ್ವಿಚಾರಣೆ ಮಾಡುತ್ತಿದ್ದಳು. ಇಬ್ಬರೂ ಶಾಲೆಯ ಒಳಗಡೆ ಒಂದು ಸುತ್ತು ಹಾಕಿದರು. ನರ್ಸರಿ ವಿಭಾಗದಲ್ಲಿ ಮಕ್ಕಳಾಟಕ್ಕೆ ಹೊಂದಿಸಲಾಗಿದ್ದ ಆಟದ ಸಾಮಾನುಗಳನ್ನೂ ಮೊದಲ ತರಗತಿಗಾಗಿ ಒದಗಿಸಲಾಗಿದ್ದ ಸ್ಲೇಟು ಪುಸ್ತಕಗಳನ್ನೂ ನೋಡಿಕೊಂಡು ಒಳಬಂದರು. ಉಪಾಧ್ಯಾಯಿನಿಯು ಕೈಗಾರಿಕೆಯ ವಿಭಾಗಕ್ಕೆ ಕರೆದೊಯ್ದು ಒಂದೊಂದಾಗಿ ತೋರಿದಳು. ಕೊಠಡಿಗಳು ವಿಶಾಲವಾಗಿದ್ದುವು. ಬೆತ್ತದ ನಾರಿನ ಕೈಗಾರಿಕೆ ಮತ್ತು ಕೈಮಗ್ಗ ಆಗ ತಾನೇ ಆರಂಭವಾಗಿತ್ತು.

"ವಿದ್ಯೆಗಿಂತಲೂ ಮಕ್ಕಳ ಆಸಕ್ತಿ ಕೈಗಾರಿಕೆಯ ಕಡೆಗಿದೆ." ಎಂದಳು ಉಪಾಧ್ಯಾಯಿನಿ.

"ಇನ್ನೂ ಎಲ್ಲ ಸಲಕರಣೆಗಳನ್ನು ಹೊಂದಿಸಿಕೊಳ್ಳಲಿಲ್ಲವೇನು ?" ಲಿಂಗಣ್ಣ ಕೇಳಿದ.

"ಮಕ್ಕಳನ್ನು ನೋಡಿದರೆ ಇನ್ನೂ ಬಹಳ ಹಿಂದುಳಿದಿದ್ದಾರೆಂದು ತೋರುತ್ತೆ." ಎಂದ ರಾಮಣ್ಣ.

"ಎಷ್ಟಾದರೂ ಬೀದಿಯ ಮಕ್ಕಳು."

"ಅಂದಿಂದಿಗೂ ಎಷ್ಟೋ ಸುಧಾರಿಸಿದ್ದಾರೆಂದೇ ಹೇಳಬೇಕು. ಹೇಗೆ ಹೇಳಿದರೆ ಹಾಗೆ ಕೇಳುವಷ್ಟರ ಮಟ್ಟಿಗೆ ಸುಧಾರಿಸಿದ್ದಾರೆ." ಉಪಾಧ್ಯಾಯಿನಿ ಸಮಾಧಾನ ವ್ಯಕ್ತಪಡಿಸಿದಳು.

"ಅಲ್ಪ ಕಾಲದಲ್ಲಿ ಇಷ್ಟು ಸುಧಾರಿಸಿಕೊಂಡರೆ ಸಾಕಷ್ಟಾಯಿತು." ಎಂದ ಲಿಂಗಣ್ಣ ಪುನಃ ಹೇಳಿದ "ರಾಮಣ್ಣನವರೇ, ಒಂದು ಕಾಲದಲ್ಲಿ ಹೆಣ್ಣು ಮಕ್ಕಳಿಗೆ ವಿದ್ಯೆ ಬೇಕಿಲ್ಲವೆಂಬ ವಾದವೂ ಇತ್ತು. ಈಗ ವಿದ್ಯೆಯೇ ಮಾನವ ಜೀವನಕ್ಕೆ ತಳಹದಿ ಎಂಬುದು ಸರ್ವವಿಧಿತವಾಗಿದೆ. ಹಳ್ಳಿ ಹಳ್ಳಿಯಲ್ಲಿಯೂ ಶಾಲೆಗಳು ಹುಟ್ಟಿಕೊಳ್ಳುತ್ತಿವೆ."

"ನಮ್ಮ ಕಾಲದಲ್ಲಿ ವಿದ್ಯೆಗೆ ಪ್ರಾಶಸ್ತ್ಯವಿರಲಿಲ್ಲ. ಹೇಗೆ ಹುಟ್ಟಿದವೋ

ಹಾಗೆಯೇ ಬೆಳೆದುವು."

"ಕಾಲ ತ್ವರಿತವಾಗಿ ಬದಲಾಗುತ್ತಿದೆ."

"ನಿಜ, ಇಷ್ಟು ಮಂದಿ ಅನಾಥ ಮಕ್ಕಳಿಗೆ ಹೀಗೊಂದು ದಾರಿ ಯಾದುದು ಪುಣ್ಯಕಾರ್ಯವೆಂದೇ ಹೇಳಬೇಕು."

"ಬಡಮಕ್ಕಳು ಬದುಕಿಕೊಳ್ಳಲಿ."

"ಶಾಲೆಯನ್ನು ತೆರೆದಾಗ ನಾನು ಆಸ್ಪತ್ರೆಯಲ್ಲಿದ್ದೆ. ಇದುವರೆವಿಗೆ ನೋಡಿರಲಿಲ್ಲ. ಕಟ್ಟಡ ದೊಡ್ಡದಾಗಿದೆ. ಐವತ್ತು ಮಂದಿ ಮಕ್ಕಳನ್ನಾದರೂ ಇಟ್ಟುಕೊಳ್ಳಬಹುದು. ವಿದ್ಯೆ ಬುದ್ಧಿ ಸರಿಯಾಗಿ ಹತ್ತಿದರೆ ಇದಕ್ಕಿಂತ ಪುಣ್ಯಕಾರ್ಯ ಇನ್ನೊಂದಿಲ್ಲ."

"ನಿಜ ನಿಜ, ಮುಂದಿನ ತಿಂಗಳು ನಾಗರಾಜ ಇಲ್ಲಿಗೆ ಬರುತ್ತಾನೆ. ಆಗ ಎರಡು ಪಲ್ಲ ಅಕ್ಕಿ ಕಳುಹಿಸುವೆ. ಬಡ ಮಕ್ಕಳಿಗೆ ನಮ್ಮದೂ ಒಂದಂ ತುತ್ತಿರಲಿ."

"ಹಾಗಿದ್ದರೆ ನಾನೂ ಕಳುಹಿಸುವೆ."

ರವಿಯ ಆದರಾತಿಥ್ಯಕ್ಕೆ ಮನಸೋತ ರಾಮಣ್ಣನಿಗೆ ಋಣದಿಂದ ಮುಕ್ತನಾಗುವ ಬಗೆ ಹೇಗೆಂದು ಮನದಲ್ಲೇ ಯೋಚನೆಯಾಗಿತ್ತು. ಅದರ ಸಲುವಾಗಿ ಈ ಸಮಯುವನ್ನು ಉಪಯೋಗಿಸಿಕೊಂಡಿದ್ದ. ಇಬ್ಬರೂ ಶಾಲೆ ಯನ್ನು ನೋಡಿಕೊಂಡು ಅಂಗಳಕ್ಕೆ ಬಂದರು. ಅಂಗಳದಲ್ಲಿ ಪಾತಿಗಳು ಸಾಲು ಸಾಲಾಗಿದ್ದುವು. ಕೆಲವು ಪಾತಿಗಳಲ್ಲಿ ಬೀಜಗಳು ಮೊಳಕೆಯೊಡೆದು ಸಸಿಗಳು ಮೇಲೆದ್ದಿದ್ದುವು. ಕೆಲವು ಪಾತಿಗಳಲ್ಲಿ ಹೂಗಿಡಗಳ ಬಿತ್ತನೆ ನಡೆದಿತ್ತು. ನೋಡುತ್ತಾ ಲಿಂಗಣ್ಣ ಹೇಳಿದ "ಮಕ್ಕಳ ದೇಹದ ಬೆಳವಣಿಗೆ ಸಾಲದು."

"ಈಗಾಗಲೇ ಎಷ್ಟೋ ಚೇತರಿಸಿಕೊಂಡಿದ್ದಾರೆ. ನಾನು ಆಸ್ಪತ್ರೆ ಯಿಂದ ಮನೆಗೆ ಬಂದಂದು ನೋಡಿದ್ದೆ."

"ಇನ್ನೂ ಸ್ವಲ್ಪ ಕಾಲಬೇಕು."

"ಅನಾಗರಿಕ ಜೀವನಕ್ಕೆ ಹೊಂದಿಕೊಂಡ ಮಕ್ಕಳು; ವಿದ್ಯೆ ಹತ್ತುವುದು ಸ್ವಲ್ಪ ನಿಧಾನವಾದೀತು."

ಅಷ್ಟರಲ್ಲಿ ಉಂಡು ಮುಗಿಸಿದ ಮಕ್ಕಳು ಹೊರಗಡೆ ಓಡೋಡಿ ಬಂದರು. ಮುಖದಲ್ಲಿ ಬಾಲ ಸಹಜವಾದ ಕಿಲಕಿಲ ನಗು ಮಿನುಗುತ್ತಿತ್ತು. ರಾಮಣ್ಣ

ಮತ್ತು ಲಿಂಗಣ್ಣ ಮಕ್ಕಳನ್ನು ನೋಡುತ್ತ ಅಲ್ಲೇ ನಿಂತುಕೊಂಡರು.

"ಗಂಗಾ, ಇಲ್ನೋಡೆ ನಾನು ನೆಟ್ಟ ಬಟಾಣಿ ಬೀಜ ಸಾಲುಸಾಲಾಗಿ ಹುಟ್ಟಿವೆ" ಎಂದಳು ಕನ್ನಿಕಾ. ಮುಖದಲ್ಲಿ ಉತ್ಸಾಹ ತಾನೇ ತಾನಾಗಿತ್ತು.

"ನನ್ನವೂ ಹುಟ್ಟಿವೆ!" ಅಷ್ಟೇ ಉತ್ಸಾಹದಿಂದ ನುಡಿದಳು ಗಂಗಾ

"ಅಮ್ಮ ಕೊಟ್ಟಿದ್ದ ಮೆಣಸಿನ ಬೀಜ ನಾನೇ ಚೆಲ್ಲಿದ್ದು!"

"ಸಿದ್ದಿ, ಇಲ್ನೋಡು! ನಿನ್ನ ತಿಂಗಳವರೆಯೂ ಬಂದಿವೆ!"

ಹೊರಡಲೆಂದು ನಿಂತ ರಾಮಣ್ಣ ಮತ್ತು ಲಿಂಗಣ್ಣ ಮಕ್ಕಳ ಉತ್ಸಾಹ ವನ್ನು ನೋಡಿ ಹಾಗೇ ನಿಂತುಕೊಂಡರು. ಲಿಂಗಣ್ಣ ಒಂದು ಮಗುವನ್ನು ಕೇಳಿದ "ನಿನ್ನ ಹೆಸರೇನು ಮಗೂ?"

"ಧರಣೀ" ತಾನು ನಿಸ್ಸಂಕೋಚದಿಂದ ನುಡಿದುದಲ್ಲದೆ ಲಿಂಗಣ್ಣನ ಮುಖವನ್ನೇ ದಿಟ್ಟಿಸಿ ನೋಡುತ್ತ ಪಕ್ಕದಲ್ಲಿ ನಿಂತಿದ್ದ ಬಾಲಿಕೆಯತ್ತ ಕೈ ತೋರಿ "ಅವಳ ಹೆಸರು ಜಾನಕಿ. ಅವಳಿಗೆ ಬಲು ನಾಚಿಕೆ. ಯಾರೊಂದಿಗೂ ಮಾತಾಡುವುದಿಲ್ಲ." ಎಂದು ಕಿಲಕಿಲನೆ ನಗುತ್ತ ನುಡಿದಳು. ಜಾನಿ ತನ್ನ ಸುದ್ದಿ ಎತ್ತುತ್ತಲೂ ಬೇರೆ ಕಡೆ ತಿರುಗಿ ನಿಂತಳು. ಲಿಂಗಣ್ಣ ನಸು ನಕ್ಕು ಹೇಳಿದ "ನೀನು ತುಂಬ ಜಾಣೆ."

"ನಿನಗೆ ಅಕ್ಷರ ಬರುತ್ತದೆಯೆ?" ರಾಮಣ್ಣ ಕೇಳಿದ.

"ಕಲಿಯುತ್ತಿದ್ದೇನೆ."

"ಜಾನಕಿಗೆ ಬರುತ್ತದೆಯೆ?"

"ಕಲಿಯುತ್ತಿದ್ದಾಳೆ. ಬಲು ನಾಚಿಕೆ ಅವಳಿಗೆ."

"ನಿನಗಿಲ್ಲವೋ?"

"ಉಹ್ಞೂ" ನಗುತ್ತ ಮಗು ಓಡಿ ಹೋಯಿತು.

ಅಲ್ಲಿಂದ ಇಬ್ಬರು ಹೊರ ಬಂದರು. ಲಿಂಗಣ್ಣ ಮನೆಗೆ ಬರುವಷ್ಟ ರಲ್ಲಿ ರವಿ ಮತ್ತು ಶಿವೆ ಹಿಂದಿರುಗಿದ್ದರು. ಅಡುಗೆಯೂ ತಯಾರಾಗಿತ್ತು. ಬಾಗಿಲಲ್ಲೇ ಎದುರಾದ ರವಿ ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡು "ನೀವು ಶಾಲೆಯ ಆರಂಭೋತ್ಸವಕ್ಕೆ ಬರುತ್ತೀರೆಂದು ಕೊನೆಯುವರೆಗೂ ಎದುರು ನೋಡಿದೆವು.

"ಬರಬೇಕೆಂದು ತುಂಬ ಆಸೆಯಿತ್ತು. ಕೆಲಸದ ಅಡಚಣೆಯಿಂದಾಗಿ ಬರಲಾಗಲಿಲ್ಲ. ಒಳ್ಳೆಯ ಕಾರ್ಯ ಕೈಕೊಂಡಿದ್ದೀರಿ...ಹೊರುವ ಶಕ್ತಿ ದೇವರೇ ಕೊಡಬೇಕು. ಇದೇನು ಸಾಮಾನ್ಯ ಕೆಲಸವಲ್ಲ. ಜವಾಬ್ದಾರಿಯೂ ಅಷ್ಟೇ ಹಿರಿದಾದುದು." ಎಂದ ಲಿಂಗಣ್ಣನ ಮುಖಬಿಂಬದಲ್ಲಿ ಶಾಂತಿ ಸಮಾಧಾನಗಳ ಅಪೂರ್ವಕಾಂತಿ ಲಾಸ್ಯವಾಡಿತು. ಮುಗುಳು ನಕ್ಕು–" "ಬಂದು ಎಷ್ಟೊತ್ತಾಯಿತು ?"

"ಇದೀಗ ತಾನೇ ಬಂದೆವು."

"ನೀವು ಬರುವ ಸುದ್ದಿ ತಿಳಿಯದಿದ್ದರೂ ಇಂದು ಕೊಂಚ ಮುಂಚಿತವಾಗಿಯೇ ಬಂದಿದ್ದೇವೆ. ಬಹುಶಃ ನೀವು ಬರುತ್ತೀರೆಂದೇ ಇರಬೇಕು." ಎನ್ನುತ್ತ ಶಿವೆ ಕೈಕಾಲು ತೊಳೆಯಲು ಟವಲ್ಲನ್ನಿತ್ತಳು.

"ಶಾಲೆಯೇನೋ ಚೆನ್ನಾಗಿದೆ; ನಡಸಿಕೊಂಡು ಹೋಗುವುದು ಬಹಳ ವಿಶೇಷ."

"ಎಲ್ಲರ ಸಹಕಾರವಿರುವುದರಿಂದ ನಮಗೆ ಹೆಚ್ಚು ತೊಂದರೆಯಾಗಲಾರದು. ಕೈಗಾರಿಕೆ ವಿಭಾಗಗಳಿಗೆ ಇನ್ನೂ ಸಲಕರಣೆಗಳನ್ನು ಕೊಂಡುಕೊಳ್ಳಲಿಲ್ಲ. ಮಕ್ಕಳು ಮೊದಲಿಷ್ಟು ಮನೋವಿಕಾಸವನ್ನು ಹೊಂದಲಿ ಎಂದು ಸುಮ್ಮನಿದ್ದೇವೆ." ಅಷ್ಟೇ ಅಲ್ಲ, ಎಷ್ಟು ಮಾಡಿದರೂ ತೀರದ ವ್ಯವಸ್ಥೆ ಇದು. ಆದರೂ ಧೈರ್ಯ ಮಾಡಿದ್ದಾಯ್ತು. ಇನ್ನು ಮುಖ್ಯವಾಗಿ ಇಲ್ಲಿಂದ ಹೊರ ಹೋದ ಮಕ್ಕಳು ತಮ್ಮ ಸಂಪಾದನೆಯ ಹಾದಿಯನ್ನು ಕಂಡುಕೊಂಡರೆ ಸಾಕು." ಎಂದಳು ಶಿವೆ.

"ಅದೇ ನಮ್ಮ ಗುರಿ." ರವಿ ದನಿಗೂಡಿಸಿದ.

"ಆದರೆ ನಿಮ್ಮ ಬಗೆಗೆ ಬಹಳ ದೊಡ್ಡ ಜವಾಬ್ದಾರಿ."

"ದೇವರಿದ್ದಾನೆ."

ಲಿಂಗಣ್ಣ ಸಮಾಧಾನದ ಉಸಿರನ್ನು ಬಿಟ್ಟ.

ಊಟದ ನಂತರ ಹೊಸದಾಗಿ ಕಟ್ಟಿದ್ದ ಕೊಠಡಿಯಲ್ಲಿ ಎಲ್ಲರೂ ಕುಳಿತುಕೊಂಡರು. ಲಿಂಗಣ್ಣ ಎಲೆಯಡಿಕೆಯ ಚರ್ವಣದಲ್ಲಿ ಮಗ್ನನಾಗಿದ್ದ. ರವಿ ಲಿಂಗಣ್ಣನತ್ತ ತಿರುಗಿ ಹೇಳಿದ "ರಂಗಣ್ಣನಿಗೆ ಆರು ವರ್ಷ ಜೇಲಾಗಿದೆ. ಎರಡು ಅಪರಾಧಗಳ ಶಿಕ್ಷೆಯನ್ನೂ ಒಟ್ಟಿಗೆ ಅನುಭವಿಸಬೇಕೆಂದು ತೀರ್ಪು

ಕೊಟ್ಟಿದ್ದಾರೆ."

"ಶುದ್ಧ ಅಯೋಗ್ಯ. ಅವನಿಗದು ಆಗಲೇಬೇಕಿತ್ತು."

"ಒಂದು ದೃಷ್ಟಿಯಿಂದ ಇದಾದುದು ಒಳ್ಳೆಯದೇ ಆಯಿತು. ಹಣವನ್ನು ಕೂಡಿಟ್ಟಂತಾಯಿತು. ಮೇಲಾಗಿ ಮಕ್ಕಳಿಗೆ ದುಡಿದು ಉಣ್ಣುವ ಹಠವೂ ಬಂದಿತು."

"ಕಷ್ಟನಷ್ಟ ಅಪಮಾನಗಳ ಪರಂಪರೆಗಳಲ್ಲಿ ಜೀವನವೇ ಬೇಡವಾಗಿತ್ತು. ಮಕ್ಕಳಿಂದಾಗಿ ಎಲ್ಲವನ್ನೂ ಸಹಿಸಿಕೊಂಡಿದ್ದಾಯ್ತು."

"ತಾತಾ, ನೀವು ಈ ಸಲ ನಾಲ್ಕು ದಿನ ಇದ್ದೇ ಹೋಗಬೇಕು. ಸುಂದರಿ ಇದೇ ಮೊದಲು ಮೈಸೂರಿಗೆ ಬಂದಿದ್ದಾಳೆ. ಅವಳು ನೋಡುವುದನ್ನೆಲ್ಲಾ ನೋಡಲಿ."

"ಈ ಸಲ ಬಿಡುವಿಲ್ಲ ರವೀ. ನಾಳೆ ಹೊರಡಲೇಬೇಕು. ನಾಡಿದ್ದಿನಿಂದ ಗದ್ದೆಯ ಹೂಟಿ ಶುರುವಾಗುತ್ತದೆ."

"ಮನೆಯಲ್ಲಿ ನಾಗು ಒಬ್ಬಳೇ ಇದ್ದಾಳೆ. ಹೂಟಿಯ ದಿನ ನಾಲ್ಕಾರು ಮಂದಿಗೆ ಊಟಕ್ಕಿಡಬೇಕು. ಪಾಪ, ಅವಳೇನು ಮಾಡಿಯಾಳು ?"

"ಅಕ್ಕಾ ; ಅಮ್ಮನಿಗೆ ಸದಾ ಸೊಸೆಯದೇ ಚಿಂತೆ !" ಹಾಸ್ಯಪ್ರಧಾನವಾಗಿ ಸುಂದರಿ ಕಿಲಕಿಲನೆ ನಗತೊಡಗಿದಳು.

"ಸದ್ಯ ನಿನಗೂ ಅಂತಹ ಅತ್ತೆ ಸಿಕ್ಕಿದರೆ ಸಾಕು."

ಶಿವೆಯ ನುಡಿಯಿಂದ ಸುಂದರಿಯ ಮುಖ ಕೆಂಪುಕೆಂಪಾಯಿತು. ಅಷ್ಟರಲ್ಲಿ ರವಿ ಸಾನಂದದಿಂದ ಕೇಳಿದ "ಇಂದು ಎಲ್ಲೆಲ್ಲಿಗೆ ಹೋಗಬೇಕೆಂಬುದು ನಿನ್ನ ಇಚ್ಛೆ ? ಇದೇ ಮೊದಲು ಮೈಸೂರಿಗೆ ಬಂದಿದ್ದೀಯೆ. ಬೃಂದಾವನ, ಚಾಮುಂಡಿಬೆಟ್ಟ, ಮೃಗಶಾಲೆ ಎಲ್ಲವನ್ನೂ ನೋಡಿಕೊಂಡೇ ಹೋದರಾಯ್ತು."

"ಹೌದು ರವೀ, ನಾವು ಎಲ್ಲ ಕಡೆಯೂ ಹೋಗಿ ಬರಬೇಕು. ಎರಡು ದಿನ ಇದ್ದೇ ಹೋಗಿದ್ದರೆ ಚೆನ್ನಾಗಿತ್ತು. ಅಪ್ಪ ಒಪ್ಪುವುದಿಲ್ಲ." ಎಂದಳು ಸುಂದರಿ. ಕಣ್ಣುಗಳಲ್ಲಿ ಆಸೆ ಮಿಂಚುತ್ತಿತ್ತು.

"ನಾಳೆಯೊಳಗಾಗಿ ನೋಡಬೇಕಾದುದನ್ನೆಲ್ಲಾ ನೋಡಿರಿ. ನಾಳೆ ಸಂಜೆಯ ಬಸ್ಸಿಗೆ ಹೊರಡೋಣ." ಲಿಂಗಣ್ಣನೆಂದ.

"ಹಾಗಿದ್ದರೆ ಇಂದೇ ಬೃಂದಾವನಕ್ಕೆ ಹೋಗೋಣ."

"ಚಿಕ್ಕಮ್ಮ ಬರುವುದೇ ಅಪರೂಪ; ನಾಲ್ಕು ದಿನ ಇದ್ದು ಹೋಗಲಿ. ಕುಮಾರ ಊರಿಗೆ ಕಳುಹಿಸಿ ಬರುತ್ತಾನೆ."

"ನಾನಾಗಲೇ ಹೇಳಿದೆನಲ್ಲಾ ? ಅಮ್ಮನಿಗೆ ಸೊಸೆಯದೆ ಚಿಂತೆ!"

ಎಲ್ಲರ ಮುಖದ ಮೇಲೂ ಮತ್ತೆ ಕುಲುಕುಲು ನಗು ನಲಿಯಿತು.

ಸಂಜೆಯಲ್ಲಿ ಎಲ್ಲರೂ ಕಾಲೇಜಿನಿಂದ ಹಿಂದಿರುಗುವುದನ್ನೇ ಎದುರು ನೋಡುತ್ತಿದ್ದಳು ಸುಂದರಿ. ತಲೆಬಾಗಿಲಲ್ಲಿ ಸುಂದರಿಯನ್ನು ಕಾಣುತ್ತಲೂ ಸರಸು ಓಡೋಡಿ ಬಂದು ಅವಳನ್ನು ಅಪ್ಪಿಕೊಂಡು ಹೇಳಿದಳು "ನಿನ್ನನ್ನು ಬಹಳ ದಿನಗಳಿಂದ ನೋಡಬೇಕೆನ್ನಿಸುತ್ತಿತ್ತು."

"ನನಗಂತೂ ನೀನು ಕಾಹಿಲೆ ಬಿದ್ದಾಗ ನಿನ್ನದೇ ಯೋಚನೆಯಾಗಿತ್ತು ಕಣೆ. ನೀನಿನ್ನೂ ಸುಧಾರಿಸಿಕೊಳ್ಳಲಿಲ್ಲ.........ನಿನಗೆ ಏನೇನೂ ಚೈತನ್ಯ ಸಾಲದು." ಎಂದಳು ಸುಂದರಿ. ನಳಿದೋಳುಗಳು ಅವಳ ಕುತ್ತಿಗೆಯನ್ನು ಬಳಸಿದುವು.

"ನಿನ್ನ ಹೊಸ ಅತ್ತಿಗೆಯ ಮೇಲೆ ಎಲ್ಲ ಭಾರವನ್ನೂ ಹಾಕಿಬಿಟ್ಟಿದ್ದೀಯೇನು ?"

"ಅವಳು ಹೇಗೆ ಹೊಸ ಅತ್ತಿಗೆಯಾದಾಳು? ನೀನೀಗ ಹೊಸ ಅತ್ತಿಗೆ!"

"ನಿನಗೆ ತಮಾಷೆ." ಸರಸು ಮುಖವನ್ನು ಆ ಕಡೆ ತಿರುಗಿಸಿದಳು.

ಪಕ್ಕದಲ್ಲಿದ್ದ ಕುಮಾರನ ಮುಖ ಹೂವಿನಂತರಳಿತು. ಓರೆ ನೋಟದಿಂದ ಸರಸುವಿನತ್ತ ನೋಡಿದ. ಸರಸು ಲಜ್ಜೆಯಿಂದ ಅಲ್ಲಿ ನಿಲ್ಲಲಾರದೆ ಒಳಗಡೆ ಓಡಿದಳು. ವಿಮಲೆಯು ಸುಂದರಿಯ ಭುಜಕ್ಕೆ ಜೋತು ಬಿದ್ದು ಕುಮಾರನೆಡೆ ದೃಷ್ಟಿಯನ್ನು ಹೊರಳಿಸಿ ಹೇಳಿದಳು "ಸುಂದರಕ್ಕಾ, ನಿಮ್ಮ ಕುಮಾರಣ್ಣನಿಗೆ ಎಂದಿಗೆ ಮದುವೆಯಾದೇನೋ ಎಂಬ ತರಾತುರಿ. ಸ್ವಲ್ಪವೂ ನಾಚಿಕೆಯಿಲ್ಲ!"

ಮುಖದಲ್ಲಿ ಸರಸ ಸರಳ ಹಾಸ್ಯ ನಲಿದಾಡಿತು.

"ಅವನಿಗಷ್ಟೇ ಅಲ್ಲ. ನಮಗೂ ತರಾತುರಿ ಕಣೆ!" ಜೋರಿನಿಂದ ನುಡಿದಳು ಸುಂದರಿ. ಅರಳಿದ ಮುಖ ಗುಲಾಬಿಯಂತಾಯಿತು.

"ಓಹೋ, ಸರಸೂನ ಈಗಲೇ ಮದುವೆ ಮಾಡೋಲ್ಲ ಬಿಡಿರಿ.

ಅವಳಿನ್ನೂ ಓದಬೇಕು."

"ನಿನ್ನ ಕೇಳೋರಾರೆ ?" ದನಿ ಬಾಗಿಲ ಕಡೆಯಿಂದ ಹರಿದು ಬಂತು. ಅದಾರೆಂದು ತಟ್ಟನೆ ತಿರುಗಿ ನೋಡಿದಳು ವಿಮಲೆ. ಶ್ಯಾಮು ಕುಮಾರರು ಜೋಡಿಯಾಗಿ ನಿಂತಿದ್ದುದರಿಂದ ಅವರಲ್ಲಿ ಯಾರು ನುಡಿದರೋ ಊಹಿಸ ಲಾಗಲಿಲ್ಲ. ವಿಮಲೆ ಅತ್ತ ಮಿಕಿಮಿಕಿ ನೋಡುತ್ತ ಕೇಳಿದಳು "ಹಾಗೆಂದವ ರಾರು ಕುಮಾರಣ್ಣನೇ ?"

ಆಳೆತ್ತರಕ್ಕೆ ಬೆಳೆದ ಅವಳ ನಿಲುವು ತುಸು ಬಳಕಿತು...

"ಅಲ್ಲಪ್ಪಾ, ಅಂದದ್ದು ಶ್ಯಾಮು !"

"ನನಗೊತ್ತು ಅದು ಶ್ಯಾಮು ದನಿಯಲ್ಲ !"

ಏ ! ಕಳ್ಳೀ, ಶ್ಯಾಮುವನ್ನು ಶರಣಾಗತನನ್ನಾಗಿ ಮಾಡಿಕೊಂಡವಳಿಗೆ ದನಿ ಅವನದಲ್ಲವೆಂದು ಪತ್ತೆ ಹಚ್ಚುವುದೇನು ಕಷ್ಟ ?" ಎಂದು ಗಟ್ಟಿಯಾಗಿ ನಕ್ಕಳು ಸುಂದರಿ. ಕೂಡಲೇ ಎಲ್ಲೆಲ್ಲೂ ನಗುವಿನಲೆಯೆದ್ದಿತು. ಆದರೆ ಅದರ ಕಡೆ ಗಮನ ಕೊಡದೆ ಬದಿಗೊತ್ತಿದಳು ವಿಮಲೆ. ಅದೇ ವೇಳೆಗೆ ಅವಸರವಸರವಾಗಿ ಬಂದ ರವಿ ಹೇಳಿದ "ಎಲ್ಲರೂ ಹೊರಡಿರಿ, ಮೊದಲು ಮೃಗಶಾಲೆಯ ಕಡೆ ಹೋಗಿ ಬರೋಣ. ಅಲ್ಲಿಂದ ಬೇಗನೆ ಹಿಂದಿರುಗಿದರೆ ಬೃಂದಾವನಕ್ಕೆ ಹೋಗಲು ಅನುಕೂಲವಾಗುತ್ತದೆ."

ಸುಂದರಿಯ ಮನಸ್ಸು ಒಮ್ಮೆಲೇ ಮುಗಿಲೆತ್ತರಕ್ಕೆ ಚಿಮ್ಮಿತು.

೪೨

ಸಂಜೆಯ ವಾತಾವರಣ ಶೀತಲವಾಗಿತ್ತು. ಪಶ್ಚಿಮ ದಿಗಂತದಲ್ಲಿ ದಿನಮಣಿಯು ಮೆಲ್ಲಮೆಲ್ಲನಿಳಿಯುತ್ತಿದ್ದಾನೆ. ಸುಗಂಧ ಸುಮಗಳ ಸುರ ಸೌರಭವನ್ನು ಒಯ್ಯೊಯ್ಯನೆ ಒಯ್ದು ತರುವ ಮಂದಾನಿಲ ಮಂಖಕ್ಕೆ ಹೂ ಮುತ್ತನಿಡುತ್ತಿದ್ದ. ನಾನಾ ಬಗೆಯ ಪಕ್ಷಿಗಳಿಂಚರದ ನಡುವೆ ಕೋಗಿಲೆಯ ಮಧುರವಾಣಿಯು ಕಿವಿಗಿಂಪಾಗಿ ಕೇಳಿ ಬರುತ್ತಿತ್ತು. ಬಿತ್ತರದ ಬಾಂದಳದಲ್ಲಿ ಬೆಳ್ಮುಗಿಲುಗಳು ಸಮ್ಮೋಹನಾಕಾರಗಳಲ್ಲಿ ತಮ್ಮ ಅನಂತ ಪಯಣದಲ್ಲಿ ತನ್ಮಯವಾಗಿವೆ. ದೂರ ದಿಗಂತದಲ್ಲಿನ ಹೊನ್ನರಾಜಿಯು ವೈಭವವನ್ನವ ಲೋಕಿಸುತ್ತ ಡಾ॥ ಚಂದ್ರು ಹೆಜ್ಜೆ ಹಾಕುತ್ತಿದ್ದರು. ಎಪ್ಪತ್ತೈದು ವರ್ಷ ಗಳ ತುಂಬು ಜೀವನ ನಡೆಸಿದ ಹೆಚ್ಚು ಎತ್ತರವಲ್ಲದ ಮಟ್ಟಸವಾದ ದೇಹ ಅಹೋರಾತ್ರಿಯ ದುಡಿಮೆಯಿಂದಲೂ ಕುಗ್ಗದಿತ್ತು. ಬೆಳ್ಳಿಯಂತೆ ಬೆಳ್ಳಗಿನ ಕೂದಲೂ ಉದ್ದನೆಯ ಬಿಳಿಯ ಹುಬ್ಬುಗಳೂ ವಯಸ್ಸನ್ನು ಸಾರಿ ಹೇಳು ತ್ತಿದ್ದುವೇ ವಿನಾ ಮುಖಭಾವವಲ್ಲ........

ಡಾಕ್ಟರು ಶಾಲೆಯ ಪರಿಶೀಲನೆ ನಡೆಸಿದನಂತರ ಮಾಧವರಾಯನ ಮನೆಯ ಕಡೆ ಹೆಜ್ಜೆ ಹಾಕಿದರು. ಶಾರದೆಯು ಎರಡನೆಯ ಹೆಣ್ಣು ಮಗಂ ವಿಗೆ ಜನ್ಮವಿತ್ತು ಆಸ್ಪತ್ರೆಯಿಂದ ಅಂದು ಮನೆಗೆ ಹಿಂದಿರುಗಿದ್ದಳು. ಅವರನ್ನು ನೋಡುವ ಸಲುವಾಗಿ ಅಲ್ಲಿಯ ಹಾದಿ ತುಳಿದಿದ್ದರು ಡಾ॥ ಚಂದ್ರು. ಬಾಗಿಲಲ್ಲಿ ಎದುರಾದ ಮಾಧವರಾಯ ಆದರದಿಂದ ಬರಮಾಡಿಕೊಂಡ. ನಳಿನಿಯು ಓಡಿ ಬಂದು ಕೈ ಹಿಡಿದುಕೊಂಡು "ಒಳಗೆ ಬನ್ನಿರಿ, ನಮ್ಮ ಮಗು ತೋರಿ ಸುವೆ." ಎನ್ನುತ್ತ ಪರಮಾನಂದದಿಂದ ಡಾಕ್ಟರನ್ನು ಒಳಗಡೆ ಎಳೆ ದೊಯ್ದಳು.

"ನಳಿನಿಗೆ ಎಲ್ಲಿಲ್ಲದ ಸಂತಸ ಉಂಟಾಗಿದೆ" ಎಂದ ಪುಟ್ಟಮ್ಮನ ದನಿಯಲ್ಲೂ ಸಂತಸವುಕ್ಕಿ ಹರಿಯುತ್ತಿತ್ತು. ನಳಿನಿಯೂ ತೊಟ್ಟಿಲಿನ ಪರ ದೆಯನ್ನು ತಾನೇ ಸರಿಸಿದಳು. ಸದ್ದಿನಿಂದ ಮಗು ಮಿಸುಕಾಡಿದುದನ್ನು

ನೋಡಿ ನಳಿನಿ ನಗತೊಡಗಿದಳು. ಡಾಕ್ಟರು ನಳಿನಿಯ ತಲೆಯನ್ನು ನೇವರಿಸಿ ಹೇಳಿದರು "ಸದ್ದು ಮಾಡಬಾರದು, ಮಗೂ !"

ಡಾಕ್ಟರ ಮಾತು ಮೆಲುದನಿಯಲ್ಲಿ ಹೊರಟಿದ್ದರೂ ನಳಿನಿ ಲೆಕ್ಕಿಸದೆ ಗಟ್ಟಿಯಾಗಿ–"ಡಾಕ್ಟರ್ ಮಾಮಾ ! ನೋಡಿ, ಹೇಗೆ ಕಣ್ಣು ಬಿಡುತ್ತಾಳೆ ?"

"ಹೌದು, ಮಗೂ ; ನಿನ್ನಂತೆಯೇ ಅವಳು......"

"ಅವಳ ಸಂತೋಷಕ್ಕೆ ಪಾರವೇ ಇಲ್ಲ–ಬಂದವರಿಗೆಲ್ಲಾ ಮಗು ತೋರಿಸಲು ತಾನೇ ಮುಂದು."

ಪುಟ್ಟಮ್ಮ ನಗುಮುಖದಿಂದ ಬಣ್ಣಿಸಿದಳು.

"ಪಾಪ, ಒಂಟಿಯಾಗಿತ್ತು ಮಗು. ಇನ್ನು ನೆಮ್ಮದಿ ಪಡೆದು ಕೊಳ್ಳುತ್ತಾಳೆ."

ಸಂತಸದ ವಾತಾವರಣ ಎಲ್ಲರ ಮುಖದಮೇಲೂ ಬೆಳುದಿಂಗಳಂತಹ ನಗುವನ್ನು ಮೂಡಿಸಿತು...ಶಾರದೆಯ ಮುಖದ ಮೇಲೆ ಅಭಿಮಾನಪೂರ್ಣ ವಾದ ಆತ್ಮವಿಶ್ವಾಸದ ವಿನೂತನ ಪೆಂಪು ತುಂಬಿ ಹರಡಿತ್ತು. ಡಾಕ್ಟರು ಕ್ಷೇಮ ಸಮಾಚಾರವನ್ನು ವಿಚಾರಿಸಿಕೊಂಡು ದಂಪತಿಗಳನ್ನು ಅಭಿನಂದಿಸಿ ಹೊರ ಬಂದರು. ಮಾಧು ಅತ್ಯಾದರದಿಂದ ಸೋಫಾದ ಮೇಲೆ ಕೂಡಿಸಿ ತಾನು ಪಕ್ಕದ ಕುರ್ಚಿಯ ಮೇಲೆ ಕುಳಿತ. ನಳಿನಿ ಡಾಕ್ಟರ ಪಕ್ಕದಲ್ಲಿ ಕುಳಿತು ಮಾತಿನ ಮಳೆಗರೆಯತೊಡಗಿದಳು. ಎಳೆಯ ಮನಸ್ಸು–ಮುಗ್ಧ ಪ್ರಶ್ನೆ ಒಂದೊಂದೂ ಪರಮಾನ್ನದ ಸವಿಯನ್ನುಣಿಸಿದುವು. ಡಾಕ್ಟರು ಅವಳಲ್ಲೇ ಸ್ವಲ್ಪ ಹೊತ್ತು ತಲ್ಲೀನರಾಗಿದ್ದರು.

ಪುಟ್ಟಮ್ಮ ಸಿಹಿ ಖಾರಗಳನ್ನು ತಂದು ಮುಂದಿಟ್ಟು ಸ್ನೇಹಾದರದಿಂದ ಅತಿಥಿ ಸತ್ಕಾರ ನಡೆಸಿದಳು. ಸಿಹಿಯಲ್ಲಿ ಸ್ವಲ್ಪ ಮಾತ್ರ ಬಾಯಿಯಲ್ಲಿಟ್ಟು ಕೊಂಡು ಚಹವನ್ನು ಬರಿದುಮಾಡಿ ಬಸಿಯನ್ನು ಟ್ರೇಯಲ್ಲಿಟ್ಟ ಡಾಕ್ಟರು, "ಈ ಜಗತ್ತಿನಲ್ಲಿ ಆನಂದ ಎಂಬುದು ನಮ್ಮ ಹಣೆಯಲ್ಲಿ ಬರೆದಿದ್ದರೆ ಅದು ಲಭಿಸುವುದು ಈ ಮಕ್ಕಳ ಸಮಕ್ಷಮದಲ್ಲಿ ಮಾತ್ರವೇ. ಮಕ್ಕಳ ಸನ್ನಿಧಿ ಯಲ್ಲಿ ನಿಶ್ಚಿಂತೆಯಿಂದ ಜೀವಿಸಬಹುದು—ಅಷ್ಟು ಮಾತ್ರವಲ್ಲ, ಖಂಡಿತ ಶಾಂತಿಯಿಂದ ಸಾಯಲೂ ಬಹುದು, ರಾಯರೇ !"

"ನಿಮ್ಮದುಬಹಳ ಹಳೆಯ ಅನುಭವ !"

"ಹೌದಪ್ಪಾ ! ಜನ್ಮ ಸಾರ್ಥಕತೆಯ ಅನುಭವ....ಸಾಮಾನ್ಯವಲ್ಲ,"
ತುಟಿಗಳು ಅಕ್ಷರಬದ್ಧವಾಗಿ ಬಿರಿದುವು. ಚಿತ್ತ ಪ್ರಸನ್ನವಾಗಿತ್ತು.
ಮಾಧವರಾಯ ಮುಗುಳು ನಕ್ಕ.

ರಾಯ ಖಾಲಿಯಾಗಿದ್ದ ಬಿಸಿ ಬಟ್ಟಲುಗಳನ್ನು ಅತ್ತ ಎತ್ತಿಟ್ಟು ನುಡಿದ "ಡಾಕ್ಟರೇ, ಈಗಾಗಲೇ ಕತ್ತಲೆಯಾಗುತ್ತಿದೆ. ನಿಮಗೆ ಬಿಡುವೆಂಬು ದೇಯಿಲ್ಲ ಈ ವಯಸ್ಸಿನಲ್ಲಿ ಅತೀ ದುಡಿಮೆ ಒಳ್ಳೆಯದಲ್ಲ. ಇನ್ನಾದರೂ ಹೆಚ್ಚು ಡಾಕ್ಟರುಗಳನ್ನು ನಿಯಮಿಸಿಕೊಳ್ಳಬಾರದೇ?"

"ಕೆಲಸವೇನೋ ಬಹಳವಿದೆ. ರವಿಯನ್ನು ನಿಯಮಿಸಿಕೊಳ್ಳಬೇಕೆಂಬ ಆಸೆಯಿತ್ತು. ಈಗ ನೋಡಿದರೆ, ಅವನೆಂಥ ಬುದ್ಧಿ ಶಾಲಿಯನ್ನು ನಿಯಮಿಸಿ ಕೊಳ್ಳವುದು ಸರಿಯಲ್ಲ ಎನಿಸುತ್ತಿದೆ. ಸರಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡಿದರೆ ಅವನಗೆ ಬುದ್ಧಿ ವಿಕಾಸವಾಗಲು ನಾನಾ ಅನುಕೂಲಗಳಿವೆ. ಅನ್ಯಥಾ ಅವನ ಕಾಲ ಇಲ್ಲಿ ವ್ಯಯವಾಗಬಾರದೆಂದೆನಿಸಿ ಆ ಯೋಚನೆ ಯನ್ನು ಬಿಟ್ಟು ಬಿಡಬೇಕಾಯಿತು, ನನ್ನ ಮಕ್ಕಳಲ್ಲಿ ಒಬ್ಬರಾದರೂ ಡಾಕ್ಟರಾಗಲಿಲ್ಲವಲ್ಲಾ ಎಂಬುದೇ ಬೇಜಾರು. ನನ್ನ ನಂತರ ಆಸ್ಪತ್ರೆ ಪರರದಾಗುತ್ತದೆ."

"ನಿಮ್ಮ ರಂಜನಿಯನ್ನು ಒಬ್ಬ ಡಾಕ್ಟರ ಕೈಸೇರಿಸಿರಿ. ಮುಂದೆ ಅವರು ನೋಡಿಕೊಳ್ಳುತ್ತಾರೆ."

"ಅದೊಂದು ಕೊನೆಯಾಸೆ ಇತ್ತು, ಆದರೀಗ ಅದು ಕೈಗೂಡುವಂತೆ ತೋರಲಿಲ್ಲ. ಸದ್ಯಕ್ಕೆ ನಮ್ಮ ಕಡೆಯವರೇ ಆದ ವ್ಯಾಪಾರಸ್ಥರೊಬ್ಬರು ಅವಳನ್ನು ಬಯಸಿದ್ದಾರೆ. ಅವಳ ಮನಸ್ಸೂ ಆ ಕಡೆಯೇ ವಾಲಿದೆ. ಕೈಗೂಡಿ ಬಂದರೆ ಒಳ್ಳೆಯ ಸಂಬಂಧವೂ ಹೌದು. ಒಟ್ಟಿನಲ್ಲಿ ಆರು ಮಂದಿ ಯಲ್ಲಿ ಒಬ್ಬರೂ ನನ್ನ ಹಾದಿ ತುಳಿಯಲಿಲ್ಲ."

"ಒಳ್ಳೆಯ ಆದಾಯವೂ ಇತ್ತು. ಮುಖ್ಯವಾಗಿ ಮಕ್ಕಳಿಗೆ ಅದೃಷ್ಟ ವಿಲ್ಲ." ಎಂದ ಮಾಧು ಪುನಃ "ರವಿಗೆ ಅನಾಯಾಸವಾಗಿ ಮುಂದಿನ ಅಭ್ಯಾಸಕ್ಕೆ ಸ್ಕಾಲರ್‌ಷಿಪ್ ದೊರೆಯುತ್ತದೆ. ಚಿಕ್ಕವರನ್ನು ಒಂದು ಸ್ಥಿತಿಗೆ ತರದೆ ಹೊರಗಡೆ ಹೋಗಲು ಮನಸ್ಸಿಲ್ಲ ಅವನಿಗೆ."

"ಪಾಪ, ಅವಕಾಶವಿದ್ದೂ ಉಪಯೋಗಿಸಿಕೊಳ್ಳುವಂತಿಲ್ಲ, ತಂಗಿಯರ

ಮದುವೆ ಮಾಡದೆ ಪರದೇಶಕ್ಕೆ ಹೋಗುವುದಾದರೂ ಹೇಗೆ ?"

"ಮಾಡುವುದು ಕಷ್ಟವಿಲ್ಲ. ಕುಮಾರನಿಗೆ ಸರಸು. ಅದು ಎಂದೋ ನಿಷ್ಕರ್ಷೆಯಾಗಿದೆ. ಶ್ಯಾಮುಗೆ ಹೊರಗಡೆಯಿಂದ ಹೆಣ್ಣು ತರಲಿಷ್ಟವಿಲ್ಲ. ವಿಮಲೆಯನ್ನೇ ಕೊಡಿ ಎನ್ನುತ್ತಾನೆ. ಎಷ್ಟೇ ವರ್ಷಗಳಾದರೂ ಚಿಂತೆಯಿಲ್ಲ ಕಾಯುವೆ. ಹೊರಗಿನ ಹೆಣ್ಣು ತಂದು ಮನೆಯ ಶಾಂತಿಯನ್ನು ಹಾಳು ಮಾಡಲಾರೆ. ಇಲ್ಲದಿದ್ದರೆ ನನಗೆ ಮದುವೆಯೇ ಬೇಡ ಎನ್ನುತ್ತಾನೆ. ಅದಕ್ಕೆ ರವಿ ಮತ್ತು ಶಿವಮ್ಮ ಇಬ್ಬರೂ ಒಪ್ಪುತ್ತಾರೆ. ವಿಮಲ ಇನ್ನೂ ಮನಸ್ಸು ಮಾಡಲಿಲ್ಲ."

"ಮನಸ್ಸು ಕೂಡಿ ಬಂದರೆ ಅನುಕೂಲವಾಯಿತು."

"ಇದೆಲ್ಲಾ ಸರಿ ಹೋಗುವ ತನಕ ರವಿ ಪರದೇಶಕ್ಕೆ ಹೋಗುವಂತಿಲ್ಲ. ಸದ್ಯಕ್ಕೆ ಮದುವೆಯಾಗುವಂತೆಯೂ ಇಲ್ಲ."

"ರವಿ ಮದುವೆಯಾಗುವುದಿಲ್ಲ. ಎನ್ನುತ್ತಾನೆ ಅದು ಕೂಡದು ನಮ್ಮ ವಂಶ ನಡೆದು ಬರಬೇಕು ಎನ್ನುತ್ತಾಳೆ ಶಿವಮ್ಮ. ಅಂತೂ ಅವನು ಕೆಲವು ಕಾಲ ಮದುವೆಯಾಗುವಂತಿಲ್ಲ." ಎಂದಳು ಪುಟ್ಟಮ್ಮ.

"ಎಂಥಹವರನ್ನೂ ಮಂತ್ರ ಮುಗ್ಧರನ್ನಾಗಿಸುವ ಅಮೋಘ ಗುಣ ರವಿಯದು. ಬಹಳ ವಿನಯಶೀಲ" ಮೆಚ್ಚಿಕೆಯಿಂದ ತಲೆಯನ್ನಾಡಿಸಿದರು ಡಾ॥ ಚಂದ್ರ.

ಮಾತು ಮುಗಿಸುವುದರೊಳಗಾಗಿ ರವಿ ಅಲ್ಲಿಗೆ ಬಂದುದನ್ನು ನೋಡಿ ಪುಟ್ಟಮ್ಮ ಆನಂದದಿಂದ ಬಿತ್ತರಿಸಿದಳು "ರವೀ, ನಿನಗೆ ನೂರು ವರ್ಷ ಆಯುಸ್ಸು ಕಣಪ್ಪಾ ! ನಿನ್ನ ವಿಚಾರ ಇದೇ ತಾನೇ ಮಾತಾಡಿದ್ದೆವು."

ಎಲ್ಲರ ತುಟಿಗಳೂ ಮುಗುಳ್ನಗು ಬೀರಿ ಸ್ವಾಗತಿಸಿದವು.

ರವಿ ನಗುಮುಖದಿಂದ ಅಂದ "ಅಷ್ಟೊಂದು ಆಯುಸ್ಸು ಬೇಡ. ಈ ದೇಹ ಗಟ್ಟಿಯಾಗಿರುವ ತನಕ ಇದ್ದರೆ ಸಾಕು."

"ರವಿ, ಇನ್ನು ಬೆಳಗಿನ ಪಾಠ ಪ್ರವಚನಗಳ ಹೊತ್ತನ್ನು ಅರ್ಧ ಗಂಟೆ ಹೆಚ್ಚಿಸಿಕೊಳ್ಳಬಹುದು. ಮಕ್ಕಳಿಗೆ ಕೈಗಾರಿಕೆಯಲ್ಲಿ ತುಂಬ ಆಸಕ್ತಿಯಿದೆ. ರಾಮಾಯಣ ಭಾರತ ಭಾಗವತಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಅಂತೂ ನೀವು ಕೈಕೊಂಡ ಶ್ರಮ ಸಾರ್ಥಕವಾಯಿತು.

ಇನ್ನು ಸ್ವಲ್ಪ ಕಾಲದಲ್ಲಿ ಮಕ್ಕಳು ಬಹಳಷ್ಟು ಸುಧಾರಿಸಿಕೊಳ್ಳುತ್ತಾರೆ. ಆನಂತರ ಅಷ್ಟು ತೊಂದರೆಯಾಗುವುದಿಲ್ಲ."

"ಹೌದು ; ಈಗೀಗ ಬಹಳ ಬೇಗನೆ ಸುಧಾರಿಸಿಕೊಳ್ಳುತ್ತಿದ್ದಾರೆ." ಎಂದ ರಾಯ.

"ಇಂದು ಹೊಲಿಗೆಯ ಯಂತ್ರಗಳನ್ನು ಕೊಳ್ಳುವುದಾಗಿ ಹೇಳಿದ್ದೆ. ನನಗಿಂದು ಬಿಡುವೇಯಿಲ್ಲ. ನಿಮಗೆ ಹೇಳಿ ಹೋಗೋಣವೆಂದು ಬಂದೆ. ನೀವಿಂದು ಹಣ ಕೊಡುವುದು ಬೇಡ."

"ಹೋಗಲಿ ಬಿಡು. ಇನ್ನೆಂದಾದರೂ ಕೊಂಡುಕೊಂಡರಾಯ್ತು. ಅಂತಹ ಅವಸರವೇನೂ ಇಲ್ಲ ...ಹೊಲಿಗೆಯ ಯಂತ್ರವನ್ನು ಕೊಂಡುಕೊಂಡರೆ ಸದ್ಯಕ್ಕೆ ಇನ್ನೇನೂ ಕೊಳ್ಳಬೇಕಾದುದಿಲ್ಲ. ಎಲ್ಲ ಸಲಕರಣೆಗಳನ್ನೂ ಒದಗಿಸಿಕೊಂಡಂತಾಯಿತು. ಇನ್ನೊಮ್ಮೆ ಯಾವುದಾದರೂ ಕಾರ್ಯಕ್ರಮ ಏರ್ಪಡಿಸಿಕೊಂಡು ಹಣ ಒದಗಿಸಿಕೊಳ್ಳಬೇಕಾಗುತ್ತದೆ."

"ವರ್ಷೇ ವರ್ಷೇ ಖರ್ಚು ಬೆಳೆಯುತ್ತಲೇ ಹೋಗುತ್ತಿದೆ. ಹೊಲಿಗೆಯ ಯಂತ್ರಗಳಲ್ಲದೆ ಟೈಪ್ ರೈಟರ್‌ಗಳೂ ಬೇಕು. ಇನ್ನು ಸರಕಾರದ ಸಹಾಯವನ್ನು ಕೇಳುವುದು ಅನುಕೂಲ. ನೀವ್ಯಾರೂ ಅದರ ಕಡೆ ಗಮನ ಕೊಡಲಿಲ್ಲ." ಎಂದಳು ಪುಟ್ಟಮ್ಮ.

"ಈ ಸಲ ಬರೆದುಕೊಳ್ಳುವೆ."

ಪುಟ್ಟಮ್ಮ ಎದ್ದು ಹೋಗಿ ತಿಂಡಿ ತಿನಸುಗಳನ್ನು ತಂದು ರವಿಯ ಮುಂದಿಟ್ಟಳು. ರವಿ ಕೇಳಿದ "ನಳನಿಯೆಲ್ಲಿ ?"

"ಓಹೋ ! ನೀನು ಬಂದುದು ಅವಳಿಗೆ ಗೊತ್ತೇಯಿಲ್ಲ."

ಮಾಧು ಎದ್ದು ಹೋಗಿ ನಳಿನಿಯೊಡನೆ ಬಂದ. ನಳಿನಿ ಓಡೋಡಿ ಬಂದು ರವಿಯ ತೊಡೆಯ ಮೇಲೆ ಹತ್ತಿ ಕುಳಿತುಕೊಂಡು "ರವಿ ಮಾಮಾ!" ಎಂದಳು ಮುಖ ಹೂವಿನಂತೆ ಅರಳಿತು. ರವಿ ಎದೆಗಪ್ಪಿಕೊಂಡು ಕೇಳಿದ "ನಾನೀಗ ಏಕೆ ಬಂದಿದ್ದೇನೆ ಗೊತ್ತೇ ?"

"ಇಲ್ಲ."

"ನಿನ್ನ ತಂಗಿಯನ್ನು ಎತ್ತಿಕೊಂಡು ಹೋಗುವುದಕ್ಕೆ."

"ಉಹ್ಞೂ !" ಕಣ್ಣುಗಳನ್ನರಳಿಸಿಕೊಂಡು ತಲೆಯಲ್ಲಾಡಿಸಿದಳು ನಳಿನಿ.

"ನಮ್ಮ ಮನೆಯಲ್ಲಿ ಮಗುವಿಲ್ಲ. ನಮಗೆ ಮಗು ಬೇಕು."

"ಶಾಂತ ಇದ್ದಾಳಲ್ಲಾ ?"

"ಅವಳು ಶಾಲೆಯಲ್ಲಿದ್ದಾಳೆ. ಮನೆಯಲ್ಲಿ ?"

"ಅವಳನ್ನೇ ಇಟ್ಟುಕೊಳ್ಳಿ."

"ಅದಾಗದು." ಎಂದ ರವಿ ಪುನಃ "ಹೋಗಲಿ ನೀನೇ ಬಂದು ಬಿಡು."

"ಹ್ಞೂ. ನಾನೇ ಬರುವೆ." ಕಿಲಕಿಲನೆ ನಕ್ಕಳು ನಳಿನಿ.

ನಳಿನಿಯನ್ನು ಮುದ್ದಿಟ್ಟು ಹೊರ ಹೊರಡುತ್ತ ರವಿ ಡಾಕ್ಟರನ್ನು ಕೇಳಿದ "ನೀವು ಹೊರಡುವುದು ನಿಧಾನವೇ."

"ಇಲ್ಲಪ್ಪಾ, ನನಗೂ ಹೊತ್ತಾಯ್ತು." ಡಾಕ್ಟರು ಎಚ್ಚೆತ್ತವರಂತೆ ತಟ್ಟನೆ ಎದ್ದರು.

"ನಾನೂ ಬರುವೆ, ಕೂಡಿ ಹೋಗೋಣ." ಎಂದ ರಾಯ ಒಳಗಡೆ ಹೋಗಿ ಬಟ್ಟೆ ಬದುಲಿಸಿಕೊಂಡು ಹೊರ ಬಂದ. ಮೂವರೂ ಕೂಡಿ ನಡೆದರು. ಸ್ವಲ್ಪ ದೂರ ಹೋಗುವುದರೊಳಗಾಗಿ ಎದುರಿಗೆ ಚಂದ್ರಮೌಳಿ ಬರುತ್ತಿದ್ದುದು ಕಾಣಬಂತು. ಒಡನೆ ಕೈಯೆತ್ತಿ ನಮಸ್ಕರಿಸಿ ನುಡಿದ "ಮೂವರೂ ಕೂಡಿ ಹೊರಟ್ಟಿದ್ದೀರಿ. ತ್ರಿಮೂರ್ತಿಗಳು ಕೂಡಿದಂತಾಯಿತು !" ಮುಖದಲ್ಲಿ ಸಂತಸದ ತಿಳಿನಗೆ ತುಂಬಿ ಹರಡಿತ್ತು.

"ರಾಯರ ಮನೆಗೆ ಹೋಗಿದ್ದೆವು ಅಲ್ಲಿಂದ ಕೂಡಿ ಹೊರಟೆವು." ರವಿಯೆಂದ.

"ನಿಮ್ಮ ವ್ಯಾಪಾರ ಈಗ ಚೆನ್ನಾಗಿದೆಯಂತೆ ?"

"ಆಗ ನೀವೆಲ್ಲಾ ನನಗೆ ಧೈರ್ಯ ನೀಡದಿದ್ದರೆ ನನ್ನ ಬಾಳು ಎಂದೋ ಮುಗಿದು ಹೋಗುತ್ತಿತ್ತು. ಈಗ ದೇವರ ಅನುಗ್ರಹದಿಂದ ನನಗೇ ಅಚ್ಚರಿಯಾಗುವಷ್ಟು ಸುಧಾರಿಸಿದೆ. ಇನ್ನು ಒಂದೆರಡು ವರ್ಷಗಳಲ್ಲಿ ಸಾಲದಿಂದ ಮುಕ್ತನಾಗಬಲ್ಲೆ. ನಿಮ್ಮಗಳಿಂದ ಈ ಜೀವ ಬದುಕಿತು."

"ಅಷ್ಟಾಯಿತಲ್ಲಾ. ಸಾಕು ದೇವರು ಚೆನ್ನಾಗಿಟ್ಟಿರಲಿ."

"ನಿಮ್ಮ ಆಶೀರ್ವಾದ" ಎಂದ ಚಂದ್ರಮೌಳಿ. ದೀರ್ಘ ನಿಶ್ವಾಸ ಬಿಟ್ಟು "ಬಹುಕಾಲದಿಂದ ಹೆಂಡತಿ ಮಕ್ಕಳ ದಂಡಿಮೆಯಿಂದ ಜೀವನ ಸಾಗಿ

ಸುತ್ತಿದ್ದ ದಾರುಣ ಚಿತ್ರವನ್ನು ನೆನೆಸಿಕೊಂಡರೆ ಈಗ 'ಮೈ ಜುಂ' ಎನ್ನುತ್ತೆ. ಧೃತಿಗೆಟ್ಟ ಮನಸ್ಸಿಗೆ ಚೈತನ್ಯ ತುಂಬಿದ ನಿಮ್ಮನ್ನು ಎಂದೆಂದೂ ಮರೆಯಲಾರೆ."

ಚಂದ್ರಮೌಳಿಯನ್ನು ಬೀಳ್ಕೊಟ್ಟು ಮೂವರೂ ಮಾತುಕತೆಯಾಡುತ್ತ ಮುಂದುವರಿದರು; ಚಿತ್ತ ಪ್ರಸಕ್ತ ರಾಜಕೀಯದತ್ತ ಹರಿಯಿತು. ಡಾಕ್ಟರು ರವಿಯ ಭುಜದ ಮೇಲೆ ಕೈಯಿಟ್ಟು–"ರವೀ ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ರಾಜಕೀಯ ಪಕ್ಷಗಳು ಕೆಲವು ನಿಯಮಾವಳಿಗಳನ್ನು ಕಡ್ಡಾಯವಾಗಿ ಜಾರಿಗೆ ತರಬೇಕು. ಅಂದರೆ ಅವು ಕಾನೂನಾಗಿ ಮಾರ್ಪಟ್ಟಲ್ಲದೆ ನಾವು ಸುಖೀ ರಾಜ್ಯವನ್ನು ಕಾಣಲಾರೆವು. ಪಕ್ಷಗಳ ನೀತಿ ನಿಯಮಗಳೊಂದಾದರೆ ಆಚರಿಸುತ್ತಿರುವುದು ಇನ್ನೊಂದು. ಅಲ್ಲದೆ ರಾಜ್ಯಾಂಗದಲ್ಲಿಯೂ ಬಿಗಿ ಸಾಲದು. ಎಲ್ಲಿ ನೋಡಿದರೂ ಅಕ್ರಮ; ಅವ್ಯವಸ್ಥೆ !"

"ಅದೇನೋ ಸಹಜ. ಆದರೂ ಈ ನೀತಿನಿಯಮಾವಳಿಗಳು ರಾಜ್ಯಾಂಗ ಹುಟ್ಟಿಕೊಂಡಾಗಲೇ ಹುಟ್ಟಿಕೊಂಡಿದ್ದಿದ್ದರೆ ಪ್ರಜಾಪ್ರಭುತ್ವ ಸುಭದ್ರವಾಗಿರುತ್ತಿತ್ತು ಎಂದೆನಿಸುತ್ತೆ."

"ಮನಸ್ಸು ಮಾಡಿದರೆ ಇಂದೂ ಆದೀತು." ಎಂದ ರಾಯ.

"ರಾಯರೇ, ಆಳುವ ಪಕ್ಷವಾದ ಕಾಂಗ್ರೆಸ್ ಅನೇಕ ಕಡೆ ಚುನಾವಣೆಯಲ್ಲಿ ಸೋತು ಸ್ಥಾನಮಾನವನ್ನು ಕಳೆದುಕೊಂಡಿತು. ಅನೇಕ ಕಡೆ ನಿಷ್ಠಾವಂತರಾಗಿದ್ದ ಕಾಂಗ್ರೆಸ್ ಹುರಿಯಾಳುಗಳೇ ಸೋತು ಹೋದರು. ದೇಶಕ್ಕೆ ಅಗತ್ಯವಾಗಿ ಬೇಕಾಗಿದ್ದವರೇ ಬಿದ್ದು ಹೋದರೆಂದರೆ ಎಂತಹ ಅನ್ಯಾಯ ? ಇಂತಹ ಪ್ರಸಂಗಗಳನ್ನು ತಪ್ಪಿಸಬೇಕೆಂದರೆ ಪಕ್ಷಗಳ ನಿಯಮಾವಳಿಯಲ್ಲಿ ಬಿಗಿಯಿರದ ಹೊರತು ಸಾಧ್ಯವಿಲ್ಲ." ಎಂದ ಡಾಕ್ಟರು ಸ್ವಲ್ಪ ತಡೆದು ಪುನಃ ಮುಂದುವರಿದರು "ಪ್ರಸಕ್ತ ರಾಜಕೀಯದಲ್ಲಿ ನಡೆಯುವ ಅಕ್ರಮ ಅನ್ಯಾಯ ಅವ್ಯವಹಾರ ಮತ್ತು ಚನಾವಣೆಯನಂತರ ಚುನಾಯಿತ ವ್ಯಕ್ತಿ ಕ್ಷೇತ್ರವನ್ನು ನಿರ್ಲಕ್ಷಿಸುವುದು. ಮೇಲಾಗಿ ಪಕ್ಷವು ನಿಜವಾದ ಅಭ್ಯರ್ಥಿಯನ್ನು ಆರಿಸದೆ ನೀತಿ ಬಾಹಿರನನ್ನು ಚುನಾವಣೆಗೆ ಆರಿಸಿ ಜನತೆಗೆ ಅಸಂತೋಷವನ್ನುಂಟುಮಾಡುವುದು ಈ ನಾನಾ ಕಾರಣಗಳಿಂದ ಸೋಲನ್ನು ಎದುರಿಸಬೇಕಾಗುತ್ತದೆ. ಪಕ್ಷದ ಪ್ರಣಾಳಿಕೆಯಲ್ಲಿ ಒಮ್ಮೆ ಸೋತ ವ್ಯಕ್ತಿ ಆರು ವರ್ಷಗಳಿಗಿಂತ ಹೆಚ್ಚು ಕಾಲ ಅಂದರೆ ಮುಂಬರುವ ಚುನಾವಣೆ

ಯಲ್ಲಿ ಭಾಗವಹಿಸದಂತೆ ಖಡ್ಡಾಯವಾದ ನಿಬಂಧನೆ ಇದ್ದರೆ (ನಿಬಂಧನೆ ಇದೆ; ಆಚರಣೆಯಲ್ಲಿಲ್ಲ) ಯಾವ ವ್ಯಕ್ತಿಯೂ ಚುನಾವಣಾ ಕ್ಷೇತ್ರವನ್ನು ದುರ್ಲಕ್ಷಿಸಲಾರ. ಅಲ್ಲದೆ ಸೋಲಿನ ಬಗ್ಗೆ ಭಯವೂ ಇರುತ್ತೆ. ಮೊದಲನೆಯದಾಗಿ ಪಕ್ಷದ ಪ್ರಾಣಾಳಿಕೆಯಲ್ಲಿ ಕಟ್ಟುನಿಟ್ಟಾದ ಬಿಗಿಯಿದ್ದಲ್ಲಿ ಅನೀತಿವಂತರನ್ನು ಚುನಾವಣೆಗೆ ಅಭ್ಯರ್ಥಿಗಳನ್ನಾಗಿ ಆರಿಸುವುದು ಸಾಧ್ಯವೇ ಇಲ್ಲ. ಇದನ್ನೆಲ್ಲಾ ರಾಜಕೀಯ ಪಕ್ಷಗಳು ಪರಿಶೀಲಿಸಬೇಕು. ಮೇರೆ ಮೀರಿದ ಸ್ವಾರ್ಥ ದೇಶವನ್ನು ವಿನಾಶದ ಹಾದಿಗೆ ತಳ್ಳುವುದರಲ್ಲಿ ಸಂಶಯವಿಲ್ಲ !"

"ಮುಖ್ಯವಾಗಿ ಅವಿದ್ಯಾವಂತರಿಗೆ ಮತದಾನದ ಹಕ್ಕು ಬಂದುದು ತಪ್ಪು ಎನಿಸುತ್ತದೆ. ಕೆಲವು ಚುನಾವಣೆಗಳಲ್ಲಿ ನೀರಸ ಮತದಾನವನ್ನು ನೋಡಲಿಲ್ಲವೇ ? ಅದಕ್ಕೇನು ಹೇಳುತ್ತೀರಿ ?"

"ರಾಯರೆ. ನೀರಸ ಮತದಾನಕ್ಕೆ ಜನಜೀವನದ ಬವಣೆಯೇ ಕಾರಣ. ಇಂದಿನ ಕರಭಾರ ಹಾಗೂ ಜೀವನವೆಚ್ಚ ಜನಸಾಮಾನ್ಯರಿಗೆ ಹೊರಲಾರದ ಹೊರೆಯಾಗಿದೆ. ಅಂದಮೇಲೆ ಈ ದುರ್ಭರ ದಿನಗಳಲ್ಲಿ ಹುರುಪೆಲ್ಲಿಂದ ಬರಬೇಕು ?"

"ಎಲ್ಲಿ ನೋಡಿದರೂ ಸ್ವಾರ್ಥಸಾಧಕರ ಉಪಟಳ ಮೇರೆ ಮೀರಿದೆ."

"ಇದರ ನಿವಾರಣೆ ಹೇಗೆಂಬುದೊಂದು ಸಮಸ್ಯೆಯಾಗಿದೆ."

"ಇಂದಿನ ಕರಭಾರ ಮತ್ತು ಜೀವನವೆಚ್ಚ." ಯೋಚನಾಮಗ್ನನಾಗಿ ಮುಂದುವರಿಸಿದ ರವಿ "ಡಾಕ್ಟರ್, ಕೆಳದರ್ಜೆಯ ನೌಕರರಿಗೆ ಸರಕಾರ ನೀಡುವ ಸಂಬಳದಿಂದ ಜೀವನ ಸಾಗಿಸುವುದು ಕನಸಿನ ಮಾತು. ಅಂದ ಮೇಲೆ ಅವರು ಜೀವನಕ್ಕೆ ಬೇರೆ ದಾರಿಯನ್ನು ಕಂಡುಕೊಳ್ಳಲೇ ಬೇಕು. ಮೇಲಾಗಿ ಮಕ್ಕಳ ವಿದ್ಯಾಭ್ಯಾಸದ ವೆಚ್ಚವೂ ಮಿತಿ ಮೀರುತ್ತಿದೆ. ಒಟ್ಟಿನಲ್ಲಿ ನಮ್ಮ ಶ್ರೀ ಸಾಮಾನ್ಯನು ದಿನದಿನವೂ ಜೀವನದಲ್ಲಿ ಜಡಿಲತೆಯನ್ನೆದುರಿಸಬೇಕು. ಅಂದರೆ ಇಂದಿನ ಪರಿಸ್ಥಿತಿಯೇ ಲಂಚ ಮೋಸ ಅನೀತಿ ಅಧರ್ಮ ಅಸತ್ಯಗಳನ್ನು ಉತ್ಪಾದಿಸುತ್ತಿದೆ !"

"ನಿಜ, ನಿಜ."

"ಈ ಕಾಲದಲ್ಲಿ ಜೀವನ ಬಹಳ ಕಷ್ಟ."

"ಆಡಳಿತದಲ್ಲಿ ಲೋಪದೋಷಗಳಿರುತ್ತವೆಯಾದರೂ ಸಡಿಲತೆ ಹುಟ್ಟ

ಬಾರದಿತ್ತು. ಪ್ರಜಾಪ್ರಭುತ್ವ ಇಷ್ಟು ಬೇಗ ನಿಸ್ಸಾರವಾದೀತೆಂದು ನಾನೆಣಿಸಲಿಲ್ಲ ರವಿ."

"ರಾಯರೇ, ಪ್ರಜಾಪ್ರಭುತ್ವದಲ್ಲಿನ ಸಡಿಲತೆಗೆ ಕಾರಣ ಇಷ್ಟೆ. ದಿನವೂ ಬೀಸುವ ದೊಣ್ಣೆಗೆ ತಲೆಯೊಡ್ಡುವುದಾದಲ್ಲಿ ಬಿಗಿ ಹುಟ್ಟುವುದು ಕಷ್ಟ. ಶಾಸಕರೆಲ್ಲರನ್ನೂ ತೃಪ್ತಿಗೊಳಿಸುವುದು ಸಾಧ್ಯವೇ ? ಬೀಸು ದೊಣ್ಣೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಕುಟಿಲತೆ ಹುಟ್ಟಿ ಸಡಿಲತೆ ಬೆಳೆಯಿತು. ಅಂತಲೇ ಪ್ರಜಾಪ್ರಭುತ್ವ ನಿಸ್ಸಾರವಾಗುತ್ತಿದೆ."

"ಹೇಗೆ ಇದರ ನಿವಾರಣೆ ಡಾಕ್ಟರ್ ?"

"ಮುಖ್ಯವಾಗಿ ವ್ಯಕ್ತಿ ದ್ವೇಷದಿಂದ ಸ್ಥಾನದ್ವೇಷದಿಂದ ಮಂತ್ರಿಮಂಡಲಗಳನ್ನು ಲೀಲಾಜಾಲವಾಗಿ ಕಿತ್ತೊಗೆಯು ಬಲ್ಲ ಸಾಧ್ಯತೆಯು ಬಗ್ಗೆ ಬಿಗಿಯಿದ್ದಲ್ಲಿ ಎಷ್ಟೋ ಅನುಕೂಲ. ಇಷ್ಟಾದರೆ ಮಂತ್ರಿಮಂಡಲ ಚಿಕ್ಕದಾಗಿಯೂ ಚೊಕ್ಕವಾಗಿಯೂ ಬಾಳಿ ತನ್ಮೂಲಕ ಎಷ್ಟೋ ಉಳಿತಾಯವಾಗುತ್ತದೆ. ಹೀಗೆ ಎಲ್ಲಾ ಬಾಬಿನಲ್ಲೂ ತೀವ್ರ ಸುಧಾರಣೆಯಾದರೆ ಕೆಳದರ್ಜೆ ನೌಕರರಿಗೆ ಪರಿಹಾರ ದೊರಕಿಸುವುದು ಕಷ್ಟವೇನಲ್ಲ."

"ಪಾಪ ! ಸರಕಾರದ ಅಡಿಗಲ್ಲೇ ಅವರು. ಅವರ ಸ್ಥಿತಿ ಶೋಚನೀಯವಾದುದರಿಂದಲೇ ಎಲ್ಲೆಲ್ಲೂ ಕರ್ತವ್ಯಲೋಪವಾಗುತ್ತಿದೆ."

"ಹೌದಪ್ಪಾ. ಹೌದು."

"ನಮ್ಮಲ್ಲಿ ಬಿಗಿಯೆಂಬುದೇಯಿಲ್ಲ. ಚುನಾವಣೆಯಲ್ಲಿ ಒಂದೆಡೆ ಸೋತವರು ಇನ್ನೊಂದೆಡೆ ಗೆದ್ದು ಬರುವ ಹಂಚಿಕೆ ಹೂಡುತ್ತಾರೆ ಪಕ್ಷಗಳಲ್ಲಿ ಒಳ ಜಗಳದಿಂದ ಶುದ್ಧೀಕರಣದ ಕಡೆ ಗಮನ ಕೊಡುವಂತಿಲ್ಲ. ಆಡಳಿತದಲ್ಲೂ ಅಷ್ಟೆ; ಪ್ರತಿಯೊಂದು ವ್ಯವಹಾರದಲ್ಲಿಯೂ ಪರರ ಹಸ್ತಕ್ಷೇಪ ನಡೆಯುತ್ತದೆ. ಇದನ್ನು ತಡೆಗಟ್ಟಿದರೆ ಸಾಕಷ್ಟು ಸುಧಾರಣೆಯಾಗುತ್ತದೆ."

"ದೇಶದಲ್ಲಿ ಪ್ರಗತಿಯು ಸಾಧನೆ ಬೇಕಾದಷ್ಟು ನಡೆದಿದೆ. ಗಾಂಧೀಜಿ ಆಶೀರ್ವದಿಸಿದ ಕಾಂಗ್ರೆಸ್ ದೀರ್ಘಾವಧಿ ಅಧಿಕಾರ ನಡೆಸಿ ಸರ್ವತೋಮುಖ ಪ್ರಗತಿಯುನ್ನು ಸಾಧಿಸಿದೆ. ನೆಹರೂರವರಂಥ ಜನಪ್ರಿಯ ವ್ಯಕ್ತಿಯು ಮುಂದಾಳತ್ವದಲ್ಲಿ ದೇಶ ನಡೆದು ಬಂದಿದೆ. ಆದರೂ ಸಾವಿರ ಚಿತ್ತಾರ ಒಂದು ಮಸಿ ನುಂಗಿತು ಎಂಬಂತಾಯಿತೆ ? ಎಂಬ ವ್ಯಸನ ಮೂಡದಿರುವು

ದಿಲ್ಲ." ಕಳಕಳಿಯಿಂದ ನುಡಿದ ರವಿ.

"ರವೀ, ನಾವೆಂದೂ ರಾಜಕೀಯ ಪಕ್ಷಗಳ ನೆರಳಿನಲ್ಲಿ ಬಾಳಿದವರಲ್ಲ. ನಮಗೂ ರಾಜಕೀಯಕ್ಕೂ ಯಾವ ಸಂಬಂಧವೂ ಇಲ್ಲ. ಆದರೂ ಈ ಕಲ್ಮಷದ ನಿರ್ಮೂಲನೆಗಾದರೂ ರಾಜಕೀಯ ಕ್ಷೇತ್ರಕ್ಕೆ ಕಾಲಿಡೋಣವೇ? ಎಂಬ ಯೋಚನೆ ಎಪ್ಪತ್ತರ ಇಳಿವಯಸ್ಸಿನಲ್ಲೂ ಮೂಡುತ್ತದೆ. ಹುಮ್ಮಸ್ಸಿನಿಂದ ಡಾಕ್ಟರು ನುಡಿದಾಗ ಎಲ್ಲರ ಮುಖದಲ್ಲೂ ನಗುವಿನಲೆಯೆದ್ದಿತು."

ಅಷ್ಟರಲ್ಲಿ ದಾರಿ ಸಾಗಿ ಡಾ॥ ಚಂದ್ರರವರ ಚಿಕಿತ್ಸಾಲಯದ ಮುಂಭಾಗಕ್ಕೆ ಬಂದಿದ್ದರು. ಡಾಕ್ಟರು ಅತ್ತ ಹೆಜ್ಜೆ ಹಾಕುತ್ತ ನಾನಿನ್ನು ಬರಲೇ ?" ಎಂದಾಗ ರವಿಯೂ ರಾಯನೂ ನಲ್ಮೆಯಿಂದ ಕೈ ಜೋಡಿಸಿದರು.

೪೩

ರಾಮಣ್ಣ ಆರೋಗ್ಯವಂತನಾಗಿ ಮನೆಗೆ ಹಿಂದಿರುಗಿದ ಮೇಲೆ ವೆಂಕಟೇಶನಿಗೆ ಮದುವೆಯ ಬಗ್ಗೆ ಮತ್ತೆ ಒತ್ತಾಯ ಪ್ರಾರಂಭವಾಯಿತು. ಸಿದ್ಧರಾಮನ ತಂಗಿ ಹೊನ್ನಮ್ಮ ಜೋಗಿಹಳ್ಳಿಯ ಶಾಲೆಯಲ್ಲಿ ಅತಿ ಚುರುಕಾದ ವಿದ್ಯಾರ್ಥಿನಿ. ಶಾಲಾ ವಿದ್ಯಾರ್ಥಿನಿ ವೃಂದದಲ್ಲಿ ಆಕೆಯ ಚಟುವಟಿಕೆಯನ್ನು ಕಂಡ ಮೇಲೆ ವೆಂಕಟೇಶ ಬಹುವಾಗಿ ಮೆಚ್ಚಿಕೊಂಡಿದ್ದ. ಅವಳು ನವಿಲೂರಿನ ಲಿಂಗಣ್ಣನಿಗೆ ಹತ್ತಿರದ ಸಂಬಂಧಿಕಳೆಂಬುದೂ, ಅವನು ಆಗಾಗ ಬಂದು ವಿಚಾರಿಸಿಕೊಳ್ಳುತ್ತಿದ್ದುದೂ ಅಲ್ಲದೆ ತನ್ನೊಂದಿಗೆ ನವಿಲೂರಿಗೆ ಕರೆದುಕೊಂಡು ಹೋಗುತ್ತಿದ್ದುದೂ ತಿಳಿದಿತ್ತು. ಕಳೆದ ವರ್ಷ ಸಿದ್ಧರಾಮನ ತಂದೆಯೂ ಹಠಾತ್ತನೆ ತೀರಿಕೊಂಡಿದ್ದರಿಂದ ಸಿದ್ಧರಾಮನ ತಾಯಿ ಪ್ರತಿಯೊಂದಕೂ ಲಿಂಗಣ್ಣನ ಸಲಹೆ ಪಡೆಯುತ್ತಿದ್ದಳು. ಇನ್ನು ಹೊನ್ನಮ್ಮನ ಮದುವೆಯ ವಿಚಾರಕ್ಕೂ ಸಲಹೆ ಪಡೆಯದಿರುವುದಿಲ್ಲವೆಂಬುದು ಮನವರಿಕೆಯಾಗಿತ್ತಾದರೂ ಸಿದ್ಧರಾಮನ ನಿಕಟವರ್ತಿಯಾಗಿದ್ದು ಇತರರೊಡನೆ ಪ್ರಸ್ತಾಪ ಸರಿಯಲ್ಲವೆಂದು ವೆಂಕಟೇಶ ಸುಮ್ಮನಾದ.

ರಂಗಮಂದಿರದಲ್ಲಿ ಒಮ್ಮೆ ಸಭೆ ಸೇರಿದಾಗ ಕಿರಿಯರ ಬಳಗವನ್ನು ಕುರಿತು ವೆಂಕಟೇಶ ಇಂತೆಂದ "ಗೆಳೆಯರೇ, ನಿಮ್ಮನ್ನುಳಿದು ಎಂದೂ ವೆಂಕಟೇಶ ಯಾವ ಕೆಲಸವನ್ನೂ ಮಾಡಲಿಲ್ಲ. ಇನ್ನು ಮುಂದೆಯೂ ಮಾಡಲಾರ. ಮನೆಯಲ್ಲಿ ತಂದೆ ತಾಯಿಯರು ನನ್ನನ್ನು ಮದುವೆಯಾಗಲೇಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಸಾಮೂಹಿಕ ಲಗ್ನಗಳನ್ನೇರ್ಪಡಿಸಿ ಸುಲಭ ಖರ್ಚಿನಲ್ಲಿ ಮದುವೆ ಮಾಡಬೇಕೆಂಬುದು ನನ್ನ ಇಚ್ಛೆ. ದಯವಿಟ್ಟು ಎಲ್ಲರ ಅಭಿಪ್ರಾಯಗಳನ್ನು ಮುಂದಿಡಿರಿ."

ವೆಂಕಟೇಶನ ಮುಖಭಾವ ಸಂತಸಪೂರಿತವಾಗಿರದೆ ಆಂತರಿಕ ವೇದನೆಯಿಂದ ತುಂಬಿ ಹೋಗಿತ್ತು. ಲಜ್ಜೆ ಮತ್ತು ದುಃಖಗಳಿಂದ ಕೂಡಿದ ಮುಖ ಕೆಂಪುಕೆಂಪಾಗಿತ್ತು. ಮನೋವೇದನೆಯನ್ನು ತೋರಿಕೊಳ್ಳದಿರಲು ಎಷ್ಟೋ ಪ್ರಯತ್ನ ಪಟ್ಟನಾದರೂ ವಿಫಲನಾಗಿ ಹಾಗೇ ಕುಳಿತುಕೊಂಡ. ಗೆಳೆಯನ

ಸ್ಥಿತಿಯನ್ನರಿತ ಸಿದ್ಧರಾಮ ಮತ್ತು ಕಿಟ್ಟು ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡರು. ಮೊದಲಿನಿಂದಲೂ ಮದುವೆಯೆಂದರೆ ವಿರೋಧಿಯಾಗಿದ್ದವನು ಹೇಗೆ ಒಪ್ಪಿಕೊಂಡನೆಂಬುದು ಅಚ್ಚರಿಯನ್ನುಂಟುಮಾಡಿತು. ಅವನ ಆಂತರಿಕ ವೇದನೆಯನ್ನರಿತ ಸಿದ್ಧರಾಮನಿಗೂ ಅತ್ಯಂತ ನೋವಾಯಿತು. ಯೋಚಿಸುತ್ತಾ ಮೌನವಾಗಿ ಕುಳಿತುಕೊಂಡ. ಕಿಟ್ಟು ವೆಂಕಟೇಶನತ್ತ ನೋಡುತ್ತ "ನಿನ್ನ ಸಲಹೆ ಸೂಕ್ತವಾಗಿದೆ ವೆಂಕಟೇಶ್. ಈ ಸಾಲಿನಲ್ಲಿ ಯಾರ್‍ಯಾರ ಮದುವೆ ಇದೆಯೋ ತಿಳಿದುಕೊಂಡು ಮತ್ತೊಮ್ಮೆ ಕೂಡಿದಾಗ ಮಾತಾಡೋಣ."

"ಮದುವೆಯಾಗುವ ವ್ಯಕ್ತಿ ಕುಗ್ಗುತ್ತಾರೆಯೇ ? ಅದೇಕೆ ಅಷ್ಟೊಂದು ವ್ಯಸನ ? ನಿನ್ನ ಮದುವೆಯ ವಿಚಾರ ತಿಳಿದು ನಮಗಿಂದು ಎಷ್ಟೋ ಸಂತೋಷವುಂಟಾಗಿದೆ.

"ಅಷ್ಟೊಂದು ಅಧೀರನಾಗಬಾರದು ವೆಂಕೂ"

"ನಿನಗೆ ಸಂತೋಷವಿಲ್ಲದ ಮೇಲೆ ಒಪ್ಪಿಕೊಂಡೆಯೇಕೆ ?"

"ತಂದೆತಾಯಿಯ ನಿರ್ಬಂಧಕ್ಕೆ ಮದುವೆಯಾಗುವುದೇ ? ಒಪ್ಪಿಕೊಳ್ಳುವುದಾದರೆ ಸಂತೋಷದಿಂದ ಒಪ್ಪಿಕೊ, ಹೀಗಾದರೆ ಹೇಗೆ"

"ನಿನ್ನ ಮನಸ್ಸು ಬಯಸುವವರೆಗೆ ಮದುವೆ ಬೇಡ. ಒಲ್ಲದ ಮದುವೆಗೆ ಒಪ್ಪಿ ಬಾಳುದ್ದಕ್ಕೂ ಭಂಗ ಬವಣೆಗಳ ಬೀಡಾಗಿ ಸಂಸಾರ ಅಸಹ್ಯವಾದೀತು."

"ನಿನ್ನ ಮನಃಸ್ಥಿತಿಯನ್ನು ನೋಡಿದರೆ ಎಂತಹವರ ಮನಸ್ಸೂ ಕರಗೀತು."

"ನೀನು ಮದುವೆಯಾಗಲೇಬೇಕು ವೆಂಕೂ. ಬ್ರಹ್ಮಚರ್ಯ ಅಷ್ಟು ಸುಲಭವಲ್ಲ. ಮನಸ್ಸಿಗೆ ನೆಮ್ಮದಿಯನ್ನು ತಂದುಕೊಂಡು ನಿನ್ನ ಮನದನ್ನೆಯನ್ನು ನೀನೇ ಆರಿಸಿಕೊ."

"ವಯೋಧರ್ಮಕ್ಕನುಗುಣವಾಗಿ ನಡೆಯಬೇಕಷ್ಟೆ ? ಅದಕ್ಕೇಕೆ ವ್ಯಥೆ ?"

ಪ್ರಶ್ನೆಗಳು ಮೇಲಿಂದ ಮೇಲೆ ಬೀಳತೊಡಗಿದಾಗ ವೆಂಕಟೇಶ ಎಲ್ಲರೆಡೆಗೊಮ್ಮೆ ದೃಷ್ಟಿಯನ್ನು ಬೀರಿ ಮ್ಲಾನವಾದ ಮುಖದಲ್ಲಿ ನಗುವನ್ನರಳಿ

ಸಲು ಪ್ರಯತ್ನಿಸಿ ಸುಮ್ಮನಾದ.

"ವೆಂಕಟೇಶ್, ನಿನ್ನ ಮುಖಭಾವವೇ ವ್ಯಥೆಯೊಪ್ಪಿದೆಯೆಂಬುದನ್ನು ಹೇಳುತ್ತಿದೆ. ಮದುವೆ ಎಂದರೆ ಅದೇನು ತುರಂಗ ವಾಸವೇ ? ನಿನಗದರಲ್ಲಿ ಸಂತೋಷವಿಲ್ಲದ ಮೇಲೆ ಹೇಗೆ ಬಾಳು ಹಸನಾದೀತು."

"ಏನೇ ಇರಲಿ. ಇನ್ನೂ ಕೆಲವು ಕಾಲ ದೇಶಸೇವೆ ಮಾಡಬೇಕೆಂಬುದು ಅವನಿಚ್ಛೆ. ಅಪ್ಪ ಅಮ್ಮ ಕೇಳುವಂತಿಲ್ಲದೆ ಒಪ್ಪಿಕೊಂಡಿದ್ದಾನೆಂದು ತೋರುತ್ತೆ. ಸ್ವಲ್ಪ ಕಾಲ ಹೋದರೆ ಸರಿಹೋದೀತು."

"ಆದರೂ ಮದುವೆಯಾಗುವವನು ಕುಸಿಯಬಾರದು."

"ಅವನೊಪ್ಪಿದ ಕನ್ಯೆ ಸಿಕ್ಕಿದನಂತರ ತಾನೇ ಸರಿಹೋಗುತ್ತಾನೆ."

" ಆ ಪುಣ್ಯವಂತೆ ಯಾರೆಂಬುದು ತಿಳಿದು ಬಂದರೆ ಆಕೆ ಎಲ್ಲೇ ಇರಲಿ ಹುಡುಕಿ ತರುವೆ !"

"ತರುವುದಾರಿಗೆ ? ನಿನಗೋ ಅವನಿಗೋ ?"

ಒಡನೆ ನಗುವಿನಲೆಯೆದ್ದಿತು. ಸಾಮೂಹಿಕ ಲಗ್ನಗಳನ್ನೇರ್ಪಡಿಸಲು ಕಿರಿಯರ ಬಳಗ ಒಪ್ಪಿಕೊಂಡಿತು. ಮನೆಯವರ ಅಭಿಪ್ರಾಯ ಕೇಳಿ ಮತ್ತೊಮ್ಮೆ ಕೂಡಲು ತೀರ್ಮಾನಿಸಿದರು. ರಾಜಕೀಯಪಕ್ಷಗಳ ವಿಚಾರ ಪುನಃ ತರ್ಕಕ್ಕೆಡೆಗೊಟ್ಟಾಗ ವೆಂಕಟೇಶ ಪ್ರಸ್ತಾಪಿಸಿದ "ಅಂದು ನೀವೆಲ್ಲರೂ ಕಾಂಗ್ರೆಸ್ಸಿನ ಬಗ್ಗೆ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಂಡಿದ್ದೀರೆಂಬುದು ಗೊತ್ತು. ಆದರೂ ಇನ್ನೊಮ್ಮೆ ಯೋಚಿಸಿರಿ. ಇದರಿಂದ ಮುಂದೆಯೂ ಒಡಕು ಹುಟ್ಟಬಾರದು. ನನ್ನ ಸ್ವಂತ ಅಭಿಪ್ರಾಯ ಹೇಳುವುದಾದರೆ ಕಾಂಗ್ರೆಸ್ಸೇ ವಾಸಿ. ಇತರ ಪಕ್ಷಗಳನ್ನು ಬೆಳೆಸುವುದಾಗಲಿ ಹೊಸ ಪಕ್ಷವನ್ನು ಕಟ್ಟುವುದಾಗಲಿ ನನಗೆ ಸಮಾಧಾನವಿಲ್ಲ. ನಾವು ಯಾವುದೇ ಪಕ್ಷವನ್ನು ಬೆಳೆಸಿದರೂ ಅದರಲ್ಲಿರುವವರು ನಾವು ತಾನೇ ? ಅಂದಮೇಲೆ ಆ ಪಕ್ಷ ಈ ಪಕ್ಷವೆಂದು ಪರದಾಡುವುದು ಪ್ರಯೋಜನವಿಲ್ಲ." ದನಿ ಎದೆಯಾಳದಿಂದ ಹರಿದು ಬಂತು.

"ಆದರೂ ಸಹ...... ಆತ್ಮ ಸಮಾಧಾನವಿಲ್ಲ. ಅಂದು ಒಪ್ಪಿಕೊಂಡಿದ್ದೇನೋ ನಿಜ–ಎಲ್ಲವೂ ಚಂದಣ್ಣನಿಗಾಗಿ ಮತ್ತು ಪ್ರಕೃತ ಪರಿಸ್ಥಿತಿಗಾಗಿ. ಇರುಳು ಕಂಡ ಬಾವಿಗೆ ಹಗಲು ಹಾರಿದಂತಾಯಿತು, ನಮ್ಮ ನಿರ್ಧಾರ!" ಧ್ವನಿ

ಅಸಮಾನದಿಂದ ಹೊರಬಿತ್ತು.

"ಸಮಾಧಾನದಿಂದ ಮಾತಾಡು ಶಂಕರೂ. ಬೇಕಾದಷ್ಟು ಸಮಯ ವಿದೆ ಸ್ವಲ್ಪ ಯೋಚಿಸಕೂಡದೆ ?"

"ತಿಳಿವಿದ್ದೂ ತಿಳಿಗೇಡಿಗಳಾಗಿ ಬಾಳಬೇಕಾದರೆ ಹೇಗೆನಿಸೀತು ?"

"ಇಲ್ಲಿ ಕೇಳು, ನಮ್ಮಲ್ಲಿ ಯಾವುದೇ ಪಕ್ಷವಿದ್ದರೂ ಅದರಲ್ಲಿರವವರು ನಾವು ಮತ್ತು ನಮ್ಮವರು ಎಂಬುದನ್ನು ಮರೆಯಬಾರದು. ನೀನು ಯಾವುದೇ ಹೆಸರಿಂದಲಾದರೂ ಕರೆ. ಅದು ಕಾಂಗ್ರೆಸ್ ಆಗಲಿ ಅಥವಾ ಕಮ್ಯುನಿಜಂ ಆಗಲಿ ನಮಗೆ ನೀತಿ ನಿಯಮಾವಳಿಗಳು ಮುಖ್ಯವೇ ವಿನಾ ಹೆಸರು ಮುಖ್ಯ ವಲ್ಲ. ಕಾಂಗ್ರೆಸ್ಸಿನ ಧ್ಯೇಯಧೋರಣೆಗಳು ಹಿಂದೂಸ್ಥಾನದ ನೀತಿ ನಿಯಮ ಗಳಿಗೆ ಹೊಂದಿಕೊಳ್ಳುವುದರಿಂದ ಅದನ್ನು ಸ್ವಾಗತಿಸುವೆ. ಸಂಸ್ಥೆ ಎಂದರೆ ಬರಿಯ ನಾಲ್ಕಾರು ಮಂದಿಯಿಂದಾಗುವುದಿಲ್ಲ. ಯೋಗ್ಯರೂ ಅಯೋಗ್ಯರೂ ಕೂಡಿಯೇ ಅದು ಸಂಸ್ಥೆಯಾದೀತು. ಆದ್ದರಿಂದ ನಮ್ಮಿಂದಾದಷ್ಟು ಶುದ್ಧೀ ಕರಣ ನಡೆಸೋಣ. ಟೀಕೆಯ ಗೊಡವೆ ಬೇಡ. "ಕರಾವಲಂಬನಂ ದೇಹಿ ಶ್ರೀ ಕೃಷ್ಣ ಕಮಲೇಕ್ಷಣ" ಎಂದು ಪ್ರಾರ್ಥಿಸಿ ಕೆಲಸ ಪ್ರಾರಂಭಿಸೋಣ."

"ಸರಿಯಪ್ಪಾ ! ಸರಿ."

"ಅನಂತೂ, ಇಲ್ಲಿ ಕೇಳು, ಈಗ ರಾಜಕೀಯ ಚಟುವಟಿಕೆ ಇಲ್ಲದೆ ನಮ್ಮೂರು ಬೆಳೆಯುತ್ತಿಲ್ಲವೇನು ? ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಆಹ್ವಾನಿಸಿದಂತೆ ವಿನಾಕಾರಣ ತೊಂದರೆ ತೆಗೆದುಕೊಳ್ಳುತ್ತಿದ್ದೇವೆ."

"ಹೋಗಲಿ ಬಿಡಿರಿ. ಇಂದೇಕೋ ಯಾರಿಗೂ ಸಮಾಧಾನವಿಲ್ಲ."

"ಹಾಗೆ ಬದಿಗೊತ್ತುವುದು ಸರಿಯಲ್ಲ. ಕಳೆದ ಸಾರ್ವತ್ರಿಕ ಚುನಾ ವಣೆಯಲ್ಲಿ ನಾವು ಸಾಮೂಹಿಕವಾಗಿ ಯಾರಿಗೂ ಓಟು ಮಾಡಬಾರದೆಂದು ತೀರ್ಮಾನಿಸಬೇಕಾಯಿತು. ಮುಂದೆಯೂ ಹಾಗಾಗುವುದಾದರೆ ಎಲ್ಲರಿಗೂ ಅಸಮಾಧಾನ ತರುತ್ತದೆ. ಅನಂತರ ಅವರವರ ಇಚ್ಛಾನುಸಾರವಾಗಿ ಓಟು ಮಾಡಬಹುದಲ್ಲದೆ ನಮ್ಮಲ್ಲಿ ಒಗ್ಗಟ್ಟೂ ಉಳಿಯಲಾರದೆಂದುಹೇಳುತ್ತಿದ್ದೇನೆ.

"ಸರಿ ; ನಮ್ಮೂರಿಗೆ ರಾಜಕೀಯ ಚಟುವಟಿಕೆ ಬೇಕೇಬೇಕೆಂಬುದು ಒಮ್ಮತದ ಅಭಿಪ್ರಾಯ. ಅಂದೇ ಚಂದಣ್ಣ ಹೇಳಿದಂತೆ ಕಾಂಗ್ರೆಸ್ಸೇ ಮಾತೃಸಂಸ್ಥೆ. ಅದನ್ನೇ ಬೆಳೆಸೋಣ. ಅದರ ಅಮರ ಭಕ್ತರಾದ ಚಂದಣ್ಣ

ನಿಗೂ ವೆಂಕಟೇಶನಿಗೂ ಸಂತೋಷವಾದರೂ ಆದೀತು."

"ಭಾರತೀಯರಿಗೆ ಕಾಂಗ್ರೆಸ್ಸೇ ಮಾತೃಸಂಸ್ಥೆ. ನಾವು ಅದಕ್ಕಿಂತ ಉತ್ತಮವಾದ ಸಂಸ್ಥೆಯನ್ನು ಕಟ್ಟಬಲ್ಲವೆ ? ನಾವು ತಪ್ಪು ಮಾಡಿ ಸಂಸ್ಥೆಯನ್ನು ದೂಷಿಸುವುದು ಎಂಥಾ ತಿಳಿಗೇಡಿತನ ?"

"ವಿಷಯವನ್ನು ಮತಕ್ಕೆ ಹಾಕಿದರೆ ಕಾಂಗ್ರೆಸ್ಸಿಗೆ ಬಹುಮತವಿದೆಯೆಂಬುದು ಶತಸಿದ್ಧ."

"ಅದಂತೂ ವಾಸ್ತವ್ಯ."

"ಸರಿ, ಮತ್ತೇಕೆ ವಾದ ವಿವಾದ ?" ಅಷ್ಟೇ ಅಲ್ಲ. ನಮ್ಮೂರನ್ನೇ ಒಂದು 'ಪ್ರಯೋಗ ಶಾಲೆ' ಎಂದಿಟ್ಟುಕೊಳ್ಳೋಣ. ಕಾಂಗ್ರೆಸ್ಸಿನ ಶುದ್ಧೀಕರಣ ಎಷ್ಟರ ಮಟ್ಟಿಗೆ ಸಾಧ್ಯ ಎಂಬುದನ್ನು ನಾವೇ ನೋಡಬಹುದು."

ವೆಂಕಟೇಶ ಮನಸ್ಸಮಾಧಾನವಿಲ್ಲದುದರಿಂದ ಅಲ್ಲಿ ಬಹಳ ಹೊತ್ತು ಕೂಡದೆ ಹೊರಡಲು ಎದ್ದು ನಿಂತ. ಸಾಮೂಹಿಕ ವಿವಾಹಕ್ಕೆ ಎಲ್ಲರ ಸಹಕಾರವಿದ್ದರೂ ಮನೆಯವರನ್ನು ಕೇಳುವುದುಳಿದಿತ್ತು. ಅದಕ್ಕಾಗಿ ಮತ್ತೊಮ್ಮೆ ಕೂಡಲು ತೀರ್ಮಾನಿಸಿ ಎಲ್ಲರೂ ಹೊರಡಲು ಅನುವಾದರು.

ಆ ವರ್ಷ ಲಗ್ನಯೋಗವಿಲ್ಲದಿದ್ದುದರಿಂದಲೋ ಏನೋ; ಗೆಳೆಯರ ಮನೆಗಳಲ್ಲಿ ಆಗಲಿದ್ದ ಒಂದೆರಡು ಮದುವೆಗಳೂ ಮುಂದೂಡಲ್ಪಟ್ಟುವು. ಹಾಗಾದುದು ವೆಂಕಟೇಶನಿಗೆ ಅತ್ಯಂತ ಸಂತೋಷವನ್ನುಂಟುಮಾಡಿತಲ್ಲದೆ ನಾನಾ ಚಟುವಟಿಕೆಗಳಿಗೆ ಕಾಲಾವಕಾಶವನ್ನೂ ಒದಗಿಸಿತು. ಅದು ವೆಂಕಟೇಶನಿಗೆಷ್ಟು ಸಂತಸವನ್ನುಂಟುಮಾಡಿತೋ ರಾಜಮ್ಮನಿಗೆ ಅಷ್ಟೇ ದುಃಖವನ್ನು ತಂದಿತು.

೪೪

ಉದಯರವಿ ಮೆಲ್ಲಮೆಲ್ಲನೆ ಬಾನೇರುತ್ತಿದ್ದಾನೆ. ಸುಂದರ ಸುಪ್ರಭಾತದ ಮಧುರ ವಾತಾವರಣ ಮನಸ್ಸಿಗೆ ಆಹ್ಲಾದವನ್ನು ತರುವಂತಿತ್ತು. ಬೀಸಿ ಬರುತ್ತಿದ್ದ ತಂಗಾಳಿಗೆ ಮೈಯೊಡ್ಡಿ ತೋಟಗಾರಿಕೆಯಲ್ಲಿ ಮಗ್ನರಾಗಿದ್ದ ಮಕ್ಕಳ ಮೈ ಚಕಮಕಿಯಾಗಿತ್ತು. ಅಂದು ಶಾಲೆಗೆ ಬಿಡುವಿದ್ದುದರಿಂದ ಅನಾಥ ಕನ್ಯಾ ವಿದ್ಯಾಲಯದ ವಿದ್ಯಾರ್ಥಿನಿಯರು ಪೂರ್ಣ ಕಾಲವನ್ನು ತೋಟಗಾರಿಕೆಯಲ್ಲಿ ಕಳೆಯಲಿದ್ದರು. ಕಳೆಯನ್ನು ಕಿತ್ತು ಅಗತೆಯಲ್ಲಿ ಮಗ್ನಳಾಗಿದ್ದ ಗಂಗು ಸುತ್ತಮುತ್ತ ಕೇಳಿ ಬರುತ್ತಿದ್ದ ಓರಗೆಯರ ಕಿಲಕಿಲ ನಗುವನ್ನು ಗಮನಿಸುತ್ತ ಮುಖದಲ್ಲಿ ಮಂದಹಾಸವನ್ನು ಬೀರಿ,

"ಜಾನೀ, ನಿನ್ನೆ ಚಿಕ್ಕಪ್ಪ ಇಲ್ಲಿಗೆ ಬಂದಿದ್ದಾಗ ನನ್ನನ್ನು ಊರಿಗೆ ಬರಲು ಹೇಳಿದರು; ನಾನು ಒಪ್ಪಲಿಲ್ಲ, ಕಣೆ!"

"ಒಳ್ಳೆಯ ಕೆಲಸ ಮಾಡಿದೆ. ನೀನು ಹೋಗಿದ್ದರೆ ಗತಿ ಗಂಗಮ್ಮನ ಪಾಲಾಗುತ್ತಿತ್ತು."

"ತುಂಬ ಕರೆದರು!"

ಒಡನೆ ಅನೇಕ ದನಿಗಳು ಹೊರಬಿದ್ದುವು.

"ಚೆನ್ನಾಗಿ ಬೆಳೆದಿದ್ದೀಯೆ! ನೀನೀಗ ಮನೆಗೊಂದು ಆಳಾಗುತ್ತಿ ಆದಕ್ಕೆಂದೇ ಬಹಳ ಕರೆದಿರಬೇಕು!"

"ಅಷ್ಟೇಯೇನು? ನಾಲ್ಕು ಕಾಸು ಸಿಕ್ಕಿದರೆ ಕುಂಟನಿಗೋ ಕುರುಡನಿಗೋ ಕಟ್ಟಿಬಿಡುತ್ತಾರೆ ಕೊನೆಗೆ ಮುದುಕನಾದರೂ ಸೈ."

"ಕಂಡವರ ಮಕ್ಕಳನ್ನು ಬಾವಿಗೆ ತಳ್ಳುವುದು ಸುಲಭ ಕಣೆ."

"ಒಮ್ಮೆ ಹೋದೆಯೆಂದರೆ ನಿನ್ನ ಬಿಡುವುದೇ ಇಲ್ಲ." ಕಿತ್ತು ಹಾಕಿದ್ದ ಕಳೆಯನ್ನು ಬುಟ್ಟಿಗೆ ತುಂಬುತ್ತಿದ್ದ ಶಾಂತ ಎಚ್ಚರಿಸಿದಳು.

"ಅವಳು ಹೇಗೆ ಹೋದಾಳು? ಚಿಕ್ಕಪ್ಪ ಚಿಕ್ಕಮ್ಮ ಯಾರೋ ಗೊತ್ತೇಯಿಲ್ಲವಲ್ಲಾ? ಅವರನ್ನು ನೆಚ್ಚಿಕೊಂಡು ಹೋಗುವುದಕ್ಕೆ ಯಾರಿಗಾದರೂ ಭಯವಾದೀತು."

"ನಾನು ಹೋದೇನಾ ? ಕತ್ತುಕೊಯ್ದರೂ ಹೋಗುವುದಿಲ್ಲ."

"ಆದಿನ ಧರಣಿಯ ಮಾವ ಬಂದಿದ್ದಾಗಲೂ ಹಾಗೇ ಆಯಿತು. ಅವಳು ಅವರೊಂದಿಗೆ ಮಾತಾಡಲೂ ಭಯ ಪಡುತ್ತಾಳೆ."

"ಅಂದು ಪುಟ್ಟಮ್ಮನವರು ಇಲ್ಲೇ ಇದ್ದರು. ಅವಳನ್ನು ಹೊರಗೆ ಬಾ ಎಂದು ಅವರು ಎಷ್ಟು ಹೇಳಿದರೂ ಅವಳು ಹೊರಗೆ ಬರಲೇ ಇಲ್ಲ."

"ಓಹೋ, ನಿನ್ನದಿನ್ನೂ ಆಗಲಿಲ್ಲವೇನೇ ? ನಾನಾಗಲೇ ಮುಗಿಸಿ ಬಿಟ್ಟೆ !"

"ಓ ಕೃಷ್ಣೀ, ಇತ್ತ ಒಂದು ಕೊಡಾ ನೀರು ತಾ."

"ಸುಬ್ಬಲಕ್ಷ್ಮಿಯ ಕೆಲಸ ಚುರುಕಾದರೂ ಪ್ರಯೋಜನವಿಲ್ಲ. ಕಳೆ ಹಾಗೆಹಾಗೇ ಉಳಿದಿದೆ."

"ಅವಳದು ಎಂದೆಂದೂ ಹಾಗೆಯೇ; ಅವಸರದಿಂದ ಮಾಡಿದರೆ ಕೆಲಸ ಹಾಳಲ್ಲದೆ ಮತ್ತೇನು ?"

"ಅದೆಲ್ಲಾ ಬಿಡಿರಿ. ಕಳೆ ಉಳಿದಿದ್ದರೆ ಮತ್ತೊಮ್ಮೆ ಕೀಳುವೆ. ನೀವೊಮ್ಮೆ ಮಾಡುವಷ್ಟರಲ್ಲಿ ನಾನು ಎರಡು ಬಾರಿ ಮಾಡಿಯೇನು !"

"ಆಗಲೂ ನೀನು ನಮ್ಮಷ್ಟೇ ಮಾಡುವುದು ಎಂದಾಯ್ತು !"

ಒಮ್ಮೆಲೆ ಎಲ್ಲೆಲ್ಲೂ ಕಿಲಕಿಲನೆ ನಗುವಿನಲೆಯೆದ್ದಿತು.

"ಧರಣಿ ! ಇದೇನೆ ಮೈ ?"

"ನೀರೆತ್ತುವಾಗ ಚೆಲ್ಲಿತು."

"ಮೈ ಪೂರ್ತಿ ಒದ್ದೆ ಮಾಡಿಕೊಂಡಿದ್ದೀ ? ಹಿಂಡು; ಬಿಸಿಲಲ್ಲಿ ಆರುತ್ತದೆ."

ಧರಣಿ ಬಟ್ಟೆಯನ್ನು ಹಿಂಡಿಕೊಂಡಳು. ಅಷ್ಟರಲ್ಲಿ ಕೆಲಸಕಾರ್ಯ ಗಳನ್ನವಲೋಕಿಸುತ್ತಿದ್ದ ಉಪಾಧ್ಯಾಯಿನಿ ಅತ್ತಲೇ ಒಂದಳು. ಸಾಲು ಸಾಲಾಗಿನ ಪಾತಿಗಳಲ್ಲಿ ಸಾಲಾಗಿ ಕುಳಿತು ನಗೆಚಾಟಿಕೆಯ ಮಾತುಕತೆಗಳಲ್ಲಿ ತೊಡಗಿದ್ದ ಮಕ್ಕಳು ಉಪಾಧ್ಯಾಯಿನಿಯು ಹತ್ತಿರ ಬಂದುದನ್ನು ಕಂಡೊಡನೆ ಮಾತನ್ನು ಅಲ್ಲಿಗೆ ನಿಲ್ಲಿಸಿದರು. ನೀರಿನ ಕೊಡವನ್ನು ಬಿಟ್ಟು ಕುಂತಳಮ್ಮ ನೋಡಿಯಾಳೆಂದು ಅತ್ತ ತಿರುಗಿ ನಿಂತಿದ್ದ ಧರಣಿ ಮುಖದಲ್ಲಿ ತುಂಟ ನಗೆ ಯನ್ನು ತೇಲಿಸಿದಳು. ಅಲ್ಲಿಂದಲೇ ಗಮನಿಸಿದ್ದ ಕುಂತಳೆಯು ಕೇಳಿದಳು

"ಅದೇಕೆ ಮಗೂ ? ಮೈ ಒದ್ದೆಯಾಗಿದೆ ?"

"ನೀರೆತ್ತುವಾಗ ಚೆಲ್ಲಿತು."

"ಎಚ್ಚರಿಕೆಯಿಂದ ಮಾಡಬಾರದೇ ?"

"ಒದ್ದೆ ಬಟ್ಟೆಯಲ್ಲಿರಬಾರದು. ಬಿಚ್ಚಿ ಒಣ ಹಾಕು."

ಆಗಲೇ ಹಿಂಡಿದ್ದೇನೆ; ಕೊಂಚ ಹೊತ್ತಿನೊಳಗಾಗಿ ಒಣಗೀತು"

"ಬೇಡ ಒಳಗೆ ಬಾ." ಎಂದ ಕುಂತಳೆಯು ಧರಣಿಯೊಡನೆ ಒಳಗಡೆ ಹೋದಳು. ಹುಡುಗಿಯರ ದಳ ಮತ್ತೆ ಹುರುಪಿನಿಂದ ಕೆಲಸ ಮಾಡತೊಡಗಿತು.

"ಪನ್ನಾ, ನೀನು ದಿನಾ ಮಣ್ಣು ಹೊರುವ ಕೆಲಸ ಮಾಡುವುದು ಒಳ್ಳಿತು. ದಿನೇ ದಿನೇ ಕುಂಬಳಕಾಯಿ ಆಗುತ್ತಿದ್ದೀಯೋ."

"ನೀನೇನು ಕಡಿಮೆ ?" ನಡುವೆ ಬಾಯಿ ಹಾಕಿದಳು ಜಾನಕಿ.

"ನಾನು ಸರಿಯಾಗಿದ್ದೀನಿ. ಅಲ್ಲದೆ ನಿನ್ನ ಹಾಗೆ ಒಣಕಡ್ಡಿಯಾಗಿರಬೇಕೇನು ?"

"ಅಯ್ಯೋ ! ನೀನೊಂದು ಪೆದ್ದು. ತೆಳ್ಳಗಿರುವುದೊಂದು ಮೋಜು ಕಣೆ !"

"ಪಾಪ, ಅಷ್ಟೆಲ್ಲಾ ಅವಳ ತಲೆಗಿನ್ನೂ ಹೋಗಲಿಲ್ಲ."

"ನೀವು ಏನಾದರೂ ಅನ್ನಿ. ಅದು ನಮಗೆ ಭಗವಂತ ಕೊಟ್ಟ ಭಾಗ್ಯ."

"ನಿಜ ಜಾನಕಿ."

"ಅದೆಲ್ಲಾ ಇರಲಿ. ಊರಿನಲ್ಲಿರುವಾಗ ನರಸಾಪುರದಲ್ಲೂ ಸೂರ್ಯ ಚಂದ್ರ ಕಾಣಿಸುತ್ತಾರೆ ಜಯಪುರದಲ್ಲೂ ಕಾಣಿಸುತ್ತಾರೆ ಅದು ಹೇಗೆ ? ಎನ್ನಿಸುತ್ತಿತ್ತು. ನನಗಾಗ ಆಚ್ಚರಿಯೋ ಅಚ್ಚರಿ. ಹಾಗೊಮ್ಮೆ ಅಪ್ಪನೊಂದಿಗೆ ಕೇಳಿದಾಗ ಊರಿಗೊಂದು ಸೂರ್ಯ ಇರುತ್ತಾನೆ ಎಂದಿದ್ದರು. ನನಗೊಂದೂ ಅರ್ಥವಾಗಿರಲಿಲ್ಲ ಕೃಷ್ಣೀ."

"ಈಗ ಅರ್ಥವಾಯಿತೇ ?"

"ಅಲ್ಲವೇ ? ಬದುಕು ಸಾರ್ಥಕವಾಗಬೇಕಾದರೆ ವಿದ್ಯೆ ಇರಬೇಕು ಕಣೆ."

"ನಾನೇನೋ 'ಟೈಪ್ ರೈಟಿಂಗ್' ಕಲಿಯುವೆ."

"ನಾನು 'ಮೇಡಂ' ಆಗುತ್ತೇನೆ."

"ಮೇಡಂ ಆಗಬೇಕಾದರೆ ಬಹಳ ಓದಬೇಕು."

"ಚೆನ್ನಾಗಿ ಓದಿದರೆ ಸರಸಕ್ಕನಿಗೆ ಬಂದ ಹಾಗೆ ವಿದ್ಯಾರ್ಥಿವೇತನ ಬರುತ್ತೆ."

"ಮತ್ತೆ ದಿನಾಲೂ ತಪ್ಪು ತಪ್ಪು ಓದುತ್ತೀ? "

"ತುಂಗೂ ನೀನೊಳ್ಳೆ ಚೆನ್ನಾಗಿ ಹೇಳುತ್ತಿದ್ದಿ. ಒಂದೇಸಲಕ್ಕೆ ಎಲ್ಲಾ ಬಂದುಬಿಡುತ್ತ್ಯೇನೆ ?" ಎಂದು ಜಾನಕಿ ಕೇಳಿದೊಡನೆಯೆ ಪನ್ನಳಿಗೆ ಹುರುಪು ಬಂದಂತಾಗಿ ಪುನಃ ಹೇಳಿದಳು "ತರಗತಿಯಲ್ಲಿ ಮೇಡಂ ಮುಂದೆ ಓದುವಾಗ ಮಾತ್ರ ತಪ್ಪುತ್ತೆ! ನಾನೇ ಓದಿಕೊಂಡರೆ ಒಂದೂ ತಪ್ಪುವುದಿಲ್ಲ."

ಹುರುಪಿನಿಂದ ನುಡಿದಾಗ ಅರಳಿದ ಕಣ್ಣುಗಳಲ್ಲಿ ಹೊಳಪು ಮೂಡಿತು.

"ಹಾಗಿದ್ದರೆ ನೀನು ಮೇಡಂ ಆಗುತ್ತಿ. ಮಂಜುಳ ನರಸಾಗುತ್ತಾಳಂತೆ. ನಾನೇನಾಗಲಿ ಎಂದು ಯೋಚಿಸುತ್ತಿದ್ದೇನೆ."

"ನೀನು ಡಾಕ್ಟರಾಗು ?"

ಕಿಲಕಿಲನೆ ನಕ್ಕಳು ಗಂಗಾ.

"ಡಾಕ್ಟರಾಗಬೇಕಾದರೆ ಎಷ್ಟು ಓದಬೇಕು ಗೊತ್ತೇನೆ ?"

ಮುಖಬಿಂಬದಲ್ಲಿ ಮಿನುಗಿದ ನಗುವೇ ಉತ್ತರವಾಯ್ತು.

"ಜಾನಕಿ ತುಂಬ ಜಾಣೆ ಎನ್ನಿಸಿಕೊಂಡಿದ್ದಾಳೆ." ಅವಳು ಹೇಗಾದರೂ ಜೀವನ ಮಾಡುತ್ತಾಳೆ."

ನನ್ನನ್ನೂ ಕಟ್ಟಿಕೊಂಡು ನಮ್ಮಮ್ಮ ಬಾವಿಗೆ ಬಿದ್ದದ್ದು ನೆನಸಿಕೊಂಡರೆ ನಮ್ಮಿಂದ ಏನಾದರೂ ಆದೀತೆಂದು ನನಗೆನಿಸುವುದಿಲ್ಲ ಕಣೆ. ನನ್ನನ್ನು ಯಾರೋ ಬದುಕಿಸಿದರು. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಂಬುದಕ್ಕೆ ಇದೊಂದು ನಿದರ್ಶನ. ಏನೇನು ಆಗಬೇಕೋ, ಅದು ಆದೀತೇ ಹೊರತು ನಾವು ಯೋಚಿಸಿದಂತಾಗುವುದಿಲ್ಲ."

ಹೌದು ಗಂಗೂ, ನಾವಿಲ್ಲಿಗೆ ಬರುತ್ತೇವೆಂದು ಯಾರಿಗೆ ಗೊತ್ತಿತ್ತು ? ನಾವು ಯೋಚಿಸಿದ್ದುವೇನು ?"

"ಹಾಗಿದ್ದರೆ ನೀನೇನೂ ಕಲಿಯುವುದಿಲ್ಲವೇ ?"

"ಹಾಗೆಂದವರುಂಟೇ ? ದೈವವಶಾತ್ ಈ ಅವಕಾಶ ಸಿಕ್ಕಿದೆ. ಸಾಧನೆ

ಮಾಡೋಣ ಫಲಾಫಲ ಭಗವಂತನಿಗೆ ಸೇರಿದ್ದು." ಸಾವಧಾನದಿಂದ ನುಡಿದಳು ನಾಗು. ಹಿಂದಿನ ದಿನದ ಗೀತೆಯ ಪಾಠ ಮನದಲ್ಲಿ ಅಚ್ಚಳಿಯದುಳಿದಿತ್ತು.

"ಅದೇಕೋ ಕನ್ನಿಕಾ ಅಳುತ್ತಿದ್ದಾಳೆ" ಸುದ್ದಿ ತಂದವಳು ಸುಬ್ಬಿ.

ಒಡನೆಯೇ ಹುಡುಗಿಯರು ಅತ್ತ ಹೋದರು. ಕಳೆಕೀಳುತ್ತಿದ್ದ ಕನ್ನಿಕಾ ಕುಳಿತಲ್ಲಿಯೇ ಮುಸುಮುಸು ಅಳುತ್ತಿದ್ದಳು. ನಾಗು ಅವಳನ್ನು ಸಂತೈಸುತ್ತ ಏನೆಂದು ಕೇಳಿದಾಗ ಅವಳಿಗೆ ತೀವ್ರ ಹೊಟ್ಟೆನೋವೆಂದು ತಿಳಿಯಿತು. ಅವಳನ್ನು ಒಳಗಡೆ ಕರೆದುಕೊಂಡು ಹೋಗಿ ಮಲಗಿಸಿ ಕುಂತಳಮ್ಮನಿಗೆ ವರದಿ ಮಾಡಿದಳು. ಹಿತ್ತಿಲಲ್ಲಿ ಮಕ್ಕಳೊಂದಿಗೆ ತರಕಾರಿಯ ಗಿಡಗಳನ್ನು ನಾಟಿ ಹಾಕುತ್ತಿದ್ದ ಕುಂತಳಮ್ಮ ಒಳ ಬಂದಳು.

"ಡಾಕ್ಟರಿಂದ ಔಷಧ ತರಲೇ ?" ಶಾಂತ ಕೇಳಿದಳು.

"ಔಷಧವಿದೆ."

"ಡಾಕ್ಟರಿಗೆ ತಿಳಿಸಲೇ ?"

"ಈಗಲೇ ಬೇಡ."

ಕನ್ನಿಕಾ ಹೊಟ್ಟೆ ನೋವಿನಿಂದ ಹೊರಳಾಡುತ್ತಿದ್ದಳು. ನಾಗು ಅವಳ ಬಳಿ ಕುಳಿತುಕೊಂಡಳು. ಕಣ್ಣಿನಿಂದ ಧಾರಾಕಾರವಾಗಿ ನೀರು ಸುರಿಸುತ್ತ ನಾಗುವಿನ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು, ಹೇಳಿದಳು "ಓ ! ನಾಗು ನೀನೆಲ್ಲೂ ಹೋಗಬೇಡ ; ಇಲ್ಲೇ ಇರು. ಡಾಕ್ಟರಿಗೂ ಹೇಳುವುದು ಬೇಡ ; ನನಗಿಷ್ಟರಲ್ಲೇ ಕಡಿಮೆಯಾದೀತು."

"ಆದೇಕೆ ಹೇಳಬಾರದು? ಚುಚ್ಚು ಮದ್ದು ಕೊಟ್ಟಾರೆಂದು ಭಯವೇ".

"ಇಲ್ಲ ನಾಗೂ."

"ನನಗೆಲ್ಲಾ ಗೊತ್ತು."

"ನೀನು ಏನಾದರೂ ಅಂದುಕೊ." ಕನ್ನಿಕಾ ಸಪ್ಪೆ ಮೋರೆಯಿಂದ ನುಡಿದಳು. ಕುಂತಳೆಯು ಮಾತ್ರೆಯನ್ನೂ ನೀರನ್ನೂ ತೆಗೆದುಕೊಂಡು ಬಂದಳು. ಕನ್ನಿಕಳನ್ನು ಸಂತೈಸಿ ಮಾತ್ರೆಯನ್ನು ಕೊಟ್ಟು ನಾಗುವನ್ನು ಬಳಿಯಲ್ಲಿರಲು ಹೇಳಿ ಹೋದಳು. ನಿದ್ದೆಯ ಮಂಪರದಲ್ಲಿ ಕನ್ನಿಕಾ "ಅಮ್ಮಾ" ಎಂದು ಕನವರಿಸಿದಾಗ ನಾಗುವಿನ ಮನದಲೆಯಲ್ಲಿ ಅಳಿದ ಅಮ್ಮ

ತೇಲಿ ಬಂದಳು. ಚಿತ್ತಭಿತ್ತಿಯಲ್ಲಿ ಅಳಿದ ಬಾಳಿನ ರುದ್ರನಾಟಕದ ದೃಶ್ಯಗಳನೇಕವು ಸುಳಿಸುಳಿದಳಿದುವು. ಬಡತನದ ಬವಣೆಯೊಂದಿಗೆ ಕುಡುಕ ತಂದೆಯ ಪೈಶಾಚಿಕ ಮನೋವೃತ್ತಿಗೆ ಸಿಲುಕಿ ಬಾಳಲಾರದೆ ಜೀವತೆತ್ತ ತಾಯಿಯ ಅತ್ಯಂತ ದಾರಣ ಅಂತ್ಯ ಸ್ಮರಣೆಯಲ್ಲಿ ಸುಳಿದಾಗ ನಾಗು ಅರಳಿಯೆಲೆಯಂತೆ ದೇಹದಾದ್ಯಂತ ತರತರನೆ ನಡುಗಿದಳು. ತನ್ನನಂತರ ಮಗಳು ಕಷ್ಟಕ್ಕೆ ಸಿಕ್ಕಬಾರದೆಂಬುದು ಅಮ್ಮನ ಇಚ್ಛೆಯಾಗಿತ್ತು. "ಅಮ್ಮಾ!" ಎನ್ನುತ್ತ ಕನ್ನಿಕೆಯು ನರಳುತ್ತಲೂ ಯೋಚನೆ ತುಂಡುಗಡಿಯಿತು.

"ನಾನಿಲ್ಲಿರುವೆ ಕನ್ನಿಕಾ, ಅದೇಕೆ ಕನವರಿಸುತ್ತೀ ? ಹಾಯಾಗಿ ಮಲಗಿ ನಿದ್ದೆ ಮಾಡು." ಎಂದಳು ನಾಗು.

ಕನ್ನಿಕಾ ಕಣ್ತೆರೆದು ನೋಡಿ ಅಲುಗದೆ ಮಲಗಿದಳು. ಕನ್ನಿಕೆಯ ನರಳುವಿಕೆ ಗತಕಾಲದ ಅನೇಕ ಚಿತ್ರಗಳನ್ನು ಚಿತ್ತಭಿತ್ತಿಯಲ್ಲಿ ಮೂಡಿಸಿತು. ತಾಯಿಯು ಕೊನೆಯ ದಿನಗಳಲ್ಲಿ "ನಾಗೂ, ನನ್ನೊಂದಿಗೆ ಎಲ್ಲಿಗಾದರೂ ಬರಲು ಸಿದ್ಧವಿದ್ದೀಯೇನು ?" ಎಂದು ಅನೇಕ ಬಾರಿ ಕೇಳಿದ್ದುದೂ ತನಗಾಗ ಅರ್ಥವಾಗದೆ "ಎಲ್ಲಿಗಾದರೂ ಹೋಗುವಿರೇನು " ಎಂದು ತಾಯಿಯನ್ನೇ ಪ್ರಶ್ನಿಸಿದ್ದುದೂ ನೆನಪಿನಲ್ಲಿ ಮೂಡಿತು.

"ಹ್ಞೂ, ಮಗೂ. ನಾನು ಸ್ವರ್ಗಕ್ಕೆ ಹೋಗುವೆ."

"ಅದೆಲ್ಲಿದೆ ? ಯಾರಿದ್ದಾರೆ ಅಲ್ಲಿ ?"

"ನಮ್ಮವರೆಲ್ಲಾ ಅಲ್ಲಿದ್ದಾರೆ. ನಿನಗೇನೇನು ಬೇಕೋ ಅದು ಅಲ್ಲುಂಟು."

"ಹಾಗಿದ್ದರೆ ಬರುವೆ." ಎಂದು ಸಡಗರದಿಂದ ಉತ್ತರಿಸಿದ್ದುದು ನೆನಪಾಯಿತು. ದಿನವಿಡೀ ಕಂಬನಿಯ ಕಾಲುವೆಯನ್ನು ಹರಿಸುತ್ತಿದ್ದ ತಾಯಿಯ ಕರುಣಾಜನಕ ಮೂರ್ತಿಯೊಮ್ಮೆ ಮನದಲೆಯಲ್ಲಿ ಸುಳಿದು ಬಂತು. ಮಗುವನ್ನೂ ನೂಕಿ ತಾನೂ ಬಾವಿಗೆ ಹಾರಿಕೊಂಡುದುದನ್ನು ಯಾರೋ ನೋಡಿ ಮಗುವನ್ನೆತ್ತಿ ತಾಯಿಯನ್ನು ಎತ್ತುವಷ್ಟರಲ್ಲಿ ಕೈ ಮಿಂಚಿ ಹೋಗಿತ್ತು. ಆ ಘೋರ ಪ್ರಸಂಗವನ್ನು ನೆನೆದ ನಾಗು ಕಂಬನಿಯ ಕಾಲುವೆಯನ್ನು ಹರಿಸಿದ ನಂತರ ದುಃಖದುಬ್ಬರವನ್ನು ಹತ್ತಿಕ್ಕಿ ಮನಸ್ಸಿನಿಂದ ಆ ದುರ್ಭರ ಪ್ರಸಂಗವನ್ನು ಪ್ರಯತ್ನಪೂರ್ವಕವಾಗಿ ತೊಡೆದು ಹಾಕಲು ಪ್ರಯತ್ನಪಟ್ಟಳು. ಪ್ರಾಯಶಃ ನೋವಿನಿಂದ ಹೊರಳಾಡುತ್ತಿದ್ದ ಕನ್ನಿಕೆಯೂ ಅಮ್ಮ

ನನ್ನು ನೆನೆದೇ ಕಂಬನಿ ಕರೆದಿರಬೇಕು ಎಂದೆನಿಸಿದಾಗ ನಾಗುವಿನ ಹೃದಯ ಕರಗಿತು. ಕನ್ನಿಕೆಯ ಕೆನ್ನೆಯನ್ನು ನಲ್ಮೆಯಿಂದ ನೇವರಿಸುತ್ತ ನಾಗು ಹೇಳಿದಳು "ಕನ್ನಿಕಾ, ನೀನೇನೂ ಯೋಚಿಸಬೇಡ, ನಾನು ನಿನ್ನ ಬಳಿ ಇರುವೆ."

ನಿದ್ದೆಯ ಮಂಪರದಲ್ಲಿದ್ದ ಕನ್ನಿಕೆಯ ಮುಖ ತುಸು ಅರಳಿತು. ನಾಗುವಿನ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡಳು.

೪೫

ಜೋಗಿಹಳ್ಳಿಯ ವಾತಾವರಣ ಬಹಳ ಸಂಭ್ರಮದಿಂದ ಕೂಡಿತ್ತು. ರಂಗ ಮಂದಿರದ ಮುಂದಿನ ಹಸುರುವಾಣಿಯ ಚಪ್ಪರದಲ್ಲಿ ಸಾಮೂಹಿಕ ವಿವಾಹಗಳನ್ನು ನಡೆಸಲು ಚಂದು ಮುಂದಾಳಾಗಿ ನಿಂತುಕೊಂಡಿದ್ದ. ಕಿರಿಯರ ಬಳಗದ ತರುಣರಿಗೆ ನೂರ್ಮಡಿಯ ಉತ್ಸಾಹ. ಮದುವೆಯ ಸಮಾರಂಭದ ಸಂತಸದ ಸಲುವಾಗಿ ಕಿರಿಯರ ಬಳಗದ ದಿನಾಚರಣೆಯನ್ನಾಚರಿಸಿ ಹಾಸ್ಯ ಪ್ರಧಾನವಾದ ಚೌ ಚೌ ನಾಟಕಗಳನ್ನಾಡಿ ಎಲ್ಲರನ್ನೂ ನಗಿಸಿ ನಕ್ಕು ನಲಿದರು. ವೆಂಕಟೇಶನ ಮನದ ಬಯಕೆಯಂತೆ ಹೊನ್ನಮ್ಮ ನವವಧುವಾಗಿ ಹಸೆ ಮಣೆಯನ್ನಲಂಕರಿಸಿದಳು. ಲಿಂಗಣ್ಣ ಸ್ವತಃ ಧಾರೆಯೆರೆದು ಕೊಡಲು ಪತ್ನೀ ಸಮೇತನಾಗಿ ಬಂದಿದ್ದ.

ಅಂದೇ ವೆಂಕಟೇಶ ಶಿವಮ್ಮನನ್ನು ಮುಂಚಿತವಾಗಿ ಬರಬೇಕೆಂದು ಒತ್ತಾಯ ಪಡಿಸಿದ್ದ. ಬಹುಕಾಲದ ನಂತರ ಶಿವೆ ಮಕ್ಕಳೊಂದಿಗೆ ಜೋಗಿ ಹಳ್ಳಿಗೆ ಪದಾರ್ಪಣೆ ಮಾಡಿದಳು. ಸರಸು ಮತ್ತು ವಿಮಲೆಯರು ಕಾಲೇಜಿಗೆ ಬಿಡುವಿರಲಿಲ್ಲವಾದರೂ ಅಂದಿನ ಅವಕಾಶವನ್ನು ತಪ್ಪಿಸಿಕೊಳ್ಳಲಿಚ್ಛಿಸದೆ ಕಾಲೇಜಿಗೆ ಶರಣು ಹೊಡೆದಿದ್ದರು. ವೆಂಕಟೇಶ ಅತ್ಯಂತ ಆದರದಿಂದ ಬರ ಮಾಡಿಕೊಂಡು ಸರಸುವನ್ನು ಕುರಿತು ಹೇಳಿದ "ಮುಂದಿನ ವರ್ಷ ನಿನ್ನ ಮದುವೆಯಲ್ಲಿ ನಾನೇ ಅಡುಗೆಯ ಬಂಟ!" ಬಳಿಯಲ್ಲಿದ್ದ ಚಿಕ್ಕವರ ಗುಂಪಿ ನಲ್ಲಿ ನಗುವಿನಲೆಯೆದ್ದಿತು. ರಮೇಶ ಒಡನೆ ದನಿಗೂಡಿಸಿದ "ಸರಸೂ, ನಾನಂ ಗಂಡಿನ ಕಡೆ, ಮದುವೆಯೆಂದರೆ ಹಾಯಾಗಿರಬಹುದೆಂದು ಕೊಂಡಿದ್ದಿ ಯೇನು? ನಾನು ಹೇಳಿದಂತೆ ನೀನು ಕೇಳಬೇಕು!" ಪುನಃ ಎಲ್ಲೆಲ್ಲೂ ನಗುವಿನಲೆಯೆದ್ದಿತು.

ಸರಸು ಮರು ಮಾತಾಡದೆ ಒಳಗಡೆ ಸೇರಿಕೊಂಡಳು. ಬೆಂಗಳೂರಿ ನಲ್ಲಿ ಎಂ. ಇ. ಓದುತ್ತಿದ್ದ ಕುಮಾರ ಮತ್ತು ಶ್ಯಾಮು ಮದುವೆಗೆ ಬಂದಿರ ಲಿಲ್ಲ. ಹಾಗಾದುದೇ ಒಳ್ಳೆಯದಾಯಿತೆಂದುಕೊಂಡಳು ಸರಸು. ಕುಮಾರನೂ

ಬಂದಿದ್ದಲ್ಲಿ ಇನ್ನೆಷ್ಟು ಗೋಳಾಗುತ್ತಿತ್ತೊ ? ಶ್ಯಾಮುವಂತೂ ನನ್ನನ್ನು ಹಿಂಡಿ ಬಿಡುತ್ತಿದ್ದ. ಸದ್ಯ ಹಾಯಾಗಿರಲು ಅನುಕೂಲವಾಯಿತು ಎಂದು ಮನದಲ್ಲೇ ಸಂತಸಗೊಂಡಳು. ಚಂದುಗೆ ಸಹಾಯಕನಾಗಿ ನಿಂತ ಗೋಪಿಗೆ ಈ ಕಡೆ ಗಮನ ಕೊಡಲು ಬಿಡುವಿರಲಿಲ್ಲ.

ಸ್ವಾಮಿಯ ಕುಟುಂಬ ಮದುವೆಗೆ ಬಂದಿದ್ದಾರೆಂದರೆ ಊರ ಮಂದಿಗೆ ಅದೊಂದು ಸೋಜಿಗದ ಸಂಗತಿಯೆನಿಸಿತು. ಎಲ್ಲರ ದೃಷ್ಟಿಯೂ ಇತ್ತಲೇ ಕೇಂದ್ರಿಕೃತವಾದುದರಿಂದ ಶಿವಮ್ಮನಿಗೆ ಭಯ ಲಜ್ಜೆಗಳು ಏಕ ಕಾಲದಲ್ಲುಂದಿಸಿದುವು. ಆದರೆ ಅಂದಿಂದಿಗೂ ಜನ ಸುಧಾರಿಸಿಕೊಂಡಿದ್ದುದರಿಂದ ಚುಚ್ಚು ಮಾತುಗಳನ್ನಾಡಲು ಹಿಂಜರಿದರೂ ಒಮ್ಮೆಲೆ ಸ್ವಾಗತಿಸುವಷ್ಟು ಉದಾರ ಭಾವನೆಯಂತೂ ಬಂದಿರಲಿಲ್ಲ. ಸಾವಿತ್ರಿ ಮತ್ತು ನೀಲಮ್ಮನ ಮಟ್ಟಿಗೆ ನಾವು ಹೇಳುವುದಾದರೆ ಅನಿರೀಕ್ಷಿತವಾಗಿ ಬಹುಕಾಲದ ನಂತರ ಮಕ್ಕಳನ್ನೂ ಶಿವೆಯನ್ನೂ ನೋಡಲವಕಾಶವಾದುದು ಅತ್ಯಂತ ಸಂತಸವನ್ನುಂಟು ಮಾಡಿತು. ಸರಸುವನ್ನು ನೋಡಿ ಸಂತಸದಿಂದ ತಲೆಯನ್ನು ನೇವರಿಸಿ "ಸರಸೂ, ಶಿವೆಯಷ್ಟು ಎತ್ತರಕ್ಕೆ ಬೆಳೆದಿದ್ದೀಯೇ. ನಿನ್ನ ನೋಡಿ ಅದೆಷ್ಟು ದಿನವಾಗಿತ್ತೊ" ಎಂದೆನ್ನುತ್ತ ಗಲ್ಲವನ್ನು ಮುದ್ದಿಟ್ಟುಕೊಂಡು ರವಿಯನ್ನು ಕುರಿತು "ರವೀ ನಿನ್ನ ನೋಡಿದರೆ ಸ್ವಾಮಿಯನ್ನು ನೋಡಿ ದಂತೆಯೇ ಆಗುತ್ತೆ. ಅದೇ ಮಾಟವಾದ ಮುಖ, ಮೈ, ಎತ್ತರ ಪ್ರತಿ ಯೊಂದರಲ್ಲೂ ನಿನ್ನ ಅರಿಯದವರು ಸ್ವಾಮಿಯೇ ಬಂದನೆಂದಕೊಳ್ಳುವಷ್ಟು ಹೋಲುತ್ತಿದ್ದೀಯೆ" ಎಂದು ನೀಲಮ್ಮ ನುಡಿದಾಗ ಮುಖ ಹೂವಿನಂತೆ ಅರಳಿತು. ಉತ್ತರವಾಗಿ ರವಿ ನಸು ನಗೆಯನ್ನು ಬೀರಿದ. ಪಕ್ಕದಲ್ಲಿದ್ದ ಸರಸು "ಎಲ್ಲರೂ ಹಾಗೆನ್ನುತ್ತಾರೆ. ನನಗಂತೂ ಅಪ್ಪ ಹೇಗಿದ್ದರೆಂಬುದು ನೆನಪಿಲ್ಲ. ರವಿ ಸ್ವಲ್ಪ ನೆನಪಿದೆ ಎನ್ನುತ್ತಾನೆ. ಗೋಪಿ ಶ್ಯಾಮು ವಿಮಲೆ ಯರಿಗೂ ಅವರ ನೆನಪಿಲ್ಲ."

"ಅವನ ಚಿತ್ರಪಟವಿಲ್ಲವೇನು ?"

"ಅವರು ತೆಗೆಸಿಕೊಳ್ಳಲಿಲ್ಲ ?

ಪೂರ್ವದ ಹಳೆಮನೆಯಿದ್ದಾಗ ಜೋಗಿಹಳ್ಳಿಗೆ ಬಂದು ಹೋದುದು ರವಿಗೆ ನೆನಪಿತ್ತು. ಈಗ ಎಲ್ಲರೂ ಬಹು ಮಟ್ಟಿಗೆ ಸುಧಾರಿಸಿಕೊಂಡಿರುವುದು

ಮನವರಿಕೆಯಾಯಿತು. ಊರೊಳಗೆ ಎಲ್ಲೆಲ್ಲೂ ಹೆಂಚಿನ ಮನೆಗಳು ಅಚ್ಚು ಕಟ್ಟಾಗಿ ತಲೆ ಎತ್ತಿ ನಿಂತಿದ್ದುವು. ರಾಜಣ್ಣ ಮದುವೆ ಚಪ್ಪರದಲ್ಲಿ ಕೆಲಸ ಕಾರ್ಯಗಳಲ್ಲಿ ತೀವ್ರ ಮಗ್ನನಾಗಿದ್ದಾಗ ಶಿವೆ ಮತ್ತು ಮಕ್ಕಳನ್ನು ಮನೆಗೆ ಕರೆದೊಯ್ದು ನೀಲಮ್ಮ ಅತ್ಯಂತ ಪ್ರೀತಿಯಿಂದ ಉಪಚರಿಸಿದಳು. ಪೂರ್ವದ ಮನೆಯನ್ನು ಕೆಡವಿ ಅದೇ ಸ್ಥಳದಲ್ಲಿ ಕಟ್ಟಿದ ಹೊಸಮನೆ ಅಚ್ಚುಕಟ್ಟಾಗಿತ್ತು. ಶಂಕರನೊಡನೆ ಒಂದು ಸುತ್ತು ಹಾಕಿ ಬಂದ ರವಿ ಶಂಕರನನ್ನು ಅಭಿನಂದಿಸುತ್ತ, "ನಿಜವಾಗಿಯೂ ಅಪೂರ್ವ ಬದಲಾವಣೆ!"

"ಮನೆ ಕಟ್ಟಿಸಿದ ಕೀರ್ತಿ ಚಂದಣ್ಣನಿಗೆ ಸೇರಿದ್ದು."

"ಅಂತೂ ಇದೊಂದು ಮಾದರಿಯ ಗ್ರಾಮವಾಗಿದೆ; ನೀವು ಕೀರ್ತಿಶಾಲಿಗಳಾಗಿದ್ದೀರಿ."

"ಕೀರ್ತಿ ಹಾಳಾಗಲಿ, ಒಗ್ಗಟ್ಟು ಸಾಧಿಸುವುದು ಸಾಮಾನ್ಯವಲ್ಲ."

"ಸಾಮಾನ್ಯದಲ್ಲಿ ಅಸಮಾನ್ಯತೆಯನ್ನು ಕಡೆದಿದ್ದೀರಿ. ಇನ್ನೇನಾಗಬೇಕು ?"

"ನಾವಲ್ಲ, ಚಂದಣ್ಣ."

"ಚಂದಣ್ಣನ ರೀತಿಯೇ ಬೇರೆ. ಎಲ್ಲಿ ದುರ್ಗಮವೋ ಅಲ್ಲಿ ಸುಗಮವನ್ನು ಕಾಣುವ ಜಾಣ್ಮೆ ಅವರಲ್ಲಿದೆ ಶಂಕರ್."

"ಇದುವರೆವಿಗೆ ಎಲ್ಲವೂ ಚಂದಣ್ಣನ ನೇತೃತ್ವದಲ್ಲಿ ನಡೆಯಿತು. ಇನ್ನು ಮುಂದಿನದೇ ಕಷ್ಟ ರವೀ.

"ವೆಂಕಟೇಶ ಚಂದಣ್ಣನಂತೆ ಅಪ್ಪಟ ಗಾಂಧೀವಾದಿ. ಪೂರ್ವಾರ್ಧ ಚಂದಣ್ಣನಿಂದಾದರೆ ಉತ್ತರಾರ್ಧ ವೆಂಕಟೇಶನಿಂದಾಗುತ್ತೆ ಯೋಚನೆಯೇಕೆ?"

"ಅದೇನೋ ನಿಜ" ಎಂದಳು ಸರಸು.

ಸಂಜೆಯಲ್ಲಿ ವೆಂಕಟೇಶ ರವಿಯನ್ನು ಊರವರಿಗೆ ಪರಿಚಯ ಮಾಡಿಕೊಟ್ಟು ಇದುವರೆಗೆ ನಡೆದ ಕಾರ್ಯಕ್ರಮಗಳನ್ನು ಒಂದೊಂದಾಗಿ ತೋರಿಸುತ್ತಾ ಊರೊಳಗೆ ಒಂದು ಸುತ್ತು ಹಾಕಿ ಬಂದ. ಊರ ತೊರೆಗೆ ಕಟ್ಟೆ ಹಾಕಿ ಊರಿಗೆ ಶುದ್ಧವಾದ ನೀರನ್ನು ಒದಗಿಸಿದ್ದರು. ಗ್ರಾಮಸ್ಥರೇ ನಿರ್ಮಿಸಿದ ಊರ ಹಾದಿ. ಮಾರುಕಟ್ಟೆಗಾಗಿ ಆರಿಸಿದ ಸ್ಥಳ. ಹೊಸದಾಗಿ ಕೈಗೂಡಿ ಬಂದ ದಕ್ಷಿಣದ ತೋಪು. ಗ್ರಾಮ ನಿರ್ಮಲೀಕರಣ. ಮಾದರಿ

ಮನೆಗಳು ಒಂದೊಂದಾಗಿ ಎಲ್ಲವನ್ನೂ ತೋರಿಸಿದ ವೆಂಕಟೇಶ.

"ಊರು ತ್ವರಿತವಾಗಿ ಸುಧಾರಿಸುತ್ತಿದೆ. ಇದೊಂದು ಮಾದರಿ ಗ್ರಾಮವಾಗುವುದರಲ್ಲಿ ಸಂಶಯವಿಲ್ಲ."

"ಊರೊಳಗೆ ಸಹಕಾರಕ್ಕೆ ಕೊರತೆಯಿಲ್ಲ. ಎರಡೂ ಕೈಗಳಿಂದ ನೀಡುತ್ತಾರೆ. ಆದರೂ ಇವರನ್ನು ಸಂಬಾಳಿಸಿಕೊಂಡು ಹೋಗುವುದು ಸಾಮಾನ್ಯವಲ್ಲ."

"ಚಂದಣ್ಣನ ಗರಡಿಯಲ್ಲಿ ತಯಾರಾಗಿಯೂ ಕಷ್ಟ ಎನ್ನುವುದೇ ?"

"ರವೀ, ರೆಕ್ಕೆ ಇಲ್ಲದೇನೇ ಆಕಾಶಕ್ಕೆ ಹಾರುತ್ತೇನೆ ಎನ್ನುತ್ತಾರೆ ಈ ಜನ !"

"ಇದು ಇಪ್ಪತ್ತನೇ ಶತಮಾನ ಎಂಬುದನ್ನು ಮರೆತು ಬಿಟ್ಟೆಯೇನು?"

ಇಬ್ಬರ ಮುಖದಲ್ಲೂ ನಗು ಮಿನುಗಿತು.

ವೆಂಕಟೇಶ ರವಿಯೊಂದಿಗೆ ಊರೊಳಗೆ ಹೋಗಿ ಬಂದುದನ್ನು ನೋಡಿ ರಾಜಮ್ಮ "ಇದೇನು ಹಸೆಮಣೆ ಗಂಡು ಹೊರಗೆ ಹೋಗುವುದುಂಟೆ? ಕಣ್ಣೆಸರು ತಾಗಿದರೇನು ಗತಿ ?" ಎಂದು ಕಳಕಳಿಯಿಂದ ನುಡಿದಾಗ "ನಿಜ, ನಿಜ. ಹಾಗೆ ಹೋಗಬಾರದಿತ್ತು" ಎಂದು ನೀಲಮ್ಮನೂ ದನಿಗೂಡಿಸಿದಳು. ಒಳಗಿನಿಂದ ಉಪ್ಪು, ಮೆಣಸಿನಕಾಯಿಯನ್ನು ತೆಗೆದುಕೊಂಡು ಬಂದು ನೀಲಮ್ಮ ವೆಂಕಟೇಶ ಬೇಡವೆಂದರೂ ಕೇಳದೆ ನೀವಾಳಿಸಿ ಓಕುಳಿಯ ಆರತಿಯೆತ್ತಿದಳು. ವೆಂಕಟೇಶ "ಎಲ್ಲರ ಕಣ್ಣೂ ರವಿಯ ಮೇಲಿತ್ತು. ಅವನಾದರೆ ಹೊಸಬ ಮೇಲಾಗಿ ಡಾಕ್ಟರು. ಒಂದು ವೇಳೆ ಕಣ್ಣೆಸರಾದರೆ ಅವನಿಗಾಗಿದ್ದೀತು. ನನಗಾಗುವುದು ಹೇಗೆ ?"

"ಅದೂ ನಿಜವೆ." ಎಂದ ನೀಲಮ್ಮ ರವಿಗೂ ನೀವಾಳಿಸ ಹೋದಾಗ ರವಿ ಗಹಗಹಿಸಿ ನಗುತ್ತ ಪಕ್ಕದಲ್ಲಿ ನುಸುಳಿಕೊಂಡ. ಕೂಡಲೇ ನಗುವಿನ ಗುಲ್ಲು ಹರಡಿತು. ಅಲ್ಲಿಗೂ ಬಿಡದೆ ಬೆನ್ನಟ್ಟಿ ನೀವಾಳಿಸಿ ಹೇಳಿದಳು ನೀಲಮ್ಮ. "ನೀನು ನಮ್ಮೂರಿಗೆ ಮೊದಲ ಡಾಕ್ಟರು. ಬಹುಮಂದಿ ಸೇರುವ ಸ್ಥಳದಲ್ಲಿ ಕಣ್ಣೆಸರು ಬೀಳುವುದರಲ್ಲಿ ಸಂಶಯವಿಲ್ಲ !"

ಪುನಃ ನಗುವಿನ ಗುಲ್ಲು....—

"ವೆಂಕೂ, ಇನ್ನು ನೀನು ಹೊರಹೋಗಬಾರದು ತಿಳಿಯಿತೇ ?"

"ಹಾಗಾದರೆ.......

"ಮದುವೆ ನಾಳೆ. ಇಂದಿನಿಂದಲೇ ಮನೆಯಲ್ಲಿ ಕುಳಿತಿರಲು ನಾನೇನು ಹೆಣ್ಣೇ." ವೆಂಕಟೇಶ ಕೇಳಿದ.

"ಅದೇನೇ ಇರಲಿ ವೆಂಕೂ. ನೀನು ಇಂದಿನಿಂದಲೇ ಹೊರಗೆ ಹೋಗುವಂತಿಲ್ಲ. ಹೆಣ್ಣು ಮನೆ ತುಂಬಿಸಿಕೊಳ್ಳುವವರೆಗೆ ನಾವು ಹೇಳಿದಂತೆ ಕೇಳಲೇಬೇಕು." ಸಾವಿತ್ರಿ ನುಡಿದಳು; ಮುಖದಲ್ಲಿ ನಗುವಿನ ಹೊನಲು ಹರಿದಿತ್ತು.

"ಸಮಯ ಸಿಕ್ಕಿದುದೇ ಸಾಕೆಂದು ಗೋಳು ಹುಯ್ಯುತ್ತಿದ್ದಿ."

"ಅಲ್ಲ, ಶಾಸ್ತ್ರೀಯವಾಗಿ ಹೇಳುತ್ತಿದ್ದೇನೆ." ಎಂದ ಸಾವಿತ್ರಿ ರವಿಯತ್ತ ತಿರುಗಿ ಹೇಳಿದಳು. "ರವೀ, ಹೇಗೂ ಈಗ ನಡೆಯುತ್ತಿರುವುದು ಸಾಮೂಹಿಕ ವಿವಾಹ. ಅದರೊಂದಿಗೆ ನಿನ್ನದೂ ಇಲ್ಲಿ ನಡೆಯಲಿ."

"ಅವನಿಲ್ಲಿ ಆದಾನೆ? ಅವನೊಪ್ಪುವಂತಹ ಹುಡುಗಿ ನಮ್ಮೂರಿನಲ್ಲಿ ಹುಟ್ಟಲಿಲ್ಲ ಬಿಡು." ನೀಲಮ್ಮ ಮರು ನುಡಿದಳು.

"ಮುಂದೆ ತಯಾರು ಮಾಡಿಕೊಂಡರೆ ಆಯಿತು." ನಕ್ಕು ನುಡಿದಳು ರಾಜಮ್ಮ. ಮುಖಮಂಡಲ ಪ್ರಸನ್ನವಾಗಿತ್ತು.

ನಗೆ ಚಟಾಕಿಯ ಮಾತುಗಳು ತುಂಬಿ ಹರಿಯುತ್ತಿದ್ದರೂ ಶಿವೆಯಲ್ಲಿ ಶ್ರೀಮದ್ಗಾಂಭೀರ್ಯ ನೆಲೆಸಿತ್ತು. ಮನೆಗೆಲಸಗಳಲ್ಲಿ ನಿಮಗ್ನಳಾಗಿದ್ದ ಶಿವಮ್ಮ ನಿಗಿನಿತು ಬಿಡುವಿರಲಿಲ್ಲ. ಪಾರ್ವತಿಯೂ ಲಿಂಗಣ್ಣನೂ ಸ್ವಾಮಿ ಕಾಣೆಯಾದ ಮೇಲೆ ಶಿವಮ್ಮನಂತೆ ಇದೇ ಮೊದಲ ಬಾರಿಗೆ ರಾಮಣ್ಣನ ಮನೆಗೆ ಬಂದಿದ್ದರು. ಮಗಳನ್ನು ಪ್ರಥಮ ಬಾರಿಗೆ ಜೋಗಿಹಳ್ಳಿಯಿಂದ ಕರೆದೊಯ್ಯಲು ಬಂದಾಗ ಲಿಂಗಣ್ಣ ಒಂದು ದಿನವಿದ್ದು ಹೋಗಿದ್ದ. ಹೊನ್ನಮ್ಮ ತಬ್ಬಲಿಯಾದ ನಂತರ ಲಿಂಗಣ್ಣ ಅನೇಕ ಬಾರಿ ಜೋಗಿಹಳ್ಳಿಗೆ ಬಂದಿದ್ದರೂ ರಾಮಣ್ಣನ ಮನೆಯತ್ತ ಹೋಗಿರಲಿಲ್ಲ. ಶಿವಮ್ಮನಿಗೆ ತಂದೆ ಮತ್ತು ಚಿಕ್ಕಮ್ಮ ಮದುವೆಗೆ ಬಂದುದು ಅತ್ಯಂತ ಸಂತೋಷವನ್ನುಂಟುಮಾಡಿತು.

ವೆಂಕಟೇಶನ ಗೆಳೆಯರ ಬಳಗದಲ್ಲಿ ಹಿರಿಯ ತರುಣರು ಆರುಮಂದಿಯೂ ಇತರ ಊರ ಮಂದಿಯಲ್ಲಿ ಐದು ಮಂದಿ ಹುಡುಗಿಯರೂ ಹಸೆಮಣೆಯನ್ನಲಂಕರಿಸಿದರು. ಒಂದೇ ಚಪ್ಪರದೊಳಗೆ ಹನ್ನೊಂದು ಜೋಡಿಯ ಧಾರಾ ಮುಹೂರ್ತವು ಸುಶ್ರಾವ್ಯವಾದ ವಾದ್ಯಗೋಷ್ಠಿ ಮೊಳಗುತ್ತಿದ್ದಂತೆ ನೆರೆದ

ಮಂದಿಯ ಆಶೀರ್ವಚನಗಳನ್ನು ಹೊತ್ತು ಶಾಸ್ತ್ರೋಕ್ತವಾಗಿ ಸರಳ ರೂಪದಲ್ಲಿ ... ಸಂತಸದ ವಿಜೃಂಭಣೆಯಲ್ಲಿ ನಡೆಯಿತು. ರಾಮಣ್ಣನಿಗೆ ಮಗನ ಮದುವೆ ಮಿತವ್ಯಯದಿಂದ ನಡೆದುದಲ್ಲದೆ ತನ್ನ ಬಹುದಿನಗಳ ಆಸೆ ಕೈಗೂಡಿ ಮಗನೂ ಹತೋಟಿಗೆ ಬಂದನೆಂಬುದು ಪರಮಾನಂದವನ್ನು ನೀಡಿತು. ಸೊಸೆಯನ್ನು ಆದರದಿಂದ ಬರಮಾಡಿಕೊಂಡ ರಾಜಮ್ಮ ಚಂದುವನ್ನು ಬಹುವಾಗಿ ವಂದಿಸಿ ಉಡುಗೊರೆಯನ್ನಿತ್ತು ದಂಪತಿಗಳನ್ನು ಸತ್ಕರಿಸಿದಳು.

ಮದುವೆ ಸಾಂಗವಾಗಿ ನಡೆದು ಹನ್ನೊಂದು ಮಂದಿ ಹಸೆಮಣೆಯ ಹೆಣ್ಣುಗಳನ್ನು ಮನೆ ತುಂಬಿಸಿಕೊಂಡ ನಂತರ ಲಿಂಗಣ್ಣ ಶಿವೆಯನ್ನು ಮಕ್ಕಳೊಂದಿಗೆ ನವಿಲೂರಿಗೆ ಹೊರಡಲು ಹೇಳಿದ.

"ನಾವಿಲ್ಲಿ ಉಳಿದರೆ ರವಿ ಗೋಪಿಯರಿಗೆ ಊಟಕ್ಕೆ ತೊಂದರೆಯಾಗುತ್ತದೆ."

"ಗೋಪಿ ಅಡುಗೆ ಮಾಡಿಕೊಳ್ಳುವುದಾಗಿ ಹೇಳಿದ್ದಾನೆ. ಮದುವೆ ಗಂತೂ ಬರಲಾಗಲಿಲ್ಲ. ಈಗಲಾದರೂ ನಾಲ್ಕು ದಿನ ಇದ್ದು ಹೋಗು." ಎಂದಳು ಪಾರ್ವತಿ.

"ತಾತಾ, ನಾವೆಲ್ಲರೂ ಒಂದುಗೂಡಿ ಇನ್ನೊಮ್ಮೆ ಹೋದರಾಗದೇ ?"

"ಸರಸೂ, ಅದು ಈಗಲ್ಲಮ್ಮಾ. ನೀನು ಕುಮಾರನೊಂದಿಗೆ ಹಸೆ ಮಣೆಯ ಮೇಲೆ ಕುಳಿತಾಗ ಎಲ್ಲರೂ ಒಂದುಗೂಡಿ ಹೋಗಬಹುದು!" ಮೂಲೆಯಿಂದ ಬಂದ ದನಿ ಯಾರದೆಂದು ಸರಸು ತಟ್ಟನೆ ತಿರುಗಿ ನೋಡಿದಳು. ವೆಂಕಟೇಶ ಮುಖದ ಮೇಲೆ ಹಸನಾದ ನಗುವನ್ನು ಹರಿಸಿ ನಿಂತಿದ್ದಾನೆ– ಸಂತೋಷವೇ ಮೈವೆತ್ತು ಬಂದಂತೆ.

ಸುತ್ತಮುತ್ತ ನಗೆಯ ಮರ್ಮರ ತುಂಬಿ ಹರಿಯಿತು.

"ನಿನ್ನದಾಯ್ತಲ್ಲಪ್ಪಾ. ಇನ್ನೇಕೆ ನನ್ನ ವಿಚಾರ ?" ಎಂದಳಾದರೂ ಮುಖ ಲಜ್ಜೆಯಿಂದಾವೃತವಾಯಿತು. ಲಿಂಗಣ್ಣನೂ ಪಾರ್ವತಿಯೂ ಮುಗುಳು ನಕ್ಕರು. ಸರಸು ಅಲ್ಲಿ ನಿಲ್ಲಲಾರದೆ ಒಳಗಡೆ ಜಾರಿಕೊಂಡಳು. ಶಿವೆ ಮಕ್ಕಳೊಂದಿಗೆ ನಾಲ್ಕು ದಿನ ಇದ್ದು ಹೋಗಲೆಂದು ರಾಮಣ್ಣನೂ ಒತ್ತಾಯ ಮಾಡಿದ್ದ. ಲಿಂಗಣ್ಣ ಅಂದೇ ಹೊರಡುವುದಾಗಿ ಹೇಳಿದುದರಿಂದ ರಾಮಣ್ಣ ಸುಮ್ಮನಾದ.

ಸಂಜೆಯಲ್ಲಿ ನವಿಲೂರಿನ ಕಡೆ ಹೋಗುವ ಬಸ್ಸಿನಲ್ಲಿ ಹೊರಡಲು ಲಿಂಗಣ್ಣ ಕುಟುಂಬದೊಂದಿಗೆ ಅಣಿಯಾದ. ಶಿವೆ ಮಕ್ಕಳೊಂದಿಗೆ ಹೊರಟಳು. ಬಸ್ಸು ಹತ್ತಿಸುವಾಗ ರವಿ, "ಬಹಳ ವರ್ಷಗಳಿಂದ ಹೋಗಲಿಲ್ಲ. ನಾಲ್ಕು ದಿನ ಇದ್ದೇ ಬನ್ನಿರಿ ; ನಾವು ಅಡುಗೆ ಮಾಡಿಕೊಳ್ಳುತ್ತೇವೆ."

ರವಿ ಮರುದಿನ ಬೆಳಿಗ್ಗೆ ಗೋಪಿಯೊಂದಿಗೆ ಮೈಸೂರಿಗೆ ಹೊರಡಲು ಅಣಿಯಾದ. ಇತ್ತ ಕರುಳು ಬೇನೆಯಲ್ಲಿ ಅರ್ಧವಾಗಿದ್ದ ರಾಜಣ್ಣ ಆಗು-ಹೋಗುಗಳಲ್ಲಿ ಆಸಕ್ತಿ ತೋರದೆ ಹಾಸಿಗೆ ಸೇರಿದ್ದ. ಎಳೆತನದಲ್ಲಿದ್ದ ರೋಷಾವೇಶಗಳು ಮುಪ್ಪಿನ ಹಾದಿ ಹಿಡಿದಿದ್ದುವು. ಅವನು ಹಣ್ಣಾಗಿದ್ದ ರೀತಿಯನ್ನು ನೋಡಿ ರವಿಗೆ ಮನ ಕರಗಿತು. ಹಾಸಿಗೆಯ ಬಳಿಗೆ ಹೋಗಿ ಕುಳಿತುಕೊಂಡು ಹೇಳಿದ "ನೀವು ಮೈಸೂರಿಗೆ ಬಂದು ಹಿರಿಯ ವೈದ್ಯರಲ್ಲಿ ದೇಹ ಪರೀಕ್ಷೆ ಮಾಡಿಸಿಕೊಂಡು ಚಿಕಿತ್ಸೆ ಮಾಡಿಸಿಕೊಳ್ಳಿರಿ, ಚಿಕಿತ್ಸೆಯಿಲ್ಲದೆ ರೋಗ ವಾಸಿಯಾಗದು."

ಹಿಂದಿನ ದಿನ ನೀಲಮ್ಮ ರವಿಯನ್ನು ಒತ್ತಟ್ಟಿಗೆ ಕರೆದು "ನಿನ್ನ ದೊಡ್ಡಪ್ಪನನ್ನು ಮೈಸೂರಿಗೆ ಕರೆದೊಯ್ದು ಚಿಕಿತ್ಸೆ ಮಾಡಿಸು. ಅವರು ನಮ್ಮ ಮಾತು ಕೇಳುವವರಲ್ಲ. ಈ ಹಿಂದೆ ಚಂದಣ್ಣ ಬಹಳ ಹೇಳಿದ್ದಾರೆ. ಆದರೂ ಕೇಳಲಿಲ್ಲ." ಎಂದು ಕಂಬನಿ ಮಿಡಿದಿದ್ದಳು.

ಶಂಕರ ಮತ್ತು ವೆಂಕಟೇಶ ಇಬ್ಬರೂ ರವಿಯೊಂದಿಗೆ "ಏನೇ ಬಂದರೂ ಚಿಂತೆಯಿಲ್ಲ. ಅವರೊಮ್ಮೆ ಮೈಸೂರಿಗೆ ಹೋದರೆ ಸರಿ ಹೋದೀತು. ಹಳ್ಳಿಯ ಚಿಕಿತ್ಸೆ ಮಾಡುವುದರಲ್ಲಿ ಎಲ್ಲವೂ ಅಪಥ್ಯವಾಗುತ್ತಿದೆ. ಅರಿತು ನುರಿತು ಔಷಧ ಕೊಡುವವರಿಲ್ಲ. ಸಿಕ್ಕ ಸಿಕ್ಕಿದ್ದು ತಿಂದು ದೇಹ ದಿನೇ ದಿನೇ ಕುಗ್ಗುತ್ತಿದೆ. ನೀನು ಅವರ ಬಳಿ ಮಾತಾಡಿ ಒಪ್ಪಿಸಲೇ ಬೇಕು." ಎಂದು ಕೇಳಿಕೊಂಡಿದ್ದರು.

ಆದರೂ ರಾಜಣ್ಣನ ರೀತಿಯಲ್ಲಿ ಮಾತಾಡುವುದೇ ಬೇಡವೆನ್ನುವಷ್ಟು ಬಿಗಿ ಎದ್ದು ತೋರುತ್ತಿತ್ತು. ಅತಿಥಿಗಳು ಹೊರಬಿದ್ದು ಗಲಾಟೆ ಕಡಿಮೆಯಾದನಂತರ ಮಾತಾಡೋಣವೆಂದು ಸುಮ್ಮನಾಗಿದ್ದ. ಇಂದು ರವಿ ನಲ್ಮೆಯಿಂದ ನುಡಿದುದನ್ನು ನೋಡಿ ರಾಜಣ್ಣ ಸ್ವಲ್ಪ ಯೋಚಿಸಿ ಹೇಳಿದ "ಇದು

ಆಸ್ಪತ್ರೆ ಔಷಧಿಯಿಂದ ವಾಸಿಯಾದೀತೆಂಬ ನಂಬಿಕೆಯಿಲ್ಲ."

....ನಾಲಿಗೆ ನುಡಿಯಲಾರದೆ ನುಡಿಯಿತು.

"ಹೇಗೂ ಇದುವರೆವಿಗೆ ಹಳ್ಳಿಯ ಚಿಕಿತ್ಸೆ ನಡೆಸಿದ್ದೀರಿ. ಇದನ್ನೂ ಸ್ವಲ್ಪ ಕಾಲ ನೋಡಿರಿ. ಉತ್ತಮ ತೋರಿದರೆ ಚಿಕಿತ್ಸೆ ಮಾಡಿಸಿಕೊಳ್ಳಬಹುದು."

"ಇನ್ನು ಕೆಲವು ಕಾಲ ನೋಡಿ ಹೇಳಿಯೇನು."

ಅಷ್ಟರಲ್ಲಿ ಅಲ್ಲಿಗೆ ಚಂದು ವೆಂಕಟೇಶನೊಂದಿಗೆ ಬಂದ. ರವಿ ಹಾಸಿಗೆಯ ಬಳಿಯಲ್ಲಿ ಕುಳಿತುದನ್ನು ನೋಡಿ ಚಂದು ಗಟ್ಟಿಯಾಗಿ ನಗುತ್ತ,

"ಓಹೋ ! ದೊಡ್ಡಪ್ಪ ಮಗ ರಾಜಿಯಾದಂತಿದೆ !"

ಆಗ ರಾಜಣ್ಣನಿಗೂ ನಗುವುಕ್ಕಿ ಬಂತು, ಆದರೂ ತಡೆದುಕೊಂಡ. ರವಿ ಮಾತಾಡದೆ ಮುಗುಳು ನಕ್ಕ.

"ಜೀವಚ್ಛವವಾಗಿದ್ದರೂ ಹಠ ಬಿಡುವುದಿಲ್ಲ. ನಾನು ಅಂದಿನಿಂದ ಮೈಸೂರಿಗೊಮ್ಮೆ ಹೋಗಿ ಬಾ ಎಂದು ಹೇಳುತ್ತಲೇ ಬಂದಿದ್ದೇನೆ. ಆದರೆ.... ಕೇಳಬೇಕಲ್ಲಾ ?" ಎಂದು ರವಿಯೊಡನೆ ಹೇಳಿದ ಚಂದು.

"ನಾನೂ ಅದನ್ನೇ ಹೇಳುತ್ತಿದ್ದೇನೆ."

"ನೀನು ಹೊರಡು. ನಾನೂ ನಿನ್ನೊಂದಿಗೆ ಬರುವೆ. ಅದೇನಾ ತೊಂದರೆ ನೋಡಿಸಿಯೇ ಬಿಡೋಣ." ಚಂದು ಆಗ್ರಹ ಪೂರ್ವಕವಾಗಿ ರಾಜಣ್ಣನಿಗೆ ಹೇಳಿದ.

"ಚಿಕ್ಕಪ್ಪಾ, ನೀವು ಈಸಲ ಹೋಗಲೇಬೇಕು." ವೆಂಕಟೇಶನೂ ಒತ್ತಾಯ ಪೂರ್ವಕವಾಗಿ ಒತ್ತಾಯ ಪಡಿಸಿದ.

"ಮೈಸೂರು ಯಾವ ಮಹಾ ದೂರ? ಎಂದಾದರೂ ಹೋಗಬಹುದು. ಈಗ ತೆಗೆದುಕೊಳ್ಳುತ್ತಿರುವ ಔಷಧವನ್ನು ಕೆಲವು ದಿನ ನೋಡಿ ಹೇಳುತ್ತೇನೆ." ಎಂದ ರಾಜಣ್ಣ ಸ್ವಲ್ಪ ತಡೆದು ಹೇಳಿದ "ಆನಂದ ಬರಲೇ ಇಲ್ಲ. ಅವನ ಮಗುವಿಗೆ ಜ್ವರಬಿಡಲಿಲ್ಲವೆಂದು ತೋರುತ್ತದೆ."

"ಆನಂದನ ವಿಚಾರ ಅನಂತರ. ಈಗ ಏಕೆ ಮಾತು ತಿರುಗಿಸುತ್ತಿ ? ಮೈಸೂರಿಗೆ ಹೋಗುವ ವಿಚಾರ ಮೊದಲು ಹೇಳು."

"ಅಯ್ಯೋ, ಸುಮ್ಮನಿರಪ್ಪಾ." ಹೋಗಲು ಮನಸ್ಸಿದ್ದರೂ ಒಮ್ಮೆಲೆ ಒಪ್ಪಿ ದೌರ್ಬಲ್ಯವನ್ನು ತೋರಿಕೊಳ್ಳಲು ಇಷ್ಟ ಪಡಲಿಲ್ಲ-ರಾಜಣ್ಣ.

"ಲಿಂಗಾ ಭಟ್ಟರ ಔಷಧದಲ್ಲಿ ಇನ್ನೂ ನಂಬಿಕೆ ಹೋಗಲಿಲ್ಲ. ಅನ್ಯಥಾ ಅವರಿಗೆ ದುಡ್ಡು ಸುರಿಯುತ್ತಿದ್ದಾರೆ." ವೆಂಕಟೇಶ ಹೇಳಿದ.

"ರಾಮಣ್ಣ ಈಗ ಪೂರ್ಣ ಗುಣ ಹೊಂದಿದ್ದಾನೆ. ನೀನೂ ನಾಲ್ಕು ದಿನ ಔಷಧ ತೆಗೆದುಕೊಂಡರೆ ಸರಿಹೋಗುತ್ತಿ. ಅಷ್ಟೇಕೆ ಹಠ ?"

"ಈಚೀಚೆಗಂತೂ ತುಂಬ ನಿಶ್ಯಕ್ತಿ ಹಾಸಿಗೆ ಹಿಡಿದಿದ್ದಾರೆ. ಯಾರ ಮಾತೂ ಕೇಳುವುದಿಲ್ಲ." ರವಿಗೆಂದ ವೆಂಕಟೇಶ ಚಿಕ್ಕಪ್ಪನತ್ತ ತಿರುಗಿ ಪುನಃ "ಅದೇನೇಯಿರಲಿ, ನೀವು ಈ ಸಲ ಮೈಸೂರಿಗೆ ಹೋಗುವುದೊಳ್ಳೆಯದು."

ರಾಜಣ್ಣ ಸ್ವಲ್ಪ ಹೊತ್ತು ಮಾತಾಡದೆ ಮೌನವಾಗಿದ್ದು ಅನಂತರ- "ಈ ಸಲ ಬಿತ್ತನೆ ಮುಗಿದ ಬಳಿಕ ಹೋಗುವೆ. ಅಲ್ಲಿಯ ತನಕ ಭಟ್ಟರ ಔಷಧ ಹೇಗಾಗುತ್ತೋ ನೋಡಬಹುದು."

ಅಲ್ಲಿಗೆ ಅಲ್ಪವಿರಾಮ ಬಿತ್ತು.

ರಾಜಮ್ಮ ಅಂದು ಉಳಿದಿದ್ದ ಹಲಕೆಲವು ಅತಿಥಿಗಳಿಗೆ ಔತಣದೂಟ ನೀಡಿದಳು. ನವವಧುವಾಗಿ ಬಂದ ಹೊನ್ನಮ್ಮ ಸಂತೋಷದುಯ್ಯಾಲೆಯಲ್ಲಿ ತೂಗಾಡುತ್ತಿದ್ದಳು. ಬಹು ದಿನಗಳಿಂದ ತನ್ನ ಹೃದಯ ಕಮಲವನ್ನಾವರಿಸಿದ್ದ ಹಿರಿಯಾಸೆ ಸುದೈವದಿಂದ ಕೂಡಿ ಬಂದಿತ್ತು. ವೆಂಕಟೇಶ ಬಾಗಿಲಲ್ಲಿ ಇಣಿಕಿ ನೇರ ನೋಟವನ್ನು ಹರಿಸಿ "ಹೊನ್ನಾ !" ಎಂದಾಗ ಆ ದನಿ ಎಷ್ಟೊಂದು ಮಧುರವಾಗಿತ್ತೊ ? ಹೊನ್ನಮ್ಮ ಎರಡೂ ಕೈಗಳಿಂದ ಮುಖವನ್ನು ಮುಚ್ಚಿಕೊಂಡಳು. ವೆಂಕಟೇಶ ನಗುನಗುತ್ತಾ ಅಲ್ಲಿಂದ ತೆರಳಿದ.

ಮರುದಿನ ಚಂದು ಪತ್ನೀ ಸಮೇತನಾಗಿ ರಾಮಪುರಕ್ಕೆ ಹೊರಟು ನಿಂತಾಗ ವೆಂಕಟೇಶ ಅನನ್ಯ ಭಕ್ತಿಯಿಂದ ಕಾಲುಮುಟ್ಟಿ ನಮಸ್ಕರಿಸಿದ. ಚಂದು ಆತ್ಮೀಯತೆಯಿಂದ ಹಿಡಿದೆತ್ತಿ ಎದೆಗಪ್ಪಿಕೊಂಡು ನಗು ಮುಖದಿಂದ "ವೆಂಕಟೇಶ್, ನಾನಿನ್ನು ಬರುವುದು ನಿನ್ನ ಮಗನ ನಾಮಕರಣ ಮಹೋತ್ಸವಕ್ಕೆ !"

ವೆಂಕಟೇಶನ ಮುಖದಲ್ಲಿ ನಗು ಮೂಡಿತಾದರೂ ಲಜ್ಜೆಯಿಂದ ಕೆಂಪು ಕೆಂಪಾಯಿತು.

ಅದೇ ತಾನೇ ಸ್ನಾನ ಮುಗಿಸಿಕೊಂಡು ಬಂದ ರವಿ "ಚಂದಣ್ಣಾ, ಹೊರಟು ಬಿಟ್ಟಿರೇನು ?" ಎಂದ. ಸ್ವಲ್ಪ ತಡೆದು ಪುನಃ–"ಇನ್ನು ಮುಂದೆ ಇಲ್ಲಿನ ಓದುವ ಹುಡುಗರಿಗೆ ನಮ್ಮ ಮಗ್ಗಲು ಮನೆಯನ್ನು ಬಿಡುವುದೆಂದು ಯೋಚಿಸಿದ್ದೇನೆ. ಹಾಸ್ಟಲ್ ಖರ್ಚು ಬಹಳವಾಗುತ್ತದೆ. ಆನಂದಣ್ಣ ಸ್ವಂತ ಮನೆಗೆ ಹೋದಾಗಿನಿಂದ ಮನೆ ಖಾಲಿ ಬಿದ್ದಿದೆ. ಸದ್ಯಕ್ಕೆ ನಮಗೆ ಈ ಮನೆಯೇ ಸಾಕು. ಹುಡುಗರು ಅಡಿಗೆ ಮಾಡಿಕೊಂಡು ಉಣ್ಣಲು ತಯಾರಿದ್ದಾರೆ. ಮಾಡಿಕೊಳ್ಳಲಿ." ಎಂದ ರವಿ.

"ಇದುವರೆವಿಗೆ ಆನಂದಣ್ಣ ಆಕ್ರಮಿಸಿಕೊಂಡಿದ್ದು ನಿಮಗೆ ತೊಂದರೆಯಾಗಿತ್ತು. ಇನ್ನಾದರೂ ಸ್ವಲ್ಪ ಹಾಯಾಗಿರಬಾರದೆ ?" ಎಂದಳು ಸಾವಿತ್ರಿ.

"ಹುಡುಗರಿಗೆ ಓದುವ ಆಸಕ್ತಿಯಿದೆ. ಹಣದ ಅಭಾವದಿಂದಾಗಿ ಪ್ರೋತ್ಸಾಹ ದೊರೆಯುತ್ತಿಲ್ಲ. ನಾಲ್ಕಾರು ಮಂದಿ ಕೂಡಿ ನಡೆಸಿದರೆ ಕಡಿಮೆ ಖರ್ಚಿನಲ್ಲಿ ನಡೆಯುತ್ತದೆ."

"ಈಗ ಅಷ್ಟು ಮಂದಿ ಹುಡುಗರೆಲ್ಲಿದ್ದಾರೆ ?"

"ರಮೇಶ ಚಂದ್ರು ಶಿವು ಸಾವಿತ್ರಿಯ ಮಗ ಕಿಟ್ಟು ನಾಲ್ಕು ಮಂದಿ ಇದ್ದಾರೆ."

ಗೋಡೆಗಾಂತು ಮೌನವಾಗಿ ಕುಳಿತಿದ್ದ ರಾಜಣ್ಣ ಸಿಟ್ಟಿನಿಂದ ಹೇಳಿದ "ಈ ಹುಡುಗರಿಗೆ ಯಾವ ಗೊತ್ತು ಗುರಿಯಿಲ್ಲ. ಕೊಟ್ಟ ಹಣ ಪೋಲು ಮಾಡಿ ಶಾಲೆಗೆ ಶರಣು ಹೊಡೆದು ಬಂದವರಿಗೆ ಮನೆ ಮಾಡುವೆನೆನ್ನುವುದು ಹುಚ್ಚುತನ. ನನ್ನ ದೇಹಸ್ಥಿತಿಯಲ್ಲಿ ದುಡಿದು ಮಕ್ಕಳನ್ನು ಓದಿಸುವೆನೆನ್ನುವ ಧೈರ್ಯವಿಲ್ಲ. ಇರೋ ಭೂಮಿಯನ್ನು ಹೂಡಿ ಗಂಜಿ ಕುಡಿಯಲಿ." ದನಿಯಲ್ಲಿ ಗಡುಸಿತ್ತು. ಮನದಲ್ಲಿ ಜಿಗುಪ್ಸೆಯಿತ್ತು.

"ಅದರಿಂದಾಗಿಯೇ ನಾವು ಮನೆ ಮಾಡಲು ಯೋಚಿಸಿದ್ದು. ರವಿ ಹತ್ತಿರವಿರುವುದರಿಂದ ವಿಚಾರಿಸಿಕೊಳ್ಳುತ್ತಾನೆ. ಹಾಸ್ಟಲಲ್ಲಿಡುವುದಕ್ಕಿಂತ ಇಲ್ಲಿರುವುದು ಮೇಲು." ಶಂಕರ ನಡುವೆ ಬಾಯಿ ಹಾಕಿದ "ಚಿಕ್ಕಮ್ಮ ನೋಡಿಕೊಳ್ಳುತ್ತಾರೆ."

"ಎಲ್ಲರೂ ಮನೆಯಲ್ಲಿದ್ದು ಮಾಡುವುದೇನು ? ಶಂಕರ ಅನಂತ

ಇಬ್ಬರಿದ್ದರೆ ಸಾಲದೆ ? ಓದುವವರು ಓದಲಿ ಎಂದ ರವಿ.

ರಾಜಣ್ಣ ಸ್ವಲ್ಪ ಹೊತ್ತು ಯೋಚಿಸುತ್ತ ಕುಳಿತಿದ್ದು ನಂತರ ಹೇಳಿದ "ರವೀ, ನಿಮ್ಮ ಸಂಸಾರವೂ ಚಿಕ್ಕದಲ್ಲ. ಅಂದಿನಿಂದಲೂ ವಾಸಕ್ಕೆ ಅನಾನೂಕೂಲವಾಗಿ ತೊಂದರೆಪಟ್ಟಿರಿ. ಇನ್ನೂ ಏಕೆ ಈ ಭಾರವನ್ನು ಹೊತ್ತುಕೊಳ್ಳುವ ಯೋಚನೆ ಮಾಡುತ್ತಿ?"

ಚಿಂತಾಕುಲ ಚಿತ್ತದಿಂದ ರಾಜಣ್ಣನ ದನಿ ಭಾರವಾಗಿತ್ತು. ಅನಾರೋಗ್ಯದಿಂದ ಕಳೆಗೆಟ್ಟ ಮುಖದಲ್ಲಿ ಎದ್ದು ಕಾಣಿಸುತ್ತಿದ್ದ ಅಸಂಖ್ಯಾತ ರೇಖೆಗಳು ದೇಹದ ಮುಪ್ಪನ್ನು ಸಾರಿ ಹೇಳುತ್ತಿದ್ದುವು. ನೋಡುವವರಿಗೆ ಮರುಕ ಹುಟ್ಟಿಸುವಷ್ಟು ದೇಹ ಬಲಹೀನವಾಗಿತ್ತು.

"ಈಗ ಹೇಗೂ ಕುಮಾರ ಶ್ಯಾಮು ಮನೆಯಲ್ಲಿಲ್ಲ. ಎರಡು ಕೊಠಡಿ ಕಟ್ಟಿಸಿರುವುದರಿಂದ ವಾಸಕ್ಕೆ ಅಷ್ಟು ತೊಂದರೆಯಿಲ್ಲ. ಕುಮಾರ ಶ್ಯಾಮು ಬರುವವರೆಗೆ ಈ ಮಕ್ಕಳು ಅಲ್ಲಿರಲು ತೊಂದರೆಯಿಲ್ಲ. ಅದ್ದರಿಂದ ನೀನೇನೂ ಯೋಚಿಸಬೇಕಾಗಿಲ್ಲ, ಈ ವರ್ಷ ಅಲ್ಲೇಯಿದ್ದು ಓದಿಕೊಳ್ಳಲಿ. ಬಾಡಿಗೆಗೆ ಕೊಡುವುದಿಲ್ಲವೆಂದು ರವಿ ಅಂದೇ ಹೇಳಿದ್ದಾನೆ." ಎಂದ ಚಂದು ಪುನಃ ಹೇಳಿದ "ಆನಂದನಿಗೆ ಅಪರೂಪದ ಮಗ. ಸ್ವಲ್ಪ ಜ್ವರ ಬಂದದ್ದೇ ದೊಡ್ಡದಾಯಿತೆಂದು ತೋರುತ್ತದೆ. ಹೊಸ ಮನೆಯೆಂದು ಹೆರಿಗೆಯಾಗುವವರೆಗೆ ಕಾದಿದ್ದು ಗೃಹ ಪ್ರವೇಶ ಮಾಡಿದುದೇ ಗೊತ್ತಾಗುವುದಿಲ್ಲವೇ?"

ಎಲ್ಲರ ಮುಖದ ಮೇಲೂ ಎಳೆನಗು ಮಿನುಗಿತು. ರವಿಯೊಂದಿಗೆ ಹುಡುಗರು ಹೊರಡಲು ಅಣಿಯಾದರು. ರಾಮಣ್ಣನಿಗೆ ರವಿ ಹುಡುಗರನ್ನು ಇಟ್ಟುಕೊಳ್ಳಲು ಒಪ್ಪಿಕೊಂಡದ್ದು ಸಂತೋಷನ್ನುಂಟುಮಾಡಿತು. ರಮೇಶ ಮತ್ತು ಚಂದ್ರು ಇಬ್ಬರೂ ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದುದರಿಂದ ಏನು ಮಾಡುವುದೆಂದು ಯೋಚನೆಯಾಗಿತ್ತು.

ಚಂದುವನ್ನೂ ರವಿಯನ್ನೂ ಬೀಳ್ಕೊಡಲು ಊರಿಗೆ ಊರೇ ಅಲ್ಲಿ ನೆರೆಯಿತು. ರವಿ ಒಳ ಹೋಗಿ ಹೊರಡುವುದಾಗಿ ಹೇಳಿದಾಗ ನೀಲಮ್ಮ ಕಂಬನಿ ದುಂಬಿದ ಕಣ್ಣುಗಳಿಂದ ನೋಡುತ್ತ "ನೀನು ಇಂದೇ ದೊಡ್ಡಪ್ಪನನ್ನು ಕರೆದುಕೊಂಡು ಹೋಗಬಹುದಾಗಿತ್ತು."

ಸ್ವಲ್ಪ ದಿನ ಬಿಟ್ಟು ಬರವುದಾಗಿ ಹೇಳಿದ್ದಾರೆ. ಬರದಿದ್ದಲ್ಲಿ ಆನಂದಣ್ಣ

ನನ್ನು ಕಳುಹಿಸುವೆ. ನೀವೇನೂ ಯೋಚಿಸಬೇಡಿರಿ." ಎಂದು ಸಮಾಧಾನ ಹೇಳಿ ರವಿ ಹೊರಬಿದ್ದ. ರಾಜಮ್ಮ ನೀಲಮ್ಮನೊಡನೆ ಗದ್ದೆಯಂಚಿನವರೆಗೆ ಹೋಗಿ ಬೀಳ್ಕೊಟ್ಟಳು.

"ಈಚೀಚೆಗಂತೂ ರವಿಯನ್ನು ನೋಡಿದರೆ ಸ್ವಾಮಿಯನ್ನು ನೋಡಿದಂತೆಯೇ ಆಗುತ್ತದೆ" ರಾಮಣ್ಣ ಖಿನ್ನ ಮನಸ್ಕನಾಗಿ ನುಡಿದ.

೪೬

ಆದೊಂದು ಸುಂದರ ಮುಂಜಾನೆ.

ಬೆಳಗಿನ ಹೂ ಬಿಸಿಲಿಗೆ ಮೈಗೊಟ್ಟು ರವಿ ಕೈಯಲ್ಲಿನ ಮಾಸಿಕದಲ್ಲಿ ತನ್ಮಯನಾಗಿದ್ದಾನೆ. ಜ್ವರ ಬಿಟ್ಟು ನಾಲ್ಕಾರು ದಿನ ಕಳೆದಿತ್ತು. ಒಂದು ವಾರ ಬಿಡದೇ ಜ್ವರ ಬಂದುದರಿಂದ ಮೈಯಲ್ಲಿ ಬಳಲಿಕೆಯಿತ್ತು. ಸದಾ ಕೆಲಸದಲ್ಲೇ ತನ್ಮಯನಾಗಿರುತ್ತಿದ್ದ ರವಿಗೆ ಕೆಲಸವಿಲ್ಲದಿರುವುದು ಅಸಾಧ್ಯ ಎಂಬುದು ಈಗ ಮನವರಿಕೆಯಾಯಿತು, ಇಂದು ರಜೆಯ ಕೊನೆಯದಿನ ವಾದ್ದರಿಂದ ಮನಸ್ಸಿಗೆ ಎಷ್ಟೋ ಹಗುರ.

ದಿನಮಣಿ ಮೆಲ್ಲಮೆಲ್ಲನೆ ಬಾನೇರುತ್ತಿದ್ದಾನೆ. ಬೆಳ್ಮುಗಿಲ ತಂಡಗಳು ಸನ್ಮೋಹನಾಕಾರಗಳಲ್ಲಿ ಬಾಂದಳದಲ್ಲಿ ಓಲಾಡುತ್ತಿವೆ. ಮರಗಳ ಸಂದಿಯಲ್ಲಿ ತೂರಿಬಂದ ಕೆಂಗದಿರುಗಳು ಅಲ್ಲಲ್ಲಿ ಅಚ್ಚೊತ್ತಿ ನೆರಳಿನ ನೆಲೆಯಲ್ಲಿ ಬೆಳಕಿನ ಬಲೆಯನ್ನು ನೆಯ್ದಿದ್ದವು. ಒಯ್ಯೊಯ್ಯನೆ ಬೀಸಿ ಬಂದ ಮಂದಾನಿಲ ಮುಖಕ್ಕೆ ಹೂ ಮುತ್ತನ್ನಿಟ್ಟು ತನುಮನಗಳಿಗೆ ಆಹ್ಲಾದವನ್ನು ನೀಡುತ್ತಿದ್ದ. ರವಿ ಹಾಗೇ ತುಸು ಹೊತ್ತು ಕುಳಿತಿದ್ದು ನಂತರ ಎದ್ದು ಶತಪಥ ತಿರುಗಿದ. ಹೂಗಿಡಗಳಲ್ಲಿನ ಹೂಗೊಂಚಲುಗಳು ಗಾಳಿಯಾಟದಿಂದ ಓಲಾಡುತ್ತಿದ್ದುವು. ಮರಗಿಡಗಳ ಎಲೆಗಳು ತಟಪಟನೆ ಬಡಿದುಕೊಳ್ಳುವ ತಾಳಮೇಳದೊಡನೆ ಪಕ್ಷಿಗಳಿಂಚರವು ಕಿವಿಗಿಂಪಾಗಿ ಕೇಳಿ ಬರುತ್ತಿತ್ತು. ರವಿ ಹಾಗೇ ಆಲಿಸುತ್ತಾ ಕಲ್ಲು ಬೆಂಚಿನಮೇಲೆ ಕುಳಿತುಕೊಂಡ. ಬಾಚದ ಹಣೆ ಕೂದಲು ಎಳೆ ಎಳೆ ಯಾಗಿ ಇಳಿಬಿದ್ದಿತ್ತು. ಅಡ್ಡ ಪಂಚೆ ಜುಬ್ಬಗಳಿಂದಲಂಕೃತವಾದ ಶರೀರ ಮನೋಹರವಾದ ತಾರುಣ್ಯವನ್ನು ಹೊರ ಸೂಸುತ್ತಿತ್ತು.

ಪ್ರಾಕಾರದ ಬಾಗಿಲು ಸದ್ದಾದೊಡನೆಯೆ ಸಹಜವಾಗಿ ರವಿಯ ದೃಷ್ಟಿ ಅತ್ತ ಹರಿಯಿತು. ಒಳಬಂದವನು ಆನಂದ. ಬರುಬರುತ್ತಲೇ ಅವನೆಂದ "ನಿನಗೆ ಜ್ವರ ಬಂದಿತ್ತೆಂದು ನಿನ್ನೆ ಗೋಪಿ ಹೇಳಿದ. ನೋಡಿ ಹೋಗೋಣ ವೆಂದು ಬಂದರೆ ಆಗಲೇ ಗಾಳಿಗೆ ಮೈಯೊಡ್ಡಿ ಹೊರಗಡೆಯಿದ್ದೀ ? ಬೆಳಗಿನ

ತಂಡಿ ತಗಲೀತು !"

ರವಿ ಆನಂದನಿಗಾಗಿ ಸ್ಥಳ ಬಿಟ್ಟು ಕುಳಿತುಕೊಂಡು "ಜ್ವರ ಬಿಟ್ಟು ನಾಲ್ಕು ದಿನಗಳಾದುವು ನಾಳೆಯಿಂದ ಆಸ್ಪತ್ರೆಗೆ ಹೋಗುವೆ. ಎಂದೂ ಹಾಸಿಗೆಯಲ್ಲಿದ್ದವನಲ್ಲ. ನನಗೆ ಹೊತ್ತು ಕಳೆಯುವುದು ತುಂಬ ಕಷ್ಟ ವಾಯಿತು."

"ನಾಲ್ಕು ದಿನ ವಿಶ್ರಾಂತಿ ಸಿಕ್ಕಿದ್ದು ಒಳ್ಳೆಯದಾಯಿತು ಸುಮ್ಮನಿರು. ಅಂದೇ ಬರಬೇಕೆಂದು ಯೋಚಿಸಿದ್ದೆ; ಬಿಡುವೇ ದೊರೆಯಲಿಲ್ಲ. ಹಗಲೆಲ್ಲಾ ಕೆಲಸ........ಕೆಲಸ ....ಕೆಲಸ. ನನಗಂತೂ ಸಾಕಾಗಿ ಹೋಗಿದೆ. ಎಷ್ಟು ಮಾಡಿದರೂ ಮುಗಿಯದ ಗುಮಾಸ್ತಿಕೆಯಿದು." ಎಂದೆನ್ನುವಾಗ ಮುಖ ದಲ್ಲಿ ಜಿಗುಪ್ಸೆ ತಾನೇ ತಾನಾಗಿ ಹೊಮ್ಮಿತು.

"ಕೆಲಸ ಮಾಡದಿದ್ದರಾದೀತೆ ಆನಂದಣ್ಣಾ ?"

"ಅಯ್ಯೊ, ಹಾಳಾಗಿ ಹೋಗಲಿ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಪ್ರತಿಯೊಂದು ದುಃಗ್ಗಾಣಿಗಾಗಿಯೂ ತಲೆ ಕೆಡಿಸಿಕೊಳ್ಳಬೇಕಾಗುತ್ತೆ. ಒಂದು ದಿನವಾದರೂ ಮನೆಯಲ್ಲಿ ನೆಮ್ಮದಿಯಿಂದಿರುವಂತಿಲ್ಲ. ಇಂದು ನಿನಗಾಗಿ ಸ್ವಲ್ಪ ವೇಳೆಯನ್ನು ಕೇಳಿಕೊಂಡು ಬಂದಿದ್ದಾಯಿತು. ನಾನು ಮನೆ ಸೇರು ವಾಗಲೆಲ್ಲಾ ಮಗು ನಿದ್ದೆ ಹೋಗಿರುತ್ತೆ. ಒಂದು ಹೊತ್ತು ಮಗುವಿ ನೊಂದಿಗೆ ಉಲ್ಲಾಸದಿಂದಿರುವುದಕ್ಕೂ ಪಡೆದುಕೊಂಡು ಬರಲಿಲ್ಲ."

"ನಾಲ್ಕು ದಿನ ರಜ ತೆಗೆದುಕೊಳ್ಳಿರಿ."

"ಆ ಮುದುಕಪ್ಪ ಕೊಡಬೇಕಲ್ಲಾ? ನನಗಂತೂ ಸಾಕಾಗಿ ಹೋಗಿದೆ."

"ಇಷ್ಟು ಬೇಸರಪಟ್ಟುಕೊಂಡರಾಗುತ್ತದೆಯೆ ? ಆಗಲೇ ಎರಡಾವರ್ತಿ ಕೆಲಸ ಬಿಟ್ಟಿದ್ದೀರಿ."

"ರವೀ, ನಿನ್ನಂತೇ ನಾನು ಡಾಕ್ಟರ್ ಅಲ್ಲ. ನಿನ್ನ ಹೆಜ್ಜೆ ಪೂರ್ಣದೆಡೆ ಗಾದರೆ ನನ್ನ ಹೆಜ್ಜೆ ಸೊನ್ನೆಯೆಡೆಗೆ. ನಿನಗೆ ಸಮಾಜದಲ್ಲಿ ಗಣ್ಯಸ್ಥಾನವಿದೆ. ಮೇಲಾಗಿ ಜನ ಸೇವೆಯೇ ಈಶ ಸೇವೆ. ನನ್ನ ರೀತಿ ಅದಕ್ಕೆ ತೀರ ವ್ಯತಿರಿಕ್ತ. ಹಾಳು ಗುಮಾಸ್ತಿಕೆಯಲ್ಲಿ ರಸವೂ ಇಲ್ಲ ರುಚಿಯೂ ಇಲ್ಲ. ಹಗಲೆಲ್ಲಾ ನೋಡಿ ನೋಡಿ ಕಣ್ಣುಗಳೂ ಮಂಜಾಗತೊಡಗಿವೆ. ದಿನೇ ದಿನೇ ಮನಸೂ ಬಗ್ಗಡವಾಗತೊಡಗಿದೆ."

"ನಿಮಗೆ ಸಮಾಜದಲ್ಲಿ ಗೌರವವಿಲ್ಲವೆಂದವರಾರು ? ಎಲ್ಲರಿಗೂ ಆತ್ಮ ಗೌರವವಿದ್ದೇ ಇದೆ. ವೃಥಾ ಚಿಂತಿಸಿ ನೆಮ್ಮದಿ ಕಳೆದುಕೊಳ್ಳುತ್ತಿದ್ದೀರಿ."

"ಎಷ್ಟಾದರೂ ನಾನೊಬ್ಬ ಕೀಳುದರ್ಜೆಯ ಕಾರಕೂನ. ಪರಾಧೀನತೆಯಿಂದ ಮನಸ್ಸು ನೊಂದಿದೆ. ಕೈಯಲ್ಲಿ ಕಾಸಿಲ್ಲದುದರಿಂದ ಈ ಕೆಲಸ ಕ್ಕಂಟಿಕೊಂಡಿದ್ದೇನೆ."

"ಸ್ವಂತವಾಗಿ ನೀವೇ ಒಂದು ಅಂಗಡಿ ತೆಗೆಯಿರಿ."

"ಸಾಲ ಮಾಡುವ ಎದೆಗಾರಿಕೆಯಿಲ್ಲದಿರುವುದರಿಂದ ಈ ಕಷ್ಟ."

"ಹಾಗಿದ್ದರೆ ಕೈಯಲ್ಲಿ ನಾಲ್ಕು ಕಾಸು ಸೇರ್ಪಡೆಯಾಗುವವರೆಗೆ ಸ್ವಲ್ಪ ಸೈರಿಸಿಕೊಳ್ಳಿರಿ. ಮುಂದೆ ಭಗವಂತ ಸಹಾಯ ಮಾಡುತ್ತಾನೆ."

"ದೈವೇಚ್ಛೆ ಹೇಗಿದೆಯೋ ?" ಎಂದ ಆನಂದ ಸ್ವಲ್ಪ ಹೊತ್ತು ಮೌನವಾಗಿ ಕುಳಿತಿದ್ದು ಅನಂತರ "ಈಗ ರಾಜಣ್ಣ ಸುಖವಾಗಿದ್ದಾರಂತೆ. ಈ ಹಿಂದೆಯೇ ಆಪರೇಷನ್ ಮಾಡಿಸಿಕೊಂಡಿದ್ದರೆ ಒಳ್ಳೆಯದಿತ್ತು."

"ಹಾಗೆಂದು ಶಂಕರ ಕಾಗದ ಬರೆದಿದ್ದಾನೆ. ಮೊದಲು ಅವರಿಗೆ ಆಸ್ಪತ್ರೆಯಲ್ಲಿರುವುದು ಸಮಾಧಾನವಿರಲಿಲ್ಲ. ಎಲ್ಲರ ಬಲವಂತಕ್ಕೆ ಸಹಿಸಿಕೊಂಡಿದ್ದರು. ಅಂತೂ ಗುಣವಾಯಿತಲ್ಲಾ ಅದೇ ಸಂತೋಷ."

ರವಿ ಆನಂದನೊಡನೆ ಒಳಗಡೆ ಬಂದ. ಕಾಫಿ ತಿಂಡಿ ಅಣಿಯಾಗಿತ್ತು. ಇಬ್ಬರೂ ಕಾಫಿಯನ್ನು ತೆಗೆದುಕೊಂಡರು. ಆನಂದ ಕಾಫಿಯನ್ನು ತೀರಿಸಿ ಹೊರಟು ನಿಂತಾಗ ಶಿವೆ ಅವನೊಡನೆ "ಭಾನುವಾರ ರತ್ನಳನ್ನು ಕರೆದುಕೊಂಡು ಬನ್ನಿರಿ. ಮಗುವನ್ನು ನೋಡಬೇಕೆನ್ನಿಸುತ್ತದೆ." ಎಂದಳು.

"ಇಂದೇ ಕರೆತರಲು ಯೋಚಿಸಿದ್ದೆ. ಅವಳಿಗೆ ಬಿಡುವಿರಲಿಲ್ಲ. ಮುಂದಿನವಾರ ಕರೆತರುವೆ" ಖುಷಿಯಿಂದ ನುಡಿದ ಆನಂದ.

ಆನಂದ ಹೊರಟು ಹೋದನಂತರ ಹೊರಗಣ ಜಗಲಿಯಲ್ಲಿ ರವಿ ಸುಖಾಸೀನನಾದ. ಅತ್ಯಂತ ನಿಃಶಬ್ದ ವಾತಾವರಣದಲ್ಲಿ ಸಂತಸದ ಮೃತವನ್ನುಂಡ ಮಾನಸ ಪಕ್ಷಿ ಗರಿಗೆದರಿ ಗತಕಾಲದಲ್ಲಿ ತೇಲಿ ಅಂದಿಂದಿಗೂ ಸಾಧಿಸಿದ ಸಾಧನೆ....ಗಳಿಸಿದ ಬುದ್ಧಿಶಕ್ತಿ....ಪಡೆದ ವಿಚಾರಶಕ್ತಿಗಳ ನಂದನ ವನದಲ್ಲಿ ವಿಹರಿಸಿತು. ಆದರೆ, ಇದುವರೆಗಿನ ಸಾಧನೆ ಸಾಸುವೆಯಷ್ಟು ಅಥವಾ ಅದಕ್ಕಿಂತ ಕಡಿಮೆಯಾಗಿಯೇ ಕಾಣಿಸುತ್ತಿದೆ....ಇನ್ನು ಮುಂದೆ

ಮದುವೆ–ಸಂಸಾರ.

ಸಾಕಪ್ಪಾ, ಸಾಕು... ಜೀವನ ಕೇವಲ ತೃಷೆ.

ಭ್ರಾಂತಿ....ಭ್ರಮಣೆ.......

ಕ್ಷಣಿಕ ಸುಖಕ್ಕಾಗಿ ಅಪಾರವಾದ ನೋವನ್ನು ಹೊತ್ತುಕೊಳ್ಳುವ ಮಾನವಜೀವನದ ಬಗ್ಗೆ ಏನೆನ್ನಬೇಕೋ ಬಗೆ ಹರಿಯದಾಯಿತು. ಐಹಿಕ ಸುಖಕ್ಕೆ ಮನಸೋತು ಆತ್ಮಸಾಕ್ಷಾತ್ಕಾರವಿಲ್ಲದೆ ಬದುಕುವುದು ವ್ಯರ್ಥ— ನಿರರ್ಥಕ....

ಯೋಚನಾಲಹರಿ ಹರಿಯುತ್ತಲೇ ಇತ್ತು.

ಹಾಗೆ ಅದೆಷ್ಟು ಹೊತ್ತು ಉರುಳಿತೋ.......

ನೆಟ್ಟನೋಟ ಗೋಡೆಯ ಮೇಲೆ ಹರಿದು-ಆಳೆತ್ತರದಲ್ಲಿ ಪ್ರತಿಷ್ಠಿತವಾದ ಧ್ಯಾನಾರೂಢ ವಿವೇಕಾನಂದರ ಪ್ರತಿಚಿತ್ರ ಕಣ್ಗೆಸೆಯಿತು. ಒಡನೆ ಭಾರತ ಕೇಸರಿಯ ಅಮರವಾಣಿ ಕಿವಿಯಲ್ಲಿ ಝೇಂಕರಿಸಿತು. ಏಳಿ ! ಎದ್ದೇಳಿ !! ಜಾಗೃತರಾಗಿ, ಗುರಿಸೇರುವವರೆಗೆ ನಿಲ್ಲಬೇಡಿರಿ."

"ಉತ್ತಿಷ್ಠತ, ಜಾಗ್ರತ, ಪ್ರಾಪ್ಯವರಾನ್ನಿಬೋಧತ"

"ಓ ಅಮೃತ ಪುತ್ರರೇ ಜಡನಿದ್ದೆಯಿಂದ ಎದ್ದೇಳಿ ! ಸಮಯ ಸನ್ನಿಹಿತವಾಗಿದೆ, ನಿರ್ಭಯರಾಗಿ ; ಧೀರರಾಗಿ ; ಪುರುಷ ಸಿಂಹರಾಗಿ ! ಇಂದು, ಈ ಜಡ ನಾಗರಿಕತೆಯ ಪ್ರಪಂಚಕ್ಕೆ ಆಧ್ಯಾತ್ಮವನ್ನು ಧಾರೆಯೆರೆಯುವ ಮಹಾ ಪ್ರವಾಹವು ಇಲ್ಲಿಂದ ಉದಯಿಸಬೇಕಾಗಿದೆ. ಇಲ್ಲಿದೆ ಬಾಳಿಗೆ ಹೊಸಬೆಳಕನ್ನು ಕೊಡುವ ಅಮೃತ ಪ್ರವಾಹ...ಆಧ್ಯಾತ್ಮಿಕ ಜ್ಞಾನವೇ ಪ್ರಪಂಚಕ್ಕೆ ಭರತಖಂಡ ನೀಡುವ ಬಹುಮಾನ. ಜ್ಞಾನಾಗಾರದ ಬಾಗಿಲನ್ನು ಎಲ್ಲರಿಗೂ ತೆರೆಯಿರಿ. ಧೀರರ ಮಾರ್ಗವನ್ನು ಅನುಸರಿಸಿರಿ.

ಭರ್ತೃ ಹರಿ ಹೇಳುವಂತೆ,

"ನಿಂದಂತು ನೀತಿನಿಪುಣಾಃ ಯದಿವಾಸ್ತುವಂತು
ಲಕ್ಷ್ಮೀಃ ಸಮಾವಿಶತು ಗಚ್ಛತು ವಾ ಯಥೇಷ್ಟಂ ।
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ
ನ್ಯಾಯಾತ್ ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

ಎಲ್ಲಿಯವರೆಗೆ ಸೂರ್ಯಚಂದ್ರರಿರುವರೋ ಅಲ್ಲಿಯವರೆಗೆ ಧರ್ಮ-ನೀತಿಗಳು ಇದ್ದೇ ತೀರುತ್ತವೆ. ಆದರೂ ಮಾನವ ಸಮಾಜದಲ್ಲಿ ತುಂಬಿ ಹೋಗಿರುವುದು ಸಂಪತ್ತಿವ್ಯಾಮೋಹ. ಪ್ರಪಂಚದ ಸರ್ವಶ್ರೇಷ್ಠ-ಬಹುಮೂಲ್ಯ ವಸ್ತು ಈ ರೀತಿ ಅಪಮಾನಪಡುತ್ತಿರುವುದು ಅಸಂಬದ್ಧ ; ಅಸಹನೀಯ.... ಎಷ್ಟೇ ಯೋಚಿಸಿದರೂ ಈ ಜನಾಕೀರ್ಣ ಲೋಕಾಲಯದಲ್ಲಿ ಭಾವಗೋಚರವಾಗುವುದು ಪರಿಹಾರವಲ್ಲ, ದುರಾಚಾರದ ದುರ್ಗಂಧ ಭಂಡಾರ ; ದುರ್ಬುದ್ಧಿಯ ಅಮೋಘ ವೈಭವ.

ಅಂದಮೇಲೆ... ?

ವಿವೇಕಾನಂದರ ಚಿತ್ರದೆಡೆಗೆ ನೋಟ ಪುನಃ ಹರಿಯಿತು.

"ಓ ಅಮೃತ ಪುತ್ರರೇ, ದೇಶದ ಹಿತಕ್ಕಾಗಿ ನಿಮ್ಮ ಸಣ್ಣ ಜೀವನವನ್ನು ಬಲಿದಾನ ಮಾಡಿರಿ. ಈ ಸಣ್ಣ ಜೀವ ಹೋದರೇನಂತೆ ? ಯಾರ ದೇಹವೂ ಶಾಶ್ವತವಲ್ಲ. ಎದ್ದೇಳಿ. ಎಚ್ಚರಗೊಳ್ಳಿ ! ದೇಶಕ್ಕಾಗಿ ದುಡಿಯಿರಿ. ವೀರರಾಗಿ ಮಡಿಯಿರಿ. ಮಾಡಿ ಮಡಿಯಿರಿ." ಕಾಲನದಿಯಲ್ಲಿ ತೇಲಿ ಅಲೆಯಲೆಯಾಗಿ ತೂರಿ ಬಂತು ಅವರ ಅಮರ ವಾಣಿ ! ಪುನಃ ಪುನಃ ಭಾರತಕೇಸರಿಯ ದಿವ್ಯ ನೆನಹು ಮನದಲೆಯಲ್ಲಿ ಮೂಡಿ ಮೈ ರೋಮಾಂಚನವಾಯಿತು. ಎದೆಯಲ್ಲಿ ಕೆಚ್ಚು ಮೂಡಿ ಆ ಅಮೃತ ಪುತ್ರನ ಮೈಯಲ್ಲಿನ ಚೇತನದ ನೂರರ ಒಂದಂಶ ನಮ್ಮ ಮೈಯಲ್ಲಿ ಹರಿಯಬಾರದೇ ? ಎಂದೆನಿಸಿದಾಗ ಮತ್ತೆ ಮತ್ತೆ ಸಿಂಹಗರ್ಜನೆ ಕಿವಿಯಲ್ಲಿ ಮೊಳಗಿತು "ಓ ಬುದ್ಧಿಮಾನ್ ಮಾನವಾ, ಸಿದ್ಧನಾಗು, ಪ್ರಬುದ್ಧನಾಗು !" ರವಿ ಅಲುಗದೆ ಕುಳಿತು ಬಿಟ್ಟ. ಮನಸ್ಸು ಭವಿಷ್ಯದ ಮಹಾಗರ್ಭವನ್ನು ಹೊಕ್ಕು ಅಂಡಲೆಯತೊಡಗಿತು. ಕ್ಷಣಕ್ಷಣಗಳೂ ನಿಮಿಷ ನಿಮಿಷಗಳೂ ನಿರಾತಂಕವಾಗಿ ಉರುಳಿದುವು. ಎದೆಯ ಏರಿಳಿತ ಹೆಚ್ಚಿ ಚೇತನದ ಚಿಲುಮೆ ಮೈಯಲ್ಲಿ ಮಿಂಚಿನಂತೆ ಹರಿದಾಡಿತು. ಮಾನವ ಸೇವೆಗಾಗಿ ಪುರಷಾರ್ಥ ಸಾಧನೆಗಾಗಿ ಆತ್ಮ ಸಾಕ್ಷಾತ್ಕಾರಕ್ಕಾಗಿ ಈ ಜೀವನವನ್ನೇ ಮುಡಿಪಾಗಿಡುವೆ. ಅಜೀವ ಪರ್ಯಂತ ಬ್ರಹ್ಮಚರ್ಯ ಪರಿಪಾಲನೆ ಮಾಡಿ ಈ ಬದುಕನ್ನು ಸಾರ್ಥಕಗೊಳಿಸುವೆ ಎಂದು ಮನದಲ್ಲೇ ಪಣತೊಟ್ಟ. ಗೋಡೆಯ ಮೇಲಿನ ವಿವೇಕಾನಂದರ ಪ್ರತಿಚಿತ್ರ ಉಜ್ವಲವಾಗಿ ಬೆಳಗಿತು.

ಬಹು ದಿನಗಳ ಹಿಂದೆ ರಾಯರು "ಮಗೂ, ನಿನಗೆ ಉಜ್ವಲವಾದ ಭವಿಷ್ಯವಿದೆ." ಎಂದುದು ನೆನಪಾಯಿತು. ನಿರರ್ಥಕವಾಗಿ ಬದುವುದಕ್ಕಿಂತ 'ಸಾವು' ಲೇಸೆನಿಸಿ ಆ ಕಾಣದ ಕೇಳದ ಉಜ್ವಲ ಭವಿಷ್ಯಕ್ಕಾಗಿ ಮನಸ್ಸು ಕಾತರಿಸಿತು. " ಕಾಲಾಯ ತಸ್ಮೈ ನಮಃ" ಎಂದು ತನಗೆ ತಾನೇ ಹೇಳಿಕೊಂಡ. ದಿವ್ಯಾನಂದ ಪರವಶತೆಯಿಂದ ಮುಖ ಹೂವಿನಂತರಳಿತು.

ಪ್ರಾಕಾರದ ಬಾಗಿಲು ಖಣಿಲ್ ಎಂದು ಸದ್ದು ಮಾಡಿ ಕನಸೊಡೆಯಲು ನೋಟ ಅತ್ತ ಹೊರಳಿತು. ನಳಿನಿ ಕೊಂಕುಳಲ್ಲಿ ಬೊಂಬೆಯನ್ನು ಎತ್ತಿಕೊಂಡು ಓಡೋಡಿ ಬಂದಳು. ಅಲ್ಲಿಂದಲೇ ರವಿಯನ್ನು ಕಂಡು ಮುಖ ಹೂವಿನಂತ ರಳಿತು.

"ರವಿಮಾಮಾ !"

ಎರಡೂ ಕೈಗಳಿಂದ ಮಗುವಿಗೆ ಸ್ವಾಗತ ನೀಡಿದ ರವಿ. ಮರುಕ್ಷಣದಲ್ಲಿ ಭಾಹುಗಳಲ್ಲಿ ಬಂದಿಯಾದ ಅವಳು ತನ್ನ ಬೊಂಬೆಯ ಕೈಕಾಲುಗಳು ಪುನಃ ಕಿತ್ತು ಹೋದ ಬಗೆಯನ್ನು ಕಳಕಳಿಯಿಂದ ಬಣ್ಣಿಸಿದಳು.

"ಈಗೇನು ಮಾಡುವೆ ?"

"ಸರಿ ಮಾಡಿ ಮಾಮಾ."

"ಅದಕ್ಕೆ ಸೂಜಿ ಮದ್ದು ಕೊಡುತ್ತಾರೆ !" ಅದೇ ವೇಳೆಗೆ ಅಲ್ಲಿಗೆ ಬಂದ ವಿಮಲ ನಗುಮುಖದಿಂದ ಉತ್ತರಿಸಿದಳು.

"ಅದೇಕೆ?" ಕಣ್ಣರಳಿಸಿ ಕೇಳಿದಳು ನಳಿನಿ "ಸೂಜಿ ಚುಚ್ಚುವುದಕ್ಕೆ ಅವರೇನು ಡಾಕ್ಟರೇ ?"

"ಅಲ್ಲ ಅಂದವರ್ಯಾರು ?" ದನಿ ರಾಗವಾಗಿ ಹೊಮ್ಮಿತು.

"ಅದೆಲ್ಲಾ ಸುಳ್ಳು ! ರವಿಮಾಮ ಸೂಜಿ ಚುಚ್ಚುವುದಿಲ್ಲ ! ಅವರು ಒಳ್ಳೆಯವರು !" ಏರಿದ ದನಿಯಲ್ಲಿ ಪುನಃ ನುಡಿದಳು ನಳಿನಿ. "ರವಿಮಾಮ ಡಾಕ್ಟರಲ್ಲ !"

ಒಡನೆ ಅಣ್ಣ ತಂಗಿಯರಿಬ್ಬರೂ ನಗತೊಡಗಿದರು. ಮಗುವಿಗೆ ತುಸು ಅಚ್ಚರಿಯಾಯಿತು. ಎಲ್ಲಾದರೂ ಉಂಟೆ ? ರವಿಮಾಮ ಡಾಕ್ಟರಷ್ಟು ಕೆಟ್ಟವನಾಗುವುದು ಸಾಧ್ಯವೇಯಿಲ್ಲ. ರವಿಮಾಮ ಒಳ್ಳೆಯವನು ಎಂದೆನಿಸಿತು. ಒಮ್ಮೆ ಅವನ ಬಳಿಯಲ್ಲಿದ್ದ ಸ್ಟೆತೊಸ್ಕೋಪನ್ನು ನೋಡಿದ್ದ ಅವಳು "ಇದೇಕೆ

ನಿಮಗೆ?" ಎಂದು ಕೇಳಿದ್ದಳು. ಅದಕ್ಕೆ ಉತ್ತರವಾಗಿ "ಆಟಕ್ಕೆ" ಎಂದುತ್ತರಿಸಿ ಅದರ ಉಪಯೋಗದಿಂದ ಹೇಗೆ ಆನಂದಿಸಬಹುದೆನ್ನುವುದನ್ನು ಉಪಯೋಗಿಸಿ ತೋರಿಸಿದ್ದ ರವಿ. ಅಂದಿನಿಂದ ಅದೊಂದು ಆಟದ ವಸ್ತುವಾಗಿತ್ತು ಅವಳಿಗೆ.

"ಬೊಂಬೆ ಸರಿ ಮಾಡಿ ಮಾವಾ!" ಬೊಂಬೆಯನ್ನು ಮುಂದೆ ನೀಡಿ ನುಡಿದಳು ಮುಖದಲ್ಲಿ ಬೇಡಿಕೆಯಿತ್ತು.

"ಅದೇಕೆ ಇನ್ನು? ಹೊಸದು ಕೊಂಡರಾಯಿತು."

"ಅಣ್ಣ ಹೊಸದು ತಂದಿದ್ದಾರೆ!"

"ಮತ್ತೇಕೆ ಇದರ ರಿಪೇರಿ?"

"ನಿನಗೆ ಹೊಸದಿದೆಯಲ್ಲಾ? ಇದು ನನಗಿರಲಿ." ವಿಮಲೆ ಕೇಳಿದಳು.

"ಉಹ್ಞೂ." ತಲೆಯಲ್ಲಾಡಿಸುತ್ತಾ ನುಡಿದಳು ನಳಿನಿ "ನಂದೂ!"

"ನೀನೇ ಇಟ್ಟುಕೊ...ಅಣ್ಣ ನಾಳೆ ಬರುತ್ತಾರೆಯೇ?"

"ಹೌದು! ಲಂಗ ಹಣ್ಣು ಮಿಠಾಯಿ ಎಲ್ಲಾ ತರುತ್ತಾರೆ!"

"ಅದರಲ್ಲಿ ನನಗಿಷ್ಟು?"

ನಳಿನಿ ಉತ್ತರಿಸದೆ ವಿಮಲೆಯತ್ತ ಮಿಕಿಮಿಕಿ ನೋಡಿದಳು. ವಿಮಲೆ ನಕ್ಕು ಮಗುವನ್ನು ಎದೆಗಪ್ಪಿಕೊಂಡು ಲಲ್ಲೆಗೈಯ್ಯುತ್ತಾ ಒಳಗಡೆ ಹೋದಳು. ರವಿ ಕಿತ್ತು ಹೋಗಿದ್ದ ಬೊಂಬೆಯ ಕೈಕಾಲುಗಳನ್ನು ಜೋಡಿಸಿ ಸರಿಮಾಡಿ ನಳಿನಿಯ ಕೈಗಿತ್ತು "ನಳಿನೀ, ಇಂದು ನಿನ್ನ ಹೋಗಗೊಡುವುದಿಲ್ಲ." ಎಂದ.

"ಅದೇಕೆ?"

"ಅದನ್ನು ಸರಿಮಾಡಿದುದಕ್ಕೆ ನಿನ್ನಿಂದ ಹಣ ಬರಬೇಕು."

"ನೀವಿರುವುದೇ ಸರಿ ಮಾಡುವುದಕ್ಕೆ!"

"ಆದರೂ ಹಣ ಬರಲೇಬೇಕು." ವಿಮಲೆ ದನಿಗೂಡಿಸಿದಳು.

"ಹೋಗಲಿ, ಈ ಬೊಂಬೆಯನ್ನೇ ಕೊಡು. ನೀನಿಲ್ಲದಾಗ ಇದ ರೊಂದಿಗೆ ಆಟವಾಡಬಹುದು." ರವಿ ಹುಬ್ಬು ಹಾರಿಸಿ ಹೇಳಿದ.

"ಓ! ಆಟವಾಡುವುದಕ್ಕೆ ನೀವೇನು ಮಗುವೆ ಮಾವಾ?" ಕಿಲ ಕಿಲನೆ ನಕ್ಕಳು ನಳಿನಿ. ರವಿ ಮಗುವನ್ನು ಎತ್ತಿಕೊಂಡು ಮುದ್ದಾಡಿದ. ಸ್ನಾನವನ್ನು ಮುಗಿಸಿ ಹೊರ ಬಂದ ಶಿವಮ್ಮನನ್ನು ಕಾಣುತ್ತಲೂ ನಳಿನಿ ಕಣ್ಣರಳಿಸಿ ಹೇಳಿದಳು "ರವಿ ಮಾಮನಿಗೆ ನನ್ನ ಬೊಂಬೆ ಬೇಕಂತೆ!"

"ಅವನಿಗೇಕೆ ಬೊಂಬೆ ?"

"ರವಿ ಅದನ್ನು ಸರಿಮಾಡಿದುದಕ್ಕೆ ಅವಳು ಹಣ ಕೊಡಬೇಕು.!" ವಿಮಲೆ ಸರಸುರವರು ಕೂಡಿ ನುಡಿದರು.

"ಮನೆಗೆ ಹೋಗಿ ಕಾಸು ತರುವೆ."

"ಎಷ್ಟು ತರುತ್ತೀ ?"

"ಒಂದು ಪೈಸಾ!" ಕಣ್ಣುಗಳಲ್ಲಿ ತುಂಟತನ ನಲಿಯುತ್ತಿತ್ತು.

"ನೀನು ಹೇಳಿದುದು ಸರಿಯಾದದ್ದೇ." ಎನ್ನುತ್ತ ಶಿವೆ ಮಗುವನ್ನೆತ್ತಿ ಕೊಂಡು ಮುತ್ತಿನಮಳೆಗರೆದಳು. ಪಕ್ಕದಲ್ಲಿದ್ದ ರವಿ ಮಗುವಿನ ಕೆನ್ನೆಯನ್ನು ಚಿವುಟಿದ.

ಅಂದು ಭಾನುವಾರವಾದ್ದರಿಂದ ರಜೆಯಿತ್ತು.

ನಳಿನಿಯೊಂದಿಗೆ ಹಾಗೇ ಶಾಲೆಯ ಕಡೆಗೆ ಹೊರಟಳು ಶಿವೆ. ಮಕ್ಕಳಿಗೆ ಸ್ನಾನಕ್ಕೆ ನೀರು ಅಣಿಯಾಗಿತ್ತು. ದಾದಿಯು ಚಿಕ್ಕವರನ್ನು ಸ್ನಾನಕ್ಕೆಬ್ಬಿಸು ತ್ತಿದ್ದಳು. ಶಿವೆ ಅವರಿಗೆ ಹೇಳಬೇಕಾದುದನ್ನು ಹೇಳಿ, ನಳಿನಿಯೊಂದಿಗೆ ಪುಟ್ಟಮ್ಮನ ಮನೆಯ ಕಡೆ ಹೋಗಿ ಅಲ್ಲಿ ಸ್ವಲ್ಪ ಹೊತ್ತಿದ್ದು ನಳಿನಿಯನ್ನು ಬಿಟ್ಟು ಮನೆಗೆ ಹೊರಟಳು.

ಮನೆಯ ಮೆಟ್ಟಿಲನ್ನು ಹತ್ತಿ ಒಳ ಬಂದೊಡನೆಯೇ ರವಿಯೊಂದಿಗೆ ಚಂದ್ರಮೌಳಿ ಮಾತಾಡುತ್ತ ಕುಳಿತುದನ್ನು ನೋಡಿದ ಶಿವೆ "ಬಲು ಅಪ ರೂಪವಾಗಿ ಬಂದ್ದೀರಿ." ಎಂದಳು.

"ನಿನ್ನೆ ಆಸ್ಪತ್ರೆಗೆ ಹೋದಾಗ ಡಾಕ್ಟರು ರಜೆಯಲ್ಲಿದ್ದಾರೆಂದು ತಿಳಿ ಯಿತು. ನೋಡಿ ಹೋಗೋಣವೆಂದು ಬಂದೆ. ಒಂದು ವಾರದಿಂದ ಮೈ ಚೆನ್ನಾಗಿಲ್ಲವೆಂದು ಈಗ ತಿಳಿಯಿತು. ಇದು ತಂಗಮ್ಮನಿಗೂ ಗೊತ್ತಿರ ಲಿಕ್ಕಿಲ್ಲ ಗೊತ್ತಿದ್ದರೆ ಅವಳು ಹೇಳದಿರುತ್ತಿರಲಿಲ್ಲ."

"ಇದೇನು ಮಹಾ ವಿಚಾರವೆಂದು ಹಾಗೆನ್ನುತ್ತಿದ್ದೀರಿ ?" ಎಂದು ಆ ವಿಷಯವನ್ನೇ ತಳ್ಳಿ ರವಿ ಅಂದ "ಈಗೀಗ ಬಹಳ ಸೆಕೆ."

ವಿಮಲೆಯು ತಣ್ಣನೆಯ ಪಾನೀಯದೊದನೆ ಬಂದುದನ್ನು ನೋಡಿ "ಈಗೇಕೆ ತೊಂದರೆ ತೆಗೆದುಕೊಂಡಿರಿ?" ಎಂದ ಚಂದ್ರಮೌಳಿ.

ಶಿವೆ ತಟ್ಟೆಯಿಂದ ಶರಬತ್ತನ್ನು ತೆಗೆದು ಚಂದ್ರಮೌಳಿಯ ಕೈಗಿತ್ತಳು.

ಮರುಗಳಿಗೆಯಲ್ಲಿ ಪ್ರಾಕಾರದ ಬಾಗಿಲು ಸದ್ದು ಮಾಡುತ್ತಲೂ ಸಹಜವಾಗಿ ಎಲ್ಲರ ದಿಟ್ಟಿಯೂ ಅತ್ತ ಹರಿಯಿತು. ಬಾಗಿಲನ್ನು ತೆಗೆದುಕೊಂಡು ಒಳ ಬಂದ ಗೋಪಿ ಬಾಗಿಲನ್ನು ಯಥಾ ರೀತಿ ಮುಚ್ಚಿಕೊಂಡು ಹತ್ತು ಹೆಜ್ಜೆ ಇಡುವುದರೊಳಗಾಗಿ ಟ್ಯಾಕ್ಸಿಯೊಂದು ಸದ್ದು ಮಾಡುತ್ತಾ ಬಂದಿತು. ವಾಹನವನ್ನು ನೋಡಿ ಗೋಪಿಗೆ ಅಚ್ಚರಿಯಾದರೂ ಯಾರೋ ಕಾಹಿಲೆಯು ವರಿರಬೇಕೆಂದೂಹಿಸಿ ಬಾಗಿಲನ್ನು ಹರವಾಗಿ ತೆರೆದ. ವಾಹನ ಸರ್ರನೆ ಮನೆಯ ಬಾಗಿಲಿಗೆ ಬಂದು ನಿಂತಿತು. ಶಿವೆ ಮತ್ತು ರವಿಯೂ ಆದಾರಿರಬಹುದೆಂದು ನೋಡಲು ಕುತೂಹಲದಿಂದ ಹೊರಬಂದರು. ಮೈಯೆಲ್ಲಾ ಮನಸ್ಸಾಗಿ ಕಣ್ಣುಗಳು ಉಲ್ಕೆಗಳಾದುವು. ಉಸಿರಿಡಿದು ನಿಂತಳು ಶಿವೆ. ಮುಖಬಿಂಬದಲ್ಲಿ ಹರ್ಷವನ್ನು ಹೊರಸೂಸುತ್ತ ಮೊದಲು ವಾಹನದಿಂದ ಇಳಿದವನು ಮಾಧವ ರಾಯ. ರಾಯರು ಮನೆಗೆ ಹೋಗದೆ ನೇರವಾಗಿ ಇಲ್ಲಗೇಕೆ ಬಂದರೆಂಬುದು ನುಂಗಲಾರದ ತುತ್ತಿನಂತಾಯಿತು. ರಾಯ ಹಿಂದಣ ಬಾಗಿಲನ್ನು ತೆರೆದು ಹಿಡಿದುಕೊಂಡು ಒಳಗೆ ಮಲಗಿದ್ದ ವ್ಯಕ್ತಿಗೆ ಕೈಯಾಸರೆ ಕೊಟ್ಟು ಕೆಳಗಿಳಿಯಲು ಸಹಾಯ ಮಾಡಿದ. ಕ್ಷೀಣವಾದ ವ್ಯಕ್ತಿ ನಿಲ್ಲುವಾಗೊಮ್ಮೆ ತತ್ತರಿಸಿತು. ರವಿ ಎರಡು ಹೆಜ್ಜೆ ಮುಂದುವರಿದು ಹಿಡಿದುಕೊಂಡ. ವ್ಯಕ್ತಿಯೊಮ್ಮೆ ಎಲ್ಲರನ್ನೂ ದುರುಗುಟ್ಟಿ ನೋಡಿತು ... ತುಟಿಗಳು ಬಿರಿಯಲಿಲ್ಲ.

"ಶಿವಮ್ಮಾ, ನಿಮಗೂ ಗುರುತು ಹತ್ತಲಿಲ್ಲವೇ ?" ನಗುಮುಖದಿಂದ ರಾಯ ಕೇಳಿದ.

ಶಿವೆಯ ಮುಖದಲ್ಲಿ ಆತುರಾಶ್ಚರ್ಯಗಳು ತುಂಬಿ ತುಳುಕ ತೊಡಗಿದುವು. ಮುಖಭಾವ ಗಂಭೀರವಾಯಿತು.

ಮುಖ ಬಿಳಿಯ ಗಡ್ಡದಿಂದಾವೃತವಾಗಿದ್ದು ತಲೆಗೂದಲು ಕೆದರಿ ಹರಡಿತ್ತು, ಗುಳಿ ಬಿದ್ದಿದ್ದರೂ ಕಣ್ಣುಗಳಲ್ಲಿ ತೀಕ್ಷಣತೆಯಿತ್ತು. ಶಿವೆ ನಾಲ್ಕು ಹೆಜ್ಜೆ ಮುಂದುವರಿದು ನಿಟ್ಟಿಸಿದಳು. ಗಡ್ಡದಿಂದಾವೃತವಾದ ಮುಖ ಮಂಡಲ ಎಲೆಮರೆಯ ಕಾಯಿಯಂತೆ ಅವ್ಯಕ್ತವಾಗಿತ್ತು. ಅಪರಿಚಿತ ವ್ಯಕ್ತಿಯ ಕಣ್ಣುಗಳೂ ತನ್ನನ್ನೇ ನಿಟ್ಟಿಸುತ್ತಿರುವುದನ್ನು ನೋಡಿದ ಶಿವೆಯ ಎದೆ ಅಳುಕಿತು. ಶಿವೆ ನಿರುತ್ತರಳಾದರೂ ತನುಮನಗಳ ತುಯ್ದಾಟವನ್ನು ಹತ್ತಿಕ್ಕಿ ಒಮ್ಮೆ ಸ್ವಾಮಿಯನ್ನು ನೆನಪಿಗೆ ತಂದುಕೊಂಡಳು. "ಛೆ !

ಎಲ್ಲಿಯಾದರುಂಟೇ ?" ಎಂಬ ಉದ್ಗಾರವೇ ಹೆಚ್ಚು ತೂಗಿತು. ಆದರೂ, ಮನಸ್ಸು ಡೋಲಾಯಮಾನವಾಗಿ ಶಿವೆ ಸ್ತಂಭೀಭೂತಳಾದಳು.

"ಶಿವಮ್ಮಾ, ಸ್ವಾಮಿಯ ಗುರುತನ್ನು ನೀವೂ ಹಿಡಿಯದಾದಿರಿ !" ರಾಯ ತಟ್ಟನೆ ನುಡಿದಾಗ ಎಲ್ಲರಿಗೂ ಎಲ್ಲಿಲ್ಲದ ಅಚ್ಚರಿ ಮೂಡಿತು.

"ಹಾ, ಸ್ವಾಮಿ !" ಆಶ್ಚರ್ಯದಿಂದ ಕೂಗಿದಳು ಶಿವೆ.

"ಹೌದು, ಸ್ವಾಮಿ. ಈಗ ಯಾರಿಗಾದರೂ ಗುರುತು ಹತ್ತುವುದು ಕಷ್ಟ. ನನಗೂ ಗುರುತು ಹಿಡಿಯುವುದು ಕಷ್ಟವಾಯಿತು."

ಶಿವೆಯ ಬಾಯಿಂದ ಮಾತುಗಳು ಹೊರಡದಾದುವು. ಕಣ್ಣುಗಳಂಚಿನಲ್ಲಿ ಹನಿಗಳು ಮೊಳೆತುವು. ಯಾಂತ್ರಿಕವಾಗಿ ಮುಂದುವರಿದು ಸ್ವಾಮಿಯು ನೀಡಿದ ಎರಡೂ ಕೈಗಳನ್ನು ಹಿಡಿದುಕೊಂಡು ಹಣೆಯನ್ನೊತ್ತಿದಳು. ಸ್ವಾಮಿ ಅದುರುವ ದನಿಯಲ್ಲಿ 'ಶಿವೆ' ಎಂದ. ಮುಂದೆ ಮಾತು ಹೊರಡಲಿಲ್ಲ.

ಸ್ವಾಮಿಯನ್ನು ಅತ್ಯಾದರದಿಂದ ಬರಮಾಡಿಕೊಂಡ ಶಿವೆ ರವಿಯನ್ನು ತೋರಿ "ರವಿಯ ಗುರುತು ಹತ್ತಿತೇ ? ಎಂದಳು. ಸ್ವಾಮಿ ಮಾತಾಡಲಿಲ್ಲ. ನಿಸ್ತೇಜವಾದ ಮುಖದಲ್ಲಿ ಕಣ್ಣುಗಳು ಫಳಫಳನೆ ಮಿನುಗಿದುವು. ಮಾಧವರಾಯ ಸರಸು ವಿಮಲೆ ಗೋಪಿಯರನ್ನು ಕರೆದು ತೋರಿದಾಗಲೂ ಸ್ವಾಮಿ ಮಾತಾಡಲಿಲ್ಲ. ದೈನ್ಯವೇ ಮೈವೆತ್ತಿ ಬಂದಂತೆ ಅಲುಗದೆ ಕುಳಿತ್ತಿದ್ದ. ಮುಖದಲ್ಲಿ ಮೆಲುನಗೆಯೊಂದು ಮಿನುಗಿ ಮಾಯವಾಯಿತು. ಚಂದ್ರಮೌಳಿಯು ಮುಂದೆ ಬಂದು "ನನ್ನ ಗುರುತು ಹತ್ತಿತೇ ?" ಎಂದು ಕೇಳಿದಾಗ ಎಲ್ಲರಿಗೂ ಇನ್ನಷ್ಟು ಆಶ್ಚರ್ಯವೆನಿಸಿತು. ಒಬ್ಬರ ಮುಖವನ್ನು ಒಬ್ಬರು ನೋಡಿಕೊಂಡರು. ಒಡನೆ ಚಂದ್ರಮೌಳಿ ಶಿವೆಯತ್ತ ತಿರುಗಿ "ಇವರೇ ನಿಮ್ಮ ಸ್ವಾಮಿಯೆಂದು ತಿಳಿದಿದ್ದಲ್ಲಿ ನಾನೆಂದೋ ಇವರ ಪತ್ತೆಯನ್ನು ಹೇಳಬಹುದಾಗಿತ್ತು. ಇವರ ಹಗರಣದಿಂದಾಗಿಯೇ ನನ್ನ ಕೆಲಸ ಹೋಯಿತು !" ಎಂದ ಬಳಿಕ ಪುನಃ "ನಿಮ್ಮಲ್ಲಿ ಒಂದು ಚಿತ್ರಪಟ ವಿದ್ದಿದ್ದರೆ ಗುರುತಿಸಿ ಹೇಳಬಹುದಾಗಿತ್ತು. ಅದೂ ಇಲ್ಲದೆ ಹೋಯಿತು."

ಆಗಲೂ ಸ್ವಾಮಿ ಮಾತಾಡಲಿಲ್ಲ. ಎಲ್ಲರೆಡೆಗೂ ದೃಷ್ಟಿಯನ್ನು ತೇಲಿಸಿದ. ಮನಸ್ಸಿಗೆ ಸ್ವಾಸ್ಥ್ಯವಿದ್ದರೂ ದೇಹಕ್ಕಿರಲಿಲ್ಲ.

"ಶಿವಮ್ಮಾ, ಬಲು ದಿನಗಳನಂತರ ಸ್ವಾಮಿ ಮಗುವಾಗಿ ನಿಮ್ಮ ಮಡಿ

ಲಿಗೆ ಬಂದಿದ್ದಾನೆ. ಇನ್ನು ಕಾಪಾಡಿಕೊಳ್ಳುವ ಭಾರ ನಿಮ್ಮದು" ಎಂದ ಮಾಧು. ಅನಂತರ ರವಿಯನ್ನು ಕುರಿತು "ನಿನ್ನೆ ಬೆಂಗಳೂರಿನಲ್ಲಿ ನನ್ನ ಸ್ನೇಹಿತರೊಂದಿಗೆ ಆಕಸ್ಮಿಕವಾಗಿ ಹುಚ್ಚರಾಸ್ಪತ್ರೆಗೆ ಹೋದೆ. ಸ್ವಾಮಿಯೇ ನನ್ನ ಗುರುತಿಸಿದ. ಹತ್ತಿರದಲ್ಲಿದ್ದರೂ ನಮಗೆ ಸುಳಿವು ಹತ್ತದುದು ದೈವ ಸಂಕಲ್ಪ. ಇಂದು ನನಗಲ್ಲಿ ಕೆಲಸವಿದ್ದರೂ ತಡೆಯಲಾಗಲಿಲ್ಲ ಹೊರಟೇಬಿಟ್ಟೆ. ಸ್ವಾಮಿ ದುರ್ಬಲನಾಗಿದ್ದರೂ ಆರೋಗ್ಯದಿಂದಿದ್ದಾನೆ. ಅವನಿಗೀಗ ಆರೈಕೆ ಬೇಕು." ಎಂದಾಗ ಮುಖದಲ್ಲಿ ಅಮಿತಾನಂದ ತಾಂಡವವಾಡುತ್ತಿತ್ತು. ರಾಯನ ಸಂತಸಕ್ಕೆ ಪ್ರತಿಯಾಗಿ ರವಿಯ ಮುಖವೂ ಹೂವಿನಂತೆ ಅರಳಿತು. ಸಂತಸದ ಭರದಲ್ಲಿ ರವಿಯನ್ನು ಗಾಢಾಲಿಂಗನೆ ಮಾಡಿಕೊಂಡ ಮಾಧವರಾಯ.

"ಶಿವಮ್ಮಾ, ಇಂದು ನಿಮ್ಮ ಜೀವನ ತುಂಬಿತು. ಇನ್ನು ಈ ಜೀವನ ಗಂಗೆ ಎಂದೆಂದೂ ತಂಬಿ ಹರಿಯಲಿ" ಎಂದ ಚಂದ್ರಮೌಳಿ.

ಶಿವೆಯ ಕಣ್ಣುಗಳಲ್ಲಿ ಆನಂದಾಶ್ರುಗಳುಕ್ಕಿದುವು.

ಮಂಗಳಂ

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
11	6	ಯೊಂದೆ	ಕೊರತೆಯೊಂದೇ
19	26	ಟವಲನು	ಟವಲ್ಲನ್ನು
27	19	ಕೊರಿಡಿಗೆ	ಕೊರಡಿಗೆ
32	18	ಹೇಳುತ್ತಿಹ್ದನೆ.	ಹೇಳುತ್ತಿದ್ದೇನೆ.
40	20	ಕಟೋಕ್ತಿ	ಕಟೂಕ್ತಿ
42	17	ಮೀಧಾವಿ	ಮೇಧಾವಿ
48	6	ಬಾಡಿಗಯು	ಬಾಡಿಗೆಯು
58	6	ಅಂದ ಮೀಲೇ	ಅಂದಮೇಲೆ

ಲಕ್ಷ್ಮೀ ಪ್ರಕಾಶನದಲ್ಲಿ ಪ್ರಕಟಿತ ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೧. ಜೀವನಗಂಗಾ
೨. ಡಾ॥ ಅಘೋರ
೩. ಡಾ॥ ಕಮಲೇಶ್
೪. ವಂದೇ ಮಾತರಂ
೫. ಅನಂತಾನಂತದೆಡೆಗೆ
೬. ಮನೋನ್ಮಣಿ
೭. ಸಂತ್ರಾಸಿನಿ
೮. ಆಸೆಯ ಸುಳಿಯಲ್ಲಿ

(ಕಥಾ ಸಂಕಲನ)

೯. ಬಹುರತ್ನಾ ವಸುಂಧರಾ
೧೦. ರತ್ನಗರ್ಭಾವಸುಂಧರಾ
೧೧. ಸುಧಾಮಣಿ
೧೨. ರಮಣೀಮಣಿ
೧೩. ಲಿಯೋನಾ
೧೪. ಶ್ರೀಮುಖಿ
೧೫. ಶ್ರೀಹರ್ಷಲಾ
೧೬. ವೈಶಾಖೀ ಪರ್ವ
೧೭. ಫಾಲ್ಗುಣೀ ಪರ್ವ
೧೮. ಮಣಿಮೇಖಲಾ } ಅಚ್ಚಿನಲ್ಲಿ
೧೯. ಮಣಿಕರ್ಣಿಕಾ } ಅಚ್ಚಿನಲ್ಲಿ

(ಕವಿತಾ ಸಂಕಲನ)

೨೦. ಪೂಜಾವಸಾನ ಸಮಯೇ....!
೨೧. ಧ್ಯಾನಾವಸಾನ ಸಮಯೇ....!
೨೨. ಗಗನ ಕುಸುಮ
೨೩. ಜೀವನ ಕುಸುಮ
೨೪. ಚಂಪಕ ರಾಜಿ
೨೫. ಬಕುಳ ರಾಜಿ
೨೬. ಕಸ್ತೂರಿ ಮಾಲಿಕಾ
೨೭. ಮಂದಾರ ಮಾಲಿಕಾ

(ಕವಿತಾ ಸಂಕಲನ)

೨೮. ವಿಜಯ ಗಾಥಾ
೨೯. ಗಾನ ತೀರ್ಥ
೩೦. ನಾದ ಬಿಂದು
೩೧. ಕಾವ್ಯಾನಂದ ನಂದಿನಿ
೩೨. ಭಾವಾನಂದ ನಂದಿನಿ

(ಸಂಜೀವನ ಕಾವ್ಯ)

೩೩. ಮಂಗಳ ಭಾರತಿ
೩೪. ಕಲ್ಯಾಣ ಭಾರತಿ
೩೫. ಉತ್ತರೋತ್ತರಣಿ
೩೬. ರಾಗಾನುರಾಗಿಣಿ
೩೭. ಪ್ರಫುಲ್ಲ ಭಾರತ

(ಪೌರಾಣಿಕ ನಾಟಕ)

೩೮. ಪುಣ್ಯಪಯೋನಿಧಿ
೩೯. ಪುಣ್ಯಾಭಿಸಾರ

(ಸಾನೆಟ್‌ಗಳು)

೪೦. ತರಂಗಿಣಿ

(ಗದ್ಯ ಕಾವ್ಯ)

೪೧. ಐಂದ್ರ ಕೀರ್ತಿ ಕೇತನಂ

(ಉಪನಿಷ್ಕತಥಾ)

೪೨. ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೩. ದೂರ ದೇಶದಲ್ಲಿ
೪೪. ಬೆಳದಿಂಗಳ ರಾತ್ರಿ
೪೫. ರಂಗನ ಸಾಹಸ
೪೬. ಓಹಿಯೋಜ ಸರೋವರ
೪೭. ಕೌಶಿಕನ ಗೊಂಬೆ
೪೮. ವಿಶೇಷ ಸುದ್ದಿ

ಲಕ್ಷ್ಮೀ ಪ್ರಕಾಶನ, 170, ಲ್ಯಾಂಗ್‌ಫೋರ್ಡ್ ರೋಡ್, ಬೆಂಗಳೂರು-560 025